ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22

# ಕರ್ನಾಟಕ ಪೌರಸಭೆಗಳ ಅಧಿನಿಯಮ, 1964

(1983ರವರೆಗೆ ತಿದ್ದುಪಡಿಯಾದಂತೆ)

(1984ರ 33, 1984ರ 34 ಮತ್ತು 1986ರ 33ನೇ ಸಂಖ್ಯೆಯ ತಿದ್ದುಪಡಿ ಅಧಿನಿಯಮಗಳೂ ಮುದ್ರಿತವಾಗಿವೆ)

# The Karnataka Municipalities Act, 1964

**(As amended up to 1983)**

**(Act No. 33 of 1984, 34 of 1984 and 33 of 1986 are also printed)**

ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22

# ಕರ್ನಾಟಕ ಪೌರಸಭೆಗಳ ಅಧಿನಿಯಮ, 1964

(1983ರವರೆಗೆ ತಿದ್ದುಪಡಿಯಾದಂತೆ)

(1984ರ 33, 1984ರ 34 ಮತ್ತು 1986ರ 33ನೇ ಸಂಖ್ಯೆಯ ತಿದ್ದುಪಡಿ ಅಧಿನಿಯಮಗಳೂ ಮುದ್ರಿತವಾಗಿವೆ)

# The Karnataka Municipalities Act, 1964

**(As amended up to 1983)**

**(Act No. 33 of 1984, 34 of 1984 and 33 of 1986 are also printed)**

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ,
## ವಿಧಾನ ಸೌಧ, ಬೆಂಗಳೂರು

**ಅಧಿಸೂಚನೆ**

**ಸಂ. ಲಾ–ಎಲ್‌ಎಂಪಿ.................. ದಿನಾಂಕ: ............................**

1963ರ ಕರ್ನಾಟಕ ರಾಜಭಾಷಾ ಅಧಿನಿಯಮದ (ಕರ್ನಾಟಕ ಅಧಿನಿಯಮ ಸಂಖ್ಯೆ 1963ರ 26) 5–ಎ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯಪಾಲರು ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಅಧಿನಿಯಮ ಸಂಖ್ಯೆ 22)ರ ಈ ಕೆಳಗಿನ ಕನ್ನಡ ಅನುವಾದವನ್ನು ಕರ್ನಾಟಕ ರಾಜಪತ್ರದಲ್ಲಿ ಪ್ರಕಟಿಸಲು ಈ ಮೂಲಕ ಒಪ್ಪಿಗೆ ನೀಡಿದ್ದಾರೆ.

# ಕರ್ನಾಟಕ ಪೌರಸಭೆಗಳ ಅಧಿನಿಯಮ, 1964

## ಪ್ರಕರಣಗಳ ಅನುಕ್ರಮಣಿಕೆ

### ಅಧ್ಯಾಯ I

### ಪ್ರಾರಂಭಿಕ

ಪ್ರಕರಣಗಳು ಪುಟಗಳು


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ ...

2. ಪರಿಭಾಷೆಗಳು ...


### ಅಧ್ಯಾಯ–II

### ಪೌರಸಭೆಗಳ ರಚನೆ


3. ಪ್ರದೇಶಗಳನ್ನು ನಗರ ಪೌರಸಭೆ ಮತ್ತು ಪೌರಸಭೆಗಳೆಂದು ಅಧಿಸೂಚಿಸುವುದು ...

4. ಪ್ರದೇಶಗಳನ್ನು ಪೌರಸಭೆಗಳಲ್ಲಿ ಸೇರಿಸುವುದಕ್ಕೆ ಅಥವಾ ಅದರಿಂದ ಅವುಗಳನ್ನು ಬಿಟ್ಟುಬಿಡುವುದಕ್ಕೆ ಅಧಿಕಾರ ಮತ್ತು ಪರಿಣಾಮ ...

5. ಗಡಿ ಗುರುತುಗಳನ್ನು ನಿಲ್ಲಿಸುವುದು ಮತ್ತು ಅವುಗಳ ನಿರ್ವಹಣೆ ...

6. ಯಾವ ಸ್ಥಳೀಯ ಪ್ರದೇಶಗಳನ್ನು ಪೌರಸಭೆಗಳೆಂದು ಘೋಷಿಸಬಹುದು ...

7. ಅಸ್ತಿತ್ವ ಕೊನೆಗೊಂಡಿರುವ ಪೌರಸಭೆಯ ಸ್ವತ್ತು ಮತ್ತು ಹಕ್ಕುಗಳು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ...

8. ಎರಡು ಅಥವಾ ಹೆಚ್ಚು ಸ್ಥಳಗಳನ್ನು ಒಳಗೊಂಡಿರುವ ಪೌರಸಭೆಗಳ ನಾಮಕರಣ ...

9. ಪೌರಸಭೆಗಳ ರಚನೆ, ರದ್ದಿಯಾತಿ, ಇತ್ಯಾದಿಗಳಿಗೆ ಪ್ರಕ್ರಿಯೆ ...

10. ನಗರ ಮತ್ತು ಪಟ್ಟಣ ಮುನ್ಸಿಪಲ್ ಕೌನ್ಸಿಲ್‌ಗಳನ್ನು ನಿಗಮನಗೊಳಿಸುವುದು ...

11. ಮುನ್ಸಿಪಲ್ ಕೌನ್ಸಿಲುಗಳ ರಚನೆ ...

12. ಕೌನ್ಸಿಲರನನ್ನು ಚುನಾಯಿಸದಿದ್ದಾಗ ಸರ್ಕಾರದಿಂದ ನೇಮಕಾತಿ ...

13. ಚುನಾವಣೆಗಳಿಗಾಗಿ ವಿಭಾಗಗಳು ...

14. ಮತದಾರರ ಪಟ್ಟಿ ...

15. ಅಭ್ಯರ್ಥಿಗಳ ಅರ್ಹತೆ

16. ಕೌನ್ಸಿಲರ್ ಆಗಲು ಸಾಮಾನ್ಯ ಅನರ್ಹತೆಗಳು ...

17. ಕೌನ್ಸಿಲರುಗಳ ಸಾರ್ವತ್ರಿಕ ಚುನಾವಣೆ ...

18. ಕೌನ್ಸಿಲರುಗಳ ಪದಾವಧಿ ...

18–ಕ ಕೌನ್ಸಿಲರುಗಳಿಗೆ ಭತ್ಯಗಳು ...

19. ಆಕಸ್ಮಿಕ ಖಾಲಿ ಸ್ಥಾನಗಳನ್ನು ಹೇಗೆ ಭರ್ತಿ ಮಾಡಬೇಕು ...

20. ಚುನಾವಣೆಗಳ ಫಲಿತಾಂಶಗಳ ಪ್ರಕಟಣೆ ...

21. ಚುನಾವಣಾ ತಕರಾರು ಅರ್ಜಿಗಳು ...

22. ಅರ್ಜಿದಾರನು ಕ್ಲೇಮು ಮಾಡಬಹುದಾದ ಪರಿಹಾರ ...

23. ಚುನಾವಣೆಗಳು ಶೂನ್ಯವೆಂದು ಘೋಷಿಸುವುದಕ್ಕಾಗಿ ಆಧಾರಗಳು ...

**ಪ್ರಕರಣಗಳು** **ಪುಟಗಳು**

24. ಚುನಾವಣಾ ನ್ಯಾಯಾಧಿಕರಣವು ಅನುಸರಿಬೇಕಾದ ಪ್ರಕ್ರಿಯೆ ...

25. ಚುನಾವಣಾ ನ್ಯಾಯಾಧಿಕರಣದ ತೀರ್ಮಾನ ...

26. ಮತಗಳ ಸಮಾನತೆಯ ಸಂದರ್ಭದಲ್ಲಿ ಪ್ರಕ್ರಿಯೆ ...

27. ಅಪೀಲು ...

28. ಪ್ರಶ್ನಿಸಿದ ಹೊರತು, ಚುನಾವಣೆಯು ಸಿಂಧುವಾಗಿರತಕ್ಕದ್ದು ...

29. ಭ್ರಷ್ಟಾಚಾರಗಳು ...

30. ಮತದಾನದ ರಹಸ್ಯ ಪಾಲನೆ ...

31. ಚುನಾವಣೆಗಳಲ್ಲಿ ಅಧಿಕಾರಿಗಳು, ಮೊದಲಾದವರು ಅಭ್ಯರ್ಥಿಗಳಿಗಾಗಿ ಕೆಲಸ ಮಾಡತಕ್ಕದ್ದಲ್ಲ ಅಥವಾ ಮತದಾನ ಮಾಡಲು ಪ್ರಭಾವ ಬೀರತಕ್ಕದ್ದಲ್ಲ ...

32. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರದಲ್ಲಿ ಪ್ರಚಾರದ ನಿಷೇಧ ...

33. ಮತದಾನ ಕೇಂದ್ರಗಳ ಒಳಗೆ ಅಥವಾ ಅವುಗಳ ಹತ್ತಿರ ಅವ್ಯವಸ್ಥಿತ ವರ್ತನೆಗಾಗಿ ದಂಡನೆ ...

34. ಮತದಾನ ಕೇಂದ್ರಗಳಲ್ಲಿ ದುರ್ವರ್ತನೆಗಾಗಿ ದಂಡನೆ ...

35. ಚುನಾವಣೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕರ್ತವ್ಯದ ಉಲ್ಲಂಘನೆಗಳು ...

36. ಮತಪತ್ರಗಳನ್ನು ಮತದಾನ ಕೇಂದ್ರದಿಂದ ತೆಗೆದುಕೊಂಡು ಹೋಗುವುದು ಅಪರಾಧವಾಗತಕ್ಕದ್ದು ...

37. ಇತರ ಅಪರಾಧಗಳು ಮತ್ತು ಅವುಗಳಿಗೆ ದಂಡನೆಗಳು ...

38. ಚುನಾವಣೆಗಳ ನಿಯಂತ್ರಣ ...

39. ಚುನಾವಣೆಗಳಿಗೆ ಸಂಬಂಧಪಟ್ಟ ದಾವೆಗಳ ಪ್ರತಿಷೇಧ, ಇತ್ಯಾದಿ ...

40. ರಾಜೀನಾಮೆ ...

41. ಪದದಿಂದ ತೆಗೆದು ಹಾಕುವ ಬಗ್ಗೆ ಹೊಣೆಗಾರಿಕೆ ...

42. ಅಧ್ಯಕ್ಷ ಮತ್ತು ಉಪಾಧ್ಯಕ್ಷ ...

43. ಅಧ್ಯಕ್ಷನ ಪ್ರಕಾರ್ಯಗಳು ...

44. ಉಪಾಧ್ಯಕ್ಷನ ಪ್ರಕಾರ್ಯಗಳು ...

45. ಪ್ರತಿಯೊಬ್ಬ ಕೌನ್ಸಿಲರ್ ಮತ್ತು ಅಧ್ಯಕ್ಷನ ಹಕ್ಕುಗಳು ಹಾಗೂ ವಿಶೇಷಾಧಿಕಾರಗಳು ...

46. ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ಪ್ರಭಾರ ವಹಿಸಿಕೊಡಲು ನಿರಾಕರಿಸುವುದಕ್ಕೆ ದಂಡನೆ

...

## ಅಧ್ಯಾಯ III

## ಮುನ್ಸಿಪಲ್ ಕೌನ್ಸಿಲ್ಲಿನಿಂದ ಕಾರ್ಯನಿರ್ವಹಣೆ

47. ಸಭೆ ...

48. ಸಭೆಯ ನೋಟೀಸು ಮತ್ತು ವ್ಯವಹಾರ ...

49. ಸಭೆಗಳನ್ನು ನಡೆಸುವ ಸ್ಥಳ ಮತ್ತು ಅಲ್ಲಿ ಸುವ್ಯವಸ್ಥೆಯ ಪಾಲನೆ ...

**ಪ್ರಕರಣಗಳು** **ಪುಟಗಳು**

50. ಕೋರಂ ...

51. ಅಧ್ಯಕ್ಷಾಧಿಕಾರಿ ...

52. ಪ್ರಶ್ನೆಗಳನ್ನು ತೀರ್ಮಾನಿಸುವ ವಿಧಾನ ...

53. ಸಭೆಗಳಲ್ಲಿ ನಡೆಸಬೇಕಾದ ವ್ಯವಹಾರ ಮತ್ತು ವ್ಯವಹಾರಗಳ ಕ್ರಮಾಗತವನ್ನು ಹೇಗೆ ಇತ್ಯರ್ಥಪಡಿಸತಕ್ಕದ್ದು. ...

54. ವ್ಯವಹರಣೆಗಳ ನಡವಳಿಕೆಗಳು ...

55. ಕೌನ್ಸಿಲರುಗಳು ತಾವು ಹಿತಾಸಕ್ತಿ ಹೊಂದಿರುವಂಥ ವಿಷಯಗಳ ಮೇಲೆ ಮತ ನೀಡತಕ್ಕದ್ದಲ್ಲ ...

56. ಸಭೆಗಳ ಮುಂದೂಡಿಕೆ ...

57. ನಿರ್ಣಯ ಮಾರ್ಪಾಡು ಮತ್ತು ರದ್ದಿಯಾತಿ ...

58. ಸೂಚನೆಗಳು ಮತ್ತು ತಿದ್ದುಪಡಿಗಳು ...

59. ಸಾಮಾನ್ಯ ಸಭೆಗಳನ್ನು ನಡೆಸುವುದು ...

60. ಕೆಲವು ಸಂದರ್ಭದಲ್ಲಿ ನಡೆಸಬೇಕಾಗಿರುವ ವ್ಯವಹಾರಗಳ ನೋಟೀಸನ್ನು ಸರ್ಕಾರದ ಎಕ್ಸಿಕ್ಯೂಟಿವ್ ಇಂಜನಿಯರ್‌ಗೆ ಕೊಡತಕ್ಕದ್ದು.

61. ಕೆಲವು ಸರ್ಕಾರಿ ಅಧಿಕಾರಿಗಳು ಮುನ್ಸಿಪಲ್ ಕೌನ್ಸಿಲಿನ ಸಭೆಗಳಿಗೆ ಹಾಜರಾಗಬಹುದು ...

62. ಅಡ್ಡ ಪ್ರಶ್ನೆ ...

63. ಸಮಿತಿಗಳು ...

64. * * * * ...

65. ಆಕಸ್ಮಿಕ ಖಾಲಿ ಸ್ಥಾನಗಳು ...

66. ಸ್ಥಾಯೀ ಸಮಿತಿಯ ಅಧ್ಯಕ್ಷ ...

67. ಸಭೆಗಳಲ್ಲಿನ ಪ್ರಕ್ರಿಯೆ ...

68. ಪರಿಚಲನೆಯ ಮೂಲಕ ಪ್ರಕ್ರಿಯೆ ...

69. ಮುನ್ಸಿಪಲ್ ಕೌನ್ಸಿಲಿನ ಅನುದೇಶಗಳಿಗೆ ಸಮಿತಿಗಳ ಅಧೀನತೆ ಮತ್ತು ಮುನ್ಸಿಪಲ್ ಕೌನ್ಸಿಲಿನ ಕಡ್ಡಾಯ ಕೋರಿಕೆಗಳ ಪಾಲನೆ ...

70. ಯಾವ ಅಧಿಕಾರಿಗಳ ವೆಚ್ಚಗಳನ್ನು ಸಂದಾಯ ಮಾಡಬಹುದೋ ಆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದಾದ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು ...

71. ಸ್ಥಳೀಯ ನಿಕಾಯಗಳ ಜಂಟಿ ಸಮಿತಿಗಳು ಹಾಗೂ ದಾರಿ ಸುಂಕವನ್ನು ಜಂಟಿಯಾಗಿ ವಿಧಿಸುವುದು ...

71ಕ. ಮುನ್ಸಿಪಲ್ ಕೌನ್ಸಿಲ್ ಸಿಬ್ಬಂದಿ

72. ಬಾಡಿಗೆಗೆ ಕೊಡಲು, ಮಾರಾಟ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಮುನ್ಸಿಪಲ್ ಕೌನ್ಸಿಲಿನ ಸಕ್ಷಮತೆ ...

73. ಸ್ವತ್ತಿನ ವರ್ಗಾವಣೆಯು ಷರತ್ತುಗಳಿಗೆ ಒಳಪಟ್ಟಿರಬಹುದು ...

74. ಪೌರಸಭಾ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದಿಂದ ನೇಮಕಗೊಂಡ ಅಧಿಕಾರಿಗಳಿಂದ ಕರಾರುಗಳು ಮತ್ತು ಅಂಥ ಕಾಮಗಾರಿಗಳಿಗಾಗಿ ಸಂದಾಯ ...

75. ಭೂಮಿಯ ಕಡ್ಡಾಯ ಆರ್ಜನೆ ...

76. ಮುನ್ಸಿಪಲ್ ಕೌನ್ಸಿಲ್ಲುಗಳು ವಹಿಸಿದ ಎಲ್ಲಾ ಖರ್ಚುಗಳು ಮತ್ತು ವೆಚ್ಚಗಳಿಗಾಗಿ ಪೌರಸಭೆಯ ನಿಧಿಯು ಸಾಮಾನ್ಯವಾಗಿ ಗುರಿಯಾಗಿರತಕ್ಕದ್ದು ...

77. ಮುನ್ಸಿಪಲ್ ಕೌನ್ಸಿಲಿನ ಅಧಿಕಾರಿ ಅಥವಾ ನೌಕರನು ಅಂಥ ಮುನ್ಸಿಪಲ್ ಕೌನ್ಸಿಲಿನೊಂದಿಗೆ ಯಾವುದೇ ಕರಾರಿನಲ್ಲಿ ಹಿತಾಸಕ್ತಿ ಹೊಂದಿರತಕ್ಕದ್ದಲ್ಲ ...

78. ಮುನ್ಸಿಪಲ್ ಕೌನ್ಸಿಲಿನೊಂದಿಗೆ ಯಾವುದೇ ಕರಾರು, ಇತ್ಯಾದಿಗಳಲ್ಲಿ ಕೌನ್ಸಿಲರನು ಹಿತಾಸಕ್ತಿಯನ್ನು ಹೊಂದಿರುವುದಕ್ಕಾಗಿ ದಂಡನೆ ...

79. ಕೌನ್ಸಿಲರ್, ಮುಂತಾದವರನ್ನು ಸರ್ಕಾರಿ ನೌಕರರೆಂದು ಭಾವಿಸತಕ್ಕದ್ದು ...

80. ವ್ಯವಹರಣೆಗಳ ಸಿಂಧುತ್ವ ...

## ಅಧ್ಯಾಯ IV

## ಪೌರಸಭಾ ಸ್ವತ್ತು ಮತ್ತು ನಿಧಿ

81. ಪೌರಸಭಾ ಸ್ವತ್ತು ...

82. ಮುನ್ಸಿಪಲ್ ಕೌನ್ಸಿಲಿನಿಂದ ಅಥವಾ ಅದರ ವಿರುದ್ಧವಾಗಿ ಸ್ವತ್ತಿಗಾಗಿನ ಕ್ಲೇಮುಗಳ ತೀರ್ಮಾನ ...

83. ಪೌರಸಭಾ ನಿಧಿ ...

84. ಪೌರಸಭಾ ನಿಧಿ ಮತ್ತು ಸ್ವತ್ತಿನ ವಿನಿಯೋಗ ...

85. ಹೆಚ್ಚುವರಿ ನಿಧಿಯನ್ನು ಠೇವಣಿ ಇಡಲು ಮತ್ತು ಹೂಡಲು ಅಧಿಕಾರ ...

86. ಹಣ ಸಾಲ ಪಡೆಯಲು ಮುನ್ಸಿಪಲ್ ಕೌನ್ಸಿಲುಗಳ ಅಧಿಕಾರ ...

## ಅಧ್ಯಾಯ V

## ಮುನ್ಸಿಪಲ್ ಕೌನ್ಸಿಲುಗಳ ನಿರ್ಬಂಧಕ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳು

87. ಮುನ್ಸಿಪಲ್ ಕೌನ್ಸಿಲುಗಳ ನಿರ್ಬಂಧಕ ಪ್ರಕಾರ್ಯಗಳು ...

88. ವಿಶೇಷ ಪ್ರಕಾರ್ಯಗಳು ...

89. ಯಾವುದೇ ಪ್ರಕಾರ್ಯದಿಂದ ಮುನ್ಸಿಪಲ್ ಕೌನ್ಸಿಲನ್ನು ವಿನಾಯಿತಿಗೊಳಿಸಲು ಸರ್ಕಾರದ ಅಧಿಕಾರ ...

90. ಕೊಳವೆಗಳ ಮೂಲಕ ಸರಬರಾಜು ಮಾಡಿದ ನೀರಿನ ವಿಶ್ಲೇಷಣೆ ಮತ್ತು ಪರಿಶೀಲನೆ ...

91. ಮುನ್ಸಿಪಲ್ ಕೌನ್ಸಿಲುಗಳ ವಿವೇಚನಾತ್ಮಕ ಪ್ರಕಾರ್ಯಗಳು ...

92. ಖಾಯಂ ಆಗಿ ಅಥವಾ ವರ್ಷಗಳ ಅವಧಿಗಾಗಿ ಬದ್ಧವಾಗಿರುವುದಕ್ಕಾಗಿ ತಾತ್ಪರ್ಯವಾಗುವ ವ್ಯವಸ್ಥೆಗಳು ...

93. ಮುನ್ಸಿಪಲ್ ಕೌನ್ಸಿಲು ನಿರ್ವಹಿಸುತ್ತಿರುವ ಸಾರ್ವಜನಿಕ ಸಂಸ್ಥೆಯ ವ್ಯವಸ್ಥಾಪನೆಯು ಅದರಲ್ಲಿ ನಿಹಿತವಾಗತಕ್ಕದ್ದು


**ಅಧ್ಯಾಯ VI**

**ಪೌರಸಭಾ ತೆರಿಗೆ ನಿರ್ಧರಣೆ**

**ತೆರಿಗೆಗಳು ಮತ್ತು ವಿಧಿಸುವುದಕ್ಕಾಗಿನ ಪ್ರಕ್ರಿಯೆ**


94. ವಿಧಿಸಬಹುದಾದ ತೆರಿಗೆಗಳು ...

95. ತೆರಿಗೆ ವಿಧಿಸಲು ಪ್ರಾರಂಭಿಕ ಪ್ರಕ್ರಿಯೆ ...

96. ಷರತ್ತುಗಳನ್ನು ಮಂಜೂರು ಮಾಡಲು, ಮಾರ್ಪಾಡು ಮಾಡಲು ಮತ್ತು ವಿಧಿಸಲು ಅಧಿಕಾರ ...

97. ನೋಟೀಸಿನೊಂದಿಗೆ ಮಂಜೂರಾದ ನಿರ್ಣಯಗಳನ್ನು ಪ್ರಕಟಿಸುವುದು ...

98. ಅಸ್ತಿತ್ವದಲ್ಲಿರುವ ಯಾವುದೇ ತೆರಿಗೆಯನ್ನು ನಿಲಂಬನಗೊಳಿಸಲು, ಕಡಿಮೆ ಮಾಡಲು ಅಥವಾ ರದ್ದುಗೊಳಿಸಲು ಅಧಿಕಾರ ...


**ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕ**


99. ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕ ...


**ವಾಹನಗಳು, ದೋಣಿಗಳು, ಪ್ರಾಣಿಗಳು ಮತ್ತು ನಾಯಿಗಳ ಮೇಲೆ ತೆರಿಗೆ**


100. ಸಂಖ್ಯೆಗಳನ್ನು ಹೊಂದಿರದ ಪ್ರಾಣಿಗಳ ಅಥವಾ ವಾಹನಗಳ ಅಭಿಗ್ರಹಣ ಮತ್ತು ಅಭಿಗ್ರಹಣದ ತರುವಾಯದ ಪ್ರಕ್ರಿಯೆ ...


**ಕಟ್ಟಡಗಳು ಮತ್ತು ಭೂಮಿಗಳ ಮೇಲೆ ತೆರಿಗೆ ನಿರ್ಧಾರಣೆ ಮತ್ತು ತೆರಿಗೆಗೆ ಅವುಗಳು ಗುರಿಯಾಗುವುದು**


101. ಕಟ್ಟಡಗಳು ಅಥವಾ ಭೂಮಿಗಳ ಮೇಲೆ ತೆರಿಗೆ ನಿರ್ಧಾರಣೆ ವಿಧಾನ ...

102. ತೆರಿಗೆ ನಿರ್ಧಾರಕನ ನೇಮಕಾತಿ ...

103. ತೆರಿಗೆ ನಿರ್ಧಾರಣೆ ಪಟ್ಟಿಯ ತಯಾರಿಕೆ ...

104. ಕಟ್ಟಡಗಳು ಅಥವಾ ಭೂಮಿಗಳು ಅಥವಾ ಅವೆರಡರ ಮೇಲೆ ತೆರಿಗೆಗೆ ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಯನ್ನು, ಅವನ ಹೆಸರನ್ನು ಖಚಿತಪಡಿಸಿಕೊಳ್ಳಲಾಗದಿದ್ದರೆ ಹೇಗೆ ವರ್ಣಿಸತಕ್ಕದ್ದು

105. ತೆರಿಗೆ ನಿರ್ಧಾರಣಾ ಪಟ್ಟಿಯ ನೋಟೀಸಿನ ಪ್ರಕಟಣೆ ...

106. ತೆರಿಗೆ ನಿರ್ಧಾರಣೆ ಪಟ್ಟಿಯನ್ನು ಪರಿಷ್ಕರಿಸುವುದಕ್ಕಾಗಿ ಪ್ರಕ್ರಿಯೆ ...

107. ತೆರಿಗೆ ನಿರ್ಧಾರಣೆ ಪಟ್ಟಿಯ ತಿದ್ದುಪಡಿ ...

108. ಕಟ್ಟಡವನ್ನು ಕೆಡವಲು ಅಥವಾ ತೆಗೆದುಹಾಕಲು ಮುನ್ಸಿಪಲ್ ಕೌನ್ಸಿಲಿಗೆ ನೋಟೀಸನ್ನು ಕೊಡತಕ್ಕದ್ದು ...

109. ಹೊಸ ತೆರಿಗೆ ನಿರ್ಧಾರಣೆ ಪಟ್ಟಿಯನ್ನು ಪ್ರತಿ ವರ್ಷವೂ ತಯಾರಿಸಬೇಕಾಗಿಲ್ಲ ...

110. ಮುಖ್ಯವಾಗಿ ಯಾರಿಂದ ತೆರಿಗೆಯು ವಸೂಲೀಯವಾಗತಕ್ಕದ್ದು ...

110ಕ. ಸ್ವತ್ತು ತೆರಿಗೆ ಪ್ರಮಾಣಪತ್ರ ...

111. ಕಟ್ಟಡಗಳು ಅಥವಾ ಭೂಮಿಗಳ ಮೇಲೆ ತೆರಿಗೆಗಳ ಸಂದಾಯಕ್ಕೆ ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಗಳಿಂದ ಸ್ವಾಮ್ಯದ ಎಲ್ಲಾ ವರ್ಗಾವಣೆಗಳ ಬಗ್ಗೆ ಮುನ್ಸಿಪಲ್ ಕೌನ್ಸಿಲಿಗೆ ನೋಟೀಸನ್ನು ಕೊಡತಕ್ಕದ್ದು ...

112. ನೋಟೀಸಿನ ನಮೂನೆ ...

113. ಪೌರಸಭೆಯ ರಿಜಿಸ್ಟರುಗಳಲ್ಲಿ ವರ್ಗಾವಣೆ ಪಡೆದವನ ಹೆಸರನ್ನು ಪ್ರತ್ಯಾಯೋಜಿಸತಕ್ಕದ್ದು ...

114. ವರ್ಗಾವಣೆಯ ನೋಟೀಸು ಇಲ್ಲದಿರುವಲ್ಲಿ ಕಟ್ಟಡಗಳ ಅಥವಾ ಭೂಮಿಗಳ ಮೇಲಿನ ತೆರಿಗೆಗಳ ಸಂದಾಯಕ್ಕೆ ಹೊಣೆಗಾರಿಕೆಯು ಮುಂದುವರಿಯುವುದು ...

115. ಖಾಲಿ ಬಿದ್ದಿರುವುವುಗಳ ಸಂದರ್ಭದಲ್ಲಿ ತೆರಿಗೆಯ ಮಾಫಿಯು ಯಾವಾಗ ಅನಿವಾರ್ಯ

116 ರಿಂದ 122 * * * * ...

123 ರಿಂದ 127 * * * * ...

128. ದಾರಿ ಸುಂಕಗಳ ಕೋಷ್ಟಕಗಳು ...

129. ದಾರಿ ಸುಂಕವನ್ನು ಸಂದಾಯ ಮಾಡದಿರುವುದಕ್ಕೆ ವಾಹನವನ್ನು ಅಭಿಗ್ರಹಿಸಲು ಅಧಿಕಾರ ...

130. ಮತ್ತು 131 * * * * ...

132. ದಾರಿ ಸುಂಕಗಳ ಗುತ್ತಿಗೆ ...

**ಜಾಹಿರಾತುಗಳು ಮತ್ತು ಜಾಹಿರಾತುಗಳ ತೆರಿಗೆ**

133. ಮುನ್ಸಿಪಲ್ ಕೌನ್ಸಿಲಿನ ಬರಹದ ಅನುಮತಿಯಿಲ್ಲದ ಜಾಹಿರಾತುಗಳ ನಿಷೇಧ ...

134. ಕೆಲವು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲಿನ ಅನುಮತಿಯು ಶೂನ್ಯವಾಗಿರತಕ್ಕದ್ದು ...

135. ಉಲ್ಲಂಘನೆಯ ಸಂದರ್ಭದಲ್ಲಿ ಪೂರ್ವಭಾವನೆ ...

136. ಅನಧಿಕೃತ ಜಾಹೀರಾತುಗಳನ್ನು ತೆಗೆದುಹಾಕುವುದು ...

**ಫೀಜು, ಇತ್ಯಾದಿಗಳನ್ನು ವಿಧಿಸಲು ಅಧಿಕಾರ**

137. ಜಾತ್ರೆ, ಉರುಸು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಫೀಜುಗಳು ...

138. ಕೆಲವು ಲೈಸೆನ್ಸುಗಳು ಇತ್ಯಾದಿಗಳಿಗೆ ಪೌರಸಭಾ ಕೌನ್ಸಿಲ್ ಫೀಜುಗಳನ್ನು ವಿಧಿಸಬಹುದು ...

**ತೆರಿಗೆಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧಗಳು**

139. ತೆರಿಗೆಗಳಿಗೆ ಬದಲಾಗಿ ನಿಗದಿಪಡಿಸಿದ ಚಾರ್ಜುಗಳು ಮತ್ತು ಅವುಗಳ ಸಂದಾಯಕ್ಕಾಗಿ ಒಪ್ಪಂದಗಳು ...

140. ಆಕ್ಷೇಪಣೀಯ ತೆರಿಗೆಗಳ ವಿಧಿಸುವಿಕೆಯನ್ನು ಅಮಾನತುಗೊಳಿಸಲು ಅಥವಾ ನಿಷೇಧಿಸಲು ಸರ್ಕಾರದ ಅಧಿಕಾರ ...

141. ತೆರಿಗೆಗಳನ್ನು ವಿಧಿಸಲು ಮುನ್ಸಿಪಲ್ ಕೌನ್ಸಿಲನ್ನು ಅಗತ್ಯಪಡಿಸಲು ಸರ್ಕಾರದ ಅಧಿಕಾರ ...

## ಅಧ್ಯಾಯ VII

### ಪೌರಸಭಾ ಕ್ಲೇಮುಗಳನ್ನು ವಸೂಲಿ ಮಾಡುವುದು


142. ತೆರಿಗೆಗಳಿಗಾಗಿ ಬಿಲ್ಲನ್ನು ಸಲ್ಲಿಸುವುದು ...

143. ಜಪ್ತಿ ...

144. ಕರಸ್ಥಗೊಳಿಸಿದ ಅಥವಾ ಜಪ್ತಿ ಮಾಡಿದ ಸರಕುಗಳ ಮತ್ತು ಸ್ವತ್ತಿನ ಮಾರಾಟ ...

145. ಮಾರಾಟಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆ, ಇತ್ಯಾದಿ ...

146. ಜಿಲ್ಲೆಯ ಹೊರಗಡೆ ಮಾರಾಟ ...

147. ಕರಸ್ಥವು ಕಾರ್ಯ ಸಾಧ್ಯವಲ್ಲದಾಗ ಪ್ರಕ್ರಿಯೆ ...

148. ಪೌರಸಭೆಯನ್ನು ಬಿಡಲಿರುವ ವ್ಯಕ್ತಿಗಳ ವಿರುದ್ಧ ಕ್ಷಿಪ್ರ ವ್ಯವಹರಣೆಯನ್ನು ತೆಗೆದುಕೊಳ್ಳಬಹುದು ...

149. ಫೀಜುಗಳು ...

150. ಮ್ಯಾಜಿಸ್ಟ್ರೇಟನಿಗೆ ಅಪೀಲು ...

151. ತೆರಿಗೆಗಾಗಿ ಭೂಮಿ, ಕಟ್ಟಡ ಇತ್ಯಾದಿಗಳ ಹೊಣೆಗಾರಿಕೆ ...

152. ಕರಸ್ಥ ಮತ್ತು ಮಾರಾಟದ ಮೂಲಕ ವಸೂಲಿ ಮಾಡುವ ಅಧಿಕಾರದ ನಿಲಂಬನ ...

153. ಎಲ್ಲಾ ಸಂದಾಯಗಳಿಗೆ ರಸೀತಿಯನ್ನು ಕೊಡತಕ್ಕದ್ದು ...

154. ಭೂಮಿಯ ಮೇಲಿನ ಬಾಡಿಗೆ ವಸೂಲಿ ...


## ಅಧ್ಯಾಯ VIII

### ಮೇಲ್ಪಾಟು ಯೋಜನೆಗಳು ಮತ್ತು ಮೇಲ್ಪಾಟು ಮಂಡಲಿಗಳು


155. ಕಾಮಗಾರಿಗಳನ್ನು ಕೈಕೊಳ್ಳಲು ಮತ್ತು ಮೇಲ್ಪಾಟಿಗಾಗಿ ವೆಚ್ಚವನ್ನು ವಹಿಸಲು ಮುನ್ಸಿಪಲ್ ಕೌನ್ಸಿಲಿನ ಅಧಿಕಾರ, ಇತ್ಯಾದಿ ...

156. ಮೇಲ್ಪಾಟು ಯೋಜನೆಯಲ್ಲಿ ಒದಗಿಸಬೇಕಾದ ವಿವರಗಳು ...

157. ಯೋಜನೆಯು ಪೂರ್ಣಗೊಂಡ ಮೇಲೆ ಪ್ರಕ್ರಿಯೆ ...

158. ಯೋಜನೆಯನ್ನು ಅನಂತರ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿಕೊಡುವುದು ...

159. ಮಂಜೂರಾತಿಯನ್ನು ಸ್ವೀಕರಿಸಿದ ಮೇಲೆ ಆರ್ಜಿಸಬೇಕಾದ ಭೂಮಿಯ ವಿವರಗಳನ್ನು ಕೊಟ್ಟು ಘೋಷಣೆಯನ್ನು ಪ್ರಕಟಿಸುವುದು ...

160. ಅಭಿವೃದ್ಧಿ ಫೀಜಿನ ಸಂದಾಯ ...

161. ಮುನ್ಸಿಪಲ್ ಕೌನ್ಸಿಲಿನಿಂದ ಅಭಿವೃದ್ಧಿ ಫೀಜಿನ ನಿರ್ಧಾರಣೆ ...

162. ಮಧ್ಯಸ್ಥಗಾರನಿಂದ ಅಭಿವೃದ್ಧಿ ಫೀಜಿನ ನಿರ್ಧಾರ ...

163. ಮಧ್ಯಸ್ಥಗಾರನ ಫೀಜು ...

164. ಮಧ್ಯಸ್ಥಗಾರನ ಅಧಿಕಾರಗಳು ಮತ್ತು ಕರ್ತವ್ಯಗಳು ...

165. ಅಭಿವೃದ್ಧಿ ಫೀಜಿನ ಸಂದಾಯಕ್ಕೆ ಹೊಣೆಯಾಗಿರುವ ವ್ಯಕ್ತಿಗಳಿಗೆ ಮುನ್ಸಿಪಲ್ ಕೌನ್ಸಿಲು ನೋಟೀಸು ಕೊಡುವುದು ...

166. ಭೂಮಿಯ ಮೇಲಿನ ಋಣಭಾರವೆಂದು ಅಭಿವೃದ್ಧಿ ಫೀಜಿನ ಸಂದಾಯ ಮಾಡಲು ಒಪ್ಪಂದ ...

167. ಅಭಿವೃದ್ಧಿ ಫೀಜನ್ನು ಸಂದಾಯ ಮಾಡುವುದು ಪ್ರಥಮ ಋಣಭಾರವಾಗಿರತಕ್ಕದ್ದು ...

168. 161, 162 ಅಥವಾ 166ನೇ ಪ್ರಕರಣದನುಸಾರವಾಗಿ ಸಂದಾಯವಾಗಬೇಕಾದ ಹಣದ ವಸೂಲಿ ...

169. ಸಂದಾಯದ ಒಪ್ಪಂದವು ಹೊಸ ಘೋಷಣೆಯ ಮೇರೆಗಿನ ಆರ್ಜನೆಗೆ ಅಡ್ಡಿಯಾಗತಕ್ಕದ್ದಲ್ಲ ...

170. ಹೊಸ ಬಡಾವಣೆಗಳು ಅಥವಾ ಲೇಔಟುಗಳನ್ನು ರೂಪಿಸುವುದು ಅಥವಾ ಹೊಸ ಖಾಸಗಿ ಬೀದಿಗಳನ್ನು ನಿರ್ಮಿಸುವುದು ...

171. ಬಡಾವಣೆ, ಲೇಔಟು ಅಥವಾ ಬೀದಿಯ ಬದಲಾವಣೆ ಅಥವಾ ನಾಶಪಡಿಸುವಿಕೆ ...

172. ಕಾಮಗಾರಿಯನ್ನು ನಿರ್ವಹಿಸುವಂತೆ ಆದೇಶಿಸಲು ಅಥವಾ ತಪ್ಪಿದರೆ, ಅದನ್ನು ತಾನೇ ಸ್ವತಃ ನೆರವೇರಿಸಲು ಮುನ್ಸಿಪಲ್ ಕೌನ್ಸಿಲಿನ ಅಧಿಕಾರ ...

173. ಮೇಲ್ವಾಟು ಮಂಡಲಿಯ ಸ್ಥಾಪನೆ ...

174. ಮೇಲ್ವಾಟು ಮಂಡಲಿಯ ಸ್ವತ್ತು, ಹಣಕಾಸು, ಅಧಿಕಾರಗಳು, ಇತ್ಯಾದಿ ...

## ಅಧ್ಯಾಯ IX

## ಅಧಿಕಾರಗಳು ಮತ್ತು ಅಪರಾಧಗಳು

### ರಸ್ತೆಗಳಿಗೆ ಸಂಬಂಧಿಸಿದಂತೆ ಅಧಿಕಾರಗಳು

175. ರಸ್ತೆ, ಇತ್ಯಾದಿಗಳ ಬಗ್ಗೆ ಅಧಿಕಾರ ...

176. ಬೀದಿಗಳನ್ನು ದುರಸ್ತಿಗೊಳಿಸಲು ಮತ್ತು ಅಂಥ ಬೀದಿಗಳು ಸಾರ್ವಜನಿಕವಾದವುಗಳೆಂದು ಘೋಷಿಸಲು ಅಧಿಕಾರ ...

177. ಒಡೆಯರ ಆಕ್ಷೇಪಣೆಗಳಿಗೊಳಪಟ್ಟು ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿ ಎಂದು ಘೋಷಿಸಲು ಅಧಿಕಾರ ...

178. ಬೀದಿಗಳನ್ನು ತಾತ್ಕಾಲಿಕವಾಗಿ ಮುಚ್ಚುವುದು ...

179. ಸಾರ್ವಜನಿಕ ಬೀದಿಯ ನಿಯತ ರೇಖೆ ...

180. ಬೀದಿಗಳ ನಿಯತ ರೇಖೆಯೊಳಗೆ ಕಟ್ಟಡಗಳ ನಿರ್ಮಾಣದ ನಿಯಂತ್ರಣ ...

### ಕಟ್ಟಡಗಳು, ಮೊದಲಾದವುಗಳನ್ನು ನಿಯಂತ್ರಿಸಲು ಅಧಿಕಾರಗಳು

181. ಮುಂಚಾಚಿಕೊಂಡಿರುವ ಕಟ್ಟಡಗಳನ್ನು ಹಿಂದಕ್ಕೆ ಸರಿಸುವುದು ...

182. ಬೀದಿಯ ನಿಯತ ರೇಖೆಯನ್ನು ಮುಂದಕ್ಕೆ ಸರಿಸುವುದು ...

183. ಬೀದಿಗಳ ಮೂಲೆಯಲ್ಲಿರುವ ಕಟ್ಟಡಗಳು ...

184. ಕಟ್ಟಡಗಳ ಚಾವಣಿ ಮತ್ತು ಹೊರಗೋಡೆಗಳನ್ನು ಸುಲಭ ದಹ್ಯ ಸಾಮಗ್ರಿಗಳಿಂದ ಮಾಡತಕ್ಕದ್ದಲ್ಲ ...

185. ಕಟ್ಟಡಗಳ ಮಟ್ಟ ...

186. ಧಾನ್ಯವನ್ನು ಸಂಗ್ರಹಿಸಲು ಉಗ್ರಾಣಗಳಿಗಾಗಿ ಇಲಿಗಳಿಗೆ ಅಬೇಧ್ಯವಾದ ಕಟ್ಟಡ ...

187. ಹೊಸ ಕಟ್ಟಡಗಳ ಬಗ್ಗೆ ನೋಟೀಸು ...

188. ತಪ್ಪು ನಿರೂಪಣೆಯ ಮೇರೆಗೆ ಕೊಡಲಾದ ಮಂಜೂರಾತಿ ...

189. ಕೆಲವು ಪ್ರದೇಶಗಳಲ್ಲಿ ಅನುಮತಿ ಇಲ್ಲದೆ ಕಟ್ಟಡಗಳ ಕಟ್ಟುವಿಕೆಯನ್ನು ನಿಷೇಧಿಸಲು ಸರ್ಕಾರದ ಅಧಿಕಾರ ...

190. ಮುಕ್ತಾಯ ಪ್ರಮಾಣಪತ್ರಗಳು, ಸ್ವಾಧೀನಪಡಿಸಿಕೊಳ್ಳಲು ಅಥವಾ ಉಪಯೋಗಿಸಲು ಅನುಮತಿ ...

191. ಗುಡಿಸಲುಗಳ ನಿಯಂತ್ರಣ ...

192. ಗುಡಿಸಲುಗಳ ಮೇಲ್ಪಾಟು ...

**ಚರಂಡಿ ವ್ಯವಸ್ಥೆ, ನೀರು ಸರಬರಾಜು ಗೃಹಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ**

193. ಚರಂಡಿಗಳು, ಇತ್ಯಾದಿಗಳ ಮೇಲೆ ಪೌರಸಭೆಯ ನಿಯಂತ್ರಣ ...

194. ಚರಂಡಿಗಳನ್ನು ಮಾಡುವುದಕ್ಕಾಗಿ ಅಧಿಕಾರಗಳು ...

195. ಮನೆಗಳಿಗೆ ಸಾಕಷ್ಟು ಚರಂಡಿ ವ್ಯವಸ್ಥೆ ...

196. ಪೌರಸಭಾ ಚರಂಡಿಗಳೊಳಕ್ಕೆ ಹರಿಯಬಿಡಲು ಕಟ್ಟಡಗಳ ಅಥವಾ ಭೂಮಿಗಳ ಒಡೆಯರ ಮತ್ತು ಅಧಿಭೋಗದಾರರ ಅಧಿಕಾರ ...

197. ಇತರ ವ್ಯಕ್ತಿಗಳಿಗೆ ಸೇರಿದ ಭೂಮಿಯ ಮೂಲಕ ಅಥವಾ ಚರಂಡಿಯನ್ನು ಒಯ್ಯಲು ಹಕ್ಕು ...

198. ಚರಂಡಿಯನ್ನು ಒಯ್ಯಲಾಗಿರುವಂಥ ಭೂಮಿಯ ಒಡೆಯನಿಗೆ, ಅದರ ಮೇಲೆ ತರುವಾಯ ಕಟ್ಟುವುದರ ಬಗೆಗಿನ ಇರುವ ಹಕ್ಕುಗಳು ...

199. ಕಕ್ಕಸುಗಳು, ಇತ್ಯಾದಿಗಳ ಬಗ್ಗೆ ವ್ಯವಸ್ಥೆ ...

200. ಕಕ್ಕಸುಗಳು ಇತ್ಯಾದಿಗಳನ್ನು ಬದಲಾಯಿಸುವ, ದುರಸ್ತಿ ಮಾಡುವ ಮತ್ತು ಸರಿಯಾದ ಸ್ಥಿತಿಯಲ್ಲಿಡುವ ಬಗ್ಗೆ ಖರ್ಚು ...

201. ಅಸ್ತಿತ್ವದಲ್ಲಿರುವ ಖಾಸಗಿ ಚರಂಡಿಗಳನ್ನು ಮುಚ್ಚಲು ಅಧಿಕಾರ ...

202. ಅನಧಿಕೃತವಾಗಿ ನಿರ್ಮಿಸಿದ, ಪುನರ್‌ನಿರ್ಮಿಸಿದ ಅಥವಾ ನಿಲ್ಲಿಸದ ಗ್ರಾಮಸಾರ ಚರಂಡಿಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ ...

203. ಪೌರಸಭಾ ಚರಂಡಿಗಳ ಮೇಲೆ ಒತ್ತುವರಿ, ಇತ್ಯಾದಿ ...

204. ಚರಂಡಿಗಳು, ಇತ್ಯಾದಿಗಳ ಪರಿಶೀಲನೆ ...

205. ಮುನ್ಸಿಪಲ್ ಕೌನ್ಸಿಲುಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಅವುಗಳನ್ನು ನಿರ್ವಹಿಸುವ ಆಯ್ಕೆಯ ಅವಕಾಶವನ್ನು ಕೊಡದೆಯೆ ನಿರ್ವಹಿಸಬಹುದು ...

206. ಪ್ರಧಾನ ನೀರು ಕೊಳವೆ, ಇತ್ಯಾದಿಗಳನ್ನು ಒಯ್ಯುವ ಅಧಿಕಾರ ...

207. ಲೈಸೆನ್ಸ್ ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರನು ಮಾಡಬೇಕಾದ ಕೆಲಸಗಳು ...

### ಬಾಹ್ಯ ರಚನೆಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ


208. ಕೆಲವು ಮುಂಚಾಚುವಿಕೆಗಳಿಗೆ ಅನುಮತಿ ಅಗತ್ಯ ...

209. ಮಳೆ ನೀರಿಗಾಗಿ ಹರಿದೋಣಿಗಳು ಮತ್ತು ಕೊಳವೆಗಳು ...

210. ಮನೆಗಳಿಗೆ ಬ್ರ್ಯಾಕೆಟ್ಟುಗಳು, ಇತ್ಯಾದಿಗಳನ್ನು ಜೋಡಿಸುವುದು ...

211. ಬೀದಿಗಳಿಗೆ ಹೆಸರಿಡುವುದು ಮತ್ತು ಮನೆಗಳಿಗೆ ಸಂಖ್ಯೆ ಕೊಡುವುದು ...

212. ಮುಳ್ಳು ಬೇಲಿಗಳು, ಮರಗಳು, ಇತ್ಯಾದಿಗಳನ್ನು ತೆಗೆದುಹಾಕುವುದು ಮತ್ತು ಸವರುವುದು ...


### ಸಾರ್ವಜನಿಕ ಆರೋಗ್ಯ ಸುರಕ್ಷತೆ ಮತ್ತು ಅನುಕೂಲತೆಯ ಸಂವರ್ಧನೆಗಾಗಿ ಅಧಿಕಾರ


213. ಪಾಳುಬಿದ್ದ ಅಥವಾ ಅಪಾಯಕಾರಿಯಾದ ಕಟ್ಟಡಗಳು ...

213.ಕ ಅಪಾಯಕಾರಿ ಮರಗಳ ಸಂದರ್ಭದಲ್ಲಿ ಮುನ್ನೆಚ್ಚರಿಕೆ ...

214. ಅಪಾಯಕಾರಿ ಹರಿಯದೆ ನಿಂತ ಅಥವಾ ಅನ್ನೈರ್ಮಲ್ಯ ನೀರು ಸರಬರಾಜು ಮೂಲಗಳ ಬಗೆಗಿನ ಅಧಿಕಾರಗಳು ಮತ್ತು ಕರ್ತವ್ಯಗಳು ...

215. ನೆಲಗಟ್ಟು, ಇತ್ಯಾದಿಗಳನ್ನು ಸ್ಥಳ ತಪ್ಪಿಸುವುದು ...

216. ಸಾರ್ವಜನಿಕ ಬೀದಿಗಳು ಮತ್ತು ಬಹಿರಂಗ ಜಾಗಗಳ ಮೇಲೆ ಅಡ್ಡಿ ಮತ್ತು ಒತ್ತುವರಿಗಳು ...

217. ದುರಸ್ತಿ, ಇತ್ಯಾದಿಗಳನ್ನು ಮಾಡುವಾಗ ಹಲಗೆ ಬೇಲಿಗಳನ್ನು ಹಾಕತಕ್ಕದ್ದು ...

218. ಸಾರ್ವಜನಿಕ ಬೀದಿಯಲ್ಲಿ ಕೆಲಸವನ್ನು ನಿರ್ವಹಿಸಿದಾಗ ಸೌಲಭ್ಯಗಳ ವ್ಯವಸ್ಥೆ ...

219. ಅನುಮತಿಯಿಲ್ಲದೆ ಬೀದಿಯಲ್ಲಿ ಮರಮುಟ್ಟುಗಳನ್ನು ಇಡತಕ್ಕದ್ದಲ್ಲ ಅಥವಾ ರಂಧ್ರ ಮಾಡತಕ್ಕದ್ದಲ್ಲ ...

220. ಅಸಾಧಾರಣ ಸಂಚಾರದ ಮೂಲಕ ಉಂಟಾದ ವೆಚ್ಚಗಳನ್ನು ವಸೂಲ್ಮಾಡಲು ಮುನ್ಸಿಪಲ್ ಕೌನ್ಸಿಲಿನ ಅಧಿಕಾರ ...

221. ಅಪಾಯಕಾರಿ ಕಲ್ಲುಗಣಿ ಕೆಲಸ ...

222. ನಾಯಿಗಳ ಬಗ್ಗೆ ಉಪಬಂಧ ...

223. ಹಂದಿಗಳನ್ನು ಇಟ್ಟುಕೊಳ್ಳುವ ಬಗ್ಗೆ ಉಪಬಂಧ ...


### ಉಪದ್ರವವನ್ನು ತಡೆಗಟ್ಟಲು ಅಧಿಕಾರಗಳು


224. ಧೂಳು, ಇತ್ಯಾದಿಗಳನ್ನು ತಂದು ಹಾಕುವುದು ...

225. ಗ್ರಾಮಸಾರವನ್ನು ಹೊರಬಿಡುವುದು, ಇತ್ಯಾದಿ ...

226. ಹೊಲಸನ್ನು ತೆಗೆದುಹಾಕದೇ ಇರುವುದು, ಇತ್ಯಾದಿ ...

227. ಮಲವನ್ನು ಹೊರಹಾಕುವುದು ...

228. ಹೊಲಸು ಕಟ್ಟಡಗಳು, ಇತ್ಯಾದಿ ...

229. ತ್ಯಜಿಸಿದ ಮತ್ತು ಅಸಹ್ಯವಾದ ಕಟ್ಟಡಗಳು ...

230. ಮನುಷ್ಯವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳು ಅಥವಾ ಕಟ್ಟಡಗಳಲ್ಲಿನ ಕೊಠಡಿಗಳು ...

231. ಮನುಷ್ಯ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳನ್ನು ಕೆಡವಿ ಹಾಕುವುದಕ್ಕೆ ಆದೇಶ ನೀಡಲು ನಗರ ಮುನ್ಸಿಪಲ್ ಕೌನ್ಸಿಲುಗಳ ಅಧಿಕಾರ ...

232. ಕಟ್ಟಡಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು, ಇತ್ಯಾದಿಗಳ ಬಗ್ಗೆ ಅಧಿಕಾರ ...

233. ಸ್ನಾನ ಸೌಲಭ್ಯಗಳ ವ್ಯವಸ್ಥೆ ...

234. ನೀರನ್ನು ಮಲಿನಗೊಳಿಸುವುದು ...

235. ಅಗಸರ ಬಟ್ಟೆ ಒಗೆಯುವುದನ್ನು ನಿಯಂತ್ರಿಸುವುದು ...

236. ಬಾವಿಗಳು ಇತ್ಯಾದಿಗಳಿಂದ ಆಗುವ ಉಪದ್ರವಗಳ ಉಪಶಮನ ...

237. ಕೆಲವು ಬಗೆಯ ಸಾಗುವಳಿಯ ನಿಯಂತ್ರಣ ಅಥವಾ ನಿಷೇಧ ...

238. ಅಸಹ್ಯಕರ ಗೊಬ್ಬರ, ಇತ್ಯಾದಿಯ ಉಪಯೋಗ ...

239. ಜಾನುವಾರುಗಳನ್ನು ಕಟ್ಟಿಹಾಕುವುದು, ಇತ್ಯಾದಿ ...

240. ಪ್ರಾಣಿಗಳಿಗೆ ಹೊಲಸನ್ನು ತಿನ್ನಿಸುವುದು ...

241. ಹೊಗೆಯ ಬಳಕೆ ...

242. ಉಪದ್ರವದ ನಿಷೇಧ ...

**ಮಾರುಕಟ್ಟೆಗಳು, ಸರಕುಗಳ ಮಾರಾಟ, ಇತ್ಯಾದಿಗಳ ನಿಯಂತ್ರಣ**

243. ಮಾರುಕಟ್ಟೆಗಳು, ಕಸಾಯಿ ಖಾನೆಗಳು ಮತ್ತು ಕೆಲವು ವ್ಯವಹಾರಗಳಿಗೆ ಲೈಸೆನ್ಸ್‌ಗಳನ್ನು ಕೊಡುವುದು ...

244. ಮಾರುಕಟ್ಟೆಗಳನ್ನು ಮತ್ತು ಕಸಾಯಿಖಾನೆಗಳನ್ನು ತೆರೆಯುವುದು, ಮುಚ್ಚುವುದು ಮತ್ತು ಬಾಡಿಗೆಗೆ ಕೊಡುವುದು ...

245. ಕುಷ್ಠ ರೋಗಿಗಳು ಮತ್ತು ಗಲಭೆಕೋರರು, ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಲು ಅಧಿಕಾರ ...

246. ಪೌರಸಭಾ ಪರಿಮಿತಿಗಳಿಂದ ಹೊರಗಡೆ ಕಸಾಯಿಖಾನೆಗಳು, ಇತ್ಯಾದಿ ...

247. ಅನಾರೋಗ್ಯಕರ ಆಹಾರ ವಸ್ತುಗಳು ಮತ್ತು ಪಾನೀಯ ...

**ಅಪಾಯಕಾರಿ ರೋಗಗಳನ್ನು ತಡೆಗಟ್ಟುವುದು**

248. ಸೋಂಕು ರೋಗಗಳನ್ನು ತಡೆಗಟ್ಟುವುದು ...

249. ಸೋಂಕು ರೋಗ ತಲೆದೋರುವ ಭಯ ಅಥವಾ ವಾಸ್ತವಿಕವಾಗಿ ಅದು ತಲೆದೋರಿದಾಗ ಮುನ್ಸಿಪಲ್ ಕೌನ್ಸಿಲಿನ ಕರ್ತವ್ಯಗಳು ...

250. ಅಧಿಕಾರಿಗಳ ಮತ್ತು ಆದೇಶಗಳ ಹಿಂತೆಗೆದುಕೊಳ್ಳುವಿಕೆ ಮತ್ತು ಮಾರ್ಪಾಟು ...

251. ಕುದುರೆಗಳು, ನಾಯಿಗಳು, ಜಾನುವಾರುಗಳು, ಕುರಿಗಳು ಅಥವಾ ಮೇಕೆಗಳ ರೋಗಗಳಿಗೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲಿನ ಕರ್ತವ್ಯಗಳು ...

252. ಕಟ್ಟಡಗಳ ಒಳಭಾಗದಲ್ಲಿ ಜನನಿಬಿಡತೆಯನ್ನು ಕಡಿಮೆ ಮಾಡಲು ವ್ಯವಹರಣೆಗಳು ...

253. ಸರ್ಕಾರವು ಅಧಿಸೂಚಿಸಿದ ಜನನಿಬಿಡತೆ ಪ್ರದೇಶಗಳಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರದಾನ ಮಾಡಬಹುದಾದಂಥ ವಿಶೇಷ ಅಧಿಕಾರಗಳು ...

254. ಪೂಜಾ ಸ್ಥಳದಲ್ಲಿ ಸಮಾಧಿ ಅಥವಾ ಗೋರಿ ನಿರ್ಮಾಣದ ನಿಷೇಧ ...

255. ಸತ್ತವರ ವಿಲೆಗಾಗಿ ಸ್ಥಳಗಳನ್ನು ಮುಚ್ಚುವುದು ...

**ಕೆಲವು ವ್ಯಾಪಾರಗಳು ಮತ್ತು ಉದ್ಯೋಗಗಳಿಂದ ಉಂಟಾಗುವ ಉಪದ್ರವಗಳು**

256. ಲೈಸೆನ್ಸ್ ಪಡೆಯದೆ ಕೆಲವು ಉದ್ದೇಶಗಳಿಗಾಗಿ ಆವರಣವನ್ನು ಉಪಯೋಗಿಸತಕ್ಕದ್ದು ...

257. 256ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಉದ್ದೇಶಗಳಿಗಾಗಿ ವಿಶಿಷ್ಟ ಪ್ರದೇಶಗಳಲ್ಲಿನ ಆವರಣದ ಉಪಯೋಗವನ್ನು ತಡೆಗಟ್ಟಲು ಮುನ್ಸಿಪಲ್ ಕಮೀಷನರನ ಅಥವಾ ಚೀಫ್ ಆಫೀಸರನ ಅಧಿಕಾರ ...

258. ಔದ್ಯಮಿಕ ಉದ್ದೇಶಗಳಿಗೆ ಉಪಯೋಗಿಸುವುದಕ್ಕಾಗಿ ಪ್ರದೇಶಗಳನ್ನು ಪ್ರತ್ಯೇಕವಾಗಿರಿಸುವುದು ...

259. ಜನನಿಬಿಡವಾದ ಸ್ಥಳಗಳಲ್ಲಿನ ಕಾರ್ಖಾನೆಗಳು ...

260. ಕೆಲಸಗಾರರನ್ನು ಕರೆಯಲು ಅಥವಾ ಕಳುಹಿಸಲು ಸೈರನ್ ಅಥವಾ ಶಿಳ್ಳೆಯ ಉಪಯೋಗ ...

**ಸಾಮಾನ್ಯ ದಂಡನೆ, ನೋಟೀಸುಗಳ ಜಾರಿ ಮತ್ತು ಸಂಕೀರ್ಣ ಉಪಬಂಧಗಳು**

261. ಅಗ್ನಿಶಾಮಕ ದಳದವರಿಗೆ ಪೊಲೀಸು ಮತ್ತು ಪೌರಸಭಾ ಅಧಿಕಾರಿಗಳು ನೆರವು ನೀಡುವುದು ...

262. ನೋಟೀಸುಗಳ ಜಾರಿ, ಇತ್ಯಾದಿ ...

263. ಸಾಮಾನ್ಯ ದಂಡನೆ ...

264. ಒಡೆಯ ಅಥವಾ ಅಧಿಭೋಗದಾರನು ತಪ್ಪುವಲ್ಲಿ ಮುನ್ಸಿಪಲ್ ಕೌನ್ಸಿಲು ಕೆಲಸವನ್ನು ನಿರ್ವಹಿಸಬಹುದು ಮತ್ತು ವೆಚ್ಚವನ್ನು ವಸೂಲು ಮಾಡಬಹುದು ...

265. ಒಡೆಯನು ತಪ್ಪಿದಲ್ಲಿ ಸ್ವಾಧೀನದಾರನು ಕೆಲಸವನ್ನು ನಿರ್ವಹಿಸಬಹುದು ಮತ್ತು ಅವನ ಬಾಡಿಗೆಯಿಂದ ವೆಚ್ಚಗಳನ್ನು ಮುರಿದುಕೊಳ್ಳಬಹುದು ...

266. ಅಧಿನಿಯಮದ ಜಾರಿಯನ್ನು ಯಾರೇ ಸ್ವಾಧೀನದಾರನು ವಿರೋಧಿಸಿದರೆ ವ್ಯವಹರಣೆಗಳು ...

267. ಈ ಅಧಿನಿಯಮದ ಉದ್ದೇಶಗಳಿಗಾಗಿ ಪ್ರವೇಶ ...

268. ಕೆಲವು ಪ್ರಕರಣಗಳಲ್ಲಿ ಪರಿಹಾರದ ನಿರ್ಧರಣೆ ...

269. ಖರ್ಚುಗಳನ್ನು ಅಥವಾ ವೆಚ್ಚಗಳನ್ನು ನಿರ್ಧರಿಸುವ ಮತ್ತು ವಸೂಲ್ಮಾಡುವ ಬಗೆ ...

270. ಪೌರಸಭಾ ಚುನಾವಣೆಗಳಿಗಾಗಿ ಆವರಣಗಳು, ವಾಹನಗಳು, ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು ...

271. ನಷ್ಟ ಪರಿಹಾರದ ಸಂದಾಯ ...

272. ಮಾಹಿತಿಯನ್ನು ಪಡೆಯಲು ಅಧಿಕಾರ ...

273. ಕಡ್ಡಾಯವಾಗಿ ಕೋರಲಾದ ಆವರಣದಿಂದ ಹೊರಹಾಕುವುದು ...

274. ಕಡ್ಡಾಯ ಕೋರಿಕೆಯಿಂದ ಆವರಣಗಳ ಬಿಡುಗಡೆ ...

275. ಕಡ್ಡಾಯ ಕೋರಿಕೆಯ ಬಗ್ಗೆ ಯಾವುದೇ ಆದೇಶದ ಉಲ್ಲಂಘನೆಗಾಗಿ ದಂಡನೆ ...

**ಅಧ್ಯಾಯ X**

**ಪ್ರಾಸಿಕ್ಯೂಷನ್‌ಗಳು, ದಾವೆಗಳು ಮತ್ತು ಪೊಲೀಸರ ಅಧಿಕಾರಗಳು**

276. ಮುನ್ಸಿಪಲ್ ಕೌನ್ಸಿಲು, ಪ್ರಾಸಿಕ್ಯೂಟ್ ಮಾಡಬಹುದು ...
277. ಅಪರಾಧಗಳನ್ನು ರಾಜಿ ಮಾಡಿಕೊಳ್ಳಲು ಅಧಿಕಾರ ...
278. ಜಫ್ತಿ, ಇತ್ಯಾದಿಗಾಗಿ ಕಾಲಪರಿಮಿತಿ ...
279. ನಮೂನೆಯಲ್ಲಿ ದೋಷವಿದ್ದಾಗ್ಯೂ ಜಫ್ತಿಯು ಕಾನೂನುಸಮ್ಮತ ...
280. ಪೌರಸಭಾ ಸ್ವತ್ತಿಗೆ ಆದ ಹಾನಿಯನ್ನು ತುಂಬಿಕೊಡುವ ಬಗ್ಗೆ ...
281. ದಾವೆಯ ಮೂಲಕ ಪರ್ಯಾಯ ಪ್ರಕ್ರಿಯೆ ...
282. ರಾಜಿ ಮಾಡಿಕೊಳ್ಳುವ ಅಧಿಕಾರ, ಇತ್ಯಾದಿ ...
283. ಸದ್ಭಾವನೆಯಲ್ಲಿ ಮಾಡಲಾದ ಕಾರ್ಯಗಳಿಗಾಗಿ ಪೌರಸಭೆ, ಅದರ ಅಧಿಕಾರಿಗಳು, ನೌಕರರು, ಇತ್ಯಾದಿ ವಿರುದ್ಧ ದಾವೆಗಳ ಪ್ರತಿಷೇಧ ...
284. ದಾವೆಗಳಿಗಾಗಿ ಪೂರ್ವಭಾವಿ ನೋಟೀಸು ನೀಡಿಕೆ ...
285. ಪೊಲೀಸ್ ಅಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು ...

**ಅಧ್ಯಾಯ XI**

**ಪೌರಸಭೆಯ ಲೆಕ್ಕಪತ್ರಗಳು ಮತ್ತು ಆಡಳಿತ ವರದಿಗಳು**

286. ಬಜೆಟ್ ಸೇರಿಸಿರದ ವೆಚ್ಚದ ನಿಷೇಧ ...
287. ಲೆಕ್ಕಪತ್ರಗಳ ಮಂಡನೆ ...
288. ಬಜೆಟ್‌ನ ಪರಿಷ್ಕರಣೆ ...
289. ಲೆಕ್ಕಪತ್ರಗಳ ನಿರ್ವಹಣೆ ಮತ್ತು ವೆಚ್ಚದ ಮೇಲೆ ನಿರ್ಬಂಧಗಳು ...
290. ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ...
291. ದಸ್ತಾವೇಜುಗಳ ಹಾಜರುಪಡಿಸುವಿಕೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳ ಹಾಜರಾತಿಯನ್ನು ಅಗತ್ಯಪಡಿಸಲು ಲೆಕ್ಕಪರಿಶೋಧಕನ ಅಧಿಕಾರ, ಇತ್ಯಾದಿ ...
292. 291ನೇ ಪ್ರಕರಣದ ಮೇರೆಗೆ ಕಡ್ಡಾಯ ಕೋರಿಕೆಯ ಉಲ್ಲಂಘನೆಗಾಗಿ ದಂಡ ...
293. ಸರ್ಕಾರವು ನಿರ್ದೇಶಿಸಬಹುದಾದಂಥ ಕೆಲವು ಅಧಿಕಾರಿಗಳಿಗೆ ಮತ್ತು ನಿಕಾಯಗಳಿಗೆ ಲೆಕ್ಕಪರಿಶೋಧನಾ ವರದಿಯನ್ನು ಕಳುಹಿಸತಕ್ಕದ್ದು ...
294. ಲೆಕ್ಕಪರಿಶೋಧನಾ ವರದಿಯು ಒಳಗೊಂಡಿರಬೇಕಾದ ಅಂಶಗಳು ...
295. ಮುನ್ಸಿಪಲ್ ಕೌನ್ಸಿಲು ದೋಷವನ್ನು ಪರಿಹರಿಸಿಕೊಳ್ಳತಕ್ಕದ್ದು ...
296. ಅತೀವ ನಿರ್ಲಕ್ಷತೆ ಅಥವಾ ದುರ್ವರ್ತನೆಯಿಂದ ಉಂಟಾದ ಕಾನೂನುಬಾಹಿರ ಸಂದಾಯ ಅಥವಾ ನಷ್ಟಕ್ಕೆ ಕಮೀಷನರು ಅಧಿಭಾರ ಅಥವಾ ವೆಚ್ಚ ಹೊರಿಸತಕ್ಕದ್ದು ...
297. ಅಧಿಭಾರಗಳು ಮತ್ತು ವೆಚ್ಚಗಳನ್ನು ವಸೂಲಿ ಮಾಡುವ ಬಗೆ ...
298. ಅಧಿಭಾರ ಅಥವಾ ವೆಚ್ಚ ಹೊರಿಸುವಿಕೆಯ ಆದೇಶದ ವಿರುದ್ಧ ಅರ್ಜಿ ...

299. ಲೆಕ್ಕಪರಿಶೋಧಕರ ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ವೆಚ್ಚಗಳನ್ನು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದಲ್ಲ ...

300. ಸರ್ಕಾರಕ್ಕೆ ಲೆಕ್ಕಪತ್ರಗಳನ್ನು ರವಾನಿಸುವುದು ...

301. ಲೆಕ್ಕಪತ್ರಗಳ ಪ್ರಕಟಣೆ ...

302. ವಾರ್ಷಿಕ ಆಡಳಿತ ವರದಿ ...

**ಅಧ್ಯಾಯ XII**

**ನಿಯಂತ್ರಣ**

303. ಮುಖ್ಯ ನಿಯಂತ್ರಣ ಪ್ರಾಧಿಕಾರಿ ...

304. ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆಯ ಅಧಿಕಾರ ...

305. ಮುನ್ಸಿಪಲ್ ಕೌನ್ಸಿಲಿನ ಕಚೇರಿಯನ್ನು ಪರಿಶೀಲಿಸಲು ಅಧಿಕಾರ ...

306. ಮುನ್ಸಿಪಲ್ ಕೌನ್ಸಿಲುಗಳ ಆದೇಶಗಳು, ಇತ್ಯಾದಿಗಳ ಜಾರಿಯನ್ನು ಅಮಾನತುಗೊಳಿಸಲು ಡೆಪ್ಯುಟಿ ಕಮೀಷನರನ ಅಧಿಕಾರ ...

307. ಕೆಲವು ಸಂದರ್ಭಗಳಲ್ಲಿ ಕಾಮಗಾರಿಯ ನಿರ್ವಹಣೆ ...

308. ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಕೌನ್ಸಿಲರುಗಳ ಹೊಣೆ ...

309. ನಗರ ಮುನ್ಸಿಪಲ್ ಕೌನ್ಸಿಲುಗಳಿಗೆ ಸಂಬಂಧಿಸಿದಂತೆ ಕಮೀಷನರನ ಅಧಿಕಾರ ...

310. ಪೌರಸಭಾ ವಿಷಯಗಳಲ್ಲಿ ಸರ್ಕಾರಿ ವಿಚಾರಣೆ ...

311. ಸಿಬ್ಬಂದಿಯ ನಿಯೋಜನೆಯಲ್ಲಿ ದುಂದು ವೆಚ್ಚವನ್ನು ತಡೆಗಟ್ಟಲು ಕಮೀಷನರನ ಅಧಿಕಾರ ...

312. ಸರ್ಕಾರವು, ಆರೋಗ್ಯ ಅಧಿಕಾರಿಯನ್ನು ನೇಮಕ ಮಾಡಲು ಯಾವುದೇ ಮುನ್ಸಿಪಲ್ ಕೌನ್ಸಿಲನ್ನು ಅಗತ್ಯಪಡಿಸಬಹುದು ...

313. ಮುನ್ಸಿಪಲ್ ಕೌನ್ಸಿಲು ತಪ್ಪಿದಲ್ಲಿ ಕರ್ತವ್ಯಗಳ ನೆರವೇರಿಕೆಗಾಗಿ ವ್ಯವಸ್ಥೆ ಮಾಡಲು ಸರ್ಕಾರದ ಅಧಿಕಾರ ...

314. ಪೌರಸಭಾ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗೆ ಸರ್ಕಾರದ ಬಾಕಿಗಳನ್ನು ಸಂದಾಯ ಮಾಡುವಂತೆ ನಿರ್ದೇಶಿಸಲು ಸರ್ಕಾರದ ಅಧಿಕಾರ ...

315. ಕೆಲವು ಸಂದರ್ಭಗಳಲ್ಲಿ ಆಡಳಿತಗಾರರನ್ನು ನೇಮಿಸಲು ಅಧಿಕಾರ ...

316. ಕೆಲವು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲನ್ನು ರದ್ದುಗೊಳಿಸಲು ಸರ್ಕಾರದ ಅಧಿಕಾರ ...

317. ಮುನ್ಸಿಪಲ್ ಕೌನ್ಸಿಲುಗಳ ನಡುವಣ ವಿವಾದಗಳು ...

318. ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಅಥವಾ ಅದು ತಪ್ಪಿದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಗಳ ಅಧಿಕಾರ ಮತ್ತು ಪೌರಸಭಾ ನಿಧಿಯ ಹೊಣೆ ...

319. ಮುನ್ಸಿಪಲ್ ಕೌನ್ಸಿಲುಗಳ ಉಪವಿಧಿಗಳನ್ನು ರದ್ದುಗೊಳಿಸಲು ಅಥವಾ ಮಾರ್ಪಾಡು ಮಾಡಲು ಸರ್ಕಾರದ ಅಧಿಕಾರ ...

320. ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಅಧಿಕಾರಗಳು ...

321. ಸರ್ಕಾರದಿಂದ ಅಧಿಕಾರಗಳ ಪ್ರತ್ಯಾಯೋಜನೆಗಳು ...

322. ಪುನರೀಕ್ಷಣೆ ...

## ಅಧ್ಯಾಯ XIII

## ನಿಯಮಗಳು ಮತ್ತು ಉಪವಿಧಿಗಳು


323. ಸರ್ಕಾರದಿಂದ ನಿಯಮಗಳ ರಚನೆ ...

324. ಉಪವಿಧಿಗಳ ರಚನಾಧಿಕಾರ ...

325. ಮಾದರಿ ಉಪವಿಧಿಗಳನ್ನು ರಚಿಸಲು ಸರ್ಕಾರದ ಅಧಿಕಾರ ಮತ್ತು ಮುನ್ಸಿಪಲ್ ಕೌನ್ಸಿಲುಗಳು ಅಂಥ ಉಪವಿಧಿಗಳನ್ನು ಅಂಗೀಕರಿಸುವುದು ...

326. ನಿಯಮಗಳು ಮತ್ತು ಉಪವಿಧಿಗಳನ್ನು ಮುದ್ರಿಸತಕ್ಕದ್ದು ಮತ್ತು ಮಾರಾಟ ಮಾಡತಕ್ಕದ್ದು ...


## ಅಧ್ಯಾಯ XIV

## ಮುನ್ಸಿಪಲ್ ಕಮೀಷನರ್ ಅಥವಾ ಚೀಫ್ ಆಫೀಸರ್ ಮತ್ತು ಇತರ ಪೌರಸಭಾ ಅಧಿಕಾರಿಗಳ ನೇಮಕಾತಿ ಮತ್ತು ಅಧಿಕಾರಗಳು


327. ಚೀಫ್ ಆಫೀಸರನ ನೇಮಕಾತಿ ...

328. ಆರೋಗ್ಯ ಅಧಿಕಾರಿಯ ನೇಮಕಾತಿ ...

329. ಚೀಫ್ ಆಫೀಸರನ ಕರ್ತವ್ಯಗಳು ...

330. ಚೀಫ್ ಆಫೀಸರುಗಳ ಅಧಿಕಾರಗಳು ...

331. ಮುನ್ಸಿಪಲ್ ಕಮೀಷನರ್‌ನ ನೇಮಕಾತಿ ...

332. ಪದದಿಂದ ತೆಗೆದು ಹಾಕುವುದು ...

333. ಮುನ್ಸಿಪಲ್ ಕಮಿಷನರನ ಸಂಬಳ ...

334. ಇತರ ವ್ಯವಹಾರಗಳಲ್ಲಿ ತೊಡಗುವ ಬಗ್ಗೆ ನಿಷೇಧ ...

335. ಗೈರುಹಾಜರಿಯ ರಜೆ ...

336. ಮುನ್ಸಿಪಲ್ ಕಮಿಷನರನ ಪಿಂಚಣಿ ಮತ್ತು ರಜಾಭತ್ಯಗಳ ಬಗ್ಗೆ ಮುನ್ಸಿಪಲ್ ಕೌನ್ಸಿಲ್‌ನಿಂದ ವಂತಿಗೆ ...

337. ವಿವರಪಟ್ಟಿಕೆಗಳು, ವರದಿಗಳು ಅಥವಾ ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಅಗತ್ಯಪಡಿಸಲು ಮುನ್ಸಿಪಲ್ ಕೌನ್ಸಿಲಿನ ಅಧಿಕಾರ ...

338. ಮುನ್ಸಿಪಲ್ ಕಮೀಷನರುಗಳ ಅಧಿಕಾರಗಳು ಮತ್ತು ಅವುಗಳ ಪರಿಮಿತಿಗಳು ...

339. ಮುನ್ಸಿಪಲ್ ಕಮೀಷನರನು ಅಥವಾ ಚೀಫ್ ಆಫೀಸರನು ಇತರ ಅಧಿಕಾರಗಳನ್ನು ಚಲಾಯಿಸಿಲು ಅಧಿಕೃತನಾಗಿರುವುದಾಗಿ ಭಾವಿಸತಕ್ಕದ್ದು ...

340. ಮುನ್ಸಿಪಲ್ ಕೌನ್ಸಿಲು, ಇತ್ಯಾದಿಗಳ ಸಭೆಗಳಿಗೆ ಹಾಜರಾಗಲು ಮುನ್ಸಿಪಲ್ ಕಮೀಷನರನ ಮತ್ತು ಚೀಫ್ ಆಫೀಸರನ ಹಕ್ಕು ...

341. ಮುನ್ಸಿಪಲ್ ಕಮೀಷನರನು ಅಥವಾ ಚೀಫ್ ಆಫೀಸರನು ಕೊಟ್ಟ ಕಾನೂನು ಸಮ್ಮತ ನಿರ್ದೇಶನವನ್ನು ಉಲ್ಲಂಘಿಸುವ ವ್ಯಕ್ತಿಗೆ ದಂಡನೆ ...

342. ನೇಮಿಸಲು, ರಜಾ ಮಂಜೂರ್ಮಾಡಲು, ಶಿಕ್ಷಿಸಲು ಮತ್ತು ಕೆಲಸದಿಂದ ವಜಾ ಮಾಡಲು ಮುನ್ಸಿಪಲ್ ಕಮಿಷನರನ ಅಥವಾ ಚೀಫ್ ಆಫೀಸರನ ಅಧಿಕಾರಗಳು ...

343. (ಅಪೀಲಿಗೆ ಒಳಪಟ್ಟ) ಆದೇಶಗಳು ...

344. ಮುನ್ಸಿಪಲ್ ಕಮೀಷನರನ ಅಧಿಕಾರಗಳ ಪ್ರತ್ಯಾಯೋಜನೆ ...
345. ಮುನ್ಸಿಪಲ್ ಕೌನ್ಸಿಲ್‌ನ ಪರವಾಗಿ ಕರಾರುಗಳನ್ನು ಮಾಡಿಕೊಳ್ಳಲು ಅಧಿಕಾರ ...
346. ಕರಾರುಗಳನ್ನು ಮಾಡಿಕೊಳ್ಳುವ ವಿಧಾನ ...
347. ಐದು ನೂರು ರೂಪಾಯಿಗಳಿಗೆ ಮೀರುವ ವೆಚ್ಚವನ್ನೊಳಗೊಳ್ಳುವ ಕರಾರುಗಳಿಗೆ ಟೆಂಡರುಗಳನ್ನು ಕರೆಯತಕ್ಕದ್ದು ...
348. ಕರಾರನ್ನು ನೆರವೇರಿಸುವುದಕ್ಕಾಗಿ ಭದ್ರತೆಯನ್ನು ಯಾವಾಗ ತೆಗೆದುಕೊಳ್ಳತಕ್ಕದ್ದು ...

**ಅಧ್ಯಾಯ XV**

**ಅಧಿಸೂಚಿತ ಪ್ರದೇಶಗಳು**

349. ಅಧಿಸೂಚಿತ ಪ್ರದೇಶಗಳ ರಚನೆ ...
350. ಅಧಿಸೂಚಿತ ಪ್ರದೇಶಗಳ ಆಡಳಿತ ...
351. ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಅನ್ವಯ ...
352. ಅಧಿಸೂಚಿತ ಪ್ರದೇಶಗಳಿಗೆ ಅಧಿನಿಯಮದ ಅನ್ವಯ ...
353. ಅಧಿಸೂಚನೆಗೆ ಮುಂಚಿನ ಪ್ರಕ್ರಿಯೆ ...
354. 349ನೇ ಪ್ರಕರಣದ ಮೇರೆಗೆ ಅಧಿಸೂಚನೆಯ ರದ್ದಿಯಾತಿ ...
355. ತಾತ್ಕಾಲಿಕ ಉಪಬಂಧಗಳು ...
355ಕ. ಅಧಿಸೂಚಿತ ಪ್ರದೇಶಗಳು, ಇತ್ಯಾದಿಗಳನ್ನು ಪೌರಸಭೆಗಳಾಗಿ ಪರಿವರ್ತಿಸುವುದು ...

**ಅಧ್ಯಾಯ XVI**

**ಪಂಚಾಯತಿಯನ್ನು ಪೌರಸಭೆಯಾಗಿ ಪರಿವರ್ತಿಸುವ ಬಗ್ಗೆ ಹಾಗೂ ಪೌರಸಭೆಗಳನ್ನು ವಿಲೀನಗೊಳಿಸುವುದರ ಮತ್ತು ವಿಭಾಗಿಸುವುದರ ಬಗ್ಗೆ ಉಪಬಂಧಗಳು, ಇತ್ಯಾದಿ**

356. ಅರ್ಥ ವಿವರಣೆ ...
357. ಪಂಚಾಯತಿಯನ್ನು ಪೌರಸಭೆಯಾಗಿ ಪರಿವರ್ತಿಸುವುದರ ಪರಿಣಾಮ ...
358. ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರುಗಳ ಪದಾವಧಿ ಮತ್ತು ಅವರ ಇತರ ಅಧಿಕಾರಗಳು ...
359. ಪಂಚಾಯತಿ ಪ್ರದೇಶವನ್ನು ಪೌರಸಭೆಯಲ್ಲಿ ವಿಲೀನಗೊಳಿಸುವುದರ ಪರಿಣಾಮ ...
360. ಪಂಚಾಯತಿ ಪ್ರದೇಶದ ಭಾಗವನ್ನು ಪೌರಸಭೆಯಲ್ಲಿ ವಿಲೀನಗೊಳಿಸುವುದರ ಪರಿಣಾಮ ...
361. ಪಟ್ಟಣ, ಪೌರಸಭೆಗಳನ್ನು ನಗರ ಪೌರಸಭೆಗಳಾಗಿ ಪರಿವರ್ತಿಸುವುದು ...
362. ನಗರ ಪೌರಸಭೆಗಳನ್ನು ಪಟ್ಟಣ ಪೌರಸಭೆಗಳನ್ನಾಗಿ ಪರಿವರ್ತಿಸುವುದು ...
363. ಹೊಂದಿಕೊಂಡಿರುವ ಎರಡು ಪೌರಸಭೆಗಳ ವಿಲೀನೀಕರಣ ...
363ಕ. ಪಟ್ಟಣ ಪೌರಸಭೆಯನ್ನು ಪಂಚಾಯತಿಯಾಗಿ ಪರಿವರ್ತಿಸುವುದು ...
364. ತೊಂದರೆಗಳ ನಿವಾರಣೆ ...

## ಅಧ್ಯಾಯ XVII

### ಸಂಕೀರ್ಣಗಳು


365. ಕರ್ನಾಟಕ ಪೌರಸಭಾ ಆಡಳಿತ ಸೇವೆ ...

366. ಲೋಕೋಪಯೋಗಿ ಕಾಮಗಾರಿಗಳ ನಿರ್ವಹಣೆಗಾಗಿ ಏಜನ್ಸಿ ...

367. ಕರ್ನಾಟಕ ಪೌರಾಡಳಿತ ಸೇವೆಯ ಬಗ್ಗೆ ವಸೂಲಿ ...

368. ಅನರ್ಹಗೊಂಡಿದ್ದಾಗ ಮುನ್ಸಿಪಲ್ ಕೌನ್ಸಿಲಿನ ಕೌನ್ಸಿಲರ್, ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಿಸುವುದಕ್ಕಾಗಿ ದಂಡನೆ ...

369. ಹಿತಾಸಕ್ತಿಯುಳ್ಳ ಸದಸ್ಯನು ಮತ ನೀಡುವುದಕ್ಕಾಗಿ ದಂಡನೆ ...

370. ಕರಾರಿನಲ್ಲಿ ಹಿತಾಸಕ್ತಿಯನ್ನು ಅಧಿಕಾರಿ ಅಥವಾ ನೌಕರನು ಆರ್ಜಿಸುವುದಕ್ಕಾಗಿ ದಂಡನೆ ...

371. ಸವಾಲು ಮಾಡುವುದರ ನಿಷೇಧ ...

372. ಕಂಪನಿಗಳಿಂದ ಅಪರಾಧಗಳು ...

373. ನೋಟೀಸು, ಇತ್ಯಾದಿಗಳ ಮೇಲೆ ರುಜುವನ್ನು ಮುದ್ರೆ ಒತ್ತುವುದು ...

374. ಲೈಸೆನ್ಸುಗಳು, ಇತ್ಯಾದಿಗಳ ಸಂಬಂಧದಲ್ಲಿ ಉಪಬಂಧಗಳು ...

375. ಪೌರಸಭಾ ಸೇವೆಯಲ್ಲಿ ನಿಯೋಜಿತರಾದ ಜಾಡಮಾಲಿಗಳು ಮತ್ತು ವ್ಯಕ್ತಿಗಳ ಕೆಲವು ಇತರ ವರ್ಗಗಳ ಸೇವಾ ಷರತ್ತುಗಳು ...

376. ದಸ್ತಾವೇಜು ಅಥವಾ ನಮೂದನೆಯನ್ನು ಸಾಕ್ಷಿಯಾಗಿ ಅಂಗೀಕರಿಸುವುದು ...

377. ಲೈಸೆನ್ಸು ಕೊಡುವಿಕೆ ಮತ್ತು ಇತರ ಉಪಬಂಧಗಳು ಸರ್ಕಾರಕ್ಕೆ ಅನ್ವಯವಾಗತಕ್ಕದ್ದಲ್ಲ ...

378. ಬಸ್ ನಿಲುಗಡೆಗಳಿಗೆ, ಪ್ರಯಾಣಿಕರ ಆಶ್ರಯಗಳಿಗೆ ಲೈಸೆನ್ಸು ಕೊಡುವಿಕೆಯ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ, ಇತ್ಯಾದಿ ...

379. ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಅಧಿನಿಯಮದ ಉಪಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ ...

380. ಮೇಲ್ಪಾಟು ಅಧಿನಿಯಮಗಳ ಉಪಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ ...

381. ಮಧ್ಯಾಕಾಲೀನ ಉಪಬಂಧಗಳು ...

382. ನಿರಸನ ಮತ್ತು ಉಳಿಸುವಿಕೆಗಳು ...

383. ಈ ಅಧಿನಿಯಮವನ್ನು ಜಾರಿಗೊಳಿಸುವುದಕ್ಕೆ ಆದೇಶಗಳು ...

384. 1949ರ ಮೈಸೂರು ಅಧಿನಿಯಮ 69ರ ತಿದ್ದುಪಡಿ ...

385. 1949ರ ಮುಂಬಯಿ ಅಧಿನಿಯಮ ಸಂಖ್ಯೆ LIX ತಿದ್ದುಪಡಿ ...

386. 1959ರ ಮೈಸೂರು ಅಧಿನಿಯಮ 10ರ ತಿದ್ದುಪಡಿ ...
387. ಯೋಜನಾ ಪ್ರಾಧಿಕಾರದೊಂದಿಗೆ ಸಮಾಲೋಚನೆ ...
388. ಪೌರಾಡಳಿತ ನಿರ್ದೇಶನಾಲಯ ...
ಅನುಸೂಚಿ I ರಿಂದ XIII ...
ತಿದ್ದುಪಡಿ ಅಧಿನಿಯಮಗಳು ...

* * *

**1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22**

**(1964ರ ಮೇ ಏಳನೆಯ ದಿನದಂದು ಕರ್ನಾಟಕ ರಾಜಪತ್ರದಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು)**

# 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮ

1964ರ ಏಪ್ರಿಲ್ ಏಳನೆಯ ದಿನದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆಯಿತು.

(1966ರ 34, 1976ರ 2, 1976ರ 39, 1976ರ 83, 1979ರ 13, 1979ರ 21, 1981ರ 22, 1982ರ 26, 1982ರ 28 ಮತ್ತು 1983ರ 12 ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾಗಿದೆ.)

ಕರ್ನಾಟಕ ರಾಜ್ಯದಲ್ಲಿ ಪಟ್ಟಣಗಳು ಮತ್ತು ನಗರಗಳಲ್ಲಿ ಪೌರಸಭಾ ವ್ಯವಹಾರಗಳ ವ್ಯವಸ್ಥಾಪನೆಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ;

ಕರ್ನಾಟಕ ರಾಜ್ಯದಲ್ಲಿ ಪೌರನಿಗಮಗಳನ್ನು ಸ್ಥಾಪಿಸಲಾಗಿರುವ ನಗರಗಳನ್ನು ಹೊರತುಪಡಿಸಿ ಪಟ್ಟಣಗಳು ಮತ್ತು ಇತರ ನಗರಗಳಲ್ಲಿ ಪೌರಸಭಾ ವ್ಯವಹಾರಗಳ ವ್ಯವಸ್ಥಾಪನೆಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನಾಲ್ಕನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:–

## ಅಧ್ಯಾಯ–I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮ ಎಂದು ಕರೆಯತಕ್ಕದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಈ ಪ್ರಕರಣ ಮತ್ತು 2, 323, 365, 381, 383, 384 ಮತ್ತು 385ನೇ ಪ್ರಕರಣಗಳು ಕೂಡಲೇ ಜಾರಿಗೆ ಬರತಕ್ಕದ್ದು. * ಮತ್ತು ಈ ಅಧಿನಿಯಮದ ಉಳಿದ ಭಾಗವು, ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) "ತೆರಿಗೆಗೆ ಗುರಿಯಾಗುವ ವಾರ್ಷಿಕ ಮೌಲ್ಯ" ಎಂದರೆ, ಯಾವುದೇ ಕಟ್ಟಡ ಅಥವಾ ಭೂಮಿಯಲ್ಲಿ ಒಳಗೊಂಡಿರುವ ಅಥವಾ ಅದರ ಮೇಲೆ ಇರುವ ಪೀಠೋಪಕರಣ ಅಥವಾ ಯಂತ್ರ ಸಾಮಗ್ರಿಗಳನ್ನು ಹೊರತುಪಡಿಸಿ, ಅವುಗಳನ್ನು ತಿಂಗಳಿನಿಂದ ತಿಂಗಳಿಗೆ ಅಥವಾ ವರ್ಷದಿಂದ ವರ್ಷಕ್ಕೆ ಯಾವ ಒಟ್ಟು ವಾರ್ಷಿಕ ಬಾಡಿಗೆಗೆ ಕೊಡಲು ಯುಕ್ತವಾಗಿ ನಿರೀಕ್ಷಿಸಬಹುದೋ ಆ ಯಾವುದೇ ಒಟ್ಟು ವಾರ್ಷಿಕ ಬಾಡಿಗೆ;

---

* ಅಧಿನಿಯಮದ ಉಳಿದ ಭಾಗವು 1965ರ ಏಪ್ರಿಲ್ 1ನೇ ದಿನಾಂಕದಂದು ಜಾರಿಗೆ ಬಂದಿದೆ. (ನೋಡಿ ಎಸ್.ಓ. 2147 ದಿನಾಂಕ 28ನೇ ಮಾರ್ಚ್ 1965)

(2) "ಪುರೋಭಿವೃದ್ಧಿ ಫೀಜು" ಎಂದರೆ ಮೇಲ್ಪಾಟು ಯೋಜನೆಯನ್ನು ನಿರ್ವಹಣೆಯ ಯಾವುದೇ ಪರಿಣಾಮದಿಂದಾಗಿ ಭೂಮಿಯ ಮೌಲ್ಯದಲ್ಲಿಯ ಹೆಚ್ಚಳಕ್ಕೆ ಸಂಬಂಧಿಸಿದಂತೆ 160ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಫೀಜು;

(3) "ಕಟ್ಟಡ" ಎಂಬುದು ಮನೆ, ಹೊರಮನೆ, ಲಾಯ, ಕಕ್ಕಸು, ಮೂತ್ರಿ, ಶೆಡ್ಡು, ಗುಡಿಸಲು, ಗೋಡೆ, ವರಾಂಡ, ಸ್ಥಿರ ವೇದಿಕೆ, ಮೇಲ್ಪಾಯ, ಬಾಗಿಲು ಮೆಟ್ಟಿಲು, ಮೆಟ್ಟಿಲು ಸಾಲು ಅಥವಾ ಕಲ್ಲು ಕಟ್ಟಡ, ಇಟ್ಟಿಗೆ, ಮರ, ಮಣ್ಣು ಲೋಹದ್ದಾಗಿರಲಿ ಅಥವಾ ಇತರ ಯಾವುದೇ ಸಾಮಗ್ರಿಯಾಗಿರಲಿ ಅಥವಾ ಇತರ ಯಾವುದೇ ರಚನೆಯನ್ನು ಒಳಗೊಳ್ಳುತ್ತದೆ. ಆದರೆ ಚಲಿಸುವ ಆಸರೆಯನ್ನು ಒಳಗೊಳ್ಳುವುದಿಲ್ಲ;

(4) "ನಗರ ಮುನ್ಸಿಪಲ್ ಕೌನ್ಸಿಲ್" ಎಂದರೆ, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ನಗರ ಮುನ್ಸಿಪಲ್ ಕೌನ್ಸಿಲ್;

(5) "ಕಮಿಷನರ್" ಎಂದರೆ, ಈ ಅಧಿನಿಯಮದ ಮೇರೆಗೆ ಕಮಿಷನರರ ಕರ್ತವ್ಯಗಳನ್ನು ನೆರವೇರಿಸಲು ನೇಮಕಗೊಂಡ ವಿಭಾಗ ಕಮಿಷನರ್ ಅಥವಾ ಇತರೆ ಅಧಿಕಾರಿ;

(6) "ಕೌನ್ಸಿಲರ್" ಎಂದರೆ ಮುನ್ಸಿಪಲ್ ಕೌನ್ಸಿಲಿನ ಕಾನೂನುಸಮ್ಮತ ಸದಸ್ಯನಾಗಿರುವ ಯಾರೇ ವ್ಯಕ್ತಿ;

(7) "ಅಪಾಯಕಾರಿ ರೋಗ" ಎಂದರೆ,–

(ಕ) ಕಾಲರಾ, ಪ್ಲೇಗು, ದಡಾರ, ಸಿಡುಬು, ಕ್ಷಯ, ಕುಷ್ಠ, ವಿಷಮಶೀತಜ್ವರ, ಮಿದುಳು–ಬೆನ್ನು ಮೂಳೆ ಪೊರೆ ಉರಿಯೂತ ಮತ್ತು ಡಿಫ್ತೀರಿಯಾ; ಮತ್ತು

(ಖ) ಈ ಅಧಿನಿಯಮದ ಉದ್ದೇಶಗಳಿಗಾಗಿ ಸರ್ಕಾರವು ಅಧಿಸೂಚನೆಯ ಮೂಲಕ ಅಪಾಯಕಾರಿ ರೋಗವೆಂದು ಘೋಷಿಸಬಹುದಾದಂಥ ಇತರ ಯಾವುದೇ ಸ್ಥಳೀಯ ಸಾಂಕ್ರಾಮಿಕ ಅಥವಾ ಸೋಂಕು ರೋಗ;

(8) "ಈ ಅಧಿನಿಯಮದ ಪ್ರಾರಂಭದ ದಿನಾಂಕ" ಎಂದರೆ 1ನೇ ಪ್ರಕರಣದ (3)ನೇ ಉಪ ಪ್ರಕರಣದ ಮೇರೆಗೆ ಗೊತ್ತುಪಡಿಸಿದ ದಿನಾಂಕ;

(9) "ಚುನಾವಣಾ ನ್ಯಾಯಾಧಿಕರಣ" ಎಂದರೆ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಅಂಥ ಪ್ರದೇಶಕ್ಕೆ ಸಂಬಂಧಿಸಿದಂತೆ ಚುನಾವಣಾ ನ್ಯಾಯಾಧಿಕರಣವೆಂದು ಸರ್ಕಾರವು ಅಧಿಸೂಚನೆಯ ಮೂಲಕ ನೇಮಕ ಮಾಡಿದ ಯಾರೇ ನ್ಯಾಯಾಧಿಕಾರಿ ಮತ್ತು ಅಂಥ ಯಾರೇ ನ್ಯಾಯಿಕ ಅಧಿಕಾರಿಯನ್ನು ನೇಮಕ ಮಾಡಿಲ್ಲದಿರುವಲ್ಲಿ, ಯಾವ ಪ್ರದೇಶದೊಳಗೆ ಚುನಾವಣೆಯನ್ನು ನಡೆಸಲಾಗಿದೆಯೋ ಅಥವಾ ನಡೆಸಬೇಕಾಗಿತ್ತೋ ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಧೀಶ.

**ವಿವರಣೆ:–** ಈ ಖಂಡದ ಉದ್ದೇಶಗಳಿಗಾಗಿ "ಅಧೀನ ನ್ಯಾಯಾಧೀಶ" ಎಂದರೆ (i) (1* ಬೆಳಗಾವಿ ಪ್ರದೇಶ) ದಲ್ಲಿ ಸಿವಿಲ್ ನ್ಯಾಯಾಧೀಶ (ಜ್ಯೇಷ್ಠ ವಿಭಾಗ) ಮತ್ತು (ii) ರಾಜ್ಯದ ಯಾವುದೇ ಇತರ ಪ್ರದೇಶದಲ್ಲಿ ಅಧೀನ ನ್ಯಾಯಾಧೀಶನಿಲ್ಲದಿರುವಲ್ಲಿ ಸಿವಿಲ್ ನ್ಯಾಯಾಧೀಶ;

(10) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

---

1* 1973ರ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ ಅಳವಡಿಸಲಾಗಿದೆ.

(11) "ಗುಡಿಸಲು" ಎಂದರೆ, ಮುಖ್ಯವಾಗಿ ಮರ, ಬಿದಿರು, ಮಣ್ಣು, ಎಲೆಗಳು, ಹುಲ್ಲು, ಬಟ್ಟೆ ಅಥವಾ ಮಟ್ಟಿಯಿಂದ ನಿರ್ಮಿಸಿದ ಯಾವುದೇ ಕಟ್ಟಡ ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಮುನ್ಸಿಪಲ್ ಕೌನ್ಸಿಲು ಗುಡಿಸಲೆಂದು ಘೋಷಿಸಬಹುದಾದಂಥ ಯಾವುದೇ ಬಗೆಯ ಸಾಮಗ್ರಿಯಿಂದ ನಿರ್ಮಿಸಿದ ಯಾವುದೇ ರಚನೆಯನ್ನು ಒಳಗೊಳ್ಳುತ್ತದೆ;

(12) "ಭೂಮಿ"ಯು, ಯಾವುದರ ಮೇಲೆ ಕಟ್ಟಡವನ್ನು ಕಟ್ಟಲಾಗಿದೆಯೋ ಅಥವಾ ಯಾವುದು ನೀರಿನಿಂದ ಆವೃತವಾಗಿದೆಯೋ, ಆ ಭೂಮಿ, ಭೂಮಿಯಿಂದ ಉದ್ಭವಿಸುವ ಪ್ರಯೋಜನಗಳು, ಭೂಮಿಗೆ ಲಗತ್ತಾದ ವಸ್ತುಗಳು ಅಥವಾ ಭೂಮಿಗೆ ಲಗತ್ತಾದ ವಸ್ತುವಿಗೆ ಶಾಶ್ವತವಾಗಿ ಅಂಟಿಕೊಂಡಿರುವ ಮತ್ತು ಯಾವುದೇ ಬೀದಿಯ ಮೇಲೆ ಕಾನೂನು ಮೂಲಕ ಸೃಜಿಸಲಾದ ಹಕ್ಕುಗಳು–ಇವುಗಳನ್ನು ಒಳಗೊಳ್ಳುತ್ತದೆ;

(13) "ಮಾರುಕಟ್ಟೆ" ಎಂಬುದು ಮಾಂಸ, ಮೀನು, ಹಣ್ಣು, ತರಕಾರಿಗಳು, ಮನುಷ್ಯನ ಆಹಾರಕ್ಕಾಗಿ ಉದ್ದೇಶಿಸಿದ ಪ್ರಾಣಿಗಳು ಅಥವಾ ಯಾವುದೇ ಬಗೆಯ ಮನುಷ್ಯನ ಆಹಾರದ ಇತರ ಯಾವುದೇ ವಸ್ತುಗಳು– ಇವುಗಳ ಮಾರಾಟಕ್ಕಾಗಿ ಅಥವಾ ಮಾರಾಟ ಮಾಡಲು ಪ್ರದರ್ಶಿಸುವ ಉದ್ದೇಶಕ್ಕಾಗಿ, ಕೊಳ್ಳುವವರು ಮತ್ತು ಮಾರುವವರು ಯಾವುದೇ ಸಾಮಾನ್ಯ ನಿಯಂತ್ರಣವಿಲ್ಲದೆ ಇದ್ದಾಗ್ಯೂ ಅಥವಾ ಸ್ಥಳದ ಒಡೆಯನು ಅಥವಾ ಇತರ ಯಾರೇ ವ್ಯಕ್ತಿಯು ಮಾರುಕಟ್ಟೆ ವ್ಯವಹಾರದ ಅಥವಾ ಅಲ್ಲಿಗೆ ಮೇಲಿಂದ ಮೇಲೆ ವ್ಯಕ್ತಿಗಳ ಮೇಲೆ ಯಾವುದೇ ನಿಯಂತ್ರಣವನ್ನು ಚಲಾಯಿಸುತ್ತಿರಲಿ ಅಥವಾ ಚಲಾಯಿಸದೆ ಇರಲಿ ಅಂಥ ಸ್ಥಳದ ಒಡೆಯರ ಸಮ್ಮತಿಯಿಂದ ಅಥವಾ ಅದು ಇಲ್ಲದೆ ಸೇರುವ ಯಾವುದೇ ಸ್ಥಳವನ್ನು ಒಳಗೊಳ್ಳುತ್ತದೆ;

(14) "ಮುನ್ಸಿಪಲ್ ಕೌನ್ಸಿಲ್" ಎಂದರೆ, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಪಟ್ಟಣ ಅಥವಾ ನಗರ ಪೌರಸಭೆಯ ಕೌನ್ಸಿಲ್;

(15) "ಪೌರಸಭೆ" ಎಂದರೆ, 3ನೇ ಪ್ರಕರಣದ ಮೇರೆಗೆ ನಗರ ಅಥವಾ ಪಟ್ಟಣ ಪೌರಸಭೆಯೆಂದು ರಚಿಸಬಹುದಾದ ಅಥವಾ ಘೋಷಿಸಬಹುದಾದ ಯಾವುದೇ ಸ್ಥಳೀಯ ಪ್ರದೇಶ ಮತ್ತು ಅದು, ಅಂಥ ಪೌರ ಸಭೆಯು ನಗರ ಅಥವಾ ಪಟ್ಟಣ ಪೌರಸಭೆಯಾಗಿರುವುದು ಕೊನೆಗೊಂಡಿರದಿದ್ದರೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ನಗರ ಅಥವಾ ಪಟ್ಟಣ ಪೌರಸಭೆಯೆಂದು ಭಾವಿಸಲಾದಂಥ ಯಾವುದೇ ಸ್ಥಳೀಯ ಪ್ರದೇಶವನ್ನು ಒಳಗೊಳ್ಳುತ್ತದೆ;

(16) "ಅಧಿಸೂಚನೆ" ಎಂದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(17) "ಉಪದ್ರವ" ಎಂಬುದು, ಕ್ಷತಿ, ಅಪಾಯ, ಕಿರುಕುಳವನ್ನುಂಟುಮಾಡುವ ಅಥವಾ ಉಂಟು ಮಾಡಬಹುದಾದ ಅಥವಾ ದೃಷ್ಟಿ, ಘ್ರಾಣ ಅಥವಾ ಶ್ರವಣದ ಸಂವೇದನಾ ಶಕ್ತಿಗೆ ಕಿರಿಕಿರಿಯನ್ನುಂಟು ಮಾಡುವ ಅಥವಾ ವಿಶ್ರಾಂತಿ ಅಥವಾ ನಿದ್ರೆಗೆ ತೊಂದರೆಯುಂಟುಮಾಡುವ ಅಥವಾ ಪ್ರಾಣಕ್ಕೆ ಅಪಾಯಕಾರಿಯಾದ ಅಥವಾ ಅಪಾಯಕಾರಿಯಾಗಬಹುದಾದ ಅಥವಾ ಆರೋಗ್ಯ ಅಥವಾ ಸ್ವತ್ತಿಗೆ ಹಾನಿಕಾರಕವಾದ ಯಾವುದೇ ಕಾರ್ಯ, ಲೋಪ, ಸ್ಥಳ, ಪ್ರಾಣಿ ಅಥವಾ ವಸ್ತುವನ್ನು ಒಳಗೊಳ್ಳುತ್ತದೆ;

(18) "ಅಧಿಭೋಗದಾರ" ಎಂಬುದು,–

(ಕ) ಯಾವ ಭೂಮಿ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ ಅಂಥ ಬಾಡಿಗೆಯನ್ನು ಸಂದಾಯ ಮಾಡಿದೆಯೋ ಅಥವಾ ಮಾಡಬೇಕಾಗಿದೆಯೋ ಆ ಯಾವುದೇ ಭೂಮಿ ಅಥವಾ ಕಟ್ಟಡದ ಬಾಡಿಗೆ ಅಥವಾ ಬಾಡಿಗೆಯ ಯಾವುದೇ ಭಾಗವನ್ನು ಒಡೆಯನಿಗೆ ತತ್ಕಾಲದಲ್ಲಿ ಸಂದಾಯ ಮಾಡುತ್ತಿರುವ ಅಥವಾ ಸಂದಾಯ ಮಾಡಲು ಹೊಣೆಯಾಗಿರುವ ಯಾರೇ ವ್ಯಕ್ತಿ;

(ಖ) ತನ್ನ ಭೂಮಿ ಅಥವಾ ಕಟ್ಟಡದ ಅಧಿಭೋಗದಲ್ಲಿರುವ ಅಥವಾ ಅನ್ಯಥಾ ಉಪಯೋಗಿಸುತ್ತಿರುವ ಒಡೆಯ;

(ಗ) ಯಾವುದೇ ಭೂಮಿ ಅಥವಾ ಕಟ್ಟಡದ ಬಾಡಿಗೆ ರಹಿತ ಬಾಡಿಗೆದಾರ;

(ಘ) ಯಾವುದೇ ಭೂಮಿ ಅಥವಾ ಕಟ್ಟಡದ ಅಧಿಭೋಗದಲ್ಲಿರುವ ಲೈಸೆನ್ಸುದಾರ; ಮತ್ತು

(ಙ) ಯಾವುದೇ ಭೂಮಿ ಅಥವಾ ಕಟ್ಟಡದ ಉಪಯೋಗ ಮತ್ತು ಅಧಿಭೋಗಕ್ಕಾಗಿ ಹಾಗೂ ಪರಿಹಾರವನ್ನು ಮಾಲೀಕನಿಗೆ ಸಂದಾಯ ಮಾಡಲು ಹೊಣೆಯಾಗಿರುವ ಯಾರೇ ವ್ಯಕ್ತಿ;

– ಇವರನ್ನು ಒಳಗೊಳ್ಳುತ್ತದೆ.

1[19] * * *]

(20) "ಒಡೆಯ" ಎಂಬುದು ತನ್ನ ಸ್ವಂತ ಲೆಕ್ಕದ ಮೇಲಾಗಲೀ ಅಥವಾ ತನ್ನ ಮತ್ತು ಇತರರ ಲೆಕ್ಕದ ಮೇಲಾಗಲೀ ಅಥವಾ ಇತರ ಯಾರೇ ವ್ಯಕ್ತಿಗಾಗಿ ಏಜೆಂಟ್, ನ್ಯಾಸಧಾರಿ, ಪಾಲಕ ಅಥವಾ ರಿಸೀವರನಾಗಿ ಯಾವುದೇ ಭೂಮಿ ಅಥವಾ ಕಟ್ಟಡದಲ್ಲಿ ತತ್ಕಾಲದಲ್ಲಿ ಬಾಡಿಗೆಯನ್ನು ಸ್ವೀಕರಿಸುತ್ತಿರುವ ಅಥವಾ ಸ್ವೀಕರಿಸಲು ಹಕ್ಕುಳ್ಳ ಅಥವಾ ಭೂಮಿ ಅಥವಾ ಕಟ್ಟಡ ಅಥವಾ ಅದರ ಭಾಗವನ್ನು ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿದ್ದರೆ ಬಾಡಿಗೆಯನ್ನು ಸ್ವೀಕರಿಸುವ ಅಥವಾ ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಯನ್ನು ಒಳಗೊಳ್ಳುತ್ತದೆ ಮತ್ತು 1950ರ ನಿರ್ವಾಸಿತ ಸ್ವತ್ತಿನ ಆಡಳಿತದ ಅಧಿನಿಯಮ (1950ರ ಕೇಂದ್ರ ಅಧಿನಿಯಮ XXXI)ದ ಮೇರೆಗೆ ತನ್ನಲ್ಲಿ ನಿಹಿತವಾದ ನಿರ್ವಾಸಿತ ಸ್ವತ್ತಿಗೆ ಸಂಬಂಧಿಸಿದಂತೆ ನಿರ್ವಾಸಿತ ಸ್ವತ್ತಿನ ಅಭಿರಕ್ಷಕನನ್ನು ಸಹ ಒಳಗೊಳ್ಳುತ್ತದೆ;

(21) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(22) "ಖಾಸಗಿ ಬೀದಿ" ಎಂದರೆ, ಸಾರ್ವಜನಿಕ ಬೀದಿಯಲ್ಲದ ಯಾವುದೇ ಬೀದಿ, ರಸ್ತೆ, ಚೌಕ, ಅಂಗಳ, ಸಂದಿ, ಮಾರ್ಗ ಅಥವಾ ಸವಾರಿ ಮಾರ್ಗ – ಆದರೆ ಅಂಥ ಆವರಣಕ್ಕೆ ಪ್ರವೇಶಾವಕಾಶವನ್ನು ಹೊಂದಲು ಅಥವಾ ಅದನ್ನು ಅನುಕೂಲಕರವಾಗಿ ಉಪಯೋಗಿಸಿಕೊಳ್ಳಲು ತನ್ನ ಸ್ವಂತ ಭೂಮಿಯ ಮೇಲೆ ಆವರಣದ ಒಡೆಯನು ರಚಿಸಿದ ದಾರಿಯನ್ನು ಒಳಗೊಳ್ಳುವುದಿಲ್ಲ;

(23) "ಸಾರ್ವಜನಿಕ ಭದ್ರತೆಗಳು" ಎಂದರೆ,–

(ಕ) ಭಾರತ ಸರ್ಕಾರದ ಭದ್ರತೆಗಳು;

(ಖ) ಕರ್ನಾಟಕ ಸರ್ಕಾರದ ಅಥವಾ ಇತರ ಯಾವುದೇ ರಾಜ್ಯ ಸರ್ಕಾರದಿಂದ ಭದ್ರತೆಗಳು;

(ಗ) ಆ ರಾಜ್ಯದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಯಾವುದೇ ಸ್ಥಳೀಯ ಪ್ರಾಧಿಕಾರವು ಅಥವಾ ಅದರ ಪರವಾಗಿ ಹಣಕ್ಕಾಗಿ ಹೊರಡಿಸಿದ ಡಿಬೆಂಚರ್‌ಗಳು ಅಥವಾ ಇತರ ಭದ್ರತೆಗಳು; ಅಥವಾ

---

1. 1979ರ 21ನೇ ಸಂಖ್ಯೆಯ ಅಧಿನಿಯಮದ ಪ್ರಕರಣ 8ರ ಮೂಲಕ ಬಿಟ್ಟುಬಿಡಲಾಗಿದೆ. (31.3.1979)

(ಘ) ಈ ಬಗ್ಗೆ ಸರ್ಕಾರವು ಮಾಡಿದಂಥ ಯಾವುದೇ ಆದೇಶದ ಮೂಲಕ ಸ್ಪಷ್ಟವಾಗಿ ಅಧಿಕೃತಗೊಳಿಸಿದ ಭದ್ರತೆ;

(24) "ಸಾರ್ವಜನಿಕ ಬೀದಿ" ಎಂದರೆ, ರಾಜಮಾರ್ಗವಾಗಿರಲಿ ಅಥವಾ ಆಗಿಲ್ಲದಿರಲಿ, ಸಾರ್ವಜನಿಕರು ದಾರಿಯ ಹಕ್ಕನ್ನು ಹೊಂದಿರುವ ಯಾವುದೇ ಬೀದಿ, ರಸ್ತೆ, ಚೌಕ, ಅಂಗಳ, ಸಂದಿ, ಮಾರ್ಗ ಅಥವಾ ಸವಾರಿದಾರಿ, ಮತ್ತು,–

(ಕ) ಯಾವುದೇ ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿ ಮೇಲಿನ ನಡುರಸ್ತೆ;

(ಖ) ಯಾವುದೇ ಅಂಥ ಬೀದಿ, ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿ ಇವುಗಳಿಗೆ ಲಗತ್ತಾಗಿರುವ ಕಾಲುದಾರಿ;

(ಗ) ಯಾವುದೇ ಅಂಥ ಬೀದಿ, ಸಾರ್ವಜನಿಕ ಸೇತುವೆ ಅಥವಾ ಒಡ್ಡು ದಾರಿಗೆ ಹೊಂದಿಕೊಂಡಿರುವ ಚರಂಡಿಗಳು ಮತ್ತು ಹೊಂದಿಕೊಂಡಿರುವ ರಸ್ತೆ, ಆ ಸ್ವತ್ತು ಖಾಸಗಿಯದೇ ಆಗಿರಲಿ ಅಥವಾ ಸರ್ಕಾರ ಅಥವಾ ಮುನ್ಸಿಪಲ್ ಕೌನ್ಸಿಲಿಗೆ ಸೇರಿರುವ ಸ್ವತ್ತೇ ಆಗಿರಲಿ, ಯಾವುದೇ ನೆಲಗಟ್ಟು, ವರಾಂಡ ಅಥವಾ ಇತರ ರಚನೆಯಿಂದ ಮುಚ್ಚಿದುದೇ ಆಗಿರಲಿ ಅಥವಾ ಮುಚ್ಚಿಲ್ಲದುದಾಗಿರಲಿ ಅದರ ಗಡಿಗಳವರೆಗಿನ ನಡುರಸ್ತೆಯ ಎರಡೂ ಬದಿಯಲ್ಲಿರುವ ಭೂಮಿ –ಇವುಗಳನ್ನು ಒಳಗೊಳ್ಳುತ್ತದೆ; ಮತ್ತು

(ಘ) ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ ಸಾರ್ವಜನಿಕ ರಸ್ತೆಯೆನಿಸುವ ಅಥವಾ ಘೋಷಿಸಿದ ಯಾವುದೇ ಬೀದಿ;

(25) "ಅನುಸೂಚಿತ ಜಾತಿಗಳು" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ 1950ರ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ ಮತ್ತು 1950ರ ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶದಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಅಥವಾ ಅದರ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳು;

(26) "ಬೀದಿ" ಎಂದರೆ, ರಾಜಮಾರ್ಗವೇ ಆಗಿರಲಿ ಅಥವಾ ಆಗಿಲ್ಲದಿರಲಿ, ಶಾಶ್ವತವಾಗಿ ಆಗಲಿ ಅಥವಾ ತಾತ್ಕಾಲಿಕವಾಗಿಯಾಗಲಿ ಸಾರ್ವಜನಿಕರಿಗೆ ಪ್ರವೇಶಾವಕಾಶವಿರುವ ಯಾವುದೇ ರಸ್ತೆ, ಕಾಲು ದಾರಿ, ಚೌಕ, ಅಂಗಳ, ಸಂದಿ ಅಥವಾ ದಾರಿ; ಮತ್ತು ಅದು ಖಾಸಗಿ ಸ್ವತ್ತಾಗಿರಬಹುದಾಗಿದ್ದು ಮತ್ತು ಅದಕ್ಕೆ ಮನೆಗಳು, ಅಂಗಡಿಗಳು ಅಥವಾ ಇತರ ಕಟ್ಟಡಗಳು ಲಗತ್ತಾಗಿದ್ದರೆ, ಯಾವುದೇ ಗೇಟು, ಸ್ತಂಭ, ಸರಪಳಿ ಅಥವಾ ಇತರ

ಅಡ್ಡಿಯಿಂದ ಭಾಗಶಃ ಅಥವಾ ಪೂರ್ತಿಯಾಗಿ ಅಡಚಣೆಯಾಗಿದ್ದಾಗ್ಯೂ, ಯಾರೇ ವ್ಯಕ್ತಿಯು, ಅಂಥ ವ್ಯಕ್ತಿಗಳು ಅಂಥ ಕಟ್ಟಡಗಳ ಅಧಿಭೋಗದಾರರಾಗಿರಲಿ ಅಥವಾ ಆಗಿಲ್ಲದಿರಲಿ ಅದನ್ನು ಯಾವುದೇ ಸಾರ್ವಜನಿಕ ಸ್ಥಳ ಅಥವಾ ರಾಜಮಾರ್ಗಕ್ಕೆ ಅಥವಾ ಅವುಗಳಿಂದ ಪ್ರವೇಶದ ಸಾಧನವಾಗಿ ಉಪಯೋಗಿಸುತ್ತಿದ್ದರೆ, ಆ ಪ್ರತಿಯೊಂದು ಖಾಲಿ ಜಾಗವನ್ನು ಅದು ಒಳಗೊಳ್ಳುತ್ತದೆ. ಆದರೆ, ಅಂಥ ಯಾವುದೇ ಕಟ್ಟಡದ ಅಧಿಭೋಗದಾರನು, ಯಾವ ಸ್ಥಳದ ಯಾವುದೇ ಭಾಗವನ್ನು ಹಿಂದೆ ಹೇಳಿದಂತೆ ಉಪಯೋಗಿಸುವುದರಿಂದ ಇತರ ಎಲ್ಲ ವ್ಯಕ್ತಿಗಳನ್ನು ಎಲ್ಲ ವೇಳೆಗಳಲ್ಲಿ ತಡೆಗಟ್ಟಲು ಹಕ್ಕನ್ನು ಹೊಂದಿರುವನೋ, ಅಂಥ ಸ್ಥಳದ ಯಾವುದೇ ಭಾಗವನ್ನು ಒಳಗೊಳ್ಳತಕ್ಕದಲ್ಲ;

(27) "ತೆರಿಗೆ" ಎಂಬುದು ಯಾವುದೇ ದಾರಿಸುಂಕ, ದರ, ಉಪಕರ, ಫೀಜು ಅಥವಾ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಇತರ ಸುಂಕವನ್ನು ಒಳಗೊಳ್ಳುತ್ತದೆ;

(28) "ಪಟ್ಟಣ ಮುನ್ಸಿಪಲ್ ಕೌನ್ಸಿಲ್" ಎಂದರೆ, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಪಟ್ಟಣ ಮುನ್ಸಿಪಲ್ ಕೌನ್ಸಿಲ್;

(29) "ವಾಹನ" ಎಂಬುದು ವಾಹನ ಗಾಡಿ, ವ್ಯಾನ್, ಟ್ರಕ್ಕು, ಕೈಗಾಡಿ, ಬೈಸಿಕಲ್, ಟ್ರೈಸಿಕಲ್ಲು, ಸೈಕಲ್ ರಿಕ್ಷಾ ಮತ್ತು ಸಾರ್ವಜನಿಕ ಬೀದಿಯ ಮೇಲೆ ಉಪಯೋಗಿಸಲಾದ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಚಕ್ರದ ಪ್ರತಿಯೊಂದು ವಾಹನವನ್ನು ಒಳಗೊಳ್ಳುತ್ತದೆ.

## ಅಧ್ಯಾಯ–II

## ಪೌರಸಭೆಗಳ ರಚನೆ

**3. ಪ್ರದೇಶಗಳನ್ನು ನಗರ ಪೌರಸಭೆ ಮತ್ತು ಪೌರಸಭೆಗಳೆಂದು ಅಧಿಸೂಚಿಸುವುದು.–** (1) 6, 7 ಮತ್ತು 9ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಸರ್ಕಾರವು, ಅಧಿಸೂಚನೆಯ ಮೂಲಕ, ಯಾವ ಸ್ಥಳೀಯ ಪ್ರದೇಶವು ಹಿಂದಿನ ಸರ್ಕಾರಿ ಜನಗಣತಿಯಲ್ಲಿ ಐವತ್ತು ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿತ್ತೋ ಆ ಯಾವುದೇ ಸ್ಥಳೀಯ ಪ್ರದೇಶವನ್ನು ನಗರ ಪೌರಸಭೆಯೆಂದು, ಮತ್ತು ಯಾವ ಸ್ಥಳೀಯ ಪ್ರದೇಶವು ಹಿಂದಿನ ಸರ್ಕಾರಿ ಜನಗಣತಿಯಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚು ಮತ್ತು ಐವತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿತ್ತೋ ಆ ಯಾವುದೇ ಸ್ಥಳೀಯ ಪ್ರದೇಶವನ್ನು ಪಟ್ಟಣ ಪೌರಸಭೆಯೆಂದು ಘೋಷಿಸಬಹುದು:

ಪರಂತು, ಈ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಜನಸಂಖ್ಯೆಯನ್ನು ಹೊಂದಿಲ್ಲದಂಥ ಪ್ರದೇಶವನ್ನು ನಗರ ಪೌರಸಭೆ ಅಥವಾ ಪಟ್ಟಣ ಪೌರಸಭೆಯೆಂದು ರಚಿಸುವುದನ್ನು ಅಪೇಕ್ಷಣೀಯವಾಗಿಸುವಂಥ ವಿಶೇಷ ಸಂದರ್ಭಗಳು ಇವೆಯೆಂಬುದಾಗಿ ಸರ್ಕಾರವು ಪರ್ಯಾಲೋಚಿಸಿದರೆ, ಸರ್ಕಾರವು ಸಂದರ್ಭಾನುಸಾರ ಅಧಿಸೂಚನೆಯ ಮೂಲಕ ಅಂಥ ಪ್ರದೇಶವನ್ನು ನಗರ ಪೌರಸಭೆ ಅಥವಾ ಪಟ್ಟಣ ಪೌರಸಭೆಯೆಂದು ಘೋಷಿಸಬಹುದು:

ಮತ್ತು ಪರಂತು, ಯಾವುದೇ ದಂಡು ಪ್ರದೇಶ ಅಥವಾ ಅದರ ಭಾಗವನ್ನು ಅಂಥ ಯಾವುದೇ ಪೌರಸಭೆಯಲ್ಲಿ ಸೇರಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯು ಯಾವ ಪ್ರದೇಶಕ್ಕೆ ಅದು ಸಂಬಂಧಿಸಿದೆಯೋ ಆ ಪ್ರದೇಶದ ಪರಿಮಿತಿಗಳನ್ನು ನಿರ್ಧರಿಸತಕ್ಕದ್ದು ಮತ್ತು ಅದನ್ನು ಯಾವ ಪ್ರದೇಶಕ್ಕಾಗಿ ರಚಿಸಲಾಗಿದೆಯೋ ಆ ಪ್ರದೇಶದ ನಗರ ಪೌರಸಭೆ ಅಥವಾ ಪಟ್ಟಣ ಪೌರಸಭೆ ಎಂದು ಪೌರಸಭೆಯ ಹೆಸರನ್ನು ನಿರ್ದಿಷ್ಟಪಡಿಸತಕ್ಕದ್ದು.

**4. ಪ್ರದೇಶಗಳನ್ನು ಪೌರಸಭೆಗಳಲ್ಲಿ ಸೇರಿಸುವುದಕ್ಕೆ ಅಥವಾ ಅದರಿಂದ ಅವುಗಳನ್ನು ಬಿಟ್ಟು ಬಿಡುವುದಕ್ಕೆ ಅಧಿಕಾರ ಮತ್ತು ಪರಿಣಾಮ.–** (1) ಸರ್ಕಾರವು, ಮುನ್ಸಿಪಲ್ ಕೌನ್ಸಿಲ್‌ನೊಡನೆ ಸಮಾಲೋಚಿಸಿದ ತರುವಾಯ ಮತ್ತು 9ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಅಧಿಸೂಚನೆಯ ಮೂಲಕ,–

(ಕ) ಪೌರಸಭೆಗೆ ಹೊಂದಿಕೊಂಡಿರುವ ಯಾವುದೇ ಸ್ಥಳೀಯ ಪ್ರದೇಶವನ್ನು ಅದರಲ್ಲಿ ಸೇರಿಸಬಹುದು;

(ಖ) ಪೌರಸಭೆಯಲ್ಲಿ ಒಳಗೊಂಡಿರುವ ಯಾವುದೇ ಸ್ಥಳೀಯ ಪ್ರದೇಶವನ್ನು ಅದರಿಂದ ಬಿಟ್ಟು ಬಿಡಬಹುದು.

(2) ಅಂಥ ಪ್ರತಿಯೊಂದು ಅಧಿಸೂಚನೆಯು, ಅದು ಯಾವ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದೆಯೋ ಆ ಸ್ಥಳೀಯ ಪ್ರದೇಶದ ಪರಿಮಿತಿಗಳನ್ನು ನಿರ್ಧರಿಸತಕ್ಕದ್ದು.

(3) ಯಾವುದೇ ಪೌರಸಭೆಯಲ್ಲಿ ಸ್ಥಳೀಯ ಪ್ರದೇಶವನ್ನು ಸೇರಿಸಿದಾಗ ಈ ಅಧಿನಿಯಮ ಮತ್ತು ಈ ಅಧಿನಿಯಮದ ಅಥವಾ ಅಂಥ ಪೌರಸಭೆಗೆ ಅನ್ವಯವಾಗುವ ಇತರ ಯಾವುದೇ ಕಾನೂನಿನ ಮೇರೆಗೆ ಹೊರಡಿಸಿದ, ಮಾಡಿದ ಅಥವಾ ಪ್ರದತ್ತವಾದ ಎಲ್ಲಾ ಅಧಿಸೂಚನೆಗಳು, ನಿಯಮಗಳು, ಉಪವಿಧಿಗಳು, ಆದೇಶಗಳು, ನಿರ್ಣಯಗಳು, ನಿರ್ದೇಶನಗಳು ಮತ್ತು ಅಧಿಕಾರಗಳು (ವಿಧಿಸಿದ ಯಾವುದೇ ತೆರಿಗೆಯನ್ನು ಒಳಗೊಂಡಂತೆ), (1)ನೇ ಉಪ–ಪ್ರಕರಣದ ಮೇರೆಗೆ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಸದರಿ ಪ್ರದೇಶಕ್ಕೆ ಅನ್ವಯವಾಗತಕ್ಕದ್ದು.

(4) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಹೊರತುಪಡಿಸಿ, ಯಾವುದೇ ಪೌರಸಭೆಯಿಂದ ಸ್ಥಳೀಯ ಪ್ರದೇಶವನ್ನು ಬಿಟ್ಟುಬಿಡುವಾಗ,–

(i) ಅಂಥ ಪ್ರದೇಶದಲ್ಲಿನ ಮುನ್ಸಿಪಲ್ ಕೌನ್ಸಿಲ್‌ನ ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದು; ಮತ್ತು

(ii) ಸರ್ಕಾರವು, ಮುನ್ಸಿಪಲ್ ಕೌನ್ಸಿಲಿನೊಡನೆ ಸಮಾಲೋಚಿಸಿದ ತರುವಾಯ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾದ ಮುನ್ಸಿಪಲ್ ನಿಧಿ ಮತ್ತು ಎಲ್ಲ ಇತರ ಸ್ವತ್ತುಗಳ ಯಾವ ಭಾಗವನ್ನು ಸ್ಥಳೀಯ ಪ್ರದೇಶದ ನಿವಾಸಿಗಳ ಪ್ರಯೋಜನಕ್ಕಾಗಿ ಸರ್ಕಾರದಲ್ಲಿ ನಿಹಿತಗೊಳಿಸತಕ್ಕದೆಂಬುದನ್ನು ಮತ್ತು ಮುನ್ಸಿಪಲ್ ಕೌನ್ಸಿಲಿನ ಹೊಣೆಗಾರಿಕೆಗಳನ್ನು ಮುನ್ಸಿಪಲ್ ಕೌನ್ಸಿಲ್ ಮತ್ತು ಸರ್ಕಾರದ ನಡುವೆ ಹೇಗೆ ಹಂಚತಕ್ಕದ್ದು ಎಂಬುದನ್ನು ನಿರ್ಧರಿಸತಕ್ಕದ್ದು.

**5. ಗಡಿ ಗುರುತುಗಳನ್ನು ನಿಲ್ಲಿಸುವುದು ಮತ್ತು ಅವುಗಳ ನಿರ್ವಹಣೆ.–** ಕಮಿಷನರ್ ಅಥವಾ ಡೆಪ್ಯುಟಿ ಕಮೀಷನರ್‌ನು, ಹಾಗೆ ಅಗತ್ಯಪಡಿಸಿದರೆ, ಮತ್ತು ಅಗತ್ಯಪಡಿಸಿದಾಗ, ತನ್ನ ಅಧಿಕಾರಕ್ಕೆ ಒಳಪಟ್ಟು, ಪೌರಸಭೆಯ ಪರಿಮಿತಿಗಳನ್ನು ಅಥವಾ ಬದಲಾಯಿಸಿದ ಪರಿಮಿತಿಗಳನ್ನು ನಿರ್ಧರಿಸುವ, ಡೆಪ್ಯುಟಿ ಕಮಿಷನರನು ಅನುಮೋದಿಸತಕ್ಕಂಥ ವಿವರಣೆಯ ಮತ್ತು ಅಂಥ ಸ್ಥಳಗಳಲ್ಲಿ ದೃಢವಾದ ಗಡಿ ಗುರುತುಗಳನ್ನು ತನ್ನ ಸ್ವಂತ ಖರ್ಚಿನಲ್ಲಿ ನಿಲ್ಲಿಸುವಂತೆ ಅಥವಾ ನಿರ್ಮಿಸುವಂತೆ ಮಾಡತಕ್ಕದ್ದು ಮತ್ತು ಆ ತರುವಾಯ ತನ್ನ ಸ್ವಂತ ಖರ್ಚಿನಲ್ಲಿ ಅವುಗಳನ್ನು ನಿರ್ವಹಿಸುವುದು ಪ್ರತಿಯೊಂದು ಪೌರಸಭೆಯಲ್ಲಿನ ಮುನ್ಸಿಪಲ್ ಕೌನ್ಸಿಲಿನ ಮತ್ತು ಯಾವ ಮುನ್ಸಿಪಲ್ ಕೌನ್ಸಿಲಿನ ಸ್ಥಳೀಯ ಪರಿಮಿತಿಗಳನ್ನು ಬದಲಾಯಿಸಲಾಗಿದೆಯೋ ಆ ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲಿನ ಕರ್ತವ್ಯವಾಗಿರತಕ್ಕದ್ದು.

**6. ಯಾವ ಸ್ಥಳೀಯ ಪ್ರದೇಶಗಳನ್ನು ಪೌರಸಭೆಗಳೆಂದು ಘೋಷಿಸಬಹುದು.–** ಯಾವ ಸ್ಥಳೀಯ ಪ್ರದೇಶ,–

(ಕ) ಹಳ್ಳಿ, ನಗರ, ಪಟ್ಟಣ ಅಥವಾ ನಿಲ್ದಾಣ ಅಥವಾ ಎರಡು ಅಥವಾ ಹೆಚ್ಚಿನ ನೆರೆಹೊರೆಯ ನಗರಗಳು, ಪಟ್ಟಣಗಳು ಮತ್ತು ನಿಲ್ದಾಣಗಳು ಅವುಗಳಿಗೆ ಹೊಂದಿಕೊಂಡಿರುವ ಯಾವುದೇ ಹಳ್ಳಿ, ಹೊರವಲಯ ಅಥವಾ ಭೂಮಿಯ ಸಹಿತ ಅಥವಾ ಅವಿಲ್ಲದೆ ಅವುಗಳನ್ನು;

(ಖ) ಹಳ್ಳಿ ಅಥವಾ ಹೊರವಲಯ ಅಥವಾ ಎರಡು ಅಥವಾ ಹೆಚ್ಚಿನ ನೆರೆಹೊರೆಯ ಹಳ್ಳಿಗಳು ಮತ್ತು ಹೊರವಲಯಗಳು–ಇವುಗಳನ್ನು ಒಳಗೊಂಡಿರುವುದೋ–ಆ ಯಾವುದೇ ಸ್ಥಳೀಯ ಪ್ರದೇಶವನ್ನು ನಗರ ಅಥವಾ ಪಟ್ಟಣ ಪೌರಸಭೆಯೆಂದು ಘೋಷಿಸಬಹುದು:

ಪರಂತು, 9ನೇ ಪ್ರಕರಣದ ಮೇರೆಗಿನ ಉದ್ಘೋಷಣೆಯಲ್ಲಿ ಮತ್ತು 3ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ಸ್ಪಷ್ಟವಾಗಿ ಹೇಳತಕ್ಕ ಅಸಾಧಾರಣ ಕಾರಣಗಳಿಗಾಗಿ ಹೊರತು ಯಾವ ನಗರ, ಪಟ್ಟಣ, ನಿಲ್ದಾಣ ಅಥವಾ ಹೊರವಲಯದಿಂದ ಅದು ಮನೆಗಳು ಇಲ್ಲದಿರುವ ಆ ಎರಡು ಮೈಲುಗಳಿಗಿಂತ ಹೆಚ್ಚಿನ ವಿಸ್ತೀರ್ಣದ ಭೂಮಿಯಿಂದ ಬೇರ್ಪಟ್ಟಿರುವ ಆ ಯಾವುದೇ ನಗರ, ಪಟ್ಟಣ, ನಿಲ್ದಾಣ, ಹೊರವಲಯದೊಡನೆ, ನಗರ, ಪಟ್ಟಣ, ನಿಲ್ದಾಣ ಅಥವಾ ಹೊರವಲಯವನ್ನು ಸೇರಿಸುವುದು ಕಾನೂನು ಬದ್ಧವಾಗಿರತಕ್ಕದ್ದಲ್ಲ.

**7. ಅಸ್ತಿತ್ವ ಕೊನೆಗೊಂಡಿರುವ ಪೌರಸಭೆಯ ಸ್ವತ್ತು ಮತ್ತು ಹಕ್ಕುಗಳು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.–** (1) 9ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಸರ್ಕಾರವು ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸತಕ್ಕ ದಿನಾಂಕದಿಂದ ಯಾವುದೇ ಸ್ಥಳೀಯ ಪ್ರದೇಶವು ಪೌರಸಭೆಯಾಗಿರುವುದು ಕೊನೆಗೊಳ್ಳತಕ್ಕದೆಂದು ಘೋಷಿಸಬಹುದು.

(2) ಯಾವುದೇ ಸ್ಥಳೀಯ ಪ್ರದೇಶವು ಪೌರಸಭೆಯಾಗಿರುವುದು ಕೊನೆಗೊಂಡಾಗ ಅದಕ್ಕಾಗಿ ರಚಿತವಾದ ಮುನ್ಸಿಪಲ್ ಕೌನ್ಸಿಲ್ ಅಸ್ತಿತ್ವದಲ್ಲಿರುವುದು ಕೊನೆಗೊಳ್ಳತಕ್ಕದ್ದು ಮತ್ತು ಅಂಥ ಯಾವುದೇ ಪೌರಸಭೆಯಲ್ಲಿ ನಿಹಿತವಾಗಿರುವ ಸ್ವತ್ತು ಮತ್ತು ಹಕ್ಕುಗಳು, ಅದನ್ನು ಬಾಧಿಸುವ ಎಲ್ಲಾ ಋಣಭಾರಗಳು ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟು ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದರ ಉತ್ಪತ್ತಿಗಳು ಯಾವುವಾದರೂ ಇದ್ದರೆ, ಅವುಗಳನ್ನು ಅಂಥ ಪೌರಸಭೆಯು ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದ ಸ್ಥಳೀಯ ಪ್ರದೇಶಗಳ ಪ್ರಯೋಜನಕ್ಕಾಗಿ ಸರ್ಕಾರದ ಆದೇಶಗಳ ಮೇರೆಗೆ ವೆಚ್ಚ ಮಾಡತಕ್ಕದ್ದು.

**8. ಎರಡು ಅಥವಾ ಹೆಚ್ಚು ಸ್ಥಳಗಳನ್ನು ಒಳಗೊಂಡಿರುವ ಪೌರಸಭೆಗಳ ನಾಮಕರಣ.–** ವಿಭಿನ್ನ ಹೆಸರುಗಳನ್ನು ಹೊಂದಿರುವ ಎರಡು ಅಥವಾ ಹೆಚ್ಚು ಸ್ಥಳಗಳನ್ನು ಒಂದೇ ಪೌರಸಭೆಯಾಗಿ ರೂಪಿಸಿದಾಗ, ಪೌರಸಭೆಯ ಹೆಸರನ್ನು ಸರ್ಕಾರವು ನಿರ್ಧರಿಸತಕ್ಕದ್ದು.

**9. ಪೌರಸಭೆಗಳ ರಚನೆ, ರದ್ದಿಯಾತಿ, ಇತ್ಯಾದಿಗಳಿಗಾಗಿ ಪ್ರಕ್ರಿಯೆ.–** ಯಾವುದೇ ಸ್ಥಳೀಯ ಪ್ರದೇಶವನ್ನು ನಗರ ಅಥವಾ ಪಟ್ಟಣ ಪೌರಸಭೆಯೆಂದು ಘೋಷಿಸುವ ಅಥವಾ ಅಂಥ ಯಾವುದೇ ಪೌರಸಭೆಯ ಪರಿಮಿತಿಗಳನ್ನು ಬದಲಾಯಿಸುವ ಅಥವಾ ಯಾವುದೇ ಸ್ಥಳೀಯ ಪ್ರದೇಶವು ನಗರ ಅಥವಾ ಪಟ್ಟಣ ಪೌರಸಭೆಯಾಗಿರುವುದು ಕೊನೆಗೊಳ್ಳತಕ್ಕದ್ದೆಂದು ಘೋಷಿಸುವ ಯಾವುದೇ ಅಧಿಸೂಚನೆಯ ಪ್ರಕಟಣೆಗೆ ಮುಂಚೆ ಎರಡು ತಿಂಗಳಿಗಿಂತ ಕಡಿಮೆಯಲ್ಲದಂತೆ ಸರ್ಕಾರವು ಸಂದರ್ಭಾನುಸಾರ ಆ ಸ್ಥಳೀಯ ಪ್ರದೇಶವನ್ನು ನಗರ ಅಥವಾ ಪಟ್ಟಣ ಪೌರಸಭೆಯೆಂದು ರಚಿಸಲು ಅಥವಾ ನಿರ್ದಿಷ್ಟ ರೀತಿಯಲ್ಲಿ ಪೌರಸಭಾ ಪರಿಮಿತಿಗಳನ್ನು ಬದಲಾಯಿಸಲು ಅಥವಾ ಆ ಸ್ಥಳೀಯ ಪ್ರದೇಶವು ಪೌರಸಭೆಯಾಗಿರುವುದು ಕೊನೆಗೊಳ್ಳತಕ್ಕದೆಂದು ಘೋಷಿಸಲು ಉದ್ದೇಶಿಸಲಾಗಿದೆಯೆಂಬುದನ್ನು ಪ್ರಕಟಿಸುವ ಮತ್ತು ಸದರಿ ಪ್ರಸ್ತಾವಕ್ಕೆ ಯಾವುದೇ ಆಕ್ಷೇಪಣೆಯನ್ನು ಹೊಂದಿರುವ ಎಲ್ಲ ವ್ಯಕ್ತಿಗಳು ಅದನ್ನು ಉದ್ಘೋಷಣೆಯ ದಿನಾಂಕದಿಂದ ಎರಡು ತಿಂಗಳುಗಳ ಒಳಗಾಗಿ ಅದಕ್ಕಾಗಿನ ಕಾರಣಗಳ ಸಹಿತ ಬರಹದಲ್ಲಿ ಕಮಿಷನರಿಗೆ ಒಪ್ಪಿಸತಕ್ಕದ್ದು ಎಂದು ಅಗತ್ಯಪಡಿಸುವ ಒಂದು ಸದರಿ ಉದ್ಘೋಷಣೆಯನ್ನು

ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಪ್ರಕಟಿಸುವಂತೆ ಮತ್ತು ಅದನ್ನು ಕನ್ನಡದಲ್ಲಿ ಸದರಿ ಸ್ಥಳೀಯ ಪ್ರದೇಶದಲ್ಲಿ ಎದ್ದು ಕಾಣುವ ಸ್ಥಳಗಳಲ್ಲಿ ಹಾಕುವಂತೆ ಮಾಡತಕ್ಕದ್ದು ಮತ್ತು ಯಾವುದೇ ನಿವಾಸಿತ ಪ್ರದೇಶವನ್ನು ಪೌರಸಭೆಗೆ ಸೇರಿಸಲು ಅಥವಾ ಅದರಿಂದ ಬಿಟ್ಟುಬಿಡಲು ಉದ್ದೇಶಿಸಿದಾಗಲೆಲ್ಲ, ಅಂಥ ಪ್ರದೇಶದಲ್ಲಿ ಎದ್ದುಕಾಣುವ ಸ್ಥಳಗಳಲ್ಲಿ ಅಂಥ ಉದ್ಘೋಷಣೆಯ ಪ್ರತಿಯನ್ನು ಹಾಕುವಂತೆ ಮಾಡುವುದು ಸಹ ಮುನ್ಸಿಪಲ್ ಕೌನ್ಸಿಲಿನ ಕರ್ತವ್ಯವಾಗಿರತಕ್ಕದ್ದು. ಹಾಗೆ ಒಪ್ಪಿಸಿದ ಪ್ರತಿಯೊಂದು ಆಕ್ಷೇಪಣೆಯನ್ನು ಕಮಿಷನರನು ಸಾಧ್ಯವಾದಷ್ಟು ಬೇಗನೆ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

ಹಾಗೆ ಒಪ್ಪಿಸಿದ ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳು ತನ್ನ ಅಭಿಪ್ರಾಯದಲ್ಲಿ ಸಾಕಾಗದಷ್ಟು ಅಥವಾ ಅಸಿಂಧುವಾಗಿರುವ ಹೊರತು, ಹಿಂದೆ ಹೇಳಿದಂಥ ಯಾವುದೇ ಅಧಿಸೂಚನೆಯನ್ನು ಸರ್ಕಾರವು ಹೊರಡಿಸತಕ್ಕದ್ದಲ್ಲ.

**10. ನಗರ ಮತ್ತು ಪಟ್ಟಣ ಮುನ್ಸಿಪಲ್ ಕೌನ್ಸಿಲ್‌ಗಳನ್ನು ನಿಗಮನಗೊಳಿಸುವುದು.–** (1) ಪ್ರತಿಯೊಂದು ಪೌರಸಭೆಯಲ್ಲಿ ಒಂದು ಮುನ್ಸಿಪಲ್ ಕೌನ್ಸಿಲ್ ಇರತಕ್ಕದ್ದು ಮತ್ತು ಅಂಥ ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ಸಂದರ್ಭಾನುಸಾರ "........ನಗರ ಮುನ್ಸಿಪಲ್ ಕೌನ್ಸಿಲ್" ಅಥವಾ "..........ದ ಪಟ್ಟಣ ಮುನ್ಸಿಪಲ್ ಕೌನ್ಸಿಲ್" ಎಂಬ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸ್ವತ್ತನ್ನು ಆರ್ಜಿಸಲು, ಹೊಂದಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು (ಚೀಫ್ ಆಫೀಸರ್ ಅಥವಾ ಪೌರಸಭಾ ಕಮಿಷನರ್‌ನ ಮೂಲಕ) ಸದರಿ ಹೆಸರಿನಿಂದ ದಾವೆಯನ್ನು ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಪೌರಸಭೆಯ ಪೌರಾಡಳಿತವು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರತಕ್ಕದ್ದು.

**11. ಮುನ್ಸಿಪಲ್ ಕೌನ್ಸಿಲುಗಳ ರಚನೆ.–** (1) ಮುನ್ಸಿಪಲ್ ಕೌನ್ಸಿಲ್ ಈ ಕೆಳಕಂಡ ಕೋಷ್ಟಕದಲ್ಲಿ ತೋರಿಸಿರುವಂಥ ಸಂಖ್ಯೆಯ ಕೌನ್ಸಿಲರುಗಳನ್ನು ಒಳಗೊಂಡಿರತಕ್ಕದ್ದು:–

| | **ಪೌರಸಭೆಯ ಜನಸಂಖ್ಯೆ** | **ಕೌನ್ಸಿಲರುಗಳ ಸಂಖ್ಯೆ** |
|---|---|---|
| (i) | 20,000ವನ್ನು ಮೀರದ ಜನಸಂಖ್ಯೆಯನ್ನು ಹೊಂದಿದ ಪೌರಸಭೆಗೆ | 15 |
| (ii) | 20,000ವನ್ನು ಮೀರಿದ ಆದರೆ 30,000ವನ್ನು ಮೀರದ ಜನಂಖ್ಯೆಯನ್ನು ಹೊಂದಿರುವ ಪುರಸಭೆಗೆ | 19 |
| (iii) | 30,000ವನ್ನು ಮೀರಿದ ಆದರೆ 40,000ವನ್ನು ಮೀರದ ಜನಸಂಖ್ಯೆಯನ್ನು ಹೊಂದಿರುವ ಪುರಸಭೆಗೆ | 23 |
| (iv) | 40,000ವನ್ನು ಮೀರಿದ ಆದರೆ 50,000ವನ್ನು ಮೀರದ ಜನಸಂಖ್ಯೆಯನ್ನು ಹೊಂದಿರುವ ಪೌರಸಭೆಗೆ | 27 |
| (v) | 50,000ವನ್ನು ಮೀರಿದ ಆದರೆ ಒಂದು ಲಕ್ಷವನ್ನು ಮೀರದ ಜನಸಂಖ್ಯೆಯನ್ನು ಹೊಂದಿರುವ ಪೌರಸಭೆಗೆ | 31 |
| (vi) | ಒಂದು ಲಕ್ಷವನ್ನು ಮೀರುವ ಜನಸಂಖ್ಯೆಯನ್ನು ಹೊಂದಿರುವ ಪೌರಸಭೆಗೆ | 35 |

**ವಿವರಣೆ:–** ಈ ಉಪಪ್ರಕರಣದಲ್ಲಿ 'ಜನಸಂಖ್ಯೆ' ಎಂದರೆ ಯಾವ ನಿಕಟಪೂರ್ವದ ಜನಗಣತಿಯಲ್ಲಿ ಸಂಬಂಧಪಟ್ಟ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಯಾವುದೇ ನಿಕಟಪೂರ್ವದ ಜನಗಣತಿಯಲ್ಲಿ ಖಚಿತಪಡಿಸಿಕೊಂಡ ಜನಸಂಖ್ಯೆ:

(ಪರಂತು, ಈ ವಿವರಣೆಯಲ್ಲಿ ಯಾವ ನಿಕಟಪೂರ್ವದ ಜನಗಣತಿಯ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಯಾವುದೇ ನಿಕಟಪೂರ್ವದ ಜನಗಣತಿಗೆ ಮಾಡಲಾದ ಉಲ್ಲೇಖವು 2000ನೇ ಇಸವಿಯ ತರುವಾಯ ತೆಗೆದುಕೊಳ್ಳುವ ಮೊದಲ ಜನಗಣತಿಗಾಗಿನ ಸಂಬಂಧಪಟ್ಟ ಅಂಕಿಗಳು ಪ್ರಕಟಿತವಾಗುವವರೆಗೆ, 1971ರ ಜನಗಣತಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.)

(2) 12ನೇ ಪ್ರಕರಣದ ಉಪಬಂಧಕ್ಕೆ ಒಳಪಟ್ಟು ಪ್ರತಿಯೊಂದು ಪೌರಸಭೆಯ ಎಲ್ಲಾ ಕೌನ್ಸಿಲರ್‌ಗಳನ್ನು ವಯಸ್ಕ ಮತದಾನದ ಆಧಾರದ ಮೇಲೆ ನಿಯಮಿಸಲಾದ ರೀತಿಯಲ್ಲಿ ನೇರ ಚುನಾವಣೆಯ ಮೂಲಕ ಆಯ್ಕೆ ಮಾಡತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲಿನಲ್ಲಿ ಅನುಸೂಚಿತ ಜಾತಿಗಳು ಮತ್ತು ಮಹಿಳೆಯರಿಗಾಗಿ ಸ್ಥಾನಗಳನ್ನು ಮೀಸಲಿರಿಸತಕ್ಕದ್ದು. ಅನುಸೂಚಿತ ಜಾತಿಗಳಿಗಾಗಿನ ಸ್ಥಾನಗಳ ಸಂಖ್ಯೆಯು, ಪೌರಸಭೆಯಲ್ಲಿ ಒಟ್ಟು ಜನಸಂಖ್ಯೆಗೆ ಪೌರಸಭೆಯಲ್ಲಿ ಅನುಸೂಚಿತ ಜಾತಿಗಳ ಸಂಖ್ಯೆಯು ಹೊಂದಿರುವಂಥದೇ ಆದ ಪ್ರಮಾಣವನ್ನು ಸಾಧ್ಯವಾದ ಮಟ್ಟಿಗೆ ಮುನ್ಸಿಪಲ್ ಕೌನ್ಸಿಲಿನಲ್ಲಿನ ಸ್ಥಾನಗಳ ಒಟ್ಟು ಸಂಖ್ಯೆಗೆ ಹೊಂದಿರತಕ್ಕದ್ದು:

ಪರಂತು, ಅಂಥ ಜಾತಿಗಳ ಜನಸಂಖ್ಯೆಯು ನೂರು ಅಥವಾ ಹೆಚ್ಚಿಗೆ ಇದ್ದರೆ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಅನುಸೂಚಿತ ಜಾತಿಗಳಿಗಾಗಿ ಕನಿಷ್ಠ ಪಕ್ಷ ಒಂದು ಸ್ಥಾನವನ್ನು ಮೀಸಲಿಡತಕ್ಕದ್ದು:

ಮತ್ತೂ ಪರಂತು, ಅನುಸೂಚಿತ ಜಾತಿಗಳಿಗಾಗಿ ಮೀಸಲಾತಿಯು ಸಂವಿಧಾನದ 334ನೇ ಅನುಚ್ಛೇದದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ತರುವಾಯ ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು;

ಮತ್ತೂ ಪರಂತು, ಈ ಉಪ–ಪ್ರಕರಣದ ಎರಡನೇ ಪರಂತುಕವು ಆಗ ಅಧಿಕಾರದಲ್ಲಿರುವ ಮುನ್ಸಿಪಲ್ ಕೌನ್ಸಿಲರ್‌ಗಳ ಪದಾವಧಿಯು ಮುಕ್ತಾಯಗೊಳ್ಳುವವರೆಗೂ ಮುನ್ಸಿಪಲ್ ಕೌನ್ಸಿಲ್‌ನಲ್ಲಿನ ಯಾವುದೇ ಪ್ರಾತಿನಿಧ್ಯಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(4) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಸಾಧ್ಯವಾದಷ್ಟುಮಟ್ಟಿಗೆ ಶೇಕಡಾ ಇಪ್ಪತ್ತರಷ್ಟು ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಿಡತಕ್ಕದ್ದು.

(5) ಈ ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, ಯಾವುದೇ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಯಾರಿಗಾಗಿ ಸ್ಥಾನಗಳನ್ನು ಮೀಸಲಿರಿಸಿದೆಯೋ ಆ ಅನುಸೂಚಿತ ಜಾತಿಗಳ ಸದಸ್ಯರು ಅಥವಾ ಮಹಿಳೆಯರನ್ನು ಆ ಕೌನ್ಸಿಲ್‌ನಲ್ಲಿ ಮೀಸಲಿರಿಸಿದ ಸ್ಥಾನಗಳಿಗೆ ಚುನಾವಣೆಗೆ ನಿಲ್ಲಲು ಪ್ರತಿಬಂಧಿಸುತ್ತದೆಂದು ಭಾವಿಸತಕ್ಕದ್ದಲ್ಲ.

**12. ಕೌನ್ಸಿಲರನನ್ನು ಚುನಾಯಿಸದಿದ್ದಾಗ ಸರ್ಕಾರದಿಂದ ನೇಮಕಾತಿ.–** ಪೂರ್ಣ ಸಂಖ್ಯೆಯ ಕೌನ್ಸಿಲರ್‌ಗಳನ್ನು ಚುನಾಯಿಸಲು ವಿಫಲವಾಗುವುದರಿಂದಾಗಿ ಮತ್ತು 19ನೇ ಪ್ರಕರಣದ ಮೇರೆಗೆ ಕೌನ್ಸಿಲರನ್ನು ಚುನಾಯಿಸಲು ವಿಫಲವಾದುದರಿಂದಾಗಿ ಉಂಟಾದ ಯಾವುದೇ ಖಾಲಿ ಸ್ಥಾನವನ್ನು ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸರ್ಕಾರವು, ನೇಮಕಾತಿಯ ಮೂಲಕ ಭರ್ತಿ ಮಾಡಬಹುದು:

ಪರಂತು, ಅಂಥ ಯಾವುದೇ ಖಾಲಿ ಸ್ಥಾನಕ್ಕೆ ಚುನಾವಣೆಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಆದರೆ ನೇಮಕಾತಿ ದಿನಾಂಕದಿಂದ ಒಂದು ವರ್ಷಕ್ಕೆ ಮೀರದಂತೆ ನಡೆಸತಕ್ಕದ್ದು.

**13. ಚುನಾವಣೆಗಳಿಗಾಗಿ ವಿಭಾಗಗಳು.–** (1) 11ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಸ್ಥಾನಗಳನ್ನು ಭರ್ತಿಮಾಡಲು ಚುನಾಯಿಸಬೇಕಾದ ಕೌನ್ಸಿಲರ್‌ಗಳ ಚುನಾವಣೆಯ ಉದ್ದೇಶಗಳಿಗಾಗಿ ಸರ್ಕಾರವು ಅಧಿಸೂಚನೆಯ ಮೂಲಕ,–

(ಕ) ಎಷ್ಟು ಪೌರಸಭೆಯನ್ನು ಪ್ರಾದೇಶಿಕ ವಿಭಾಗಗಳನ್ನಾಗಿ ವಿಭಾಗಿಸತಕ್ಕದ್ದೋ ಆ ಪ್ರಾದೇಶಿಕ ವಿಭಾಗಗಳ ಸಂಖ್ಯೆ;

(ಖ) ಪ್ರತಿಯೊಂದು ಪ್ರಾದೇಶಿಕ ವಿಭಾಗದ ವ್ಯಾಪ್ತಿ;

(ಗ) ಪ್ರತಿಯೊಂದು ಪ್ರಾದೇಶಿಕ ವಿಭಾಗಕ್ಕೆ ಹಂಚಿಕೆ ಮಾಡಿದ ಸ್ಥಾನಗಳ ಸಂಖ್ಯೆ. ಅದು ಒಂದು ಅಥವಾ ಹೆಚ್ಚಿಗೆ ಇರತಕ್ಕದ್ದು; ಮತ್ತು

(ಘ) ಪ್ರತಿಯೊಂದು ಪ್ರಾದೇಶಿಕ ವಿಭಾಗದಲ್ಲಿ ಅನುಸೂಚಿತ ಜಾತಿಗಳು ಮತ್ತು ಮಹಿಳೆಯರಿಗಾಗಿ ಮೀಸಲಿಟ್ಟ ಸ್ಥಾನಗಳು ಯಾವುವಾದರೂ ಇದ್ದರೆ, ಅವುಗಳ ಸಂಖ್ಯೆ–ಇವುಗಳನ್ನು ನಿರ್ಧರಿಸತಕ್ಕದ್ದು:

ಪರಂತು, ರೂಪಿಸಲಾದ ಪ್ರಾದೇಶಿಕ ವಿಭಾಗಗಳು, ಸಾಧ್ಯವಾದಷ್ಟುಮಟ್ಟಿಗೆ ಹೊಂದಿಕೊಂಡಿರುವ ಕ್ಷೇತ್ರಗಳನ್ನು ಒಳಗೊಂಡಿರತಕ್ಕದ್ದು;

(1ಕ) (1)ನೇ ಉಪ–ಪ್ರಕರಣದ ಮೇರೆಗಿನ ಯಾವುದೇ ಅಧಿಸೂಚನೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದಲ್ಲ.

(2) * * *

(3) * * *

**14. ಮತದಾರರ ಪಟ್ಟಿ.–** (1) (1ಕ) ಉಪ–ಪ್ರಕರಣದ ಮೇರೆಗೆ ತಯಾರಿಸಿದ ಮತದಾರರ ಪಟ್ಟಿಯೊಂದಿಗೆ ಪೌರಸಭೆಯ ವಿಭಾಗದಲ್ಲಿ ಸೇರಿಸಲಾದಂಥ ವಿಧಾನಸಭಾ ಚುನಾವಣಾ ಕ್ಷೇತ್ರದ ಅಂಥ ಭಾಗಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ, ಅಂಥ ವಿಭಾಗಕ್ಕೆ ಸಂಬಂಧಪಡಬಹುದಾದ ಕರ್ನಾಟಕ ವಿಧಾನಸಭಾ ಮತದಾರರ ಪಟ್ಟಿಯು ಈ ಅಧಿನಿಯಮದ ಉದ್ದೇಶಕ್ಕಾಗಿ ಅಂಥ ವಿಭಾಗಕ್ಕೆ ಮತದಾರರ ಪಟ್ಟಿಯೆಂದು ಭಾವಿಸತಕ್ಕದ್ದು.

[(1ಖ) ಪ್ರತಿಯೊಂದು ಪೌರಸಭೆಗಾಗಿ ಮತದಾರರ ಹೆಚ್ಚಿನ ಪಟ್ಟಿಯನ್ನು ನಿಯಮಿಸಿದ ಪ್ರಾಧಿಕಾರವು, ನಿಯಮಿಸಿದ ರೀತಿಯಲ್ಲಿ ಮತ್ತು ನಿಯಮಿಸಿದ ಅವಧಿಯ ಅಂತರದಲ್ಲಿ ತಯಾರಿಸತಕ್ಕದ್ದು ಮತ್ತು ಪರಿಷ್ಕರಿಸತಕ್ಕದ್ದು. ಸಾಮಾನ್ಯವಾಗಿ ಪೌರಸಭೆಯಲ್ಲಿ ವಾಸವಾಗಿರುವ ಮತ್ತು (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಮತದಾರರ ಪಟ್ಟಿಯನ್ನು ಕೊನೆಯ ಬಾರಿ ಪರಿಷ್ಕರಿಸಿದ ವರ್ಷದ ಜನವರಿ ಮೊದಲನೇ ದಿನದಂದು ಇಪ್ಪತ್ತೊಂದು ವರ್ಷಕ್ಕೆ ಕಡಿಮೆಯಲ್ಲದ ವ್ಯಕ್ತಿಯನ್ನು ಹೊರತುಪಡಿಸಿ, ಹಾಗೆ ಅದನ್ನು ತಯಾರಿಸಿದ ಮತ್ತು ಪರಿಷ್ಕರಿಸಿದ ವರ್ಷದ ಜನವರಿಯ ಮೊದಲನೇ ದಿನದಂದು ಹದಿನೆಂಟು ವರ್ಷಕ್ಕೆ ಕಡಿಮೆಯಲ್ಲದ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ತಯಾರಿಸಿದ ಮತದಾರರ ಹೆಚ್ಚಿನ ಪಟ್ಟಿಯಲ್ಲಿ ಸೇರಿಕೆಯಾಗಲು ಅರ್ಹನಾಗಿರತಕ್ಕದ್ದು. 1950ರ ಜನತಾ ಪ್ರಾತಿನಿಧ್ಯ ಅಧಿನಿಯಮ (1950ರ ಕೇಂದ್ರ ಅಧಿನಿಯಮ 43)ದ 16ನೇ ಪ್ರಕರಣದ ಉಪಬಂಧಗಳು ಈ ಉಪ–ಪ್ರಕರಣದ ಉದ್ದೇಶಕ್ಕಾಗಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.]

(2) ಪೌರಸಭೆಗೆ ಸಂಬಂಧಿಸಿದಂತೆ ಈ ಬಗ್ಗೆ ಜಿಲ್ಲಾಧಿಕಾರಿಯಿಂದ ಹೆಸರಿಸಲಾದ ಅಧಿಕಾರಿಯು ಅಂಥ ಪೌರಸಭೆಯ ಪ್ರತಿ ವಿಭಾಗಕ್ಕೂ ಒಂದು ಮತದಾರರ ಪಟ್ಟಿಯನ್ನು ಇಟ್ಟುಕೊಂಡು ಬರತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ "ಮತದಾರರ ಪಟ್ಟಿ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ 1950ರ ಜನತಾ ಪ್ರಾತಿನಿಧ್ಯ ಅಧಿನಿಯಮ (ಕೇಂದ್ರ ಅಧಿನಿಯಮ 1950ರ XLIII)ದ ಉಪಬಂಧಗಳ ಮೇರೆಗೆ ತಯಾರಿಸಿದ ಮತದಾರರ ಪಟ್ಟಿ.

(3) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಮತದಾರರ ಪಟ್ಟಿಯಲ್ಲಿ ಯಾರ ಹೆಸರಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅನರ್ಹಗೊಂಡಿದ್ದ ಹೊರತು, ಯಾವ ವಿಭಾಗಕ್ಕೆ ಅಂಥ ಪಟ್ಟಿಯು ಸಂಬಂಧಿಸಿದೆಯೋ ಆ ವಿಭಾಗಕ್ಕಾಗಿನ ಸದಸ್ಯನ ಚುನಾವಣೆಯಲ್ಲಿ ಮತ ನೀಡಲು ಅರ್ಹನಾಗಿರತಕ್ಕದ್ದು.

(4) ಪ್ರತಿಯೊಂದು ವಿಭಾಗದಲ್ಲಿ, ಆ ವಿಭಾಗದಿಂದ ಚುನಾಯಿತರಾಗಬೇಕಾದ ಕೌನ್ಸಿಲರುಗಳು ಎಷ್ಟಿರುವರೋ ಅಷ್ಟು ಮತಗಳನ್ನು ಮತದಾರನು ಹೊಂದಿರತಕ್ಕದ್ದು, ಆದರೆ ಯಾರೇ ಮತದಾರನು ಯಾವುದೇ ಚುನಾವಣೆಯಲ್ಲಿ ಯಾರೇ ಒಬ್ಬ ಅಭ್ಯರ್ಥಿಗೆ ಒಂದು ಮತಕ್ಕಿಂತ ಹೆಚ್ಚು ಮತವನ್ನು ಕೊಡತಕ್ಕದ್ದಲ್ಲ.

**15. ಅಭ್ಯರ್ಥಿಗಳ ಅರ್ಹತೆ.–** (1) ಪೌರಸಭೆಯ ಯಾವುದೇ ವಿಭಾಗದ ಮತದಾರರ ಪಟ್ಟಿಯಲ್ಲಿ ಹೆಸರಿರುವ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಅನರ್ಹಗೊಂಡಿದ್ದ ಹೊರತು, ಆ ವಿಭಾಗದ ಅಥವಾ ಪೌರಸಭೆಯ ಇತರ ಯಾವುದೇ ವಿಭಾಗದ ಚುನಾವಣೆಯಲ್ಲಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದು ಮತ್ತು ಅಂಥ ಪಟ್ಟಿಯಲ್ಲಿ ಹೆಸರು ಇಲ್ಲದಿರುವ ಪ್ರತಿಯೊಬ್ಬ ವ್ಯಕ್ತಿಯು ಪೌರಸಭೆಯ ಯಾವುದೇ ವಿಭಾಗದ ಚುನಾವಣೆಯಲ್ಲಿ ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ:

ಪರಂತು,–

(ಕ) ಅನುಸೂಚಿತ ಜಾತಿಗಳಿಗೆ ಮೀಸಲಿಟ್ಟ ಸ್ಥಾನಕ್ಕೆ, ಅವನು ಆ ಯಾವುದೇ ಜಾತಿಗಳ ಅಥವಾ ಬುಡಕಟ್ಟುಗಳ ಸದಸ್ಯನಾಗಿದ್ದ ಹೊರತು;

(ಖ) ಮಹಿಳೆಯರಿಗೆ ಮೀಸಲಿಟ್ಟ ಸ್ಥಾನಕ್ಕೆ ಅಂಥ ವ್ಯಕ್ತಿಯು ಮಹಿಳೆಯಾಗಿದ್ದ ಹೊರತು;

–ಚುನಾಯಿತನಾಗಲು ಅರ್ಹನಾಗಿರತಕ್ಕದ್ದಲ್ಲ.

(2) ವ್ಯಕ್ತಿಯು ಒಳಗಾಗಿರುವ ಯಾವುದೇ ಅನರ್ಹತೆಗೆ ಒಳಪಟ್ಟು, ಚುನಾವಣೆಯಲ್ಲಿ ಸಂದರ್ಭಾನುಸಾರ ಮತದಾನ ಮಾಡಲು ವ್ಯಕ್ತಿಯು ಅರ್ಹನಾಗಿರುವನೇ ಅಥವಾ ಅರ್ಹನಾಗಿಲ್ಲವೇ ಅಥವಾ ಚುನಾಯಿತನಾಗಲು ಅರ್ಹನಾಗಿರುವನೇ ಅಥವಾ ಅರ್ಹನಾಗಿಲ್ಲವೇ ಎಂಬುದನ್ನು ಈ ಪ್ರಕರಣದ ಮೇರೆಗೆ ನಿರ್ಧರಿಸುವ ಉದ್ದೇಶಕ್ಕಾಗಿ ಮತದಾರರ ಪಟ್ಟಿಯು ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

**16. ಕೌನ್ಸಿಲರ್ ಆಗಲು ಸಾಮಾನ್ಯ ಅನರ್ಹತೆಗಳು.–** (1) ವ್ಯಕ್ತಿಯು ಕೌನ್ಸಿಲರ್‌ನಾಗಿ ಆಯ್ಕೆಯಾಗಲು ಮತ್ತು ಹಾಗೆ ಇರಲು,–

(ಕ) ಅವನು ಕ್ರಿಮಿನಲ್ ನ್ಯಾಯಾಲಯದಿಂದ (i) ನೈತಿಕ ಪತನವನ್ನೊಳಗೊಳ್ಳುವಂಥ ಮತ್ತು ಆರು ತಿಂಗಳುಗಳನ್ನು ಮೀರುವ ಅವಧಿಯ ಕಾರಾವಾಸದಿಂದ ದಂಡನೀಯನಾಗುವಂಥ ಅಪರಾಧಕ್ಕಾಗಿ; ಅಥವಾ

(ii) 1976ರ ಕರ್ನಾಟಕ ವಿವಾಹಗಳ (ನೋಂದಣಿ ಮತ್ತು ಸಂಕೀರ್ಣ ಉಪಬಂಧಗಳ) ಅಧಿನಿಯಮದ 20, 21 ಅಥವಾ 22ನೇ ಪ್ರಕರಣದ ಮೇರೆಗಿನ ದಂಡನೀಯವಾದ ಅಪರಾಧಕ್ಕಾಗಿ–ಕಾರವಾಸದ ಶಿಕ್ಷೆಗೆ ಒಳಗಾಗಿದ್ದು, ಅಂಥ ಶಿಕ್ಷೆಯನ್ನು ವಿಪರ್ಯಯ ಅಥವಾ ರದ್ದುಗೊಳಿಸಿಲ್ಲದಿದ್ದರೆ ಅಥವಾ ಅಪರಾಧವನ್ನು ಕ್ಷಮಿಸಿರದಿದ್ದರೆ; ಅಥವಾ

(ಖ) 1955ರ ಅಸ್ಪೃಶ್ಯತಾ ಅಪರಾಧ ಅಧಿನಿಯಮದ (1955ರ ಕೇಂದ್ರ ಅಧಿನಿಯಮ 22) ಅಥವಾ 1954ರ ಆಹಾರ ಕಲಬೆರಕೆ ಪ್ರತಿಬಂಧಕ ಅಧಿನಿಯಮದ (1954ರ ಕೇಂದ್ರ ಅಧಿನಿಯಮ 37) ಉಪಬಂಧಗಳ ಮೇರೆಗಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(ಗ) ಭಾರತ ಸರ್ಕಾರದ ಅಥವಾ ಭಾರತ ಸಂವಿಧಾನದ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ರಾಜ್ಯ ಸರ್ಕಾರದ ಅಧೀನದಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಘೋಷಿಸಲಾದಂಥ ಅನರ್ಹನನ್ನಾಗಿಸಿದಂಥ ಪದಗಳನ್ನು ಹೊರತುಪಡಿಸಿ, ಯಾವುದೇ ಸದರಿ ಸರ್ಕಾರಗಳ ನಿಯಂತ್ರಣಕ್ಕೊಳಪಟ್ಟು, ಯಾವುದೇ ಸ್ಥಳೀಯ ಅಥವಾ ಇತರ ಪ್ರಾಧಿಕಾರದ ಅಧೀನದಲ್ಲಿ ಯಾವುದೇ ಲಾಭದ ಪದವನ್ನು ಅವನು ಧಾರಣ ಮಾಡಿದ್ದರೆ; ಅಥವಾ

(ಘ) ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿನ ಸೇವೆಯಿಂದ ಅಥವಾ ಸರ್ಕಾರದ ಸೇವೆಯಿಂದ ಅವನನ್ನು ವಜಾ ಮಾಡಲಾಗಿದ್ದರೆ; ಅಥವಾ

(ಙ) ಅವನು ನ್ಯಾಯವಾದಿಯಾಗಿದ್ದು, ಸಕ್ಷಮ ಪ್ರಾಧಿಕಾರದ ಆದೇಶದ ಮೂಲಕ ಅವನನ್ನು ವೃತ್ತಿಯಿಂದ ವಜಾ ಮಾಡಲಾಗಿದ್ದರೆ ಅಥವಾ ಅಮಾನತುಗೊಳಿಸಿದ್ದರೆ, ಆ ಎರಡನೆಯ ಸಂದರ್ಭದಲ್ಲಿ ಅಂಥ ಅಮಾನತಿನ ಅವಧಿಯಲ್ಲಿ ಅನರ್ಹತೆಯು ಪ್ರವರ್ತನೆಯಲ್ಲಿ ಇದ್ದುದಾಗಿರಬೇಕು; ಅಥವಾ

(ಚ) ಈ ಅಧಿನಿಯಮದ 41ನೇ ಪ್ರಕರಣದ ಮೇರೆಗೆ ಅವನನ್ನು ಪದದಿಂದ ತೆಗೆದುಹಾಕಲಾಗಿದ್ದರೆ; ಅಥವಾ

(ಛ) ಅವನು ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆ ಘೋಷಿತನಾಗಿರಬೇಕು; ಅಥವಾ

(ಜ) ಅವನು ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಝ) ಅವನು ಭಾರತದ ನಾಗರೀಕನಾಗಿರದಿದ್ದರೆ ಅಥವಾ ವಿದೇಶಿ ರಾಜ್ಯದ ಪೌರತ್ವವನ್ನು ಸ್ವಇಚ್ಛೆಯಿಂದ ಆರ್ಜಿಸಿದ್ದರೆ ಅಥವಾ ವಿದೇಶಿ ರಾಜ್ಯಕ್ಕೆ ಯಾವುದೇ ನಿಷ್ಠೆ ಅಥವಾ ಅನುರಕ್ತಿಯನ್ನು ಅಂಗೀಕರಿಸಿದ್ದರೆ; ಅಥವಾ

(ಞ) ಅವನು ಇಪ್ಪತ್ತೈದು ವರ್ಷಕ್ಕಿಂತ ಕಡಿಮೆ ವಯಸ್ಸಿನವನಾಗಿದ್ದರೆ; ಅಥವಾ

(ಟ) ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವುದನ್ನು ಹೊರತುಪಡಿಸಿ, ಮುನ್ಸಿಪಲ್ ಕೌನ್ಸಿಲ್‌ನ ಆದೇಶದ ಮೂಲಕ ಮಾಡಲಾದ ಯಾವುದೇ ಕಾಮಗಾರಿಯಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಅಥವಾ ಅದರ ಅಧೀನದಲ್ಲಿ ಅಥವಾ ಅದರಿಂದ ಅಥವಾ ಅದರ ಪರವಾಗಿ ಮಾಡಿಕೊಂಡಿರುವ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಅವನು ಅಥವಾ ಅವನ ಪಾಲುದಾರನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಠ) ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಹಣ ಪಡೆಯುವ ನ್ಯಾಯವಾದಿಯಾಗಿ ನಿಯೋಜಿತನಾಗಿದ್ದರೆ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ವಿರುದ್ಧವಾಗಿ ನ್ಯಾಯವಾದಿಯಾಗಿ ನಿಯೋಜನೆಯನ್ನು ಅಂಗೀಕರಿಸಿದ್ದರೆ; ಅಥವಾ

(ಡ) ಅವನು ಮುನ್ಸಿಪಲ್ ಕೌನ್ಸಿಲ್‌ನ ಲೈಸೆನ್ಸ್ ಪಡೆದ ಮೋಜಣಿದಾರ ಅಥವಾ ಕೊಳಾಯಿಗಾರ ಅಥವಾ ನೀರು ಸರಬರಾಜು ಮಾಡುವ ಕಂಟ್ರಾಕ್ಟರನಾಗಿದ್ದರೆ ಅಥವಾ ಯಾರೇ ಅಂಥ ಲೈಸೆನ್ಸ್ ಪಡೆದ ವ್ಯಕ್ತಿಯು ಪಾಲುಗಾರನಾಗಿರುವ ಫರ್ಮಿನ ಪಾಲುಗಾರನಾಗಿದ್ದರೆ; ಅಥವಾ

(ಢ) ಮುನ್ಸಿಪಲ್ ಕೌನ್ಸಿಲಿಗೆ ಅವನು, ಏಜೆಂಟ್, ರಿಸೀವರ್, ನ್ಯಾಸಧಾರಿ ಅಥವಾ ಕಾರ್ಯನಿರ್ವಾಹಕನಾಗಿರುವುದನ್ನು ಹೊರತುಪಡಿಸಿ, ಅವನಿಂದ ಬರಬೇಕಾದ ಯಾವುದೇ ಬಗೆಯ ಯಾವುದೇ ಬಾಕಿಯನ್ನು ಈ ಬಗ್ಗೆ ನೋಟೀಸನ್ನು ಅವನ ಮೇಲೆ ಜಾರಿ ಮಾಡಿದ ತರುವಾಯ ಮೂರು ತಿಂಗಳುಗಳೊಳಗಾಗಿ ಸಂದಾಯ ಮಾಡಲು ತಪ್ಪಿದರೆ; ಅಥವಾ

(ಣ) ಚುನಾವಣೆಯ ಸಿಂಧುತ್ವವನ್ನು ಅಥವಾ ಕ್ರಮಬದ್ಧತೆಯನ್ನು ಪ್ರಶ್ನಿಸುವ ವ್ಯವಹರಣೆಗಳಲ್ಲಿ, ನಿರ್ಣಯದ ದಿನಾಂಕದಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾಗಿದ್ದು ಅಥವಾ ಸರ್ಕಾರವು ಆದೇಶದ ಮೂಲಕ ಅನರ್ಹತೆಯನ್ನು ತೆಗೆದುಹಾಕಿದ್ದ ಹೊರತು, ಅವನು,–

(i) ಯಾವುದೇ ಭ್ರಷ್ಟಾಚಾರ; ಅಥವಾ

(ii) ಭಾರತ ದಂಡ ಸಂಹಿತೆಯ 171ನೇ ಪ್ರಕರಣದ ಅಥವಾ 171 ಚ ಪ್ರಕರಣದ ಮೇರೆಗೆ ದಂಡನೀಯವಾಗಬಹುದಾದ ಯಾವುದೇ ಅಪರಾಧ ಅಥವಾ ಈ ಅಧಿನಿಯಮದ 36ನೇ ಪ್ರಕರಣದ ಅಥವಾ 37ನೇ ಪ್ರಕರಣದ (2)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ದಂಡನೀಯವಾಗಬಹುದಾದ ಯಾವುದೇ ಅಪರಾಧ

–ಇವುಗಳ ಬಗ್ಗೆ ತಪ್ಪಿತಸ್ಥನೆಂದು ರುಜುವಾತುಪಡಿಸಲಾಗಿದ್ದರೆ:

ಪರಂತು,–

(ಕ) (ಖ) ಉಪಖಂಡದಲ್ಲಿನ ಅನರ್ಹತೆಯು, ಯಾವ ಅವಧಿಗಾಗಿ ವ್ಯಕ್ತಿಯು ಭದ್ರತೆಯನ್ನು ಒದಗಿಸಲು ಆದೇಶಿಸಲಾಗಿತ್ತೋ ಆ ಅವಧಿಯ ಮುಕ್ತಾಯದ ತರುವಾಯ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು;

(ಖ) ವ್ಯಕ್ತಿಯು,–

(i) ಯಾವುದೇ ನಿವೃತ್ತಿ ವೇತನ; ಅಥವಾ

(ii) ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಕೌನ್ಸಿಲರನಾಗಿ ಸೇವೆ ಸಲ್ಲಿಸುತ್ತಿರುವುದಕ್ಕಾಗಿ ಸರ್ಕಾರವು ಅನುಮೋದಿಸಿದ ಯಾವುದೇ ಭತ್ಯೆ ಅಥವಾ ಸೌಲಭ್ಯ

–ಇವುಗಳನ್ನು ಸ್ವೀಕರಿಸುತ್ತಿರುವ ಕಾರಣ ಮಾತ್ರದಿಂದಲೇ (ಗ) ಖಂಡದ ಮೇರೆಗೆ ಯಾವುದೇ ಅನರ್ಹತೆಗೆ ಒಳಗಾಗಿದ್ದಾನೆಂದು ಭಾವಿಸತಕ್ಕದ್ದಲ್ಲ;

(ಗ) (ಕ), (ಫ) ಮತ್ತು (ಚ) ಖಂಡಗಳಲ್ಲಿನ ಅನರ್ಹತೆಯು ಅಂಥ ಶಿಕ್ಷೆಯ, ವಜೆಯ ಅಥವಾ ತೆಗೆದುಹಾಕಿದ ದಿನಾಂಕದಿಂದ ನಾಲ್ಕು ವರ್ಷಗಳು ಮುಕ್ತಾಯವಾದ ತರುವಾಯ ಅಥವಾ ಸರ್ಕಾರದ ಆದೇಶದ ಮೂಲಕ ಮುಂಚಿತವಾಗಿ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು;

(ಫ) ವ್ಯಕ್ತಿಯು,–

(i) ಯಾವುದೇ ಸ್ಥಿರ ಸ್ವತ್ತಿನ ಯಾವುದೇ ಗೇಣಿ, ಮಾರಾಟ ಅಥವಾ ಖರೀದಿಯಲ್ಲಿ ಅಥವಾ ಅದಕ್ಕಾಗಿನ ಯಾವುದೇ ಒಪ್ಪಂದದಲ್ಲಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(ii) ವ್ಯವಸ್ಥಾಪಕ ನಿರ್ದೇಶಕ ಅಥವಾ ಏಜೆಂಟನಾಗಿ ಹೊರತು, ಯಾವುದೇ ಜಾಯಿಂಟ್ ಸ್ಟಾಕ್ ಕಂಪನಿಯಲ್ಲಿ ಅಥವಾ ಸಂಘಗಳ ನೋಂದಣಿ ಅಧಿನಿಯಮದ ಮೇರೆಗೆ ನೊಂದಾಯಿತವಾದ ಯಾವುದೇ ಸಾಹಿತ್ಯಕ ಸಂಘದಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲಿನೊಂದಿಗೆ ಕರಾರು ಮಾಡಿಕೊಂಡಿರುವ ಅಥವಾ ಅದರಿಂದ ಅಥವಾ ಅದರ ಪರವಾಗಿ ನಿಯೋಜಿತವಾಗಿರುವ ಯಾವುದೇ ಸಹಕಾರ ಸಂಘದಲ್ಲಿ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(iii) ಮುನ್ಸಿಪಲ್ ಕೌನ್ಸಿಲ್‌ನ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ಜಾಹೀರಾತನ್ನು ಯಾವ ವೃತ್ತಪತ್ರಿಕೆಯಲ್ಲಿ ಸೇರಿಸಲಾಗಬಹುದೋ ಅಂಥ ಯಾವುದೇ ವೃತ್ತಪತ್ರಿಕೆಯಲ್ಲಿ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(iv) ಮುನ್ಸಿಪಲ್ ಕೌನ್ಸಿಲ್ ಅಥವಾ ಅದರ ಪರವಾಗಿ ಎತ್ತಲಾದ ಯಾವುದೇ ಸಾಲದಲ್ಲಿ ಡಿಬೆಂಚರನ್ನು ಧಾರಣ ಮಾಡಿರುವ ಅಥವಾ ಅದರಲ್ಲಿ ಅನ್ಯಥಾ ಹಿತಾಸಕ್ತಿ ಹೊಂದಿರುವ; ಅಥವಾ

(v) ಯಾವುದೇ ಅಧಿಕೃತ ವರ್ಷದಲ್ಲಿ ನಿಯಮಿಸಬಹುದಾದಂಥ ಮೊಬಲಗನ್ನು ಮೀರದ ಮೌಲ್ಯಕ್ಕೆ ಅವನು ನಿಯತವಾಗಿ ವ್ಯಾಪಾರ ಮಾಡುತ್ತಿರುವ ಯಾವುದೇ ವಸ್ತುವನ್ನು ಮುನ್ಸಿಪಲ್ ಕೌನ್ಸಿಲ್‌ಗೆ ಮಾಡುವ ಆಗಾಗಿನ ಮಾರಾಟದಲ್ಲಿ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ;

(vi) ಯಾವುದೇ ಅಧಿಕೃತ ವರ್ಷದಲ್ಲಿ ಐವತ್ತು ರೂಪಾಯಿಗಳಿಗೆ ಮೀರದ ಅಥವಾ ಐದುನೂರು ರೂಪಾಯಿಗಳಿಗೆ ಮೀರದ ನಿಯಮಿಸಬಹುದಾದಂಥ ಹೆಚ್ಚಿನ ಮೊಬಲಗಿಗಾಗಿ ಯಾವುದೇ ವಸ್ತುವನ್ನು ಆಗಾಗ ಮುನ್ಸಿಪಲ್ ಕೌನ್ಸಿಲಿಗೆ ಬಾಡಿಗೆಗೆ ಕೊಡುವುದರಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನಿಂದ ಬಾಡಿಗೆಗಾಗಿ ಪಡೆಯುವುದರಲ್ಲಿ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ,

–ಕಾರಣದಿಂದಾಗಿ (ಟ) ಉಪಖಂಡದ ಮೇರೆಗಿನ ಅನರ್ಹತೆಗೆ ಒಳಗಾಗಿದ್ದಾನೆಂದು ಭಾವಿಸತಕ್ಕದ್ದಲ್ಲ.

(2) ಯಾರೇ ಕೌನ್ಸಿಲರನು, ಅವನು ಯಾವ ಅವಧಿಗೆ ಚುನಾಯಿತನಾಗಿದ್ದಾನೋ ಆ ಅವಧಿಯಲ್ಲೇ–

(ಕ) (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೊಳಗಾದರೆ; ಅಥವಾ

(ಖ) (i) ಅಂಥ ಪಾಲು ಅಥವಾ ಹಿತಾಸಕ್ತಿಯ ಮೌಲ್ಯವು ಏನೇ ಆಗಿರಬಹುದಾದರೂ (1)ನೇ ಉಪ–ಪ್ರಕರಣದ ಪರಂತುಕದ (ಫ) ಖಂಡದ (i), (ii), (iii) ಅಥವಾ (iv)ನೇ ಉಪ–ಖಂಡಗಳಲ್ಲಿ

ವಿವರಿಸಲಾದ ಯಾವುದೇ ಅಂಥ ಪಾಲು ಅಥವಾ ಹಿತಾಸಕ್ತಿಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾನೇ ಸ್ವತಃ ಅಥವಾ ತನ್ನ ಪಾಲುದಾರನ ಮೂಲಕ ಅವನು ಹೊಂದಿರುವ; ಅಥವಾ

(ii) ಅವನು ಮೂಲಕರ್ತ ಅಥವಾ ಇತರ ವ್ಯಕ್ತಿಯ ಪರವಾಗಿ ಅವನು ವೃತ್ತಿಪರ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(iii) ಆ ಕಾಲದಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ವಿರುದ್ಧ ಯಾವುದೇ ವ್ಯವಹರಣೆಯಲ್ಲಿ ಅವನು ತೊಡಗಿರುವ

–ಯಾವುದೇ ವಿಷಯದ ಚರ್ಚೆಯಲ್ಲಿ ಕೌನ್ಸಿಲರನಾಗಿ ಮತದಾನ ಮಾಡಿದರೆ ಅಥವಾ ಭಾಗವಹಿಸಿದರೆ;

(ಗ) ಮುನ್ಸಿಪಲ್ ಕೌನ್ಸಿಲ್‌ನ ಅನುಮತಿ ಪಡೆದ ಹೊರತು, ಕ್ರಮಾನುಗತ ಮೂರು ತಿಂಗಳುಗಳ ಅವಧಿಯಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ಸಭೆಗಳಿಗೆ ಅವನು ಗೈರುಹಾಜರಾದರೆ:

ಪರಂತು, ಕ್ರಮಾನುಗತ ಆರು ತಿಂಗಳುಗಳಿಗೆ ಮೀರದ ಅವಧಿಯಲ್ಲಿ ಮುನ್ಸಿಪಲ್ ಕೌನ್ಸಿಲ್ ಸಭೆಗಳಿಗೆ ಗೈರುಹಾಜರಾದ ಸಂದರ್ಭದಲ್ಲಿ ಯಾವುದೇ ಅಂಥ ಅನುಮತಿಯನ್ನು ಮಂಜೂರ್ಮಾಡತಕ್ಕದ್ದಲ್ಲ:

ಮತ್ತೂ ಪರಂತು, ತಾನು ಗೈರುಹಾಜರಾಗಲು ಅನುಮತಿಗಾಗಿ, ಮುನ್ಸಿಪಲ್ ಕೌನ್ಸಿಲ್‌ಗೆ ಕೌನ್ಸಿಲರನು ಅರ್ಜಿಯನ್ನು ಸಲ್ಲಿಸಿದಾಗ ಮತ್ತು ಆ ಅರ್ಜಿಯ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗಾಗಿ ಆ ಅರ್ಜಿಯ ಮೇಲಿನ ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ಮುನ್ಸಿಪಲ್ ಕೌನ್ಸಿಲು ತಪ್ಪಿದಾಗ ಕೇಳಿಕೊಂಡಿದ್ದ ಅನುಮತಿಯು ಮುನ್ಸಿಪಲ್ ಕೌನ್ಸಿಲ್‌ನಿಂದ ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

ಡೆಪ್ಯುಟಿ ಕಮೀಷನರನು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯ ತರುವಾಯ ತಾನಾಗಿಯೇ ಆಗಲಿ ಅಥವಾ ಅವನಿಗೆ ಮಾಡಲಾದ ವರದಿಯ ಮೇಲಾಗಲಿ ಮತ್ತು ಸಂಬಂಧಪಟ್ಟ ವ್ಯಕ್ತಿಯ ಸ್ಥಾನವು ಖಾಲಿಯಾಗಿರುವುದಕ್ಕಾಗಿ ಘೋಷಿಸತಕ್ಕದ್ದು.

(3) (2)ನೇ ಉಪ–ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರನ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶದಿಂದ ಬಾಧಿತನಾದ ವ್ಯಕ್ತಿಯು ನಗರ ಮುನ್ಸಿಪಲ್ ಕೌನ್ಸಿಲಿನವನಾಗಿದ್ದರೆ, ಅಂಥ ತೀರ್ಮಾನದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ ಸರ್ಕಾರಕ್ಕೆ, ಮತ್ತು ಅಂಥ ವ್ಯಕ್ತಿಯು ಪಟ್ಟಣ ಮುನ್ಸಿಪಲ್ ಕೌನ್ಸಿಲಿನ ಕೌನ್ಸಿಲರ್‌ನಾಗಿದ್ದರೆ ಕಮೀಷನರನಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಂಥ ಅಪೀಲಿನ ಮೇಲೆ ಸರ್ಕಾರ ಅಥವಾ ಕಮೀಷನರನು ಮಾಡಿದ ಆದೇಶಗಳು ಅಂತಿಮವಾಗಿರತಕ್ಕದ್ದು:

ಪರಂತು, ಯಾರೇ ಕೌನ್ಸಿಲರನ ವಿರುದ್ಧ ತನ್ನ ಅಹವಾಲು ಹೇಳಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ಕೊಡದೆ (2) ಮತ್ತು (3)ನೇ ಉಪ–ಪ್ರಕರಣಗಳ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**17. ಕೌನ್ಸಿಲರುಗಳ ಸಾರ್ವತ್ರಿಕ ಚುನಾವಣೆ.–** (1) ಮುನ್ಸಿಪಲ್ ಕೌನ್ಸಿಲನ್ನು ಮೊದಲ ಬಾರಿಗೆ ಅಥವಾ 315ನೇ ಪ್ರಕರಣದ ಮೇರೆಗೆ ಆಡಳಿತಗಾರನನ್ನು ನೇಮಕ ಮಾಡಿದಂಥ ಅವಧಿಯ ತರುವಾಯ ಅಥವಾ 316ನೆಯ ಪ್ರಕರಣದ ಮೇರೆಗಿನ ರದ್ದಿಯಾತಿಯ ಅವಧಿಯ ತರುವಾಯ ರಚಿಸುವ ಉದ್ದೇಶಕ್ಕಾಗಿ ಕೌನ್ಸಿಲರುಗಳ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕದ್ದು.

(2) ಕಾಲಕ್ರಮದಲ್ಲಿ, ಕೌನ್ಸಿಲರುಗಳ ಪದದಲ್ಲಿ ಉದ್ಭವಿಸುವ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿಯೂ ಸಹ ಸಾರ್ವತ್ರಿಕ ಚುನಾವಣೆಯನ್ನು ನಡೆಸತಕ್ಕದ್ದು.

**18. ಕೌನ್ಸಿಲರುಗಳ ಪದಾವಧಿ:–** (1) (ಕ) ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತನಾದ ಕೌನ್ಸಿಲರನ ಪದಾವಧಿಯು ನಾಲ್ಕು ವರ್ಷಗಳಾಗಿರತಕ್ಕದ್ದು:

ಪರಂತು, ಸರ್ಕಾರವು ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬೇಕಾದ ಕಾರಣಗಳಿಗಾಗಿ ಅಂಥ ಕೌನ್ಸಿಲರುಗಳ ಪದಾವಧಿಯನ್ನು ತಾನು ಸೂಕ್ತವೆಂದು ಭಾವಿಸುವಂಥ ಅವಧಿ ಅಥವಾ ಅವಧಿಗಳವರೆಗೆ ಉತ್ತರಾನ್ವಯವಾಗಿಯಾಗಲಿ ಅಥವಾ ಪೂರ್ವಾನ್ವಯವಾಗಿಯಾಗಲಿ ವಿಸ್ತರಿಸಬಹುದು; ಆದಾಗ್ಯೂ ಹಾಗೆ ವಿಸ್ತರಿಸಿದ ಒಟ್ಟು ಅವಧಿಯು ಇಪ್ಪತ್ನಾಲ್ಕು ತಿಂಗಳುಗಳನ್ನು ಮೀರತಕ್ಕದಲ್ಲ;

(ಖ) 12ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕೌನ್ಸಿಲರನ ಪದಾವಧಿಯು ಒಂದು ವರ್ಷ ಅಥವಾ ಖಾಲಿ ಸ್ಥಾನದಲ್ಲಿ ಕೌನ್ಸಿಲರನು ಚುನಾಯಿತನಾಗುವವರೆಗೆ, ಇದರಲ್ಲಿ ಯಾವುದು ಮೊದಲೋ ಅದು ಆಗಿರತಕ್ಕದ್ದು.

(1ಕ) ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಅಥವಾ 12ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕೌನ್ಸಿಲರುಗಳ ಪದಾವಧಿಯು 20ನೇ ಪ್ರಕರಣದ ಮೇರೆಗೆ ಅವರ ಹೆಸರುಗಳ ಪ್ರಕಟಣೆಯ ದಿನಾಂಕದಂದು ಅಥವಾ ಹೊರಹೋಗಲು ಕೌನ್ಸಿಲರುಗಳ ಪದಾವಧಿಯ ಮುಕ್ತಾಯದ ನಿಕಟ ತರುವಾಯ, ಇದರಲ್ಲಿ ಯಾವುದು ನಂತರದ್ದೋ, ಅಂದು ಪ್ರಾರಂಭವಾಗತಕ್ಕದ್ದು. ಒಂದಕ್ಕಿಂತ ಹೆಚ್ಚು ದಿನಾಂಕಗಳಂದು ಹೆಸರುಗಳನ್ನು ಹಾಗೆ ಪ್ರಕಟಿಸಿರುವಲ್ಲಿ, ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರನೇ ಎರಡಕ್ಕಿಂತ ಕಡಿಮೆಯಲ್ಲದ ಹೆಸರುಗಳನ್ನು ಪ್ರಕಟಿಸಲಾದಂಥ ದಿನಾಂಕವನ್ನು, ಈ ಉಪ–ಪ್ರಕರಣದ ಉದ್ದೇಶಕ್ಕಾಗಿ ಹೆಸರುಗಳ ಪ್ರಕಟಣೆಯ ದಿನಾಂಕವೆಂದು ಭಾವಿಸತಕ್ಕದ್ದು.

(2) ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾಯಿತನಾದ ಕೌನ್ಸಿಲರನ ಪದಾವಧಿಯು, ಖಾಲಿಸ್ಥಾನವು ಉಂಟಾಗದಿದ್ದರೆ, ಯಾವ ಕೌನ್ಸಿಲರನ ಸ್ಥಾನದಲ್ಲಿ ಅವನು ಚುನಾಯಿತನಾಗಿರುವನೋ ಆ ಕೌನ್ಸಿಲರನು ಪದಧಾರಣ ಮಾಡಲು ಹಕ್ಕುಳ್ಳವನಾಗಿರಬಹುದಾದಷ್ಟು ಅವಧಿಯವರೆಗೆ ಮಾತ್ರ ಮುಂದುವರಿಯತಕ್ಕದ್ದು.

(3) ಈ ಅಧಿನಿಯಮದ ಉದ್ದೇಶಗಳಿಗಾಗಿ, ಈ ಪ್ರಕರಣದ ಮೇರೆಗೆ ಒಟ್ಟು ಸಂಖ್ಯೆಯ ಮೂರನೆಯ ಎರಡರಷ್ಟಕ್ಕಿಂತ ಕಡಿಮೆ ಇಲ್ಲದ ಕೌನ್ಸಿಲರುಗಳ ಪದಾವಧಿಯು ಪ್ರಾರಂಭವಾಗುವಂಥ ದಿನಾಂಕವನ್ನು ಮುನ್ಸಿಪಲ್ ಕೌನ್ಸಿಲು ಯಾವ ದಿನಾಂಕದಿಂದ ಕ್ರಮಬದ್ಧವಾಗಿ ರಚಿತವಾಯಿತೋ ಆ ದಿನಾಂಕವೆಂದು ಭಾವಿಸತಕ್ಕದ್ದು, ಮತ್ತು ಹಾಗೆ ರಚಿತವಾದ ಮುನ್ಸಿಪಲ್ ಕೌನ್ಸಿಲು, ಮುನ್ಸಿಪಲ್ ಕೌನ್ಸಿಲ್ಲಿನ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ಸಕ್ಷಮವಾಗಿರತಕ್ಕದ್ದು.

**18ಕ. ಕೌನ್ಸಿಲರುಗಳಿಗೆ ಭತ್ಯೆಗಳು.–** ಪೌರಸಭಾ ನಿಧಿಗಳಿಂದ ಪ್ರತಿಯೊಬ್ಬ ಕೌನ್ಸಿಲರನು ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಒಂದು ನೂರು ರೂಪಾಯಿಗಳಿಗೆ ಮೀರದ ಮಾಹೆಯಾನ ಭತ್ಯೆಯನ್ನು ಸ್ವೀಕರಿಸಬಹುದು ಮತ್ತು ವಿಭಿನ್ನ ಮುನ್ಸಿಪಲ್ ಕೌನ್ಸಿಲ್ಲುಗಳಿಗೆ ವಿಭಿನ್ನ ದರಗಳನ್ನು ನಿಗದಿಪಡಿಸಬಹುದು.

**19. ಆಕಸ್ಮಿಕ ಖಾಲಿಸ್ಥಾನಗಳನ್ನು ಹೇಗೆ ಭರ್ತಿ ಮಾಡಬೇಕು.–** ಕೌನ್ಸಿಲರ್‌ನಾಗಿ ಚುನಾಯಿತನಾದ ಅಥವಾ ನೇಮಕಗೊಂಡ ವ್ಯಕ್ತಿಯ ರಾಜೀನಾಮೆ ಅಥವಾ ಪದವನ್ನು ಅಂಗೀಕರಿಸದೇ ಇರುವ ಮೂಲಕ ಅಥವಾ ಅಂಥ ವ್ಯಕ್ತಿಯು ಕೌನ್ಸಿಲರ್‌ನಾಗಿರಲು ಅನರ್ಹನಾಗುವ ಮೂಲಕ ಅಥವಾ 23ನೇ ಪ್ರಕರಣದ ಉಪಬಂಧಗಳ ಮೇರೆಗೆ

ಯಾವುದೇ ಚುನಾವಣೆಯನ್ನು ರದ್ದುಗೊಳಿಸುವುದರ ಮೂಲಕ ಅಥವಾ ಅವನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಉಂಟಾದ ಕೌನ್ಸಿಲರ್‌ನ ಮರಣದ ಅಥವಾ ಅವನನ್ನು ತೆಗೆದುಹಾಕುವುದು ಅಥವಾ ಅವನ ಅಸಮರ್ಥತೆಯ ಮೂಲಕ ಸ್ಥಾನವು ಖಾಲಿ ಆದಲ್ಲಿ, ಆ ಖಾಲಿ ಸ್ಥಾನವನ್ನು, ಅಂಥ ಖಾಲಿ ಸ್ಥಾನ ಸಂಭವಿಸಿದ ತರುವಾಯ ಆದಷ್ಟು ಬೇಗನೆ ಅದಕ್ಕೆ ವ್ಯಕ್ತಿಯನ್ನು ಚುನಾಯಿಸುವ ಮೂಲಕ ಭರ್ತಿ ಮಾಡತಕ್ಕದ್ದು:

ಪರಂತು, 18ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಕೌನ್ಸಿಲರುಗಳ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಆರು ತಿಂಗಳುಗಳೊಳಗೆ ಸಂಭವಿಸುವ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಯಾವುದೇ ಚುನಾವಣೆಯನ್ನು ನಡೆಸತಕ್ಕದ್ದಲ್ಲ.

**20. ಚುನಾವಣೆಗಳ ಫಲಿತಾಂಶಗಳ ಪ್ರಕಟಣೆ.–** ಮುನ್ಸಿಪಲ್ ಕೌನ್ಸಿಲಿಗೆ ಸಂದರ್ಭಾನುಸಾರ, ಕೌನ್ಸಿಲರುಗಳು, ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಚುನಾಯಿತರಾದ ಅಥವಾ ನೇಮಕಗೊಂಡ ವ್ಯಕ್ತಿಗಳ ಹೆಸರುಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು:

ಪರಂತು, ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾದ ಮತ್ತು 12ನೇ ಪ್ರಕರಣದ ಮೇರೆಗೆ ನೇಮಕಗೊಂಡ ಎಲ್ಲಾ ಕೌನ್ಸಿಲರುಗಳ ಹೆಸರುಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಏಕಕಾಲದಲ್ಲಿ ಹಾಗೆಯೇ ಪ್ರಕಟಿಸತಕ್ಕದ್ದು.

**21. ಚುನಾವಣಾ ತಕರಾರು ಅರ್ಜಿಗಳು.–** (1) ಚುನಾವಣೆ ಫಲಿತಾಂಶವನ್ನು, ಘೋಷಣೆಯ ದಿನಾಂಕದಿಂದ ಹದಿನೈದು ದಿವಸಗಳೊಳಗಾಗಿ ಚುನಾವಣಾ ನ್ಯಾಯಾಧಿಕರಣಕ್ಕೆ ಚುನಾವಣಾ ಅರ್ಜಿಯನ್ನು ಸಲ್ಲಿಸುವ ಮೂಲಕವಲ್ಲದೇ ಕೌನ್ಸಿಲರನ ಯಾವುದೇ ಚುನಾವಣೆಯನ್ನು ಪ್ರಶ್ನಿಸತಕ್ಕದಲ್ಲ.

(2) 23ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ ಅಂಥ ಯಾವುದೇ ಚುನಾವಣೆಯನ್ನು ಪ್ರಶ್ನಿಸುವ ತಕರಾರು ಅಜಿಯನ್ನು,–

(ಕ) ಅಂಥ ಚುನಾವಣೆಯಲ್ಲಿನ ಯಾರೇ ಅಭ್ಯರ್ಥಿಯು, ಅಥವಾ

(ಖ) ಸಂಬಂಧಪಟ್ಟ ವಿಭಾಗದ ಯಾರೇ ಮತದಾರನು,

– ಸಲ್ಲಿಸಬಹುದು.

(3) ಅರ್ಜಿದಾರನು ಚುನಾವಣೆಯಲ್ಲಿನ ಎಲ್ಲಾ ಅಭ್ಯರ್ಥಿಗಳನ್ನು ತನ್ನ ಅರ್ಜಿಗೆ ಪ್ರತ್ಯರ್ಜಿದಾರರನ್ನಾಗಿ ಸೇರಿಸತಕ್ಕದ್ದು.

(4) ಚುನಾವಣಾ ಅರ್ಜಿಯು,–

(ಕ) ಯಾವ ಪ್ರಮುಖ ಸಂಗತಿಗಳ ಮೇಲೆ ಅರ್ಜಿದಾರನು ಆಧರಿಸಿರುತ್ತಾನೋ ಆ ಪ್ರಮುಖ ಸಂಗತಿಗಳ ಸಂಕ್ಷಿಪ್ತ ನಿರೂಪಣೆಯನ್ನು ಒಳಗೊಂಡಿರತಕ್ಕದ್ದು;

(ಖ) ಯಾವ ಕಾರಣ ಅಥವಾ ಕಾರಣಗಳ ಮೇಲೆ ಚುನಾವಣೆಯನ್ನು ಪ್ರಶ್ನಿಸಲಾಗಿದೆಯೋ ಆ ಕಾರಣ ಅಥವಾ ಕಾರಣಗಳನ್ನು ಸಾಕಷ್ಟು ವಿವರಣೆಗಳೊಂದಿಗೆ ನಿರೂಪಿಸತಕ್ಕದ್ದು;

(ಗ) ಅದಕ್ಕೆ ಅರ್ಜಿದಾರನು ರುಜು ಮಾಡತಕ್ಕದ್ದು ಮತ್ತು ವಾದ ಮತ್ತು ಪ್ರತಿವಾದ ಪತ್ರಗಳ ಸತ್ಯಾಪನೆಗಾಗಿ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಹೇಳಲಾದ ರೀತಿಯಲ್ಲಿ ಸತ್ಯಾಪಿಸತಕ್ಕದ್ದು.

**22. ಅರ್ಜಿದಾರನು ಕ್ಲೇಮು ಮಾಡಬಹುದಾದ ಪರಿಹಾರ.–** (1) ಅರ್ಜಿದಾರನು,–

(ಕ) ಚುನಾಯಿತರಾದ ಎಲ್ಲಾ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯು ಶೂನ್ಯವಾಗಿದೆ ಎಂಬ ಘೋಷಣೆಯನ್ನು; ಮತ್ತು

(ಖ) ತಾನೇ ಅಥವಾ ಯಾರೇ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿರುವುದಾಗಿ ಇನ್ನೂ ಹೆಚ್ಚಿನ ಘೋಷಣೆಯನ್ನು,

–ಕ್ಲೇಮು ಮಾಡಬಹುದು.

(2) 'ಚುನಾಯಿತನಾದ ಅಭ್ಯರ್ಥಿ' ಎಂಬ ಪದಾವಳಿಗೆ, ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸಲಾದ ಅಭ್ಯರ್ಥಿ ಎಂದು ಅರ್ಥ.

**23. ಚುನಾವಣೆಗಳು ಶೂನ್ಯವೆಂದು ಘೋಷಿಸುವುದಕ್ಕಾಗಿ ಆಧಾರಗಳು.–** (1) (2)ನೇ ಉಪ–ಪ್ರಕರಣದ ಉಪಬಂಧಗಳಿಗೊಳಪಟ್ಟು,–

(ಕ) ಅವನ ಚುನಾವಣೆಯ ದಿನಾಂಕದಂದು ಚುನಾಯಿತನಾದ ಅಭ್ಯರ್ಥಿಯು ಈ ಅಧಿನಿಯಮದ ಮೇರೆಗೆ ಕೌನ್ಸಿಲರನಾಗಿ ಆಯ್ಕೆ ಆಗುವುದಕ್ಕೆ ಅರ್ಹನಾಗಿರಲಿಲ್ಲವೆಂದು ಅಥವಾ ಅನರ್ಹಗೊಂಡಿದ್ದನೆಂದು; ಅಥವಾ

(ಖ) ಚುನಾಯಿತನಾದ ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಚುನಾಯಿತ ಅಭ್ಯರ್ಥಿಯ ಅಥವಾ ಅವನ ಏಜೆಂಟನ ಸಮ್ಮತಿಯಿಂದ ಇತರ ಯಾರೇ ವ್ಯಕ್ತಿಯು ಯಾವುದೇ ಭ್ರಷ್ಟಾಚಾರವನ್ನು ಮಾಡಿದ್ದಾನೆಂದು; ಅಥವಾ

(ಗ) ಯಾವುದೇ ನಾಮನಿರ್ದೇಶನ ಪತ್ರವನ್ನು ಅನುಚಿತವಾಗಿ ತಿರಸ್ಕರಿಸಲಾಗಿದೆ ಎಂದು; ಅಥವಾ

(ಘ) ಆ ಚುನಾವಣೆಯ ಫಲಿತಾಂಶವು ಚುನಾಯಿತನಾದ ಅಭ್ಯರ್ಥಿಗೆ ಸಂಬಂಧಪಟ್ಟಂತೆ,–

(i) ಯಾವುದೇ ನಾಮನಿರ್ದೇಶನವನ್ನು ಅನುಚಿತವಾಗಿ ಅಂಗೀಕರಿಸುವ ಮೂಲಕ;

(ii) ಚುನಾಯಿತನಾದ ಅಭ್ಯರ್ಥಿಯ ಹಿತಾಸಕ್ತಿಯಲ್ಲಿ ಏಜೆಂಟ್ ಅಥವಾ ಅಭ್ಯರ್ಥಿಯ ಸಮ್ಮತಿಯಿಂದ ಕಾರ್ಯನಿರ್ವಹಿಸುವ ಯಾರೇ ಇತರ ವ್ಯಕ್ತಿಯು ಮಾಡಿದ ಯಾವುದೇ ಭ್ರಷ್ಟಾಚಾರದಿಂದ;

(iii) ಯಾವುದೇ ಮತವನ್ನು ಅನುಚಿತವಾಗಿ ಅಂಗೀಕರಿಸುವುದು ಅಥವಾ ತಿರಸ್ಕರಿಸುವುದರಿಂದ ಅಥವಾ ಶೂನ್ಯವಾದ ಯಾವುದೇ ಮತವನ್ನು ಸ್ವೀಕರಿಸುವುದರಿಂದ; ಅಥವಾ

(iv) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಅಥವಾ ಮಾಡಿದ ಆದೇಶಗಳ ಉಪಬಂಧಗಳ ಅನುಪಾಲನೆಯಿಂದ ಮುಖ್ಯವಾಗಿ ಬಾಧಿತವಾಗಿದೆ ಎಂದು ಚುನಾವಣಾ ನ್ಯಾಯಾಧಿಕರಣವು ಅಭಿಪ್ರಾಯಪಟ್ಟರೆ,

–ಚುನಾವಣಾ ನ್ಯಾಯಾಧಿಕರಣವು, ಚುನಾಯಿತನಾದ ಅಭ್ಯರ್ಥಿಯ ಚುನಾವಣೆಯನ್ನು ಶೂನ್ಯವೆಂದು ಘೋಷಿಸತಕ್ಕದ್ದು.

(2) ಚುನಾವಣಾ ನ್ಯಾಯಾಧಿಕರಣದ ಅಭಿಪ್ರಾಯದಲ್ಲಿ ಚುನಾಯಿತನಾದ ಅಭ್ಯರ್ಥಿಯ ಯಾರೇ ಏಜೆಂಟನು ಯಾವುದೇ ಭ್ರಷ್ಟಾಚಾರದ ತಪ್ಪಿತಸ್ಥನಾಗಿದ್ದರೆ, ಆದರೆ,–

(ಕ) ಅಭ್ಯರ್ಥಿಯು ಚುನಾವಣೆಯಲ್ಲಿ ಅಂಥ ಯಾವುದೇ ಭ್ರಷ್ಟಾಚಾರವನ್ನು ಮಾಡಿಲ್ಲವೆಂದು ಮತ್ತು ಅಂಥ ಪ್ರತಿಯೊಂದು ಭ್ರಷ್ಟಾಚಾರವು ಆ ಅಭ್ಯರ್ಥಿಯ ಆದೇಶಗಳಿಗೆ ತದ್ವಿರುದ್ಧವಾಗಿ ಮತ್ತು ಆತನ ಸಮ್ಮತಿಯಿಲ್ಲದೆ ಮಾಡಲಾಯಿತೆಂದು;

(ಖ) ಆ ಅಭ್ಯರ್ಥಿಯು ಚುನಾವಣೆಯಲ್ಲಿ ಭ್ರಷ್ಟಾಚಾರಗಳನ್ನು ಮಾಡುವುದನ್ನು ತಡೆಗಟ್ಟಲು ಎಲ್ಲ ಯುಕ್ತ ಕ್ರಮಗಳನ್ನು ತೆಗೆದುಕೊಂಡಿದ್ದಾನೆಂದು; ಮತ್ತು

(ಗ) ಇತರ ಎಲ್ಲ ವಿಷಯಗಳಲ್ಲಿ ಚುನಾವಣೆಯ ಆ ಅಭ್ಯರ್ಥಿ ಅಥವಾ ಅವನ ಯಾರೇ ಏಜೆಂಟನ ಯಾವುದೇ ಭ್ರಷ್ಟಾಚಾರದಿಂದ ಮುಕ್ತವಾಗಿದ್ದಿತು ಎಂದು,

–ನ್ಯಾಯಾಧಿಕರಣಕ್ಕೆ ಮನದಟ್ಟಾದರೆ ಆಗ ನ್ಯಾಯಾಧಿಕರಣವು ಚುನಾಯಿತನಾದ ಅಭ್ಯರ್ಥಿಯ ಚುನಾವಣೆಯು ಶೂನ್ಯವಲ್ಲವೆಂದು ತೀರ್ಮಾನಿಸಬಹುದು.

**24. ಚುನಾವಣಾ ನ್ಯಾಯಾಧಿಕರಣವು ಅನುಸರಿಸಬೇಕಾದ ಪ್ರಕ್ರಿಯೆ.–** ಈ ಅಧಿನಿಯಮದ ಮೇರೆಗಿನ ಚುನಾವಣಾ ಅರ್ಜಿಯ ಅಧಿವಿಚಾರಣೆ ಮತ್ತು ಅದರ ವಿಲೆಯಲ್ಲಿ ದಾವೆಗಳಿಗೆ ಸಂಬಂಧಿಸಿದಂತೆ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯಲ್ಲಿ ಉಪಬಂಧಿಸಿರುವ ಪ್ರಕ್ರಿಯೆಯನ್ನು, ಅದನ್ನು ಅನ್ವಯ ಮಾಡಬಹುದಾದಷ್ಟರಮಟ್ಟಿಗೆ ಚುನಾವಣಾ ನ್ಯಾಯಾಧಿಕರಣವು ಅನುಸರಿಸತಕ್ಕದ್ದು.

**25. ಚುನಾವಣಾ ನ್ಯಾಯಾಧಿಕರಣದ ತೀರ್ಮಾನ.–** (1) ಚುನಾವಣಾ ಅರ್ಜಿಯ ಅಧಿವಿಚಾರಣೆಯ ಕೊನೆಯಲ್ಲಿ ಚುನಾವಣಾ ನ್ಯಾಯಾಧಿಕರಣವು,–

(ಕ) ಚುನಾವಣೆಯಲ್ಲಿ ಯಾರೇ ವ್ಯಕ್ತಿಯು, ಅವನ ಮತವನ್ನು ಕೊಡಲು ಮನವೊಲಿಸುವ; ಅಥವಾ

(ಖ) ಚುನಾಯಿತರಾದ ಎಲ್ಲ ಅಭ್ಯರ್ಥಿಗಳ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯು ಶೂನ್ಯವೆಂದು ಘೋಷಿಸುವ; ಅಥವಾ

(ಗ) ಚುನಾಯಿತರಾದ ಎಲ್ಲ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯು ಶೂನ್ಯವಾದುದೆಂದು ಮತ್ತು ಅರ್ಜಿದಾರ ಅಥವಾ ಇತರ ಯಾರೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸುವ

–ಆದೇಶವನ್ನು ಮಾಡತಕ್ಕದ್ದು.

(2) ಚುನಾವಣಾ ಅರ್ಜಿಯನ್ನು ಸಲ್ಲಿಸಿರುವ ಯಾರೇ ವ್ಯಕ್ತಿಯು ಚುನಾಯಿತನಾದ ಅಭ್ಯರ್ಥಿಯ ಚುನಾವಣೆಯನ್ನು ಪ್ರಶ್ನಿಸುವುದರ ಜೊತೆಗೆ ತಾನೇ ಅಥವಾ ಇತರ ಯಾರೇ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂಬ ಘೋಷಣೆಯನ್ನು ಕ್ಲೇಮು ಮಾಡಿದ್ದರೆ ಮತ್ತು ಚುನಾವಣೆ ನ್ಯಾಯಾಧಿಕರಣವು,–

(ಕ) ವಾಸ್ತವವಾಗಿ ಅರ್ಜಿದಾರ ಅಥವಾ ಅಂಥ ಇತರ ಅಭ್ಯರ್ಥಿಯು ಸಿಂಧುವಾದ ಮತಗಳಲ್ಲಿ ಬಹುಮತವನ್ನು ಪಡೆದಿದ್ದಾನೆಂದು; ಅಥವಾ

(ಖ) ಚುನಾಯಿತ ಅಭ್ಯರ್ಥಿಯು ಭ್ರಷ್ಟಾಚಾರ ಅಥವಾ ಕಾನೂನುಬಾಹಿರ ಆಚರಣೆಗಳ ಮೂಲಕ ಮತಗಳನ್ನು ಪಡೆದುಕೊಳ್ಳದೆ ಇದ್ದಲ್ಲಿ ಅರ್ಜಿದಾರ ಅಥವಾ ಇತರ ಅಭ್ಯರ್ಥಿಯು ಸಿಂಧುವಾದ ಮತಗಳ ಬಹುಮತವನ್ನು ಪಡೆಯುತ್ತಿದ್ದಾನೆಂದು ಅಭಿಪ್ರಾಯಪಟ್ಟರೆ,

–ಆ ನ್ಯಾಯಧಿಕರಣ ಚುನಾಯಿತ ಅಭ್ಯರ್ಥಿಯ ಚುನಾವಣೆಯು ಶೂನ್ಯವೆಂದು ಘೋಷಿಸಿದ ತರುವಾಯ ಸಂದರ್ಭಾನುಸಾರ ಅರ್ಜಿದಾರ ಅಥವಾ ಅಂಥ ಇತರ ಅಭ್ಯರ್ಥಿಯು ಕ್ರಮಬದ್ಧವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸತಕ್ಕದ್ದು.

**26. ಮತಗಳ ಸಮಾನತೆಯ ಸಂದರ್ಭದಲ್ಲಿ ಪ್ರಕ್ರಿಯೆ.–** ಚುನಾವಣಾ ಅರ್ಜಿಯ ಅಧಿವಿಚಾರಣೆಯಲ್ಲಿ ಚುನಾವಣೆಯಲ್ಲಿನ ಯಾರೇ ಅಭ್ಯರ್ಥಿಗಳ ನಡುವೆ ಮತಗಳ ಸಮಾನತೆ ಇರುವುದಾಗಿ ಕಂಡುಬಂದರೆ ಮತ್ತು ಒಂದು ಮತವನ್ನು ಸೇರಿಸುವುದರಿಂದ ಆ ಅಭ್ಯರ್ಥಿಗಳ ಪೈಕಿ ಯಾರೇ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸಿಕೊಳ್ಳಲು ಹಕ್ಕನ್ನು ಉಂಟು ಮಾಡುವುದಾದರೆ ಆಗ ಚುನಾವಣಾ ನ್ಯಾಯಾಧಿಕರಣವು, ಆ ಇಬ್ಬರ ನಡುವೆ ಚೀಟಿ ಎತ್ತುವ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಚೀಟಿ ಎತ್ತಿದಾಗ ಯಾರ ಹೆಸರು ಬರುತ್ತದೋ ಅವನು ಹೆಚ್ಚಿನ ಮತವನ್ನು ಪಡೆದಿದ್ದ ಹಾಗೆ ಭಾವಿಸಿ ಮುಂದುವರೆಯತಕ್ಕದ್ದು.

**27. ಅಪೀಲು.–** 25ನೇ ಪ್ರಕರಣದ ಮೇರೆಗೆ ಚುನಾವಣಾ ನ್ಯಾಯಾಧಿಕರಣವು ಮಾಡಿದ ಆದೇಶದಿಂದ ಉಚ್ಚ ನ್ಯಾಯಾಲಯಕ್ಕೆ, ಆ ಆದೇಶದ ಪ್ರತಿಯನ್ನು ಪಡೆದುಕೊಳ್ಳಲು ಅಗತ್ಯವಾದ ಕಾಲವನ್ನು ಹೊರತುಪಡಿಸಿ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಒಳಗಾಗಿ ಅಪೀಲನ್ನು ಹೂಡಲು ಅವಕಾಶವಿರತಕ್ಕದ್ದು ಮತ್ತು ಅಂಥ ಅಪೀಲಿನ ಮೇಲೆ ಉಚ್ಚ ನ್ಯಾಯಾಲಯದ ತೀರ್ಮಾನವು ಅಂತಿಮ ಮತ್ತು ನಿರ್ಣಾಯಕವಾಗಿರತಕ್ಕದ್ದು.

**28. ಪ್ರಶ್ನಿಸಿದ ಹೊರತು ಚುನಾವಣೆಯು ಸಿಂಧುವಾಗಿರತಕ್ಕದ್ದು.–** ಹಿಂದೆ ಹೇಳಿದ ಉಪಬಂಧಗಳಿಗೆ ಅನುಸಾರವಾಗಿ ಪ್ರಶ್ನಿತವಾಗದ ಕೌನ್ಸಿಲರನ ಚುನಾವಣೆಯು ಸರಿಯಾದ ಮತ್ತು ಸಿಂಧುವಾದ ಚುನಾವಣೆಯೆಂದು ಭಾವಿಸತಕ್ಕದ್ದು.

**29. ಭ್ರಷ್ಟಾಚಾರಗಳು.–** ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಕೆಳಕಂಡವುಗಳನ್ನು ಭ್ರಷ್ಟಾಚಾರಗಳೆಂದು ಭಾವಿಸತಕ್ಕದ್ದು,–

(1) **"ಲಂಚಗುಳಿತನ"** ತತ್ಕಾಲದಲ್ಲಿ ಜಾರಿಯಲ್ಲಿರುವ 1951ರ ಜನತಾ ಪ್ರಾತಿನಿಧ್ಯ ಅಧಿನಿಯಮ, (1951ರ ಕೇಂದ್ರ ಅಧಿನಿಯಮ XLIII)ದ 123ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಿರುವಂತೆ ಲಂಚಗುಳಿತನ;

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಸದರಿ ಪ್ರಕರಣದ (2)ನೇ ಖಂಡದಲ್ಲಿ ಪರಿಭಾಷಿಸಿರುವಂತೆ **"ಅನುಚಿತ ಪ್ರಭಾವ"**;

(3) ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಇತರ ಯಾರೇ ವ್ಯಕ್ತಿಯು ಜಾತಿ, ಮೂಲವಂಶ, ಕೋಮು ಅಥವಾ ಧರ್ಮದ ಆಧಾರದ ಮೇಲೆ ಮತ ನೀಡುವಂತೆ ಅಥವಾ ಮತ ನೀಡದಿರುವಂತೆ ವ್ಯವಸ್ಥಿತವಾಗಿ ವಿನಂತಿಸಿಕೊಳ್ಳುವುದು ಅಥವಾ ಆ ಅಭ್ಯರ್ಥಿಯ ಚುನಾವಣಾ ಭವಿತವ್ಯದ ಮುಂದುವರಿಕೆಗಾಗಿ ಧಾರ್ಮಿಕ ಚಿಹ್ನೆಗಳನ್ನು ಉಪಯೋಗಿಸಿಕೊಳ್ಳುವುದು ಅಥವಾ ವಿನಂತಿಸಿಕೊಳ್ಳುವುದು

ರಾಷ್ಟ್ರ ಧ್ವಜ ಅಥವಾ ರಾಷ್ಟ್ರ ಲಾಂಛನದ ರಾಷ್ಟ್ರೀಯ ಚಿಹ್ನೆಗಳನ್ನು ಉಪಯೋಗಿಸಿಕೊಳ್ಳುವುದು ಅಥವಾ ಅವುಗಳಿಗಾಗಿ ವಿನಂತಿಸಿಕೊಳ್ಳುವುದು;

(4) ಯಾರೇ ಅಭ್ಯರ್ಥಿ ಅಥವಾ ಅವನ ಏಜೆಂಟನು ಅಥವಾ ಇತರ ಯಾರೇ ವ್ಯಕ್ತಿಯು ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯ ಅಥವಾ ವರ್ತನೆಗೆ ಸಂಬಂಧಪಟ್ಟಂತೆ ಅಥವಾ ಉಮೇದುವಾರಿಕೆಗೆ ಯಾರೇ ಅಭ್ಯರ್ಥಿಯ ಉಮೇದುವಾರಿಕೆ ಅಥವಾ ಸ್ಪರ್ಧೆಯಿಂದ ಹಿಂತೆಗೆದುಕೊಳ್ಳುವಿಕೆಗೆ ಸಂಬಂಧಪಟ್ಟಂತೆ ಅಭ್ಯರ್ಥಿಯ ಭವಿತವ್ಯಕ್ಕೆ ಪ್ರತಿಕೂಲವನ್ನುಂಟು ಮಾಡಲು ಯುಕ್ತವಾಗಿ ಉದ್ದೇಶಿಸಿದ ಹೇಳಿಕೆಯಾಗಿರುವ ಸುಳ್ಳಾದಂಥ ಮತ್ತು ಸುಳ್ಳೆಂದು ಅವನು ನಂಬುವ ಅಥವಾ ಸತ್ಯವೆಂದು ನಂಬದಂಥ ಸಂಗತಿಯ ಯಾವುದೇ ಹೇಳಿಕೆಯನ್ನು ಪ್ರಕಟಿಸುವುದು;

(5) ಅಭ್ಯರ್ಥಿ ಅಥವಾ ಅವನು ಏಜೆಂಟನು ಅಥವಾ ಇತರ ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳಿಗನುಸಾರವಾಗಿ (ಸ್ವತಃ ಅಭ್ಯರ್ಥಿ ಮತ್ತು ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟನು–ಇವರನ್ನು ಹೊರತುಪಡಿಸಿ) ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಮತದಾನ ಕೇಂದ್ರದಿಂದ ಯಾರೇ ಮತದಾರನ ವಾಹನಕ್ಕಾಗಿ ಸಂದಾಯದ ಮೇಲೆ ಅಥವಾ ಅನ್ಯಥಾ ಯಾವುದೇ ವಾಹನ ಅಥವಾ ನೌಕೆಯನ್ನು ಬಾಡಿಗೆಗೆ ಪಡೆಯುವುದು ಅಥವಾ ಒದಗಿಸುವುದು:

ಪರಂತು, ಮತದಾರ ಅವನ ಖರ್ಚಿನಲ್ಲಿ ಅಥವಾ ಅನೇಕ ಮತದಾರರು ಅವರ ಜಂಟಿ ಖರ್ಚಿನಲ್ಲಿ ಯಾವುದೇ ಅಂಥ ಮತದಾನ ಕೇಂದ್ರಕ್ಕೆ ಅಥವಾ ಅಲ್ಲಿಂದ ಅವನು ಅಥವಾ ಅವರ ವಹನೋದ್ದೇಶಕ್ಕಾಗಿ ವಾಹನವನ್ನು ಅಥವಾ ನೌಕೆಯನ್ನು ಬಾಡಿಗೆಗೆ ಪಡೆಯುವುದು, ಹಾಗೆ ಬಾಡಿಗೆಗೆ ಪಡೆದುಕೊಂಡ ವಾಹನ ಅಥವಾ ನೌಕೆಯು ಯಂತ್ರಶಕ್ತಿಯಿಂದ ಚಾಲಿತ ವಾಹನ ಅಥವಾ ನೌಕೆಯಾಗಿದ್ದರೆ ಈ ಖಂಡದ ಮೇರೆಗೆ ಭ್ರಷ್ಟಾಚಾರವೆಂದು ಭಾವಿಸತಕ್ಕದ್ದಲ್ಲ;

ಮತ್ತೂ ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಹೋಗುವ ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಮತದಾರನು ತನ್ನ ಸ್ವಂತ ಖರ್ಚಿನಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ ವಾಹನ ಅಥವಾ ನೌಕೆ ಅಥವಾ ಯಾವುದೇ ರೈಲ್ವೆ ಭೋಗಿಯನ್ನು ಉಪಯೋಗಿಸುವುದನ್ನು ಈ ಖಂಡದ ಮೇರೆಗೆ ಭ್ರಷ್ಟಚಾರವೆಂದು ಭಾವಿಸತಕ್ಕದ್ದಲ್ಲ:

**ವಿವರಣೆ:–** ಈ ಖಂಡದಲ್ಲಿ "ವಾಹನ" ಎಂಬ ಪದಕ್ಕೆ ಯಂತ್ರಶಕ್ತಿಯಿಂದ ಅಥವಾ ಅನ್ಯಥಾ ಚಲಿಸುವ ಮತ್ತು ಬೇರೆ ವಾಹನಗಳನ್ನು ಎಳೆಯಲು ಅಥವಾ ಅನ್ಯಥಾ ಉಪಯೋಗಿಸುವ, ರಸ್ತೆ ಸಾಗಣೆ ಉದ್ದೇಶಕ್ಕಾಗಿ ಉಪಯೋಗಿಸುವ ಅಥವಾ ಉಪಯೋಗಿಸಲು ಸಮರ್ಥವಾಗಿರುವ ಯಾವುದೇ ವಾಹನ ಎಂದು ಅರ್ಥ.

(6) ಮಾದಕ ಪೇಯಗಳನ್ನು ಒದಗಿಸುವ ಯಾವುದೇ ಸಭೆಯನ್ನು ನಡೆಸುವುದು;

(7) ಅದರ ಮುದ್ರಕನ ಮತ್ತು ಪ್ರಕಾಶಕನ ಹೆಸರು ಮತ್ತು ವಿಳಾಸವನ್ನು ಹೊಂದಿರದಂಥ ಚುನಾವಣೆಗೆ ಉಲ್ಲೇಖವನ್ನು ಹೊಂದಿರುವ ಯಾವುದೇ ಸುತ್ತೋಲೆ, ಪ್ರಕಟಣಾ ಪತ್ರ ಅಥವಾ ಭಿತ್ತಿ ಪತ್ರವನ್ನು ಹೊರಡಿಸುವುದು;

(8) ಸರ್ಕಾರವು ನಿಯಮಗಳ ಮೂಲಕ ಭ್ರಷ್ಟಾಚಾರ ಎಂದು ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಆಚರಣೆ.

**30. ಮತದಾನದ ರಹಸ್ಯ ಪಾಲನೆ.–** (1) ಚುನಾವಣೆಯಲ್ಲಿ ಮತಗಳ ದಾಖಲಾತಿ ಅಥವಾ ಎಣಿಕೆಗೆ ಸಂಬಂಧಪಟ್ಟಂತೆ ಯಾವುದೇ ಕರ್ತವ್ಯವನ್ನು ನೆರವೇರಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಕಾಪಾಡುವಲ್ಲಿ ನೆರವಾಗತಕ್ಕದ್ದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕೃತವಾದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಉಲ್ಲಂಘಿಸುವ ಉದ್ದೇಶದಿಂದ ಯಾರೇ ವ್ಯಕ್ತಿಗೆ ಯಾವುದೇ ಮಾಹಿತಿಯನ್ನು ತಿಳಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

**31. ಚುನಾವಣೆಗಳಲ್ಲಿ ಅಧಿಕಾರಿಗಳು ಮೊದಲಾದವರು ಅಭ್ಯರ್ಥಿಗಳಿಗಾಗಿ ಕೆಲಸ ಮಾಡತಕ್ಕದಲ್ಲ ಅಥವಾ ಮತದಾನ ಮಾಡಲು ಪ್ರಭಾವ ಬೀರತಕ್ಕದ್ದಲ್ಲ.–** (1) ಚುನಾವಣೆಯಲ್ಲಿ ಚುನಾವಣಾಧಿಕಾರಿ, ಅಥವಾ ಸಹಾಯಕ ಚುನಾವಣಾಧಿಕಾರಿ ಅಥವಾ ಅಧ್ಯಕ್ಷಾಧಿಕಾರಿ ಅಥವಾ ಮತದಾನ ಅಧಿಕಾರಿಯಾಗಿರುವ ಯಾರೇ ವ್ಯಕ್ತಿಯು ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ಚುನಾವಣಾಧಿಕಾರಿ ಅಥವಾ ಅಧ್ಯಕ್ಷಾಧಿಕಾರಿಯಿಂದ ನೇಮಕಗೊಂಡ ಅಧಿಕಾರಿ ಅಥವಾ ಗುಮಾಸ್ತನು ಆ ಚುನಾವಣೆಯನ್ನು ನಡೆಸುವಲ್ಲಿ ಅಥವಾ ಅದರ ವ್ಯವಸ್ಥಾಪನೆಯಲ್ಲಿ ಅಭ್ಯರ್ಥಿಯ ಚುನಾವಣೆಯ ಭವಿತವ್ಯದ ವರ್ಧನೆಗಾಗಿ ಯಾವುದೇ ಕಾರ್ಯವನ್ನು (ಮತಕೊಡುವುದನ್ನು ಹೊರತುಪಡಿಸಿ) ಮಾಡತಕ್ಕದ್ದಲ್ಲ.

(2) ಹಿಂದೆ ಹೇಳಿದಂಥ ಯಾರೇ ವ್ಯಕ್ತಿ ಮತ್ತು ಪೊಲೀಸ್ ದಳದ ಯಾರೇ ಸದಸ್ಯನು,–

(ಕ) ಚುನಾವಣೆಯಲ್ಲಿ ತನ್ನ ಮತವನ್ನು ಕೊಡಲು ಯಾರೇ ವ್ಯಕ್ತಿಯ ಮನವೊಲಿಸಲು; ಅಥವಾ

(ಖ) ಚುನಾವಣೆಯಲ್ಲಿ ತನ್ನ ಮತವನ್ನು ಕೊಡುವುದರಿಂದ ಯಾರೇ ವ್ಯಕ್ತಿಯನ್ನು ವಿಮುಖಗೊಳಿಸಲು; ಅಥವಾ

(ಗ) ಚುನಾವಣೆಯಲ್ಲಿ ಯಾರೇ ವ್ಯಕ್ತಿಯ ಮತ ನೀಡಿಕೆಯಲ್ಲಿ ಯಾವುದೇ ರೀತಿಯಲ್ಲಿ ಪ್ರಭಾವ ಬೀರಲು,

–ಪ್ರಯತ್ನಿಸತಕ್ಕದ್ದಲ್ಲ.

(3) (1)ನೇ ಉಪ–ಪ್ರಕರಣ ಅಥವಾ (2)ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**32. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರದಲ್ಲಿ ಪ್ರಚಾರದ ನಿಷೇಧ.–** (1) ಯಾರೇ ವ್ಯಕ್ತಿಯು, ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳಲ್ಲಿ ಆ ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದಿಂದ ಒಂದು ನೂರು ಗಜಗಳ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಈ ಕೆಳಕಂಡ ಯಾವುದೇ ಕಾರ್ಯವನ್ನು ಮಾಡತಕ್ಕದಲ್ಲ; ಎಂದರೆ,–

(ಕ) ಮತಗಳಿಗಾಗಿ ಪ್ರಚಾರ ಮಾಡುವುದು; ಅಥವಾ

(ಖ) ಯಾರೇ ಮತದಾರನ ಮತವನ್ನು ಯಾಚಿಸುವುದು; ಅಥವಾ

(ಗ) ಯಾರೇ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡದಿರುವಂತೆ ಯಾರೇ ಮತದಾರನನ್ನು ಮನವೊಲಿಸುವುದು; ಅಥವಾ

(ಘ) ಚುನಾವಣೆಯಲ್ಲಿ ಮತ ನೀಡದಿರಲು ಯಾರೇ ಮತದಾರನನ್ನು ಮನವೊಲಿಸುವುದು; ಅಥವಾ

(ಙ) ಚುನಾವಣೆಗೆ ಸಂಬಂಧಪಟ್ಟ ಯಾವುದೇ ಸೂಚನೆ ಅಥವಾ ಚಿಹ್ನೆಯನ್ನು (ಸರ್ಕಾರೀ ನೋಟೀಸನ್ನು ಹೊರತುಪಡಿಸಿ) ಪ್ರದರ್ಶಿಸುವುದು.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**33. ಮತದಾನ ಕೇಂದ್ರಗಳ ಒಳಗೆ ಅಥವಾ ಅವುಗಳ ಹತ್ತಿರ ಅವ್ಯವಸ್ಥಿತ ವರ್ತನೆಗಾಗಿ ದಂಡನೆ.–** (1) ಯಾರೇ ವ್ಯಕ್ತಿಯು ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳಲ್ಲಿ ಮತದಾನ ಕೇಂದ್ರಕ್ಕೆ ಮತದಾನ ಮಾಡಲು ಭೇಟಿ ಕೊಡುವ ಯಾರೇ ವ್ಯಕ್ತಿಗೆ ಕಿರುಕುಳವುಂಟು ಮಾಡುವಂತೆ ಅಥವಾ ಮತದಾನ ಕೇಂದ್ರದಲ್ಲಿ ಕರ್ತವ್ಯನಿರತರಾದ ಅಧಿಕಾರಿ ಅಥವಾ ವ್ಯಕ್ತಿಗಳ ಕೆಲಸದಲ್ಲಿ ಹಸ್ತಕ್ಷೇಪ ಮಾಡುವ ಹಾಗೆ,–

(ಕ) ಮತದಾನ ಕೇಂದ್ರದ ಒಳಗೆ ಅಥವಾ ಮತದಾನ ಕೇಂದ್ರದ ಪ್ರವೇಶದಲ್ಲಿ ಅಥವಾ ಅದರ ನೆರೆಹೊರೆಯಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮನುಷ್ಯನ ಧ್ವನಿಯನ್ನು ಹೆಚ್ಚು ಮಾಡುವ ಅಥವಾ ಪುನರುತ್ಪಾದನೆ ಮಾಡುವುದಕ್ಕಾಗಿ ಮೆಗಾ ಫೋನ್ ಅಥವಾ ಧ್ವನಿವರ್ಧಕಗಳಂಥ ಯಾವುವೇ ಉಪಕರಣಗಳನ್ನು ಉಪಯೋಗಿಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ; ಅಥವಾ

(ಖ) ಮತದಾನ ಕೇಂದ್ರದ ಒಳಗೆ ಅಥವಾ ಅದರ ಪ್ರವೇಶದಲ್ಲಿ ಅಥವಾ ಅದರ ನೆರೆಹೊರೆಯಲ್ಲಿ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೂಗಾಡತಕದ್ದಲ್ಲ ಅಥವಾ ಅನ್ಯಥಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘನೆಗೆ ಇಚ್ಛಾಪೂರ್ವಕವಾಗಿ ನೆರವು ನೀಡುವ ಅಥವಾ ದುಷ್ಪ್ರೇರಿಸುವ ಯಾರೇ ವ್ಯಕ್ತಿಯು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿನಾಗತಕ್ಕದ್ದು.

(3) ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡುತ್ತಿದ್ದಾನೆಂದು ಅಥವಾ ಮಾಡಿದ್ದಾನೆಂದು ಮತದಾನ ಕೇಂದ್ರದ ಅಧ್ಯಕ್ಷಾಧಿಕಾರಿಗೆ ನಂಬಲು ಕಾರಣವಿದ್ದರೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಯಾರೇ ಪೊಲೀಸ್ ಅಧಿಕಾರಿಗೆ ಅವನು ನಿರ್ದೇಶಿಸಬಹುದು ಮತ್ತು ಆ ತರುವಾಯ ಪೊಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕದ್ದು.

(4) ಯಾರೇ ಪೊಲೀಸ್ ಅಧಿಕಾರಿಯು, (1)ನೇ ಉಪ-ಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಕೊಳ್ಳಬಹುದು ಮತ್ತು ಅಂಥ ಬಲವನ್ನು ಉಪಯೋಗಿಸಬಹುದು ಮತ್ತು ಅಂಥ ಉಲ್ಲಂಘನೆಗಾಗಿ ಉಪಯೋಗಿಸಿದ ಯಾವುದೇ ಉಪಕರಣಗಳನ್ನು ಅಭಿಗ್ರಹಿಸಬಹುದು.

**34. ಮತದಾನ ಕೇಂದ್ರದಲ್ಲಿ ದುರ್ವರ್ತನೆಗಾಗಿ ದಂಡನೆ.–** (1) ಯಾರೇ ವ್ಯಕ್ತಿಯು ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕೆ ನಿಗದಿಪಡಿಸಲಾದ ವೇಳೆಗಳಲ್ಲಿ ತಾನು ದುರ್ವರ್ತನೆಯಿಂದ ನಡೆದುಕೊಂಡರೆ ಅಥವಾ ಅಧ್ಯಕ್ಷಾಧಿಕಾರಿಯ ಕಾನೂನುಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪಿದರೆ ಅಧ್ಯಕ್ಷಾಧಿಕಾರಿ ಅಥವಾ ಕರ್ತವ್ಯದ ಮೇಲಿರುವ ಯಾರೇ ಪೊಲೀಸ್ ಅಧಿಕಾರಿ ಅಥವಾ ಅಂಥ ಅಧ್ಯಕ್ಷ ಅಧಿಕಾರಿಯಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯು ಅವನನ್ನು ಮತದಾನ ಕೇಂದ್ರದಿಂದ ತೆಗೆದುಹಾಕಬಹುದು.

(2) (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು, ಮತದಾನ ಕೇಂದ್ರದಲ್ಲಿ ಮತದಾನ ಮಾಡಲು ಅನ್ಯಥಾ ಹಕ್ಕುಳ್ಳ ಯಾರೇ ಮತದಾರನನ್ನು ಆ ಕೇಂದ್ರದಲ್ಲಿ ಮತದಾನದ ಅವಕಾಶ ಹೊಂದಿರುವುದನ್ನು ತಡೆಗಟ್ಟುವ ಹಾಗೆ ಚಲಾಯಿಸತಕ್ಕದ್ದಲ್ಲ.

(3) ಮತದಾನ ಕೇಂದ್ರದಿಂದ ಹಾಗೆ ತೆಗೆದು ಹಾಕಲಾದ ಯಾರೇ ವ್ಯಕ್ತಿಯು, ಅಧ್ಯಕ್ಷಾಧಿಕಾರಿಯ ಅನುಮತಿಯಿಲ್ಲದೆ ಮತದಾನ ಕೇಂದ್ರವನ್ನು ಪುನಃ ಪ್ರವೇಶಿಸಿದರೆ ಅವನು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) (3)ನೇ ಉಪ-ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**35. ಚುನಾವಣೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕರ್ತವ್ಯದ ಉಲ್ಲಂಘನೆಗಳು.–** (1) ಈ ಪ್ರಕರಣವು ಅನ್ವಯವಾಗುವ ಯಾರೇ ವ್ಯಕ್ತಿಯು ಯುಕ್ತ ಕಾರಣವಿಲ್ಲದೆ ಅವನ ಸರ್ಕಾರಿ ಕರ್ತವ್ಯದ ಉಲ್ಲಂಘನೆಯಲ್ಲಿ ಯಾವುದೇ ಕೃತ್ಯ ಅಥವಾ ಲೋಪದ ತಪ್ಪಿತಸ್ಥನಾದರೆ, ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಹಿಂದೆ ಹೇಳಿದ ಯಾವುದೇ ಅಂಥ ಕಾರ್ಯ ಅಥವಾ ಲೋಪಕ್ಕೆ ಸಂಬಂಧಿಸಿದಂತೆ ಹಾನಿಪರಿಹಾರಕ್ಕಾಗಿ ಅಂಥ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(3) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳು, ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು, ಅಧ್ಯಕ್ಷಾಧಿಕಾರಿಗಳು, ಮತದಾನ ಅಧಿಕಾರಿಗಳು ಮತ್ತು ಚುನಾವಣೆಯಲ್ಲಿ ನಾಮಪತ್ರಗಳನ್ನು ಸ್ವೀಕರಿಸುವ ಅಥವಾ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಅಥವಾ ಮತಗಳನ್ನು ದಾಖಲು ಮಾಡುವ ಅಥವಾ ಎಣಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡ ಯಾರೇ ಇತರ ವ್ಯಕ್ತಿ ಆಗಿರುತ್ತಾರೆ ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ "ಸರ್ಕಾರಿ ಕರ್ತವ್ಯ' ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು ಆದರೆ ಅದು ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಲ್ಲದೆ ಅನ್ಯಥಾ ವಿಧಿಸಿದ ಕರ್ತವ್ಯಗಳನ್ನು ಒಳಗೊಳ್ಳತಕ್ಕದ್ದಲ್ಲ.

**36. ಮತಪತ್ರಗಳನ್ನು ಮತದಾನ ಕೇಂದ್ರದಿಂದ ತೆಗೆದುಕೊಂಡು ಹೋಗುವುದು ಅಪರಾಧವಾಗತಕ್ಕದ್ದು.–** (1) ಯಾವುದೇ ಚುನಾವಣೆಯಲ್ಲಿ ಯಾರೇ ವ್ಯಕ್ತಿಯು ಮತದಾನ ಕೇಂದ್ರದಿಂದ ಹೊರಕ್ಕೆ ಮತಪತ್ರವನ್ನು ಮೋಸದಿಂದ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ನೆರವು ನೀಡಿದರೆ ಅಥವಾ ದುಷ್ಪ್ರೇರಿಸಿದರೆ ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯವರೆಗೆ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ದಂಡನೀಯವಾಗುವ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡುತ್ತಿದ್ದಾನೆ ಎಂದು ಅಥವಾ ಮಾಡಿದ್ದಾನೆ ಎಂದು ಮತದಾನ ಕೇಂದ್ರದ ಅಧ್ಯಕ್ಷಾಧಿಕಾರಿಗೆ ನಂಬಲು ಕಾರಣವಿದ್ದರೆ ಅಂಥ ಅಧಿಕಾರಿಯು ಅಂಥ ವ್ಯಕ್ತಿಯು ಮತದಾನ ಕೇಂದ್ರವನ್ನು ಬಿಟ್ಟು ಹೋಗುವ ಮುಂಚೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ಪೊಲೀಸ್ ಅಧಿಕಾರಿಗೆ ದಸ್ತಗಿರಿ ಮಾಡುವಂತೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯ ಶೋಧನೆಯನ್ನು ಮಾಡಬಹುದು ಅಥವಾ ಪೊಲೀಸ್ ಅಧಿಕಾರಿಯು ಅವನನ್ನು ಶೋಧಿಸುವಂತೆ ಮಾಡಬಹುದು:

ಪರಂತು, ಮಹಿಳೆಯನ್ನು ಶೋಧನೆ ಮಾಡಿಸುವುದು ಅವಶ್ಯವಾದಾಗ ಆ ಶೋಧನೆಯನ್ನು ಮತ್ತೊಬ್ಬ ಮಹಿಳೆಯಿಂದ ಸಭ್ಯತೆಗೆ ಕಟ್ಟುನಿಟ್ಟಾದ ಗಮನ ನೀಡಿ ಮಾಡಿಸತಕ್ಕದ್ದು.

(3) ದಸ್ತಗಿರಿಯಾದ ವ್ಯಕ್ತಿಯ ಬಳಿ ಶೋಧನೆ ಮಾಡಿದಾಗ ಕಂಡುಬಂದ ಯಾವುದೇ ಮತಪತ್ರವನ್ನು ಆ ಅಧ್ಯಕ್ಷಾಧಿಕಾರಿಯು ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿದಾಗ ಅದನ್ನು ಅಂಥ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

(4) (1)ನೇ ಉಪ–ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**37. ಇತರ ಅಪರಾಧಗಳು ಮತ್ತು ಅವುಗಳಿಗೆ ದಂಡನೆಗಳು.–** (1) ಯಾರೇ ವ್ಯಕ್ತಿಯು ಯಾವುದೇ ಚುನಾವಣೆಯಲ್ಲಿ,–

(ಕ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಖ) ಚುನಾವಣಾಧಿಕಾರಿಯ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿ, ನೋಟೀಸು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

(ಗ) ಯಾವುದೇ ಮತಪತ್ರ ಅಥವಾ ಯಾವುದೇ ಮತಪತ್ರದ ಮೇಲಿನ ಅಧಿಕೃತ ಗುರುತನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

(ಘ) ಸೂಕ್ತ ಅಧಿಕಾರವಿಲ್ಲದೆ ಯಾರೇ ವ್ಯಕ್ತಿಗೆ ಯಾವುದೇ ಮತಪತ್ರವನ್ನು ಒದಗಿಸಿದರೆ ಅಥವಾ ಯಾರೇ ವ್ಯಕ್ತಿಯಿಂದ ಯಾವುದೇ ಮತಪತ್ರವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರವನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ; ಅಥವಾ

(ಙ) ಯಾವ ಮತಪತ್ರವನ್ನು ಒಳಕ್ಕೆ ಹಾಕಲು ಅವನನ್ನು ಕಾನೂನು ಮೂಲಕ ಅಧಿಕೃತಗೊಳಿಸಲಾಗಿದೆಯೋ, ಆ ಮತಪತ್ರವನ್ನಲ್ಲದೆ ಬೇರೆ ಏನನ್ನಾದರೂ ಯಾವುದೇ ಮತಪೆಟ್ಟಿಗೆಯೊಳಕ್ಕೆ ಮೋಸದಿಂದ ಹಾಕಿದರೆ; ಅಥವಾ

(ಚ) ಯುಕ್ತ ಅಧಿಕಾರವಿಲ್ಲದೆ ಚುನಾವಣಾ ಉದ್ದೇಶಗಳಿಗಾಗಿ ಆಗ ಉಪಯೋಗದಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು ನಾಶಗೊಳಿಸಿದರೆ, ತೆಗೆದುಕೊಂಡು ಹೋದರೆ, ತೆರೆದರೆ ಅಥವಾ ಅನ್ಯಥಾ ಹಸ್ತಕ್ಷೇಪ ಮಾಡಿದರೆ; ಅಥವಾ

(ಛ) ಸಂದರ್ಭಾನುಸಾರ, ಮೋಸದಿಂದ ಅಥವಾ ಸೂಕ್ತ ಅಧಿಕಾರವಿಲ್ಲದೆ ಮೇಲೆ ಹೇಳಿದ ಕಾರ್ಯಗಳಲ್ಲಿ ಯಾವುದನ್ನಾದರೂ ಮಾಡಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯಗಳನ್ನು ಮಾಡಲು ಉದ್ದೇಶಪೂರ್ವಕವಾಗಿ ನೆರವು ನೀಡಿದರೆ ಅಥವಾ ದುಷ್ಪ್ರೇರಿಸಿದರೆ ಅವನು ಚುನಾವಣಾ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಚುನಾವಣಾ ಅಪರಾಧದ ತಪ್ಪಿತಸ್ಥನಾದ ಯಾರೇ ವ್ಯಕ್ತಿಯು,–

(ಕ) ಅವನು ಮತದಾನ ಕೇಂದ್ರದಲ್ಲಿ ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಧಿಕಾರಿ ಅಥವಾ ಅಧ್ಯಕ್ಷಾಧಿಕಾರಿ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ಸರ್ಕಾರಿ ಕರ್ತವ್ಯದ ಮೇಲೆ ನಿಯೋಜಿತನಾದ ಯಾರೇ ಇತರ ಅಧಿಕಾರಿ ಅಥವಾ ಗುಮಾಸ್ತನಾಗಿದ್ದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು;

(ಖ) ಅವನು ಇತರ ಯಾರೇ ವ್ಯಕ್ತಿಯಾಗಿದ್ದರೆ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ ವ್ಯಕ್ತಿಯು ಮತ ಎಣಿಕೆಯನ್ನು ಒಳಗೊಂಡಂತೆ ಚುನಾವಣೆ ಅಥವಾ ಚುನಾವಣೆಯ ಭಾಗವನ್ನು ನಡೆಸಲು ಪಾಲ್ಗೊಳ್ಳುವುದು ಅವನ ಕರ್ತವ್ಯವಾಗಿದ್ದರೆ ಅಥವಾ ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಉಪಯೋಗಿಸಲಾದ ಮತಪತ್ರಗಳು ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯವು ಜವಾಬ್ದಾರನಾಗಿದ್ದರೆ ಅವನು ಸರ್ಕಾರಿ ಕರ್ತವ್ಯದ ಮೇಲಿರುವನೆಂದು ಭಾವಿಸತಕ್ಕದು. ಆದರೆ "ಸರ್ಕಾರಿ ಕರ್ತವ್ಯ" ಎಂಬ ಪದಾವಳಿಯು ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಲ್ಲದೆ ಅನ್ಯಥಾ ವಿಧಿಸಿದ ಯಾವುದೇ ಕರ್ತವ್ಯವನ್ನು ಒಳಗೊಳ್ಳತಕ್ಕದಲ್ಲ.

(4) (2)ನೇ ಉಪ–ಪ್ರಕರಣದ (ಖ) ಖಂಡದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದು.

(5) ಡೆಪ್ಯುಟಿ ಕಮಿಷನರನ ಆದೇಶದ ಮೂಲಕ ಅಥವಾ ಅವನ ಅಧಿಕಾರದ ಮೇರೆಗೆ ಮಾಡಿದ್ದ ಫಿರ್ಯಾದು ಇದ್ದ ಹೊರತು 31ನೇ ಪ್ರಕರಣದ ಮೇರೆಗೆ ಅಥವಾ 35ನೇ ಪ್ರಕರಣದ ಮೇರೆಗೆ, ಈ ಪ್ರಕರಣದ (2)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗಿನ ಯಾವುದೇ ಅಪರಾಧವನ್ನು ಯಾವುದೇ ನ್ಯಾಯಾಲಯವು ಸಂಜ್ಞೇಯತೆಗೆ ತೆಗೆದುಕೊಳ್ಳತಕ್ಕದಲ್ಲ.

**38. ಚುನಾವಣೆಗಳ ನಿಯಂತ್ರಣ:–** (1) ಕೌನ್ಸಿಲರುಗಳ ಪ್ರತಿಯೊಂದು ಚುನಾವಣೆಯು ಸರ್ಕಾರದ ನಿಯಂತ್ರಣ ಮತ್ತು ಮೇಲ್ವಿಚಾರಣೆಗೊಳಪಟ್ಟಿರತಕ್ಕದ್ದು ಮತ್ತು ಮತದಾನದ ಕಾರ್ಯಕ್ರಮ ಪಟ್ಟಿಯ ರದ್ದಿಯಾತಿ ಅಥವಾ ಅದರ ಮುಂದೂಡಿಕೆಗಾಗಿನ ನಿರ್ದೇಶನಗಳನ್ನು ಒಳಗೊಂಡು ಚುನಾವಣೆಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ನಿರ್ದೇಶನಗಳನ್ನು ಹೊರಡಿಸುವುದು ಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕದ್ದು.

(2) ಹಿಂದೆ ಹೇಳಿದುದರ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಸರ್ಕಾರವು ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಮೇರೆಗೆ ಕೌನ್ಸಿಲರುಗಳ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಲು ಅಥವಾ ವಿನಿಯಮಿಸಲು ನಿಯಮಗಳನ್ನು ರಚಿಸಬಹುದು, ಎಂದರೆ:–

(ಕ) ವಿಭಾಗಕ್ಕಾಗಿ ಮತದಾರರ ಪಟ್ಟಿಯಲ್ಲಿ ಒಂದು ಅಥವಾ ಹೆಚ್ಚು ಅಂಥ ಭಾಗಗಳನ್ನು ರಚಿಸುವ ಉದ್ದೇಶಕ್ಕಾಗಿ ವಿಧಾನ ಸಭಾ ಕ್ಷೇತ್ರಗಳಿಗಾಗಿನ ಮತದಾರರ ಪಟ್ಟಿಗಳನ್ನು ಭಾಗಗಳಾಗಿ ವಿಭಜಿಸುವ ರೀತಿ ಮತ್ತು ಅಂಥ ವಿಭಜನೆಯನ್ನು ಕಾರ್ಯಗತಗೊಳಿಸಬೇಕಾದ ಅಧಿಕಾರಿ ಅಥವಾ ಪ್ರಾಧಿಕಾರ;

(ಖ) ಮತದಾರರ ಪಟ್ಟಿಗಳ ಪರಿಷ್ಕರಣೆ ಮತ್ತು ಸರಿಪಡಿಸುವಿಕೆ;

(ಗ) ಪ್ರಾದೇಶಿಕ ವಿಭಾಗಗಳ ಮರುವಿಂಗಡಣೆ;

(ಘ) ಚುನಾವಣೆಗಳನ್ನು ನಡೆಸುವುದಕ್ಕಾಗಿ ಚುನಾವಣಾಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು, ಅಧ್ಯಕ್ಷಾಧಿಕಾರಿಗಳು ಮತ್ತು ಮತದಾನದ ಅಧಿಕಾರಿಗಳ ನೇಮಕಾತಿ;

(ಙ) ಅಭ್ಯರ್ಥಿಗಳ ನಾಮನಿರ್ದೇಶನ, ನಾಮಪತ್ರಗಳ ನಮೂನೆ, ನಾಮಪತ್ರಗಳಿಗೆ ಆಕ್ಷೇಪಣೆಗಳು ಮತ್ತು ನಾಮಪತ್ರಗಳ ಪರಿಶೀಲನೆ;

(ಚ) ಅಭ್ಯರ್ಥಿಗಳು ಇಡಬೇಕಾದ ಠೇವಣಿಗಳು ಅಂಥ ಠೇವಣಿಗಳನ್ನು ಇಡುವ ಕಾಲ ಮತ್ತು ರೀತಿ ಅಂಥ ಠೇವಣಿಗಳನ್ನು ಅಭ್ಯರ್ಥಿಗಳಿಗೆ ಮರುಪಾವತಿ ಮಾಡಬೇಕಾದ ಅಥವಾ ಮುನ್ಸಿಪಲ್ ಕೌನ್ಸಿಲ್‌ಗೆ ಮುಟ್ಟುಗೋಲು ಮಾಡಬೇಕಾದ ಸಂದರ್ಭಗಳು;

(ಛ) ಅಭ್ಯರ್ಥಿಕೆಗಳನ್ನು ಹಿಂತೆಗೆದುಕೊಳ್ಳುವುದು;

(ಜ) ಅಭ್ಯರ್ಥಿಗಳ ಏಜೆಂಟರ ನೇಮಕಾತಿ;

(ಝ) ಸ್ಪರ್ಧೆ ಇರುವ ಮತ್ತು ಇಲ್ಲದ ಚುನಾವಣೆಗಳಲ್ಲಿನ ಪ್ರಕ್ರಿಯೆ ಮತ್ತು ಅನುಸೂಚಿತ ಜಾತಿ ಮತ್ತು ಮಹಿಳೆಯರಿಗಾಗಿ ಯಾವುದೇ ಸ್ಥಾನವನ್ನು ಕಾಯ್ದಿರಿಸಿದ ವಿಭಾಗಗಳಲ್ಲಿನ ಚುನಾವಣೆಗಳಲ್ಲಿ ವಿಶೇಷ ಪ್ರಕ್ರಿಯೆ;

(ಞ) ಮತದಾನಕ್ಕಾಗಿ ದಿನಾಂಕ, ಕಾಲ ಮತ್ತು ಸ್ಥಳ; ಮತ್ತು–

(i) ಪ್ರತಿಯೊಂದು ವಿಭಾಗಕ್ಕೆ ಮತದಾನ ಕೇಂದ್ರಗಳನ್ನು ಗೊತ್ತುಪಡಿಸುವುದು;

(ii) ಮತ ಚಲಾಯಿಸಲು ಮತದಾನ ಕೇಂದ್ರವನ್ನು ತೆರೆದಿಡಬೇಕಾದಂಥ ವೇಳೆಗಳು;

(iii) ಮತಪತ್ರಗಳ ಮುದ್ರಣ ಮತ್ತು ನೀಡಿಕೆ;

(iv) ಮತದಾರರ ಪಟ್ಟಿ ಉಲ್ಲೇಖಿಸುವ ಮೂಲಕ ಮತದಾರರನ್ನು ಪರೀಕ್ಷಿಸುವುದು;

(v) ಮತದಾರನ ಎಡಗೈನ ತೋರುಬೆರಳು, ಅಥವಾ ಇತರ ಯಾವುದೇ ಬೆರಳು, ಅಥವಾ ಅವಯವದ ಮೇಲೆ ಅಳಿಸಲಾಗದ ಶಾಯಿಯಿಂದ ಗುರುತು ಮಾಡುವುದು ಮತ್ತು ಮತದಾರರ ಪರರೂಪಧಾರಣೆಯನ್ನು ತಡೆಗಟ್ಟುವ ಹಾಗೆ, ಈಗಾಗಲೇ ಅಂಥ ಗುರುತು ಹೊಂದಿರುವಂಥ ವ್ಯಕ್ತಿಯು ಆ ಕಾಲದಲ್ಲಿ, ಅಂಥ ಮತಪತ್ರಕ್ಕಾಗಿ ಮನವಿ ಸಲ್ಲಿಸಿದರೆ, ಯಾರೇ ವ್ಯಕ್ತಿಗೆ ಯಾವುದೇ ಮತಪತ್ರ ಕೊಡುವುದನ್ನು ನಿಷೇಧಿಸುವುದು;

(vi) ಮತಗಳನ್ನು ಕೊಡಬೇಕಾದ ಮತ್ತು ವಿಶೇಷವಾಗಿ ಅನಕ್ಷರಸ್ಥ ಮತದಾರರು ಅಥವಾ ದೈಹಿಕ ಅಥವಾ ಇತರ ಅಸಾಮರ್ಥ್ಯವಿರುವ ಮತದಾರರ ಸಂದರ್ಭದಲ್ಲಿ ಮತ ಕೊಡಬೇಕಾದ ರೀತಿ;

(vii) ಆಕ್ಷೇಪಿತ ಮತಗಳು ಮತ್ತು ನೀಡಿದ ಮತಗಳ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ;

(viii) ಮತಗಳ ಪರಿಶೀಲನೆ, ಮತಗಳ ಎಣಿಕೆ, ಫಲಿತಾಂಶಗಳ ಘೋಷಣೆ ಮತ್ತು ಪ್ರಕಟಣೆ ಮತ್ತು ಸಮಾನ ಮತಗಳ ಸಂದರ್ಭದಲ್ಲಿ ಅಥವಾ ಕೌನ್ಸಿಲರನು ಒಂದಕ್ಕಿಂತ ಹೆಚ್ಚಿನ ವಿಭಾಗವನ್ನು ಪ್ರತಿನಿಧಿಸಲು ಚುನಾಯಿತನಾದ ಸಂದರ್ಭದಲ್ಲಿನ ಪ್ರಕ್ರಿಯೆ;

(ix) ಚುನಾವಣೆಗಳಿಗೆ ಸಂಬಂಧಪಟ್ಟ ಕಾಗದಪತ್ರಗಳ ಅಭಿರಕ್ಷೆ ಮತ್ತು ವಿಲೆ;

(x) ದೊಂಬಿ, ಹಿಂಸಾಚಾರ ಅಥವಾ ಯಾವುದೇ ಇತರ ಸಾಕಷ್ಟು ಕಾರಣದಿಂದ ಯಾವುದೇ ರೀತಿಯ ಅಡ್ಡಿ ಉಂಟಾದ ಸಂದರ್ಭದಲ್ಲಿ ಮತದಾನದ ನಿಲಂಬನ ಮತ್ತು ಹೊಸ ಮತದಾನ ನಡೆಸುವುದು;

(xi) ಎಣಿಕೆಗೆ ಮುಂಚೆ ಮತ ಪೆಟ್ಟಿಗೆಗಳ ನಾಶ ಅಥವಾ ಅವುಗಳನ್ನು ಕೆಡಿಸುವಿಕೆಯ ಸಂದರ್ಭದಲ್ಲಿ ಹೊಸ ಮತದಾನವನ್ನು ನಡೆಸುವುದು;

(xii) ಮತದಾನಕ್ಕೆ ಮುಂಚೆ ಅಭ್ಯರ್ಥಿಯು ಮರಣದ ಸಂದರ್ಭದಲ್ಲಿ ಮತದಾನವನ್ನು ನಡೆಸುವುದನ್ನು ಪ್ರತ್ಯಾದೇಶಿಸುವುದು;

–ಇವುಗಳನ್ನು ಒಳಗೊಂಡಂತೆ ಚುನಾವಣೆಯನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರ ವಿಷಯಗಳು;

(ಟ) ದಿನಾಂಕ, ಸಮಯ ಮತ್ತು ಸ್ಥಳ, ಚುನಾವಣಾ ಅರ್ಜಿಯ ಮೇಲೆ ಸಂದಾಯ ಮಾಡಬೇಕಾದ ಫೀಜು;

(ಠ) ಯಾವ ಚುನಾವಣೆಗಳು ಅಥವಾ ಚುನಾವಣಾ ವಿವಾದಗಳಿಗೆ ಸಂಬಂಧಿಸಿದಂತೆ ಸರ್ಕಾರವು ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವುದು ಅವಶ್ಯವೆಂದು ಭಾವಿಸುವುದೋ ಆ ಚುನಾವಣೆಗಳು ಅಥವಾ ಚುನಾವಣಾ ವಿವಾದಗಳಿಗೆ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮವು ಯಾವುದೇ ಉಪಬಂಧವನ್ನು ಮಾಡಿಲ್ಲವೋ ಅಥವಾ ಸಾಕಷ್ಟಿಲ್ಲದ ಉಪಬಂಧವನ್ನು ಮಾಡಿದೆಯೋ, ಮತ್ತು ಸರ್ಕಾರದ ಅಭಿಪ್ರಾಯದಲ್ಲಿ ಉಪಬಂಧವು ಅವಶ್ಯವಿರುವುದೋ ಅದಕ್ಕೆ ಸಂಬಂಧಪಟ್ಟ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಲ್ಲಿ ಅವುಗಳ ಉಲ್ಲಂಘನೆಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಸರ್ಕಾರವು ಉಪಬಂಧಿಸಬಹುದು.

**39. ಚುನಾವಣೆಗಳಿಗೆ ಸಂಬಂಧಪಟ್ಟ ದಾವೆಗಳ ಪ್ರತಿಷೇಧ ಇತ್ಯಾದಿ.–** ಈ ಅಧಿನಿಯಮದ ಉಪಬಂಧಗಳು ಅಥವಾ ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ನಿಯಮದ ಮೂಲಕ ಅಧಿಕೃತಗೊಳಿಸಿದಂಥ ದಾವೆಯಾಗಿದ್ದ ಹೊರತು ಕೌನ್ಸಿಲರ್, ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಚುನಾವಣೆ, ನೇಮಕಾತಿ ಅಥವಾ ತೆಗೆದುಹಾಕುವುದಕ್ಕೆ ಸಂಬಂಧಪಟ್ಟ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆಯನ್ನು ಸಿವಿಲ್ ನ್ಯಾಯಾಲಯವು ಪುರಸ್ಕರಿಸತಕ್ಕದ್ದಲ್ಲ.

**40. ರಾಜೀನಾಮೆ.–** (2)ನೆಯ ಉಪ–ಪ್ರಕರಣದ ಉಪಬಂಧಗಳಿಗೊಳಪಟ್ಟು,–

(ಕ) ಪಟ್ಟಣ ಮುನ್ಸಿಪಲ್ ಕೌನ್ಸಿಲಿನ ಸಂದರ್ಭದಲ್ಲಿ ಡೆಪ್ಯುಟಿ ಕಮೀಷನರನಿಗೆ;

(ಖ) ನಗರ ಮುನ್ಸಿಪಲ್ ಕೌನ್ಸಿಲಿನ ಸಂದರ್ಭದಲ್ಲಿ ಕಮೀಷನರನಿಗೆ,

–ಅದಕ್ಕಾಗಿ ಬರಹದಲ್ಲಿನ ನೋಟೀಸನ್ನು ಕೊಡುವ ಮೂಲಕ ಕೌನ್ಸಿಲರನು ತನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಧ್ಯಕ್ಷ ಅಥವಾ ಉಪಾಧ್ಯಕ್ಷನು ತನ್ನ ಸದಸ್ಯತ್ವಕ್ಕೆ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಪದಕ್ಕೆ ರಾಜೀನಾಮೆ ನೀಡಬಹುದು.

(2) (1)ನೇ ಉಪ–ಪ್ರಕರಣದ ಮೇರೆಗಿನ ರಾಜೀನಾಮೆಯು, ರಾಜೀನಾಮೆಯ ನೋಟೀಸನ್ನು ಸ್ವೀಕರಿಸಿದ ತರುವಾಯ ಈ ಮಧ್ಯ ಹಿಂತೆಗೆದುಕೊಂಡಿದ್ದ ಹೊರತು ಹತ್ತನೇ ದಿನವು ಮುಕ್ತಾಯವಾದ ಮೇಲೆ ಪರಿಣಾಮಕಾರಿಯಾಗತಕ್ಕದ್ದು.

**41. ಪದದಿಂದ ತೆಗೆದುಹಾಕುವ ಬಗ್ಗೆ ಹೊಣೆಗಾರಿಕೆ.–** (1) ಈ ಅಧಿನಿಯಮದ ಮೇರೆಗೆ ಚುನಾಯಿತನಾದ ಅಥವ ನೇಮಕಗೊಂಡ ಯಾರೇ ಕೌನ್ಸಿಲರನನ್ನು, ಮತ್ತು ಸರ್ಕಾರವು ಅವಶ್ಯವೆಂದು ಭಾವಿಸುವಂಥ ವಿಚಾರಣೆಯ ತರುವಾಯ, ಅಂಥ ಕೌನ್ಸಿಲರನು ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿ ದುರ್ವರ್ತನೆಯ ಅಥವಾ ಯಾವುದೇ ಅಪಮಾನಕರ ವರ್ತನೆಯ ಬಗ್ಗೆ ತಪ್ಪಿತಸ್ಥನಾಗಿದ್ದರೆ, ಅಥವಾ ಕೌನ್ಸಿಲರನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಅಸಮರ್ಥನಾಗಿದ್ದರೆ, ಮುನ್ಸಿಪಲ್ ಕೌನ್ಸಿಲಿನ ಶಿಫಾರಸ್ಸಿನ ಮೇಲೆ ಅದು ಸೂಕ್ತವೆಂದು ಭಾವಿಸಿದರೆ, ತೆಗೆದುಹಾಕಬಹುದು:

ಪರಂತು, ಯಾರೇ ಕೌನ್ಸಿಲರನನ್ನು ವಿಚಾರಣೆಯನ್ನು ಒಪ್ಪಿಸುವುದಕ್ಕಾಗಿ ಅವಕಾಶವನ್ನು ಕೊಟ್ಟ ತರುವಾಯ ಹೊರತು ತೆಗೆದುಹಾಕತಕ್ಕದ್ದಲ್ಲ.

(2) 42ನೇ ಪ್ರಕರಣದ (10)ನೇ ಉಪ–ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು, ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ದುರ್ವರ್ತನೆಗಾಗಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಪದದಿಂದ ತೆಗೆದುಹಾಕಿದಾಗ ಅಂಥ ತೆಗೆದುಹಾಕುವಿಕೆಯ ದಿನಾಂಕದಿಂದ ಅವನು ಕೌನ್ಸಿಲರ್‌ನಾಗಿರುವುದು ನಿಂತುಹೋಗತಕ್ಕದ್ದು ಮತ್ತು (1)ನೇ ಉಪ–ಪ್ರಕರಣದ ಮೇರೆಗೆ ಕೌನ್ಸಿಲರನ ಪದದಿಂದ ಅವನನ್ನು ತೆಗೆದುಹಾಕಿರುವುದಾಗಿ ಭಾವಿಸತಕ್ಕದ್ದು.

**42. ಅಧ್ಯಕ್ಷ ಮತ್ತು ಉಪಾಧ್ಯಕ್ಷ.–** (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ಲಿಗೆ ಒಬ್ಬ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇರತಕ್ಕದು.

(2) ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಕೌನ್ಸಿಲರುಗಳು ತಮ್ಮೊಳಗಿಂದ ಚುನಾಯಿಸತಕ್ಕದ್ದು.

(3) ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಚುನಾವಣೆ ಮತ್ತು ಸದರಿ ಪದಗಳಲ್ಲಿನ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು ಮತ್ತು ಅಂಥ ಚುನಾವಣೆಗೆ ಸಂಬಂಧಪಟ್ಟ ವಿವಾದಗಳ ನಿರ್ಧರಣೆಯು ಸರ್ಕಾರದ ನಿಯಂತ್ರಣ ಮತ್ತು ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿರತಕ್ಕದ್ದು;

ಪರಂತು, ಅಂಥ ಚುನಾವಣಾ ವಿವಾದಗಳನ್ನು ನಿರ್ಧರಿಸುವ ಪ್ರಾಧಿಕಾರವು ನಿಯಮಿಸಬಹುದಾದಂಥ ನ್ಯಾಯಿಕ ಅಧಿಕಾರಿಯಾಗಿರತಕ್ಕದ್ದು.

(4) ಯಾವುದೇ ಮುನ್ಸಿಪಲ್ ಕೌನ್ಸಿಲ್ ಈ ಬಗ್ಗೆ ಕಮೀಷನರನು ಹೊರಡಿಸಿದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಯುಕ್ತ ಕಾಲದೊಳಗೆ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಚುನಾಯಿಸಲು ತಪ್ಪಿದರೆ, ಸಂದರ್ಭಾನುಸಾರ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಸರ್ಕಾರವು ನೇಮಕ ಮಾಡಬಹುದು;

ಪರಂತು, ಹಾಗೆ ನೇಮಕಗೊಂಡ ವ್ಯಕ್ತಿಗಳು, ಯಾವ ಆರು ತಿಂಗಳುಗಳ ಅವಧಿಯ ಮುಕ್ತಾಯಕ್ಕೆ ಮುಂಚೆ ಸದರಿ ಪದಗಳಿಗೆ ಹೊಸ ಚುನಾವಣೆಗಳನ್ನು ನಡೆಸಲಾಗುವುದೋ ಆ ಆರು ತಿಂಗಳುಗಳಿಗೆ ಮೀರದ ಅವಧಿಗಾಗಿ ಪದಧಾರಣ ಮಾಡತಕ್ಕದ್ದಲ್ಲ.

(5) ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷನ ಪದವು ಖಾಲಿಯಿರುವ ಅವಧಿಯಲ್ಲಿ ಮತ್ತು ಅವನ ಸ್ಥಾನವನ್ನು ವಹಿಸಿಕೊಳ್ಳಲು ಉಪಾಧ್ಯಕ್ಷನು ಇಲ್ಲದಿರುವಾಗ, ಅಥವಾ 44ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಖಾಲಿ ಆಗಿರುವಂಥ ಅಧ್ಯಕ್ಷ ಪದದ ಪ್ರಭಾರವನ್ನು ವಹಿಸಿಕೊಳ್ಳಲು ಉಪಾಧ್ಯಕ್ಷನು ತಪ್ಪಿದರೆ, ಆಗ (10)ನೇ ಉಪ-ಪ್ರಕರಣದ ಮೇರೆಗಿನ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ಹೊರಡಿಸಿದ ನಿಯಮಗಳಲ್ಲಿ ಅಥವಾ ಆದೇಶಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ನಗರ ಪೌರಸಭೆಗಳ ಸಂದರ್ಭದಲ್ಲಿ ಡೆಪ್ಯುಟಿ ಕಮೀಷನರನು ಅಥವಾ ತತ್ಕಾಲದಲ್ಲಿ ಡೆಪ್ಯುಟಿ ಕಮೀಷನರನ ಕರ್ತವ್ಯಗಳನ್ನು ನೆರವೇರಿಸುತ್ತಿರುವ ವ್ಯಕ್ತಿಯು ಮತ್ತು ಪಟ್ಟಣ ಪೌರಸಭೆಗಳ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮೀಷನರನ ದರ್ಜೆಗೆ ಕಡಿಮೆಯಿಲ್ಲದ, ಅವನಿಂದ ಈ ಬಗ್ಗೆ ನಾಮನಿರ್ದೇಶಿತನಾದ ಯಾರೇ ಅಧಿಕಾರಿ, ಜಿಲ್ಲಾ ಮುಖ್ಯ ಕಾರ್ಯಸ್ಥಾನದಲ್ಲಿನ ಪೌರಸಭೆಗಳ ಸಂದರ್ಭದಲ್ಲಿ ತಹಸೀಲ್ದಾರನು ಅಥವಾ ತತ್ಕಾಲದಲ್ಲಿ ತಹಸೀಲ್ದಾರನ ಕರ್ತವ್ಯಗಳನ್ನು ನೆರವೇರಿಸುತ್ತಿರುವ ವ್ಯಕ್ತಿ ಅಥವಾ ಇತರ ಪೌರಸಭೆಗಳ ಸಂದರ್ಭದಲ್ಲಿ ಕೌನ್ಸಿಲರನಾಗಿರುವುದಕ್ಕೆ ಅನರ್ಹಗೊಂಡಿಲ್ಲದ ಯಾರೇ ಇತರ ವ್ಯಕ್ತಿಯು, ಅಧ್ಯಕ್ಷನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(6) ಅಂಥ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥನಾಗಬಹುದಾದಂಥ ರೀತಿಯಲ್ಲಿ ನಗರ ಸಭೆಯಿಂದ ಎರಡು ತಿಂಗಳಿಗೆ ಮೀರಿದ ಅವಧಿಗೆ ಗೈರುಹಾಜರಾಗುವ ಪ್ರತಿಯೊಬ್ಬ ಅಧ್ಯಕ್ಷನು ಮತ್ತು ಒಂದು ತಿಂಗಳಿಗೆ ಮೀರಿದ ಅವಧಿಗೆ ಗೈರುಹಾಜರಾಗುವ ಪ್ರತಿಯೊಬ್ಬ ಉಪಾಧ್ಯಕ್ಷನು, ಹಾಗೆ ತಾನು ಗೈರು ಹಾಜರಾಗಲು ಮುನ್ಸಿಪಲ್ ಕೌನ್ಸಿಲು ಅನುಮತಿಯನ್ನು ಕೊಟ್ಟಿದ್ದ ಹೊರತು, ಅವನು ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿರುವುದು ನಿಂತು ಹೋಗತಕ್ಕದ್ದು. ಈ ಉಪ-ಪ್ರಕರಣದ ಮೇರೆಗೆ ಖಾಲಿ ಸ್ಥಾನವು ಉದ್ಭವಿಸಿರುವುದೋ ಹೇಗೆ ಎನ್ನುವ ಪ್ರಶ್ನೆಯನ್ನು ಡೆಪ್ಯುಟಿ ಕಮೀಷನರನು ತೀರ್ಮಾನಿಸತಕ್ಕದ್ದು.

(7) (6)ನೇ ಉಪ-ಪ್ರಕರಣದ ಮೇರೆಗೆ ಆರು ತಿಂಗಳುಗಳು ಮೀರುವ ಅವಧಿಗಾಗಿ ಅನುಮತಿಯನ್ನು ಕೊಡತಕ್ಕದ್ದಲ್ಲ. ಅಧ್ಯಕ್ಷನಿಗೆ ಅನುಮತಿಯನ್ನು ಮಂಜೂರು ಮಾಡಿದಾಗ ಮತ್ತು ಉಪಾಧ್ಯಕ್ಷನ

ಪದವು ಖಾಲಿಯಾಗಿರುವಾಗಲೆಲ್ಲಾ, ಅಧ್ಯಕ್ಷ ಪದದ ಖಾಲಿ ಸ್ಥಾನವನ್ನು ನಿಯಮಿಸಬಹುದಾದಂಥ ಅವಧಿಯೊಳಗೆ ಮತ್ತು ಅಂಥ ರೀತಿಯಲ್ಲಿ ಕೌನ್ಸಿಲರುಗಳೊಳಗಿಂದ ಮುನ್ಸಿಪಲ್ ಕೌನ್ಸಿಲ್ ಚುನಾವಣೆ ಮೂಲಕ ಭರ್ತಿ ಮಾಡತಕ್ಕದ್ದು. ಮುನ್ಸಿಪಲ್ ಕೌನ್ಸಿಲ್ಲು ಅಧ್ಯಕ್ಷನನ್ನು ಚುನಾಯಿಸಲು ತಪ್ಪಿದರೆ, ಸರ್ಕಾರವು ಖಾಲಿ ಸ್ಥಾನವನ್ನು ನೇಮಕಾತಿ ಮೂಲಕ ಭರ್ತಿ ಮಾಡಬಹುದು. ಉಪಾಧ್ಯಕ್ಷನಿಗೆ ಅನುಮತಿಯನ್ನು ನೀಡಿದಾಗ ಅಥವಾ ಉಪಾಧ್ಯಕ್ಷನು ಅಧ್ಯಕ್ಷನಿಗಾಗಿ ಕಾರ್ಯನಿರ್ವಹಿಸುತ್ತಿರುವಾಗ ಉಪಾಧ್ಯಕ್ಷನ ಪದದಲ್ಲಿ ಖಾಲಿ ಸ್ಥಾನವನ್ನು ಬೇರೊಬ್ಬ ಕೌನ್ಸಿಲರನನ್ನು ಅದಕ್ಕೆ ಚುನಾಯಿಸುವ ಮೂಲಕ ಭರ್ತಿ ಮಾಡಬಹುದು.

(8) ಮುನ್ಸಿಪಲ್ ಕೌನ್ಸಿಲ್ಲಿನ ಉಪಾಧ್ಯಕ್ಷನನ್ನು ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷನನ್ನಾಗಿ ಚುನಾಯಿಸಿದರೆ ಅಥವಾ ನೇಮಕ ಮಾಡಿದರೆ ಅವನು ಉಪಾಧ್ಯಕ್ಷನಾಗಿ ತನ್ನ ಪದವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದ್ದು.

(9) ಮುನ್ಸಿಪಲ್ ಕೌನ್ಸಿಲ್ಲಿನ ಪ್ರತಿಯೊಬ್ಬ ಅಧ್ಯಕ್ಷ ಮತ್ತು ಪ್ರತಿಯೊಬ್ಬ ಉಪಾಧ್ಯಕ್ಷನು, ಆ ಉದ್ದೇಶಕ್ಕಾಗಿ ಕರೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟಕ್ಕೆ ಕಡಿಮೆಯಿಲ್ಲದ ಬಹುಮತದಿಂದ ಅವನಲ್ಲಿ ವಿಶ್ವಾಸವಿಲ್ಲವೆಂದು ಹೇಳುವ ನಿರ್ಣಯವನ್ನು ಅಂಗೀಕರಿಸಿದರೆ ತತ್‌ಕ್ಷಣವೇ ಅವನು ತನ್ನ ಪದವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದ್ದು:

ಪರಂತು, ಅಂಥ ನಿರ್ಣಯವನ್ನು, ಕೌನ್ಸಿಲರ್‌ಗಳ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟಕ್ಕೆ ಕಡಿಮೆಯಿಲ್ಲದ ಸಂಖ್ಯೆಯ ಕೌನ್ಸಿಲರುಗಳು ನಿರ್ಣಯದ ನೋಟೀಸಿಗೆ ರುಜು ಮಾಡಿದ್ದ ಹೊರತು, ಮತ್ತು ಆ ನಿರ್ಣಯವನ್ನು ಮಂಡಿಸುವ ಉದ್ದೇಶದ ಬಗ್ಗೆ ಕನಿಷ್ಠ ಪಕ್ಷ ಹತ್ತು ದಿವಸಗಳ ನೋಟೀಸನ್ನು ಕೊಟ್ಟಿದ್ದ ಹೊರತು, ಮಂಡಿಸತಕ್ಕದ್ದಲ್ಲ:

ಮತ್ತೂ ಪರಂತು, ಯಾರೇ ಅಧ್ಯಕ್ಷ ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಮುನ್ಸಿಪಲ್ ಕೌನ್ಸಿಲ್ಲು ಪರ್ಯಾಲೋಚಿಸಿರುವಲ್ಲಿ ಮತ್ತು ಅದನ್ನು ತಿರಸ್ಕರಿಸಿರುವಲ್ಲಿ ಅದೇ ಅಧ್ಯಕ್ಷ ಅಥವಾ ಅದೇ ಉಪಾಧ್ಯಕ್ಷನಿಗೆ ಸಂಬಂಧಿಸಿದಂತೆ ಅಂಥದೇ ನಿರ್ಣಯದ ಬಗ್ಗೆ ಮುನ್ಸಿಪಲ್ ಕೌನ್ಸಿಲ್‌ನ ತೀರ್ಮಾನದ ದಿನಾಂಕದಿಂದ ಒಂದು ವರ್ಷದೊಳಗೆ ನೋಟೀಸನ್ನು ಕೊಡತಕ್ಕದ್ದಲ್ಲ ಅಥವಾ ಅದನ್ನು ಮಂಡಿಸತಕ್ಕದ್ದಲ್ಲ.

(10) ಪ್ರತಿಯೊಬ್ಬ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು, ಅಂಥ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಪದದಿಂದ ಅವನ ಕರ್ತವ್ಯಗಳ ನಿರ್ವಹಣೆಯಲ್ಲಿ ದುರ್ವರ್ತನೆಗಾಗಿ ಅಥವಾ ಅವನ ಕರ್ತವ್ಯಗಳನ್ನು ಉಪೇಕ್ಷಿಸುವುದು ಅಥವಾ ಅವುಗಳನ್ನು ನೆರವೇರಿಸಲು ಅಸಮರ್ಥನಾದುದಕ್ಕಾಗಿ ಅಥವಾ ಅವನು ತಾನು ಮುನ್ಸಿಪಲ್ ಕೌನ್ಸಿಲಿಗೆ ಕೊಡಬೇಕಾದ ಬಾಕಿಗಳನ್ನು ಸಂದಾಯ ಮಾಡಲು ಅಸಮರ್ಥನಾದರೆ ಅಥವಾ ಯಾವುದೇ ಡಿಕ್ರಿ ಋಣವನ್ನು ಸಂದಾಯ ಮಾಡದಿರುವುದಕ್ಕಾಗಿ ಸಿವಿಲ್ ಕಾರಾಗೃಹಕ್ಕೆ ಒಪ್ಪಿಸುವುದಕ್ಕಾಗಿನ ಆದೇಶಕ್ಕೆ ಒಳಗಾಗಿದ್ದರೆ ಅಂಥ ಅಧ್ಯಕ್ಷ ಮತ್ತು ಉಪಾಧ್ಯಕ್ಷನಾಗಿರುವ ಅವನ ಪದದಿಂದ ತೆಗೆದುಹಾಕಬಹುದಾಗಿರತಕ್ಕದ್ದು, ಮತ್ತು 41ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಕೌನ್ಸಿಲರನಾಗಿರುವುದು ನಿಂತುಹೋಗಿರದ ಹಾಗೆ ತೆಗೆದುಹಾಕಲಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷನು 18ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕೌನ್ಸಿಲರನ, ಪದಾವಧಿಯ ಉಳಿದ ಅವಧಿಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದಲ್ಲ:

ಪರಂತು, ಅಂಥ ಯಾವುದೇ ಆದೇಶವನ್ನು, ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ವಿವರಣೆಗಳನ್ನು ಒಪ್ಪಿಸಲು ಅವಕಾಶವನ್ನು ಕೊಟ್ಟ ತರುವಾಯ ಹೊರತು ಮಾಡತಕ್ಕದ್ದಲ್ಲ.

**ವಿವರಣೆ:–** * * * *

(11) ಪ್ರತಿಯೊಬ್ಬ ಅಧ್ಯಕ್ಷ ಮತ್ತು ಪ್ರತಿಯೊಬ್ಬ ಉಪಾಧ್ಯಕ್ಷನ ಪದಾವಧಿಯು ಈ ಅಧಿನಿಯಮದಲ್ಲಿ ಉಪಬಂಧಿಸಿದ್ದಂತೆ ಹೊರತು ಕೌನ್ಸಿಲರನಾಗಿ ಪದಾವಧಿಯು ಮುಕ್ತಾಯವಾದ ಮೇಲೆ ನಿಂತುಹೋಗತಕ್ಕದ್ದು:

ಪರಂತು, ಸರ್ಕಾರವು, ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲ್‌ನ ಸಮ್ಮತಿಯೊಂದಿಗೆ ಅವರ ಪದಾವಧಿಯನ್ನು ಎರಡು ವರ್ಷಗಳಿಗೆ ಸೀಮಿತಗೊಳ್ಳುವಂತೆ ಮತ್ತು ಅವುಗಳಿಗಾಗಿ ಚುನಾವಣೆಗಳನ್ನು ಪ್ರತಿ ಎರಡನೇ ವರ್ಷ ನಡೆಸತಕ್ಕದ್ದೆಂದು ನಿರ್ದೇಶಿಸಬಹುದು:

ಮತ್ತೂ ಪರಂತು, ಹಿಂದಿನ ಪರಂತುಕದ ಮೇರೆಗೆ ಸೀಮಿತಗೊಳಿಸಿದ ಅವಧಿಯನ್ನು 1979ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮದ 6ನೇ ಪ್ರಕರಣದ ಪ್ರಾರಂಭದ ದಿನಾಂಕಕ್ಕೆ ಮುಂಚೆಯೇ ಆಗಲಿ ಅಥವಾ ತರುವಾಯವೇ ಆಗಲಿ ಸೀಮಿತಗೊಳಿಸಿದ್ದರೆ, ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಂಥ ಸೀಮಿತಕ್ಕೆ ಸಮ್ಮತಿಸುವ ಮುನ್ಸಿಪಲ್ ಕೌನ್ಸಿಲಿನ ಅವಧಿಯಲ್ಲಿ ಮಾತ್ರವೇ ಪ್ರವರ್ತನೆಯಲ್ಲಿರತಕ್ಕದ್ದು.

(12) ಅಧ್ಯಕ್ಷನಾಗಿ ಅಥವಾ ಉಪಾಧ್ಯಕ್ಷನಾಗಿ ತನ್ನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಅವನ ಪದವನ್ನು ಅಂಗೀಕರಿಸದೆ ಇರುವುದು, ಮರಣ, ರಾಜೀನಾಮೆ ಅಥವಾ ತೆಗೆದು ಹಾಕುವಿಕೆ ಅಥವಾ ಅವನ ಚುನಾವಣೆಯು ಶೂನ್ಯವಾಗುವುದು ಅಥವಾ ಅಂಥ ಪದದಲ್ಲಿ ಕಾರ್ಯನಿರ್ವಹಿಸಲು ಅವನು ಅಸಮರ್ಥನಾಗುವುದು ಅಥವಾ ಕೌನ್ಸಿಲರ್‌ನಾಗಿರುವುದು ನಿಂತುಹೋಗುವುದು– ಇವುಗಳ ಸಂದರ್ಭದಲ್ಲಿ, ಹಿಂದೆ ಹೇಳಿದ ಉಪ–ಪ್ರಕರಣಗಳ ಉಪಬಂಧಗಳಿಗನುಸಾರವಾಗಿ, ಸಂದರ್ಭಾನುಸಾರ, ಖಾಲಿ ಸ್ಥಾನವನ್ನು ನೇಮಕಾತಿ ಅಥವಾ ಚುನಾವಣೆಯ ಮೂಲಕ ಭರ್ತಿ ಮಾಡತಕ್ಕದ್ದು ಅನ್ಯಥಾ ಉಪಬಂಧಿಸಿರದ ಯಾವುದೇ ಖಾಲಿ ಸ್ಥಾನವು ಉಂಟಾದಾಗ, ಸರ್ಕಾರವು, ಅಂಥ ಖಾಲಿ ಸ್ಥಾನದ ಅವಧಿಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಎಲ್ಲ ಕರ್ತವ್ಯಗಳನ್ನು ನೆರವೇರಿಸಲು ಮತ್ತು ಎಲ್ಲ ಅಧಿಕಾರಗಳನ್ನು ಚಲಾಯಿಸಲು ಯಾರೇ ಕೌನ್ಸಿಲರನನ್ನು ನೇಮಕ ಮಾಡಬಹುದು.

(13) ಅಧ್ಯಕ್ಷ ಮತ್ತು ಉಪಾಧ್ಯಕ್ಷನು ಸರ್ಕಾರವು, ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಎರಡು ನೂರು ರೂಪಾಯಿಗಳಿಗೆ ಮೀರದ ಮಾಸಿಕ ಭತ್ಯಗಳನ್ನು ಪೌರಸಭಾ ನಿಧಿಯಿಂದ ಸ್ವೀಕರಿಸಬಹುದು ಮತ್ತು ಬೇರೆ ಬೇರೆ ಮುನ್ಸಿಪಲ್ ಕೌನ್ಸಿಲುಗಳಿಗೆ ಬೇರೆ ಬೇರೆ ದರಗಳನ್ನು ನಿಗದಿಪಡಿಸಬಹುದು.

(14) ಮುನ್ಸಿಪಲ್ ಕೌನ್ಸಿಲು, ಆತಿಥ್ಯ ಭತ್ಯವಾಗಿ ಅದು ನಿರ್ಧರಿಸಬಹುದಾದಂತೆ ಒಂದು ಸಾವಿರ ರೂಪಾಯಿಗಳಿಗೆ ಮೀರದಂಥ ಮೊತ್ತವನ್ನು ವಾರ್ಷಿಕವಾಗಿ ಅಧ್ಯಕ್ಷನ ವಶದಲ್ಲಿಡತಕ್ಕದ್ದು.

**43. ಅಧ್ಯಕ್ಷನ ಪ್ರಕಾರ್ಯಗಳು.**– XIVನೇ ಅಧ್ಯಾಯದ ಉಪಬಂಧಗಳಿಗೊಳಪಟ್ಟು,–

(ಕ) ಯುಕ್ತ ಕಾರಣದಿಂದ ತಡೆಯಲ್ಪಟ್ಟ ಹೊರತು, ಮುನ್ಸಿಪಲ್ ಕೌನ್ಸಿಲ್‌ನ ಎಲ್ಲಾ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವುದು ಮತ್ತು 323ನೇ ಪ್ರಕರಣದ (2)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಅಂಥ ಸಭೆಗಳಲ್ಲಿ ವ್ಯವಹಾರ ನಡವಳಿಕೆಯನ್ನು ನಿಯಂತ್ರಿಸುವುದು;

(ಖ) ಮುನ್ಸಿಪಲ್ ಕೌನ್ಸಿಲ್‌ನ ಹಣಕಾಸು ಮತ್ತು ಕಾರ್ಯನಿರ್ವಾಹಕ ಆಡಳಿತದ ಮೇಲೆ ನಿಗಾ ಇಡುವುದು;

(ಗ) ಈ ಅಧಿನಿಯಮದ ಮೂಲಕ ಅವನಿಗೆ ವಿಶೇಷವಾಗಿ ವಿಧಿಸಿದ ಅಥವಾ ಪ್ರದಾನ ಮಾಡಿದ ಅಥವಾ ಅದರ ಮೇರೆಗೆ ಮತ್ತು ಅದಕ್ಕನುಸಾರವಾಗಿ ಅವನಿಗೆ ವಹಿಸಿಕೊಟ್ಟ ಎಲ್ಲ ಕರ್ತವ್ಯಗಳನ್ನು ನೆರವೇರಿಸುವುದು ಮತ್ತು ಎಲ್ಲ ಅಧಿಕಾರಗಳನ್ನು ಚಲಾಯಿಸುವುದು;

(ಘ) ಕಮಿಷನರ್‌ನಿಗೆ ಅಥವಾ ಈ ಬಗ್ಗೆ ಕಮಿಷನರನು ಕಾಲಕಾಲಕ್ಕೆ ನಾಮನಿರ್ದೇಶನ ಮಾಡತಕ್ಕಂಥ ಇತರ ಅಧಿಕಾರಿಗೆ ಮುನ್ಸಿಪಲ್ ಕೌನ್ಸಿಲ್‌ನ ಯಾವುದೇ ಸಭೆಯಲ್ಲಿ ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಪ್ರತಿಯನ್ನು ಹದಿನೈದು ದಿನಗಳ ಅವಧಿಯೊಳಗಾಗಿ ಒದಗಿಸುವುದು; ಮತ್ತು

(ಙ) 304ನೇ ಪ್ರಕರಣದ ಮೇರೆಗೆ ಕಮಿಷನರ್‌ನು ಅಥವಾ ಇತರ ಅಧಿಕಾರಿಯು ಕೇಳುವಂಥ ಮುನ್ಸಿಪಲ್ ಕೌನ್ಸಿಲಿನ ಅಥವಾ ಯಾವುದೇ ಸಮಿತಿಯ ವ್ಯವಹರಣೆಗಳ ನಡವಳಿಕೆ ಅಥವಾ ಯಾವುದೇ ಇತರ ದಸ್ತಾವೇಜು ಅಥವಾ ವಸ್ತುವಿನಿಂದ ಯಾವುದೇ ಉಧೃತವನ್ನು ಒದಗಿಸುವುದು,

– ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷನ ಕರ್ತವ್ಯವಾಗಿರತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷನು ತುರ್ತು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲಿನ ಮಂಜೂರಾತಿಯು ಅಗತ್ಯವಿರುವಂಥ ಮತ್ತು ಅವನ ಅಭಿಪ್ರಾಯದಲ್ಲಿ ಸಾರ್ವಜನಿಕ ಸೇವೆ ಅಥವಾ ಸುರಕ್ಷತೆಗಾಗಿ ಕೂಡಲೇ ಅದನ್ನು ನಿರ್ವಹಿಸುವುದು ಅಥವಾ ಮಾಡುವುದು ಅವಶ್ಯವಿರುವಂಥ ಯಾವುದೇ ಕೆಲಸದ ನಿರ್ವಹಣೆ ಅಥವಾ ನಿಲುಗಡೆಯನ್ನು ಅಥವಾ ಯಾವುದೇ ಕಾರ್ಯ ಮಾಡುವುದನ್ನು ನಿರ್ದೇಶಿಸಬಹುದು ಮತ್ತು ಅಂಥ ಕೆಲಸದ ನಿರ್ವಹಣೆಯ ಅಥವಾ ಅಂಥ ಕಾರ್ಯವನ್ನು ಮಾಡುವುದರ ಬಗೆಗಿನ ವೆಚ್ಚಗಳನ್ನು ಪೌರಸಭಾ ನಿಧಿಯಿಂದ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು,–

(ಕ) ಯಾವುದೇ ನಿರ್ದಿಷ್ಟ ಕೆಲಸದ ನಿರ್ವಹಣೆಯನ್ನು ಅಥವಾ ಯಾವುದೇ ನಿರ್ದಿಷ್ಟ ಕಾರ್ಯ ಮಾಡುವುದನ್ನು ನಿಷೇಧಿಸುವ ಮುನ್ಸಿಪಲ್ ಕೌನ್ಸಿಲಿನ ಯಾವುದೇ ಆದೇಶವನ್ನು ಉಲ್ಲಂಘಿಸಿ ಈ ಪ್ರಕರಣದ ಮೇರೆಗೆ ಅವನು ಕಾರ್ಯನಿರ್ವಹಿಸತಕ್ಕದ್ದಲ್ಲ; ಮತ್ತು

(ಖ) ಅವನು ಪ್ರಕರಣದ ಮೇರೆಗೆ ಕೈಗೊಂಡ ಕ್ರಮವನ್ನು ಮತ್ತು ಅದಕ್ಕಾಗಿನ ಕಾರಣವನ್ನು ತತ್‌ಕ್ಷಣ ಸ್ಥಾಯೀ ಸಮಿತಿಗೆ ಅದರ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದು.

(3) ಅಧ್ಯಕ್ಷನು, ಕೆಳಕಂಡ ಹೆಚ್ಚಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಕ) ಕೌನ್ಸಿಲಿನ ಅಥವಾ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಕಾರ್ಯಗತಗೊಳಿಸಲು ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನಿಗೆ ನಿರ್ದೇಶನಗಳನ್ನು ಕೊಡುವುದು;

(ಖ) ಕೌನ್ಸಿಲಿನ ಆಡಳಿತ ವರದಿ ಮತ್ತು ವಾರ್ಷಿಕ ವರದಿಯನ್ನು ವರ್ಷದ ಮುಕ್ತಾಯಕ್ಕೆ ಮುಂಚೆ ಸಿದ್ಧಪಡಿಸಲು ಮತ್ತು ಇಡಲು ಅಗತ್ಯಪಡಿಸುವುದು;

(ಗ) ಲೆಕ್ಕಪರಿಶೋಧನಾ ವರದಿಯಲ್ಲಿ ಎತ್ತಿ ತೋರಿಸಿದ ಅಂಶಗಳನ್ನು ಪಾಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನಗಳನ್ನು ಕೊಡುವುದು;

(ಘ) ಕೌನ್ಸಿಲ್ಲು ಕೈಗೊಂಡ ಕಾಮಗಾರಿಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆಯನ್ನು ಕೈಗೊಳ್ಳುವುದು;

(ಙ) ಯಾವುದೇ ದಾಖಲೆಯನ್ನು ತರಿಸಿಕೊಳ್ಳುವುದು, ಆದರೆ ಅದನ್ನು ಒಂದು ತಿಂಗಳ ಒಳಗಾಗಿ ಹಿಂದಿರುಗಿಸತಕ್ಕದ್ದು.

(4) ಅಧ್ಯಕ್ಷನು ಎಲ್ಲ ಸ್ಥಾಯೀ ಸಮಿತಿಗಳ ಪದನಿಮಿತ್ತ ಸದಸ್ಯನಾಗಿರತಕ್ಕದ್ದು, ಆದರೆ ಯಾವುದೇ ಪ್ರಶ್ನೆಯ ಮೇಲೆ ಮತ ನೀಡುವ ಅಧಿಕಾರವಿರತಕ್ಕದ್ದಲ್ಲ.

(5) ಮುನ್ಸಿಪಲ್ ಕಮೀಷನರನು ಅಥವಾ ಚೀಫ್ ಆಫೀಸರನು ಸರ್ಕಾರಕ್ಕೆ ಪತ್ರ ವ್ಯವಹಾರವನ್ನು ಮಾಡಿದಾಗಲೆಲ್ಲಾ ಅದೇ ಕಾಲದಲ್ಲಿ ಅವುಗಳ ಪ್ರತಿಗಳನ್ನು ಅಧ್ಯಕ್ಷನಿಗೆ ಕಳಿಹಿಸತಕ್ಕದ್ದು.

**44. ಉಪಾಧ್ಯಕ್ಷನ ಪ್ರಕಾರ್ಯಗಳು.–** (1) ಈ ಬಗ್ಗೆ ಸರ್ಕಾರವು ಹೊರಡಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಅನುಸಾರವಾಗಿ ಅಧ್ಯಕ್ಷನು ಅವನಿಗೆ ಕಾಲಕಾಲಕ್ಕೆ ವಹಿಸಿಕೊಡುವಂಥ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸುವುದು ಮುನ್ಸಿಪಲ್ ಕೌನ್ಸಿಲ್ಲಿನ ಉಪಾಧ್ಯಕ್ಷನ ಕರ್ತವ್ಯವಾಗಿರತಕ್ಕದ್ದು.

(2) (ಕ) ಅಧ್ಯಕ್ಷನ ಗೈರು ಹಾಜರಿಯಲ್ಲಿ ಮತ್ತು ಯುಕ್ತ ಕಾರಣದಿಂದ ತಡೆಗಟ್ಟಲಾಗಿದ್ದ ಹೊರತು, ಮುನ್ಸಿಪಲ್ ಕೌನ್ಸಿಲ್ಲಿನ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವುದು ಮತ್ತು ಹಾಗೆ ಅಧ್ಯಕ್ಷತೆ ವಹಿಸುವಾಗ 43ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ಅಧ್ಯಕ್ಷನಲ್ಲಿ ನಿಹಿತವಾಗಿರುವಂಥದೇ ಅಧಿಕಾರವನ್ನು ಚಲಾಯಿಸುವುದು.

(ಖ) ಅಧ್ಯಕ್ಷನ ಉತ್ತರಾಧಿಕಾರ ನೇಮಕಾತಿ ಅಥವಾ ಚುನಾವಣೆ ಆಗುವವರೆಗೆ ಅಥವಾ ಏಳು ದಿವಸಗಳಿಗೆ ಮೀರಿದ ಯಾವುದೇ ಅವಧಿಗೆ ಅಧ್ಯಕ್ಷನ ಗೈರುಹಾಜರಿಯಲ್ಲಿ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಕರ್ತವ್ಯಗಳನ್ನು ನೆರವೇರಿಸುವುದು,

–ಉಪಾಧ್ಯಕ್ಷನ ಕರ್ತವ್ಯವಾಗಿರತಕ್ಕದ್ದು.

(3) ಉಪಾಧ್ಯಕ್ಷನು ಎಲ್ಲ ಸ್ಥಾಯೀ ಸಮಿತಿಗಳ ಪದನಿಮಿತ್ತ ಸದಸ್ಯನಾಗಿರತಕ್ಕದ್ದು. ಆದರೆ ಯಾವುದೇ ಪ್ರಶ್ನೆಯ ಮೇಲೆ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**45. ಪ್ರತಿಯೊಬ್ಬ ಕೌನ್ಸಿಲರ್ ಮತ್ತು ಅಧ್ಯಕ್ಷನ ಹಕ್ಕುಗಳು ಹಾಗೂ ವಿಶೇಷಾಧಿಕಾರಗಳು.–** (1) ಯಾರೇ ಕೌನ್ಸಿಲರನು ಪೌರಸಭೆಯ ಕೆಲಸದ ನಿರ್ವಹಣೆಯಲ್ಲಿ ಯಾವುದೇ ನಿರ್ಲಕ್ಷತೆಗೆ ಯಾವುದೇ ಪೌರಸಭೆಯ ಸ್ವತ್ತಿನ ಯಾವುದೇ ಪೋಲಾಗುವಿಕೆಗೆ ಅಥವಾ ಯಾವುದೇ ಸ್ಥಳದ ಅವಶ್ಯಕತೆಗಳಿಗೆ ಯುಕ್ತ ಪ್ರಾಧಿಕಾರದ ಗಮನವನ್ನು ಸೆಳೆಯಬಹುದು ಮತ್ತು ತಾನು ಅಪೇಕ್ಷಣೀಯವೆಂದು ಪರ್ಯಾಲೋಚಿಸುವಂಥ ಯಾವುದೇ ಮೇಲ್ಪಾಟುಗಳನ್ನು ಸೂಚಿಸಬಹುದು.

(2) ಪ್ರತಿಯೊಬ್ಬ ಕೌನ್ಸಿಲರನು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಪೌರ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಅಡ್ಡ ಪ್ರಶ್ನೆ ಕೇಳಲು ಮತ್ತು ನಿರ್ಣಯಗಳನ್ನು ಮಂಡಿಸಲು ಹಕ್ಕನ್ನು ಹೊಂದಿರತಕ್ಕದ್ದು.

(2ಕ) ಪ್ರತಿಯೊಬ್ಬ ಕೌನ್ಸಿಲರನಿಗೆ ಕಮಿಷನರನು ಅಥವಾ ಚೀಫ್ ಆಫೀಸರನು ಮುಂದಿನ ಸಭೆಯ ನೋಟೀಸಿನೊಂದಿಗೆ ಸಭೆಗಳ ವ್ಯವಹರಣೆಗಳ ಪ್ರತಿಗಳನ್ನು ಒದಗಿಸತಕ್ಕದ್ದು.

(3) ಪ್ರತಿಯೊಬ್ಬ ಕೌನ್ಸಿಲರನು, ಸಂದರ್ಭಾನುಸಾರ ಚೀಫ್ ಆಫೀಸರನು ಅಥವಾ ಮುನ್ಸಿಪಲ್ ಕಮಿಷನರನಿಗೆ ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಮುನ್ಸಿಪಲ್ ಕೌನ್ಸಿಲ್ಲಿನ ದಾಖಲೆಗಳನ್ನು ನೋಡುವ ಅವಕಾಶವನ್ನು ಹೊಂದಿರತಕ್ಕದ್ದು: ಪರಂತು ಚೀಫ್ ಆಫೀಸರನು ಅಥವಾ ಮುನ್ಸಿಪಲ್ ಕಮಿಷನರನು ಬರಹದಲ್ಲಿ ಕೊಟ್ಟ ಕಾರಣಗಳಿಗಾಗಿ ಅಂಥ ನೋಡುವ ಅವಕಾಶವನ್ನು ನಿಷೇಧಿಸಬಹುದು. ಕೌನ್ಸಿಲರನು ಚೀಫ್ ಆಫೀಸರನ ಅಥವಾ ಮುನ್ಸಿಪಲ್ ಕಮಿಷರನ ಆದೇಶದ ಮೇಲೆ ಅಧ್ಯಕ್ಷನಿಗೆ ಅಪೀಲು ಮಾಡಬಹುದು; ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ಅಧ್ಯಕ್ಷನು ಮುನ್ಸಿಪಲ್ ಕೌನ್ಸಿಲ್ಲಿನ ಎಲ್ಲ ದಾಖಲೆಗಳನ್ನು ನೋಡುವ ಸಂಪೂರ್ಣ ಅವಕಾಶವನ್ನು ಹೊಂದಿರತಕ್ಕದ್ದು ಮತ್ತು ಚೀಫ್ ಆಫೀಸರನು ಅಥವಾ ಮುನಿಸಿಪಲ್ ಕಮಿಷನರನು ಪೌರ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿಗಾಗಿನ ಅಧ್ಯಕ್ಷನ ಯಾವುದೇ ಕಡ್ಡಾಯ ಕೋರಿಕೆಯನ್ನು ಅನುಚಿತ ವಿಳಂಬವಿಲ್ಲದೆ ಪಾಲಿಸತಕ್ಕದ್ದು. ಅಧ್ಯಕ್ಷನು ಮುನ್ಸಿಪಲ್ ಕೌನ್ಸಿಲಿನ ಕಮಿಷನರ್ ಚೀಫ್ ಆಫೀಸರ್ ಅಥವಾ ಇತರ ಯಾರೇ ಅಧಿಕಾರಿಯಿಂದ ತರಿಸಿಕೊಳ್ಳಬಹುದು. ಆದರೆ ಹಾಗೆ ತರಿಸಿಕೊಂಡ ಯಾವುದೇ ದಾಖಲೆಯನ್ನು ಒಂದು ತಿಂಗಳೊಳಗೆ ಹಿಂತಿರುಗಿಸತಕ್ಕದ್ದು.

**46. ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ಪ್ರಭಾರ ವಹಿಸಿಕೊಡಲು ನಿರಾಕರಿಸುವುದಕ್ಕೆ ದಂಡನೆ.–** (1) ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಚುನಾವಣೆಯಾದ ಮೇಲೆ ಯಾವ ನಿವೃತ್ತನಾಗುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಸ್ಥಾನದಲ್ಲಿ ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಚುನಾಯಿಸಲಾಗಿದೆಯೋ ಆ ನಿವೃತ್ತನಾಗುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಮತ್ತು 42ನೇ ಪ್ರಕರಣದ (9) ಅಥವಾ (10)ನೇ ಉಪ–ಪ್ರಕರಣದ ಮೇರೆಗೆ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ತೆಗೆದುಹಾಕಿದ ಮೇಲೆ ಹಾಗೆ ತೆಗೆದುಹಾಕಲಾದ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಸಂದರ್ಭಾನುಸಾರ ಅಂಥ ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ತನ್ನ ಪದದ ಪ್ರಭಾರವನ್ನು ವಹಿಸಿಕೊಡತಕ್ಕದ್ದು.

(2) ನಿವೃತ್ತನಾಗುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಅಥವಾ 42ನೇ ಪ್ರಕರಣದ (9) ಅಥವಾ (10)ನೇ ಉಪ–ಪ್ರಕರಣದ ಮೇರೆಗೆ ತೆಗೆದುಹಾಕಲಾದ ಅಧ್ಯಕ್ಷ ಅಥವಾ ಉಪಾಧ್ಯಕ್ಷನು 368ನೇ ಪ್ರಕರಣದ (1)ನೇ ಉಪ–ಪ್ರಕರಣ ಅಥವಾ (3)ನೇ ಉಪ–ಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ ತನ್ನ ಪದದ ಪ್ರಭಾರವನ್ನು ವಹಿಸಿಕೊಡಲು ತಪ್ಪಿದರೆ ಅಥವಾ ನಿರಾಕರಿಸಿದರೆ, ಆಗ ಸದರಿ ಉಪ–ಪ್ರಕರಣದ ಮೇರೆಗಿನ ಯಾವುದೇ ಕ್ರಮಕ್ಕೆ ಬಾಧಕವಾಗದಂತೆ ಸರ್ಕಾರ ಅಥವಾ ಈ ಬಗ್ಗೆ ಸರ್ಕಾರವು ಶಕ್ತಗೊಳಿಸಿದ ಯಾವುದೇ ಪ್ರಾಧಿಕಾರವು ಬರಹದಲ್ಲಿ ಆದೇಶದ ಮೂಲಕ ಸಂದರ್ಭಾನುಸಾರ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ತನ್ನ ಪದದ ಪ್ರಭಾರವನ್ನು ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಅವನ ಸ್ವಾಧೀನದಲ್ಲಿ ಇರುವ ಮುನ್ಸಿಪಲ್ ಕೌನ್ಸಿಲ್ಲಿನ ಎಲ್ಲ ಕಾಗದ ಪತ್ರಗಳು ಮತ್ತು ಸ್ವತ್ತು ಯಾವುದಾದರೂ ಇದ್ದರೆ ಅವುಗಳನ್ನು ತಕ್ಷಣ ಹೊಸ ಅಧ್ಯಕ್ಷ ಅಥವಾ ಉಪಾಧ್ಯಕ್ಷನಿಗೆ ವಹಿಸಿಕೊಡಲು ನಿರ್ದೇಶಿಸಬಹುದು.

(3) (3)ನೇ ಉಪ–ಪ್ರಕರಣದ ಮೇರೆಗೆ ನಿರ್ದೇಶನವನ್ನು ಕೊಡಲಾಗಿರುವ ನಿವೃತ್ತನಾಗುವ ಅಧ್ಯಕ್ಷ ಅಥವಾ ಉಪಾಧ್ಯಕ್ಷನ ಅಥವಾ 42ನೇ ಪ್ರಕರಣದ (9) ಅಥವಾ (10)ನೇ ಉಪ–ಪ್ರಕರಣದ ಮೇರೆಗೆ ತೆಗೆದುಹಾಕಲಾದ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಅಂಥ ನಿರ್ದೇಶನವನ್ನು ಪಾಲಿಸದಿದ್ದರೆ ಅವನು ಒಂದು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

## ಅಧ್ಯಾಯ–III

## ಮುನ್ಸಿಪಲ್ ಕೌನ್ಸಿಲಿನಿಂದ ಕಾರ್ಯನಿರ್ವಹಣೆ

**47. ಸಭೆ.–** (1) ಮುನ್ಸಿಪಲ್ ಕೌನ್ಸಿಲ್ಲು ಕಾರ್ಯನಿರ್ವಹಣೆಗಾಗಿ ಪ್ರತಿ ತಿಂಗಳಿನಲ್ಲಿ ಕನಿಷ್ಠ ಪಕ್ಷ ಒಂದು ಸಭೆಯನ್ನು ನಡೆಸತಕ್ಕದ್ದು; ಅದನ್ನು ಸಾಧಾರಣ ಸಾಮಾನ್ಯ ಸಭೆ ಎಂದು ಕರೆಯತಕ್ಕದ್ದು.

(2) ಅಧ್ಯಕ್ಷನು ಅವನು ಸೂಕ್ತವೆಂದು ಭಾವಿಸಿದಾಗಲೆಲ್ಲಾ ವಿಶೇಷ ಸಾಮಾನ್ಯ ಸಭೆಯನ್ನು ಕರೆಯಬಹುದು ಮತ್ತು ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರನೇ ಒಂದಕ್ಕೆ ಕಡಿಮೆಯಿಲ್ಲದವರ ಬರಹದಲ್ಲಿನ ಕೋರಿಕೆಯ ಮೇಲೆ ಮತ್ತು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ 15 ದಿವಸಗಳಿಗೆ ಮೀರದ ದಿನಾಂಕದಂದು ಒಂದು ವಿಶೇಷ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು.

(3) (2)ನೇ ಉಪ–ಪ್ರಕರಣದಲ್ಲಿ ಉಪಬಂಧಿಸಿದಂತೆ ಅಧ್ಯಕ್ಷನು ವಿಶೇಷ ಸಾಮಾನ್ಯ ಸಭೆಯನ್ನು ಕರೆಯಲು ತಪ್ಪಿದರೆ, ಉಪಾಧ್ಯಕ್ಷ ಅಥವಾ ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟಿನವರು ಕೌನ್ಸಿಲರುಗಳು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಮೂವತ್ತು ದಿನಗಳಿಗೆ ಮೀರದ ದಿನದಂದು ಅಂಥ ಸಭೆಯನ್ನು ಕರೆಯಬಹುದು ಮತ್ತು ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮೀಷನರನನ್ನು ಕೌನ್ಸಿಲರುಗಳಿಗೆ

ನೋಟೀಸನ್ನು ಕೊಡಲು ಹಾಗೂ ಸಭೆಯನ್ನು ಕರೆಯಲು ಅವಶ್ಯವಾಗಬಹುದಾದಂಥ ಕ್ರಮವನ್ನು ಕೈಗೊಳ್ಳಲು ಅಗತ್ಯಪಡಿಸಬಹುದು.

(4) ಯಾವುದೇ ಸಭೆಯನ್ನು ಮುಂದಿನ ಅಥವಾ ಯಾವುದೇ ತರುವಾಯದ ದಿನಾಂಕದವರೆಗೆ ಮುಂದೂಡಬಹುದು ಮತ್ತು ಮುಂದೂಡಲಾದ ಸಭೆಯನ್ನು ಅದೇ ರೀತಿಯಲ್ಲಿ ಮತ್ತೆ ಮುಂದೂಡಬಹುದು.

**48. ಸಭೆಯ ನೋಟೀಸು ಮತ್ತು ವ್ಯವಹಾರ.**– ಸಾಮಾನ್ಯ ಸಾಧಾರಣ ಸಭೆಯ ಏಳು ದಿನಗಳ ಸ್ಪಷ್ಟ ನೋಟೀಸನ್ನು ಮತ್ತು ವಿಶೇಷ ಸಾಧಾರಣ ಸಭೆಯ ಮೂರು ದಿನಗಳ ಸ್ಪಷ್ಟ ನೋಟೀಸನ್ನು ಅಥವಾ ಅತಿ ಜರೂರು ಸಂದರ್ಭದಲ್ಲಿ, ಯುಕ್ತವಾದಂಥ ಕಡಿಮೆ ಅವಧಿಯ ನೋಟೀಸನ್ನು, ಅಂಥ ಸಭೆಯು ನಡೆಯಬೇಕಾಗಿರುವ ಕಾಲ ಮತ್ತು ಸ್ಥಳವನ್ನು, ಮತ್ತು ಅದರಲ್ಲಿ ನಡೆಸಬೇಕಾದ ವ್ಯವಹಾರವನ್ನು ನಿರ್ದಿಷ್ಟಪಡಿಸಿ, ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮೀಷನರನು ಅದನ್ನು ಕೌನ್ಸಿಲರುಗಳಿಗೆ ಕೊಡತಕ್ಕದ್ದು ಮತ್ತು ಪೌರಸಭೆಯ ಕಚೇರಿಯಲ್ಲಿ ಅದನ್ನು ಹಾಕತಕ್ಕದ್ದು. ಸದರಿ ನೋಟೀಸು ಅಲ್ಲಿ ಮುಂದಿಡಲು ತಾನು ಉದ್ದೇಶಿಸಿದ, ಸಭೆಗೆ ಮುಂಚೆ ಹತ್ತು ದಿನಗಳಿಗೆ ಕಡಿಮೆಯಿಲ್ಲದ, ಬರಹದಲ್ಲಿನ ನೋಟೀಸನ್ನು, ಕೊಟ್ಟಿರುವ ಯಾವುದೇ ಸೂಚನೆ ಅಥವಾ ಪ್ರಸ್ತಾವವನ್ನು ಮತ್ತು ವಿಶೇಷ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಅಂಥ ಸಭೆಗಾಗಿ ಬರಹದಲ್ಲಿ ಮಾಡಿದ ಯಾವುದೇ ಕೋರಿಕೆಯಲ್ಲಿ ನಮೂದಿಸಿದ ಯಾವುದೇ ಸೂಚನೆ ಅಥವಾ ಪ್ರಸ್ತಾವವನ್ನು ಒಳಗೊಳ್ಳತಕ್ಕದ್ದು:

ಪರಂತು, ಯಾವ ಸೂಚನೆ ಅಥವಾ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ನೋಟೀಸನ್ನು ಕೊಡಲಾಗಿದೆಯೋ ಆ ಸೂಚನೆ ಅಥವಾ ಪ್ರಸ್ತಾವವು, ಪೌರ ಸಭೆ ಆಡಳಿತಕ್ಕೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಪಟ್ಟಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರತಕ್ಕದ್ದಲ್ಲ.

**49. ಸಭೆಗಳನ್ನು ನಡೆಸುವ ಸ್ಥಳ ಮತ್ತು ಅಲ್ಲಿ ಸುವ್ಯವಸ್ಥೆಯ ಪಾಲನೆ.**– (1) ಆ ಮುನ್ಸಿಪಲ್ ಕೌನ್ಸಿಲ್‌ನ ಪ್ರತಿಯೊಂದು ಸಭೆಯನ್ನು, ಆ ಸಭೆಯನ್ನು ಕರೆಯುವ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ ಕಾರಣಗಳಿಗಾಗಿ ಹೊರತು, ಅಂಥ ಮುನ್ಸಿಪಲ್ ಕೌನ್ಸಿಲ್ಲು ಪೌರಸಭಾ ಕಛೇರಿಯಾಗಿ ಉಪಯೋಗಿಸುತ್ತಿರುವ ಕಟ್ಟಡದಲ್ಲಿ ನಡೆಸತಕ್ಕದ್ದು.

(2) ಅಧ್ಯಕ್ಷ ಅಥವಾ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ಅಲ್ಲಿ ಸುವ್ಯವಸ್ಥೆಯನ್ನು ಕಾಪಾಡತಕ್ಕದ್ದು ಮತ್ತು ಅಂಥ ಸುವ್ಯವಸ್ಥೆಯನ್ನು ಕಾಪಾಡುವ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) ಅಧ್ಯಕ್ಷ ಅಥವಾ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಯು ಅವನ ಅಭಿಪ್ರಾಯದಲ್ಲಿ ಯಾವ ಕೌನ್ಸಿಲರನ ವರ್ತನೆಯು ಅವ್ಯವಸ್ಥಿತವೆಂದು ತೋರುವುದೋ ಆ ಯಾರೇ ಕೌನ್ಸಿಲರನನ್ನು ಸಭೆಯಿಂದ ಕೂಡಲೇ ಹಿಂತೆಗೆಯುವಂತೆ ನಿರ್ದೇಶಿಸಬಹುದು. ಹಾಗೆ ಹಿಂತೆಗೆಯಲು ನಿರ್ದೇಶಿಸಲಾದ ಯಾರೇ ಕೌನ್ಸಿಲರನು ತತ್‌ಕ್ಷಣವೇ ಹಾಗೆ ಮಾಡತಕ್ಕದ್ದು ಮತ್ತು ಅವನು ಸಭೆಯ ಉಳಿದ ಅವಧಿಯಲ್ಲಿ ಗೈರು ಹಾಜರಾಗತಕ್ಕದ್ದು.

(4) (5)ನೇ ಉಪ–ಪ್ರಕರಣಕ್ಕೆ ಒಳಪಟ್ಟು ಸಭೆಯಲ್ಲಿ ಹಾಜರಿರುವ ಬಹುಸಂಖ್ಯೆಯ ಸದಸ್ಯರು ಮುನ್ಸಿಪಲ್ ಕೌನ್ಸಿಲ್ಲಿನ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ವಿಚಾರಣೆ ಅಥವಾ ಚರ್ಚೆಯು ಗುಟ್ಟಾಗಿ ನಡೆಯತಕ್ಕದ್ದೆಂದು ತೀರ್ಮಾನಿಸಿದ ಹೊರತು ಪ್ರತಿಯೊಂದು ಸಭೆಯು ಸಾರ್ವಜನಿಕರಿಗೆ ಮುಕ್ತವಾಗಿರತಕ್ಕದ್ದು.

(5) ಸರ್ಕಾರವು, 323ನೇ ಪ್ರಕರಣದ (2)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ಮುನ್ಸಿಪಲ್ ಕೌನ್ಸಿಲಿನ ಸಭೆಗಳಿಗೆ ಸಾರ್ವಜನಿಕರನ್ನು ಸೇರಿಸಿಕೊಳ್ಳುವ ಉದ್ದೇಶಕ್ಕಾಗಿ ಮತ್ತು ಹಾಗೆ ಪ್ರವೇಶ ಪಡೆದ ಯಾರೇ ಸಾರ್ವಜನಿಕನನ್ನು ಅವನು ಸಭೆಯ ನಡವಳಿಕೆಗಳಿಗೆ ಅಡ್ಡಿಪಡಿಸುವನೆಂದು ಅಥವಾ ತೊಂದರೆ ಉಂಟು

ಮಾಡುತ್ತಿರುವನೆಂದು ಕಂಡುಬಂದರೆ, ಅವಶ್ಯವಾದರೆ ಬಲಪ್ರಯೋಗದ ಮೂಲಕ ಹೊರ ಹಾಕುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(6) 56ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ಸಭೆಯಲ್ಲಿ ಗಂಭೀರ ಅವ್ಯವಸ್ಥೆ ಉದ್ಭವಿಸಿದ ಸಂದರ್ಭದಲ್ಲಿ ಅಧ್ಯಕ್ಷ ಅಥವಾ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಹಾಗೆ ಮಾಡುವುದು ಅವಶ್ಯಕವೆಂದು ಅವನು ಯೋಚಿಸಿದ್ದರೆ ಅವನು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಸಭೆಯನ್ನು ಮುಂದೂಡಬಹುದು.

**50. ಕೋರಂ.–** ಸಭೆಯಲ್ಲಿ ಅದರ ಪ್ರಾರಂಭದಿಂದ ಕೊನೆಯವರೆಗೂ ಯಾವುದೇ ಕಾಲದಲ್ಲಿ ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರನೇ ಒಂದಕ್ಕಿಂತ ಕಡಿಮೆ ಕೌನ್ಸಿಲರುಗಳು ಹಾಜರಿದ್ದರೆ, ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಮೂವತ್ತು ನಿಮಿಷಗಳವರೆಗೆ ಕಾದ ನಂತರ ಅವನು ಯುಕ್ತವಾಗಿ ನಿಗದಿಪಡಿಸಬಹುದಾದಂಥ ವೇಳೆಗೆ ಮೂರನೆಯ ಅಥವಾ ಮುಂದಿನ ಯಾವುದೇ ಇತರ ದಿನಕ್ಕೆ ಮುಂದೂಡತಕ್ಕದ್ದು ಮತ್ತು ಅಂಥ ಮುಂದೂಡುವಿಕೆಯ ನೋಟೀಸನ್ನು ಪೌರಸಭೆ ಕಛೇರಿಯಲ್ಲಿ ಅಂಟಿಸತಕ್ಕದ್ದು, ಮತ್ತು ಯಾವ ವ್ಯವಹಾರವನ್ನು ಮೂಲ ಸಭೆಯ ಮುಂದೆ ಅದರಲ್ಲಿ ಕೋರಂ ಇದಿದ್ದರೆ ತರಬೇಕಾಗಿತ್ತೋ ಆ ವ್ಯವಹಾರವನ್ನು ಮುಂದೂಡಿದ ಸಭೆಯ ಮುಂದೆ ತರತಕ್ಕದ್ದು ಮತ್ತು ಅಂಥ ಸಭೆಯಲ್ಲಿ ಅದನ್ನು ವಿಲೆ ಮಾಡಬಹುದು, ಪರಂತು ಕೌನ್ಸಿಲರುಗಳ ಒಟ್ಟು ಸಂಖ್ಯೆಯ ನಾಲ್ಕನೆಯ ಒಂದಕ್ಕಿಂತ ಕಡಿಮೆ ಇಲ್ಲದ ಕೌನ್ಸಿಲರುಗಳು ಹಾಜರಿರತಕ್ಕದ್ದು.

**51. ಅಧ್ಯಕ್ಷಾಧಿಕಾರಿ.–** (1) ಮುನ್ಸಿಪಲ್ ಕೌನ್ಸಿಲಿನ ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷ ಅಥವಾ ಅವನ ಗೈರು ಹಾಜರಿಯಲ್ಲಿ ಉಪಾಧ್ಯಕ್ಷನು ಅಧ್ಯಕ್ಷತೆ ವಹಿಸತಕ್ಕದ್ದು.

(2) ಸಭೆಯಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಬ್ಬರ ಗೈರು ಹಾಜರಿಯಲ್ಲಿ ಹಾಜರಿರುವ ಸದಸ್ಯರುಗಳು ತಮ್ಮ ಪೈಕಿ ಒಬ್ಬನನ್ನು ಅಧ್ಯಕ್ಷತೆ ವಹಿಸಲು ಚುನಾಯಿಸತಕ್ಕದ್ದು.

(3) ಅಧ್ಯಕ್ಷ ಅಥವಾ ಸಭೆಯ ಅಧ್ಯಕ್ಷತೆಯನ್ನು ವಹಿಸುವ ವ್ಯಕ್ತಿಯು ಸಮಾನ ಮತಗಳ ಎಲ್ಲಾ ಸಂದರ್ಭಗಳಲ್ಲಿ ದ್ವಿತೀಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

**52. ಪ್ರಶ್ನೆಗಳನ್ನು ತೀರ್ಮಾನಿಸುವ ವಿಧಾನ.–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು ಮುನ್ಸಿಪಲ್ ಕೌನ್ಸಿಲ್ ತೀರ್ಮಾನಿಸಬೇಕೆಂದು ಅಗತ್ಯಪಡಿಸಿದ ಎಲ್ಲಾ ವಿಷಯಗಳನ್ನು ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಬಹುಮತದಿಂದ ತೀರ್ಮಾನಿಸತಕ್ಕದ್ದು.

(2) ಮತದಾನವು ಕೈ ಎತ್ತುವುದರ ಮೂಲಕ ಇರತಕ್ಕದ್ದು. ಆದರೆ ಮುನ್ಸಿಪಲ್ ಕೌನ್ಸಿಲು 323ನೇ ಪ್ರಕರಣದ (2)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು ಯಾವುದೇ ಪ್ರಶ್ನೆ ಅಥವಾ ಪ್ರಶ್ನೆಗಳ ವರ್ಗವನ್ನು ಮತಚೀಟಿಯ ಮೂಲಕ ತೀರ್ಮಾನಿಸತಕ್ಕದ್ದೆಂದು ನಿರ್ಣಯಿಸಬಹುದು.

(3) ಯಾವುದೇ ಸಭೆಯಲ್ಲಿ ಕನಿಷ್ಠ ಪಕ್ಷ ನಾಲ್ಕಾರು ಸದಸ್ಯರು ಮತದಾನವಾಗಬೇಕೆಂದು ತಗಾದೆ ಮಾಡಿದ ಹೊರತು ಅಂಥ ಸಭೆಯಲ್ಲಿ ನಿರ್ಣಯವನ್ನು ಅಂಗೀಕೃತವಾಗಿದೆ ಅಥವಾ ಹೋಗಿದೆ ಎಂದು ಅಧ್ಯಕ್ಷ ಅಧಿಕಾರಿಯ ಘೋಷಣೆ ಮತ್ತು ಅದಕ್ಕಾಗಿ ವ್ಯವಹರಣೆಗಳ ನಡವಳಿಕೆಯಲ್ಲಿನ ನಮೂದು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಥ ನಿರ್ಣಯದ ಪರವಾಗಿ ಅಥವಾ ವಿರುದ್ಧವಾಗಿ ದಾಖಲಾದಂಥ ಮತಗಳ ಸಂಖ್ಯೆ ಅಥವಾ ಪ್ರಮಾಣದ ರುಜುವಾತು ಇಲ್ಲದೆ ಅದು ಸಂಗತಿಯ ನಿರ್ಣಯ ಸಾಕ್ಷ್ಯವಾಗಿರತಕ್ಕದ್ದು.

(4) ಹಿಂದೆ ಹೇಳಿದಂತೆ ಮತದಾನವನ್ನು ತಗಾದೆ ಮಾಡಿದರೆ ಮತದಾನ ಮಾಡಲು ಇಚ್ಛಿಸುವ ಹಾಜರಿರುವ ಎಲ್ಲಾ ಸದಸ್ಯರ ಮತಗಳನ್ನು ಸಭೆಯಲ್ಲಿ ಅಧ್ಯಕ್ಷಾಧಿಕಾರಿಯ ನಿರ್ದೇಶನದ ಮೇರೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಮತದಾನದ ಫಲಿತಾಂಶವನ್ನು ಅಂಥ ಸಭೆಯಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ನಿರ್ಣಯವೆಂದು ಭಾವಿಸತಕ್ಕದ್ದು.

**53. ಸಭೆಗಳಲ್ಲಿ ನಡೆಸಬೇಕಾದ ವ್ಯವಹಾರ ಮತ್ತು ವ್ಯವಹಾರಗಳ ಕ್ರಮಾಗತವನ್ನು ಹೇಗೆ ಇತ್ಯರ್ಥಪಡಿಸತಕ್ಕದ್ದು.–** (1) 59ನೇ ಪ್ರಕರಣದ (2)ನೇ ಉಪ–ಪ್ರಕರಣದ ಪರಂತುಕದಲ್ಲಿ ಉಪಬಂಧಿಸಿರುವಂತೆ ಹೊರತು, ಸಾಮಾನ್ಯ ಸಭೆಯಲ್ಲಿ, ಅಂಥ ಸಭೆಯನ್ನು ಕರೆಯುವ ನೋಟೀಸಿನಲ್ಲಿ ಅಥವಾ ವಿಶೇಷ ಸಾಮಾನ್ಯ ಸಭೆಯ ಸಂದರ್ಭದಲ್ಲಿ ಅಂಥ ಸಭೆಗಾಗಿ ಬರಹದಲ್ಲಿನ ಕೋರಿಕೆಯಲ್ಲಿ ಅದನ್ನು ನಮೂದಿಸಿರುವ ಹೊರತು ಯಾವುದೇ ವ್ಯವಹಾರವನ್ನು ನಡೆಸತಕ್ಕದ್ದಲ್ಲ ಮತ್ತು ಯಾವುದೇ ಪ್ರಸ್ತಾವವನ್ನು ಚರ್ಚಿಸತಕ್ಕದ್ದಲ್ಲ.

(2) ಯಾವ ಕ್ರಮದಲ್ಲಿ ಯಾವುದೇ ವ್ಯವಹಾರ ಅಥವಾ ಪ್ರಸ್ತಾವವನ್ನು ಅಂಥ ಸಭೆಯಲ್ಲಿ ತರತಕ್ಕದ್ದೋ ಆ ಯಾವುದೇ ಕ್ರಮವನ್ನು ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ನಿರ್ಧರಿಸತಕ್ಕದ್ದು, ಅವನು ಅಂಥ ವ್ಯವಹಾರದ ನಿರ್ದಿಷ್ಟ ಬಾಬಿಗೆ ಅಥವಾ ಯಾವುದೇ ನಿರ್ದಿಷ್ಟ ಪ್ರಸ್ತಾವಕ್ಕೆ ಆದ್ಯತೆಯನ್ನು ಕೊಡಲು ಯಾರೇ ಸದಸ್ಯನು ಪ್ರಸ್ತಾವಿಸಿದ ಸಂದರ್ಭದಲ್ಲಿ, ಆ ಪ್ರಸ್ತಾವವನ್ನು ಸಭೆಯ ಮುಂದಿಡತಕ್ಕದ್ದು ಮತ್ತು ಪ್ರಸ್ತಾವದ ಪರವಾಗಿ ಅಥವಾ ವಿರುದ್ಧವಾಗಿ ಕೊಡಲಾದ ಮತಗಳ ಬಹುಮತದ ಮೂಲಕ ಮಾರ್ಗದರ್ಶನ ಪಡೆಯತಕ್ಕದ್ದು:

ಪರಂತು, ಅಡ್ಡ ಪ್ರಶ್ನೆಗಳ ಉತ್ತರಗಳಿಗೆ ಆದ್ಯತೆ ಕೊಡತಕ್ಕದ್ದು ಮತ್ತು ಸದರಿ ಉದ್ದೇಶಕ್ಕಾಗಿ ಅರ್ಧ ಗಂಟೆಗಿಂತ ಹೆಚ್ಚು ಕಾಲವನ್ನು ಕೊಡತಕ್ಕದ್ದಲ್ಲ.

**54. ವ್ಯವಹರಣೆಗಳ ನಡವಳಿಕೆಗಳು.–** ಹಾಜರಿದ್ದ ಕೌನ್ಸಿಲರುಗಳ ಹೆಸರುಗಳು ಮತ್ತು ಸರ್ಕಾರದ ಅಧಿಕಾರಿಗಳು ಯಾರಾದರೂ ಇದ್ದರೆ ಅವರ ಹೆಸರುಗಳು ಮತ್ತು ಪ್ರತಿಯೊಂದು ಸಭೆಯಲ್ಲಿನ ವ್ಯವಹರಣೆಗಳ ನಡವಳಿಕೆಯನ್ನು ಮತ್ತು ಮುನ್ಸಿಪಲ್ ಕೌನ್ಸಿಲ್ ಹಾಗೆ ನಿರ್ಣಯಿಸಿದರೆ ಕನ್ನಡಕ್ಕೆ ಬದಲಾಗಿ ಅಥವಾ ಕನ್ನಡದ ಜೊತೆಯಲ್ಲಿ ಇಂಗ್ಲಿಷಿನಲ್ಲಿ ಆ ಉದ್ದೇಶಕ್ಕಾಗಿ ಒದಗಿಸಲಾದ ಪುಸ್ತಕದಲ್ಲಿ ಇಡತಕ್ಕದ್ದು, ಅದಕ್ಕೆ ಅಂಥ ಸಭೆಯ ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ರುಜು ಮಾಡತಕ್ಕದ್ದು ಮತ್ತು ಅದು ಎಲ್ಲ ಯುಕ್ತ ಕಾಲಗಳಲ್ಲಿ ಯಾರೇ ಕೌನ್ಸಿಲರನ ಮತ್ತು ಇತರ ಯಾರೇ ವ್ಯಕ್ತಿಯು ಇಪ್ಪತ್ತು ಪೈಸೆ ಫೀಜನ್ನು ಸಂದಾಯ ಮಾಡಿದ ಮೇಲೆ ಪರಿಶೀಲಿಸಲು ಅದು ಮುಕ್ತವಾಗಿರತಕ್ಕದ್ದು, ಯಾರೇ ಇತರ ವ್ಯಕ್ತಿಯು ಎಲ್ಲಾ ಯುಕ್ತ ಕಾಲಗಳಲ್ಲಿ ಅದನ್ನು ಪರಿಶೀಲನೆ ಮಾಡಲು ಮುಕ್ತವಾಗತಕ್ಕದ್ದು.

**55. ಕೌನ್ಸಿಲರುಗಳು ತಾವು ಹಿತಾಸಕ್ತಿ ಹೊಂದಿರುವಂಥ ವಿಷಯಗಳ ಮೇಲೆ ಮತ ನೀಡತಕ್ಕದ್ದಲ್ಲ.–** (1) ಯಾರೇ ಕೌನ್ಸಿಲರನು ಮುನ್ಸಿಪಲ್ ಕೌನ್ಸಿಲಿನ ಅಥವಾ ಅದರ ಯಾವುದೇ ಸಮಿತಿಯ ಸಭೆಯಲ್ಲಿ ಅವನ ಸ್ವಂತ ನಡವಳಿಕೆಗೆ ಸಂಬಂಧಪಟ್ಟ ಯಾವುದೇ ಪ್ರಶ್ನೆಯ ಮೇಲೆ ಮತ ಚಲಾಯಿಸತಕ್ಕದ್ದಲ್ಲ ಅಥವಾ ಅವನ ಹಣಕಾಸು ಹಿತಾಸಕ್ತಿಗೆ ಅಥವಾ ಅವನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಿತಾಸಕ್ತಿ ಹೊಂದಿರುವ ಯಾವುದೇ ಸ್ವತ್ತಿಗೆ ಅಥವಾ ಅವನು ವ್ಯವಸ್ಥಾಪಕ ಅಥವಾ ಏಜೆಂಟ್ ಆಗಿರುವ ಯಾವುದೇ ಸ್ವತ್ತಿನ ಅಥವಾ ಸ್ವತ್ತಿಗೆ ಸಂಬಂಧಿಸಿದಂತೆ (ಪಟ್ಟಣ ಅಥವಾ ನಗರದ ಅಥವಾ ಯಾವುದೇ ನಿರ್ದಿಷ್ಟ ವಿಭಾಗದ ನಿವಾಸಿಗಳನ್ನು ಸಾಮಾನ್ಯವಾಗಿ ಬಾಧಿಸುವ ವಿಷಯವನ್ನು ಹೊರತುಪಡಿಸಿ) ಯಾವುದೇ ವಿಷಯದ ಮೇಲೆ ಮತ ನೀಡತಕ್ಕದ್ದಲ್ಲ ಅಥವಾ ಚರ್ಚೆಯಲ್ಲಿ ಭಾಗವಹಿಸತಕ್ಕದ್ದಲ್ಲ.

(2) ಸಭೆಯಲ್ಲಿ ಹಾಜರಿರುವ ಯಾರೇ ಕೌನ್ಸಿಲರನು ಅಧ್ಯಕ್ಷತೆ ವಹಿಸುವ ಪ್ರಾಧಿಕಾರಿಯು ಚರ್ಚೆಯಲ್ಲಿರುವ ಯಾವುದೇ ವಿಷಯದಲ್ಲಿ ಅಂಥ ಯಾವುದೇ ಹಣಕಾಸು ಹಿತಾಸಕ್ತಿಯನ್ನು ಹೊಂದಿರುವನೆಂದು

ನಂಬಿದರೆ, ಮತ್ತು ಅದಕ್ಕಾಗಿ ಸೂಚನೆಯನ್ನು ಅಂಗೀಕರಿಸಿದರೆ ಅಂಥ ಚರ್ಚೆಯ ಕಾಲದಲ್ಲಿ ಅವನು ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದಲ್ಲ ಅಥವಾ ಅದರ ಮೇಲೆ ಮತ ನೀಡತಕ್ಕದ್ದಲ್ಲ ಅಥವಾ ಅದರಲ್ಲಿ ಭಾಗವಹಿಸತಕ್ಕದ್ದಲ್ಲ. ಅಂಥ ಚರ್ಚೆಯು ಮುಂದುವರಿಯುತ್ತಿರುವ ಕಾಲದಲ್ಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಯಾರೇ ಇತರ ಕೌನ್ಸಿಲರನನ್ನು ಆಯ್ಕೆ ಮಾಡಬಹುದು ಅಥವಾ ಚುನಾಯಿಸಬಹುದು.

**56. ಸಭೆಗಳ ಮುಂದೂಡಿಕೆ.–** ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಯಾವುದೇ ಸಾಮಾನ್ಯ ಸಭೆಯನ್ನು ಹಾಜರಿರುವ ಕೌನ್ಸಿಲರುಗಳ ಬಹುಮತದ ಸಮ್ಮತಿಯೊಂದಿಗೆ ಕಾಲಕಾಲಕ್ಕೆ ಅದೇ ದಿನದ ತರುವಾಯದ ವೇಳೆಗೆ ಅಥವಾ ಯಾವುದೇ ಇತರ ದಿನಕ್ಕೆ ಮುಂದೂಡಬಹುದು. ಆದರೆ ಯಾವ ಸಭೆಯನ್ನು ಮುಂದೂಡಲಾಯಿತೋ, ಆ ಸಭೆಯಲ್ಲಿ ವಿಲೆಯಾಗದೆ ಉಳಿದುದನ್ನು ಹೊರತುಪಡಿಸಿ, ಯಾವುದೇ ವ್ಯವಹಾರವನ್ನು, ಯಾವುದೇ ಮುಂದೂಡಿದ ಸಭೆಯಲ್ಲಿ ನಡೆಸತಕ್ಕದ್ದಲ್ಲ. ಪೌರಸಭಾ ಕಛೇರಿಯಲ್ಲಿ ಹಾಕಿದ್ದ ಅಂಥ ಮುಂದೂಡುವಿಕೆಯ ನೋಟೀಸನ್ನು, ಮುಂದೂಡಿದ ಸಭೆಗೆ ಸಾಕಷ್ಟು ಅವಧಿಯ ನೋಟೀಸು ಎಂದು ಭಾವಿಸತಕ್ಕದ್ದು.

**57. ನಿರ್ಣಯ ಮಾರ್ಪಾಡು ಮತ್ತು ರದ್ದಿಯಾತಿ.–** ಮುನ್ಸಿಪಲ್ ಕೌನ್ಸಿಲಿನ ಯಾವುದೇ ನಿರ್ಣಯವನ್ನು 48ನೇ ಪ್ರಕರಣದ ಅಗತ್ಯತೆಗಳನ್ನು ಪೂರೈಸಿ ಅಂಥ ಸಭೆಯಲ್ಲಿ ಅದಕ್ಕಾಗಿ ನೋಟೀಸನ್ನು ಕೊಟ್ಟಿರುವ ಸಾಮಾನ್ಯ ಸಭೆಯಲ್ಲಿ ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಅರ್ಧಕ್ಕಿಂತ ಕಡಿಮೆಯಲ್ಲಿರುವುದರಿಂದ ಅಂಗೀಕೃತವಾದ ನಿರ್ಣಯದ ಮತ್ತು ಅಂಥ ಸಭೆಯಲ್ಲಿ ಯಾವ ನಿರ್ಣಯವನ್ನು ಮಾರ್ಪಾಟು ಮಾಡಲು ಅಥವಾ ರದ್ದುಗೊಳಿಸಲು ಉದ್ದೇಶಿಸಲಾಗಿದೆಯೋ ಆ ನಿರ್ಣಯವನ್ನು ಪೂರ್ತಿಯಾಗಿ ಮತ್ತು ಅಂಥ ನಿರ್ಣಯದ ಮಾರ್ಪಾಟು ಅಥವಾ ರದ್ದಿಯಾತಿಗಾಗಿನ ಸೂಚನೆ ಅಥವಾ ಪ್ರಸ್ತಾವವನ್ನು ವಿವರಿಸುವ ಮೂಲಕವಲ್ಲದೆ ಅದನ್ನು ಅಂಗೀಕರಿಸಿದ ತರುವಾಯ ಮೂರು ತಿಂಗಳೊಳಗೆ ಮಾರ್ಪಾಡು ಮಾಡತಕ್ಕದ್ದಲ್ಲ ಅಥವಾ ರದ್ದುಗೊಳಿಸತಕ್ಕದ್ದಲ್ಲ.

**58. ಸೂಚನೆಗಳು ಮತ್ತು ತಿದ್ದುಪಡಿಗಳು.–** (1) ಪ್ರತಿಯೊಂದು ಸೂಚನೆ ಅಥವಾ ಅದರ ಯಾವುದೇ ತಿದ್ದುಪಡಿಯನ್ನು, ಬರಹದಲ್ಲಿ ಸ್ವೀಕರಿಸತಕ್ಕದ್ದು ಮತ್ತು ಅನಂತರ ಕ್ರಮಬದ್ಧವಾಗಿ ಮಂಡಿಸತಕ್ಕದ್ದು, ಪ್ರತಿಯೊಂದು. ಸೂಚನೆಯನ್ನು ಅನುಮೋದಿಸತಕ್ಕದ್ದು ಮತ್ತು ಅದನ್ನು ಅನುಮೋದಿಸುವವರೆಗೆ, ಅದರ ಮೇಲೆ ಯಾವುದೇ ಚರ್ಚೆಯು ನಡೆಯತಕ್ಕದ್ದಲ್ಲ, ಇಲ್ಲವೇ ಅದನ್ನು ಮತಕ್ಕೆ ಹಾಕತಕ್ಕದ್ದಲ್ಲ. ಮೂಲ ಸೂಚನೆಯನ್ನು ಕೇವಲ ನಕಾರಗೊಳಿಸುವ ಯಾವುದೇ ತಿದ್ದುಪಡಿಗೆ ಅವಕಾಶ ಕೊಡತಕ್ಕದ್ದಲ್ಲ.

(2) ಯಾವುದೇ ಸೂಚನೆ ಅಥವಾ ಮಾರ್ಪಾಡನ್ನು ಅದನ್ನು ಸೂಚಿಸುವವನು ಮುನ್ಸಿಪಲ್ ಕೌನ್ಸಿಲಿನ ಸಮ್ಮತಿಯೊಂದಿಗೆ ಹಿಂತೆಗೆದುಕೊಳ್ಳಬಹುದು.

(3) ಚರ್ಚೆಯ ಯಾವುದೇ ಹಂತದಲ್ಲಿ, ತಿದ್ದುಪಡಿಗೆ ತಿದ್ದುಪಡಿಯನ್ನು ಮಂಡಿಸಬಹುದು.

(4) ಚರ್ಚೆಯು ಮುಕ್ತಾಯವಾದ ಮೇಲೆ, ಒಂದು ತಿದ್ದುಪಡಿಗೆ ಹಲವಾರು ತಿದ್ದುಪಡಿಗಳು ಇರುವ ಸಂದರ್ಭದಲ್ಲಿ, ಅಧ್ಯಕ್ಷತೆ ವಹಿಸುವ ಪ್ರಾಧಿಕಾರಿಯು ಕೊನೆಯ ತಿದ್ದುಪಡಿಯನ್ನು ಮೊದಲು ಮತಕ್ಕೆ ಹಾಕತಕ್ಕದ್ದು ಮತ್ತು ಅದನ್ನು ವಿಲೆ ಮಾಡಿದ ತರುವಾಯ, ಅದಕ್ಕೆ ಮೊದಲಿನ ತಿದ್ದುಪಡಿಯನ್ನು ಮತಕ್ಕೆ ಹಾಕತಕ್ಕದ್ದು ಮತ್ತು ಎಲ್ಲಾ ತಿದ್ದುಪಡಿಗಳನ್ನು ವಿಲೆ ಮಾಡುವವರೆಗೆ ಹಾಗೆಯೇ ಮಾಡತಕ್ಕದ್ದು. ಸಂದರ್ಭಾನುಸಾರ ಮೂಲ ಸೂಚನೆ ಅಥವಾ ತಿದ್ದುಪಡಿಯಾದ ಸೂಚನೆಯನ್ನು ಅನಂತರ ಮತಕ್ಕೆ ಹಾಕತಕ್ಕದ್ದು.

(5) ಯಾವುದೇ ಸೂಚನೆ ಅಥವಾ ತಿದ್ದುಪಡಿಯು, ಅನೇಕ ಅಂಶಗಳನ್ನು ಒಳಗೊಂಡಿದ್ದಾಗ, ಅಧ್ಯಕ್ಷತೆಯನ್ನು ವಹಿಸುವ ಪ್ರಾಧಿಕಾರಿಯು, ಅದನ್ನು ವಿಭಾಗಿಸಬಹುದು ಮತ್ತು ಪ್ರತಿಯೊಂದು ಅಂಶವನ್ನೂ ಪ್ರತ್ಯೇಕವಾಗಿ ಮತಕ್ಕೆ ಹಾಕಬಹುದು.

(6) ಸೂಚನೆ ಅಥವಾ ತಿದ್ದುಪಡಿಯನ್ನು ಮತಕ್ಕೆ ಹಾಕಿದಾಗ ಮತ್ತು ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಅದನ್ನು ಅಂಗೀಕರಿಸಲಾಗಿದೆಯೆಂದು ಘೋಷಿಸಿದಾಗ ಸೂಚನೆ ಅಥವಾ ತಿದ್ದುಪಡಿಯನ್ನು ತಿದ್ದುಪಡಿ ಮಾಡುವುದಕ್ಕಾಗಿ ಹೆಚ್ಚಿನ ಪ್ರಸ್ತಾವಗಳನ್ನು ಪುರಸ್ಕರಿಸತಕ್ಕದ್ದಲ್ಲ.

**59. ಸಾಮಾನ್ಯ ಸಭೆಗಳನ್ನು ನಡೆಸುವುದು.–** (1) ಸಾಮಾನ್ಯ ಸಭೆಯಲ್ಲಿ ವ್ಯವಹಾರವನ್ನು ಈ ಕೆಳಕಂಡ ಕ್ರಮದಲ್ಲಿ ನಡೆಸತಕ್ಕದ್ದು:–

(ಕ) ಹಿಂದಿನ ಸಾಮಾನ್ಯ ಸಭೆಯ ಮತ್ತು ಅನಂತರ ನಡೆದ ಯಾವುದೇ ವಿಶೇಷ ಸಭೆಯ ನಡವಳಿಕೆಗಳನ್ನು ಓದತಕ್ಕದ್ದು ಮತ್ತು ಸ್ಥಿರೀಕರಿಸತಕ್ಕದ್ದು;

(ಖ) ಹಿಂದಿನ ಸಭೆಯಲ್ಲಿ ಮುಂದೂಡಲಾದ ವ್ಯವಹಾರವನ್ನು ಪರ್ಯಾಲೋಚಿಸತಕ್ಕದ್ದು;

(ಗ) ಕಾರ್ಯಸೂಚಿಯಲ್ಲಿ ಸೂಚಿಸಿದ ವಿಷಯಗಳನ್ನು ಅನಂತರ ಪರ್ಯಾಲೋಚಿಸತಕ್ಕದ್ದು;

(2) ಕೌನ್ಸಿಲರನು, ವ್ಯವಹಾರದ ಪಟ್ಟಿಯಲ್ಲಿ ಸೇರಿಸಲಾದ ವಿಷಯಗಳಿಗೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ಯಾರೇ ನಿರ್ಣಯವನ್ನು ಪ್ರಸ್ತಾವಿಸಬಹುದು:

ಪರಂತು, ಅಧ್ಯಕ್ಷನು ವ್ಯವಹಾರದ ಪಟ್ಟಿಯಲ್ಲಿ ಸೇರಿಸಿಲ್ಲದ ಮಾಮೂಲಿ ಸ್ವರೂಪದ ಯಾವುದೇ ಜರೂರು ವಿಷಯವನ್ನು ಯಾರೇ ಕೌನ್ಸಿಲರನು ಅದಕ್ಕೆ ಆಕ್ಷೇಪ ಮಾಡದಿದ್ದರೆ ಪ್ರಸ್ತಾವ ಮಾಡಬಹುದು.

(3) ಎಲ್ಲಾ ಕ್ರಿಯಾಲೋಪಗಳನ್ನು, ಅಧ್ಯಕ್ಷತೆ ವಹಿಸಿದ ಪ್ರಾಧಿಕಾರಿಯು ತಾನು ಸೂಕ್ತವೆಂದು ಭಾವಿಸಬಹುದಾದಂಥ ಚರ್ಚೆಯೊಂದಿಗೆ ಅಥವಾ ಇಲ್ಲದೆ ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(4) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ, ಉಪಬಂಧಿಸಿರದ ಪ್ರಕ್ರಿಯೆಯ ಯಾವುದೇ ಪ್ರಶ್ನೆಯನ್ನು ಹಾಜರಿದ್ದು ಮತ್ತು ಮತ ನೀಡುವ ಕೌನ್ಸಿಲರುಗಳ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು.

**60. ಕೆಲವು ಸಂದರ್ಭದಲ್ಲಿ ನಡೆಯಬೇಕಾಗಿರುವ ವ್ಯವಹಾರಗಳ ನೋಟೀಸನ್ನು ಸರ್ಕಾರದ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಕೊಡತಕ್ಕದ್ದು.–** ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಜರೂರೆಂದು ಭಾವಿಸುವಂಥ ಕಾರಣಗಳಿಗಾಗಿ ಹೊರತು, ಲೋಕೋಪಯೋಗಿ ಇಲಾಖೆಯು ಮುನ್ಸಿಪಲ್ ಕೌನ್ಸಿಲ್ಲಿಗಾಗಿ ನಿರ್ವಹಿಸುತ್ತಿರುವಂಥ ಯಾವುದೇ ಕಾಮಗಾರಿಗೆ ಸಂಬಂಧಪಟ್ಟಂತೆ ಯಾವುದೇ ವ್ಯವಹಾರವನ್ನು, ಮುನ್ಸಿಪಲ್ ಕೌನ್ಸಿಲಿನ ಸಭೆಯಲ್ಲಿ, ಅಂಥ ವ್ಯವಹಾರವನ್ನು ನಡೆಸುವ ಉದ್ದೇಶವನ್ನು ಮತ್ತು ಅಂಥ ವ್ಯವಹಾರಕ್ಕೆ ಸಂಬಂಧಿಸಿದಂತೆ ತರಲಿರುವ ಸೂಚನೆಗಳು ಅಥವಾ ಪ್ರಸ್ತಾವಗಳನ್ನು ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಅಸಿಸ್ಟೆಂಟ್ ಇಂಜಿನಿಯರನಿಗೆ ತಿಳಿಸುವ ಪತ್ರವನ್ನು ಸಂಬೋಧಿಸಿದ ಹೊರತು, ವ್ಯವಹರಿಸತಕ್ಕದ್ದಲ್ಲ.

**61. ಕೆಲವು ಸರ್ಕಾರಿ ಅಧಿಕಾರಿಗಳು ಮುನ್ಸಿಪಲ್ ಕೌನ್ಸಿಲಿನ ಸಭೆಗಳಿಗೆ ಹಾಜರಾಗಬಹುದು.–** ಸಂಬಂಧಪಟ್ಟ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರು ಜಿಲ್ಲೆಯಲ್ಲಿನ ಆರೋಗ್ಯ ಮುಖ್ಯಾಧಿಕಾರಿ ಮತ್ತು ಈ ಬಗ್ಗೆ ಸರ್ಕಾರವು ಅನುಮೋದಿಸಿದ ಮತ್ತು ಅಧಿಸೂಚಿಸಿದ ಇತರ ಯಾರೇ ಅಧಿಕಾರಿಯು, ಮುನ್ಸಿಪಲ್ ಕೌನ್ಸಿಲಿನ ಯಾವುದೇ ಸಭೆಯಲ್ಲಿ ಹಾಜರಿರಬಹುದು ಮತ್ತು ಮುನ್ಸಿಪಲ್ ಕೌನ್ಸಿಲಿನ ಸಮ್ಮತಿಯೊಂದಿಗೆ, ಯಾವ ಪ್ರಶ್ನೆಯ ಮೇಲೆ ತನ್ನ ಪದದ ಕರ್ತವ್ಯಗಳ ಕಾರಣದಿಂದಾಗಿ ಅವನ ಅಭಿಪ್ರಾಯವು ಅಥವಾ ಅವನು

ಒದಗಿಸಬಹುದಾದಂಥ ಮಾಹಿತಿಯು ಅಂಥ ಮುನ್ಸಿಪಲ್ ಕೌನ್ಸಿಲ್ಲಿಗೆ ಉಪಯುಕ್ತವಾಗುವುದೆಂದು ಅವನು ಪರ್ಯಾಲೋಚಿಸಿದರೆ ಅಂಥ ಸಭೆಯಲ್ಲಿ ಆ ಯಾವುದೇ ಪ್ರಶ್ನೆಯ ಚರ್ಚೆ ಅಥವಾ ಪರ್ಯಾಲೋಚನೆಯಲ್ಲಿ ಭಾಗವಹಿಸಬಹುದು:

ಪರಂತು, ಸದರಿ ಅಧಿಕಾರಿಯು, ಅಂಥ ಯಾವುದೇ ಪ್ರಶ್ನೆಯ ಮೇಲೆ ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಜಿಲ್ಲೆಯಲ್ಲಿನ ಆರೋಗ್ಯ ಮುಖ್ಯಾಧಿಕಾರಿ ಅಥವಾ ಶಿಕ್ಷಣಾಧಿಕಾರಿ ಅಥವಾ ಪಶುವೈದ್ಯ ಸೇವೆಗಳು ಮತ್ತು ಪಶುಸಂಗೋಪನಾ ಇಲಾಖೆಯ ಅಧಿಕಾರಿ ಅಥವಾ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಜನಾರೋಗ್ಯ ಇಂಜಿನಿಯರಿಂಗ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅಥವಾ ಪಟ್ಟಣ ಯೋಜನೆಯ ಉಪ ಸಹಾಯಕ ನಿರ್ದೇಶಕ ಅಥವಾ ಈ ಬಗ್ಗೆ ಸರ್ಕಾರವು ಅನುಮೋದಿಸಿದ ಮತ್ತು ಅಧಿಸೂಚಿಸಿದ ಯಾರೇ ಇತರ ಅಧಿಕಾರಿಯ ಹಾಜರಾತಿಯು ಅಂಥ ಮುನ್ಸಿಪಲ್ ಕೌನ್ಸಿಲಿನ ಯಾವುದೇ ಮುಂದಿನ ಸಭೆಯಲ್ಲಿ ಹಿಂದೆ ಹೇಳಿದ ಉದ್ದೇಶಕ್ಕಾಗಿ ಅಪೇಕ್ಷಣೀಯವೆಂದು ಮುನ್ಸಿಪಲ್ ಕೌನ್ಸಿಲಿಗೆ ಕಂಡುಬಂದರೆ, ಉದ್ದೇಶಿತ ಸಭೆಗೆ ಮುಂಚೆ ಹದಿನೈದು ದಿವಸಗಳಿಗೆ ಕಡಿಮೆಯಲ್ಲದಂತೆ ಅಂಥ ಅಧಿಕಾರಿಗೆ ಸಂಬೋಧಿಸಿದ ಪತ್ರದ ಮೂಲಕ ಅದರಲ್ಲಿ ಅವನ ಹಾಜರಾತಿಯನ್ನು ಅಗತ್ಯಪಡಿಸಲು ಮುನ್ಸಿಪಲ್ ಕೌನ್ಸಿಲ್ಲು ಸಕ್ಷಮವಾಗಿರತಕ್ಕದ್ದು ಮತ್ತು ಸದರಿ ಅಧಿಕಾರಿಯು, ಕಾಯಿಲೆ ಅಥವಾ ಇತರ ಯುಕ್ತ ಕಾರಣದಿಂದ ಅಡ್ಡಿ ಉಂಟಾದ ಹೊರತು, ಅಂಥ ಸಭೆಗೆ ಹಾಜರಾಗಲು ಬದ್ಧನಾಗಿರತಕ್ಕದ್ದು:

ಪರಂತು, ಅಂಥ ಅಧಿಕಾರಿಯು ಅಂಥ ಪತ್ರವನ್ನು ಸ್ವೀಕರಿಸಿದ ಮೇಲೆ ತಾನು ಸ್ವತಃ ಹಾಜರಾಗಲು ಅಸಮರ್ಥನಾದರೆ, ತನ್ನ ಉಪ ಅಥವಾ ಸಹಾಯಕ ಅಥವಾ ಇತರ ಸಕ್ಷಮನಾದ ಅಧೀನನಾಗಿರುವವನಿಗೆ ತನ್ನ ಅಭಿಪ್ರಾಯಗಳ ಬಗ್ಗೆ ತಿಳುವಳಿಕೆ ಕೊಡತಕ್ಕದ್ದು ಮತ್ತು ತಾನು ಅಲ್ಲಿ ಖುದ್ದಾಗಿ ಹಾಜರಾಗುವ ಬದಲು ತನ್ನ ಪ್ರತಿನಿಧಿಯಾಗಿ ಸಭೆಗೆ ಅವನನ್ನು ಕಳಿಸಬಹುದು:

**62. ಅಡ್ಡ ಪ್ರಶ್ನೆ.–** (1) ಕೌನ್ಸಿಲರನು, (2)ನೇ ಉಪ–ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪೌರಸಭಾ ಆಡಳಿತ ಅಥವಾ ಈ ಅಧಿನಿಯಮದ ನಿರ್ವಹಣೆ ಅಥವಾ ಯಾವುದೇ ಪೌರಸಭಾ ಪ್ರಾಧಿಕಾರಗಳ ಪ್ರಕಾರ್ಯಗಳಿಗೆ ಸಂಬಂಧಪಟ್ಟ ಯಾವುದೇ ವಿಷಯದ ಮೇಲೆ, ಪ್ರಶ್ನೆಗಳನ್ನು ಮುನ್ಸಿಪಲ್ ಕಮೀಷನರ್ ಅಥವಾ ಚೀಫ್ ಆಫೀಸರನಿಗೆ ಕೇಳಬಹುದು.

(2) ಪ್ರಶ್ನೆಯನ್ನು ಕೇಳುವ ಹಕ್ಕು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಎಂದರೆ,–

(ಕ) ಪ್ರಶ್ನೆಯನ್ನು ನಿರ್ದಿಷ್ಟಪಡಿಸುವ ಬರಹದಲ್ಲಿನ ಹತ್ತು ಸ್ಪಷ್ಟ ದಿನಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಮುನ್ಸಿಪಲ್ ಕಮಿಷನರನಿಗೆ ಅಥವಾ ಚೀಫ್ ಆಫೀಸರನಿಗೆ ಕೊಡತಕ್ಕದ್ದು;

(ಖ) ಯಾವುದೇ ಸಾಮಾನ್ಯ ಸಭೆಯಲ್ಲಿ ಉತ್ತರಿಸುವುದಕ್ಕಾಗಿ ಯಾರೇ ಕೌನ್ಸಿಲರನು, ಎರಡಕ್ಕಿಂತ ಹೆಚ್ಚು ಪ್ರಶ್ನೆಗಳನ್ನು ಕಳುಹಿಸತಕ್ಕದ್ದಲ್ಲ;

(ಗ) ಯಾವುದೇ ಪ್ರಶ್ನೆಯು,–

(i) ಪ್ರಶ್ನೆಯು ಅರ್ಥವಾಗುವಂತೆ ಮಾಡಲು ಕಟ್ಟುನಿಟ್ಟಾಗಿ ಅವಶ್ಯವಲ್ಲದ ಯಾವುದೇ ಹೆಸರನ್ನು ಅಥವಾ ಹೇಳಿಕೆಯನ್ನು ತರತಕ್ಕದ್ದಲ್ಲ;

(ii) ವಾದಗಳು, ವ್ಯಂಗ್ಯೋಕ್ತಿಗಳು, ಆರೋಪಗಳು, ವಿಶೇಷಣಗಳು ಅಥವಾ ಮಾನಹಾನಿ ಹೇಳಿಕೆಗಳನ್ನು ಒಳಗೊಂಡಿರತಕ್ಕದ್ದಲ್ಲ;

(iii) ಅಭಿಪ್ರಾಯದ ಕೋರಿಕೆ ಅಥವಾ ಕಾಲ್ಪನಿಕ ಪ್ರಸ್ತಾವದ ಪರಿಹಾರಕ್ಕಾಗಿ ಕೇಳತಕ್ಕದ್ದಲ್ಲ;

(iv) ಅವನ ಪದೀಯ ಅಥವಾ ಸಾರ್ವಜನಿಕ ಸ್ಥಾನ ಬಲದಿಂದ ಹೊರತು ಯಾರೇ ವ್ಯಕ್ತಿಯ ಚಾರಿತ್ರ್ಯ ಅಥವಾ ವರ್ತನೆಯ ಬಗ್ಗೆ ಕೇಳತಕ್ಕದ್ದಲ್ಲ;

(v) ಮುನ್ಸಿಪಲ್ ಕೌನ್ಸಿಲ್ ಅಥವಾ ಯಾವುದೇ ಪೌರ ಪ್ರಾಧಿಕಾರಕ್ಕೆ ಮುಖ್ಯವಾಗಿ ಸಂಬಂಧಿಸಿರದಂಥ ವಿಷಯಕ್ಕೆ ಸಂಬಂಧಪಟ್ಟಿರತಕ್ಕದ್ದಲ್ಲ;

(vi) ವೈಯಕ್ತಿಕ ಸ್ವರೂಪದ ಆರೋಪವನ್ನು ಮಾಡತಕ್ಕದ್ದಲ್ಲ ಅಥವಾ ಅದನ್ನು ಒಳಗೊಳ್ಳತಕ್ಕದ್ದಲ್ಲ;

(vii) ಒಂದು ಪ್ರಶ್ನೆಗೆ ಕೊಡುವ ಉತ್ತರದ ಪರಿಮಿತಿಗಳೊಳಗೆ ವ್ಯವಹರಿಸಲು ತುಂಬಾ ದೊಡ್ಡದಾದ ಧೋರಣೆಯ ಪ್ರಶ್ನೆಗಳನ್ನು ಎತ್ತತಕ್ಕದ್ದಲ್ಲ;

(viii) ಈಗಾಗಲೇ ಉತ್ತರಿಸಲಾದ ಅಥವಾ ಉತ್ತರವನ್ನು ನಿರಾಕರಿಸಲಾದಂಥ ಸಾರತಃ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೇಳತಕ್ಕದ್ದಲ್ಲ;

(ix) ಕ್ಷುಲ್ಲಕ ವಿಷಯಗಳ ಬಗ್ಗೆ ಮಾಹಿತಿಯನ್ನು ಕೇಳತಕ್ಕದ್ದಲ್ಲ;

(x) ಸಾಮಾನ್ಯವಾಗಿ ಪೂರ್ವ ವೃತ್ತಾಂತದ ವಿಷಯಗಳ ಬಗ್ಗೆ ಮಾಹಿತಿಯನ್ನು ಕೇಳತಕ್ಕದ್ದಲ್ಲ;

(xi) ನೋಡಲು ಅವಕಾಶವಿರುವ ದಸ್ತಾವೇಜುಗಳಲ್ಲಿ ಅಥವಾ ಸಾಮಾನ್ಯ ಪರಾಮರ್ಶನ ಕೃತಿಗಳಲ್ಲಿ ಹೇಳಿರುವ ಮಾಹಿತಿಯನ್ನು ಕೇಳತಕ್ಕದ್ದಲ್ಲ;

(xii) ಮುನ್ಸಿಪಲ್ ಕೌನ್ಸಿಲಿಗೆ ಮುಖ್ಯವಾಗಿ ಜವಾಬ್ದಾರರಲ್ಲದ ನಿಕಾಯಗಳ ಅಥವಾ ವ್ಯಕ್ತಿಗಳ ನಿಯಂತ್ರಣದಲ್ಲಿರುವ ವಿಷಯಗಳನ್ನು ಎತ್ತತಕ್ಕದ್ದಲ್ಲ, ಅಥವಾ

(xiii) ನ್ಯಾಯಾಲಯದ ನ್ಯಾಯ ನಿರ್ಣಯದಲ್ಲಿರುವ ವಿಷಯದ ಬಗ್ಗೆ ಯಾವುದೇ ಮಾಹಿತಿಯನ್ನು ಕೇಳತಕ್ಕದ್ದಲ್ಲ;

(3) ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು, ತನ್ನ ಅಭಿಪ್ರಾಯದಲ್ಲಿ (2)ನೇ ಉಪ–ಪ್ರಕರಣದ ಉಪಬಂಧವನ್ನು ಉಲ್ಲಂಘಿಸುವ ಯಾವುದೇ ಪ್ರಶ್ನೆಗೆ ಅವಕಾಶ ಕೊಡತಕ್ಕದ್ದಲ್ಲ.

(4) ಯಾವುದೇ ಪ್ರಶ್ನೆಯು (2)ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದೆಯೇ ಅಥವಾ ಇಲ್ಲವೇ ಎಂಬ ಸಂದೇಹ ಉದ್ಭವಿಸಿದರೆ, ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಆ ಅಂಶವನ್ನು ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

(5) ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು, ವಿಶ್ವಾಸದಲ್ಲಿ ಅವನಿಗೆ ತಿಳಿಸಲಾಗಿರುವ ಮಾಹಿತಿಯನ್ನು ಅದು ಕೇಳಿದರೆ ಅಥವಾ ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ,

ಸಾರ್ವಜನಿಕ ಹಿತಾಸಕ್ತಿ ಅಥವಾ ಮುನ್ಸಿಪಲ್ ಕೌನ್ಸಿಲಿನ ಹಿತಾಸಕ್ತಿಗೆ ಬಾಧಕವಾಗದಂತೆ ಅದನ್ನು ಉತ್ತರಿಸಲಾಗದಿದ್ದರೆ ಅವನು ಅದನ್ನು ಉತ್ತರಿಸಲು ಬದ್ಧನಾಗಿರತಕ್ಕದ್ದಲ್ಲ.

(6) ಸಭೆಯ ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯು ಅಥವಾ ಅಧ್ಯಕ್ಷಾಧಿಕಾರಿಯು, ಅನ್ಯಥಾ ನಿರ್ದೇಶಿಸಿದ ಹೊರತು, ಮುನ್ಸಿಪಲ್ ಕೌನ್ಸಿಲಿನ ಸಭೆಯಲ್ಲಿ ಪ್ರತಿಯೊಂದು ಪ್ರಶ್ನೆಯನ್ನು ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಉತ್ತರಿಸತಕ್ಕದ್ದು.

(7) ಅಂಗೀಕರಿಸಿದ ಪ್ರಶ್ನೆಗಳಿಗೆ ಬರಹದಲ್ಲಿನ ಉತ್ತರಗಳನ್ನು, ಸಾಧ್ಯವಾದಷ್ಟುಮಟ್ಟಿಗೆ ಸಭೆಗೆ ಒಂದು ಗಂಟೆ ಮುಂಚಿತವಾಗಿ ಕೌನ್ಸಿಲರುಗಳಿಗೆ ಕೊಡತಕ್ಕದ್ದು.

(8) ಯಾವುದೇ ಸಭೆಯಲ್ಲಿ ಕಾಲಾವಕಾಶ ಇಲ್ಲದ್ದಕ್ಕಾಗಿ ಅಥವಾ ಅನ್ಯಥಾ ಉತ್ತರಿಸದ ಪ್ರಶ್ನೆಗಳು, ಗತಿಸಿಹೋಗತಕ್ಕದ್ದು.

**63. ಸಮಿತಿಗಳು.–** (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲಿನಲ್ಲಿ ಸ್ಥಾಯೀ ಸಮಿತಿಯೆಂದು ಕರೆಯಲಾಗುವ ಒಂದು ಸಮಿತಿಯಿರತಕ್ಕದ್ದು. ಅದು ಮುನ್ಸಿಪಲ್ ಕೌನ್ಸಿಲು ನಿರ್ಧರಿಸಬಹುದಾದಂತೆ ಹನ್ನೊಂದಕ್ಕಿಂತ ಹೆಚ್ಚಿಲ್ಲದ ಅಥವಾ ಐದಕ್ಕಿಂತ ಕಡಿಮೆಯಿಲ್ಲದ ಸಂಖ್ಯೆಯ ಮತ್ತು 323ನೇ ಪ್ರಕರಣದ (2)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ರಚಿಸಿದ ನಿಯಮಗಳಿಗನುಸಾರವಾಗಿ ಮುನ್ಸಿಪಲ್ ಕೌನ್ಸಿಲಿನಿಂದ ಚುನಾಯಿತರಾದ ಕೌನ್ಸಿಲರುಗಳನ್ನು ಒಳಗೊಂಡಿರತಕ್ಕದ್ದು. ಹಾಗೆ ಚುನಾಯಿತರಾದ ಸದಸ್ಯರು ಒಂದು ವರ್ಷದ ಅವಧಿಗಾಗಿ ಪದಧಾರಣ ಮಾಡತಕ್ಕದ್ದು:

**ಪರಂತು,–** (i) ಮುನ್ಸಿಪಲ್ ಕೌನ್ಸಿಲು ತಾನು ಅವಶ್ಯವೆಂದು ಪರ್ಯಾಲೋಚಿಸಿದರೆ, ಮೂರು ಸ್ಥಾಯೀ ಸಮಿತಿಗಳನ್ನು ಹೊಂದಿರಬಹುದು, ಅಂಥ ಸಂದರ್ಭದಲ್ಲಿ ಸದರಿ ಸ್ಥಾಯೀ ಸಮಿತಿಗಳು ಹಣಕಾಸು, ಆರೋಗ್ಯ ಮತ್ತು ಕಾಮಗಾರಿಗಳಿಗಾಗಿ ಸ್ಥಾಯೀ ಸಮಿತಿಗಳಾಗಿರತಕ್ಕದ್ದು;

(ii) ಅಧ್ಯಕ್ಷ ಮತ್ತು ಉಪಾಧ್ಯಕ್ಷನು ಸ್ಥಾಯೀ ಸಮಿತಿಯ ಸದಸ್ಯರಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

(2) ಸ್ಥಾಯೀ ಸಮಿತಿಯು ಈ ಅಧಿನಿಯಮದ ಮೇರೆಗೆ ಅದಕ್ಕೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ವಿಶೇಷವಾಗಿ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲು ಅಥವಾ ಸಾಮಾನ್ಯವಾಗಿ 323ನೇ ಪ್ರಕರಣದ (2)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದ ಯಾವುದೇ ಪರಿಮಿತಿಗಳಿಗೆ ಮತ್ತು XIVನೇ ಅಧ್ಯಾಯದ ಉಪಬಂಧಗಳಿಗೊಳಪಟ್ಟು ಮುನ್ಸಿಪಲ್ ಕೌನ್ಸಿಲಿನ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2ಕ) (ಕ) (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಿತಿ ಅಥವಾ ಸಮಿತಿಗಳ ಜೊತೆಗೆ ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲಿನಲ್ಲಿ,–

(i) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಮುನ್ಸಿಪಲ್ ಕೌನ್ಸಿಲಿನ ಕೌನ್ಸಿಲರುಗಳು;

(ii) ಮುನ್ಸಿಪಲ್ ಕೌನ್ಸಿಲಿನ ಮಹಿಳಾ ಕೌನ್ಸಿಲರುಗಳು; ಮತ್ತು

(iii) ನಗರ ಮುನ್ಸಿಪಲ್ ಕೌನ್ಸಿಲ್ಲುಗಳ ಸಂದರ್ಭದಲ್ಲಿ ಕಮಿಷನರರನು ಮತ್ತು ಪಟ್ಟಣ ಮುನ್ಸಿಪಲ್ ಕೌನ್ಸಿಲುಗಳ ಸಂದರ್ಭದಲ್ಲಿ ಡೆಪ್ಯುಟಿ ಕಮೀಷನರರನು ನಾಮನಿರ್ದೇಶನ ಮಾಡಿದ ಇಬ್ಬರಿಗಿಂತ ಹೆಚ್ಚಿಲ್ಲದ ಇತರ ಕೌನ್ಸಿಲರುಗಳು,

–ಇವರುಗಳನ್ನು ಒಳಗೊಂಡ ಸಾಮಾಜಿಕ ನ್ಯಾಯ ಸಮಿತಿ ಇರತಕ್ಕದ್ದು;

(ಖ) ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷನು ಸಾಮಾಜಿಕ ನ್ಯಾಯ ಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಅಧ್ಯಕ್ಷನಾಗಿರತಕ್ಕದ್ದು. ಸದರಿ ಸಮಿತಿಯು ಮುನ್ಸಿಪಲ್ ಕೌನ್ಸಿಲು ಕಾಲಕಾಲಕ್ಕೆ ಕೊಡಬಹುದಾದಂಥ ಅನುದೇಶಗಳಿಗೆ ಒಳಪಟ್ಟು, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು, ಮಹಿಳೆಯರು ಮತ್ತು ಸಮಾಜದ ದುರ್ಬಲ ವರ್ಗಗಳಿಗೆ ಸಾಮಾಜಿಕ ನ್ಯಾಯವನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) * * *

**64.** * * *

**65. ಆಕಸ್ಮಿಕ ಖಾಲಿ ಸ್ಥಾನಗಳು.–** ಸ್ಥಾಯೀ ಸಮಿತಿಯಲ್ಲಿ ಅಥವಾ 63ನೇ ಪ್ರಕರಣದ 3ನೇ ಉಪ–ಪ್ರಕರಣದ ಮೇರೆಗೆ ನೇಮಕವಾದ ಸಮಿತಿಯಲ್ಲಿ ಉಂಟಾಗುವ ಖಾಲಿ ಸ್ಥಾನವನ್ನು, ಸಾಧ್ಯವಾದಷ್ಟು ಬೇಗನೆ, ಯಾವ ಉಪಬಂಧಗಳ ಮೇರೆಗೆ ಯಾವ ಸದಸ್ಯನ ಸ್ಥಾನವನ್ನು ಭರ್ತಿ ಮಾಡಬೇಕಾಗಿದೆಯೋ ಆ ಸದಸ್ಯನನ್ನು ನೇಮಕ ಮಾಡಿದಂಥವೇ ಉಪಬಂಧಗಳಿಗೊಳಪಟ್ಟು, ಅದಕ್ಕೆ ಸದಸ್ಯನನ್ನು ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು, ಈ ಪ್ರಕರಣದ ಮೇರೆಗೆ ನೇಮಕಗೊಂಡ ವ್ಯಕ್ತಿಯು, ಆ ಖಾಲಿಸ್ಥಾನವು ಉಂಟಾಗಿರದಿದ್ದರೆ ಯಾವ ವ್ಯಕ್ತಿಯ ಸ್ಥಾನದಲ್ಲಿ ಅವನನ್ನು ನೇಮಕ ಮಾಡಲಾಗಿದೆಯೋ ಆ ವ್ಯಕ್ತಿಯು ಅದನ್ನು ಧಾರಣ ಮಾಡುತ್ತಿದ್ದನೋ, ಅಲ್ಲಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು. ಯಾರೇ ವ್ಯಕ್ತಿಯು ಈ ಹಿಂದೆ ಸಮಿತಿಯ ಸದಸ್ಯನಾಗಿದ್ದನೆಂಬ ಕಾರಣದ ಮೇಲೆ ಅಂಥ ಯಾವುದೇ ಸಮಿತಿಯ ಸದಸ್ಯನಾಗಿ ನೇಮಕಗೊಳ್ಳಲು ಯಾವುದೇ ಕಾಲದಲ್ಲಿ ಅನರ್ಹನಾಗಿರತಕ್ಕದ್ದಲ್ಲ.

**66. ಸ್ಥಾಯೀ ಸಮಿತಿಯ ಅಧ್ಯಕ್ಷ.–** (1) ಸ್ಥಾಯೀ ಸಮಿತಿಯ ಅಧ್ಯಕ್ಷನನ್ನು ಅವರ ಸದಸ್ಯರು ಏಕವರ್ಗಾವಣೀಯ ಮತದ ವ್ಯವಸ್ಥೆಯ ಮೂಲಕ ಚುನಾಯಿಸತಕ್ಕದ್ದು.

**67. ಸಭೆಗಳಲ್ಲಿನ ಪ್ರಕ್ರಿಯೆ.–** (1) 49, 52 ಮತ್ತು 54ನೇ ಪ್ರಕರಣಗಳ ಮತ್ತು 61ನೇ ಪ್ರಕರಣದ (1)ನೇ ಉಪ–ಪ್ರಕರಣದ ಉಪಬಂಧಗಳನ್ನು, ಆ ಉಪಬಂಧಗಳಲ್ಲಿ ಅಡಕವಾಗಿರುವ, ಮುನ್ಸಿಪಲ್ ಕೌನ್ಸಿಲಿನ ಸಭೆಗಳಿಗೆ ಮಾಡಿದ ಎಲ್ಲ ಉಲ್ಲೇಖಗಳಲ್ಲಿ ಸಮಿತಿಯ ಸಭೆಗಳು ಒಳಗೊಂಡಿದ್ದರೆ ಹೇಗೋ ಹಾಗೆ ಸಮಿತಿಗಳ ಎಲ್ಲ ವ್ಯವಹರಣೆಗಳಲ್ಲಿ ಪಾಲಿಸತಕ್ಕದ್ದು. ಯಾವುದೇ ಸಮಿತಿಯ ಅಧ್ಯಕ್ಷನು ಏಳು ದಿನಗಳಿಗೆ ಮೀರದ ಅವಧಿಯವರೆಗೆ ಪೌರಸಭೆಯಿಂದ ಗೈರು ಹಾಜರಾಗಿದ್ದರೆ, ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಅದರ ಸಭೆಯನ್ನು ಕರೆಯಬಹುದು:

ಪರಂತು, 54ನೇ ಪ್ರಕರಣದಲ್ಲಿ ತದ್ವಿರುದ್ಧವಾಗಿ ಏನೇ ಅಡಕವಾಗಿದ್ದಾಗ್ಯೂ, ಸಮಿತಿಗಳು ಅವು ಸೂಕ್ತವೆಂದು ಭಾವಿಸಬಹುದಾದಂತೆ ಇಂಗ್ಲಿಷ್‌ನಲ್ಲಿಯೇ ಆಗಲಿ ಅಥವಾ ಕನ್ನಡದಲ್ಲಿಯೇ ಆಗಲಿ ಅವುಗಳ ವ್ಯವಹರಣೆಗಳನ್ನು ದಾಖಲ್ಮಾಡಬಹುದು.

(2) ಸಮಿತಿಗಳು ತಾವು ಸೂಕ್ತವೆಂದು ಭಾವಿಸುವ ಹಾಗೆ, ಸೇರಬಹುದು ಮತ್ತು ಮುಂದೂಡಬಹುದು. ಆದರೆ ಸಮಿತಿಯ ಅಧ್ಯಕ್ಷನು, ತಾನು ಸೂಕ್ತವೆಂದು ಭಾವಿಸಿದಾಗಲೆಲ್ಲಾ, ಅಂಥ ಸಮಿತಿಯ ವಿಶೇಷ ಸಭೆ ಕರೆಯಬಹುದು ಮತ್ತು ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷನ, ಅಥವಾ ಸಮಿತಿಯ ಇಬ್ಬರಿಗಿಂತ ಕಡಿಮೆಯಿಲ್ಲದ ಸದಸ್ಯರು ಬರಹದಲ್ಲಿ ಕೋರಿಕೆಯ ಮೇಲೆ ಮತ್ತು ಅಂಥ ಕೋರಿಕೆಯನ್ನು ಸಲ್ಲಿಸಿದ ತರುವಾಯ ಎರಡು ದಿನಗಳಿಗಿಂತ ಹೆಚ್ಚಿಲ್ಲದ ದಿನಾಂಕದಂದು, ಅಂಥ ಸಮಿತಿಯ ವಿಶೇಷ ಸಭೆಯನ್ನು ಕರೆಯತಕ್ಕದ್ದು.

(3) ಯಾವುದೇ ಸಮಿತಿಯ ಸಭೆಯಲ್ಲಿ, ಅಲ್ಲಿ ಮೂರನೇ ಒಂದಕ್ಕಿಂತ ಹೆಚ್ಚಿನ ಸದಸ್ಯರು ಹಾಜರಿದ್ದ ಹೊರತು, ಯಾವುದೇ ವ್ಯವಹಾರವನ್ನು ನಡೆಸತಕ್ಕದ್ದಲ್ಲ.

**68. ಪರಿಚಲನೆಯ ಮೂಲಕ ಪ್ರಕ್ರಿಯೆ.–** (1) 67ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಮಿತಿಯ ಅಧ್ಯಕ್ಷನು, ಸಭೆಯನ್ನು ಕರೆಯುವುದಕ್ಕೆ ಬದಲು ತನ್ನದೇ ಅಥವಾ ಸಮಿತಿಯ ಇತರ ಯಾರೇ ಸದಸ್ಯನ ಅಥವಾ ಮುನ್ಸಿಪಲ್ ಕಮಿಷನರನ ಅಥವಾ ಚೀಫ್ ಆಫೀಸರನ ಅಥವಾ ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಪ್ರಸ್ತಾವವನ್ನು ಸಮಿತಿಯ ಸದಸ್ಯರ ಅಭಿಪ್ರಾಯೋಕ್ತಿ ಮತ್ತು ಮತಗಳಿಗಾಗಿ ಪರಿಚಲನೆಗೊಳಿಸಬಹುದು.

(2) ಪರಿಚಲಿಸುವ ಮೊದಲು, ಅಧ್ಯಕ್ಷರು ಹಿಂದೆ ಹೇಳಿದಂತೆ ಅಂಥ ಯಾವುದೇ ಪ್ರಸ್ತಾವವನ್ನು ಪರಿಚಲನೆಗೊಳಿಸುವುದಕ್ಕೆ ಮುಂಚೆ ಅಧ್ಯಕ್ಷನು ತಾನು ಸೂಕ್ತವೆಂದು ಭಾವಿಸಿದರೆ ಮತ್ತು 60ನೇ ಪ್ರಕರಣದಲ್ಲಿ ವಿವರಿಸಿದ ಸ್ವರೂಪಕ್ಕೆ ಸಂಬಂಧಪಟ್ಟಂಥ ವ್ಯವಹಾರವಾಗಿದ್ದರೆ, 61ನೇ ಪ್ರಕರಣದ (2)ನೇ ಉಪ–ಪ್ರಕರಣದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲು ಯಾವ ಅಧಿಕಾರಿಯ ಹಾಜರಾತಿಯನ್ನು ಅಗತ್ಯಪಡಿಸಲು ಹಕ್ಕುಳ್ಳದ್ದಾಗಿರುವುದೋ ಆ ಯಾರೇ ಅಧಿಕಾರಿಯು ದಾಖಲ್ಮಾಡಲು ಇಚ್ಛಿಸುವ ಷರಾಗಳು ಯಾವುದಾದರೂ ಇದ್ದರೆ ಅವುಗಳನ್ನು ಅದರ ಮೇಲೆ ಪಡೆಯತಕ್ಕದ್ದು.

(3) ಹಾಗೆ ಪರಿಚಲಿಸಲಾದ ಯಾವುದೇ ಪ್ರಸ್ತಾವದ ಮೇಲಿನ ತೀರ್ಮಾನವು, ಸದರಿ ಪ್ರಸ್ತಾವವನ್ನು ಪರ್ಯಾಲೋಚಿಸಲು ವಿಶೇಷ ಸಭೆಯನ್ನು ಕರೆದ ಹೊರತು, ಅದರ ಮೇಲೆ ಮತದಾನ ಮಾಡಿದ ಸಮಿತಿಯ ಸದಸ್ಯರ ಬಹುಮತಗಳಿಗೆ ಅನುಸಾರವಾಗಿ ಇರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಸಮಿತಿಯು ತೆಗೆದುಕೊಂಡ ಪ್ರತಿಯೊಂದು ತೀರ್ಮಾನವನ್ನು ನಡವಳಿಕೆ ಪುಸ್ತಕದಲ್ಲಿ ದಾಖಲು ಮಾಡತಕ್ಕದ್ದು.

**69. ಮುನ್ಸಿಪಲ್ ಕೌನ್ಸಿಲಿನ ಅನುದೇಶಗಳಿಗೆ ಸಮಿತಿಗಳ ಅಧೀನತೆ ಮತ್ತು ಮುನ್ಸಿಪಲ್ ಕೌನ್ಸಿಲಿನ ಕಡ್ಡಾಯ ಕೋರಿಕೆಗಳ ಪಾಲನೆ.–** (1) ಪ್ರತಿಯೊಂದು ಸಮಿತಿಯು, ಮುನ್ಸಿಪಲ್ ಕೌನ್ಸಿಲು ಅದಕ್ಕೆ ಕಾಲಕಾಲಕ್ಕೆ ಕೊಡಬಹುದಾದ ಯಾವುದೇ ಅನುದೇಶವನ್ನು ಅನುಸರಿಸತಕ್ಕದ್ದು. ಮುನ್ಸಿಪಲ್ ಕೌನ್ಸಿಲು ಯಾವುದೇ ಕಾಲದಲ್ಲಿ ಯಾವುದೇ ಸಮಿತಿಯ ವ್ಯವಹರಣೆಗಳ ಯಾವುವೇ ವ್ಯವಹರಣೆಗಳಿಂದ ಯಾವುದೇ ಉಧೃತಕ್ಕಾಗಿ ಮತ್ತು ಯಾವುದೇ ಸಮಿತಿಯು ಯಾವ ವಿಷಯಕ್ಕೆ ಸಂಬಂಧಿಸಿದಂತೆ ವ್ಯವಹರಿಸಲು ಅಧಿಕೃತಗೊಳಿಸಲಾಗಿದೆಯೋ ಅಥವಾ ನಿರ್ದೇಶಿತವಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದ ಅಥವಾ ಸಂಬಂಧಪಟ್ಟ ಯಾವುದೇ ವಿವರಪಟ್ಟಿಕೆ, ವಿವರಣ ಪತ್ರ ಅಥವಾ ಲೆಕ್ಕ ಅಥವಾ ವರದಿಗಾಗಿ ಕೇಳಬಹುದು ಮತ್ತು ಅಂಥ ಪ್ರತಿಯೊಂದು ಕಡ್ಡಾಯ ಕೋರಿಕೆಯನ್ನು ಅನುಚಿತ ವಿಳಂಬವಿಲ್ಲದೆ ಹಾಗೆ ಕೇಳಲಾದ ಸಮಿತಿಯು ಪಾಲಿಸತಕ್ಕದ್ದು.

(2) ಸ್ಥಾಯೀ ಸಮಿತಿ ಅಥವಾ 63ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ನೇಮಕವಾದ ಸಮಿತಿಯು ಮಾಡಿದ ಪ್ರತಿಯೊಂದು ಆದೇಶವು, ಈ ಬಗ್ಗೆ ಸರ್ಕಾರವು ರಚಿಸಬಹುದಾದ ಯಾವುವೇ ನಿಯಮಗಳ ಮೂಲಕ ಅದಕ್ಕೆ ಸಂಬಂಧಿಸಿದಂತೆ ಅಗತ್ಯಪಡಿಸಬಹುದಾದ ಅಥವಾ ಅವಕಾಶ ಮಾಡಿಕೊಡಬಹುದಾದಂಥ ಪರಿವೀಕ್ಷಣೆಗೆ ಒಳಪಟ್ಟಿರತಕ್ಕದ್ದು ಮತ್ತು ಅಂಥ ಅಪೀಲಿಗೆ ಅವಕಾಶವಿರತಕ್ಕದ್ದು.

**70. ಯಾವ ಅಧಿಕಾರಿಗಳ ವೆಚ್ಚಗಳನ್ನು ಸಂದಾಯ ಮಾಡಬಹುದೋ ಆ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದಾದ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು.–** ಮುನ್ಸಿಪಲ್ ಕೌನ್ಸಿಲಿನಿಂದ ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನೆರವೇರಿಸಬಹುದಾದಂಥ ಯಾವುವೇ ಅಧಿಕಾರಗಳು ಅಥವಾ ಕರ್ತವ್ಯಗಳು ಅಥವಾ ಕಾರ್ಯನಿರ್ವಾಹಕ ಪ್ರಕಾರ್ಯಗಳನ್ನು ಈ ಬಗ್ಗೆ ಸರ್ಕಾರವು ರಚಿಸಬೇಕಾದ ನಿಯಮಗಳ ಅನುಸಾರವಾಗಿ, ಅಧ್ಯಕ್ಷನಿಗೆ ಅಥವಾ ಉಪಾಧ್ಯಕ್ಷನಿಗೆ ಅಥವಾ ಯಾವುದೇ ಸಮಿತಿಯ ಅಧ್ಯಕ್ಷನಿಗೆ ಅಥವಾ ಒಂದು ಅಥವಾ ಹೆಚ್ಚು ವೃತ್ತಿವೇತನ ಪಡೆಯುವ ಅಥವಾ ಗೌರವ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಬಹುದು. ಆದರೆ XIVನೇ ಅಧ್ಯಾಯದ ಮೇರೆಗೆ ಮುನ್ಸಿಪಲ್ ಕಮಿಷನರ ಅಥವಾ ಚೀಫ್ ಆಫೀಸರನಿಗೆ ಅಥವಾ 63ನೇ ಪ್ರಕರಣದ ಮೂಲಕ ಅಥವಾ ಮೇರೆಗೆ ಯಾವುದೇ ಸಮಿತಿಗೆ ಪ್ರದತ್ತವಾಗಿರಬಹುದಾದ ಯಾವುವೇ ಅಧಿಕಾರಗಳಿಗೆ ಅದು ಬಾಧಕವನ್ನುಂಟು ಮಾಡತಕ್ಕದ್ದಲ್ಲ ಮತ್ತು ಹಾಗೆ ಪ್ರತ್ಯಾಯೋಜಿಸಲಾದ ಯಾವುದೇ ಅಧಿಕಾರವನ್ನು ಚಲಾಯಿಸುವ ಅಥವಾ ಯಾವುದೇ ಕರ್ತವ್ಯ ಅಥವಾ ಪ್ರಕಾರ್ಯವನ್ನು ನೆರವೇರಿಸುವ ಪ್ರತಿಯೊಬ್ಬ ವ್ಯಕ್ತಿಗೆ, ಅದರಲ್ಲಿ ಅವನು ಅವಶ್ಯವಾಗಿ ವಹಿಸಿದ ಎಲ್ಲಾ ವೆಚ್ಚಗಳನ್ನು ಸಂದಾಯ ಮಾಡಬಹುದು:

ಪರಂತು, ಮುನ್ಸಿಪಲ್ ಕಮೀಷನರನು ಇರುವಂಥ ಪೌರಸಭೆಯಲ್ಲಿ, ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ ಮುನ್ಸಿಪಲ್ ಕೌನ್ಸಿಲರನಿಗೆ ಪ್ರದತ್ತವಾದ ಅಥವಾ ಅವನ ಮೇಲೆ ವಿಧಿಸಲಾದ ಅಥವಾ ಅವನಲ್ಲಿ ನಿಹಿತಗೊಳಿಸಿದ ಅಧಿಕಾರಗಳು, ಅಥವಾ ಕರ್ತವ್ಯಗಳು ಅಥವಾ ಕಾರ್ಯನಿರ್ವಾಹಕ ಪ್ರಕಾರ್ಯಗಳನ್ನು 344ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಹೊರತು ಪ್ರತ್ಯಾಯೋಜಿಸತಕ್ಕದ್ದಲ್ಲ.

**71. ಸ್ಥಳೀಯ ನಿಕಾಯಗಳ ಜಂಟಿ ಸಮಿತಿಗಳು ಹಾಗೂ ದಾರಿಸುಂಕವನ್ನು ಜಂಟಿಯಾಗಿ ವಿಧಿಸುವುದು.–** (1) ಮುನ್ಸಿಪಲ್ ಕೌನ್ಸಿಲು ಕಾಲಕಾಲಕ್ಕೆ,–

(ಕ) ಯಾವುದೇ ಇತರ ಮುನ್ಸಿಪಲ್ ಕೌನ್ಸಿಲ್ ಅಥವಾ ಯಾವುದೇ ನೈರ್ಮಲ್ಯ ಮಂಡಲಿ, ಅಧಿಸೂಚಿತ ಪ್ರದೇಶ ಸಮಿತಿ, ದಂಡು ಪ್ರಾಧಿಕಾರ, ತಾಲ್ಲೂಕು ಅಭಿವೃದ್ಧಿ ಮಂಡಳಿ ಅಥವಾ ಪಂಚಾಯಿತಿ ಸಭೆಗಳ ಅಥವಾ ಅಂಥ ಮುನ್ಸಿಪಲ್ ಕೌನ್ಸಿಲ್ಲುಗಳ; ಮಂಡಲಿಗಳ, ಅಥವಾ ಪಂಚಾಯಿತಿಗಳ ಸಂಯೋಗದೊಂದಿಗೆ,–

(i) ಯಾವ ಉದ್ದೇಶಕ್ಕಾಗಿ ಅವುಗಳು ಜಂಟಿಯಾಗಿ ಹಿತಾಸಕ್ತಿಯನ್ನು ಹೊಂದಿರುವವೋ ಆ ಯಾವುದೇ ಉದ್ದೇಶಕ್ಕಾಗಿ ತಮ್ಮ ತಮ್ಮ ನಿಕಾಯಗಳೊಳಗಿಂದ ಒಂದು ಜಂಟಿ ಸಮಿತಿಯನ್ನು ನೇಮಕ ಮಾಡುವಲ್ಲಿ ಮತ್ತು ಅಂಥ ಪಂಚಾಯಿತಿಗಳ ಅಧ್ಯಕ್ಷನನ್ನು ನೇಮಕ ಮಾಡುವಲ್ಲಿ;

(ii) ಯಾವುದೇ ಅಂಥ ಸಮಿತಿಗೆ ಯಾವುದೇ ಜಂಟಿ ಕಾಮಗಾರಿಯ ನಿರ್ಮಾಣ ಮತ್ತು ಮುಂದಿನ ನಿರ್ವಹಣೆಯ ಬಗ್ಗೆ ಅಂಥ ಪ್ರತಿಯೊಂದು ನಿಕಾಯವನ್ನು ಬದ್ಧಗೊಳಿಸುವ ನಿಬಂಧನೆಗಳನ್ನು ರಚಿಸುವ ಅಧಿಕಾರವನ್ನು ಮತ್ತು ಯಾವುದೇ ಅಂಥ ನಿಕಾಯಗಳು ಚಲಾಯಿಸಬಹುದಾದಂಥ ಯಾವುದೇ ಅಧಿಕಾರವನ್ನು ಪ್ರತ್ಯಾಯೋಜಿಸುವಲ್ಲಿ; ಮತ್ತು

(iii) ಯಾವ ಉದ್ದೇಶಕ್ಕಾಗಿ ಸಮಿತಿಯನ್ನು ನೇಮಕ ಮಾಡಲಾಗಿದೆಯೋ ಆ ಉದ್ದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಅಂಥ ಸಮಿತಿಯ ವ್ಯವಹರಣೆಗಳನ್ನು ನಿಯಂತ್ರಿಸುವುದಕ್ಕಾಗಿ ನಿಯಮಗಳನ್ನು ರಚಿಸುವಲ್ಲಿ ಮತ್ತು ಮಾರ್ಪಾಡು ಮಾಡುವಲ್ಲಿ

–ಕೂಡಿಕೊಳ್ಳಬಹುದು; ಮತ್ತು

(ಖ) ಸರ್ಕಾರದ ಮಂಜೂರಾತಿಗೆ ಒಳಪಟ್ಟು ಮುನ್ಸಿಪಲ್ ಕೌನ್ಸಿಲು, ನೈರ್ಮಲ್ಯ ಮಂಡಲಿ, ಅಧಿಸೂಚಿತ ಪ್ರದೇಶ ಸಮಿತಿ, ದಂಡು ಪ್ರಾಧಿಕಾರ, ತಾಲ್ಲೂಕು ಅಭಿವೃದ್ಧಿ ಮಂಡಲಿ ಅಥವಾ ಪಂಚಾಯಿತಿ ಅಥವಾ ಸಮಿತಿಗಳು ಅಥವಾ ಹಿಂದೆ ಹೇಳಿದಂತಹ ಸಂಯೋಗಗಳೊಂದಿಗೆ ಹಾಗೆ ಕರಾರು ಮಾಡಿಕೊಳ್ಳುವ ನಿಕಾಯಗಳು ದಾರಿ ಸುಂಕಗಳ ವಿಧಿಸುವಿಕೆಯನ್ನು ಸದರಿ ನಿಕಾಯಗಳ ನಿಯಂತ್ರಣಕ್ಕೆ ಒಳಪಟ್ಟು, ಪ್ರದೇಶ ಪರಿಮಿತಿಗಳೊಳಗೆ ಪ್ರತ್ಯೇಕವಾಗಿ ವಿಧಿಸುವುದರ ಬದಲು ಒಟ್ಟಾಗಿ ವಿಧಿಸಬಹುದೆಂದು ಒಪ್ಪಂದವನ್ನು ಮಾಡಿಕೊಳ್ಳಬಹುದು.

(2) ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ (1)ನೇ ಉಪ-ಪ್ರಕರಣದ ಉಪ-ಬಂಧಗಳ ಮೇರೆಗೆ ಯಾವುದೇ ಇತರ ಸ್ಥಳೀಯ ಪ್ರಾಧಿಕಾರದ ಸಹಮತಿಯನ್ನು ಮುನ್ಸಿಪಲ್ ಕೌನ್ಸಿಲು ಕೋರಿರುವಲ್ಲಿ ಮತ್ತು ಅಂಥ ಇತರ ಸ್ಥಳೀಯ ಪ್ರಾಧಿಕಾರವು ಸಹಮತಿಸಲು ನಿರಾಕರಿಸಿರುವಲ್ಲಿ ಕಮಿಷನರನು, ಹಿಂದೆ ಹೇಳಿದ ವಿಷಯದಲ್ಲಿ ದಂಡು ಪ್ರಾಧಿಕಾರವಲ್ಲದ ಅಂಥ ಇತರ ಸ್ಥಳೀಯ ಪ್ರಾಧಿಕಾರದ ಸಹಮತಿಯನ್ನು ಅಗತ್ಯಪಡಿಸಿ ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು; ಮತ್ತು ಅಂಥ ಇತರ ಸ್ಥಳೀಯ ಪ್ರಾಧಿಕಾರವು ಅಂಥ ಆದೇಶಗಳನ್ನು ಪಾಲಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಯಾವುದೇ ಉದ್ದೇಶಕ್ಕಾಗಿ ಒಪ್ಪಂದಕ್ಕೆ ಸೇರಿಕೊಂಡ ಅಥವಾ ಅದನ್ನು ಮಾಡಿಕೊಂಡ ನಿಕಾಯಗಳ ನಡುವೆ ಯಾವುದೇ ಭಿನ್ನಾಭಿಪ್ರಾಯಗಳು ಉದ್ಭವಿಸಿದರೆ, ಅದರ ಬಗ್ಗೆ ಸರ್ಕಾರ ಅಥವಾ ಅದು ಈ ಬಗ್ಗೆ ನೇಮಕ ಮಾಡುವಂಥ ಅಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು:

ಪರಂತು, ಸಂಬಂಧಪಟ್ಟ ನಿಕಾಯಗಳಲ್ಲಿ ಯಾವುದಾದರೊಂದು ದಂಡು ಪ್ರಾಧಿಕಾರವಾಗಿದ್ದರೆ ಯಾವುದೇ ಅಂಥ ತೀರ್ಮಾನವು ಕೇಂದ್ರ ಸರ್ಕಾರದ ಸಹಮತಿಗೆ ಒಳಪಟ್ಟಿರತಕ್ಕದ್ದು.

**71ಕ. ಮುನ್ಸಿಪಲ್ ಕೌನ್ಸಿಲ್ ಸಿಬ್ಬಂದಿ.–** 365ನೇ ಪ್ರಕರಣದ ಉಪಬಂಧಗಳು ಮತ್ತು 323ನೇ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳಿಗೊಳಪಟ್ಟು, ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅವಶ್ಯವಾಗಬಹುದಾದಂಥ ಅಧಿಕಾರಿಗಳು ಮತ್ತು ನೌಕರರನ್ನು ನಿಯೋಜಿಸಿಕೊಳ್ಳಲು ಹಕ್ಕುಳ್ಳದ್ದಾಗಿರತಕ್ಕದ್ದು.

**72. ಬಾಡಿಗೆಗೆ ಕೊಡಲು, ಮಾರಾಟ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಮುನ್ಸಿಪಲ್ ಕೌನ್ಸಿಲಿನ ಸಕ್ಷಮತೆ.–** (1) (2) ಮತ್ತು (9)ನೇ ಉಪ-ಪ್ರಕರಣಗಳಲ್ಲಿ ಅಡಕವಾದ ಷರತ್ತುಗಳು ಮತ್ತು ಪರಿಬಂಧಗಳಿಗೆ ಮತ್ತು ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಪರಿಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು, ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲು ಅದಕ್ಕೆ ಸೇರಿದ ಅಥವಾ ಈ ಅಧಿನಿಯಮದ ಉದ್ದೇಶಕ್ಕಾಗಿ ಅದು ಆರ್ಜಿಸಿದ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಬಾಡಿಗೆ ಕೊಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಈ ಅಧಿನಿಯಮದ ಮತ್ತು ಉಪಬಂಧಗಳಿಗೆ ಮತ್ತು ಉದ್ದೇಶಗಳಿಗೆ ಅಸಂಗತವಾಗದಿರುವಷ್ಟರಮಟ್ಟಿಗೆ, ಸದರಿ ಉಪಬಂಧಗಳ ಮತ್ತು ಉದ್ದೇಶಗಳನ್ನು ಪರಿಣಾಮಕಾರಿಯಾಗಿಸಲು ಅವಶ್ಯ ಅಥವಾ ವಿಹಿತವೆಂದು ಅದು ಪರ್ಯಾಲೋಚಿಸುವಂಥ ಎಲ್ಲಾ ಕರಾರುಗಳನ್ನು ಮಾಡಿಕೊಳ್ಳಲು ಮತ್ತು ಅವುಗಳನ್ನು ನೆರವೇರಿಸಲು ಸಕ್ಷಮವಾಗಿರತಕ್ಕದ್ದು.

(2) ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದಿದ್ದ ಹೊರತು, ಅದರ ಮೌಲ್ಯ ಏನೇ ಆಗಿರಲಿ ಯಾವುದೇ ಸ್ಥಿರ ಸ್ವತ್ತಿನ ಉಚಿತ ಮಂಜೂರಾತಿಯು ಮತ್ತು ನಿಗದಿತ ಕನಿಷ್ಠ ಬೆಲೆಗೆ ಯಾವುದೇ ಮಂಜೂರಾತಿಯು ಮತ್ತು ಐದು ವರ್ಷಗಳ ಅವಧಿಗೆ ಮೀರಿದ ಯಾವುದೇ ಬಾಡಿಗೆಗೆ ಕೊಡುವುದು ಮತ್ತು

ಐದು ಸಾವಿರ ರೂಪಾಯಿಗಳ ಮೌಲ್ಯವನ್ನು ಮೀರಿದ ಸ್ಥಿರ ಸ್ವತ್ತಿನ ಯಾವುದೇ ಮಾರಾಟ ಅಥವಾ ಇತರ ವರ್ಗಾವಣೆಯು ಸಿಂಧುವಾಗಿರತಕ್ಕದ್ದಲ್ಲ.

(3) (ಕ) ಒಂದು ವರ್ಷಕ್ಕೆ ಮೀರಿದ ಅವಧಿಗಾಗಿ ಬಾಡಿಗೆ ಕೊಡುವುದರ ಅಥವಾ ಮಾರಾಟದ ಅಥವಾ ಇತರ ವರ್ಗಾವಣೆಯ ಅಥವಾ ಯಾವುದೇ ಸ್ಥಿರ ಸ್ವತ್ತಿನ ಖರೀದಿಗಾಗಿನ ಕರಾರಿನ;

(ಖ) ಬಜೆಟ್ ಅನುದಾನದಲ್ಲಿ ಸೇರಿಲ್ಲದ ವೆಚ್ಚವನ್ನು ಒಳಗೊಳ್ಳುವಂಥ ಪ್ರತಿಯೊಂದು ಕರಾರಿನ;

(ಗ) ಯಾವ ಕರಾರಿನ ನೆರವೇರಿಕೆಯನ್ನು, ಕರಾರಿನ ದಿನಾಂಕದಂದು ಚಾಲ್ತಿ ಸರ್ಕಾರಿ ವರ್ಷದೊಳಗೆ ಪೂರ್ಣಗೊಳಿಸಲಾಗದೋ ಆ ಪ್ರತಿಯೊಂದು ಕರಾರಿನ,

–ಸಂದರ್ಭದಲ್ಲಿ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ ಮುನ್ಸಿಪಲ್ ಕೌನ್ಸಿಲಿನ ಮಂಜೂರಾತಿಯು ಅಗತ್ಯವಿರತಕ್ಕದ್ದು.

(4) ಮುನ್ಸಿಪಲ್ ಕೌನ್ಸಿಲ್‌ಗೆ ಸೇರಿದ ಚರಸ್ವತ್ತಿನ ಖರೀದಿಗಾಗಿನ ಅಥವಾ ಯಾವುದೇ ಚರ ಸ್ವತ್ತಿನ ಮಾರಾಟಕ್ಕಾಗಿನ ಕರಾರಿನ ಸಂದರ್ಭದಲ್ಲಿ ಖರೀದಿಯು ಒಳಗೊಳ್ಳುವಂಥ ವೆಚ್ಚವು ಅಥವಾ ಪೌರಸಭೆಯ ಲೆಕ್ಕಪತ್ರಗಳಲ್ಲಿ ಅಂದಾಜು ಮಾಡಲಾದಂತೆ ಮಾರಬೇಕಾದ ಸ್ವತ್ತಿನ ಮೌಲ್ಯವು ಪಟ್ಟಣ ಮುನ್ಸಿಪಲ್ ಕೌನ್ಸಿಲಿನ ಸಂದರ್ಭದಲ್ಲಿ ಒಂದು ಸಾವಿರ ರೂಪಾಯಿಗಳನ್ನು ಮೀರಿದರೆ ಮತ್ತು ನಗರ ಮುನ್ಸಿಪಲ್ ಕೌನ್ಸಿಲಿನ ಸಂದರ್ಭದಲ್ಲಿ ಎರಡು ಸಾವಿರ ರೂಪಾಯಿಗಳನ್ನು ಮೀರಿದರೆ ಮುನ್ಸಿಪಲ್ ಕೌನ್ಸಿಲಿನ ಮಂಜೂರಾತಿಯು ಅಗತ್ಯವಿರತಕ್ಕದ್ದು.

(5) ಐದು ಸಾವಿರ ರೂಪಾಯಿಗಳನ್ನು ಮೀರುವ ವೆಚ್ಚವನ್ನು ಒಳಗೊಳ್ಳುವ ಸಾಮಗ್ರಿಗಳು ಅಥವಾ ಸರಕುಗಳ ಸರಬರಾಜಿಗಾಗಿ ಅಥವಾ ಯಾವುದೇ ಕಾಮಗಾರಿಯ ನಿರ್ವಹಣೆಗಾಗಿ ಯಾವುದೇ ಕರಾರನ್ನು ಮಾಡಿಕೊಳ್ಳುವ ಮುಂಚೆ, ಮುನ್ಸಿಪಲ್ ಕೌನ್ಸಿಲ್ ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ಅಂಥ ಕರಾರನ್ನು ಮಾಡಿಕೊಳ್ಳಲು ಇಚ್ಛಿಸುವ ವ್ಯಕ್ತಿಗಳಿಂದ ಟೆಂಡರುಗಳನ್ನು ಬಹಿರಂಗವಾಗಿ ಕರೆಯತಕ್ಕದ್ದು ಮತ್ತು ಅಂದಾಜು ಮೌಲ್ಯವು ನಿಯಮಿಸಬಹುದಾದಂಥ ಮೊಬಲಗನ್ನು ಮೀರಿದಾಗ ಯಾವುದೇ ಅಂಥ ಕರಾರನ್ನು ಸರ್ಕಾರದ ಅಥವಾ ಈ ಬಗ್ಗೆ ಸರ್ಕಾರದಿಂದ ಕ್ರಮಬದ್ಧವಾಗಿ ಅಧಿಕೃತನಾದ ಅಧಿಕಾರಿಯ ಪೂರ್ವಾನುಮೋದನೆಯಿಲ್ಲದೆ ಮಾಡಿಕೊಳ್ಳತಕ್ಕದ್ದಲ್ಲ.

(6) (2) ರಿಂದ (4)ನೇ ಉಪ–ಪ್ರಕರಣಗಳಲ್ಲಿ ಅನ್ಯಥಾ ಉಪಬಂಧಿಸಿರದ ಪ್ರತಿಯೊಂದು ಕರಾರಿನ ಸಂದರ್ಭದಲ್ಲಿ ಈ ಅಧಿನಿಯಮದ ಅಥವಾ ಅದರಡಿಯಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಉಪಬಂಧಗಳ ಮೇರೆಗೆ ಈ ಬಗ್ಗೆ ಶಕ್ತಗೊಳಿಸಿದಂಥ ಅಂಥ ಸಮಿತಿಯ ಅಥವಾ ವ್ಯಕ್ತಿಯ ಮಂಜೂರಾತಿಯು ಅಗತ್ಯವಾಗಿರತಕ್ಕದ್ದು.

(7) (6)ನೇ ಉಪ–ಪ್ರಕರಣವು ಅನ್ವಯವಾಗುವಂಥ ಕರಾರನ್ನು ಹೊರತುಪಡಿಸಿ ಮುನ್ಸಿಪಲ್ ಕೌನ್ಸಿಲು ಅಥವಾ ಅದರ ಪರವಾಗಿ ಮಾಡಿಕೊಂಡ ಪ್ರತಿಯೊಂದು ಕರಾರು ಬರಹದಲ್ಲಿರತಕ್ಕದ್ದು ಮತ್ತು ಅದಕ್ಕೆ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಮತ್ತು ಇತರ ಇಬ್ಬರು ಕೌನ್ಸಿಲರುಗಳು ರುಜು ಮಾಡತಕ್ಕದ್ದು ಮತ್ತು ಅದಕ್ಕೆ ಮುನ್ಸಿಪಲ್ ಕೌನ್ಸಿಲಿನ ಸಾಮಾನ್ಯ ಮುದ್ರೆಯಿಂದ ಮುದ್ರೆಯನ್ನು ಒತ್ತತಕ್ಕದ್ದು. (6)ನೇ ಉಪ–ಪ್ರಕರಣವು ಅನ್ವಯವಾಗುವಂಥ ಪ್ರತಿಯೊಂದು ಕರಾರು ಆ ಬಗ್ಗೆ ಶಕ್ತಗೊಳಿಸಲಾದ ಅಂಥ ಸಮಿತಿಯ ಅಧ್ಯಕ್ಷ ಅಥವಾ ಅಂಥ ಇತರ ವ್ಯಕ್ತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗನುಸಾರವಾಗಿ ಅಂಥ ಅಧ್ಯಕ್ಷ ಅಥವಾ ವ್ಯಕ್ತಿಯು

ಅಂಥ ಕರಾರನ್ನು ತನ್ನ ಪರವಾಗಿ ತಾನೇ ಬರೆದುಕೊಟ್ಟಿದ್ದರೆ ಅವನನ್ನು ಬದ್ಧಗೊಳಿಸುತ್ತಿದ್ದಂಥ ರೀತಿ ಮತ್ತು ನಮೂನೆಯಲ್ಲಿ ಬರೆದುಕೊಡತಕ್ಕದ್ದು.

(8) ಈ ಪ್ರಕರಣದ ಅಗತ್ಯಗಳಿಗನುಸಾರವಾಗಿ ಮಾಡಿಲ್ಲದಂಥ ಯಾವುದೇ ಕರಾರು ಸಿಂಧುವಾಗಿರತಕ್ಕದ್ದಲ್ಲ ಅಥವಾ ಮುನ್ಸಿಪಲ್ ಕೌನ್ಸಿಲನ್ನು ಬದ್ಧಗೊಳಿಸತಕ್ಕದ್ದಲ್ಲ.

(9) ಈ ಪ್ರಕರಣದ ಉಪಬಂಧಗಳು 86ನೇ ಪ್ರಕರಣದ ಮತ್ತು XIVನೇ ಅಧ್ಯಾಯದ ಉಪಬಂಧಗಳಿಗೊಳಪಟ್ಟಿರತಕ್ಕದ್ದು.

**73. ಸ್ವತ್ತಿನ ವರ್ಗಾವಣೆಯು ಷರತ್ತುಗಳಿಗೆ ಒಳಪಟ್ಟಿರಬಹುದು.–** ಮುನ್ಸಿಪಲ್ ಕೌನ್ಸಿಲಿನಿಂದ ಮಾಡಿದ ಚರ ಅಥವಾ ಸ್ಥಿರ ಸ್ವತ್ತಿನ ಮಂಜೂರಾತಿ, ಬಾಡಿಗೆಗೆ ಕೊಡುವಿಕೆ, ಮಾರಾಟ ಅಥವಾ ಇತರ ವರ್ಗಾವಣೆಯು ಮುನ್ಸಿಪಲ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟಿರಬಹುದು ಮತ್ತು 1882ರ ಸ್ವತ್ತು ವರ್ಗಾವಣೆ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ ಆ ಮಂಜೂರಾತಿ, ಬಾಡಿಗೆಗೆ ಕೊಡುವುದು, ಮಾರಾಟ ಅಥವಾ ವರ್ಗಾವಣೆಯು ಅಂಥ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

**74. ಪೌರಸಭಾ ಕಾಮಗಾರಿಗಳನ್ನು ನಿರ್ವಹಿಸಲು ಸರ್ಕಾರದಿಂದ ನೇಮಕಗೊಂಡ ಅಧಿಕಾರಿಗಳಿಂದ ಕರಾರುಗಳು ಮತ್ತು ಅಂಥ ಕಾಮಗಾರಿಗಳಿಗಾಗಿ ಸಂದಾಯ.–** 72ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಸರ್ಕಾರದಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರವು ನಿಯಮಿಸಬಹುದಾದಂಥ ನಿಯಂತ್ರಣಕ್ಕೊಳಪಟ್ಟು, ಅಂಥ ಕಾಮಗಾರಿಗೆ ಒದಗಿಸಲಾದ ಮೊತ್ತದಷ್ಟರ ಮಟ್ಟಿಗೆ ಅಂಥ ಕಾಮಗಾರಿಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಅವಶ್ಯವಾದಂಥ ಕರಾರುಗಳನ್ನು ಮಾಡಿಕೊಳ್ಳಬಹುದು; ಮತ್ತು ಮುನ್ಸಿಪಲ್ ಕೌನ್ಸಿಲ್ ಹಿಂದೆ ಹೇಳಿದಷ್ಟರ ಮಟ್ಟಿಗೆ, ಸದರಿ ಉದ್ದೇಶಕ್ಕಾಗಿ ಅಗತ್ಯವಾಗಬಹುದಾದಂಥ ಮೊತ್ತಗಳನ್ನು ಹಾಗೆ ನೇಮಕಗೊಂಡ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

**75. ಭೂಮಿಯ ಕಡ್ಡಾಯ ಆರ್ಜನೆ.–** ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ಸ್ಥಿರಸ್ವತ್ತು ಮುನ್ಸಿಪಲ್ ಕೌನ್ಸಿಲ್‌ಗೆ ಅಗತ್ಯವಾದಾಗಲೆಲ್ಲಾ ಸರ್ಕಾರವು ಮುನ್ಸಿಪಲ್ ಕೌನ್ಸಿಲ್‌ನ ಕೋರಿಕೆಯ ಮೇರೆಗೆ 1894ರ ಭೂ ಆರ್ಜನಾ ಅಧಿನಿಯಮದ ಮೇರೆಗೆ ಅದರ ಆರ್ಜನೆಯನ್ನು ಮಾಡಿ ಕೊಡಬಹುದು ಮತ್ತು ಆ ಅಧಿನಿಯಮದ ಮೇರೆಗೆ ಕೊಡಲಾದ ನಷ್ಟ ಪರಿಹಾರ ಮತ್ತು ಆ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಸರ್ಕಾರವು ವಹಿಸಿದ ಎಲ್ಲಾ ವೆಚ್ಚಗಳನ್ನು ಮುನ್ಸಿಪಲ್ ಕೌನ್ಸಿಲ್ ಸಂದಾಯ ಮಾಡಿದ ಮೆಲೆ ಆ ಸ್ಥಿರಸ್ವತ್ತನ್ನು ಮುನ್ಸಿಪಲ್ ಕೌನ್ಸಿಲ್ಗಿಗೆ ವರ್ಗಾವಣೆ ಮಾಡತಕ್ಕದ್ದು ಮತ್ತು ಅದು ಆ ತರುವಾಯ ಅಂಥ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು.

**76. ಮುನ್ಸಿಪಲ್ ಕೌನ್ಸಿಲ್ಲುಗಳು ವಹಿಸಿದ ಎಲ್ಲಾ ಖರ್ಚುಗಳು ಮತ್ತು ವೆಚ್ಚಗಳಿಗಾಗಿ ಪೌರಸಭೆ ನಿಧಿಯು ಸಾಮಾನ್ಯವಾಗಿ ಗುರಿಯಾಗಿರತಕ್ಕದ್ದು.–** (1) ಇಲ್ಲಿ ಇನ್ನು ಮುಂದೆ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ, ಯಾರೇ ಅಧ್ಯಕ್ಷ ಅಥವಾ ಕೌನ್ಸಿಲರನು, ಮುನ್ಸಿಪಲ್ ಕೌನ್ಸಿಲು ಅಥವಾ ಅದರ ಪರವಾಗಿ ಮಾಡಿಕೊಂಡ ಯಾವುದೇ ಕರಾರು ಅಥವಾ ಒಪ್ಪಂದ ಅಥವಾ ವಹಿಸಲಾದ ಯಾವುದೇ ವೆಚ್ಚಕ್ಕೆ ಸಂಬಂಧಿಸಿದಂತೆ ವೈಯಕ್ತಿಕವಾಗಿ ಹೊಣೆಯಾಗಿರತಕ್ಕದ್ದಲ್ಲ.

(2) ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಮೇರೆಗಿನ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪ್ರತಿಯೊಬ್ಬ ಕೌನ್ಸಿಲರನು, ಮುನ್ಸಿಪಲ್ ಕಮಿಷನರನು, ಚೀಫ್ ಆಫೀಸರನು ಅಥವಾ ಮುನ್ಸಿಪಲ್ ಕೌನ್ಸಿಲಿನ ಇತರ ನಿಯೋಜಕನು, ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಒಡೆತನ ಹೊಂದಿದ ಅಥವಾ ಅದರಲ್ಲಿ ನಿಹಿತವಾದ ಯಾವುದೇ

ಹಣ ಅಥವಾ ಇತರ ಸ್ವತ್ತಿನ ಅಂಥ ನಷ್ಟ, ಪೋಲು ಅಥವಾ ದುರ್ವಿನಿಯೋಗವು ಅವನ ನಿರ್ಲಕ್ಷತೆಯ ನೇರ ಪರಿಣಾಮವಾಗಿ ಅಥವಾ ಅವನ ದುರ್ವರ್ತನೆಯಿಂದ ಉಂಟಾದುದಾಗಿದ್ದರೆ ಅಥವಾ ಅನುಕೂಲಿತವಾಗಿದ್ದರೆ ಹೊಣೆಯಾಗತಕ್ಕದ್ದು.

**77. ಮುನ್ಸಿಪಲ್ ಕೌನ್ಸಿಲಿನ ಅಧಿಕಾರಿ ಅಥವಾ ನೌಕರನು ಅಂಥ ಮುನ್ಸಿಪಲ್ ಕೌನ್ಸಿಲ್ಲಿನೊಂದಿಗೆ ಯಾವುದೇ ಕರಾರಿನಲ್ಲಿ ಹಿತಾಸಕ್ತಿ ಹೊಂದಿರತಕ್ಕದ್ದಲ್ಲ.–** (1) ಪೌರಸಭಾ ಅಧಿಕಾರಿ ಅಥವಾ ನೌಕರನಾಗಿ ಅಲ್ಲದೆ ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ, ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರಿನಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲ್‌ನೊಂದಿಗೆ ಅದರ ಅಧೀನದಲ್ಲಿ, ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ನಿಯೋಜನೆಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ತಾನಾಗಿಯೇ ಅಥವಾ ತನ್ನ ಪಾಲುದಾರನ ಮೂಲಕ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕ್ತಿಯು, ಅಂಥ ಮುನ್ಸಿಪಲ್ ಕೌನ್ಸಿಲ್ಲಿನ ಅಧಿಕಾರಿ ಅಥವಾ ನೌಕರನಾಗಿರಲು ಅನರ್ಹನಾಗಿರತಕ್ಕದ್ದು.

(2) ಯಾರೇ ಪೌರಸಭೆ ಅಧಿಕಾರಿ ಅಥವಾ ನೌಕರನು, (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದಂತಹ ನಿಯೋಜನೆಗಾಗಿನ ಅಂಥ ಯಾವುದೇ ಕರಾರಿನಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತಾನಾಗಿಯೇ ಅಥವಾ ಅವನ ಪಾಲುದಾರನ ಮೂಲಕ, ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ಆರ್ಜಿಸಿದರೆ ಅಥವಾ ಆರ್ಜಿಸಿದ್ದರೆ, ನೇಮಕ ಮಾಡಿದ ಪ್ರಾಧಿಕಾರದ ಆದೇಶದ ಮೂಲಕ ವರ್ಗಾಯಿತನಾಗಲು ಅಥವಾ ಅವನ ಪದದಿಂದ ತೆಗೆದು ಹಾಕುವುದಕ್ಕೆ ಅವನು ಗುರಿಯಾಗತಕ್ಕದ್ದು:

ಪರಂತು, ತೆಗೆದುಹಾಕುವ ಆದೇಶವನ್ನು ಮಾಡುವುದಕ್ಕೆ ಮುಂಚೆ, ಅಂಥ ಅಧಿಕಾರಿ ಅಥವಾ ನೌಕರನಿಗೆ ಅವನ ಬಗ್ಗೆ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಡತಕ್ಕದ್ದು:

ಮತ್ತೂ ಪರಂತು, ಯಾರೇ ವ್ಯಕ್ತಿಯು, ಯಾವುದೇ ಕಂಪನಿಯಲ್ಲಿ ಷೇರುದಾರ, ಅಥವಾ ಅದರ ಸದಸ್ಯನಾಗಿರುವ ಕಾರಣ ಮಾತ್ರದಿಂದ ಅವನು ಅಂಥ ಕಂಪನಿಯ ನಿರ್ದೇಶಕನಾಗಿದ್ದ ಹೊರತು, ಅಂಥ ಕಂಪನಿ ಮತ್ತು ಮುನ್ಸಿಪಲ್ ಕೌನ್ಸಿಲಿನ ನಡುವೆ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಹಿತಾಸಕ್ತಿಯನ್ನು ಹೊಂದಿರುವುದಾಗಿ ಭಾವಿಸತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ "ಕಂಪನಿ'ಯು ಸಹಕಾರ ಸಂಘವನ್ನು ಒಳಗೊಳ್ಳುತ್ತದೆ.

**78. ಮುನ್ಸಿಪಲ್ ಕೌನ್ಸಿಲಿನೊಂದಿಗೆ ಯಾವುದೇ ಕರಾರು ಇತ್ಯಾದಿಗಳಲ್ಲಿ ಕೌನ್ಸಿಲರನು ಹಿತಾಸಕ್ತಿಯನ್ನು ಹೊಂದಿರುವುದಕ್ಕಾಗಿ ದಂಡನೆ.–** ಕೌನ್ಸಿಲರನಾಗಿರುವುದಕ್ಕಾಗಿ ಆ ಮೂಲಕ ಅನರ್ಹಗೊಳ್ಳದೆಯೇ ವ್ಯಕ್ತಿಗೆ 16ನೇ ಪ್ರಕರಣದ ಮೇರೆಗೆ ಹೊಂದಲು ಅವಕಾಶವಿರುವಂಥ ಪಾಲು ಅಥವಾ ಹಿತಾಸಕ್ತಿಯಾಗಿರದ, ಮುನ್ಸಿಪಲ್ ಕೌನ್ಸಿಲಿನೊಂದಿಗೆ, ಅದರ ಅಧೀನದಲ್ಲಿ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲು ಅಥವಾ ಹಿತಾಸಕ್ತಿಯನ್ನು ತಿಳಿದೂ ತಿಳಿದೂ ಆರ್ಜಿಸುವ ಯಾರೇ ಕೌನ್ಸಿಲರನು ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**79. ಕೌನ್ಸಿಲರ್ ಮುಂತಾದವರನ್ನು ಸರ್ಕಾರಿ ನೌಕರರೆಂದು ಭಾವಿಸತಕ್ಕದ್ದು.–** (1) ಮುನ್ಸಿಪಲ್ ಕೌನ್ಸಿಲಿನ ಪ್ರತಿಯೊಬ್ಬ ಕೌನ್ಸಿಲರ್, ಅಧಿಕಾರಿ ಅಥವಾ ನೌಕರ, 290ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ

ಲೆಕ್ಕಪರಿಶೋಧಕ ಮತ್ತು ಯಾವುದೇ ಪೌರಸಭೆ ತೆರಿಗೆಯನ್ನು ಸಂಗ್ರಹಿಸುವ ಪ್ರತಿಯೊಬ್ಬ ಗುತ್ತಿಗೆದಾರ ಮತ್ತು ಅಂಥ ಯಾರೇ ಗುತ್ತಿಗೆದಾರನಿಂದ ನಿರ್ಯೋಜಿತನಾದ ಪ್ರತಿಯೊಬ್ಬ ನೌಕರ ಮತ್ತು ಇತರ ವ್ಯಕ್ತಿಯು, ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತ ದಂಡ ಸಂಹಿತೆ 21ನೇ ಪ್ರಕರಣ ಮತ್ತು 1947ರ ಭ್ರಷ್ಟಾಚಾರ ನಿರೋಧ ಅಧಿನಿಯಮ (1947ರ ಕೇಂದ್ರ ಅಧಿನಿಯಮ II)ರ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

(2) ಭಾರತ ದಂಡ ಸಂಹಿತೆ 161ನೇ ಪ್ರಕರಣದಲ್ಲಿನ "ರಾಜ್ಯ ಸರ್ಕಾರ" ಮತ್ತು "ಸರ್ಕಾರ" ಎಂಬ ಪದಗಳು ಈ ಪ್ರಕರಣದ (1)ನೇ ಉಪ-ಪ್ರಕರಣದ ಉದ್ದೇಶಗಳಿಗಾಗಿ, ಮುನ್ಸಿಪಲ್ ಕೌನ್ಸಿಲನ್ನು ಒಳಗೊಂಡಿರುವುದಾಗಿ ಭಾವಿಸತಕ್ಕದ್ದು.

**80. ವ್ಯವಹರಣೆಗಳ ಸಿಂಧುತ್ವ.–** ಸಾಮಾನ್ಯ ಸಭೆಯ ಕೌನ್ಸಿಲರನಾಗಿ, ಅಥವಾ ಅಧ್ಯಕ್ಷನಾಗಿ ಅಥವಾ ಅಧ್ಯಕ್ಷತೆ ವಹಿಸಿರುವ ಪ್ರಾಧಿಕಾರಿಯಾಗಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಸಮಿತಿಯ ಅಧ್ಯಕ್ಷ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯ ಚುನಾವಣೆ ಅಥವಾ ನೇಮಕಾತಿಯಲ್ಲಿನ ಯಾವುದೇ ಅನರ್ಹತೆ ಅಥವಾ ನ್ಯೂನತೆಯು, ಸಂದರ್ಭಾನುಸಾರ ಯಾವ ಮುನ್ಸಿಪಲ್ ಕೌನ್ಸಿಲ್ ಅಥವಾ ಅಂಥ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯಲ್ಲಿ, ಅಂಥ ಕಾರ್ಯ ಅಥವಾ ವ್ಯವಹರಣೆಗೆ ಪಾಲ್ಗೊಂಡಿದ್ದ ಬಹುಮತದವರು ಕಾರ್ಯನಿರ್ವಹಿಸಲು ಹಕ್ಕುಳ್ಳವರಾಗಿದ್ದಾಗಲೆಲ್ಲಾ ಅಂಥ ವ್ಯಕ್ತಿಯು ಪಾಲ್ಗೊಂಡಿದ್ದಾನೋ, ಆ ಯಾವುದೇ ಮುನ್ಸಿಪಲ್ ಕೌನ್ಸಿಲ್ಲು ಅಥವಾ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ನಿರರ್ಥಕಗೊಳಿಸುವುದಾಗಿ ಭಾವಿಸತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲಿನ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವುದೇ ಸಮಿತಿಯ ಯಾವುದೇ ನಿರ್ಣಯವು, ಯಾರೇ ಕೌನ್ಸಿಲರ್ ಅಥವಾ ಸದಸ್ಯನಿಗೆ ನೋಟೀಸಿನ ಜಾರಿಯಲ್ಲಿನ ಯಾವುದೇ ಕ್ರಮದೋಷದಿಂದಾಗಿ ಅಸಿಂಧುವೆಂದು ಭಾವಿಸತಕ್ಕದ್ದಲ್ಲ, ಆದರೆ, ಮುನ್ಸಿಪಲ್ ಕೌನ್ಸಿಲು ಅಥವಾ ಸಮಿತಿಯ ಆ ವ್ಯವಹರಣೆಗಳು ಅಂಥ ಕ್ರಮದೋಷದಿಂದ ಪ್ರತಿಕೂಲವಾಗಿ ಬಾಧಿತವಾಗಿದ್ದಿರಕೂಡದು.

(3) ತದ್ವಿರುದ್ಧವಾಗಿ ರುಜುವಾತು ಆಗುವವರೆಗೆ, ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಮುನ್ಸಿಪಲ್ ಕೌನ್ಸಿಲ್ ಅಥವಾ ಸಮಿತಿಯ ಪ್ರತಿಯೊಂದು ಸಭೆಯ ವ್ಯವಹರಣೆಗಳಿಗೆ ಸಂಬಂಧಿಸಿದಂತೆ, ನಡವಳಿಕೆಯನ್ನು ಈ ಅಧಿನಿಯಮಕ್ಕನುಸಾರವಾಗಿ ಮಾಡಲಾಗಿದ್ದರೆ ಮತ್ತು ಅದಕ್ಕೆ ರುಜು ಮಾಡಲಾಗಿದ್ದರೆ ಆ ಸಭೆಯನ್ನು ಕ್ರಮಬದ್ಧವಾಗಿ, ಕರೆಯಲಾಗಿತ್ತು ಮತ್ತು ನಡೆಸಲಾಯಿತು ಎಂದು ಭಾವಿಸತಕ್ಕದ್ದು ಮತ್ತು ಸಭೆಯ ಎಲ್ಲಾ ಸದಸ್ಯರು ಕ್ರಮಬದ್ಧವಾಗಿ ಅರ್ಹರಾಗಿದ್ದುದಾಗಿ ಭಾವಿಸತಕ್ಕದ್ದು ಮತ್ತು ವ್ಯವಹರಣೆಗಳು ಸಮಿತಿಯ ವ್ಯವಹರಣೆಗಳಾಗಿರುವಲ್ಲಿ ಅಂಥ ಸಮಿತಿಯನ್ನು ಕ್ರಮಬದ್ಧವಾಗಿ ರಚಿಸಲಾಗಿತ್ತು ಮತ್ತು ನಡವಳಿಕೆಯಲ್ಲಿ ಉಲ್ಲೇಖಿಸಿದ ವಿಷಯಗಳೊಡನೆ ವ್ಯವಹರಿಸಲು ಅಧಿಕಾರ ಹೊಂದಿತ್ತೆಂದು ಭಾವಿಸತಕ್ಕದ್ದು.

(4) ಮುನ್ಸಿಪಲ್ ಕೌನ್ಸಿಲ್ ಅಥವಾ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನವಿರುವಾಗ ಮುಂದುವರಿಯುತ್ತಿರುವ ಕೌನ್ಸಿಲರುಗಳು ಅಥವಾ ಸದಸ್ಯರು ಯಾವುದೇ ಖಾಲಿಸ್ಥಾನ ಸಂಭವಿಸಿರದಿದ್ದರೆ ಹೇಗೋ ಹಾಗೆ ಕಾರ್ಯನಿರ್ವಹಿಸಬಹುದು.

(5) ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ವ್ಯವಹರಣೆಯನ್ನು, ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಯಾವುದೇ ನ್ಯೂನತೆ ಅಥವಾ ಕ್ರಮದೋಷದ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

## ಅಧ್ಯಾಯ–IV

## ಪೌರಸಭಾ ಸ್ವತ್ತು ಮತ್ತು ನಿಧಿ

**81. ಪೌರಸಭಾ ಸ್ವತ್ತು.–** (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ಲು ಈ ಅಧಿನಿಯಮದ ಉದ್ದೇಶಕ್ಕಾಗಿ ಪೌರಸಭೆಯ ಪರಿಮಿತಿಗಳೊಳಗೆ ಆಗಲಿ ಅಥವಾ ಹೊರಗೇ ಆಗಲಿ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಬಹುದು ಮತ್ತು ಹೊಂದಿರಬಹುದು.

(2) ಇದರಲ್ಲಿ ನಿರ್ದಿಷ್ಟಪಡಿಸಿದ ಮತ್ತು ಸರ್ಕಾರದಿಂದ ವಿಶೇಷವಾಗಿ ಕಾಯ್ದಿರಿಸಿದ ಸ್ವರೂಪದಲ್ಲಿ ಎಲ್ಲಾ ಸ್ವತ್ತು ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು ಮತ್ತು ಅದಕ್ಕೆ ಸೇರಿರತಕ್ಕದ್ದು ಮತ್ತು ಇದು ಸರ್ಕಾರದಿಂದ ವಿಶೇಷವಾಗಿ ಕಾಯ್ದಿರಿಸದ, ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಬಹುದಾದಂಥ ಯಾವುದೇ ಸ್ವರೂಪದ ಅಥವಾ ಬಗೆಯ ಇತರ ಎಲ್ಲಾ ಸ್ವತ್ತಿನೊಂದಿಗೆ, ಅದರ ನಿರ್ದೇಶನ, ವ್ಯವಸ್ಥಾಪನೆ ಮತ್ತು

ನಿಯಂತ್ರಣದಲ್ಲಿರತಕ್ಕದ್ದು ಮತ್ತು ಅದು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಉದ್ದೇಶಗಳಿಗೊಳಪಟ್ಟು, ನ್ಯಾಸಧಾರಿಯಾಗಿ ಹೊಂದಿರತಕ್ಕದ್ದು ಮತ್ತು ವಿನಿಯೋಗಿಸತಕ್ಕದ್ದು, ಎಂದರೆ,–

(ಕ) ಎಲ್ಲಾ ಸಾರ್ವಜನಿಕ ಪಟ್ಟಣ–ಗೋಡೆಗಳು, ಗೇಟುಗಳು, ಮಾರುಕಟ್ಟೆಗಳು, ಕಸಾಯಿಖಾನೆಗಳು, ಗೊಬ್ಬರ ಮತ್ತು ಮರದ ಡಿಪೋಗಳು ಮತ್ತು ಪ್ರತಿಯೊಂದು ವಿವರಣೆಯ ಸಾರ್ವಜನಿಕ ಕಟ್ಟಡಗಳು;

(ಖ) ಎಲ್ಲಾ ಸಾರ್ವಜನಿಕ ತೊರೆಗಳು, ಕೆರೆಗಳು, ಜಲಾಶಯಗಳು, ನೀರು ತೊಟ್ಟಿಗಳು, ಬಾವಿಗಳು, ಚಿಲುಮೆಗಳು, ಮೇಲ್ಗಾಲುವೆಗಳು, ನಳಿಕೆಗಳು, ಸುರಂಗಗಳು, ಪಂಪುಗಳು ಮತ್ತು ಇತರ ನೀರು ಕಾಮಗಾರಿಗಳು ಮತ್ತು ಎಲ್ಲಾ ಸೇತುವೆಗಳು, ಕಟ್ಟಡಗಳು, ಇಂಜಿನುಗಳು, ಕಾಮಗಾರಿಗಳು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಲಗತ್ತಾದ ಸಾಮಗ್ರಿಗಳು ಮತ್ತು ವಸ್ತುಗಳು ಮತ್ತು ಯಾವುದೇ ಸಾರ್ವಜನಿಕ ಕೆರೆ ಅಥವಾ ಬಾವಿಗೆ ಸೇರಿರುವ ಖಾಸಗೀ ಸ್ವತ್ತಲ್ಲದ ಯಾವುದೇ ಪಕ್ಕದ ಭೂಮಿಯು ಸಹ;

(ಗ) ಎಲ್ಲಾ ಸಾರ್ವಜನಿಕ ಗ್ರಾಮಸಾರ ಚರಂಡಿಗಳು ಮತ್ತು ಚರಂಡಿಗಳು ಮತ್ತು ಯಾವುದೇ ಬೀದಿಯಲ್ಲಿ ಅದರ ಗುಂಟ ಅಥವಾ ಅದರ ಕೆಳಗಿರುವ ಎಲ್ಲಾ ಗ್ರಾಮಸಾರ ಚರಂಡಿಗಳು, ಚರಂಡಿಗಳು, ಸುರಂಗಗಳು, ಅಡಿಗಾಲುವೆಗಳು, ಗಟಾರಗಳು ಮತ್ತು ಜಲಮಾರ್ಗಗಳು ಮತ್ತು ಎಲ್ಲ ಕಾಮಗಾರಿಗಳು, ಸಾಮಗ್ರಿಗಳು ಮತ್ತು ಅದಕ್ಕೆ ಸೇರಿದ ವಸ್ತುಗಳು ಹಾಗೂ ಬೀದಿಗಳು, ಮನೆಗಳು, ಕಕ್ಕಸುಗಳು, ಗ್ರಾಮಸಾರ ಚರಂಡಿಗಳು, ರೊಚ್ಚುಗುಂಡಿಗಳು ಅಥವಾ ಬೇರೆ ಕಡೆಯಿಂದ ಮುನ್ಸಿಪಲ್ ಕೌನ್ಸಿಲು ಸಂಗ್ರಹಿಸಿದ ಯಾವುದೇ ಬಗೆಯ ಧೂಳು, ಕೊಳೆ, ಸೆಗಣಿ, ಬೂದಿ, ಪ್ರಾಣಿ, ವಸ್ತು ಅಥವಾ ಯಾವುದೇ ಕಸಕಡ್ಡಿ;

(ಘ) ಎಲ್ಲಾ ಸಾರ್ವಜನಿಕ ದೀಪಗಳು, ದೀಪದ ಕಂಬಗಳು ಮತ್ತು ಅವುಗಳಿಗೆ ಜೋಡಿಸಿದ ಅಥವಾ ಅವುಗಳಿಗೆ ಸೇರಿರುವ ಸಾಧನ ಸಾಮಗ್ರಿಗಳು;

(ಙ) ಸ್ಥಳೀಯ ಸಾರ್ವಜನಿಕ ಉದ್ದೇಶಗಳಿಗಾಗಿ ದಾನ ಅಥವಾ ಅನ್ಯಥಾ ಸರ್ಕಾರವು ಅದಕ್ಕೆ ವರ್ಗಾಯಿಸಿದ ಎಲ್ಲಾ ಭೂಮಿಗಳು ಮತ್ತು ಕಟ್ಟಡಗಳು;

(ಚ) ಎಲ್ಲಾ ಸಾರ್ವಜನಿಕ ಬೀದಿಗಳು ಮತ್ತು ನೆಲಗಟ್ಟುಗಳು, ಕಲ್ಲುಗಳು ಮತ್ತು ಅವುಗಳ ಇತರ ಸಾಮಗ್ರಿಗಳು ಮತ್ತು ಎಲ್ಲಾ ಮರಗಳು, ನಿರ್ಮಾಣಗಳು, ಸಾಮಗ್ರಿಗಳು, ಉಪಕರಣಗಳು ಮತ್ತು ಅಂಥ ಬೀದಿಗಳಿಗೆ ಒದಗಿಸಿದ ವಸ್ತುಗಳು:

ಪರಂತು, (ಙ) ಖಂಡದ ಮೇರೆಗೆ ಸರ್ಕಾರವು ಮುನ್ಸಿಪಲ್ ಕೌನ್ಸಿಲಿಗೆ ವರ್ಗಾಯಿಸಿದ ಭೂಮಿಗಳು ವರ್ಗಾವಣೆಯ ಲಿಖಿತದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ ಹೊರತು ಮುನ್ಸಿಪಲ್ ಕೌನ್ಸಿಲಿಗೆ ಒಡೆತನದ ಹಕ್ಕಿನ ಮೂಲಕ ಸೇರತಕ್ಕದ್ದಲ್ಲ. ಆದರೆ, ವರ್ಗಾವಣೆಯ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಅದರಲ್ಲಿ ನಿಹಿತವಾಗತಕ್ಕದ್ದು, ಮತ್ತು ಸದರಿ ಯಾವುದೇ ನಿಬಂಧನೆ ಅಥವಾ ಷರತ್ತಿನ ಉಲ್ಲಂಘನೆಯಾದಲ್ಲಿ, ಅದರ ಮೇಲಿರುವ ಎಲ್ಲಾ ಜೋಡಣೆಗಳು ಮತ್ತು ರಚನೆಗಳನ್ನು ಒಳಗೊಂಡು ಅದಕ್ಕೆ ಲಗತ್ತಾಗಿರುವ ಎಲ್ಲಾ ವಸ್ತುಗಳೊಂದಿಗೆ ಭೂಮಿಗಳು, ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅದರ ಸ್ವಾಧೀನವನ್ನು ಪುನಃ ಪಡೆಯಲು ಸರ್ಕಾರಕ್ಕೆ ಕಾನೂನು ಸಮ್ಮತವಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾದ ಅಥವಾ ನಿಹಿತವಾಗುವ ಯಾವುದೇ ಸ್ವತ್ತನ್ನು, ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳ ಮೇಲೆ ಅಧಿಸೂಚನೆಯ ಮೂಲಕ ಕಾಲಕಾಲಕ್ಕೆ ತೆಗೆದುಕೊಳ್ಳುವುದು ಸರ್ಕಾರಕ್ಕೆ ಸಕ್ಷಮವಾಗಿರತಕ್ಕದ್ದು.

**82. ಮುನ್ಸಿಪಲ್ ಕೌನ್ಸಿಲಿನಿಂದ ಅಥವಾ ಅದರ ವಿರುದ್ಧವಾಗಿ ಸ್ವತ್ತಿಗಾಗಿನ ಕ್ಲೇಮುಗಳ ತೀರ್ಮಾನ.–** (1) ಸಾಮಾನ್ಯವಾಗಿ ಕೃಷಿ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸಲಾದ ಭೂಮಿಗಳನ್ನು ಹೊರತುಪಡಿಸಿ ಭೂಮಿಗಳ ಮೋಜಣಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಪೌರಸಭಾ ಪ್ರದೇಶದಲ್ಲಿ ಯಾವುದೇ ಕಾನೂನಿನ ಮೇರೆಗೆ, ವಿಸ್ತರಿಸಿರುವ ಅಥವಾ ವಿಸ್ತರಿಸತಕ್ಕಂಥ ಯಾವುದೇ ಸ್ವತ್ತು ಅಥವಾ ಯಾವುದೇ ಸ್ವತ್ತಿನಲ್ಲಿ ಅಥವಾ ಅದರ ಮೇಲೆ ಯಾವುದೇ ಹಕ್ಕನ್ನು ಮುನ್ಸಿಪಲ್ ಕೌನ್ಸಿಲು ಅಥವಾ ಅದರ ಪರವಾಗಿ ಅಥವಾ ಮುನ್ಸಿಪಲ್ ಕೌನ್ಸಿಲಿನ ವಿರುದ್ಧವಾಗಿ ಯಾರೇ ವ್ಯಕ್ತಿಯು ಕ್ಲೇಮು ಮಾಡಿರುವಲ್ಲಿ ಡೆಪ್ಯೂಟಿ ಕಮಿಷನರನಿಗೆ ಯಾವ ವಿಚಾರಣೆಯ ಬಗ್ಗೆ ಕ್ರಮಬದ್ಧವಾದ ನೋಟೀಸನ್ನು ಕೊಡಲಾಗಿದೆಯೋ ಆ ವಿಚಾರಣೆಯ ತರುವಾಯ ಕ್ಲೇಮನ್ನು ತೀರ್ಮಾನಿಸುವ ಆದೇಶವನ್ನು ಮಾಡುವುದು ಕಾನೂನುಸಮ್ಮತವಾಗಿರತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರನು ಮಾಡಿದ ಯಾವುದೇ ಆದೇಶದ ದಿನಾಂಕದಿಂದ ಒಂದು ವರ್ಷ ಮುಕ್ತಾಯವಾದ ತರುವಾಯ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ ಯಾವುದೇ ದಾವೆ ಅಥವಾ ಅಂಥ ಆದೇಶದ ವಿರುದ್ಧ ಕಾಲಪರಿಮಿತಿ ಅವಧಿಯೊಳಗೆ ಒಂದು ಅಥವಾ ಹೆಚ್ಚು ಅಪೀಲುಗಳನ್ನು ಮಾಡಲಾಗಿದ್ದರೆ, ಆಗ ಅಂತಿಮ ಅಪೀಲು ಪ್ರಾಧಿಕಾರವು ಮಾಡಿದ ಯಾವುದೇ ಆದೇಶದ ದಿನಾಂಕದಿಂದ (ಕಾಲಪರಿಮಿತಿಯನ್ನು ಪ್ರತಿರಕ್ಷೆಗಾಗಿ ಮಂಡಿಸದಿದ್ದಾಗ್ಯೂ) ಅಂಥ ಆದೇಶವನ್ನು ತಳ್ಳಿಹಾಕಲು ಆ ದಾವೆಯನ್ನು ಹೂಡಿದ್ದರೆ ಅಥವಾ ಅಂಥ ಆದೇಶಕ್ಕೆ ಅಸಂಗತವಾಗಿ ಪರಿಹಾರವನ್ನು ಕ್ಲೇಮು ಮಾಡಿದ್ದರೆ, ಅದನ್ನು ವಜಾ ಮಾಡತಕ್ಕದ್ದು, ಆದರೆ ವಾದಿಯು ಅಂಥ ಆದೇಶದ ಬಗ್ಗೆ ಯುಕ್ತ ನೋಟೀಸನ್ನು ಹೊಂದಿದ್ದಿರಬೇಕು.

(3) (ಕ) ಈ ಪ್ರಕರಣದ ಮೂಲಕ ಡೆಪ್ಯುಟಿ ಕಮೀಷನರನಿಗೆ ಪ್ರದತ್ತವಾದ ಅಧಿಕಾರಗಳನ್ನು, ಪಟ್ಟಣ ಮುನ್ಸಿಪಲ್ ಕೌನ್ಸಿಲಿನ ಸಂದರ್ಭದಲ್ಲಿ ಅಸಿಸ್ಟೆಂಟ್ ಕಮಿಷನರನು ಅಥವಾ ಸರ್ಕಾರವು ನಿರ್ದಿಷ್ಟಪಡಿಸಿದ ಸಮಾನ ದರ್ಜೆಯ ಇತರ ಯಾರೇ ಅಧಿಕಾರಿಯು ಕೂಡ ಚಲಾಯಿಸಬಹುದು.

(ಖ) ಯಾರೇ ವ್ಯಕ್ತಿಯು, ಈ ಪ್ರಕರಣದ ಮೇರೆಗಿನ ವಿಚಾರಣೆ ಅಥವಾ ಆದೇಶದ ನೋಟೀಸನ್ನು ಸರ್ಕಾರವು ಈ ಬಗ್ಗೆ ರಚಿಸಿದ ನಿಯಮಗಳಿಗನುಸಾರವಾಗಿ ಕೊಡಲಾಗಿದ್ದರೆ ಅದರ ಬಗ್ಗೆ ಯುಕ್ತ ನೋಟೀಸನ್ನು ಹೊಂದಿರುವುದಾಗಿ ಭಾವಿಸತಕ್ಕದ್ದು.

**83. ಪೌರಸಭಾ ನಿಧಿ.–** ಈ ಅಧಿನಿಯಮದ ಅಥವಾ ಯಾವುದೇ ಕಾನೂನಿನಿಂದಾಗಿ ಮುನ್ಸಿಪಲ್ ಕೌನ್ಸಿಲು ಅಥವಾ ಅದರ ಪರವಾಗಿ ಸ್ವೀಕರಿಸಿದ ಎಲ್ಲಾ ಹಣಗಳು; ಈ ಅಧಿನಿಯಮದ ಮೇರೆಗೆ ಅದಕ್ಕೆ ಸಂದಾಯ ಮಾಡಿದ ಅಥವಾ ಅದು ಸಂಗ್ರಹಿಸಿದ ಎಲ್ಲಾ ತೆರಿಗೆಗಳು, ದಾರಿ ಸುಂಕಗಳು ಮತ್ತು ಇತರ ಸುಂಕಗಳು, ಜುಲ್ಮಾನೆಗಳು, ಫೀಜುಗಳು, ದಂಡಗಳು; ಮುನ್ಸಿಪಲ್ ಕೌನ್ಸಿಲು ಮಾರಾಟ ಮಾಡಿದ ಭೂಮಿ ಅಥವಾ ಇತರ ಸ್ವತ್ತಿನ ಎಲ್ಲ ಉತ್ಪನ್ನಗಳು, ಮತ್ತು ಅದರ ಭೂಮಿ ಅಥವಾ ಸ್ವತ್ತಿನಿಂದ ಪ್ರಾಪ್ತವಾಗುವ ಎಲ್ಲ ಬಾಡಿಗೆಗಳು; ಸರ್ಕಾರ ಅಥವಾ ಖಾಸಗೀ ವ್ಯಕ್ತಿಗಳಿಂದ ಅಥವಾ ಅನ್ಯಥಾ ದಾನಗಳು ಅಥವಾ ವರ್ಗಾವಣೆ ಮೂಲಕ ಒದಗಿ ಬರುವ ಎಲ್ಲ ಬಡ್ಡಿ, ಲಾಭಗಳು ಮತ್ತು ಇತರ ಹಣಗಳೂ ಸಹ ಪೌರಸಭಾ ನಿಧಿಯಾಗಿರತಕ್ಕದ್ದು ಮತ್ತು ಅದನ್ನು 81ನೇ ಪ್ರಕರಣದಲ್ಲಿ ಹೇಳಿದ ಸ್ವತ್ತಿನಂತೆ ಅದೇ ರೀತಿಯಲ್ಲಿ ಧಾರಣ ಮಾಡತಕ್ಕದ್ದು ಮತ್ತು ವ್ಯವಹರಿಸತಕ್ಕದ್ದು:

ಪರಂತು,–

(ಕ) ಈ ಪ್ರಕರಣದಲ್ಲಿ ಅಥವಾ 81ನೇ ಪ್ರಕರಣದಲ್ಲಿರುವುದು ಯಾವುದೂ, ಅಂಥ ಮುನ್ಸಿಪಲ್ ಕೌನ್ಸಿಲ್ಲು ಅಥವಾ ಅದರ ಪರವಾಗಿ ಬರೆದುಕೊಟ್ಟ ಟ್ರಸ್ಟಿನ ಯಾವುದೇ ಘೋಷಣೆ ಅಥವಾ ಯಾವುದೇ ಟ್ರಸ್ಟಿನ ಆಡಳಿತಕ್ಕಾಗಿ ಸರ್ಕಾರದ ಆದೇಶದ ಮೂಲಕ ವ್ಯವಸ್ಥೆಗೊಳಿಸಿದ ಯಾವುದೇ ಯೋಜನೆಯ ಮೂಲಕ

ಯಾವುದೇ ಮುನ್ಸಿಪಲ್ ಕೌನ್ಸಿಲ್ಲು ಅಂಗೀಕರಿಸಿದ ಅಥವಾ ಅದರ ಮೇಲೆ ವಿಧಿಸಿದ ಯಾವುದೇ ಹೊಣೆಗೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರತಕ್ಕದ್ದಲ್ಲ.

(ಖ) ಮುನ್ಸಿಪಲ್ ಕೌನ್ಸಿಲ್ಲು, ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅದರ ಮೇಲೆ ವಿಧಿಸಿದ ಅಥವಾ ವಿಧಿಸಬಹುದಾದ ಎಲ್ಲಾ ಹೊಣೆಗಳ ನೆರವೇರಿಕೆಗಾಗಿ ಯುಕ್ತ ಏರ್ಪಾಡನ್ನು ಮಾಡತಕ್ಕ ಷರತ್ತಿಗೊಳಪಟ್ಟು ವಿಶೇಷವಾಗಿ ಶಾಲೆಗಳು ಅಥವಾ ಔಷಧಾಲಯಗಳು ಅಥವಾ ನೀರು ಸರಬರಾಜು ಗೃಹಗಳು ಅಥವಾ ಅಗ್ನಿಶಾಮಕ ದಳಗಳ ಉದ್ದೇಶಗಳಿಗಾಗಿ ಅಥವಾ ಕಮಿಷನರನು ಈ ಬಗ್ಗೆ ಅನುಮೋದಿಸುವಂಥ ಇತರ ಉದ್ದೇಶಗಳಿಗಾಗಿ ಸ್ವೀಕರಿಸಿದ ಅಥವಾ ಪ್ರತ್ಯೇಕವಾಗಿಟ್ಟ ಪೌರಸಭಾ ನಿಧಿಯ ಯಾವುದೇ ಭಾಗವನ್ನು ಮುನ್ಸಿಪಲ್ ಲೆಕ್ಕಪತ್ರಗಳಲ್ಲಿ ಪ್ರತ್ಯೇಕವಾದ ಶೀರ್ಷಿಕೆಗೆ ಜಮೆ ಮಾಡಬಹುದು ಮತ್ತು ಮುನ್ಸಿಪಲ್ ಕೌನ್ಸಿಲ್ಲು ಸರಿಯಾಗಿ ಹಾಗೆ ಜಮೆ ಮಾಡಿದ ಯಾವುದೇ ಮೊತ್ತಗಳನ್ನು, ಯಾವ ವಿಶೇಷ ಉದ್ದೇಶಗಳಿಗಾಗಿ ಅಂಥ ಮೊತ್ತಗಳನ್ನು ಸ್ವೀಕರಿಸಲಾಗಿತ್ತೋ ಅಥವಾ ಪ್ರತ್ಯೇಕವಾಗಿಡಲಾಗಿತ್ತೋ ಆ ಉದ್ದೇಶಗಳಿಗಾಗಿ ಅನನ್ಯವಾಗಿ ವಿನಿಯೋಗಿಸಬಹುದು.

(ಗ) ಮುನ್ಸಿಪಲ್ ಕೌನ್ಸಿಲ್ಲು 137ನೇ ಪ್ರಕರಣದ ಮೇರೆಗೆ ಸ್ವೀಕರಿಸಿದ ಫೀಜುಗಳನ್ನು ಪೌರಸಭಾ ಲೆಕ್ಕಪತ್ರಗಳ ಪ್ರತ್ಯೇಕ ಶೀರ್ಷಿಕೆಗೆ ಜಮೆ ಮಾಡತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ಲು ಹಾಗೆ ಜಮೆ ಮಾಡಿದ ಯಾವುದೇ ಮೊತ್ತವನ್ನು ಸದರಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಅನನ್ಯವಾಗಿ ವಿನಿಯೋಗಿಸತಕ್ಕದ್ದು.

**84. ಪೌರಸಭಾ ನಿಧಿ ಮತ್ತು ಸ್ವತ್ತಿನ ವಿನಿಯೋಗ.–** (1) ಈ ಅಧಿನಿಯಮದ ಉಪಬಂಧಗಳು ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ಲು ಧಾರಣ ಮಾಡಿದ ಅಥವಾ ಅದರಲ್ಲಿ ನಿಹಿತವಾದ ಪೌರಸಭಾ ನಿಧಿ ಮತ್ತು ಎಲ್ಲಾ ಸ್ವತ್ತು 87, 88 ಮತ್ತು 91ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಅನ್ವಯಿಸತಕ್ಕದ್ದು ಮತ್ತು ಈ ಅಧಿನಿಯಮ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಯಾವ ಉದ್ದೇಶಗಳಿಗಾಗಿ ಮುನ್ಸಿಪಲ್ ಕೌನ್ಸಿಲಿಗೆ ಅಧಿಕಾರಗಳನ್ನು ಪ್ರದಾನ ಮಾಡಲಾಗಿದೆಯೋ ಅಥವಾ ಕರ್ತವ್ಯಗಳನ್ನು ವಿಧಿಸಲಾಗಿದೆಯೋ ಆ ಇತರ ಎಲ್ಲ ಉದ್ದೇಶಗಳಿಗಾಗಿ ಮತ್ತು ಕಮಿಷನರನ ಅಥವಾ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಯಾವ ಉದ್ದೇಶಗಳಿಗಾಗಿ ಅಂಥ ಸ್ವತ್ತು ಅಥವಾ ನಿಧಿಯ ವಿನಿಯೋಗವು ಸಾರ್ವಜನಿಕ ಹಿತಾಸಕ್ತಿಯಲ್ಲಿರುವುದೋ ಆ ಇತರ ಯಾವುದೇ ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅದರಿಂದ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತಗೊಂಡ ಯಾರೇ ಅಧಿಕಾರಿಯು,–

(ಕ) ಸದರಿ ಪರಿಮಿತಿಗಳಿಗೆ ಮೀರಿದ ವೆಚ್ಚವನ್ನು,–

(i) ಭೂಮಿಯ ಆರ್ಜನೆಯಲ್ಲಿ; ಅಥವಾ

(ii) ಪೌರಸಭೆಯ ನಿವಾಸಿಗಳಿಗೆ ಅಗತ್ಯವಾದ ನೀರಿನ ಸರಬರಾಜನ್ನು ಪಡೆಯುವ ಉದ್ದೇಶಕ್ಕಾಗಿ ಅಥವಾ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ದುರಸ್ತಿ ಅಥವಾ ಖರೀದಿಗಾಗಿ ಅಥವಾ ಸದರಿ ಪೌರಸಭೆಯ ನಿವಾಸಿಗಳ ಉಪಯೋಗಕ್ಕಾಗಿ ವಿದ್ಯುಚ್ಛಕ್ತಿಯ ಸರಬರಾಜನ್ನು ಒದಗಿಸುವುದಕ್ಕೆ ಅಥವಾ ಸದರಿ ಪರಿಮಿತಿಗಳಿಂದಾಚೆ ಕಸಾಯಿಖಾನೆಗಳನ್ನು ಅಥವಾ ಮಲ ಅಥವಾ ಗ್ರಾಮಸಾರ ಅಥವಾ ಪ್ರಾಣಿಗಳ ಶವಗಳನ್ನು ವಿಲೆ ಮಾಡಲು ಸ್ಥಳಗಳನ್ನು ಸ್ಥಾಪಿಸುವುದಕ್ಕಾಗಿ ಅಥವಾ ಚರಂಡಿ ಕಾಮಗಾರಿಗಳಿಗಾಗಿ ಅಥವಾ ಸಾರ್ವಜನಿಕ ಸಾಗಾಣೆಗಾಗಿ ಯಾಂತ್ರಿಕನಾಗಿ ಚಾಲಿತವಾದ ಸಾರಿಗೆ ಸೌಲಭ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ಅಥವಾ

ಪೌರಸಭೆಯ ನಿವಾಸಿಗಳ ಪ್ರಯೋಜನಕ್ಕಾಗಿ ಹಾಲು ಅಥವಾ ಹಾಲಿನ ಉತ್ಪನ್ನಗಳ ಸರಬರಾಜು, ವಿತರಣೆ ಮತ್ತು ಅವುಗಳ ಸಂಸ್ಕರಣೆಗಾಗಿ ಡೈರಿಗಳು ಅಥವಾ ಫಾರ್ಮುಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಅಥವಾ ಸದರಿ ಪೌರಸಭೆಯ ನಿವಾಸಿಗಳ ಆರೋಗ್ಯ, ಸುರಕ್ಷತೆ ಅಥವಾ ಅನುಕೂಲವನ್ನು ವೃದ್ಧಿಗೊಳಿಸುವುದಕ್ಕಾಗಿನ ಯಾವುದೇ ಇತರ ಉದ್ದೇಶಕ್ಕೆ,

–ವಹಿಸಬಹುದು.

(ಖ) ಪೌರ ಸಭೆಯ ಪರಿಮಿತಿಯೊಳಗಾಗಲಿ ಅಥವಾ ಅದರಾಚೆಯಾಗಲಿ ಸಾರ್ವಜನಿಕ ಆರೋಗ್ಯ, ಶಿಕ್ಷಣ ಅಥವಾ ಅನುಕೂಲವನ್ನು ವೃದ್ಧಿಗೊಳಿಸುವ ಮತ್ತು ವಂತಿಗೆ ಕೊಡುವ ಮುನ್ಸಿಪಲ್ ಕೌನ್ಸಿಲಿನ ಪರಿಮಿತಿಗಳೊಳಗಿನ ನಿವಾಸಿಗಳ ಪ್ರಯೋಜನಕ್ಕಾಗಿನ ಕ್ರಮಗಳಿಗಾಗಿ ಯಾವುದೇ ಇತರ ಮುನ್ಸಿಪಲ್ ಕೌನ್ಸಿಲ್ ಅಥವಾ ತಾಲ್ಲೂಕು ಅಭಿವೃದ್ಧಿ ಮಂಡಲಿ ಅಥವಾ ಗ್ರಾಮ ಪಂಚಾಯ್ತಿ ಅಥವಾ ದಂಡು ಪ್ರಾಧಿಕಾರ ಅಥವಾ ಪಟ್ಟಣ ಪ್ರದೇಶ ಸಮಿತಿ ಅಥವಾ ಇತರ ಸಾರ್ವಜನಿಕ ಸಂಸ್ಥೆ ಅಥವಾ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯಕ್ಕೆ ವಹಿಸಿದ ವೆಚ್ಚಗಳ ಬಗ್ಗೆ ವಂತಿಗೆಯನ್ನು ಕೊಡಬಹುದು; ಅಥವಾ

(ಗ) ಪೌರಸಭೆ ಪರಿಮಿತಿಗಳ ಹೊರಗೆ ಪಡೆಯಬಹುದಾದ ವಿದ್ಯಾರ್ಥಿ ವೇತನಗಳನ್ನು ಸೃಜಿಸಬಹುದು.

(3) ಈ ಪ್ರಕರಣದಲ್ಲಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧದಲ್ಲಿರುವುದು ಯಾವುದೂ,–

(ಕ) ಯಾವುದೇ ಸ್ಥಳದಲ್ಲಿ, ಅಂಥ ಸ್ಥಳವು ಸದರಿ ಪೌರಸಭೆಯ ಪರಿಮಿತಿಗಳೊಳಗೆ ಇರಲಿ ಅಥವಾ ಇಲ್ಲದಿರಲಿ, ಯಾರೇ ವ್ಯಕ್ತಿ ಅಥವಾ ಕಟ್ಟಡಗಳು ಅಥವಾ ಭೂಮಿಗಳಿಗೆ, ಅಥವಾ ಅದರ ಪ್ರಯೋಜನಕ್ಕಾಗಿ ಮುನ್ಸಿಪಲ್ ಕೌನ್ಸಿಲ್ ಮತ್ತು ಅಂಥ ಕಟ್ಟಡಗಳ ಅಥವಾ ಭೂಮಿಗಳ ಅಂಥ ವ್ಯಕ್ತಿ ಅಥವಾ ಅಧಿಭೋಗದಾರ ಅಥವಾ ಒಡೆಯನ ನಡುವೆ ಒಪ್ಪಂದದ ಮೂಲಕ ನಿರ್ಧರಿಸತಕ್ಕ ಸಂದಾಯ ಮತ್ತು ಅಂಥ ಸರಬರಾಜು ಅಥವಾ ಅನುಕೂಲತೆಗಳ ಮುಂದುವರಿಕೆಗೆ ಸಂಬಂಧಪಟ್ಟಂತೆ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಅಂಥ ಚರಂಡಿ ಕಾಮಗಾರಿಗಳ ವ್ಯವಸ್ಥೆಯ ಮೂಲಕ ಒದಗಿಸಿದ ಅನುಕೂಲತೆಗಳನ್ನು ಸದರಿ ಪೌರಸಭೆಯೊಳಗೆ ಈ ಅಧಿನಿಯಮದ ಉದ್ದೇಶಕ್ಕಾಗಿ ಅಗತ್ಯವಿರದ ನೀರಿನ ಅಥವಾ ವಿದ್ಯುಚ್ಛಕ್ತಿಯ ಯಾವುದೇ ಪ್ರಮಾಣವನ್ನು ಸರಬರಾಜು ಮಾಡಲು ಅಥವಾ ವಿಸ್ತರಿಸಲು; ಅಥವಾ

(ಖ) ಅಂಥ ಸರಬರಾಜಿನ ಉದ್ದೇಶಕ್ಕಾಗಿ ಅಥವಾ ಅಂಥ ಅನುಕೂಲಗಳ ವಿಸ್ತರಣೆಗಾಗಿ ಅವಶ್ಯವಾದ ಯಾವುದೇ ಸಂಪರ್ಕ ಕೊಳವೆಗಳನ್ನು ಅಥವಾ ಯಾವುದೇ ವಿದ್ಯುತ್ ಸರಬರಾಜು ಲೈನುಗಳ ಅಥವಾ ಇತರ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ದುರಸ್ತಿ ಅಥವಾ ಬದಲಾವಣೆಗಾಗಿ ಹಿಂದೆ ಹೇಳಿದಂತೆ ನಿರ್ಧರಿಸಬಹುದಾದಂಥ ಸಂದಾಯದ ಬಗೆಗಿನ ಅಂಥ ನಿಬಂಧನೆಗಳ ಮೇಲೆ ಯಾವುದೇ ವೆಚ್ಚವನ್ನು ವಹಿಸಲು;

–ಸರ್ಕಾರದ ಅನುಮತಿಯೊಂದಿಗೆ ಹಿಂದೆ ಹೇಳಿದಂತೆ ನೀರು ಸರಬರಾಜು ಅಥವಾ ವಿದ್ಯುಚ್ಛಕ್ತಿ ಅಥವಾ ಚರಂಡಿ ವ್ಯವಸ್ಥೆಗಾಗಿ ಸದರಿ ಪೌರಸಭೆಯ ಪರಿಮಿತಿಗಳಿಂದಾಚೆ ಅದು ಕಾಮಗಾರಿಗಳನ್ನು ನಿರ್ಮಿಸಿದಾಗ ಮುನ್ಸಿಪಲ್ ಕೌನ್ಸಿಲ್ಲಿಗೆ ಅದು ಕಾನೂನುಬಾಹಿರಗೊಳಿಸುವುದಾಗಿ ಭಾವಿಸತಕ್ಕದ್ದಲ್ಲ.

**85. ಹೆಚ್ಚುವರಿ ನಿಧಿಯನ್ನು ಠೇವಣಿ ಇಡಲು ಮತ್ತು ಹೂಡಲು ಅಧಿಕಾರ.–** (1) ಮುನ್ಸಿಪಲ್ ಕೌನ್ಸಿಲ್ಲಿಗೆ ಚಾಲ್ತಿ ವೆಚ್ಚಗಳಿಗೆ ಅಗತ್ಯವಿಲ್ಲದಿರಬಹುದಾದಂಥ ಅದರ ವಶದಲ್ಲಿರುವ ಯಾವುದೇ ಹೆಚ್ಚುವರಿ ನಿಧಿಗಳನ್ನು ಸರ್ಕಾರಿ ಉಳಿತಾಯ ಬ್ಯಾಂಕ್ ಅಥವಾ ಸರ್ಕಾರದ ಮಂಜೂರಾತಿಯೊಂದಿಗೆ ಯಾವುದೇ ಅನುಸೂಚಿತ

ಬ್ಯಾಂಕಿನಲ್ಲಿ ಅಥವಾ ಸರ್ಕಾರವು ಅನುಮೋದಿಸಿದ ರಾಜ್ಯದಲ್ಲಿನ ಕೇಂದ್ರೀಯ ಸಹಕಾರಿ ಬ್ಯಾಂಕಿನಲ್ಲಿ ಬಡ್ಡಿಯ ಮೇಲೆ ಠೇವಣಿ ಇಡಲು ಮತ್ತು ಅಂಥವೇ ಮಂಜೂರಾತಿಯೊಂದಿಗೆ ಅಂಥ ನಿಧಿಗಳನ್ನು ಸಾರ್ವಜನಿಕ ಭದ್ರತೆಗಳಲ್ಲಿ ಮುನ್ಸಿಪಲ್ ಕೌನ್ಸಿಲ್‌ನ ಹೆಸರಿನಲ್ಲಿ ಹೂಡಲು ಮತ್ತು ಅವಶ್ಯಕವಾಗಬಹುದಾದಂಥ ಭದ್ರತೆಗಳನ್ನು ಕಾಲಕಾಲಕ್ಕೆ ವಿಲೆ ಮಾಡಲು ಕಾನೂನು ಸಮ್ಮತವಾಗಿರತಕ್ಕದ್ದು.

(2) ಚಾಲ್ತಿ ವೆಚ್ಚಗಳಿಗೆ ಅಗತ್ಯವಾಗಬಹುದಾದ್ದಕ್ಕಿಂತ ಹೆಚ್ಚಿನ ಮತ್ತು ಮೇಲ್ಪಟ್ಟ ಎಲ್ಲ ಹೆಚ್ಚುವರಿ ನಿಧಿಗಳನ್ನು (1)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿದಂತೆ ಠೇವಣಿ ಇಟ್ಟರೆ ಅಥವಾ ಹೂಡಿದ ಹೊರತು, ಸ್ಥಳೀಯ ಸರ್ಕಾರಿ ಖಜಾನೆ ಅಥವಾ ಅಂಥ ಇತರ ಸ್ಥಳದಲ್ಲಿ ಠೇವಣಿ ಇಡತಕ್ಕದ್ದು ಅಥವಾ ಸರ್ಕಾರವು ಮಂಜೂರ್ಮಾಡಬಹುದಾದಂಥ ಭದ್ರತೆಯಲ್ಲಿ ಹೂಡತಕ್ಕದ್ದು.

**86. ಹಣ ಸಾಲ ಪಡೆಯಲು ಮುನ್ಸಿಪಲ್ ಕೌನ್ಸಿಲುಗಳ ಅಧಿಕಾರ.–** ಮುನ್ಸಿಪಲ್ ಕೌನ್ಸಿಲು ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಅನುಸರಣೆಯಲ್ಲಿ ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಭದ್ರತೆ ಬಡ್ಡಿಯ ದರ, ಅಸಲು ಮತ್ತು ಬಡ್ಡಿಯ ಮರುಸಂದಾಯಕ್ಕೆ ಸಂಬಂಧಪಟ್ಟಂತೆ ಸರ್ಕಾರವು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಕೈಗೊಳ್ಳಲು ಅಗತ್ಯಪಡಿಸಿದ ಅಥವಾ ಶಕ್ತಗೊಳಿಸಿದಂಥ ಖಾಯಂ ಸ್ವರೂಪದ ಯಾವುದೇ ಕಾಮಗಾರಿಯ ನಿರ್ಮಾಣಕ್ಕಾಗಿ ಅಥವಾ ಭೂಮಿಯ ಆರ್ಜನೆಗಾಗಿ ಅಗತ್ಯವಾದ ಹಣದ ಯಾವುದೇ ಮೊತ್ತವನ್ನು ಸರ್ಕಾರದಿಂದಾಗಲಿ ಇಲ್ಲವೆ ಯಾವುದೇ ಬ್ಯಾಂಕು, ನಿಗಮ ಅಥವಾ ವ್ಯಕ್ತಿಯಿಂದಾಗಲಿ ಸಾಲ ಪಡೆಯಬಹುದು.

## ಅಧ್ಯಾಯ–V

## ಮುನ್ಸಿಪಲ್ ಕೌನ್ಸಿಲುಗಳ ನಿರ್ಬಂಧಕ ಮತ್ತು ವಿವೇಚನಾತ್ಮಕ ಪ್ರಕಾರ್ಯಗಳು

**87. ಮುನ್ಸಿಪಲ್ ಕೌನ್ಸಿಲುಗಳ ನಿರ್ಬಂಧಕ ಪ್ರಕಾರ್ಯಗಳು.–** ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ಲಿಗೆ ಪೌರಸಭೆಯೊಳಗೆ ಕೆಳಕಂಡ ವಿಷಯಗಳ ಪ್ರತಿಯೊಂದಕ್ಕಾಗಿ, ಅದು ಕಾನೂನುಬದ್ಧವಾಗಿ ಉಪಯೋಗಿಸಬಹುದಾದ ಅಥವಾ ತೆಗೆದುಕೊಳ್ಳಬಹುದಾದಂಥ ಯಾವುದೇ ಸಾಧನಗಳು ಅಥವಾ ಸಂಪನ್ಮೂಲಗಳ ಮೂಲಕ ಸಾಕಷ್ಟು ವ್ಯವಸ್ಥೆ ಮಾಡುವುದು ಕರ್ತವ್ಯವಾಗಿರತಕ್ಕದ್ದು,–

(ಕ) ಸಾರ್ವಜನಿಕ ಬೀದಿಗಳು, ಸ್ಥಳಗಳು ಮತ್ತು ಕಟ್ಟಡಗಳಿಗೆ ದೀಪದ ವ್ಯವಸ್ಥೆ;

(ಖ) ಸಾರ್ವಜನಿಕ ಬೀದಿಗಳು ಮತ್ತು ಸ್ಥಳಗಳಿಗೆ ನೀರು ಹಾಕುವುದು;

(ಗ) ಖಾಸಗಿ ಸ್ವತ್ತಲ್ಲದ, ಸಾರ್ವಜನಿಕರ ಅನುಭೋಗಕ್ಕೆ ಮುಕ್ತವಾಗಿರುವ ಅಂಥ ಜಾಗಗಳು ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರಲಿ ಅಥವಾ ಇಲ್ಲದಿರಲಿ ಅಂಥ ಸಾರ್ವಜನಿಕ ಬೀದಿಗಳು, ಸ್ಥಳಗಳು ಮತ್ತು ಗ್ರಾಮಸಾರ ಚರಂಡಿಗಳನ್ನು ಸ್ವಚ್ಛಗೊಳಿಸುವುದು, ಹಾನಿಕಾರಕ ಸಸ್ಯಗಳನ್ನು ತೆಗೆದುಹಾಕುವುದು ಮತ್ತು ಎಲ್ಲಾ ಸಾರ್ವಜನಿಕ ಉಪದ್ರವಗಳನ್ನು ಉಪಶಮನಗೊಳಿಸುವುದು;

(ಘ) ಬೆಂಕಿ ಸಂಭವಿಸಿದಾಗ ಬೆಂಕಿಯನ್ನು ಆರಿಸುವುದು ಮತ್ತು ಪ್ರಾಣ ಮತ್ತು ಸ್ವತ್ತನ್ನು ಸಂರಕ್ಷಿಸುವುದು;

(ಙ) ಅಸಹ್ಯಕರ ಅಥವಾ ಅಪಾಯಕಾರಿ ವೃತ್ತಿಗಳು ಮತ್ತು ಆಚರಣೆಗಳನ್ನು ನಿಯಂತ್ರಿಸುವುದು ಅಥವಾ ಉಪಶಮನಗೊಳಿಸುವುದು;

(ಚ) ಸಾರ್ವಜನಿಕ ಬೀದಿಗಳು, ಸೇತುವೆಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳು ಮತ್ತು ಖಾಸಗಿ ಸ್ವತ್ತಲ್ಲದ ಸಾರ್ವಜನಿಕರ ಅನುಭೋಗಕ್ಕೆ ಮುಕ್ತವಾಗಿರುವಂಥ ಜಾಗಗಳಲ್ಲಿ ಅಂಥ ಜಾಗಗಳು ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರಲಿ ಅಥವಾ ಸರ್ಕಾರಕ್ಕೆ ಸೇರಿರಲಿ ಅವುಗಳಲ್ಲಿಯ ಅಡಚಣೆಗಳನ್ನು ಮತ್ತು ಮುಂಚಾಚುಗಳನ್ನು ತೆಗೆದುಹಾಕುವುದು;

(ಛ) ಅಪಾಯಕಾರಿ ಕಟ್ಟಡಗಳು ಅಥವಾ ಸ್ಥಳಗಳನ್ನು ಭದ್ರಪಡಿಸುವುದು ಅಥವಾ ತೆಗೆದುಹಾಕುವುದು ಮತ್ತು ಅನಾರೋಗ್ಯಕರ ಸ್ಥಳಗಳನ್ನು ಹಸನುಗೊಳಿಸುವುದು;

(ಜ) ಮೃತರ ವಿಲೆಗಾಗಿ ಸ್ಥಳಗಳನ್ನು ಆರ್ಜಿಸುವುದು ಮತ್ತು ನಿರ್ವಹಿಸುವುದು, ಬದಲಾಯಿಸುವುದು ಮತ್ತು ನಿಯಂತ್ರಿಸುವುದು;

(ಝ) ಸಾರ್ವಜನಿಕ ಬೀದಿಗಳು, ಅಡಿಗಾಲುವೆ, ಪೌರಸಭೆ ಸರಹದ್ದು ಗುರುತುಗಳು, ಮಾರುಕಟ್ಟೆಗಳು, (ತರಕಾರಿಗಳ ಮಾರಾಟಕ್ಕಾಗಿನ ಪ್ರತ್ಯೇಕ ಮತ್ತು ಸೂಕ್ತ ಸ್ಥಳವನ್ನು ಒಳಗೊಂಡು) ಕಸಾಯಿಖಾನೆಗಳು, ಶೌಚಾಲಯಗಳು, ಕಕ್ಕಸ್ಸಗಳು, ಮೂತ್ರಗಳು, ಚರಂಡಿಗಳು, ಗ್ರಾಮಸಾರ ಚರಂಡಿಗಳು, ಚರಂಡಿ ವ್ಯವಸ್ಥೆ ಕಾಮಗಾರಿಗಳು, ಗ್ರಾಮಸಾರ ಕಾಮಗಾರಿಗಳು, ಸ್ನಾನಗೃಹಗಳು, ತೊಳೆಯುವ ಸ್ಥಳಗಳು, ಕುಡಿಯುವ ನೀರಿನ ಕಾರಂಜಿಗಳು, ಕೆರೆಗಳು, ಬಾವಿಗಳು, ಅಣೆಕಟ್ಟುಗಳು ಮತ್ತು ಅಂಥವುಗಳನ್ನು ನಿರ್ಮಿಸುವುದು, ಬದಲಾಯಿಸುವುದು ಮತ್ತು ನಿರ್ವಹಿಸುವುದು.

(ಞ) ಈಗಿರುವ ಸರಬರಾಜು ಸಾಕಷ್ಟಿಲ್ಲದಿರುವುದು ಅಥವಾ ಅನಾರೋಗ್ಯಕರ–ವಾಗಿರುವುದರಿಂದಾಗಿ ನಿವಾಸಿಗಳ ಆರೋಗ್ಯಕ್ಕೆ ಅಪಾಯವನ್ನು ತಡೆಗಟ್ಟುವುದಕ್ಕಾಗಿ ಅಂಥ ಸರಬರಾಜು ಅಥವಾ ಹೆಚ್ಚಿನ ಸರಬರಾಜನ್ನು ಯುಕ್ತ ಖರ್ಚಿನಲ್ಲಿ ಪಡೆದುಕೊಳ್ಳಬಹುದಾಗಿರುವಾಗ, ಅಥವಾ ಸರಿಯಾದ ಮತ್ತು ಸಾಕಷ್ಟಾದ ನೀರಿನ ಸರಬರಾಜು ಅಥವಾ ಹೆಚ್ಚಿನ ಸರಬರಾಜನ್ನು ಪಡೆಯುವುದು;

(ಟ) ಬೀದಿಗಳಿಗೆ ಹೆಸರಿಡುವುದು ಮತ್ತು ಮನೆಗಳಿಗೆ ಸಂಖ್ಯೆಯನ್ನು ಕೊಡುವುದು;

(ಠ) ಜನನಗಳು ಮತ್ತು ಮರಣಗಳನ್ನು ನೋಂದಾಯಿಸುವುದು;

(ಡ) ಸಾರ್ವಜನಿಕ ದೇವಿ ಹಾಕುವುದು;

(ಢ) ಪ್ರಾಣಿಗಳ ಲಸಿಕೆಯ ಸರಬರಾಜಿಗಾಗಿ ಪೌರಸಭೆಗಳಿಗೆ ಅಗತ್ಯವಾದ ಕರುಗಳು, ಹಸುಗಳು ಅಥವಾ ಎಮ್ಮೆಗಳಿಗೆ ಸೂಕ್ತ ಸ್ಥಳಾವಕಾಶವನ್ನು ಒದಗಿಸುವುದು;

(ಣ) ಪ್ರಾಥಮಿಕ ಪೂರ್ವ ಶಿಕ್ಷಣಕ್ಕಾಗಿ ಶಾಲೆಗಳನ್ನು ಇಟ್ಟುಕೊಂಡುಬರುವುದು;

(ತ) ಪೌರಸಭೆಯೊಳಗಿನ ಪೊಲೀಸರಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ 222ನೇ ಪ್ರಕರಣದ ಮೇರೆಗೆ ಜಾರಿಯಲ್ಲಿರುವ ಕಾನೂನಿನ ಮೇರೆಗೆ, ವ್ಯವಹರಿಸಬಹುದಾದಂಥ ನಾಯಿಗಳ ನಾಶ ಅಥವಾ ತಡೆಹಿಡಿದಿರಿಸುವಿಕೆ ಮತ್ತು ಪರಿರಕ್ಷಣೆಗಾಗಿ ಏರ್ಪಾಟು ಮಾಡುವುದು;

(ಥ) ನಾಯಿ ಹುಚ್ಚಿನ ವಿರುದ್ಧ ಚಿಕಿತ್ಸೆ ಮತ್ತು ಕುಷ್ಠ ರೋಗಿಗಳು ಮತ್ತು ಮಾನಸಿಕ ರೋಗಿಗಳ ಚಿಕಿತ್ಸೆಗಾಗಿ ಸೌಲಭ್ಯಗಳನ್ನು ಒದಗಿಸುವುದು ಮತ್ತು ಪೌರಸಭೆಯ ಪರಿವಾಸಿಗಳೊಳಗೆ ಅಥವಾ ಹೊರಗೆ ನಾಯಿ ಹುಚ್ಚಿನ ವಿರುದ್ಧ ಚಿಕಿತ್ಸೆ ಪಡೆಯುತ್ತಿರುವ ನಿರ್ಧನಿಕ ವ್ಯಕ್ತಿಗಳ ವೆಚ್ಚಗಳನ್ನು ಭರಿಸುವುದು;

(ದ) ಮಲ ಮತ್ತು ಕಸವನ್ನು ತೆಗೆಯುವುದಕ್ಕಾಗಿ ಮತ್ತು ಮಲ ಮತ್ತು ಕಸವನ್ನು ವಿಲೆ ಮಾಡುವುದಕ್ಕಾಗಿ ಮುನ್ಸಿಪಲ್ ಕೌನ್ಸಿಲು ನಿಯೋಜಿಸಿದ ನೌಕರರ ಉಪಯೋಗಕ್ಕಾಗಿ ಮುಚ್ಚಿದ ಲೋಹದ ಸಂಪುಟಗಳನ್ನು ಚಕ್ರಗಳ ಮೇಲೆ ಕ್ರೂಡೀಕರಿಸಿರುವ ಮುಚ್ಚಿದ ಲೋಹದ ಸಂಪುಟಗಳನ್ನು ಒದಗಿಸುವುದು ಮತ್ತು ಸರ್ಕಾರವು ಹಾಗೆ ಅಗತ್ಯಪಡಿಸಿದರೆ, ಅಂಥ ಮಲ ಮತ್ತು ಕಸದಿಂದ ಕಂಪೋಸ್ಟ್ ಗೊಬ್ಬರವನ್ನು ತಯಾರಿಸುವುದು;

**ವಿವರಣೆ:–** ಈ ಖಂಡದಲ್ಲಿ "ಕಸ" ಎಂಬುದರಲ್ಲಿ ಧೂಳು, ಬೂದಿ, ಒಡೆದ ಇಟ್ಟಿಗೆಗಳು, ಗಾರೆ, ಗ್ರಾಮಸಾರ, ಸಗಣಿ, ಕೊಳೆ ಯಾವುದೇ ಬಗೆಯ ಕೊಳೆತ ವಸ್ತುಗಳು ಮತ್ತು ಹೊಲಸು ಒಳಗೊಳ್ಳುತ್ತದೆ.

(ಧ) ಪೌರಸಭೆಯ ಕಸಗುಡಿಸುವವರು ಮತ್ತು ಜಾಡಮಾಲಿಗಳಿಗೆ ಸ್ಥಳಾವಕಾಶವನ್ನು ಒದಗಿಸುವುದು ಮತ್ತು ಈ ಬಗ್ಗೆ ನಿಯಮಿಸಿದ ನಿಯಮಗಳಿಗೊಳಪಟ್ಟು ಅಂಥ ಕಸಗುಡಿಸುವವರು ಮತ್ತು ಜಾಡಮಾಲಿಗಳಿಗೆ ಮನೆಗಳ ನಿರ್ಮಾಣಕ್ಕಾಗಿ ಸಾಲಗಳನ್ನು ಕೊಡುವುದು;

(ನ) ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ಮುನ್ಸಿಪಲ್ ಕೌನ್ಸಿಲು ಒಪ್ಪಿಸಬೇಕೆಂದು ಅಗತ್ಯಪಡಿಸುವಂಥ ಪೌರಸಭೆಯ ಪೌರಾಡಳಿತದ ಮೇಲೆ ವಾರ್ಷಿಕ ವರದಿಗಳನ್ನು ಮುದ್ರಿಸುವುದು; ಮತ್ತು

(ಪ) ಈ ಅಧಿನಿಯಮದ ಉದ್ದೇಶಕ್ಕಾಗಿ ಅಥವಾ ಯಾವುದೇ ಪೌರಸಭೆಯ ಸ್ವತ್ತಿನ ಸಂರಕ್ಷಣೆಗಾಗಿ ಮುನ್ಸಿಪಲ್ ಕೌನ್ಸಿಲಿಗೆ ಬೇಕಾಗಬಹುದಾದಂಥ ಪೊಲೀಸ್ ಅಥವಾ ರಕ್ಷಕರುಗಳಿಗಾಗಿ ವೇತನ ಮತ್ತು ಸಾದಿಲ್ವಾರು ವೆಚ್ಚವನ್ನು ಸಂದಾಯ ಮಾಡುವುದು ಮತ್ತು ಪೊಲೀಸರಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಸರ್ಕಾರವು ಅಗತ್ಯಪಡಿಸಬಹುದಾದಂಥ ಸ್ಥಳಾವಕಾಶವನ್ನು ಒದಗಿಸುವುದು;

(ಫ) ಪೌರಸಭೆಯೊಳಗಿನ ಎಲ್ಲ ಕಟ್ಟಡಗಳು ಮತ್ತು ನಿವೇಶನಗಳ ತಹಲ್‌ವರೆಗಿನ ದಾಖಲೆಯನ್ನು ಇಡುವುದು;

(ಬ) ರಸ್ತೆ ಬದಿ ಮರಗಳನ್ನು ನೆಡುವುದು ಮತ್ತು ಕಾಪಾಡುವುದು;

**88. ವಿಶೇಷ ಪ್ರಕಾರ್ಯಗಳು.–** 87ನೇ ಪ್ರಕರಣದಲ್ಲಿ ನಮೂದಿಸಲಾದಂಥ ಯುಕ್ತ ಮತ್ತು ಸಾಕಷ್ಟು ಉಪಬಂಧ ಮಾಡುವುದಕ್ಕೆ ಒಳಪಟ್ಟು, ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲು ಈ ಕೆಳಕಂಡ ವಿಶೇಷ ವಿಷಯಗಳಿಗಾಗಿ ಯುಕ್ತ ಏರ್ಪಾಡನ್ನು ಮಾಡತಕ್ಕದ್ದು, ಎಂದರೆ:–

(ಕ) ಅಪಾಯಕಾರಿ ರೋಗದ ಕಾಲದಲ್ಲಿ ರೋಗಿಗಳಿಗಾಗಿ ವಿಶೇಷ ವೈದ್ಯಕೀಯ ನೆರವು ಮತ್ತು ಸ್ಥಳಾವಕಾಶವನ್ನು ಒದಗಿಸುವುದು; ಮತ್ತು ರೋಗ ಹರಡುವುದನ್ನು ತಡೆಗಟ್ಟಲು ಮತ್ತು ರೋಗ ಮರುಕಳಿಸುವುದನ್ನು ದಮನಗೊಳಿಸಲು ಮತ್ತು ತಡೆಗಟ್ಟಲು ಅಗತ್ಯವಾಗಬಹುದಾಂಥ ಕ್ರಮಗಳನ್ನು ತೆಗೆದುಕೊಳ್ಳುವುದು;

(ಖ) ಪೌರಸಭೆ ಪರಿಮಿತಿಯೊಳಗೆ ನಿರ್ಗತಿಕ ವ್ಯಕ್ತಿಗಳಿಗಾಗಿ ಕ್ಷಾಮ ಅಥವಾ ಅಭಾವದ ಕಾಲಗಳಲ್ಲಿ ಪರಿಹಾರ ಕೊಡುವುದು ಮತ್ತು ಪರಿಹಾರ ಕಾಮಗಾರಿಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು.

**89. ಯಾವುದೇ ಪ್ರಕಾರ್ಯದಿಂದ ಮುನ್ಸಿಪಲ್ ಕೌನ್ಸಿಲನ್ನು ವಿನಾಯಿತಿಗೊಳಿಸಲು ಸರ್ಕಾರದ ಅಧಿಕಾರ.–** 87 ಮತ್ತು 88ನೇ ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ ಸರ್ಕಾರವು, ಯಾವುದೇ ಮುನ್ಸಿಪಲ್ ಕೌನ್ಸಿಲಿಗೆ ಆ ಪ್ರಕರಣಗಳ ಯಾವುದೇ ಉಪಬಂಧದಿಂದ ವಿನಾಯಿತಿ ಕೊಡಬಹುದು ಅಥವಾ ಯಾವುದೇ ಮುನ್ಸಿಪಲ್ ಕೌನ್ಸಿಲಿಗೆ ಸಂಬಂಧಿಸಿದಂತೆ ಹಿಂದೆ ಹೇಳಿದ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರಕಾರ್ಯವು, 91ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ವಿವೇಚನಾತ್ಮಕ ಕರ್ತವ್ಯವಾಗಿರತಕ್ಕದ್ದೆಂದು ಭಾವಿಸತಕ್ಕದ್ದೆಂದು ಘೋಷಿಸಬಹುದು.

**90. ಕೊಳವೆಗಳ ಮೂಲಕ ಸರಬರಾಜು ಮಾಡಿದ ನೀರಿನ ವಿಶ್ಲೇಷಣೆ ಮತ್ತು ಪರಿಶೀಲನೆ.–** (1) ಯಾವುದೇ ಮುನ್ಸಿಪಲ್ ಕೌನ್ಸಿಲು ನೀರನ್ನು ಕೊಳವೆ ಮೂಲಕ ಸರಬರಾಜು ಮಾಡಿದರೆ, ಈ ಬಗ್ಗೆ ಸರ್ಕಾರವು ಅನುಮೋದಿಸಿದ ಪ್ರಯೋಗಾಲಯದಲ್ಲಿ ಪರಿಶೀಲನೆ ಮತ್ತು ವಿಶ್ಲೇಷಣೆಯ ಮೂಲಕ, ಹಾಗೆ ಸರಬರಾಜು ಮಾಡಿದ ನೀರಿನ ಸ್ಥಿತಿಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಮಾಡಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ಧರಿಸಬಹುದಾದಂಥ ಫೀಜುಗಳನ್ನು ಸಂದಾಯ ಮಾಡಿದ ಮೇಲೆ ಅಂಥ ಅಂತರಗಳಲ್ಲಿ ಅಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಸರ್ಕಾರವು ಅಧಿಸೂಚನೆಯ ಮೂಲಕ ಯಾವುದೇ ಮುನ್ಸಿಪಲ್ ಕೌನ್ಸಿಲನ್ನು ಈ ಪ್ರಕರಣದ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

**91. ಮುನ್ಸಿಪಲ್ ಕೌನ್ಸಿಲುಗಳ ವಿವೇಚನಾತ್ಮಕ ಪ್ರಕಾರ್ಯಗಳು.–** ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲು ತನ್ನ ವಿವೇಚನಾನುಸಾರ ಈ ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಸಂಪೂರ್ಣವಾಗಿಯೇ ಆಗಲಿ ಅಥವಾ ಭಾಗಶಃವಾಗಿಯಾಗಲಿ ಉಪಬಂಧಿಸಬಹುದು, ಎಂದರೆ,–

(ಕ) ಈ ಹಿಂದೆ ಕಟ್ಟಿದ್ದ ಅಥವಾ ಕಟ್ಟಿಲ್ಲದ ಪ್ರದೇಶಗಳಲ್ಲಿ ಹೊಸ ಸಾರ್ವಜನಿಕ ಬೀದಿಗಳನ್ನು ರಚಿಸುವುದು ಮತ್ತು ಅದೇ ಉದ್ದೇಶಕ್ಕಾಗಿ ಭೂಮಿಯನ್ನು, ಅಂಥ ಬೀದಿಗೆ ಹೊಂದಿಕೊಂಡು ಕಟ್ಟಡಗಳ ಅಥವಾ ಅದರ ಅಂಗಳಗಳ ನಿರ್ಮಾಣಕ್ಕಾಗಿ ಅಗತ್ಯವಿರುವ ಭೂಮಿಯನ್ನು ಒಳಗೊಂಡು ಆರ್ಜಿಸುವುದು;

(ಖ) ಸಾರ್ವಜನಿಕ ಉದ್ಯಾನಗಳು, ತೋಟಗಳು, ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು, ಮಾನಸಿಕ ಆಸ್ಪತ್ರೆಗಳು, ಸಭಾಂಗಣಗಳು, ಕಚೇರಿಗಳು, ಧರ್ಮಶಾಲೆಗಳು, ಛತ್ರಗಳು, ಮುಸಾಫಿರ್ ಖಾನೆಗಳು, ವಿಶ್ರಾಂತಿ ಗೃಹಗಳು, ಅಸಮರ್ಥ ಅಥವಾ ನಿರ್ಗತಿಕ ವ್ಯಕ್ತಿಗಳಿಗಾಗಿ ಗೃಹಗಳು ಮತ್ತು ಇತರ ಸಾರ್ವಜನಿಕ ಕಟ್ಟಡಗಳನ್ನು ನಿರ್ಮಿಸುವುದು, ಸ್ಥಾಪಿಸುವುದು ಅಥವಾ ನಿರ್ವಹಿಸುವುದು;

(ಗ) ನಿರ್ಗತಿಕ ಮಹಿಳೆಯರಿಗೆ ಆಶ್ರಯ ಒದಗಿಸುವುದು;

(ಫ) ಬಡವರ ವಾಸಕ್ಕಾಗಿ ಸೂಕ್ತ ನೈರ್ಮಲ್ಯ ಗೃಹಗಳನ್ನು ಅವಶ್ಯವಿರುವಲ್ಲಿ ನಿರ್ಮಿಸುವುದು ಮತ್ತು ನಿರ್ವಹಿಸುವುದು ಮತ್ತು ಅಂಥ ಗೃಹಗಳ ನಿರ್ಮಾಣಕ್ಕಾಗಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಅವಶ್ಯ ಮೇಲ್ಪಾಟುಗಳನ್ನು ಮಾಡುವುದಕ್ಕಾಗಿ ಸಾಲಗಳನ್ನು ಮಂಜೂರು ಮಾಡುವುದು;

(ಐ) ಮುನ್ಸಿಪಲ್ ಕೌನ್ಸಿಲು ನಿಯೋಜಿಸಿರುವ ಕಸಗುಡಿಸುವವರು ಮತ್ತು ಜಾಡಮಾಲಿಗಳನ್ನು ಹೊರತುಪಡಿಸಿ, ಯಾವುದೇ ವರ್ಗದ ನೌಕರರಿಗೆ ಸ್ಥಳಾವಕಾಶವನ್ನು ಒದಗಿಸುವುದು ಅಥವಾ ಈ ಬಗ್ಗೆ ನಿಯಮಿಸಲಾದ ನಿಯಮಗಳಿಗೆ ಒಳಪಟ್ಟು ಗೃಹಗಳ ನಿರ್ಮಾಣಕ್ಕಾಗಿ ಸಾಲಗಳನ್ನು ಮಂಜೂರು ಮಾಡುವುದು;

(ಚ) * * * *

(ಛ) ರಸ್ತೆ ಬದಿಯ ಮತ್ತು ಇತರ ಮರಗಳನ್ನು ನೆಡುವುದು ಮತ್ತು ಕಾಪಾಡುವುದು;

(ಜ) ಅಂಕಿ ಅಂಶಗಳನ್ನು ತೆಗೆದುಕೊಳ್ಳುವುದು ಮತ್ತು ಜನನ-ಮರಣ ಅಂಕಿ ಅಂಶಗಳ ಸರಿಯಾದ ನೋಂದಣಿಯನ್ನು ಪಡೆದುಕೊಳ್ಳಲು ನೆರವಾಗುವ ಮಾಹಿತಿಗಾಗಿ ಪಾರಿತೋಷಕಗಳನ್ನು ಕೊಡುವುದು;

(ಝ) ಮೋಜಣಿ ಮಾಡುವುದು;

(ಞ) 256ನೇ ಪ್ರಕರಣದಲ್ಲಿ ನಮೂದಿಸಿದ ಅಸಹ್ಯಕರ ವೃತ್ತಿಗಳನ್ನು ನಡೆಸಲು ಸೂಕ್ತ ಸ್ಥಳಗಳನ್ನು ಪಡೆದುಕೊಳ್ಳುವುದು ಅಥವಾ ಪಡೆದುಕೊಳ್ಳಲು ಸಹಾಯ ಮಾಡುವುದು;

(ಟ) ಮುನ್ಸಿಪಲ್ ಕೌನ್ಸಿಲಿನ ನಿಯಂತ್ರಣದಲ್ಲಿರುವ ಗ್ರಾಮಸಾರ ಚರಂಡಿಯೊಳಕ್ಕೆ ಅದರ ಗ್ರಾಮಸಾರವನ್ನು ಸ್ವೀಕರಿಸಲು ಮತ್ತು ಹಾಯಿಸುವುದಕ್ಕಾಗಿ, ಖಾಸಗಿ ಆವರಣಗಳ ಮೇಲೆ ಅಥವಾ ಅವುಗಳ ಉಪಯೋಗಕ್ಕಾಗಿ ಸಂಪುಟಗಳು, ಜೋಡಣೆಗಳು, ಕೊಳವೆಗಳು ಮತ್ತು ಯಾವುದೇ ಬಗೆಯ ಉಪಕರಣಗಳನ್ನು ಸರಬರಾಜು ಮಾಡುವುದು, ನಿರ್ಮಿಸುವುದು ಮತ್ತು ನಿರ್ವಹಿಸುವುದು;

(ಠ) ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಸಂಗೀತ ಅಥವಾ ಇತರ ಮನರಂಜನೆಗಳನ್ನು ಒದಗಿಸುವುದು;

(ಡ) ಸಾರ್ವಜನಿಕ ಆರೋಗ್ಯ ಅಥವಾ ಶಿಶು ಕಲ್ಯಾಣದ ಸಂವರ್ಧನೆ;

(ಢ) ಪೌರಸಭೆಯೊಳಗೆ ಅಥವಾ ಹೊರಗೆ ಮಾನವಯಾತನೆಯ ಪರಿಹಾರಕ್ಕಾಗಿ ಯಾವುದೇ ಸಾರ್ವಜನಿಕ ನಿಧಿಗಳಿಗೆ ವಂತಿಗೆ ಕೊಡುವುದು;

(ಣ) ಸಾರ್ವಜನಿಕ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ ಮತ್ತು ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಅರ್ಧದಷ್ಟುರವರಿಂದ ಬೆಂಬಲಿಸಿದ ಮತ್ತು ಪಟ್ಟಣ ಮುನ್ಸಿಪಲ್ ಕೌನ್ಸಿಲಿನ ಸಂದರ್ಭದಲ್ಲಿ ಡೆಪ್ಯುಟಿ ಕಮೀಷನರ್ ಮತ್ತು ನಗರ ಮುನ್ಸಿಪಲ್ ಕೌನ್ಸಿಲಿನ ಸಂದರ್ಭದಲ್ಲಿ ಕಮಿಷನರನ ಪೂರ್ವ ಮಂಜೂರಾತಿಯೊಂದಿಗೆ ಪೌರಸಭೆಯೊಳಗೆ ಯಾವುದೇ ಸಾರ್ವಜನಿಕ ಸತ್ಕಾರ, ಸಾರ್ವಜನಿಕ ಸಮಾರಂಭ, ಸಾರ್ವಜನಿಕ ಉತ್ಸವ, ಸಾರ್ವಜನಿಕ ಮನರಂಜನೆ, ಅಥವಾ ಸಾರ್ವಜನಿಕ ವಸ್ತು ಪ್ರದರ್ಶನವನ್ನು ಏರ್ಪಾಡು ಮಾಡುವುದು:

ಪರಂತು, ಅಂಥ ಸತ್ಕಾರ, ಉತ್ಸವ, ಮನೋರಂಜನೆ ಅಥವಾ ವಸ್ತು ಪ್ರದರ್ಶನದ ಮೇಲಿನ ವೆಚ್ಚವು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ನಿಯಮಿಸಬಹುದಾದಂಥ ಪರಿಮಿತಿಗಳನ್ನು ಮೀರತಕ್ಕದ್ದಲ್ಲ;

(ತ) ಅಭಾವ ಕಾಲದಲ್ಲಿ ಜೀವನಾವಶ್ಯಕಗಳ ಮಾರಾಟಕ್ಕಾಗಿ ಅಂಗಡಿಗಳು ಅಥವಾ ಮಳಿಗೆಗಳನ್ನು ಏರ್ಪಾಡು ಮಾಡುವುದು ಅಥವಾ ನಿರ್ವಹಿಸುವುದು;

(ಥ) ನಿರ್ಗತಿಕ ಅನಾಥರಿಗೆ ಮತ್ತು ನಿರ್ಗತಿಕ ಕುಂಟರಿಗೆ ವಸತಿ ಒದಗಿಸುವುದು ಮತ್ತು ನಿರ್ವಹಿಸುವುದು;

(ದ) ಉಗ್ರಾಣಗಳ ಸ್ಥಾಪನೆಯನ್ನು ನಿಯಂತ್ರಿಸುವ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು ಉಗ್ರಾಣಗಳನ್ನು ನಿರ್ಮಿಸುವುದು, ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ಧ) ಡೈರಿ ಫಾರಂಗಳು ಮತ್ತು ಕುದುರೆಗಳ ತಳಿ ಸಂವರ್ಧನೆ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ನ) ಪೌರಸಭೆಯೊಳಗೆ ಸಾರಿಗೆ ಸೌಲಭ್ಯಗಳ ವ್ಯವಸ್ಥೆ;

(ಪ) ಆಂಬ್ಯುಲೆನ್ಸ್ ಸೇವೆಯನ್ನು ಇಟ್ಟುಕೊಂಡು ಬರುವುದು;

(ಫ) ಪೌರಸಭೆಯ ಪರಿಮಿತಿಗಳಾಚೆ ನೀರಿನ ಸರಬರಾಜು;

(ಬ) ಹುಲ್ಲುಗಾವಲುಗಳ ಆರ್ಜನೆ ಮತ್ತು ನಿರ್ವಹಣೆ;

(ಭ) ಪೌರಸಭೆಗಳ ಪರಿಮಿತಿಗಳಾಚೆ ಟೆಲಿಫೋನ್ ತಂತಿ ಮಾರ್ಗವನ್ನು ವಿಸ್ತರಿಸಿದಾಗ ಸರ್ಕಾರದ ಪೂರ್ವ ಮಂಜೂರಾತಿಗೆ ಒಳಪಟ್ಟು ಟೆಲಿಫೋನ್ ತಂತಿ ಮಾರ್ಗ ನಿರ್ಮಾಣಕ್ಕಾಗಿ ವೆಚ್ಚ ಮಾಡಿದ ಹಣದ ಮೇಲೆ ಬಡ್ಡಿ ಸಂದಾಯಕ್ಕೆ ಖಾತರಿ ಕೊಡುವುದು;

(ಮ) ಪೌರಸಭೆಯ ನಿಯೋಜಿತರು ಅಥವಾ ಪೌರಸಭೆ ನಿಯೋಜಿತರ ಯಾವುದೇ ವರ್ಗ ಮತ್ತು ಅವರ ಅವಲಂಬಿತರ ಯೋಗಕ್ಷೇಮವನ್ನು ವೃದ್ಧಿಪಡಿಸುವುದು;

(ಯ) ಸಾರ್ವಜನಿಕ ಸಾಗಣೆಗಾಗಿ ಯಂತ್ರದಿಂದ ಚಾಲಿತವಾದ, ಸಾರಿಗೆ ಸೌಲಭ್ಯಗಳನ್ನು ನಿರ್ಮಿಸುವುದು, ಖರೀದಿಸುವುದು, ಸಂಘಟಿಸುವುದು, ನಿರ್ವಹಿಸುವುದು, ವಿಸ್ತರಿಸುವುದು ಮತ್ತು ವ್ಯವಸ್ಥಾಪಿಸುವುದು;

(ಕಕ) ವಿದ್ಯುಚ್ಛಕ್ತಿ ಸರಬರಾಜಿಗಾಗಿ ಯಾವುದೇ ಕಾಮಗಾರಿಗಳನ್ನು ನಿರ್ಮಿಸುವುದು, ನಿರ್ವಹಿಸುವುದು, ದುರಸ್ತಿ ಮಾಡುವುದು ಮತ್ತು ಖರೀದಿಸುವುದು;

(ಖಖ) ಗ್ರಂಥಾಲಯಗಳು ಮತ್ತು ವಸ್ತು ಸಂಗ್ರಹಾಲಯ ಯಾವುದೇ ಆಸ್ಪತ್ರೆ, ಔಷಧಾಲಯ ಅಥವಾ ಸಾರ್ವಜನಿಕ ವೈದ್ಯಕೀಯ ಪರಿಹಾರವನ್ನು ಒದಗಿಸುವ ಅಂಥದೇ ಸಂಸ್ಥೆ ಅಥವಾ ಧರ್ಮಾರ್ಥ ಸ್ವರೂಪದ ಯಾವುದೇ ಇತರ ಸಂಸ್ಥೆಯೂ ಒಳಗೊಂಡಂತೆ ಶೈಕ್ಷಣಿಕ ಸಂಸ್ಥೆಗಳ ನಿರ್ಮಾಣ, ಸ್ಥಾಪನೆ ಮತ್ತು ನಿರ್ವಹಣೆಗಾಗಿ ವಂತಿಗೆಗಳನ್ನು ಕೊಡುವುದು;

(ಗಗ) ಸಾರ್ವಜನಿಕ ಸ್ನಾನಗೃಹಗಳನ್ನು ನಿರ್ಮಿಸುವುದು, ನಿರ್ವಹಿಸುವುದು ಮತ್ತು ವ್ಯವಸ್ಥೆ ಮಾಡುವುದು;

(ಫಫ) ಗೃಹ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದು ಅಥವಾ ಸಂವರ್ಧನೆಗೊಳಿಸುವುದು;

(ಬಬ) ಪಶುವೈದ್ಯ ಆಸ್ಪತ್ರೆಗಳ ನಿರ್ಮಾಣ ಮತ್ತು ನಿರ್ವಹಣೆಯೂ ಒಳಗೊಂಡಂತೆ ಜಾನುವಾರು ಮತ್ತು ಪಶುಸಂಪತ್ತನ್ನು ಮೇಲ್ಪಾಟುಗೊಳಿಸುವುದು;

(ಚಚ) ಪ್ರಸೂತಿ ಗೃಹಗಳು ಮತ್ತು ಶಿಶು ಕಲ್ಯಾಣ ಕೇಂದ್ರಗಳನ್ನು ನಿರ್ವಹಿಸುವುದು;

(ಭಭ) ಆರ್ಟ್ ಗ್ಯಾಲರಿಗಳನ್ನು ನಿರ್ವಹಿಸುವುದು;

(ಜಜ) ಸಹಕಾರ ಸಂಘಗಳನ್ನು ಸಂವರ್ಧನೆಗೊಳಿಸುವುದು, ರಚಿಸುವುದು, ವಿಸ್ತರಿಸುವುದು ಅಥವಾ ಅವುಗಳಿಗೆ ಸಹಾಯ ಮಾಡುವುದು; ಮತ್ತು

(ಝಝ) ಶಿಕ್ಷಣ, ಅಥವಾ ಸಾರ್ವಜನಿಕ ಆರೋಗ್ಯ, ಸುರಕ್ಷತೆ ಅಥವಾ ಸಾಮಾನ್ಯ ಕಲ್ಯಾಣ ಅಥವಾ ಅನುಕೂಲತೆ ಅಥವಾ ನಿವಾಸಿಗಳ ಆರ್ಥಿಕ ಪರಿಸ್ಥಿತಿಯ ಪ್ರಗತಿಯನ್ನು ವೃದ್ಧಿಗೊಳಿಸುವ ಸಂಭವವಿರುವಂಥ ಅಥವಾ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅವಶ್ಯವಿರುವಂಥ ಇಲ್ಲಿ ಈ ಮುಂಚೆ ನಿರ್ದಿಷ್ಟವಾಗಿ ಹೆಸರಿಸದ ಯಾವುದೇ ಇತರ ವಿಷಯ; ಈ ಬಗ್ಗೆ ವೆಚ್ಚವನ್ನು ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರರಲ್ಲಿ ಎರಡಷ್ಟಕ್ಕಿಂತ ಕಡಿಮೆಯಿಲ್ಲದ ಮತಗಳ ಮೂಲಕ ಮತ್ತು ಸರ್ಕಾರದ ಅನುಮೋದನೆಯೊಂದಿಗೆ ಮುನ್ಸಿಪಲ್ ಕೌನ್ಸಿಲು, ಮುನ್ಸಿಪಲ್ ನಿಧಿಯ ಮೇಲಿನ ಸಮುಚಿತ ಋಣಭಾರವೆಂದು ನಿರ್ಣಯಿಸಿರಬೇಕು.

**92. ಕಾಯಂ ಆಗಿ ಅಥವಾ ವರ್ಷಗಳ ಅವಧಿಗಾಗಿ ಬದ್ಧವಾಗಿರುವುದಕ್ಕಾಗಿ ತಾತ್ಪರ್ಯವಾಗುವ ವ್ಯವಸ್ಥೆಗಳು.–** ಮುನ್ಸಿಪಲ್ ಕೌನ್ಸಿಲು ಯಾವುದೇ ಶೈಕ್ಷಣಿಕ ಅಥವಾ ಧರ್ಮಾರ್ಥ ಸಂಸ್ಥೆಗೆ ಪೌರಸಭೆಯ ಸ್ವತ್ತು ಅಥವಾ ನಿಧಿಯಿಂದ ವಾರ್ಷಿಕ ವಂತಿಗೆ ಮುಂದುವರಿಸಲು, ವರ್ಷಗಳ ಅವಧಿಗಾಗಿ ಅಥವಾ ಅಪರಿಮಿತ ಅವಧಿಗಾಗಿ ತನ್ನನ್ನು ಅಥವಾ ಅದರ ಉತ್ತರಾಧಿಕಾರಿಗಳನ್ನು ಬದ್ಧವಾಗಿಸಲು ತಾತ್ಪರ್ಯವಾಗುವ ಯಾವುದೇ ವ್ಯವಸ್ಥೆಯನ್ನು ಮಾಡಿಕೊಂಡಿರುವಾಗ ಅಥವಾ ಯಾವುದೇ ವಾಗ್ದಾನವನ್ನು ಮಾಡಿರುವಾಗ, ಸರ್ಕಾರದ ಮಂಜೂರಾತಿಯೊಂದಿಗೆ ಅಂಥ ವ್ಯವಸ್ಥೆ ಅಥವಾ ವಾಗ್ದಾನವನ್ನು ರದ್ದುಗೊಳಿಸುವುದು ಅಥವಾ ಅಂಥ ವಾರ್ಷಿಕ ವಂತಿಗೆಯನ್ನು ಮುಂದುವರಿಸದಿರುವುದು ಅಥವಾ ಕಡಿಮೆ ಮಾಡುವುದು ಮುನ್ಸಿಪಲ್ ಕೌನ್ಸಿಲಿಗೆ ಅಥವಾ ಅದರ ಉತ್ತರಾಧಿಕಾರಿಗೆ ಕಾನೂನುಬದ್ಧವಾಗಿರತಕ್ಕದ್ದು:

ಪರಂತು, ಹಾಗೆ ಮಾಡುವ ತನ್ನ ಉದ್ದೇಶದ ಕನಿಷ್ಟಪಕ್ಷ ಹನ್ನೆರಡು ತಿಂಗಳುಗಳ ನೋಟೀಸನ್ನು ಅಂಥ ಸಂಸ್ಥೆಯ ವ್ಯವಸ್ಥಾಪಕ ಅಥವಾ ವ್ಯವಸ್ಥಾಪಕರಿಗೆ ಕೊಟ್ಟಿರತಕ್ಕದ್ದು.

**93. ಮುನ್ಸಿಪಲ್ ಕೌನ್ಸಿಲು ನಿರ್ವಹಿಸುತ್ತಿರುವ ಸಾರ್ವಜನಿಕ ಸಂಸ್ಥೆಯ ವ್ಯವಸ್ಥಾಪನೆಯು ಅದರಲ್ಲಿ ನಿಹಿತವಾಗತಕ್ಕದ್ದು.–** ಪೌರಸಭೆ ಸ್ವತ್ತು ಮತ್ತು ನಿಧಿಗಳಿಂದ ಅನನ್ಯವಾಗಿ ನಿರ್ವಹಿಸಲಾಗುತ್ತಿರುವ ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯ ವ್ಯವಸ್ಥಾಪನೆ, ನಿಯಂತ್ರಣ ಮತ್ತು ಆಡಳಿತವು ಯಾವ ಮುನ್ಸಿಪಲ್ ಕೌನ್ಸಿಲು ಅದನ್ನು ನಿರ್ವಹಿಸುತ್ತಿದೆಯೋ ಆ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು:

ಪರಂತು, ಸಾರ್ವಜನಿಕ ಶಿಕ್ಷಣ, ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಮತ್ತು ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಸಾರ್ವಜನಿಕ ಆರೋಗ್ಯ ಇಲಾಖೆಯೊಂದಿಗೆ ಅದರ ಸಂಬಂಧಗಳ ಬಗ್ಗೆ

ಯಾವುದೇ ಮುನ್ಸಿಪಲ್ ಕೌನ್ಸಿಲಿನ ಸ್ವತಂತ್ರ ಅಧಿಕಾರದ ವ್ಯಾಪ್ತಿಯನ್ನು ಸರ್ಕಾರವು ಕಾಲ ಕಾಲಕ್ಕೆ ನಿಯಮಿಸತಕ್ಕದ್ದು.

## ಅಧ್ಯಾಯ–VI

## ಪೌರಸಭಾ ತೆರಿಗೆ ನಿರ್ಧರಣೆ

### ತೆರಿಗೆಗಳು ಮತ್ತು ವಿಧಿಸುವುದಕ್ಕಾಗಿನ ಪ್ರಕ್ರಿಯೆ

**94. ವಿಧಿಸಬಹುದಾದ ತೆರಿಗೆಗಳು.–** (1) ಮುನ್ಸಿಪಲ್ ಕೌನ್ಸಿಲು ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು,–

(ಕ) 95ನೇ ಪ್ರಕರಣದ ಮೂಲಕ ಅಗತ್ಯಪಡಿಸಿದ ಪ್ರಾರಂಭಿಕ ಪ್ರಕ್ರಿಯೆಯನ್ನು ಪಾಲಿಸಿದ ತರುವಾಯ; ಮತ್ತು

(ಖ) ಸರ್ಕಾರದ ಮಂಜೂರಾತಿಯೊಂದಿಗೆ ಮತ್ತು I, III, IV, VI ಮತ್ತು VII ನೇ ಅನುಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ದರಗಳಿಗೆ ಮೀರದಂತೆ,

ಈ ಕೆಳಕಂಡ ಒಂದು ಯಾವುದೇ ಅಥವಾ ಹೆಚ್ಚು ತೆರಿಗೆಗಳನ್ನು ವಿಧಿಸಬಹುದು:–

(i) ಪೌರಸಭೆಯೊಳಗೆ ಇರುವ ಕಟ್ಟಡಗಳು ಅಥವಾ ಭೂಮಿಗಳು ಅಥವಾ ಎರಡರ ಮೇಲಿನ ತೆರಿಗೆ;

(ii) * * * *

(iii) ಸದರಿ ಪೌರಸಭೆಯೊಳಗೆ ಪ್ರವೇಶಿಸುವ IIIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ, ಆದರೆ IVನೇ ಖಂಡದ ಮೇರೆಗೆ ತೆರಿಗೆ ನಿರ್ಧರಣೆಗೆ ಗುರಿಯಾಗದ ವಾಹನಗಳ ಮೇಲಿನ ದಾರಿ ಸುಂಕ;

(iv) ಸದರಿ ಪೌರಸಭೆಯೊಳಗೆ ಉಪಯೋಗಕ್ಕಾಗಿ ಇಳಿಸುವ (ಮೋಟಾರು ವಾಹನಗಳನ್ನು ಹೊರತುಪಡಿಸಿ) ಎಲ್ಲಾ ಅಥವಾ ಯಾವುವೇ ವಾಹನಗಳು, ದೋಣಿಗಳು ಅಥವಾ ಸವಾರಿಗೆ, ಎಳೆಯುವುದಕ್ಕೆ ಅಥವಾ ಹೊರೆ ಹೊರುವುದಕ್ಕಾಗಿ ಉಪಯೋಗಿಸುತ್ತಿರುವ IVನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಾಣಿಗಳ ಮೇಲಿನ ತೆರಿಗೆ;

(v) ಪೌರಸಭೆಯೊಳಗೆ ಇಟ್ಟಿರುವ ನಾಯಿಗಳ ಮೇಲಿನ ತೆರಿಗೆ;

(vi) ಇದರಲ್ಲಿ ಇನ್ನು ಮುಂದೆ ಅಗತ್ಯಪಡಿಸಿದಂತೆ ನೋಟೀಸನ್ನು ಕೊಟ್ಟ ತರುವಾಯ ಪೌರಸಭಾ ಏಜೆನ್ಸಿಯ ಮೂಲಕ ಸ್ವಚ್ಛಗೊಳಿಸಿದ ಖಾಸಗಿ ಕಕ್ಕಸುಗಳು, ಆವರಣ ಕಾಂಪೌಂಡುಗಳ ಮೇಲಿನ ವಿಶೇಷ ನೈರ್ಮಲ್ಯ ಉಪಕರ;

(vii) ಸಾರ್ವಜನಿಕ ಕಕ್ಕಸುಗಳನ್ನು ಕಟ್ಟುವುದಕ್ಕಾಗಿ ಅಥವಾ ನಿರ್ವಹಿಸುವುದಕ್ಕಾಗಿ ಅಥವಾ ಕಟ್ಟುವುದು ಮತ್ತು ನಿರ್ವಹಿಸುವುದು ಮತ್ತು ಇವೆರಡಕ್ಕಾಗಿ ಮತ್ತು ಕಸವನ್ನು ತೆಗೆದುಹಾಕುವುದಕ್ಕಾಗಿ ಮತ್ತು ವಿಲೆ ಮಾಡುವುದಕ್ಕಾಗಿ ಸಾಮಾನ್ಯ ನೈರ್ಮಲ್ಯ ಉಪಕರ;

(viii) ಮುನ್ಸಿಪಲ್ ಕೌನ್ಸಿಲು ಸರಬರಾಜು ಮಾಡಿದ ನೀರಿಗಾಗಿನ ನೀರು ದರ ಅಥವಾ ನೀರು ದರಗಳು; ಇದನ್ನು ಕಟ್ಟಡಗಳ ಅಥವಾ ಭೂಮಿಗಳ ಮೇಲೆ ನಿರ್ಧರಿಸಿದ ತೆರಿಗೆಯ ರೂಪದಲ್ಲಿ ಅಥವಾ ಯಾವುವೇ ಪ್ರಕರಣಗಳ ವರ್ಗ ಅಥವಾ ಯಾವುದೇ ವೈಯಕ್ತಿಕ ಪ್ರಕರಣದ ವ್ಯತ್ಯಾಸಗೊಳ್ಳುವ ಸಂದರ್ಭಗಳಿಗೆ ಚೆನ್ನಾಗಿ ಅಳವಡಿಸತಕ್ಕಂಥ ವಿಧಾನ ಅಥವಾ ವಿಧಾನಗಳಲ್ಲಿ ನಿಗದಿಪಡಿಸಿದ, ಅಂಥ ಸರಬರಾಜಿಗಾಗಿನ ವೆಚ್ಚಗಳನ್ನು ಒಳಗೊಂಡಂತೆ ಇತರ ಯಾವುದೇ ರೂಪದಲ್ಲಿ ವಿಧಿಸಬಹುದು;

(ix) ದೀಪದ ತೆರಿಗೆ

(x) * * * *

(xi) * * * *

(xii) ಹೆಚ್ಚಿನ ಸ್ಟ್ಯಾಂಪ್ ಸುಂಕದ ಸ್ವರೂಪದಲ್ಲಿ ಸ್ಥಿರ ಸ್ವತ್ತಿನ ವರ್ಗಾವಣೆ ಮೇಲಿನ ಸುಂಕ;

(xiii) ಯಾವುದೇ ಭೂಮಿ, ಕಟ್ಟಡ, ಗೋಡೆ, ಪ್ರಕಟಣ ಪಟ, ಚೌಕಟ್ಟು, ಕಂಬ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಅದರಲ್ಲಿ ನಿಲ್ಲಿಸಿದ, ಪ್ರದರ್ಶಿಸಿದ, ಜೋಡಿಸಿದ ಅಥವಾ ಉಳಿಸಿಕೊಂಡ, ಅಥವಾ ಸಾರ್ವಜನಿಕ ಬೀದಿ ಅಥವಾ ಸಾರ್ವಜನಿಕ ಸ್ಥಳದಿಂದ ಯಾವುದೇ ರೀತಿಯಲ್ಲಾಗಲಿ ಸಾರ್ವಜನಿಕರ ದೃಷ್ಟಿಗೆ ಪ್ರದರ್ಶಿಸಿದ ಚಲನಚಿತ್ರ ಸಾಧನಗಳ ಮೂಲಕ

ಪ್ರದರ್ಶಿಸಿದ ಯಾವುದೇ ಜಾಹಿರಾತನ್ನು ಒಳಗೊಂಡು ಜಾಹಿರಾತುಗಳ (ವರ್ತಮಾನ ಪತ್ರಿಕೆಗಳಲ್ಲಿ ಹೊರತುಪಡಿಸಿ) ಮೇಲಿನ ತೆರಿಗೆ;

**ವಿವರಣೆ 1:–** ಈ ಉಪ–ಖಂಡದಲ್ಲಿ "ರಚನೆ" ಎಂಬ ಪದವು, ಜಾಹಿರಾತು ಮಾಧ್ಯಮವಾಗಿ ಉಪಯೋಗಿಸಿದ ಚಕ್ರಗಳ ಮೇಲಿನ ಯಾವುದೇ ಚಲಿಸುವ ಫಲಕವನ್ನು ಒಳಗೊಳ್ಳುತ್ತದೆ;

**ವಿವರಣೆ 2:–** ಈ ಉಪ–ಖಂಡದ ಉದ್ದೇಶಕ್ಕಾಗಿ "ಸಾರ್ವಜನಿಕ ಸ್ಥಳ" ಎಂದರೆ ಯಾವುದೇ ಸಾರ್ವಜನಿಕರ ಉಪಯೋಗ ಮತ್ತು ಅನುಭೋಗಕ್ಕೆ ಮುಕ್ತವಾಗಿರುವ, ಅದನ್ನು ಸಾರ್ವಜನಿಕರು ವಾಸ್ತವವಾಗಿ ಉಪಯೋಗಿಸುತ್ತಿರಲಿ ಅಥವಾ ಅನುಭೋಗಿಸುತ್ತಿರಲಿ ಅಥವಾ ಇಲ್ಲದಿರಲಿ, ಅಂಥ ಯಾವುದೇ ಸ್ಥಳ;

**ವಿವರಣೆ 3:–** ಈ ಉಪಖಂಡದಲ್ಲಿ "ಜಾಹಿರಾತು" ಎಂಬ ಪದಕ್ಕೆ ಜಾಹಿರಾತು, ಪ್ರಕಟಣೆ ಅಥವಾ ನಿರ್ದೇಶನದ ಸ್ವರೂಪದಲ್ಲಿ ಮತ್ತು ಆ ಉದ್ದೇಶಕ್ಕಾಗಿ ಸಂಪೂರ್ಣವಾಗಿ ಅಥವಾ ಭಾಗಶಃ ಬಳಸಿದ, ದೀಪಗಳಿಂದ ಅಲಂಕರಿಸಿದ ಅಥವಾ ಅಲಂಕರಿಸಿಲ್ಲದ ಯಾವುದೇ ಪದ, ಅಕ್ಷರ, ಮಾದರಿ, ಸಂಕೇತ, ಪ್ರಕಟಣ ಪತ್ರ, ನೋಟೀಸು ಸಾಧನ ಅಥವಾ ಪ್ರದರ್ಶಕ ಎಂದರ್ಥ:

ಪರಂತು,–

(ಕ) ವಿಶೇಷ ನೈರ್ಮಲ್ಯ ಉಪಕರ ಅಥವಾ ನೀರು ದರವನ್ನು ಹೊರತುಪಡಿಸಿ ಹಿಂದೆ ಹೇಳಿದಂತೆ ವಿಧಿಸಲಾದ ಯಾವುದೇ ತೆರಿಗೆಯನ್ನು ಸರ್ಕಾರದ ಸ್ಪಷ್ಟ ಅನುಮೋದನೆಯಿಲ್ಲದೆ,–

(i) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಸೇರಿದ ಮತ್ತು ಸರ್ಕಾರದ ಉದ್ದೇಶಗಳಿಗಾಗಿ ಉಪಯೋಗಿಸಲಾದ ಮತ್ತು ವಾಸ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸದ ಅಥವಾ ಉಪಯೋಗಿಸಲು ಉದ್ದೇಶಿಸಿದ ಯಾವುದೇ ಕಟ್ಟಡ ಅಥವಾ ಯಾವುದೇ ಕಟ್ಟಡದ ಭಾಗ;

(ii) ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸದ ಸರ್ಕಾರಕ್ಕೆ ಸೇರಿದ ಯಾವುದೇ ಭೂಮಿ;

(iii) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಸೇರಿದ ಮತ್ತು ಸರ್ಕಾರದ ಉದ್ದೇಶಗಳಿಗಾಗಿ ಉಪಯೋಗಿಸಲಾದ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸದ ಯಾವುದೇ ವಾಹನ, ಪ್ರಾಣಿ ಅಥವಾ ಇತರೆ ಸ್ವತ್ತು;

(iv) ಸಾರ್ವಜನಿಕ ಪೂಜಾ ಸ್ಥಳವಾಗಿ ಉಪಯೋಗಿಸಲಾದ ಅಥವಾ ಧರ್ಮಾರ್ಥ ಉದ್ದೇಶಕ್ಕಾಗಿ ಉಪಯೋಗಿಸಲಾದ ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗ;

–ಇವುಗಳಿಗೆ ಸಂಬಂಧಿಸಿದಂತೆ ವಿಧಿಸತಕ್ಕದ್ದಲ್ಲ;

(ಖ) ಹಿಂದೆ ಹೇಳಿದಂತೆ ವಿಧಿಸಲಾದ ಯಾವುದೇ ಬಗೆಯ ತೆರಿಗೆಯನ್ನು ಮೈಸೂರು ನಗರದಲ್ಲಿ ಇರುವ ಅರಮನೆಗೆ ವಿಧಿಸತಕ್ಕದ್ದಲ್ಲ;

(ಗ) ಯಾವುದೇ ಖಾಸಗಿ ಕಕ್ಕಸುಗಳು ಅಥವಾ ಕಾಂಪೌಂಡುಗಳಿಗೆ ಸಂಬಂಧಿಸಿದಂತೆ ಯಾವುದೇ ವಿಶೇಷ ನೈರ್ಮಲ್ಯ ಉಪಕರವನ್ನು ಮುನ್ಸಿಪಲ್ ಕೌನ್ಸಿಲ್ಲು–

(i) ದೈಹಿಕ ಶ್ರಮದ ಮೂಲಕ ಅದನ್ನು ಸ್ವಚ್ಛಗೊಳಿಸುವುದಕ್ಕಾಗಿ ಅಥವಾ ಪೌರ ಸಭಾ ಗ್ರಾಮಸಾರ ಚರಂಡಿಗಳೊಳಕ್ಕೆ ಅದರ ಗ್ರಾಮಸಾರವನ್ನು ಹಾಯಿಸುವುದಕ್ಕಾಗಿ ಅಥವಾ ಅದನ್ನು ಸ್ವೀಕರಿಸುವುದಕ್ಕಾಗಿ ಏರ್ಪಾಡು ಮಾಡಿದ್ದ; ಮತ್ತು

(ii) ಅಂಥ ಉಪಕರವನ್ನು ವಿಧಿಸಬೇಕಾದ ಪೌರಸಭೆಯ ಅಥವಾ ಪೌರಸಭೆಯ ಭಾಗದ ನಿವಾಸಿಗಳಿಗೆ ಅಂಥ ಸ್ವಚ್ಛಗೊಳಿಸುವುದನ್ನು ನೆರವೇರಿಸಲು ಮತ್ತು ಅಂಥ ಉಪಕರವನ್ನು ವಿಧಿಸಲು ಮುನ್ಸಿಪಲ್ ಕೌನ್ಸಿಲ್ಲಿನ ಉದ್ದೇಶದ ಒಂದು ತಿಂಗಳು ನೋಟೀಸನ್ನು ಕೊಟ್ಟಿದ್ದ

–ಹೊರತು ಮತ್ತು ಆವರೆಗೆ ವಿಧಿಸತಕ್ಕದ್ದಲ್ಲ;

(ಘ) ಮುನ್ಸಿಪಲ್ ಕೌನ್ಸಿಲ್ಲು (I) (VII) (VIII) ಮತ್ತು (IX) ನೇ ಖಂಡಗಳಲ್ಲಿ ವಿವರಿಸಿದ ಯಾವುವೇ ಎರಡು ಅಥವಾ ಹೆಚ್ಚು ತೆರಿಗೆಗಳನ್ನು ಪ್ರತ್ಯೇಕವಾಗಿ ವಿಧಿಸುವುದಕ್ಕೆ ಬದಲು, ಪೌರಸಭೆಯೊಳಗೆ ಬರುವ ಕಟ್ಟಡಗಳು ಅಥವಾ ಭೂಮಿಗಳು ಅಥವಾ ಅವೆರಡರ ಮೇಲಿನ ತೆರಿಗೆಯೆಂದು ನಿರ್ಧರಿಸಲಾದ ಕ್ರೋಢೀಕೃತ ತೆರಿಗೆಯನ್ನು ವಿಧಿಸಬಹುದು;

(ಙ) ಯಾವ ಜಾಹೀರಾತು,–

(i) ಸಾರ್ವಜನಿಕ ಸಭೆ ಅಥವಾ ಸಂಪತ್ತು ಅಥವಾ ರಾಜ್ಯ ವಿಧಾನ ಮಂಡಲ ಅಥವಾ ಮುನ್ಸಿಪಲ್ ಕೌನ್ಸಿಲ್ಲಿನ ಚುನಾವಣೆಗೆ ಸಂಬಂಧಿಸಿದ ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದ ಅಭ್ಯರ್ಥಿಕೆಗೆ; ಅಥವಾ

(ii) ಯಾವುದೇ ಕಟ್ಟಡದಲ್ಲಿ ನಡೆಸಲಾಗುತ್ತಿರುವ ವ್ಯಾಪಾರ, ವೃತ್ತಿ ಅಥವಾ ವ್ಯವಹಾರಕ್ಕೆ ಸಂಬಂಧಪಟ್ಟ ಜಾಹಿರಾತು ಆಗಿದ್ದರೆ ಆ ಕಟ್ಟಡದ ಕಿಟಕಿಯೊಳಗೆ ಪ್ರದರ್ಶಿಸಲಾದ;

(iii) ಯಾವ ಭೂಮಿಯ ಕಟ್ಟಡದ ಮೇಲೆ ಅಥವಾ ಮೇಲ್ಭಾಗದಲ್ಲಿ ಅಂಥ ಜಾಹಿರಾತನ್ನು ಪ್ರದರ್ಶಿಸಲಾಗಿದೆಯೋ ಆ ಯಾವುದೇ ಭೂಮಿ ಅಥವಾ ಕಟ್ಟಡದೊಳಗೆ ನಡೆಸಲಾಗುತ್ತಿರುವ ವ್ಯಾಪಾರ, ವೃತ್ತಿ ಅಥವಾ ವ್ಯವಹಾರಕ್ಕೆ ಅಥವಾ ಅಂಥ ಭೂಮಿ ಅಥವಾ ಕಟ್ಟಡದ ಅಥವಾ ಅದರಲ್ಲಿ ಯಾವುವೇ ಸಾಮಾನುಗಳ ಯಾವುದೇ ಮಾರಾಟ ಅಥವಾ ಬಾಡಿಗೆಗೆ ಕೊಡುವುದಕ್ಕೆ ಅಥವಾ ಅದರ ಮೇಲೆ ಅಥವಾ ಮೇಲ್ಭಾಗದಲ್ಲಿ ಅಥವಾ ಅದರಲ್ಲಿ ನಡೆಸಬೇಕಾದ ಯಾವುದೇ ಮಾರಾಟ, ಮನೋರಂಜನೆ ಅಥವಾ ಸಭೆಗೆ ಸಂಬಂಧಿಸಿದೆಯೋ; ಅಥವಾ

(iv) ಯಾವ ಭೂಮಿ ಅಥವಾ ಕಟ್ಟಡದ ಮೇಲೆ ಅಥವಾ ಮೇಲ್ಭಾಗದಲ್ಲಿ ಜಾಹಿರಾತನ್ನು ಪ್ರದರ್ಶಿಸಲಾಗಿದೆಯೋ ಆ ಯಾವುದೇ ಭೂಮಿ ಅಥವಾ ಕಟ್ಟಡದ ಹೆಸರಿಗೆ ಅಂಥ ಭೂಮಿ ಅಥವಾ ಕಟ್ಟಡದ ಒಡೆಯ ಅಥವಾ ಅಧಿಭೋಗದಾರನ ಹೆಸರಿಗೆ ಸಂಬಂಧಿಸಿದೆಯೋ; ಅಥವಾ

(v) ರೈಲ್ವೆ ಆಡಳಿತದ ವ್ಯವಹಾರಕ್ಕೆ ಸಂಬಂಧಿಸಿದ ಮತ್ತು ಯಾವುದೇ ರೈಲ್ವೆ ನಿಲ್ದಾಣದಲ್ಲಿ ಅಥವಾ ರೈಲ್ವೆ ಆಡಳಿತದ ಯಾವುದೇ ಗೋಡೆಯ ಮೇಲೆ ಅಥವಾ ಇತರ ಸ್ವತ್ತಿನ ಮೇಲೆ ಪ್ರದರ್ಶಿಸಲಾಗಿದೆಯೋ;

(vi) ರಾಜ್ಯ ಸರ್ಕಾರದ ಯಾವುದೇ ಚಟುವಟಿಕೆಗೆ ಸಂಬಂಧಿಸಿದೆಯೋ –

– ಆ ಯಾವುದೇ ಜಾಹಿರಾತಿನ ಮೇಲೆ ಯಾವುದೇ ತೆರಿಗೆಯನ್ನು ವಿಧಿಸತಕ್ಕದ್ದಲ್ಲ.

**ವಿವರಣೆ (i):–** ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ಅಥವಾ ಸದರಿ ಸರ್ಕಾರದಿಂದ ಕ್ರಮಬದ್ಧವಾಗಿ ಅಧಿಕೃತನಾದ ಯಾರೇ ಅಧಿಕಾರಿಯು,–

(ಕ) ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗವನ್ನು ಸರ್ಕಾರದ ಉದ್ದೇಶಗಳಿಗಾಗಿ ಉಪಯೋಗಿಸಲಾಗಿದೆ ಮತ್ತು ಉಪಯೋಗಿಸಿಲ್ಲ ಅಥವಾ ವಾಸದ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸಲು ಉದ್ದೇಶಿಸಿದೆ; ಅಥವಾ

(ಖ) ಆ ಯಾವುದೇ ಭೂಮಿಯನ್ನು ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸಿಲ್ಲ; ಅಥವಾ

(ಗ) ಆ ಯಾವುದೇ ವಾಹನ, ಪ್ರಾಣಿ ಅಥವಾ ಇತರ ಸ್ವತ್ತನ್ನು ಸರ್ಕಾರದ ಉದ್ದೇಶಗಳಿಗಾಗಿ ಉಪಯೋಗಿಸಲಾಗಿದೆ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸಿಲ್ಲ ಎಂದು ಕೊಟ್ಟ ಪ್ರಮಾಣಪತ್ರವು (ಕ) ಪರಂತುಕದ (i), (ii) ಅಥವಾ (iii) ಖಂಡದ ಉದ್ದೇಶಗಳಿಗಾಗಿ ಮುನ್ಸಿಪಲ್ ಕೌನ್ಸಿಲ್‌ನ ಮೇಲೆ ಬಂಧನಕಾರಿಯಾಗತಕ್ಕದ್ದು:

ಪರಂತು, ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಆಗಲಿ ಅಥವಾ ಮುನ್ಸಿಪಲ್ ಕೌನ್ಸಿಲಿನ ಅರ್ಜಿಯ ಮೇಲೆ ಆಗಲಿ; ಯಾವುದೇ ಅಂಥ ಪ್ರಮಾಣಪತ್ರವನ್ನು ರದ್ದುಗೊಳಿಸಬಹುದು ಅಥವಾ ಮಾರ್ಪಾಟು ಮಾಡಬಹುದು ಮತ್ತು ಹಾಗೆ ಮಾರ್ಪಾಟು ಮಾಡಿದ ಪ್ರಮಾಣಪತ್ರವು ಹಾಗೆ ಮಾರ್ಪಾಟಾದಂತೆ ಮುನ್ಸಿಪಲ್ ಕೌನ್ಸಿಲಿನ ಮೇಲೆ ಬಂಧನಕಾರಿಯಾಗಿರತಕ್ಕದ್ದು.

**ವಿವರಣೆ (ii):–** ಈ ಕೆಳಕಂಡ ಕಟ್ಟಡಗಳು ಅಥವಾ ಕಟ್ಟಡಗಳ ಭಾಗಗಳು (ಕ) ಪರಂತುಕದ (iv)ನೇ ಖಂಡದ ಅರ್ಥ ವ್ಯಾಪ್ತಿಯೊಳಗೆ ಸಾರ್ವಜನಿಕ ಪೂಜಾ ಸ್ಥಳವಾಗಿ ಅಥವಾ ಧರ್ಮಾರ್ಥ ಉದ್ದೇಶಕ್ಕಾಗಿ ಉಪಯೋಗಿಸುತ್ತಿರುವುದಾಗಿ ಭಾವಿಸತಕ್ಕದ್ದಲ್ಲ; ಎಂದರೆ:–

(ಕ) ಯಾವ ಕಟ್ಟಡಗಳು ಅಥವಾ ಅದರ ಭಾಗಗಳಲ್ಲಿ ಯಾವುದೇ ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸಲಾಗುತ್ತಿದೆಯೋ, ಆ ಯಾವುದೇ ಕಟ್ಟಡಗಳು ಅಥವಾ ಅದರ ಭಾಗಗಳು;

(ಖ) ಯಾವ ಕಟ್ಟಡಗಳು ಅಥವಾ ಅದರ ಭಾಗಗಳಿಗೆ ಸಂಬಂಧಿಸಿದಂತೆ ಉಪ ಬಾಡಿಗೆಯನ್ನು ಪಡೆಯಲಾಗುತ್ತಿದೆಯೋ, ಆ ಯಾವುದೇ ಕಟ್ಟಡಗಳು ಅಥವಾ ಅದರ ಭಾಗಗಳು;

(ಗ) ಯಾವ ಕಟ್ಟಡಗಳು ಅಥವಾ ಭಾಗಗಳಿಗೆ ಸಂಬಂಧಿಸಿದಂತೆ ಅದನ್ನು ಉಪಯೋಗಿಸುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಮೂಲಕ ಬಾಡಿಗೆಯ ಸಂದಾಯವಾಗಬೇಕಾಗಿದೆಯೋ,

– ಆ ಯಾವುದೇ ಕಟ್ಟಡಗಳು ಅಥವಾ ಅದರ ಭಾಗಗಳು.

(2) (1)ನೇ ಉಪ–ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ,–

(ಕ) * * * *

(ಖ) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ಲು (1)ನೇ ಉಪ–ಪ್ರಕರಣದ (i), (vii), (viii) ಮತ್ತು (ix)ನೇ ಖಂಡಗಳ ಮೇರೆಗೆ ಯಾವ ತೆರಿಗೆಗಳ ಮೊತ್ತವು,–

(i) ಪಟ್ಟಣ ಪೌರಸಭೆಗಳ ಸಂದರ್ಭದಲ್ಲಿ, ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಶೇಕಡ ಹದಿನೈದರಷ್ಟಕ್ಕೆ;

(ii) ನಗರ ಪೌರಸಭೆಗಳಾದ ಸಂದರ್ಭದಲ್ಲಿ ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಶೇಕಡ ಇಪ್ಪತ್ತರಷ್ಟಕ್ಕೆ;

–ಕಡಿಮೆಯಿಲ್ಲದಂಥ ತೆರಿಗೆಯನ್ನು ವಿಧಿಸತಕ್ಕದ್ದು.

(3) (1)ನೇ ಉಪ–ಪ್ರಕರಣದ ನಿರ್ದಿಷ್ಟಪಡಿಸಿದ ತೆರಿಗೆಗಳನ್ನು, ಈ ಅಧಿನಿಯಮದ ಉಪಬಂಧಗಳ ಮತ್ತು 323ನೇ ಪ್ರಕರಣದ ಮೇರೆಗೆ ಸರ್ಕಾರವು ರಚಿಸಿದ ನಿಯಮಗಳ ಅನುಸಾರವಾಗಿ ನಿರ್ಧಾರಿಸತಕ್ಕದ್ದು, ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು.

**95. ತೆರಿಗೆ ವಿಧಿಸಲು ಪ್ರಾರಂಭಿಕ ಪ್ರಕ್ರಿಯೆ.**– ತೆರಿಗೆಯನ್ನು ವಿಧಿಸುವ ಮೊದಲು ಮುನ್ಸಿಪಲ್ ಕೌನ್ಸಿಲು ಕೆಳಕಂಡ ಪ್ರಾರಂಭಿಕ ಪ್ರಕ್ರಿಯೆಯನ್ನು ಪಾಲಿಸತಕ್ಕದ್ದು:–

(ಕ) ಅದು ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ 94ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಇತರ ತೆರಿಗೆಗಳ ಉದ್ದೇಶಕ್ಕಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು ಮತ್ತು ಅಂಥ ನಿರ್ಣಯದಲ್ಲಿ ಅನ್ವಯವಾಗದಷ್ಟರಮಟ್ಟಿಗೆ,–

(i) ಮುನ್ಸಿಪಲ್ ಕೌನ್ಸಿಲು ಹೊಣೆಮಾಡಲು ಉದ್ದೇಶಿಸಿದ ವ್ಯಕ್ತಿಗಳ ಅಥವಾ ಸ್ವತ್ತಿನ ವರ್ಗಗಳು ಅಥವಾ ಅವೆರಡನ್ನೂ ಮತ್ತು ಅದು ಮಾಡಲು ಪ್ರಸ್ತಾವಿಸುವ ಯಾವುದೇ ವಿನಾಯಿತಿಗಳನ್ನು;

(ii) ಮುನ್ಸಿಪಲ್ ಕೌನ್ಸಿಲು ಯಾವ ಮೊಬಲಗು ಅಥವಾ ದರದಲ್ಲಿ ಅಂಥ ಪ್ರತಿಯೊಂದು ವರ್ಗಕ್ಕೆ ತೆರಿಗೆ ನಿರ್ಧರಣೆ ಮಾಡಲು ಉದ್ದೇಶಿಸಿರುವುದೋ ಆ ಮೊಬಲಗು ಅಥವಾ ದರವನ್ನು

–ನಿರ್ದಿಷ್ಟಪಡಿಸತಕ್ಕದ್ದು.

(ಖ) ಅಂಥ ನಿರ್ಣಯವನ್ನು ಅಂಗೀಕರಿಸಿದಾಗ ಮುನ್ಸಿಪಲ್ ಕೌನ್ಸಿಲು ನಿಯಮಿಸಿದ ನಮೂನೆಯಲ್ಲಿ ಅಂಥ ನಿರ್ಣಯದ ನೋಟೀಸನ್ನು ನಿಯಮಿಸಲಾದ ರೀತಿಯಲ್ಲಿ ಪ್ರಕಟಿಸತಕ್ಕದ್ದು;

(ಗ) ಸದರಿ ತೆರಿಗೆ ವಿಧಿಸುವಿಕೆ ಅಥವಾ ಪ್ರಸ್ತಾವಿಸಿದ ಮೊಬಲಗು ಅಥವಾ ದರಕ್ಕೆ ಅಥವಾ ಅದಕ್ಕೆ ಹೊಣೆಯಾಗಿಸಬೇಕಾದ ವ್ಯಕ್ತಿಗಳ ಅಥವಾ ಸ್ವತ್ತಿನ ವರ್ಗಗಳಿಗೆ ಅಥವಾ ಪ್ರಸ್ತಾವಿಸಿದ ಯಾವುವೇ ವಿನಾಯಿತಿಗಳಿಗೆ ಆಕ್ಷೇಪಿಸುವ ಪೌರಸಭೆಯ ಯಾರೇ ನಿವಾಸಿಯು ಸದರಿ ನೋಟೀಸಿನ ಪ್ರಕಟಣೆಯಾದಂದಿನಿಂದ ಒಂದು ತಿಂಗಳೊಳಗಾಗಿ ತನ್ನ ಆಕ್ಷೇಪಣೆಯನ್ನು ಬರಹದಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ಕಳಿಸತಕ್ಕದ್ದು. ಮುನ್ಸಿಪಲ್ ಕೌನ್ಸಿಲು ಅಂಥ ಎಲ್ಲಾ ಆಕ್ಷೇಪಣೆಗಳನ್ನು ಪರಿಗಣಿಸತಕ್ಕದ್ದು ಅಥವಾ ಅವುಗಳನ್ನು ಪರಿಶೀಲಿಸಲು ಮತ್ತು ಅವುಗಳ

ಮೇಲೆ ವರದಿ ಸಲ್ಲಿಸಲು ಒಂದು ಸಮಿತಿಯನ್ನು ಅಧಿಕೃತಗೊಳಿಸತಕ್ಕದ್ದು ಮತ್ತು ಪ್ರಸ್ತಾವಿತ ತೆರಿಗೆಯನ್ನು ಕೈಬಿಡಲು ಅದು ತೀರ್ಮಾನಿಸುವ ಹೊರತು ಅದರ ಮೇಲೆ ತನ್ನ ಅಭಿಪ್ರಾಯಗಳೊಂದಿಗೆ ಅಂಥ ಆಕ್ಷೇಪಣೆಗಳನ್ನು ಮತ್ತು ಅದಕ್ಕನುಸಾರವಾಗಿ ಉದ್ದೇಶಿಸಿದ ಯಾವುದೇ ಮಾರ್ಪಾಡುಗಳನ್ನು, ಹಿಂದೆ ಹೇಳಿದ ನೋಟೀಸಿನ ಒಂದು ಪ್ರತಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**96. ಷರತ್ತುಗಳನ್ನು ಮಂಜೂರು ಮಾಡಲು, ಮಾರ್ಪಾಡು ಮಾಡಲು ಮತ್ತು ವಿಧಿಸಲು ಅಧಿಕಾರ.–** ಸರ್ಕಾರವು, 95ನೇ ಪ್ರಕರಣದ ಮೇರೆಗೆ ಸಲ್ಲಿಸಿದ ನಿರ್ಣಯವನ್ನು ಮಂಜೂರು ಮಾಡಲು ನಿರಾಕರಿಸಬಹುದು ಅಥವಾ ಹೆಚ್ಚಿನ ಪರ್ಯಾಲೋಚನೆಗಾಗಿ ಮುನ್ಸಿಪಲ್ ಕೌನ್ಸಿಲಿಗೆ ಹಿಂದಿರುಗಿಸಬಹುದು ಅಥವಾ ಪ್ರಸ್ತಾವಿತ ತೆರಿಗೆಗೆ ಸದರಿ ನೋಟೀಸನ್ನು ಪ್ರಕಟಿಸಿದ ಒಂದು ತಿಂಗಳೊಳಗಾಗಿ ಯಾವುದೇ ಆಕ್ಷೇಪಣೆಯಿರದಿದ್ದರೆ ಅಥವಾ ತನ್ನ ಅಭಿಪ್ರಾಯದಲ್ಲಿ ಸಾಕಷ್ಟಾದ ಆಕ್ಷೇಪಣೆಯಿರದಿದ್ದರೆ, ಸದರಿ ನಿರ್ಣಯವನ್ನು,–

(ಕ) ಮಾರ್ಪಾಡಿಲ್ಲದೆಯೇ ಆಗಲಿ; ಅಥವಾ

(ಖ) (i) ವಿಧಿಸಬೇಕಾದ ಮೊಬಲಗಿನ ಹೆಚ್ಚಳವನ್ನು ಒಳಗೊಳ್ಳದಂಥ ಮಾರ್ಪಾಡುಗಳಿಗೆ; ಅಥವಾ

(ii) ಅಂಥ ಷರತ್ತುಗಳಲ್ಲಿ ನಿರ್ದಿಷ್ಟಪಡಿಸಿದ ಈ ಅಧಿನಿಯಮದ ಯಾವುದೇ ಉದ್ದೇಶ ಅಥವಾ ಉದ್ದೇಶಗಳಿಗೆ ಪೌರಸಭೆಯೊಳಗೆ ಅದು ಸೂಕ್ತವೆಂದು ಭಾವಿಸಬಹುದಾದಂಥ ತೆರಿಗೆಯ ಉತ್ಪತ್ತಿಯ ಪೂರ್ಣ ಅಥವಾ ಯಾವುದೇ ಭಾಗಕ್ಕೆ ಅನ್ವಯಿಸುವುದಕ್ಕೆ ಸಂಬಂಧಿಸಿದಂಥ ಷರತ್ತುಗಳಿಗೆ ಒಳಪಟ್ಟು

–ಮಂಜೂರ್ಮಾಡಬಹುದು.

**97. ನೋಟೀಸಿನೊಂದಿಗೆ ಮಂಜೂರಾದ ನಿರ್ಣಯಗಳನ್ನು ಪ್ರಕಟಿಸುವುದು.–** (1) 96ನೇ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಎಲ್ಲಾ ನಿರ್ಣಯಗಳನ್ನು ಯಾವ ಮಾರ್ಪಾಡುಗಳಿಗೊಳಪಟ್ಟು ಮಂಜೂರಾತಿಯನ್ನು ಕೊಡಲಾಗಿದೆಯೋ ಆ ಎಲ್ಲಾ ಮಾರ್ಪಾಡುಗಳೊಂದಿಗೆ ಮುನ್ಸಿಪಲ್ ಕೌನ್ಸಿಲು ನಿಯಮಿಸಲಾದ ರೀತಿಯಲ್ಲಿ ಮತ್ತು ಯಾವ ಪೌರಸಭೆಗಾಗಿ ಅವುಗಳನ್ನು ನಿಯಮಿಸಲಾಗಿದೆಯೋ ಆ ಪೌರಸಭೆಯಲ್ಲಿ ಮಂಜೂರಾತಿಯನ್ನು ಉಲ್ಲೇಖಿಸುವ ನೋಟೀಸು ಮತ್ತು ಅದರ ದಿನಾಂಕ ಮತ್ತು ಸಂಖ್ಯೆಯೊಂದಿಗೆ ಪ್ರಕಟಿಸತಕ್ಕದ್ದು ಮತ್ತು ಹಾಗೆ ಪ್ರಕಟಿಸಿದ ನಿರ್ಣಯದ ಮೂಲಕ ನಿಯಮಿಸಲಾದ ತೆರಿಗೆಯನ್ನು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸತಕ್ಕಂಥ ದಿನಾಂಕದಿಂದ ಮತ್ತು ಅಂಥ ನೋಟೀಸಿನ ಪ್ರಕಟಣೆಯಾದಂದಿನಿಂದ ಒಂದು ತಿಂಗಳಿಗೆ ಕಡಿಮೆಯಿಲ್ಲದಂತೆ, ತದನುಸಾರವಾಗಿ ವಿಧಿಸತಕ್ಕದ್ದು ಮತ್ತು ಅದರ ಉತ್ಪತ್ತಿಯನ್ನು, ಯಾವ ಷರತ್ತುಗಳಿಗೊಳಪಟ್ಟು 96ನೇ ಪ್ರಕರಣದ ಮೇರೆಗೆ ಮಂಜೂರಾತಿಯನ್ನು ಕೊಡಲಾಗಿತ್ತೋ ಆ ಎಲ್ಲ ಷರತ್ತುಗಳು ಯಾವುವಾದರೂ ಇದ್ದರೆ, ಅವುಗಳಿಗೊಳಪಟ್ಟು ಮತ್ತು ಅವುಗಳಿಗನುಸಾರವಾಗಿ ಮುನ್ಸಿಪಲ್ ಕೌನ್ಸಿಲು ವಿನಿಯೋಗಿಸತಕ್ಕದ್ದು:

ಪರಂತು,–

(ಕ) ವರ್ಷಕ್ಕೆ ಸಂಬಂಧಿಸಿ ವಿಧಿಸಬಹುದಾದ ತೆರಿಗೆಯು, (i) ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಒಂದು ದಿನಾಂಕದಂದು ಹೊರತು ಜಾರಿಗೆ ಬರತಕ್ಕದ್ದಲ್ಲ–ಎಂದರೆ ಏಪ್ರಿಲ್ ಮೊದಲನೇ ದಿನ–ಜುಲೈನ ಮೊದಲನೇ ದಿನ; ಅಕ್ಟೋಬರ್ ಮೊದಲನೇ ದಿನ–ಯಾವ ಸರ್ಕಾರಿ ವರ್ಷದಲ್ಲಿ ಅಂಥ ನೋಟೀಸನ್ನು ಪ್ರಕಟಿಸಲಾಗಿದೆಯೋ ಆ ಸರ್ಕಾರೀ ವರ್ಷದ ಜನವರಿ ಮೊದಲನೆ ದಿನ;

(ii) ಅದು ಏಪ್ರಿಲ್ ಮೊದಲನೇ ದಿನವನ್ನು ಹೊರತುಪಡಿಸಿ, ಯಾವುದೇ ದಿನದಂದು ಜಾರಿಗೆ ಬಂದರೆ, ಮುಂದಿನ ಏಪ್ರಿಲ್ ಮೊದಲನೇ ದಿನದವರೆಗೆ ಮೂರು ತಿಂಗಳಿಗೊಮ್ಮೆ ವಿಧಿಸಬಹುದಾಗಿರತಕ್ಕದ್ದು;

(ಖ) ಯಾವ ದಿನಾಂಕದಂದು ಅಥವಾ ಮುಂಚೆ ಈ ಪ್ರಕರಣದ ಮೇರೆಗೆ ನೋಟೀಸನ್ನು ಹೊರಡಿಸಲಾಯಿತೋ ಆ ದಿನದಂದು ಅಥವಾ ಅದಕ್ಕೆ ಮುಂಚೆ ಮುನ್ಸಿಪಲ್ ಕೌನ್ಸಿಲು ಯಾವ ದಿನಾಂಕಗಳಂದು ತೆರಿಗೆ ಅಥವಾ ಅದರ ಕಂತುಗಳು ಯಾವುವಾದರೂ ಇದ್ದರೆ ಅವುಗಳನ್ನು ಸಂದಾಯ ಮಾಡತಕ್ಕದ್ದು, ಆ ಯಾವುವೇ ದಿನಾಂಕಗಳಿಗೆ ಸಂಬಂಧಪಟ್ಟಂತೆ, ಅಗತ್ಯಪಡಿಸಬಹುದಾದಂಥ ಹೆಚ್ಚಿನ ವಿವರಗಳನ್ನು ಪ್ರಕಟಿಸತಕ್ಕದ್ದು;

(ಗ) ತೆರಿಗೆ ಅಥವಾ ತೆರಿಗೆಯ ವಿಶೇಷ ಭಾಗದ ವಿಧಿಸುವಿಕೆಯು ನಿಗದಿತ ಅವಧಿಗೆ ಮಾತ್ರ ಮಂಜೂರಾಗಿದ್ದರೆ, ಆ ಅವಧಿಯಲ್ಲಿ ಬಾಕಿಯಾಗಿರಬಹುದಾದ ಸಂದಾಯವಾಗದ ಬಾಕಿಗಳಿಗೆ ಸಂಬಂಧಿಸಿದಂತೆ ಹೊರತು, ಆ ಅವಧಿಯ ಮುಕ್ತಾಯದಲ್ಲಿ ವಿಧಿಸುವಿಕೆಯು ಕೊನೆಗೊಳ್ಳತಕ್ಕದ್ದು.

(2) ಈ ಪ್ರಕರಣದ ಮೇರೆಗಿನ ನೋಟೀಸಿನ ಪ್ರಕಟಣೆಯು, ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಅನುಸಾರವಾಗಿ ಆ ತೆರಿಗೆಯನ್ನು ವಿಧಿಸಲಾಗಿದೆಯೆಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

**98. ಅಸ್ತಿತ್ವದಲ್ಲಿರುವ ಯಾವುದೇ ತೆರಿಗೆಯನ್ನು ನಿಲಂಬನಗೊಳಿಸಲು, ಕಡಿಮೆ ಮಾಡಲು ಅಥವಾ ರದ್ದುಗೊಳಿಸಲು ಅಧಿಕಾರ.–** (1) ಮುನ್ಸಿಪಲ್ ಕೌನ್ಸಿಲು 141ನೇ ಪ್ರಕರಣದ ಪರಂತುಕದ (ಖ) ಖಂಡದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಅಸ್ತಿತ್ವದಲ್ಲಿರುವ ಯಾವುದೇ ತೆರಿಗೆಯನ್ನು ಯಾವುದೇ ಕಾಲದಲ್ಲಿ ಸಾಕಷ್ಟು ಕಾರಣಗಳಿಗಾಗಿ ನಿಲಂಬನಗೊಳಿಸಬಹುದು, ಮಾರ್ಪಾಡು ಮಾಡಬಹುದು ಅಥವಾ ರದ್ದುಗೊಳಿಸಬಹುದು.

(2) ತೆರಿಗೆಗಳನ್ನು ವಿಧಿಸುವುದಕ್ಕೆ ಸಂಬಂಧಿಸಿದಂತೆ ಈ ಅಧ್ಯಾಯದ ಉಪಬಂಧಗಳು ಸಾಧ್ಯವಾಗಬಹುದಾದಷ್ಟರಮಟ್ಟಿಗೆ ಯಾವುದೇ ತೆರಿಗೆಯ ವಿಧಿಸುವಿಕೆ, ಮಾರ್ಪಾಟು, ಅಥವಾ ರದ್ದಿಯಾತಿಗೆ ಅನ್ವಯವಾಗತಕ್ಕದ್ದು.

(3) (1)ನೇ ಉಪ–ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲು ಮಾಡಿದ ನಿಲಂಬನ, ಮಾರ್ಪಾಟು, ಅಥವಾ ರದ್ದಿಯಾತಿಯು ಸರ್ಕಾರವು ಅನುಮೋದಿಸಿದ ಹೊರತು ಪರಿಣಾಮಕಾರಿಯಾಗತಕ್ಕದ್ದಲ್ಲ.

## ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕ

**99. ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕ.–** (1) ಸ್ಥಿರ ಸ್ವತ್ತಿನ ವರ್ಗಾವಣೆಗಳ ಮೇಲೆ ಸುಂಕವನ್ನು, ಪೌರಸಭೆಯ ಪರಿಮಿತಿಗಳೊಳಗೆ ಇರುವ ಸ್ಥಿರ ಸ್ವತ್ತಿನ ಮಾರಾಟ, ದಾನ, ಅಡಮಾನ, ವಿನಿಮಯ ಮತ್ತು ಶಾಶ್ವತ ಬಾಡಿಗೆಯ ಲಿಖಿತಗಳ ಮೇಲೆ 1957ರ ಕರ್ನಾಟಕ ಸ್ಟಾಂಪು ಅಧಿನಿಯಮದ ಮೂಲಕ ವಿಧಿಸಿದ ಸುಂಕದ ಮೇಲೆ ಅಧಿಭಾರದ ರೂಪಕದಲ್ಲಿ ಸಂದರ್ಭಾನುಸಾರ ಲಿಖಿತದಲ್ಲಿ ನಿರೂಪಿಸಿದಂತೆ ಮಾರಾಟ ಅಥವಾ ದಾನದ ವಸ್ತು ವಿಷಯವಾಗಿರುವಂಥ ಸ್ವತ್ತಿನ ಮಾರುಕಟ್ಟೆಯ ಮೌಲ್ಯ ಅಥವಾ ಅಡಮಾನದ ಮೂಲಕ ಭದ್ರಗೊಳಿಸಿದ ಮೊಬಲಗಿನ, ವಿನಿಮಯದ ವಸ್ತು ವಿಷಯವಾದಂಥ ಅತಿ ಹೆಚ್ಚಿನ ಮೌಲ್ಯದ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ಬಾಡಿಗೆಯ ಸಂದರ್ಭದಲ್ಲಿ ಮೊದಲನೇ ಹತ್ತು ವರ್ಷಗಳಿಗಾಗಿನ ಬಾಡಿಗೆಗಳ ಮೌಲ್ಯದ ಮೇಲೆ ಶೇಕಡಾ ಒಂದಕ್ಕೆ ಮೀರದ ದರದಲ್ಲಿ ವಿಧಿಸತಕ್ಕದ್ದು:

ಪರಂತು, ಅಂಥ ಯಾವುದೇ ಸುಂಕವನ್ನು, ಅಡಮಾನದ ಮೂಲಕ ಬದ್ಧಗೊಳಿಸಿದ ಮೊಬಲಗು ಎರಡು ಸಾವಿರದ ಐದು ನೂರು ರೂಪಾಯಿಗಳನ್ನು ಮೀರದಿರುವ ಅಡಮಾನಕ್ಕೆ ಸಂಬಂಧಿಸಿದಂತೆ ವಿಧಿಸತಕ್ಕದ್ದಲ್ಲ.

(2) ವರ್ಗಾವಣೆ ಸುಂಕವನ್ನು ಜಾರಿಗೆ ತಂದ ಮೇಲೆ,–

(ಕ) 1957ರ ಕರ್ನಾಟಕ ಸ್ಟಾಂಪ್ ಅಧಿನಿಯಮದ 28ನೇ ಪ್ರಕರಣವನ್ನು, ಪೌರಸಭೆಯೊಳಗೆ ಮತ್ತು ಅದರಾಚೆ ಇರುವ ಸ್ವತ್ತಿಗೆ ಸಂಬಂಧಿಸಿದಂತೆ, ಪ್ರತ್ಯೇಕವಾಗಿ ವಿವರಗಳನ್ನು ನಿರೂಪಿಸುವಂತೆ ಅದು ನಿರ್ದಿಷ್ಟವಾಗಿ ಅಗತ್ಯಪಡಿಸಿದ್ದರೆ ಹೇಗೋ ಹಾಗೆ ಓದಿಕೊಳ್ಳತಕ್ಕದ್ದು.

(ಖ) ಇದೇ ಅಧಿನಿಯಮದ 61ನೇ ಪ್ರಕರಣವನ್ನು ಅದನ್ನು ಮುನ್ಸಿಪಲ್ ಕೌನ್ಸಿಲ್ಲಿಗೆ ಹಾಗೂ ಸರ್ಕಾರಕ್ಕೆ ಉಲ್ಲೇಖಿಸಿದರೆ ಹೇಗೋ ಹಾಗೆ ಓದಿಕೊಳ್ಳತಕ್ಕದ್ದು

(3) ಸರ್ಕಾರವು, ಸುಂಕದ ಸಂಗ್ರಹಣೆ, ಅದನ್ನು ಮುನ್ಸಿಪಲ್ ಕೌನ್ಸಿಲಿಗೆ ಸಂದಾಯ ಮಾಡುವುದು ಮತ್ತು ಅದನ್ನು ಸಂಗ್ರಹಿಸುವಲ್ಲಿ ಸರ್ಕಾರವು ವಹಿಸಿದ ಯಾವುದೇ ವೆಚ್ಚಗಳನ್ನು ಮುರಿದುಕೊಳ್ಳುವುದು–ಇವುಗಳನ್ನು ವಿನಿಮಯಕ್ಕಾಗಿ ನಿಯಮಗಳನ್ನು ರಚಿಸಬಹುದು.

(4) ಯಾವುದೇ ಸುಂಕವನ್ನು,–

(i) ಅಂಥ ಲಿಖಿತಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ವರ್ಗಾವಣೆ ಸುಂಕವನ್ನು ಸಂದಾಯ ಮಾಡಲು, ಈ ವಿನಾಯಿತಿಯು ಇಲ್ಲದಿದ್ದರೆ ಸರ್ಕಾರವು ಹೊಣೆಯಾಗುವ ಸಂದರ್ಭಗಳಲ್ಲಿ ಸರ್ಕಾರದಿಂದ ಅಥವಾ ಅದರ ಪರವಾಗಿ ಅಥವಾ ಅದಕ್ಕೆ ಬರೆದುಕೊಟ್ಟ ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ, ಅಥವಾ

(ii) 1957ರ ಕರ್ನಾಟಕ ಸ್ಟಾಂಪ್ ಅಧಿನಿಯಮದ ಮೇರೆಗೆ ಸ್ಟಾಂಪ್ ಸುಂಕದಿಂದ ವಿನಾಯಿತಿ ಪಡೆದ ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ,

–ವಿಧಿಸತಕ್ಕದ್ದಲ್ಲ.

## ವಾಹನಗಳು, ದೋಣಿಗಳು, ಪ್ರಾಣಿಗಳು ಮತ್ತು ನಾಯಿಗಳ ಮೇಲೆ ತೆರಿಗೆ

**100. ಸಂಖ್ಯೆಗಳನ್ನು ಹೊಂದಿರದ ಪ್ರಾಣಿಗಳ ಅಥವಾ ವಾಹನಗಳ ಅಭಿಗ್ರಹಣ ಮತ್ತು ಅಭಿಗ್ರಹಣದ ತರುವಾಯದ ಪ್ರಕ್ರಿಯೆ.–** (1) 324ನೇ ಪ್ರಕರಣದ (1)ನೇ ಉಪ–ಪ್ರಕರಣದ (ಟ) ಖಂಡದ ಮೇರೆಗೆ ರಚಿಸಲಾದ ಉಪವಿಧಿಯಲ್ಲಿ ಒಳಗೊಂಡ ನಾಯಿ ಅಥವಾ ವಾಹನಕ್ಕೆ ಸಂಖ್ಯೆ ಕೊಡುವುದು ಮತ್ತು ನೋಂದಣಿಯ ಬಗ್ಗೆ ಯಾವುದೇ ನಿರ್ದೇಶನವನ್ನು ಯಾವುದೇ ನಾಯಿ ಅಥವಾ ವಾಹನಕ್ಕೆ ಸಂಬಂಧಿಸಿದಂತೆ ಪಾಲಿಸದಿದ್ದರೆ ಆಗ, ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ಶಕ್ತಗೊಳಿಸಿದ ಯಾರೇ ಪ್ರಾಧಿಕಾರಿಯು ಯಾವುದೇ ಕಾಲದಲ್ಲಿ ನಾಯಿ ಅಥವಾ ವಾಹನ ಅಥವಾ ಅದನ್ನು ಎಳೆಯುತ್ತಿರುವ ಪ್ರಾಣಿ ಯಾವುದಾದರೂ ಇದ್ದರೆ, ಅದನ್ನು ಅಥವಾ ಅವೆರಡನ್ನು ಅಭಿಗ್ರಹಣ ಮಾಡಬಹುದು ಮತ್ತು ತಡೆಹಿಡಿದಿರಿಸಬಹುದು:

ಪರಂತು, ಬೈಸಿಕಲ್, ಟ್ರೈಸಿಕಲ್ ಅಥವಾ ರಿಕ್ಷಾವನ್ನು ಹೊರತುಪಡಿಸಿ, ಯಾವುದೇ ವಾಹನವನ್ನು, ಅದು ಯಾರೇ ಪ್ರಯಾಣಿಕ ಅಥವಾ ಸರಕುಗಳ ಸಾಗಣೆಯಲ್ಲಿ ವಾಸ್ತವವಾಗಿ ಉಪಯೋಗಿಸುತ್ತಿರುವಾಗ ಅಭಿಗ್ರಹಿಸತಕ್ಕದ್ದಲ್ಲ ಮತ್ತು ತಡೆಹಿಡಿದಿರಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗೆ ನಾಯಿ ಅಥವಾ ವಾಹನ ಅಥವಾ ಪ್ರಾಣಿಯನ್ನು ತಡೆಹಿಡಿದಿರಿಸಿದ್ದರೆ, ಮತ್ತು ಅದಕ್ಕೆ ಹಕ್ಕುಳ್ಳ ಒಡೆಯ ಅಥವಾ ಇತರ ವ್ಯಕ್ತಿಯು ಅದನ್ನು ಕ್ಲೇಮು ಮಾಡದಿದ್ದರೆ, ಮತ್ತು ಅದರ ಮೆಲೆ ಬಾಕಿಯಿರುವ ತೆರಿಗೆ ಯಾವುದಾದರೂ ಇದ್ದರೆ, ಅದನ್ನು ಮತ್ತು (4)ನೇ ಉಪ–ಪ್ರಕರಣದ ಮೇರೆಗೆ ಬಾಕಿಯಿರುವ ಮೊಬಲಗುಗಳನ್ನು ಅಭಿಗ್ರಹಣದ ದಿನಾಂಕದಿಂದ ಹತ್ತು ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ, ಆ ಬಗ್ಗೆ ಮುನ್ಸಿಪಲ್ ಕೌನ್ಸಿಲು ಶಕ್ತಗೊಳಿಸಬಹುದಾದಂಥ ಪ್ರಾಧಿಕಾರಿಯು, ಆ ನಾಯಿ ಅಥವಾ ವಾಹನ ಅಥವಾ ಪ್ರಾಣಿಯನ್ನು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಅದರ ಮಾರಾಟದ ಉತ್ಪತ್ತಿಗಳನ್ನು,–

(ಕ) ನಾಯಿ ಅಥವಾ ವಾಹನದ ಮೇಲೆ ತೆರಿಗೆ ಯಾವುದಾದರೂ ಬಾಕಿಯಿದ್ದರೆ, ಅದರ;

(ಖ) ಪ್ರಾಧಿಕಾರಿಯು ನಿರ್ದೇಶಿಸಬಹುದಾದಂಥ ತೆರಿಗೆಯ ಮೊಬಲಗನ್ನು ಮೀರದಂಥ ದಂಡದ;

(ಗ) ಅಭಿಗ್ರಹಣ, ತಡೆಹಿಡಿದಿರಿಸುವಿಕೆ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ವಹಿಸಲಾದ ವೆಚ್ಚಗಳ ಸಂದಾಯಕ್ಕೆ ವಿನಿಯೋಗಿಸತಕ್ಕದ್ದು.

(3) ಅಂಥ ಸಂದಾಯದ ತರುವಾಯ ಹೆಚ್ಚಳ ಏನಾದರೂ ಇದ್ದರೆ, ಮುನ್ಸಿಪಲ್ ಕೌನ್ಸಿಲು ಮಾರಾಟದ ದಿನಾಂಕದಿಂದ ಒಂದು ವರ್ಷದೊಳಗೆ ಮಾಡಿದ ತಗಾದೆಯ ಮೇಲೆ, ಅದಕ್ಕೆ ಹಕ್ಕುಳ್ಳ ಒಡೆಯ ಅಥವಾ ಇತರ ವ್ಯಕ್ತಿ ಅದನ್ನು ಕೊಟ್ಟು ಬಿಡತಕ್ಕದ್ದು. ಅಂಥ ತಗಾದೆಯನ್ನು ಮಾಡದೇ ಇದ್ದರೆ, ಅಂಥ ಹೆಚ್ಚುವರಿಯನ್ನು ಮುನ್ಸಿಪಲ್ ಕೌನ್ಸಿಲಿಗೆ ಮುಟ್ಟುಗೋಲಾಗಿಸತಕ್ಕದ್ದು.

(4) ನಾಯಿ ಅಥವಾ ವಾಹನ ಅಥವಾ ಪ್ರಾಣಿಯ ಒಡೆಯ ಅಥವಾ ಅದಕ್ಕೆ ಹಕ್ಕುಳ್ಳ ಇತರ ವ್ಯಕ್ತಿಯು ಅಭಿಗ್ರಹಣ ಮಾಡಿದ ದಿನಾಂಕದಿಂದ ಹತ್ತು ದಿವಸಗಳೊಳಗೆ ಅಥವಾ ಮಾರಾಟಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಅದನ್ನು ಕ್ಲೇಮು ಮಾಡಿದರೆ, ಅದನ್ನು–

(ಕ) ನಾಯಿ ಅಥವಾ ವಾಹನದ ಮೇಲೆ ಬಾಕಿಯಿರುವ ತೆರಿಗೆ;

(ಖ) (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಿಯು ನಿರ್ದೇಶಿಸಬಹುದಾದಂಥ ತೆರಿಗೆಯ ಮೊಬಲಗನ್ನು ಮೀರದಂಥ ದಂಡವನ್ನು; ಮತ್ತು

(ಗ) ಅಭಿಗ್ರಹಣ ಮತ್ತು ತಡೆಹಿಡಿದಿರಿಸುವಿಕೆಗೆ ಸಂಬಂಧಿಸಿದಂತೆ ವಹಿಸಲಾದ ವೆಚ್ಚಗಳನ್ನು, ಸಂದಾಯ ಮಾಡಿದ ಮೇಲೆ ಅವನಿಗೆ ಹಿಂದಿರುಗಿಸತಕ್ಕದ್ದು.

**ಕಟ್ಟಡಗಳು ಮತ್ತು ಭೂಮಿಗಳ ಮೇಲೆ ತೆರಿಗೆ ನಿರ್ಧಾರಣೆ ಮತ್ತು ತೆರಿಗೆಗೆ ಅವುಗಳು ಗುರಿಯಾಗುವುದು.**

**101. ಕಟ್ಟಡಗಳು ಅಥವಾ ಭೂಮಿಗಳ ಮೇಲೆ ತೆರಿಗೆ ನಿರ್ಧಾರಣೆ ವಿಧಾನ.–** ಪ್ರತಿಯೊಂದು ಕಟ್ಟಡವು, ಕಟ್ಟಡದ ಒಡೆಯನು, ನಿವೇಶನ ಅಥವಾ ಆವರಣದ ಒಡೆಯನಿಗಿಂತ ಬೇರೆಯಾಗಿದ್ದ ಹೊರತು, ಅದರ ನಿವೇಶನ ಮತ್ತು ಅದರ ಲಗತ್ತಿಕೆಗಳಂತೆ ಸ್ವಾಧೀನದಲ್ಲಿರುವ ಇತರ ಪಕ್ಕದ ಆವರಣದೊಂದಿಗೆ ತೆರಿಗೆ ನಿರ್ಧಾರಣೆಗೆ ಒಳಪಡತಕ್ಕದ್ದು.

(2) ಕಟ್ಟಡದ ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯವು, 2ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಿದ ಹಾಗೆ, ಅಂಥ ವಾರ್ಷಿಕ ಬಾಡಿಗೆಯ ಶೇಕಡಾ ಹದಿನಾರು ಮತ್ತು ಮೂರನೇ

ಎರಡರಷ್ಟನ್ನು ಕಳೆದು ಕಮ್ಮಿಯಾಗುವ ಒಟ್ಟು ವಾರ್ಷಿಕ ಬಾಡಿಗೆಯಾಗಿರತಕ್ಕದ್ದು, ಕಳೆತವು, ದುರಸ್ತಿಗಾಗಿನ ಯಾವುದೇ ಬಗೆಯ ಯಾವುದೇ ಇತರ ಬಾಬ್ತಿನ ಎಲ್ಲ ರಿಯಾಯಿತಿಗಳ ಬದಲಾಗಿ ಇರತಕ್ಕದ್ದು.

**102. ತೆರಿಗೆ ನಿರ್ಧಾರಕನ ನೇಮಕಾತಿ.–** (1) ಕಟ್ಟಡಗಳು ಅಥವಾ ಭೂಮಿಗಳು ಅಥವಾ ಅವೆರಡರ ಮೇಲೆ ತೆರಿಗೆಯ ರೂಪದಲ್ಲಿ ವಿಧಿಸಿದ ತೆರಿಗೆಗಳನ್ನು ನಿರ್ಧರಿಸುವುದಕ್ಕಾಗಿ ಸರ್ಕಾರವು, ನಿರ್ಧಾರಕನನ್ನು ನೇಮಕ ಮಾಡತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲು, ಈ ಅಧಿನಿಯಮದ ಮೇರೆಗೆ, ಅವನ ಕರ್ತವ್ಯಗಳನ್ನು ನಿರ್ವಹಿಸಲು ತೆರಿಗೆ ನಿರ್ಧಾರಕನಿಗೆ ಎಲ್ಲಾ ಲಿಪಿಕ ಮತ್ತು ಇತರ ಅವಶ್ಯಕ ಸಹಾಯವನ್ನು ಒದಗಿಸತಕ್ಕದ್ದು ಮತ್ತು ಅದಕ್ಕೆ ಪ್ರಾಸಂಗಿಕವಾದ ಎಲ್ಲ ವೆಚ್ಚಗಳನ್ನು ಭರಿಸತಕ್ಕದ್ದು.

**103. ತೆರಿಗೆ ನಿರ್ಧಾರಣೆ ಪಟ್ಟಿಯ ತಯಾರಿಕೆ.–** (1) ಕಟ್ಟಡಗಳು ಅಥವಾ ಭೂಮಿಗಳು ಅಥವಾ ಅವೆರಡರ ಮೇಲೆ ತೆರಿಗೆಯನ್ನು ವಿಧಿಸಿದಾಗ, ತೆರಿಗೆ ನಿರ್ಧಾರಕನು, ಪೌರಸಭೆಯಲ್ಲಿನ ಎಲ್ಲ ಕಟ್ಟಡಗಳು ಅಥವಾ ಭೂಮಿಗಳು ಅಥವಾ ಕಟ್ಟಡಗಳು ಮತ್ತು ಭೂಮಿಗಳ ಬಗ್ಗೆ,–

(ಕ) ಸ್ವತ್ತು ಇರುವಂಥ ವಿಭಾಗದ ಮತ್ತು ಬೀದಿಯ ಹೆಸರು;

(ಖ) ಗುರುತಿಸಲು ಸಾಕಾಗುವಷ್ಟು ಹೆಸರಿನ ಮೂಲಕವಾಗಲಿ ಅಥವಾ ಸಂಖ್ಯೆಯ ಮೂಲಕವಾಗಲಿ ಸ್ವತ್ತಿನ ವರ್ಣನೆ;

(ಗ) ಗೊತ್ತಿದ್ದರೆ, ಒಡೆಯ ಮತ್ತು ಅಧಿಭೋಗದಾರನ ಹೆಸರುಗಳು;

(ಘ) ಯಾವ ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯ ಅಥವಾ ಇತರ ಆಧಾರದ ಮೇಲೆ ಸ್ವತ್ತಿನ ತೆರಿಗೆಯನ್ನು ನಿರ್ಧರಿಸಲಾಗಿದೆಯೋ ಆ ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯ ಅಥವಾ ಇತರ ಆಧಾರ; ಮತ್ತು

(ಙ) ಅದರ ಮೇಲೆ ನಿರ್ಧಾರಿಸಿದ ತೆರಿಗೆಯ ಮೊಬಲಗು

–ಇವುಗಳನ್ನೊಳಗೊಂಡ ತೆರಿಗೆ ನಿರ್ಧಾರಣೆ ಪಟ್ಟಿಯನ್ನು ತಯಾರಿಸುವಂತೆ ಮಾಡತಕ್ಕದ್ದು.

(2) ಹಿಂದೆ ಹೇಳಿದಂಥ ತೆರಿಗೆ ನಿರ್ಧಾರಣೆಯನ್ನು ಮಾಡುವ ಉದ್ದೇಶಕ್ಕಾಗಿ ತೆರಿಗೆ ನಿರ್ಧಾರಕನು ಮತ್ತು ಅವನ ಕೆಲಸದಲ್ಲಿ ಅವನಿಗೆ ಸಹಾಯ ಮಾಡಲು ನೇಮಕಗೊಂಡ ಯಾರೇ ವ್ಯಕ್ತಿಯು, ಅಂಥ ಸ್ವತ್ತಿನ ಪರಿಶೀಲನೆಯನ್ನು ಮಾಡಬಹುದು.

(3) ತೆರಿಗೆ ನಿರ್ಧಾರಕನ ಕಡ್ಡಾಯ ಕೋರಿಕೆಯ ಮೇಲೆ, ಯಾವುದೇ ಅಂಥ ಕಟ್ಟಡ ಅಥವಾ ಭೂಮಿಯ ಒಡೆಯ ಅಥವಾ ಅಧಿಭೋಗದಾರನು, ಕಡ್ಡಾಯ ಕೋರಿಕೆಯಲ್ಲಿ ನಿರ್ದಿಷ್ಟಪಡಿಸತಕ್ಕಂಥ ಸೂಕ್ತ ಅವಧಿಯೊಳಗೆ,–

(ಕ) ಒಡೆಯ ಅಥವಾ ಅಧಿಭೋಗದಾರನ ಅಥವಾ ಅವರಿಬ್ಬರ ಹೆಸರು ಮತ್ತು ವಾಸದ ಸ್ಥಳದ ಬಗ್ಗೆ;

(ಖ) ಅಂಥ ಕಟ್ಟಡ ಅಥವಾ ಭೂಮಿಯ ಉದ್ದಗಲಗಳು ಮತ್ತು ಕಟ್ಟಡದ ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಬಗ್ಗೆ

–ತಾನು ತಿಳಿದಿರುವಷ್ಟರ ಅಥವಾ ನಂಬುವಷ್ಟರ ಮಟ್ಟಿಗೆ ಮತ್ತು ತಾನು ರುಜುಮಾಡಿದ ನೈಜ ವಿವರ ಪತ್ರಿಕೆಯನ್ನು ಒದಗಿಸಲು ಬದ್ಧನಾಗಿರತಕ್ಕದ್ದು.

**104. ಕಟ್ಟಡಗಳು ಅಥವಾ ಭೂಮಿಗಳು ಅಥವಾ ಅವೆರಡರ ಮೇಲೆ ತೆರಿಗೆಗೆ ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಯನ್ನು ಅವನ ಹೆಸರನ್ನು ಖಚಿತಪಡಿಸಿಕೊಳ್ಳಲಾಗದಿದ್ದರೆ ಹೇಗೆ ವರ್ಣಿಸತಕ್ಕದ್ದು.–** (1) ಯಾವುದೇ ಆವರಣಕ್ಕೆ ಸಂಬಂಧಿಸಿದಂತೆ, ಕಟ್ಟಡಗಳು ಅಥವಾ ಭೂಮಿಗಳು ಅಥವಾ ಅವೆರಡರ ಮೇಲೆ ತೆರಿಗೆ ಸಂದಾಯ ಮಾಡಲು ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಯ ಹೆಸರನ್ನು ಖಚಿತಪಡಿಸಿಕೊಳ್ಳಲಾಗದಿದ್ದಾಗ, ಅವನನ್ನು ತೆರಿಗೆ ನಿರ್ಧಾರಣೆ ಪಟ್ಟಿಯಲ್ಲಿ ಮತ್ತು ಈ ಅಧಿನಿಯಮದ ಮೇರೆಗೆ, ಸದರಿ ವ್ಯಕ್ತಿಗೆ ಜಾರಿ ಮಾಡಲು ಅವಶ್ಯವಾಗಬಹುದಾದಂಥ ಯಾವುದೇ ನೋಟೀಸಿನಲ್ಲಿ ಹೆಚ್ಚಿನ ವಿವರಣೆಯಿಲ್ಲದೆ ಅಂಥ ಆವರಣದ "ಧಾರಕ"ನಾಗಿ ಅವನನ್ನು ವರ್ಣಿಸುವುದು ಸಾಕಷ್ಟಾಗಿರತಕ್ಕದ್ದು.

(2) ಅಂಥ ಯಾವುದೇ ಸಂದರ್ಭದಲ್ಲಿ ಆವರಣದ ಅಧಿಭೋಗದಲ್ಲಿರುವ ಯಾರೇ ವ್ಯಕ್ತಿಯಲ್ಲಿ ಹಿಂದೆ ಹೇಳಿದ ಹಾಗೆ ಮುಖ್ಯವಾಗಿ ಹೊಣೆಯಾಗಿರುವವನು ಯಾರು ಎಂಬುದನ್ನು ನಿರ್ಧರಿಸಲು ಅಗತ್ಯವಾಗಬಹುದಾದಂಥ ಮಾಹಿತಿಯನ್ನು ಕೊಡಲು ನಿರಾಕರಿಸಿದರೆ, ಅಂಥ ವ್ಯಕ್ತಿಯು, ಅಂಥ ಮಾಹಿತಿಯನ್ನು ಪಡೆದುಕೊಳ್ಳುವವರೆಗೆ, ಅವನ ಅಧಿಭೋಗದಲ್ಲಿರುವ ಆವರಣಗಳ ಮೇಲೆ ವಿಧಿಸಬಹುದಾದ ಕಟ್ಟಡಗಳು ಅಥವಾ ಭೂಮಿಗಳು ಅಥವಾ ಅವೆರಡರ ಮೇಲಿನ ಎಲ್ಲ ತೆರಿಗೆಗಳಿಗೆ ತಾನೇ ಹೊಣೆಯಾಗಿರತಕ್ಕದ್ದು.

**105. ತೆರಿಗೆ ನಿರ್ಧಾರಣಾ ಪಟ್ಟಿಯ ನೋಟೀಸಿನ ಪ್ರಕಟಣೆ.–** ತೆರಿಗೆ ನಿರ್ಧಾರಣಾ ಪಟ್ಟಿಯನ್ನು ಪೂರ್ಣಗೊಳಿಸಿದಾಗ, ತೆರಿಗೆ ನಿರ್ಧಾರಕನು, ಅದರ ಮತ್ತು ಪಟ್ಟಿ ಅಥವಾ ಅದರ ಪ್ರತಿಯನ್ನು ಪರಿಶೀಲಿಸಬಹುದಾದ ಸ್ಥಳದ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡತಕ್ಕದ್ದು; ಪಟ್ಟಿಯಲ್ಲಿ ಸೇರಿಸಿರುವ ಒಡೆಯನಾಗಲಿ ಅಥವಾ ಅಧಿಭೋಗದಾರನೆಂದಾಗಲಿ ಕ್ಲೇಮು ಮಾಡುವ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಅಂಥ ವ್ಯಕ್ತಿಯ ಯಾರೇ ಏಜೆಂಟನು, ಪಟ್ಟಿಯನ್ನು ಪರಿಶೀಲಿಸಲು ಮತ್ತು ಯಾವುದೇ ವೆಚ್ಚವಿಲ್ಲದೆ ಅದರಿಂದ ಉದ್ಧೃತಗಳನ್ನು ಮಾಡಿಕೊಳ್ಳಲು ಅವನಿಗೆ ಅವಕಾಶವಿರತಕ್ಕದ್ದು.

**106. ತೆರಿಗೆ ನಿರ್ಧಾರಣೆ ಪಟ್ಟಿಯನ್ನು ಪರಿಷ್ಕರಿಸುವುದಕ್ಕಾಗಿನ ಪ್ರಕ್ರಿಯೆ.–** (1) ತೆರಿಗೆ ನಿರ್ಧಾರಕನು, ಅಂಥ ತೆರಿಗೆ ನಿರ್ಧಾರಣೆ ಪಟ್ಟಿಯ ಪ್ರಕಟಣೆಯ ಕಾಲದಲ್ಲಿ, ಅದರ ತರುವಾಯ ಮೂವತ್ತು ದಿವಸಗಳಿಗೆ ಕಡಿಮೆಯಿಲ್ಲದಂತೆ, ಮೌಲ್ಯಮಾಪನ ಮತ್ತು ತೆರಿಗೆ ನಿರ್ಧರಣೆಯನ್ನು ಪರಿಷ್ಕರಿಸಲು ಪರಿಷ್ಕರಣಾ ಪ್ರಾಧಿಕಾರಿಯು ಯಾವಾಗ ಮುಂದುವರಿಯುವನು ಎಂಬ ಕಾಲದ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡತಕ್ಕದ್ದು; ಮತ್ತು ಯಾವುದೇ ಸ್ವತ್ತಿನ ಬಗ್ಗೆ ಮೊದಲ ಬಾರಿಗೆ ತೆರಿಗೆ ನಿರ್ಧರಣೆ ಮಾಡಿದ ಅಥವಾ [ತೆರಿಗೆ ನಿರ್ಧರಣೆಯನ್ನು ಹೆಚ್ಚಿಸಿದ ಎಲ್ಲ ಸಂದರ್ಭಗಳಲ್ಲಿ ತೆರಿಗೆ ನಿರ್ಧಾರಕನು, ಅದರ ನೋಟಿಸನ್ನು ಸಹ ಸ್ವತ್ತಿನ ಒಡೆಯ ಅಥವಾ ಅಧಿಭೋಗದಾರನು, ಅವನು ಗೊತ್ತಿದ್ದರೆ, ಅವನಿಗೆ ಕೊಡತಕ್ಕದ್ದು] ಮತ್ತು ಸ್ವತ್ತಿನ ಒಡೆಯ ಅಥವಾ ಅಧಿಭೋಗದಾರನು ಗೊತ್ತಿಲ್ಲದಿದ್ದರೆ ಸ್ವತ್ತಿನ ಮೇಲೆ ಎದ್ದುಕಾಣುವ ಸ್ಥಳದಲ್ಲಿ ನೋಟೀಸನ್ನು ಅವನು ಅಂಟಿಸತಕ್ಕದ್ದು.

(2) ಮುನ್ಸಿಪಲ್ ಕಮಿಷನರನು ಇರುವ ಪೌರಸಭೆಯಲ್ಲಿ ಅಂಥ ಮುನ್ಸಿಪಲ್ ಕಮಿಷನರನು, ಮತ್ತು ಬೇರೆ ಕಡೆಗಳಲ್ಲಿ ಈ ಬಗ್ಗೆ ಸರ್ಕಾರದಿಂದ ವಿಶೇಷವಾಗಿ ನೇಮಕಗೊಂಡ ಅಸಿಸ್ಟೆಂಟ್ ಕಮಿಷನರನ ದರ್ಜೆಗೆ ಕಡಿಮೆಯಿಲ್ಲದ ಸರ್ಕಾರದ ಯಾರೇ ಅಧಿಕಾರಿಯು, ಮತ್ತು ಅಂಥ ಯಾರೇ ಅಧಿಕಾರಿಯು ನೇಮಕಗೊಂಡಿಲ್ಲದಿರುವಲ್ಲಿ ಪೌರಸಭೆ ಇರುವಂಥ ಕಂದಾಯ ಉಪವಿಭಾಗದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಅಸಿಸ್ಟೆಂಟ್ ಕಮಿಷನರನನ್ನು ಪರಿಷ್ಕರಣಾ ಪ್ರಾಧಿಕಾರಿಯಾಗಿ ನೇಮಿಸತಕ್ಕದ್ದು, ಅವನಿಗೆ (1)ನೇ ಉಪ–ಪ್ರಕರಣದ ಮೇರೆಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು:

ಪರಂತು, ಸರ್ಕಾರವು ತಾನು ಹಾಗೆ ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಯಾವುದೇ ಪೌರಸಭೆಯಲ್ಲಿ ಬೇರೆ ಪ್ರದೇಶಗಳಿಗೆ ಸಂಬಂಧಿಸಿದಂತೆ ಪರಿಷ್ಕರಣ ಪ್ರಾಧಿಕಾರಿಗಳಾಗಿರಲು ಅದು ಸೂಕ್ತವೆಂದು ಯೋಚಿಸುವಂಥ ಸಂಖ್ಯೆಯ ಅಸಿಸ್ಟೆಂಟ್ ಕಮಿಷನರನ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಗಳನ್ನು ನೇಮಕ ಮಾಡಬಹುದು ಮತ್ತು ಯಾವುದೇ ಅಂಥ ನೇಮಕಾತಿಯನ್ನು ಮಾಡಿದಾಗ ಈ ಪ್ರಕರಣದಲ್ಲಿ ಪರಿಷ್ಕರಣಾ ಪ್ರಾಧಿಕಾರಕ್ಕೆ ಮಾಡಿದ ಉಲ್ಲೇಖಗಳನ್ನು ಅಂಥ ಪರಿಷ್ಕರಣಾ ಪ್ರಾಧಿಕಾರಿಗಳಿಗೆ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

(3) ಮೌಲ್ಯಮಾಪನ ಮತ್ತು ತೆರಿಗೆ ನಿರ್ಧಾರಣೆಗೆ ಮಾಡಿದ ಎಲ್ಲ ಆಕ್ಷೇಪಣೆಗಳನ್ನು ಯಾವ ಆಧಾರಗಳ ಮೇಲೆ ಮೌಲ್ಯ ಮಾಪನ ಮತ್ತು ನಿರ್ಧರಣೆಯು ವಿವಾದಗ್ರಸ್ತವಾಗಿದೆಯೋ ಆ ಯಾವುದೇ ಆಧಾರಗಳನ್ನು ನಿರೂಪಿಸಿ ಬರಹದಲ್ಲಿನ ಅರ್ಜಿಯ ಮೂಲಕ ನೋಟೀಸಿನಲ್ಲಿ ನಿಗದಿಪಡಿಸಿದ ಕಾಲಕ್ಕೆ ಮುಂಚೆ ತೆರಿಗೆ ನಿರ್ಧಾರಕನಿಗೆ ಸಲ್ಲಿಸತಕ್ಕದ್ದು ಮತ್ತು ಹಾಗೆ ಮಾಡಿಕೊಂಡ ಎಲ್ಲಾ ಅರ್ಜಿಗಳನ್ನು ಆ ಉದ್ದೇಶಕ್ಕಾಗಿ ತೆರಿಗೆ ನಿರ್ಧಾರಕನು ಇಡಬೇಕಾದ ಪುಸ್ತಕದಲ್ಲಿ ನೋಂದಾಯಿಸತಕ್ಕದ್ದು.

(4) ಪರಿಷ್ಕರಣಾ ಪ್ರಾಧಿಕಾರಿಯು, ಖುದ್ದಾಗಿಯಾಗಲಿ ಅಥವಾ ಏಜೆಂಟನ ಮೂಲಕವಾಗಿಯಾಗಲಿ, ಅರ್ಜಿದಾರನಿಗೆ ಅಹವಾಲು ಮಾಡಿಕೊಳ್ಳಲು ಅವಕಾಶ ಕೊಟ್ಟ ತರುವಾಯ,–

(ಕ) ಆಕ್ಷೇಪಣೆಗಳನ್ನು ತನಿಖೆ ಮಾಡತಕ್ಕದ್ದು ಮತ್ತು ವಿಲೇ ಮಾಡತಕ್ಕದ್ದು,

(ಖ) (3)ನೇ ಪ್ರಕರಣದ ಮೇರೆಗೆ ಇಡಲಾದ ಪುಸ್ತಕದಲ್ಲಿ ಅದರ ಫಲಿತಾಂಶವನ್ನು ಟಿಪ್ಪಣಿ ಮಾಡಿಸತಕ್ಕದ್ದು; ಮತ್ತು

(ಗ) ಅಂಥ ಫಲಿತಾಂಶಕ್ಕೆ ಅನುಸಾರವಾಗಿ ಅವಶ್ಯಕವಾದ ಯಾವುದೇ ತಿದ್ದುಪಡಿಯನ್ನು ತೆರಿಗೆ ನಿರ್ಧರಣಾ ಪಟ್ಟಿಯಲ್ಲಿ ಮಾಡಿಸತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಮಾಡಿದ ಎಲ್ಲಾ ಆಕ್ಷೇಪಣೆಗಳನ್ನು ವಿಲೆ ಮಾಡಿದಾಗ ಮತ್ತು (4)ನೇ ಉಪ–ಪ್ರಕರಣಕ್ಕೆ ಅನುಸಾರವಾಗಿ ತೆರಿಗೆ ನಿರ್ಧರಣಾ ಪಟ್ಟಿಯಲ್ಲಿ ಎಲ್ಲ ತಿದ್ದುಪಡಿಗಳನ್ನು ಮಾಡಿದ ಮೇಲೆ, ಸದರಿ ಪಟ್ಟಿಯನ್ನು ಪರಿಷ್ಕರಣಾ ಪ್ರಾಧಿಕಾರಿಯು ಅಧಿಪ್ರಮಾಣಗೊಳಿಸತಕ್ಕದ್ದು.

(6) ಹಾಗೆ ಅಧಿಪ್ರಮಾಣಗೊಳಿಸಿದ ಪಟ್ಟಿಯನ್ನು ಪೌರಸಭಾ ಕಛೇರಿಯಲ್ಲಿ ಇಡತಕ್ಕದ್ದು ಮತ್ತು ಅದು ಅದರಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತಿನ ಎಲ್ಲಾ ಒಡೆಯರು ಮತ್ತು ಅಧಿಭೋಗದಾರರಿಗೆ ಅಥವಾ ಅಂಥ ವ್ಯಕ್ತಿಗಳ ಏಜೆಂಟರಿಗೆ ಕಛೇರಿಯ ವೇಳೆಯಲ್ಲಿ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು ಮತ್ತು ಹಾಗೆ ಮುಕ್ತವಾಗಿರುವುದರ ಬಗೆಗಿನ ನೋಟೀಸನ್ನು ತತ್‌ಕ್ಷಣವೇ ಪ್ರಕಟಿಸತಕ್ಕದ್ದು.

(7) (ಕ) 107ನೇ ಪ್ರಕರಣದ ಉಪಬಂಧಗಳ ಮೇರೆಗೆ, ಅದರಲ್ಲಿ ಆ ತರುವಾಯ ಮಾಡಬಹುದಾದಂಥ ಬದಲಾವಣೆಗೆ; ಮತ್ತು

(ಖ) 150ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಅಪೀಲಿನ ಫಲಿತಾಂಶಕ್ಕೆ ಒಳಪಟ್ಟು ಹಾಗೆ ಅಧಿಪ್ರಮಾಣಿತಗೊಂಡ ಮತ್ತು ಇಡಲಾದ ಪಟ್ಟಿಯಲ್ಲಿನ ನಮೂದನೆಗಳು,–

(i) ಎಲ್ಲ ಪೌರಸಭಾ ತೆರಿಗೆಗಳ ಉದ್ದೇಶಗಳಿಗಾಗಿ, ಯಾವ ಕಟ್ಟಡಗಳು ಮತ್ತು ಭೂಮಿಗಳಿಗೆ ಅಂಥ ನಮೂದನೆಗಳು ಅನುಕ್ರಮವಾಗಿ ಉಲ್ಲೇಖಿತವಾಗುವವೋ ಆ ಯಾವುವೇ ಕಟ್ಟಡಗಳ ಮತ್ತು ಭೂಮಿಗಳ ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯ ಅಥವಾ ಇತರ ಮೌಲ್ಯಮಾಪನದ; ಮತ್ತು

(ii) ಕಟ್ಟಡಗಳು ಮತ್ತು ಭೂಮಿಗಳ ಮೇಲೆ ವಿಧಿಸಿದ ಯಾವುದೇ ತೆರಿಗೆಯ ಉದ್ದೇಶಗಳಿಗಾಗಿ, ಅಂಥ ಪಟ್ಟಿಯು ಸಂಬಂಧಪಡುವ ಸರ್ಕಾರೀ ವರ್ಷದಾದ್ಯಂತ ಅದರ ಮೇಲೆ ವಿಧಿಸಬಹುದಾದಂಥ ಪ್ರತಿಯೊಂದು ತೆರಿಗೆಯ ಮೊಬಲಗಿನ ಬಗ್ಗೆ,

– ನಿರ್ಣಾಯಕ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

**107. ತೆರಿಗೆ ನಿರ್ಧರಣೆ ಪಟ್ಟಿಯ ತಿದ್ದುಪಡಿ.–** (1) ಚೀಫ್ ಆಫೀಸರು ಅಥವಾ ಮುನ್ಸಿಪಲ್ ಕಮಿಷನರ್‌ರು ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ನಮೂದನ್ನು, ಮೋಸ, ಆಕಸ್ಮಿಕ ಅಥವಾ ತಪ್ಪಿನಿಂದಾಗಿ ತೆರಿಗೆ ನಿರ್ಧರಣಾ ಪಟ್ಟಿಯಿಂದ ಬಿಟ್ಟುಬಿಟ್ಟಿದ್ದರೆ ಅಥವಾ ಅದರಲ್ಲಿ ತಪ್ಪಾಗಿ ಮಾಡಿದ್ದರೆ ಅಥವಾ ನಿರ್ಮಾಣ, ಬದಲಾವಣೆ, ಸೇರ್ಪಡೆ ಅಥವಾ ಪುನರ್‌ನಿರ್ಮಾಣವನ್ನು ತೆರಿಗೆ ನಿರ್ಧರಣಾ ಪಟ್ಟಿಯನ್ನು ತಯಾರಿಸಿದ ತರುವಾಯ ಪೂರ್ಣಗೊಳಿಸಲಾಗಿರುವಲ್ಲಿ, ಇಡೀ ಅಥವಾ ಭಾಗಶಃ ನಿರ್ಮಿಸಿದ, ಬದಲಾಯಿಸಿದ, ಸೇರ್ಪಡೆ ಮಾಡಿದ ಅಥವಾ ಪುನರ್‌ನಿರ್ಮಿಸಿದ ಯಾವುವೇ ಅಂಥ ಕಟ್ಟಡಕ್ಕೆ ಸಂಬಂಧಿಸಿದಂತೆ ಯಾವ ನೋಟೀಸಿಗೆ ಜಾರಿಯ ದಿನಾಂಕಕ್ಕೆ ಮುಂಚೆ ಬದಲಾವಣೆಯ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಮಾಡಬೇಕಾಗಿದೆಯೋ, ಆ ಯಾವುದೇ ಅಂಥ ನೋಟೀಸಿನ ಜಾರಿಯ ದಿನಾಂಕದಿಂದ ಒಂದು ತಿಂಗಳಿಗೆ ಕಡಿಮೆಯಿಲ್ಲದ ದಿನಾಂಕದ ನೋಟೀಸನ್ನು, ಆ ಪಟ್ಟಿಯ ಬದಲಾವಣೆಯಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಗೆ ಈ ನೋಟೀಸನ್ನು ಕೊಟ್ಟ ತರುವಾಯ, ಯಾವುದೇ ಕಾಲದಲ್ಲಿ ನಮೂದನ್ನು ಸೇರಿಸುವ ಅಥವಾ ಬದಲಾಯಿಸುವ ಮೂಲಕ ತೆರಿಗೆ ನಿರ್ಧರಣಾ ಪಟ್ಟಿಯನ್ನು ಬದಲಾವಣೆ ಮಾಡಬಹುದು.

(2) ಅಂಥ ನೋಟೀಸಿನಲ್ಲಿ ನಿಗದಿಪಡಿಸಿದ ಕಾಲಕ್ಕೆ ಮುಂಚೆ ಮತ್ತು 106ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೂಲಕ ಉಪಬಂಧಿಸಿದ ರೀತಿಯಲ್ಲಿ, ಅಂಥ ಯಾವುದೇ ಬದಲಾವಣೆಯಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯು ಮಾಡಿದ ಆಕ್ಷೇಪಣೆಯ ಬಗ್ಗೆ, ಅದು ಸದರಿ ಪ್ರಕರಣದ ಮೇರೆಗಿನ ಅರ್ಜಿಯಾಗಿದ್ದರೆ ಹೇಗೋ ಹಾಗೆ ಎಲ್ಲ ರೀತಿಯಲ್ಲಿ ವ್ಯವಹರಿಸತಕ್ಕದ್ದು:

ಪರಂತು, (1)ನೇ ಉಪ–ಪ್ರಕರಣದ ಮೇರೆಗೆ ಬದಲಾವಣೆಯನ್ನು ಮುನ್ಸಿಪಲ್ ಕಮಿಷನರನು ಮಾಡಿರುವಲ್ಲಿ ಕಮಿಷನರನು ಪರಿಷ್ಕರಣಾಧಿಕಾರಿಯಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಮಾಡಿದ ನಮೂದು ಅಥವಾ ಬದಲಾವಣೆಯು, 150ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವ ದಿನದಂದು, ಅಂಥ ನಿರ್ಮಾಣ, ಬದಲಾವಣೆ, ಸೇರ್ಪಡೆ ಅಥವಾ ಪುನರ್ನಿರ್ಮಾಣವು ಪೂರ್ಣಗೊಂಡಿತೋ ಆ ದಿನದಂದು ಅಥವಾ ಯಾವ ದಿನದಂದು ಹೊಸ ನಿರ್ಮಾಣ, ಬದಲಾವಣೆ, ಸೇರ್ಪಡೆ ಅಥವಾ ಪುನರ್ನಿರ್ಮಾಣವನ್ನು ಸ್ವಾಧೀನಪಡಿಸಿಕೊಳ್ಳಲಾಯಿತೋ, ಆ ದಿನದಂದು–ಇವೆರಡರಲ್ಲಿ ಮೊದಲು ಯಾವುದು ಸಂಭವಿಸುವುದೋ ಆ ದಿನದಂದು ನಿರ್ಮಿಸಿದ, ಬದಲಾಯಿಸಿದ, ಸೇರ್ಪಡೆ ಮಾಡಿದ ಅಥವಾ ಪುನರ್ನಿರ್ಮಿಸಿದ ಕಟ್ಟಡದ ಸಂದರ್ಭದಲ್ಲಿ ಅಥವಾ ಇತರ ಸಂದರ್ಭಗಳಲ್ಲಿ ಚಾಲ್ತಿ ಸರ್ಕಾರಿ ವರ್ಷದಲ್ಲಿ ಯಾವ ಅತಿ ಮುಂಚಿತವಾದ ದಿನದಂದು ನಮೂದನ್ನು ಅಥವಾ ಬದಲಾವಣೆಯನ್ನು ಸಮರ್ಥಿಸುವ ಸನ್ನಿವೇಶಗಳು ಇದ್ದವೋ ಆ ದಿನದಂದು ಅದನ್ನು ಮಾಡಲಾಗದಿದ್ದರೆ ಹೇಗೋ ಹಾಗೆ ಅದೇ ಪರಿಣಾಮವನ್ನು ಹೊಂದಿರತಕ್ಕದ್ದು; ಮತ್ತು ಸಂದರ್ಭಾನುಸಾರ ಆ ತೆರಿಗೆ ಅಥವಾ ಹೆಚ್ಚಿಸಿದ ತೆರಿಗೆಯನ್ನು ಅಂಥ ವರ್ಷದಲ್ಲಿ, ಅಂಥ ದಿವಸದ ತರುವಾಯವೂ, ವರ್ಷದ ಉಳಿದ ಭಾಗವು ಇದೇ ವರ್ಷಕ್ಕೆ ಹೊಂದಿರುವ ಪ್ರಮಾಣದಲ್ಲಿ ವಿಧಿಸತಕ್ಕದ್ದು.

**108. ಕಟ್ಟಡವನ್ನು ಕೆಡವಲು ಅಥವಾ ತೆಗೆದುಹಾಕಲು ಮುನ್ಸಿಪಲ್ ಕೌನ್ಸಿಲಿಗೆ ನೋಟೀಸನ್ನು ಕೊಡತಕ್ಕದ್ದು.–** (1) ಕಟ್ಟಡ ಅಥವಾ ಭೂಮಿಗಳ ಅಥವಾ ಅವೆರಡರ ಮೇಲೆ ತೆರಿಗೆ ಸಂದಾಯಕ್ಕೆ ಹೊಣೆಯಾಗಿರುವ ಯಾವುದೇ

ಕಟ್ಟಡ ಅಥವಾ ಕಟ್ಟಡದ ಯಾವುದೇ ಭಾಗವನ್ನು ಮುನ್ಸಿಪಲ್ ಕೌನ್ಸಿಲಿನ ಆದೇಶದಿಂದಲ್ಲದೆ ಅನ್ಯಥಾ ಕೆಡವಿದಾಗ ಅಥವಾ ತೆಗೆದುಹಾಕಿದಾಗ ಸದರಿ ತೆರಿಗೆಯ ಸಂದಾಯಕ್ಕೆ ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಯು ಅದರ ಬಗ್ಗೆ ಬರಹದಲ್ಲಿ ನೋಟೀಸನ್ನು ಮುನ್ಸಿಪಲ್ ಕೌನ್ಸಿಲಿಗೆ ಕೊಡತಕ್ಕದ್ದು.

(2) ಅಂಥ ನೋಟೀಸನ್ನು ಕೊಡುವವರೆಗೆ, ಹಿಂದೆ ಹೇಳಿದ ವ್ಯಕ್ತಿಯು ಅದರ ಅಥವಾ ಅದರ ಯಾವುದೇ ಭಾಗವನ್ನು ಕೆಡವಿರದಿದ್ದರೆ ಅಥವಾ ತೆಗೆದುಹಾಕಿರದಿದ್ದರೆ ಅಂಥ ಕಟ್ಟಡಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಲು ಹೊಣೆಯಾಗದಿದ್ದಿರುವ ಹಾಗೆ ಅಂಥ ಪ್ರತಿಯೊಂದು ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರುವುದು ಮುಂದುವರಿಯತಕ್ಕದ್ದು.

(3) ಈ ಪ್ರಕರಣದಲ್ಲಿರುವುದು ಯಾವುದೂ ಬಿದ್ದು ಹೋಗಿರುವ ಅಥವಾ ಸುಟ್ಟು ಹೋದಂಥ ಕಟ್ಟಡದ ಅಥವಾ ಕಟ್ಟಡದ ಭಾಗಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದಲ್ಲ.

**109. ಹೊಸ ತೆರಿಗೆ ನಿರ್ಧಾರಣೆ ಪಟ್ಟಿಯನ್ನು ಪ್ರತಿ ವರ್ಷವೂ ತಯಾರಿಸಬೇಕಾಗಿಲ್ಲ.–** (1) ತೆರಿಗೆ ನಿರ್ಧರಣೆ ಪಟ್ಟಿಯ ಪ್ರತಿಯೊಂದು ಭಾಗವನ್ನು ಪ್ರತಿನಾಲ್ಕು ವರ್ಷಗಳಿಗೆ ಒಂದು ಬಾರಿಗೆ ಕಡಿಮೆಯಿಲ್ಲದಂತೆ ಸಂಪೂರ್ಣವಾಗಿ ಪರಿಷ್ಕರಿಸತಕ್ಕದ್ದು, ಅದರ ಹೊಸ ತೆರಿಗೆ ನಿರ್ಧರಣಾ ಪಟ್ಟಿಯನ್ನು ಪ್ರತಿವರ್ಷವೂ ತಯಾರಿಸುವುದು ಅವಶ್ಯವಿರತಕ್ಕದ್ದಲ್ಲ.

(2) 105, 106 ಮತ್ತು 107ನೇ ಪ್ರಕರಣದ ಉಪಬಂಧಗಳು, ಸರ್ಕಾರಿ ವರ್ಷದಲ್ಲಿ ಪ್ರಾರಂಭದಲ್ಲಿ ಹೊಸ ತೆರಿಗೆ ನಿರ್ಧಾರಣೆ ಪಟ್ಟಿಯನ್ನು ಪೂರ್ಣಗೊಳಿಸಿದ್ದರೆ ಹೇಗೋ ಹಾಗೆ ಪ್ರತಿವರ್ಷವೂ ಅನ್ವಯವಾಗತಕ್ಕದ್ದು.

(3) ಯಾವುದೇ ವರ್ಷದಲ್ಲಿ ಹೊಸ ತೆರಿಗೆ ನಿರ್ಧಾರಣೆ ಪಟ್ಟಿಯನ್ನು ತಯಾರಿಸಿರುವಲ್ಲಿ ಅಥವಾ ಪಟ್ಟಿಯನ್ನು ಪರಿಷ್ಕರಿಸಿರುವಲ್ಲಿ, ಅಥವಾ ನಿಕಟಪೂರ್ವ ವರ್ಷದ ಪಟ್ಟಿಯಲ್ಲಿ ಒಳಗೊಂಡ ಮೌಲ್ಯಮಾಪನ ಮತ್ತು ತೆರಿಗೆ ನಿರ್ಧರಣೆಯನ್ನು ಬದಲಾವಣೆ ಸಹಿತ ಅಥವಾ ಇಲ್ಲವೆ, ಅಂಗೀಕರಿಸಿರುವಲ್ಲಿ, ಅಂಥ ಹೊಸ, ಪರಿಷ್ಕೃತ ಅಥವಾ ಅಂಗೀಕೃತ ತೆರಿಗೆ ನಿರ್ಧಾರಣ ಪಟ್ಟಿಯನ್ನು, ಪಟ್ಟಿಯು ಸಂಬಂಧಪಡುವಂಥ ಸರ್ಕಾರೀ ವರ್ಷದ ಜುಲೈ ಮೂವತ್ತೊಂದನೇ ದಿನಕ್ಕೆ ಮೀರಿದ ಯಾವುದೇ ಕಾಲದಲ್ಲಿ 106ನೇ ಪ್ರಕರಣದ ಮೂಲಕ ಉಪಬಂಧಿಸಿದ ರೀತಿಯಲ್ಲಿ ಅಧಿಪ್ರಮಾಣಗೊಳಿಸತಕ್ಕದ್ದು.

(4) ಹಿಂದಿನ ಉಪ–ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ತೆರಿಗೆ ನಿರ್ಧಾರಣೆ ಪಟ್ಟಿಯ ಅಥವಾ ಅದರ ಭಾಗವನ್ನು ಪರಿಷ್ಕರಿಸುವವರೆಗೆ ಯಾವುದೇ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ತಯಾರಿಸಿದ ಮತ್ತು ಅಧಿಪ್ರಮಾಣಗೊಳಿಸಿದ ತೆರಿಗೆ ನಿರ್ಧರಣೆ ಪಟ್ಟಿಯು ಜಾರಿಯಲ್ಲಿರುವ ಅಧಿಪ್ರಮಾಣಿತ ತೆರಿಗೆ ನಿರ್ಧಾರಣಾ ಪಟ್ಟಿಯಾಗಿ ಮುಂದುವರಿಯತಕ್ಕದ್ದು.

**110. ಮುಖ್ಯವಾಗಿ ಯಾರಿಂದ ತೆರಿಗೆಯು ವಸೂಲೀಯವಾಗತಕ್ಕದ್ದು.–** ಕಟ್ಟಡಗಳು ಅಥವಾ ಭೂಮಿಗಳು ಅಥವಾ ಅವೆರಡರ ಮೇಲೆ ತೆರಿಗೆಯ ರೂಪದಲ್ಲಿ ವಿಧಿಸಿದ ಪ್ರತಿಯೊಂದು ತೆರಿಗೆಯನ್ನು, ಅವನು ಸದರಿ ತೆರಿಗೆಗಳನ್ನು ಯಾವ ಸ್ವತ್ತಿನ ಮೇಲೆ ನಿರ್ಧರಿಸಲಾಗಿದೆಯೋ ಆ ಸ್ವತ್ತಿನ ವಾಸ್ತವ ಅಧಿಭೋಗದಾರನಿಂದ, ಅವನು ಸರ್ಕಾರ ಅಥವಾ ಮುನ್ಸಿಪಲ್ ಕೌನ್ಸಿಲಿನಿಂದ ಕಟ್ಟಡ ಅಥವಾ ಇತರ ಬಾಡಿಗೆಯ ಮೇಲೆ ಅನ್ಯಥಾ ಸದರಿ ತೆರಿಗೆಯು ಕೆಳಕಂಡಂತೆ ಮುಖ್ಯವಾಗಿ ವಸೂಲೀಯವಾಗತಕ್ಕದ್ದು, ಎಂದರೆ:–

(ಕ) ಸ್ವತ್ತನ್ನು ಬಾಡಿಗೆಗೆ ಕೊಟ್ಟಿದ್ದರೆ ಬಾಡಿಗೆ ಕೊಟ್ಟವನಿಂದ;

(ಖ) ಸ್ವತ್ತನ್ನು ಒಳಬಾಡಿಗೆಗೆ ಕೊಟ್ಟಿದ್ದರೆ ವರಿಷ್ಠ ಬಾಡಿಗೆಗೆ ಕೊಟ್ಟವನಿಂದ;

(ಗ) ಸ್ವತ್ತನ್ನು ಬಾಡಿಗೆಗೆ ಕೊಟ್ಟಿಲ್ಲದಿದ್ದರೆ, ಅದನ್ನು ಬಾಡಿಗೆಗೆ ಕೊಡುವ ಹಕ್ಕು ಯಾರಲ್ಲಿ ನಿಹಿತವಾಗಿದೆಯೋ ಆ ವ್ಯಕ್ತಿಯಿಂದ:

ಪರಂತು, ಅಂಥ ತೆರಿಗೆಯ ಬಗ್ಗೆ ಬಾಕಿಯಾದ ಯಾವುದೇ ಮೊತ್ತವನ್ನು, ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಯಿಂದ ವಸೂಲು ಮಾಡಲು ಆಗದಿದ್ದರೆ, ಯಾವ ಕಟ್ಟಡಗಳ ಅಥವಾ ಭೂಮಿಗಳ ಭಾಗಕ್ಕೆ ಸಂಬಂಧಿಸಿದಂತೆ ಅದು ಬಾಕಿಯಾಗಿರುವುದೋ, ಆ ಯಾವುದೇ ಕಟ್ಟಡಗಳ ಅಥವಾ ಭೂಮಿಗಳ ಯಾವುದೇ ಭಾಗದ ಅಧಿಭೋಗದಾರನಿಂದ, ಸದರಿ ಪೂರಾ ಕಟ್ಟಡಗಳ ಅಥವಾ ಭೂಮಿಗಳಿಗೆ ಸಂಬಂಧಿಸಿದಂತೆ ಹಾಗೆ ಸಂದಾಯವಾಗಬೇಕಾದ ಬಾಡಿಗೆಯ ಒಟ್ಟು ಮೊಬಲಗಿಗೆ, ಅಥವಾ ಅಧಿಪ್ರಮಾಣಿತ ತೆರಿಗೆ ನಿರ್ಧಾರಣಾ ಪಟ್ಟಿಯಲ್ಲಿ ಹೇಳಿದ ಅದರ ತೆರಿಗೆಗೆ ಗುರಿಯಾಗುವ ಮೌಲ್ಯದ ಒಟ್ಟು ಮೊಬಲಗಿಗೆ ಯಾವುದಾದರೂ ಇದ್ದರೆ ಅವೆರಡೂ ಮೊಬಲುಗುಗಳಲ್ಲಿ ಯಾವುದು ಹೆಚ್ಚಿನದೋ ಆ ಮೊಬಲಗಿಗೆ ಯಾವ ಪ್ರಮಾಣದಲ್ಲಿ ಅಂಥ ಅಧಿಭೋಗದಾರನು ವಾರ್ಷಿಕವಾಗಿ ಸಂದಾಯ ಮಾಡಬೇಕಾದ ಬಾಡಿಗೆಯು ಇರುವುದೋ ಅದೇ ಪ್ರಮಾಣವನ್ನು ಹೊಂದುವಂಥ ಬಾಕಿಯಾಗಿರುವ ಪೂರ್ಣ ಮೊಬಲಗಿಗೆ ಹೊಂದುವ ಹಾಗೆ ಮೊತ್ತದ ಅಂಥ ಭಾಗವನ್ನು ವಸೂಲ್ಮಾಡಬಹುದು:

ಮತ್ತು ಪರಂತು, ಈ ಪ್ರಕರಣದ ಮೇರೆಗೆ ಮುಖ್ಯವಾಗಿ ಹೊಣೆಯಾಗಿಲ್ಲದ ಯಾರೇ ಅಧಿಭೋಗದಾರನು ಸಂದಾಯ ಮಾಡಿದ ಅಥವಾ ಅವನಿಂದ ವಸೂಲ್ಮಾಡಿದ ಯಾವುದೇ ಮೊತ್ತಕ್ಕೆ, ಸಂದಾಯಕ್ಕೆ ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಯಿಂದ ತುಂಬಿಕೊಳ್ಳಲು ಅವನು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅವನಿಗೆ ಅವಕಾಶವಿರಬಹುದಾದ ಇತರ ಪರಿಹಾರೋಪಾಯಗಳನ್ನು ಕೈಗೊಳ್ಳುವುದರ ಜೊತೆಗೆ ಹಾಗೆ ವಸೂಲ್ಮಾಡಿದ ಮೊಬಲಗನ್ನು ಅಂಥ ವ್ಯಕ್ತಿಗೆ ಅವನಿಂದ ಕಾಲಕಾಲಕ್ಕೆ ಬಾಕಿಯಾಗುವ ಮೊಬಲಗಿನಿಂದ ಮುರಿದುಕೊಳ್ಳಬಹುದು.

(2) ಭಾಗಗಳಲ್ಲಿ ಅಥವಾ ಫ್ಲಾಟ್‌ಗಳಲ್ಲಿ ಅಥವಾ ಕೊಠಡಿಗಳಲ್ಲಿ ಪ್ರತ್ಯೇಕವಾಗಿ ಒಡೆತನವನ್ನು ಹೊಂದಿರುವ ಅಥವಾ ಹೊಂದಿರುವುದಾಗಿ ತಾತ್ಪರ್ಯವಾಗುವಂಥ ಯಾವುದೇ ಕಟ್ಟಡದ ಹಲವಾರು ಒಡೆಯರ, ಅಂಥ ಒಡೆತನದ ಅವಧಿಯಲ್ಲಿ ಸಂದಾಯವಾಗಬೇಕಾದ ಕಟ್ಟಡದ ಮೇಲಿನ ದರದ ಅಥವಾ ಅದರ ಯಾವುದೇ ಕಂತಿನ ಸಂದಾಯಕ್ಕಾಗಿ ಹೊಣೆಗಾರಿಕೆಯು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿರತಕ್ಕದ್ದು.

**110-ಕ. ಸ್ವತ್ತು ತೆರಿಗೆ ಪ್ರಮಾಣಪತ್ರ.–** ಕಟ್ಟಡಕ್ಕೆ ಹಕ್ಕುಳ್ಳ ವ್ಯಕ್ತಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಫೀಜಿನ ಸಂದಾಯದ ಮೇಲೆ ಮತ್ತು ಅಂಥ ವಿವರಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ಕೊಡತಕ್ಕದ್ದು.

**111. ಕಟ್ಟಡಗಳು ಅಥವಾ ಭೂಮಿಗಳ ಮೇಲೆ ತೆರಿಗೆಗಳ ಸಂದಾಯಕ್ಕೆ ಮುಖ್ಯವಾಗಿ ಹೊಣೆಯಾಗಿರುವ ವ್ಯಕ್ತಿಗಳಿಂದ ಸ್ವಾಮ್ಯದ ಎಲ್ಲಾ ವರ್ಗಾವಣೆಗಳ ಬಗ್ಗೆ ಮುನ್ಸಿಪಲ್ ಕೌನ್ಸಿಲಿಗೆ ನೋಟೀಸನ್ನು ಕೊಡತಕ್ಕದ್ದು.–** (1) ಕಟ್ಟಡಗಳ ಅಥವಾ ಭೂಮಿಗಳ ಅಥವಾ ಅವೆರಡರ ಮೇಲೆ ದರದ ರೂಪದಲ್ಲಿ ಯಾವುದೇ ಆವರಣದ ಮೇಲೆ ವಿಧಿಸಿದ ತೆರಿಗೆಯ ಸಂದಾಯಕ್ಕೆ ಮುಖ್ಯವಾಗಿ ಹೊಣೆಯಾಗಿರುವ ಯಾರೇ ವ್ಯಕ್ತಿಯ ಸ್ವಾಮ್ಯವನ್ನು ವರ್ಗಾವಣೆ ಮಾಡಿದಾಗಲೆಲ್ಲಾ, ಯಾವ ವ್ಯಕ್ತಿಯ ಸ್ವಾಮ್ಯವನ್ನು ವರ್ಗಾಯಿಸಲಾಗಿದೆಯೋ ಆ ವ್ಯಕ್ತಿ ಮತ್ತು ಯಾವ ವ್ಯಕ್ತಿಗೆ ಅದನ್ನು ವರ್ಗಾಯಿಸಲಾಗಿದೆಯೋ, ಆ ವ್ಯಕ್ತಿಯು ವರ್ಗಾವಣೆ ಲಿಖಿತವನ್ನು ಬರೆದುಕೊಟ್ಟ ತರುವಾಯ ಅಥವಾ ಅದನ್ನು ನೋಂದಾಯಿಸಿದ್ದರೆ, ನೋಂದಣಿಯ ತರುವಾಯ ಅಥವಾ ಯಾವುದೇ

ಲಿಖಿತವನ್ನು ಬರೆದು ಕೊಟ್ಟಿರದಿದ್ದರೆ, ವರ್ಗಾವಣೆಯನ್ನು ಮಾಡಿದ ತರುವಾಯ ಮೂರು ತಿಂಗಳೊಳಗಾಗಿ, ಅಂಥ ವರ್ಗಾವಣೆಯ ನೋಟೀಸನ್ನು ಬರಹದಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ಕೊಡತಕ್ಕದ್ದು.

(2) ಹಿಂದೆ ಹೇಳಿದಂಥ ಮುಖ್ಯವಾಗಿ ಹೊಣೆಯಾಗಿರುವ ಯಾರೇ ವ್ಯಕ್ತಿಯು ಮೃತನಾದ ಸಂದರ್ಭದಲ್ಲಿ ಮೃತನ ಸ್ವಾಮ್ಯವು ಯಾರಿಗೆ ಪ್ರಾಪ್ತವಾಗತಕ್ಕದ್ದೋ ಆ ವ್ಯಕ್ತಿಯು ಮೃತನ ಮರಣದ ದಿನಾಂಕದಿಂದ ಆರು ತಿಂಗಳೊಳಗಾಗಿ ಅಂಥ ಪ್ರಾಪ್ತಿಯ ನೋಟೀಸನ್ನು ಮುನ್ಸಿಪಲ್ ಕೌನ್ಸಿಲಿಗೆ ಕೊಡತಕ್ಕದ್ದು.

**112. ನೋಟೀಸಿನ ನಮೂನೆ.–** (1) 111ನೇ ಪ್ರಕರಣದ ಮೇರೆಗೆ ಕೊಡಬೇಕಾಗಿರುವ ನೋಟೀಸು, ಸಂದರ್ಭಾನುಸಾರ 11ನೇ ಪ್ರಕರಣದ ಅಥವಾ VIIIನೇ ಅನುಸೂಚಿ ಅಥವಾ IXನೇ ಅನುಸೂಚಿಯ ನಮೂನೆಯಲ್ಲಿ ಇರತಕ್ಕದ್ದು ಮತ್ತು ಸದರಿ ನಮೂನೆಯ ಮೂಲಕ ಅಗತ್ಯಪಡಿಸಿದ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ಮತ್ತು ಸರಿಯಾಗಿ ನಿರೂಪಿಸತಕ್ಕದ್ದು.

(2) ಯಾವುದೇ ಅಂಥ ನೋಟೀಸನ್ನು ಸ್ವೀಕರಿಸಿದ ಮೇಲೆ ಮುನ್ಸಿಪಲ್ ಕೌನ್ಸಿಲು ಅದು ಅವಶ್ಯವೆಂದು ಯೋಚಿಸಿದ್ದರೆ, ವರ್ಗಾವಣೆ ಅಥವಾ ಪ್ರಾಪ್ತಿಯ ಸಾಕ್ಷ್ಯವಾಗಿರುವ ಯಾವುವೇ ದಸ್ತಾವೇಜುಗಳನ್ನು ಹಾಜರುಪಡಿಸಲು ಅಗತ್ಯಪಡಿಸಬಹುದು.

**113. ಪೌರಸಭೆಯ ರಿಜಿಸ್ಟರುಗಳಲ್ಲಿ ವರ್ಗಾವಣೆ ಪಡೆದವನ ಹೆಸರನ್ನು ಪ್ರತ್ಯಾಯೋಜಿಸತಕ್ಕದ್ದು.–** ಅಂಥ ವರ್ಗಾವಣೆಯ ಅಂಥ ನೋಟೀಸಿನ ಮೂಲಕವಾಗಿಯೇ ಆಗಲಿ ಅಥವಾ ಅನ್ಯಥಾವಾಗಿಯಾಗಲಿ ಮುನ್ಸಿಪಲ್ ಕೌನ್ಸಿಲಿನ ಗಮನಕ್ಕೆ ಬಂದಾಗಲೆಲ್ಲಾ ಮತ್ತು ಅವಶ್ಯವಾಗಬಹುದಾದಂಥ ವಿಚಾರಣೆಯ ತರುವಾಯ ವರ್ಗಾವಣೆ ಪಡೆದವನ ಹೆಸರನ್ನು ಮುಖ್ಯವಾಗಿ ಹೊಣೆಗಾರನಾದ ವ್ಯಕ್ತಿಯ ಹೆಸರಿನ ಬದಲಾಗಿ ಪೌರ ಸಭೆಯ ರಿಜಿಸ್ಟರುಗಳಲ್ಲಿ ಪ್ರತ್ಯಾಯೋಜಿಸತಕ್ಕದ್ದು.

**114. ವರ್ಗಾವಣೆಯ ನೋಟೀಸು ಇಲ್ಲದಿರುವಲ್ಲಿ ಕಟ್ಟಡಗಳ ಅಥವಾ ಭೂಮಿಗಳ ಮೇಲಿನ ತೆರಿಗೆಗಳ ಸಂದಾಯಕ್ಕೆ ಹೊಣೆಗಾರಿಕೆಯು ಮುಂದುವರಿಯುವುದು.–** (1) ಕಟ್ಟಡ ಅಥವಾ ಭೂಮಿಗಳ ಮೇಲೆ ತೆರಿಗೆಯ ರೂಪದಲ್ಲಿ ಯಾವುದೇ ಆವರಣದ ಮೇಲೆ ವಿಧಿಸಿದ ಸಂದಾಯಕ್ಕೆ ಮುಖ್ಯವಾಗಿ ಹೊಣೆಗಾರನಾದ ಹಿಂದೆ ಹೇಳಿದಂತೆ ಮುನ್ಸಿಪಲ್ ಕೌನ್ಸಿಲಿಗೆ ಅಂಥ ವರ್ಗಾವಣೆಯ ನೋಟೀಸನ್ನು ಕೊಡದೆ, ಅಂಥ ಆವರಣಗಳಿಗೆ ಅಥವಾ ಅದರ ಮೇಲೆ ತನ್ನ ಸ್ವಾಮ್ಯವನ್ನು ವರ್ಗಾವಣೆ ಮಾಡುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಉಪೇಕ್ಷೆಯ ಮೂಲಕ ಅವನು ಗುರಿಯಾಗುವಂಥ ಇತರ ಯಾವುದೇ ಹೊಣೆಗಾರಿಕೆಯ ಜೊತೆಗೆ, ಅಂಥ ನೋಟೀಸನ್ನು ಅವನು ಕೊಡುವವರೆಗೆ ಅಥವಾ ಮುನ್ಸಿಪಲ್ ಕೌನ್ಸಿಲಿನ ರಿಜಿಸ್ಟರುಗಳಲ್ಲಿ ವರ್ಗಾವಣೆಯನ್ನು ಮಾಡುವವರೆಗೆ ಅಂಥ ಆವರಣಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಸಂದಾಯ ಮಾಡಬೇಕಾದ ಎಲ್ಲ ತೆರಿಗೆಗಳ ಸಂದಾಯಕ್ಕೆ ಹೊಣೆಯಾಗಿರುವುದು ಮುಂದುವರಿಯತಕ್ಕದ್ದು.

(2) ಈ ಪ್ರಕರಣದಲ್ಲಿರುವುದಾವುದೂ, ಸದರಿ ತೆರಿಗೆಗಳಿಗೆ ವರ್ಗಾವಣೆ ಪಡೆದವನ ಹೊಣೆಗಾರಿಕೆಯನ್ನು ಬಾಧಿಸುವುದಾಗಿ ಅಥವಾ ಅದರ ಮೇಲೆ ಬಾಕಿಯಿರುವ ತೆರಿಗೆಗಳನ್ನು ವಸೂಲ್ಮಾಡುವುದಕ್ಕಾಗಿ 151ನೇ ಪ್ರಕರಣದ ಮೂಲಕ ಪ್ರದತ್ತವಾದ ಆವರಣದ ಮೇಲೆ ಮುನ್ಸಿಪಲ್ ಕೌನ್ಸಿಲಿನ ಮುಂಚಿನ ಕ್ಲೇಮನ್ನು ಬಾಧಿಸುವುದಾಗಿ ಭಾವಿಸತಕ್ಕದ್ದಲ್ಲ.

**115. ಖಾಲಿ ಬಿದ್ದಿರುವವುಗಳ ಸಂದರ್ಭದಲ್ಲಿ ತೆರಿಗೆಯ ಮಾಫಿಯು ಯಾವಾಗ ಅನಿವಾರ್ಯ.–** (1) ಯಾವ ಕಟ್ಟಡ ಅಥವಾ ಭೂಮಿಯನ್ನು, ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಮೇಲೆ ಆಧಾರಿತವಾದ ತೆರಿಗೆಗೆ ಗುರಿಯಾಗಿರುವ ಮತ್ತು ವಾರ್ಷಿಕವಾಗಿ ಸಂದಾಯ ಮಾಡಬೇಕಾದ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ ವಿಶೇಷ ನೈರ್ಮಲ್ಯ ಉಪಕರವನ್ನು ವಾರ್ಷಿಕವಾಗಿ ಅಥವಾ ಕಂತುಗಳ ಮೂಲಕ ಸಂದಾಯ

ಮಾಡಬೇಕಾಗಿದೆಯೋ, ಆ ಯಾವುದೇ ಕಟ್ಟಡ ಅಥವಾ ಭೂಮಿಯು ಖಾಲಿ ಉಳಿದಿರುವಲ್ಲಿ, ಮತ್ತು ಯಾವ ವರ್ಷಕ್ಕೆ ವರ್ಷದಾದ್ಯಂತ ಅಥವಾ ವರ್ಷದ ಭಾಗಕ್ಕೆ ತೆರಿಗೆಯನ್ನು ವಿಧಿಸಬಹುದಾಗಿದೆಯೋ ಆ ವರ್ಷದಾದ್ಯಂತ ಅಥವಾ ಭಾಗಕ್ಕೆ ಅಥವಾ ಯಾವ ಅವಧಿಗೆ ಸಂಬಂಧಿಸಿದಂತೆ, ಅಂಥ ಯಾವುದೇ ಕಂತನ್ನು ಸಂದಾಯ ಮಾಡಬೇಕಾಗಿದೆಯೋ, ಆ ಅವಧಿಯ ಆದ್ಯಂತ, ಬಾಡಿಗೆಯು ಲಭಿಸದೆ ಇರುವಲ್ಲಿ, ಮುನ್ಸಿಪಲ್ ಕೌನ್ಸಿಲ್ಲು, ಸಂದರ್ಭಾನುಸಾರ ತೆರಿಗೆಯ ಅಥವಾ ಉಪಕರದ ಅಥವಾ ಉಪಕರದ ಕಂತಿನ ಮೊಬಲಗಿನ ಅರ್ಧಕ್ಕಿಂತ ಹೆಚ್ಚಿಲ್ಲದಷ್ಟನ್ನು ಮಾಫಿ ಅಥವಾ ಮರುಪಾವತಿ ಮಾಡತಕ್ಕದ್ದು.

(2) ಹಿಂದೆ ಹೇಳಿದಂತೆ ಯಾವುದೇ ಅಂಥ ಕಟ್ಟಡ ಅಥವಾ ಭೂಮಿಯು,–

(ಕ) ಖಾಲಿಯಾಗಿದ್ದಾಗ ಮತ್ತು ತೊಂಬತ್ತು ನಿರಂತರ ದಿವಸಗಳಿಗೆ ಕಡಿಮೆಯಿಲ್ಲದ ಯಾವುದೇ ಅವಧಿಗೆ ಬಾಡಿಗೆ ಲಭಿಸದಿದ್ದಾಗ; ಅಥವಾ

(ಖ) ಪ್ರತ್ಯೇಕ ವಾಸದ ಮನೆಗಳನ್ನು ಒಳಗೊಂಡಿದ್ದು ಅವುಗಳಲ್ಲಿ ಒಂದು ಅಥವಾ ಹೆಚ್ಚು ಖಾಲಿಯಾಗಿದ್ದಾಗ ಅಥವಾ ಖಾಲಿಯಾಗಿರುವಾಗ ಮತ್ತು ಹಿಂದೆ ಹೇಳಿದಂಥ ಯಾವುದೇ ಅವಧಿಗಾಗಿ ಬಾಡಿಗೆ ಲಭಿಸದಿದ್ದಾಗ; ಅಥವಾ

(ಗ) ಸಂಪೂರ್ಣವಾಗಿ ಅಥವಾ ಹೆಚ್ಚಿನ ಭಾಗವನ್ನು ಕೆಡವಿ ಹಾಕಿದಾಗ ಅಥವಾ ಬೆಂಕಿಯಿಂದ ನಾಶಗೊಂಡಿರುವಾಗ ಅಥವಾ ಅನ್ಯಥಾ ಮೌಲ್ಯವನ್ನು ಕಳೆದುಕೊಂಡಿರುವಾಗ,–

ಮುನ್ಸಿಪಲ್ ಕೌನ್ಸಿಲು, ತಾನು, ನ್ಯಾಯ ಸಮ್ಮತವೆಂದು ಯೋಚಿಸಬಹುದಾದಂತೆ ತೆರಿಗೆ ಅಥವಾ ಉಪಕರ ಅಥವಾ ಕಂತಿನ ಅಂಥ ಭಾಗವು ಯಾವುದಾದರೂ ಇದ್ದರೆ ಅದನ್ನು ಮಾಫಿ ಅಥವಾ ಮರುಪಾವತಿ ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಅಂಥ ಮಾಫಿಯನ್ನು, ಕಟ್ಟಡ ಅಥವಾ ಭೂಮಿಯು, ಖಾಲಿಯಿರುವ ಬಗ್ಗೆ ಮತ್ತು ಬಾಡಿಗೆ ಲಭಿಸದಿರುವ ಸಂಗತಿಯ ಬಗ್ಗೆ ಬರಹದಲ್ಲಿನ ನೋಟೀಸನ್ನು ಮುನ್ಸಿಪಲ್ ಕೌನ್ಸಿಲಿಗೆ ಕೊಟ್ಟ ಹೊರತು, ಮಂಜೂರ್ಮಾಡತಕ್ಕದ್ದಲ್ಲ ಮತ್ತು ಅಂಥ ಯಾವುದೇ ಮಾಫಿ ಅಥವಾ ಮರುಪಾವತಿಯು ಅಂಥ ನೋಟೀಸನ್ನು ವಶಾವಣೆ ಮಾಡಿದ ದಿವಸಕ್ಕೆ ಮುಂಚಿನ ಯಾವುದೇ ಅವಧಿಗಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ;

ಮತ್ತೂ ಪರಂತು, ಯಾವುದೇ ಭೂಮಿ, ಕಟ್ಟಡ ಅಥವಾ ವಾಸದ ಮನೆಯನ್ನು ವಿಹಾರ ಸ್ಥಳ ಅಥವಾ ಪಟ್ಟಣ ಅಥವಾ ಹಳ್ಳಿ ಮನೆಯಾಗಿ ಇಟ್ಟುಕೊಂಡಿದ್ದರೆ ಖಾಲಿಯಿರುವುದಾಗಿ ಭಾವಿಸತಕ್ಕದ್ದಲ್ಲ ಅಥವಾ ಅವನು ವಾಸ್ತವಿಕವಾಗಿ ಅಧಿಭೋಗದಲ್ಲಿರಲಿ ಅಥವಾ ಇಲ್ಲದಿರಲಿ ಅದರ ಅಧಿಭೋಗದ ನಿರಂತರ ಹಕ್ಕನ್ನು ಹೊಂದಿರುವ ಬಾಡಿಗೆದಾರನಿಗೆ ಬಾಡಿಗೆಗೆ ಕೊಟ್ಟಿದ್ದರೆ, ಬಾಡಿಗೆ ಲಭಿಸದಿರುವುದಾಗಿ ಭಾವಿಸತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ಪರಿಹಾರಗಳನ್ನು ಕ್ಲೇಮು ಮಾಡಲು ಯಾರೇ ವ್ಯಕ್ತಿಯನ್ನು ಹಕ್ಕುಳ್ಳವನನ್ನಾಗಿಸುವ ಸಂಗತಿಗಳನ್ನು ರುಜುವಾತುಪಡಿಸುವ ಹೊಣೆಯು ಅವನ ಮೇಲಿರತಕ್ಕದ್ದು.

(116 ರಿಂದ 122.– * * * * )

(123 ರಿಂದ 127.– * * * * )

**128. ದಾರಿ ಸುಂಕಗಳ ಕೋಷ್ಟಕಗಳು.–** ಈ ಅಧಿನಿಯಮದ ಮೇರೆಗೆ ಯಾವುದೇ ದಾರಿ ಸುಂಕವನ್ನು ವಿಧಿಸುವ ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲು ಅಂಥ ದಾರಿ ಸುಂಕವನ್ನು ಸಂಗ್ರಹಿಸಬೇಕಾದ ಪ್ರತಿಯೊಂದು ಸ್ಥಳದಲ್ಲಿ, ಯಾವ ನಿಬಂಧನೆಗಳು ಯಾವುದಾದರೂ ಇದ್ದರೆ ಅವುಗಳ ಮೇಲೆ, ಅಂಥ ದಾರಿ ಸುಂಕಗಳನ್ನು ಸಂದಾಯ ಮಾಡುವ ಹೊಣೆಗಾರಿಕೆಯನ್ನು ನಿಯತಕಾಲಿಕ ಸಂದಾಯಗಳ ಮೂಲಕ ರಾಜಿ ಮಾಡಿಕೊಳ್ಳಬಹುದಾಗಿದೆಯೋ ಆ ಯಾವುದೇ ನಿಬಂಧನೆಗಳನ್ನೊಳಗೊಂಡು ಎಲ್ಲ ಸಂದರ್ಭಗಳಲ್ಲಿ ಸಂಗ್ರಹಿಸಬಹುದಾದ ಮೊಬಲಗನ್ನು ತೋರಿಸುವ ಕೋಷ್ಟಕವನ್ನು ಇಡುವಂತೆ ಮಾಡತಕ್ಕದ್ದು ಮತ್ತು ದಾರಿ ಸುಂಕದ ಸಂದಾಯಕ್ಕೆ ತಗಾದೆ ಮಾಡಲು ಅಧಿಕೃತವಾದ ಪ್ರತಿಯೊಬ್ಬ ವ್ಯಕ್ತಿಯನ್ನು ಅಂಥ ತಗಾದೆಯನ್ನು ಯಾರಿಗೆ ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯ ಕೋರಿಕೆಯ ಮೇಲೆ ಅಂಥ ಕೋಷ್ಟಕವನ್ನು ತೋರಿಸುವುದು ಕರ್ತವ್ಯವಾಗಿರತಕ್ಕದ್ದು.

**129. ದಾರಿ ಸುಂಕವನ್ನು ಸಂದಾಯ ಮಾಡದಿರುವುದಕ್ಕೆ ವಾಹನವನ್ನು ಅಭಿಗ್ರಹಿಸಲು ಅಧಿಕಾರ.–** (1) ಮುನ್ಸಿಪಲ್ ಕೌನ್ಸಿಲು ಸಂಗ್ರಹಿಸಬಹುದಾದ ಯಾವುದೇ ದಾರಿ ಸುಂಕವನ್ನು ತಗಾದೆ ಮಾಡಿದಾಗ ಸಂದಾಯ ಮಾಡದಿರುವ ಸಂದರ್ಭದಲ್ಲಿ ಅಂಥ ದಾರಿ ಸುಂಕವನ್ನು ಸಂಗ್ರಹ ಮಾಡಲು ನೇಮಕಗೊಂಡ ವ್ಯಕ್ತಿಯು ಯಾವ ವಾಹನದ ಮೇಲೆ ದಾರಿ ಸುಂಕವನ್ನು ವಿಧಿಸಬಹುದಾಗಿದೆಯೋ ಆ ಯಾವುದೇ ವಾಹನವನ್ನು ಅಥವಾ ತಗಾದೆಯನ್ನು ಪೂರೈಸಲು ಸಾಕಷ್ಟು ಮೌಲ್ಯದ ಅದರ ಹೊರೆಯ ಯಾವುದೇ ಭಾಗವನ್ನು ಅಭಿಗ್ರಹಿಸಬಹುದು ಮತ್ತು ಅದನ್ನು ತಡೆಹಿಡಿದಿರಿಸಬಹುದು. ಅನಂತರ ಅವನು ಅಭಿಗ್ರಹಿಸಿದ ವಾಹನದ ಸ್ವಾಧೀನತೆಯನ್ನು ಹೊಂದಿರುವ ವ್ಯಕ್ತಿಗೆ, XIIನೇ ಅನುಸೂಚಿ ನಮೂನೆಯಲ್ಲಿ ಬರಹದಲ್ಲಿನ ನೋಟೀಸಿನೊಂದಿಗೆ ಸ್ವತ್ತಿನ ಪಟ್ಟಿಯನ್ನು ಕೊಡತಕ್ಕದ್ದು.

( (2) * * * * )

(130 ಮತ್ತು 131 * * * * )

**132. ದಾರಿ ಸುಂಕಗಳ ಗುತ್ತಿಗೆ.–** (1) ಬಹಿರಂಗ ಹರಾಜು ಅಥವಾ ಖಾಸಗಿ ಕರಾರಿನ ಮೂಲಕ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಯಾವುದೇ ದಾರಿ ಸುಂಕವನ್ನು ಸಂಗ್ರಹಿಸುವುದನ್ನು ವಾರ್ಷಿಕವಾಗಿ ಗುತ್ತಿಗೆಗೆ ಕೊಡುವುದು ಮುನ್ಸಿಪಲ್ ಕೌನ್ಸಿಲಿಗೆ ಕಾನೂನುಸಮ್ಮತವಾಗಿರತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಯಾವುದೇ ದಾರಿ ಸುಂಕವನ್ನು ಗುತ್ತಿಗೆಗೆ ಕೊಡಲಾಗಿರುವಲ್ಲಿ, ಅಂಥ ದಾರಿ ಸುಂಕಗಳನ್ನು ಸಂಗ್ರಹಿಸಲು ಗುತ್ತಿಗೆಗೆ ಪಡೆದವನು ನಿಯೋಜಿಸಿದ ಯಾರೇ ವ್ಯಕ್ತಿಯು, ಗುತ್ತಿಗೆಯ ಷರತ್ತುಗಳಿಗೊಳಪಟ್ಟು, 129ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರಗಳನ್ನು ಹೊಂದಿರತಕ್ಕದ್ದು:

ಪರಂತು, ಮುನ್ಸಿಪಲ್ ಕೌನ್ಸಿಲಿನ ಆದೇಶಗಳ ಮೇರೆಗೆ ಅಲ್ಲದೆ ಜಫ್ತಿ ಮಾಡಿದ ಯಾವುದೇ ವಸ್ತುವನ್ನು ಮಾರಾಟ ಮಾಡತಕ್ಕದ್ದಲ್ಲ.

### ಜಾಹಿರಾತುಗಳು ಮತ್ತು ಜಾಹಿರಾತುಗಳ ತೆರಿಗೆ

**133. ಮುನ್ಸಿಪಲ್ ಕೌನ್ಸಿಲಿನ ಬರಹದ ಅನುಮತಿಯಿಲ್ಲದ ಜಾಹಿರಾತುಗಳ ನಿಷೇಧ.–** (1) ಯಾವುದೇ ಜಾಹಿರಾತನ್ನು ಮುನ್ಸಿಪಲ್ ಕೌನ್ಸಿಲು 94ನೇ ಪ್ರಕರಣದ ಮೇರೆಗೆ ತೆರಿಗೆ ವಿಧಿಸುವಿಕೆಯನ್ನು ನಿರ್ಧರಿಸಿದ ತರುವಾಯ ಯಾವುದೇ ಭೂಮಿ, ಕಟ್ಟಡ, ಗೋಡೆ, ಪ್ರಕಟಣಾ ಪಟ, ಚೌಕಟ್ಟು, ಸ್ತಂಭ ಅಥವಾ ರಚನೆಯ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಅಲ್ಲಿ ಪ್ರದರ್ಶಿಸತಕ್ಕದ್ದಲ್ಲ, ನಿಲ್ಲಿಸತಕ್ಕದ್ದಲ್ಲ,

ಜೋಡಿಸತಕ್ಕದ್ದಲ್ಲ ಅಥವಾ ಉಳಿಸಿಕೊಳ್ಳತಕ್ಕದ್ದಲ್ಲ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಉಪವಿಧಿಗಳಿಗನುಸಾರವಾಗಿ ಕೊಟ್ಟ ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಅನುಮತಿಯಿಲ್ಲದೆ ಪೌರಸಭೆಯೊಳಗೆ ಯಾವುದೇ ಸ್ಥಳದಲ್ಲಿ ಯಾವ ರೀತಿಯಲ್ಲಿಯೇ ಆಗಲಿ ಪ್ರದರ್ಶಿಸತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲು ಅನುಮತಿಯನ್ನು,-

(i) ಜಾಹೀರಾತು, ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದರೆ; ಅಥವಾ

(ii) ಜಾಹಿರಾತಿಗೆ ಸಂಬಂಧಿಸಿದಂತೆ ಬಾಕಿಯಾಗಿರುವ ತೆರಿಗೆ ಯಾವುದಾದರೂ ಇದ್ದರೆ, ಅದನ್ನು ಸಂದಾಯ ಮಾಡಿರದಿದ್ದರೆ

-ಕೊಡತಕ್ಕದ್ದಲ್ಲ.

(3) (2)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು, ಜಾಹಿರಾತು ತೆರಿಗೆಗೆ ಗುರಿಯಾದ ಜಾಹಿರಾತಿನ ಸಂದರ್ಭದಲ್ಲಿ ಮುನ್ಸಿಪಲ್ ಕೌನ್ಸಿಲು ಯಾವ ಅವಧಿಗೆ ತೆರಿಗೆಯ ಸಂದಾಯವು ಸಂಬಂಧಪಟ್ಟಿದೆಯೋ ಆ ಅವಧಿಗೆ ಅನುಮತಿಯನ್ನು ಕೊಡತಕ್ಕದ್ದು ಮತ್ತು ಅಂಥ ಅನುಮತಿಗೆ ಸಂಬಂಧಿಸಿದ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ.

**134. ಕೆಲವು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲಿನ ಅನುಮತಿಯು ಶೂನ್ಯವಾಗಿರತಕ್ಕದ್ದು.-** 133ನೇ ಪ್ರಕರಣದ ಮೇರೆಗೆ ಕೊಡಲಾದ ಅನುಮತಿಯು ಈ ಕೆಳಕಂಡ ಸಂದರ್ಭಗಳಲ್ಲಿ ಶೂನ್ಯವಾಗತಕ್ಕದ್ದು, ಎಂದರೆ:-

(ಕ) ಜಾಹಿರಾತು, ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುದೇ ಉಪ-ವಿಧಿಯನ್ನು ಉಲ್ಲಂಘಿಸಿದರೆ;

(ಖ) ಮುನ್ಸಿಪಲ್ ಕೌನ್ಸಿಲಿನ ಪೂರ್ವಾನುಮತಿಯಿಲ್ಲದೆ ಜಾಹಿರಾತು ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಮುಖ್ಯ ಬದಲಾವಣೆಯನ್ನು ಮಾಡಿದರೆ;

(ಗ) ಆಕಸ್ಮಿಕವಾಗಲ್ಲದೆ ಅನ್ಯಥಾ ಜಾಹಿರಾತು ಅಥವಾ ಅದರ ಯಾವುದೇ ಭಾಗವು ಬಿದ್ದರೆ;

(ಘ) ಜಾಹಿರಾತನ್ನು ಪ್ರದರ್ಶಿಸಲಾದ, ನಿಲ್ಲಿಸಲಾದ, ಜೋಡಿಸಲಾದ ಅಥವಾ ಉಳಿಸಿಕೊಂಡಿರುವಂಥ ಕಟ್ಟಡ ಗೋಡೆ, ಪ್ರಕಟಣಾಪಟ, ಚೌಕಟ್ಟು, ಸ್ತಂಭ ಅಥವಾ ರಚನೆ ಮೇಲೆ ಅಥವಾ ಮೇಲ್ಭಾಗದಲ್ಲಿ ಕಟ್ಟಡಕ್ಕೆ ಅಥವಾ ಯಾವುದೇ ಸೇರಿಕೆ ಅಥವಾ ಬದಲಾವಣೆಯನ್ನು ಅಂಥ ಸೇರಿಕೆ ಅಥವಾ ಬದಲಾವಣೆಯು, ಜಾಹೀರಾತಿನ ಅದರ ಭಾಗವನ್ನು ತೊಂದರೆಗೆ ಒಳಪಡಿಸುವ ಹಾಗೆ ಅವುಗಳಿಗೆ ಅಥವಾ ಅವುಗಳಲ್ಲಿ ಮಾಡಿದರೆ;

(ಙ) ಯಾವ ಕಟ್ಟಡ, ಗೋಡೆ, ಪ್ರಕಟಣಾಪಟ, ಚೌಕಟ್ಟು, ಸ್ತಂಭ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಜಾಹಿರಾತನ್ನು ಪ್ರದರ್ಶಿಸಲಾಗಿದೆಯೋ, ನಿಲ್ಲಿಸಲಾಗಿದೆಯೋ, ಜೋಡಿಸಲಾಗಿದೆಯೋ ಅಥವಾ ಉಳಿಸಿಕೊಳ್ಳಲಾಗಿದೆಯೋ ಆ ಕಟ್ಟಡ, ಗೋಡೆ, ಪ್ರಕಟಣಾ ಪಟ, ಚೌಕಟ್ಟು, ಸ್ತಂಭ ಅಥವಾ ರಚನೆಯನ್ನು ಕೆಡವಿಹಾಕಿದರೆ ಅಥವಾ ನಾಶಪಡಿಸಿದರೆ.

**135. ಉಲ್ಲಂಘನೆಯ ಸಂದರ್ಭದಲ್ಲಿ ಪೂರ್ವಭಾವನೆ.–** ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಲಾದ ಯಾವುವೇ ಉಪವಿಧಿಗಳನ್ನು ಉಲ್ಲಂಘಿಸಿ ಯಾವುದೇ ಜಾಹಿರಾತನ್ನು ಯಾವುದೇ ಕಟ್ಟಡ, ಭೂಮಿ, ಗೋಡೆ, ಪ್ರಕಟಣಾಪಟ, ಚೌಕಟ್ಟು, ಸ್ತಂಭ ಅಥವಾ ರಚನೆಯ ಮೇಲೆ ಅಥವಾ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಅದರೊಳಗೆ ಪ್ರದರ್ಶಿಸಿದರೆ, ನಿರ್ಮಿಸಿದರೆ, ಜೋಡಿಸಿದರೆ ಅಥವಾ ಉಳಿಸಿಟ್ಟುಕೊಂಡರೆ ಸಾರ್ವಜನಿಕ ಬೀದಿ ಅಥವಾ ಸಾರ್ವಜನಿಕ ಸ್ಥಳದಿಂದ ಸಾರ್ವಜನಿಕರ ದೃಷ್ಟಿಗೆ ಬೀಳುವಂತೆ ಪ್ರದರ್ಶಿಸಿದರೆ ತದ್ವಿರುದ್ಧವಾದುದನ್ನು ರುಜುವಾತುಪಡಿಸುವ ಹೊರತು ಮತ್ತು ಯಾರ ಪರವಾಗಿ ಜಾಹೀರಾತು ಇದೆಯೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಅಂಥ ವ್ಯಕ್ತಿ ಅಥವಾ ವ್ಯಕ್ತಿಗಳ ಏಜೆಂಟರು ಉಲ್ಲಂಘನೆಯನ್ನು ಮಾಡಿರುವುದಾಗಿ ಪೂರ್ವಭಾವನೆ ಮಾಡತಕ್ಕದ್ದು.

**136. ಅನಧಿಕೃತ ಜಾಹಿರಾತುಗಳನ್ನು ತೆಗೆದುಹಾಕುವುದು.–** 133ನೇ ಪ್ರಕರಣದ ಉಪಬಂಧವನ್ನು ಉಲ್ಲಂಘಿಸಿ ಯಾವುದೇ ಜಾಹಿರಾತನ್ನು ಪ್ರದರ್ಶಿಸಿದರೆ, ನಿಲ್ಲಿಸಿದರೆ, ಜೋಡಿಸಿದರೆ ಅಥವಾ ಉಳಿಸಿಕೊಂಡರೆ ಅಥವಾ ಯಾವುದೇ ಅವಧಿಗಾಗಿ ಅದರ ಪ್ರದರ್ಶನ, ನಿಲ್ಲಿಸುವಿಕೆ, ಜೋಡಣೆ ಅಥವಾ ಉಳಿಸಿಕೊಳ್ಳುವಿಕೆಗಾಗಿ ಬರಹದಲ್ಲಿನ ಅನುಮತಿಯು ಮುಕ್ತಾಯಗೊಂಡ ಅಥವಾ ಶೂನ್ಯವಾದ ತರುವಾಯ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು, ಯಾವುದರ ಮೇಲೆ ಅಥವಾ ಮೇಲ್ಭಾಗದಲ್ಲಿ ಅದನ್ನು ಪ್ರದರ್ಶಿಸಿದ, ನಿಲ್ಲಿಸಿದ, ಜೋಡಿಸಿದ ಅಥವಾ ಉಳಿಸಿಕೊಂಡ ಭೂಮಿ, ಕಟ್ಟಡ, ಗೋಡೆ, ಪ್ರಕಟಣಾಪಟ, ಚೌಕಟ್ಟು, ಸ್ತಂಭ ಅಥವಾ ರಚನೆ ಅಥವಾ ವಾಹನದ ಒಡೆಯ ಅಥವಾ ಅಧಿಭೋಗದಾರನನ್ನು ಬರಹದಲ್ಲಿನ ನೋಟೀಸಿನ ಮೂಲಕ ಅಂಥ ಜಾಹೀರಾತನ್ನು ಕೆಳಗಿಳಿಸುವಂತೆ ಅಥವಾ ತೆಗೆದುಹಾಕುವಂತೆ ಅಗತ್ಯಪಡಿಸಬಹುದು ಅಥವಾ ಯಾವುದೇ ಭೂಮಿ, ಕಟ್ಟಡ, ಸ್ವತ್ತು ಅಥವಾ ವಾಹನವನ್ನು ಪ್ರವೇಶಿಸಬಹುದು ಮತ್ತು ಜಾಹಿರಾತನ್ನು ಕಳಚಿಹಾಕಬಹುದು, ಕೆಳಗಿಳಿಸಬಹುದು ಅಥವಾ ತೆಗೆದುಹಾಕಬಹುದು ಅಥವಾ ಕೆಡಿಸಬಹುದು, ವಿರೂಪಗೊಳಿಸಬಹುದು ಅಥವಾ ಮರೆ ಮಾಡಬಹುದು.

### ಫೀಜು ಇತ್ಯಾದಿಗಳನ್ನು ವಿಧಿಸಲು ಅಧಿಕಾರ

**137. ಜಾತ್ರೆ, ಉರುಸು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಫೀಜುಗಳು.–** (1) ಮುನ್ಸಿಪಲ್ ಕೌನ್ಸಿಲು, ಪೌರಸಭಾ ಪರಿಮಿತಿಗಳೊಳಗೆ ನಿಯತಕಾಲಿಕವಾಗಿ ಬರುವ ಯಾವುದೇ ಪವಿತ್ರ ಸ್ಥಳ, ಜಾತ್ರೆ ಅಥವಾ ಉರುಸಿಗೆ ಸೇರುವ ವ್ಯಕ್ತಿಗಳಿಗೆ ಆರೋಗ್ಯ ಮತ್ತು ಅನುಕೂಲತೆಗಾಗಿ ವಿಶೇಷ ಏರ್ಪಾಡುಗಳನ್ನು ಮಾಡುವುದು ಅವಶ್ಯವೆಂದು ಅದು ಅಭಿಪ್ರಾಯಪಟ್ಟರೆ ನಿರ್ಣಯದ ಮೂಲಕ ಮತ್ತು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಅಂಥ ಪವಿತ್ರ ಸ್ಥಳ, ಜಾತ್ರೆ ಅಥವಾ ಉರುಸುಗಳಿಗೆ ಸೇರುವ ಹನ್ನೆರಡು ವರ್ಷಗಳಿಗೆ ಮೇಲ್ಪಟ್ಟ ವ್ಯಕ್ತಿಗಳ ಮೇಲೆ ತಲಾವಾರು ಐವತ್ತು ನಯಾ ಪೈಸೆಗಳಿಗೆ ಮೀರದಂತೆ ಫೀಜನ್ನು ವಿಧಿಸಬಹುದು ಮತ್ತು ಅಂಥ ನಿರ್ಣಯದಲ್ಲಿ ಫೀಜಿನ ದರ ಮತ್ತು ಫೀಜನ್ನು ವಿಧಿಸಬೇಕಾದ ಅವಧಿ ಅಥವಾ ಅವಧಿಗಳನ್ನು ನಿರ್ದಿಷ್ಟಪಡಿಸಬಹುದು. ಈ ಪ್ರಕರಣದ ಮೇರೆಗೆ ಫೀಜಿನ ವಿಧಿಸುವಿಕೆಯನ್ನು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಪೌರಸಭೆಯಲ್ಲಿ ಪ್ರಕಟಪಡಿಸತಕ್ಕದ್ದು.

(2) ಈ ಪ್ರಕರಣದ ಮೇರೆಗೆ ವಸೂಲ್ಮಾಡಿದ ಫೀಜುಗಳ ಉತ್ಪನ್ನಗಳ ಯಾವುದೇ ಭಾಗವನ್ನು ಅಂಥ ಫೀಜುಗಳ ಸಂಗ್ರಹಕ್ಕಾಗಿನ ಸಿಬ್ಬಂದಿ ವೆಚ್ಚಗಳನ್ನು ಭರಿಸಲು ಮತ್ತು ಅಂಥ ಸೇರುವ ವ್ಯಕ್ತಿಗಳ ಆರೋಗ್ಯ

ಮತ್ತು ಅನುಕೂಲತೆಗಾಗಿ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಅಥವಾ ಅಂಥ ಪ್ರದೇಶದ ಅಭಿವೃದ್ಧಿಗಾಗಿ ಅಲ್ಲದೆ ಇತರ ಉದ್ದೇಶಗಳಿಗೆ ವೆಚ್ಚ ಮಾಡತಕ್ಕದ್ದಲ್ಲ.

(3) ಅಂಥ ಫೀಜುಗಳ ವಿಧಿಸುವಿಕೆ ಮತ್ತು ಸಂಗ್ರಹಣೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮಾಡತಕ್ಕದ್ದು ಮತ್ತು ಅಂಥ ಷರತ್ತುಗಳು ಮತ್ತು ವಿನಾಯಿತಿಗೊಳಪಟ್ಟು ಮಾಡತಕ್ಕದ್ದು.

**138. ಕೆಲವು ಲೈಸೆನ್ಸ್‌ಗಳು, ಇತ್ಯಾದಿಗಳಿಗಾಗಿ ಪೌರಸಭಾ ಕೌನ್ಸಿಲ್ ಫೀಜುಗಳನ್ನು ವಿಧಿಸಬಹುದು.–** (1) ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್ ಯಾವುದೇ ಲೈಸೆನ್ಸ್ ಅಥವಾ ಪರ್ಮಿಟ್‌ನ್ನು ಮಂಜೂರ್ಮಾಡಿದಾಗ ಯಾವುದೇ ತಾತ್ಕಾಲಿಕ ನಿರ್ಮಿತಿಯನ್ನು ಮಾಡುವುದಕ್ಕಾಗಿ ಅಥವಾ ಯಾವುದೇ ಮುಂಚಾಚುವಿಕೆಯನ್ನು ಹಾಕುವುದಕ್ಕಾಗಿ ಅಥವಾ ಯಾವುದೇ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾದ ಯಾವುದೇ ಸಾರ್ವಜನಿಕ ಬೀದಿ ಅಥವಾ ಇತರ ಭೂಮಿಯ ತಾತ್ಕಾಲಿಕ ಅಧಿಭೋಗಕ್ಕಾಗಿ ಅದು ಅನುಮತಿಯನ್ನು ನೀಡಿದಾಗ, ಮುನ್ಸಿಪಲ್ ಕೌನ್ಸಿಲು ಅಂಥ ಲೈಸೆನ್ಸ್ ಅಥವಾ ಅನುಮತಿಗಾಗಿ ಫೀಜನ್ನು ವಿಧಿಸಬಹುದು:

ಪರಂತು, ಮುಂಚಾಚುವಿಕೆಯನ್ನು ಹಾಕುವುದಕ್ಕಾಗಿ ಅನುಮತಿಯನ್ನು ನೀಡಿದಾಗ ಅಂಥ ಅನುಮತಿಯನ್ನು ನೀಡುವ ಪ್ರಾಧಿಕಾರವು, ಆ ಮುಂಚಾಚುವಿಕೆಯನ್ನು ತೆಗೆದುಹಾಕುವವರೆಗೆ ಪ್ರತಿವರ್ಷ ಆವರ್ತಕ ಫೀಜನ್ನು ವಿಧಿಸಬಹುದು.

(2) ಮುನ್ಸಿಪಲ್ ಕೌನ್ಸಿಲ್ ತನ್ನ ಅನುಮತಿ ಅಥವಾ ಲೈಸೆನ್ಸ್ ಇಲ್ಲದೆ ಯಾರೇ ವ್ಯಕ್ತಿಯು ಯಾವುದೇ ನಿರ್ಮಿತಿ ಅಥವಾ ಮುಂಚಾಚುವಿಕೆಗಾಗಿ ಅಥವಾ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾದ ಯಾವುದೇ ಸಾರ್ವಜನಿಕ ಅಥವಾ ಇತರ ಭೂಮಿಯ ಉಪಯೋಗ ಅಥವಾ ಅಧಿಭೋಗಕ್ಕಾಗಿ ದಂಡದ ರೂಪದಲ್ಲಿ ಹೆಚ್ಚಿನ ಫೀಜನ್ನು ವಿಧಿಸಬಹುದು. ಅಂಥ ಫೀಜನ್ನು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧದ ಮೇರೆಗೆ ವ್ಯಕ್ತಿಯು ಗುರಿಯಾಗಬಹುದಾದ ಯಾವುದೇ ಇತರ ದಂಡ ಅಥವಾ ಹೊಣೆಗಾರಿಕೆಯನ್ನು ಗಣನೆಗೆ ತೆಗೆದುಕೊಳ್ಳದೆ ವಿಧಿಸಬಹುದಾಗಿದೆ. ಅಂಥ ಹೆಚ್ಚಿನ ಫೀಜಿನ ದರಗಳನ್ನು ಮುನ್ಸಿಪಲ್ ಕೌನ್ಸಿಲ್‌ಗೆ ರಚಿಸಿದ ಉಪವಿಧಿಗಳ ಮೂಲಕ ನಿರ್ಧರಿಸತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್ ನಿರ್ವಹಿಸುತ್ತಿರುವ ಬಸ್ ನಿಲ್ದಾಣದ ಉಪಯೋಗಕ್ಕಾಗಿ 324ನೇ ಪ್ರಕರಣದ ಮೇರೆಗೆ ರಚಿಸಿದ ಉಪವಿಧಿಗಳ ಮೂಲಕ ನಿಗದಿಗೊಳಿಸಬಹುದಾದಂತೆ ಮುನ್ಸಿಪಲ್ ಕೌನ್ಸಿಲ್ ಬಸ್ ಒಂದಕ್ಕೆ ಇಪ್ಪತ್ತೈದು ಪೈಸೆಗಳಿಗೆ ಮೀರದಂಥ ಫೀಜನ್ನು ವಿಧಿಸಬಹುದು:

ಪರಂತು, ಪ್ರಯಾಣಿಕರಿಗಾಗಿ ಸಾಕಷ್ಟು ಸೌಲಭ್ಯಗಳುಳ್ಳ ಬಸ್ ನಿಲ್ದಾಣವನ್ನು ಸ್ಥಾಪಿಸಿದ ಹೊರತು ಮತ್ತು ಅಂಥ ವಿಧಿಸುವಿಕೆಗಾಗಿ ಡೆಪ್ಯುಟಿ ಕಮಿಷನರರ ಪೂರ್ವ ಮಂಜೂರಾತಿಯನ್ನು ಪಡೆದಿರುವ ಹೊರತು ಈ ಉಪ-ಪ್ರಕರಣದ ಮೇರೆಗೆ ಯಾವುದೇ ಅಂಥ ಫೀಜನ್ನು ವಿಧಿಸತಕ್ಕದ್ದಲ್ಲ.

(4) ಮುನ್ಸಿಪಲ್ ಕೌನ್ಸಿಲಿಗೆ ಸೇರಿದ 324ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಹೇಳಿದ ಯಾವುದೇ ಅಂಥ ಸ್ಥಳದ ಉಪಯೋಗಕ್ಕಾಗಿ ಆ ಉಪ-ಪ್ರಕರಣದ (ಕ) ಖಂಡದ ಮೇರೆಗಿನ ಉಪವಿಧಿಗಳ ಮೂಲಕವಾಗಿಯಾಗಲಿ ಅಥವಾ ಮುನ್ಸಿಪಲ್ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ಇತರ ಉದ್ದೇಶಕ್ಕಾಗಿ ಆಗಲಿ ಗೊತ್ತುಪಡಿಸಿದಂಥ ಫೀಜುಗಳನ್ನು ಸಹಾ ಮುನ್ಸಿಪಲ್ ಕೌನ್ಸಿಲು ವಿಧಿಸಬಹುದು.

(5) ಬಹಿರಂಗ ಹರಾಜು ಅಥವಾ ಖಾಸಗಿ ಕರಾರಿನ ಮೂಲಕ 4ನೇ ಉಪ-ಪ್ರಕರಣದ ಮೇರೆಗೆ ವಿಧಿಸಬಹುದಾದ ಯಾವುದೇ ಫೀಜಿನ ವಸೂಲಿಯನ್ನು ಗುತ್ತಿಗೆಗೆ ಕೊಡುವುದು ಮುನ್ಸಿಪಲ್ ಕೌನ್ಸಿಲಿಗೆ ಕಾನೂನು ಸಮ್ಮತವಾಗಿರತಕ್ಕದ್ದು.

(6) 5ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಫೀಜನ್ನು ಗುತ್ತಿಗೆಗೆ ಕೊಟ್ಟಾಗ, ಅಂಥ ಫೀಜನ್ನು ಸಂಗ್ರಹಿಸಲು ಗುತ್ತಿಗೆ ಪಡೆದವನು ನಿಯೋಜಿಸಿದ ಯಾರೇ ವ್ಯಕ್ತಿ ಅಥವಾ ಗುತ್ತಿಗೆ ಪಡೆದವನು ಸ್ವತಃ ಗುತ್ತಿಗೆಯ ಷರತ್ತುಗಳಿಗೊಳಪಟ್ಟು, ಫೀಜನ್ನು ಸಂಗ್ರಹಿಸಬಹುದು ಅಥವಾ ಫೀಜನ್ನು ಸಂದಾಯ ಮಾಡಲು ಹೊಣೆಯಾಗಿರುವ ಆದರೆ ಅದನ್ನು ಸಂದಾಯ ಮಾಡಲು ನಿರಾಕರಿಸಿದ ಯಾರೇ ವ್ಯಕ್ತಿಯನ್ನು ಯಾವುದರ ಉಪಯೋಗಕ್ಕಾಗಿ ಫೀಜನ್ನು ಸಂದಾಯ ಮಾಡಬೇಕಾಗಿದೆಯೋ ಆ ಸ್ಥಳದಿಂದ ಹೊರಹಾಕಬಹುದು.

**ತೆರಿಗೆಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧಗಳು**

**139. ತೆರಿಗೆಗಳಿಗೆ ಬದಲಾಗಿ ನಿಗದಿಪಡಿಸಿದ ಚಾರ್ಜುಗಳು ಮತ್ತು ಅವುಗಳ ಸಂದಾಯಕ್ಕಾಗಿ ಒಪ್ಪಂದಗಳು.–** (1) ಮುನ್ಸಿಪಲ್ ಕೌನ್ಸಿಲ್, ನೀರಿನ ದರವನ್ನು ವಿಧಿಸುವ ಬದಲು ಅಥವಾ ವೈಯಕ್ತಿಕ ಪ್ರಕರಣಗಳಲ್ಲಿ ನೀರಿನ ದರವನ್ನು ವಿಧಿಸಿರುವಲ್ಲಿ, ಮುನ್ಸಿಪಲ್ ಕೌನ್ಸಿಲಿಗೆ ಸೇರಿದ ನೀರಿನ ಸರಬರಾಜಿಗೆ ಸಂಬಂಧಿಸಿದಂತೆ ಅಥವಾ ಯಾವುದೇ ಖಾಸಗಿ ಭೂಮಿಗಳ ಅಥವಾ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಉಪಯೋಗಕ್ಕಾಗಿ ವಿಧಿಸಿದ ದರವನ್ನು ವಸೂಲಿ ಮಾಡುವ ಬದಲು,–

(ಕ) 323ನೇ ಪ್ರಕರಣದ ಮೇರೆಗೆ ಜಾರಿಯಲ್ಲಿರುವ ನಿಯಮಗಳಲ್ಲಿ ನಿರ್ದಿಷ್ಟಪಡಿಸತಕ್ಕಂಥ ದರಗಳಿಗೆ ಮೀರದಂಥ ದರಗಳಲ್ಲಿ ಅಳತೆ ಮೂಲಕ ಖಚಿತಪಡಿಸಿಕೊಂಡಂತೆ ಹಾಗೆ ಉಪಯೋಗಿಸಿದ ಪ್ರಮಾಣಕ್ಕೆ ಅನುಸಾರವಾಗಿ ಸರಬರಾಜಿಗೆ ಚಾರ್ಜುಗಳನ್ನು ನಿಗದಿಪಡಿಸಬಹುದು; ಅಥವಾ

(ಖ) ಅವನ ಅರ್ಜಿಯ ಮೇಲೆ ಯಾರೇ ವ್ಯಕ್ತಿಯೊಂದಿಗೆ ಅಂಥ ವ್ಯಕ್ತಿಯೊಂದಿಗೆ ಮಾಡಿಕೊಂಡ ಒಪ್ಪಂದದ ಮೂಲಕ ಅದು ನಿಗದಿಪಡಿಸುವಂಥ ನಿಬಂಧನೆಗಳು ಮತ್ತು ಅಂಥ ಷರತ್ತುಗಳಿಗೊಳಪಟ್ಟು ಅಂಥ ಪರಿಮಾಣಗಳಲ್ಲಿ ಅಥವಾ ಅಂಥ ಉದ್ದೇಶಗಳಿಗಾಗಿ ಅಲಂಕಾರಿಕ ಅಥವಾ ನೀರಾವರಿ ಅಥವಾ ವ್ಯಾಪಾರ, ತಯಾರಿಕೆ ಅಥವಾ ಇತರ ಯಾವುದೇ ಉದ್ದೇಶಕ್ಕಾಗಿಯಾಗಲಿ ಮುನ್ಸಿಪಲ್ ಕೌನ್ಸಿಲಿಗೆ ಸೇರಿದ ನೀರನ್ನು ನಿಯತಕಾಲಿಕವಾಗಿ ಅಥವಾ ಅನ್ಯಥಾ ಸಂದಾಯದ ಮೇಲೆ ಸರಬರಾಜು ಮಾಡಲು ಏರ್ಪಾಡು ಮಾಡಬಹುದು:

ಪರಂತು,–

(i) ಮೀಟರುಗಳು, ಸಂಪರ್ಕ ಕೊಳವೆಗಳು ಮತ್ತು ಅಂಥ ಸರಬರಾಜಿಗಾಗಿ ಅವಶ್ಯಕವಾದ ಮತ್ತು ಪ್ರಾಸಂಗಿಕವಾದ ಎಲ್ಲ ಇತರ ಅಂಥ ಕಾಮಗಾರಿಗಳು ಮತ್ತು ಎಲ್ಲ ದುರಸ್ತಿಗಳು, ವಿಸ್ತರಣೆಗಳು ಮತ್ತು ಅಂಥ ಕಾಮಗಾರಿಗಳ ಬದಲಾವಣೆಗಳು ಮುನ್ಸಿಪಲ್ ಕೌನ್ಸಿಲಿನ ನಿಯಂತ್ರಣದಲ್ಲಿ ಇರತಕ್ಕದ್ದು ಮತ್ತು ಅದರ ವೆಚ್ಚವು ಮುನ್ಸಿಪಲ್ ಕೌನ್ಸಿಲಿನ ನಿಯಮಗಳು ಅಥವಾ ಉಪವಿಧಿಗಳಿಗೆ ಅಸಂಗತವಾಗದಷ್ಟರಮಟ್ಟಿಗೆ ವೆಚ್ಚಗಳಿಗೆ ಅಥವಾ ಅಂಥ ಸರಬರಾಜಿಗೆ ಸಂಬಂಧಪಟ್ಟಂತೆ ನಿಗದಿಪಡಿಸಿದ ಸಂದಾಯಗಳಿಗೆ ಹೊಣೆಯಾಗಿರುವ ವ್ಯಕ್ತಿಗಳು ಭರಿಸತಕ್ಕದ್ದು; ಮತ್ತು

(ii) ಅಂಥ ನೀರಿನ ಸರಬರಾಜನ್ನು ಅದರ ಪರಿಮಿತಿ ಅಥವಾ ನಿಲುಗಡೆ ಮತ್ತು 324ನೇ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಉಪವಿಧಿಗಳಲ್ಲಿ ನಿಯಮಿಸಲಾದಂತೆ ಪೋಲು ಅಥವಾ ದುರುಪಯೋಗದ ತಡೆಗೆ ಸಂಬಂಧಿಸಿದಂತೆ ಇರತಕ್ಕದ್ದು ಮತ್ತು ಅಂಥ ಎಲ್ಲ ಷರತ್ತುಗಳಿಗೊಳಪಟ್ಟು ಮಂಜೂರ್ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲ್, ಯಾವುದೇ ಒಂದು ಉದ್ದೇಶಕ್ಕಾಗಿ ಉಪಯೋಗಿಸಿದ ಮತ್ತು ಒಂದೇ ವ್ಯವಸ್ಥಾಪನೆಯಲ್ಲಿರುವ ಯಾವುದೇ ಕಾರ್ಖಾನೆ, ಹೋಟೇಲು, ಕ್ಲಬ್ಬು ಅಥವಾ ಕಟ್ಟಡಗಳ ಅಥವಾ ಭೂಮಿಗಳ ಯಾವುದೇ ಸಮೂಹದ ಸ್ವಚ್ಛತೆಗಾಗಿ ಏರ್ಪಾಡು ಮಾಡಿರುವಲ್ಲಿ ಈ ಅಧ್ಯಾಯದ ಮೇರೆಗೆ ಅದಕ್ಕೆ

ಸಂಬಂಧಪಟ್ಟಂತೆ ಯಾವುದೇ ವಿಶೇಷ ನೈರ್ಮಲ್ಯ ಉಪಕರವನ್ನು ವಿಧಿಸುವ ಬದಲು, ಅದರ ನಿಯತಕಾಲಿಕ ಸಂದಾಯಗಳಿಗಾಗಿ ವಿಶೇಷ ದರ ಮತ್ತು ದಿನಾಂಕಗಳು ಹಾಗೂ ಇತರ ಷರತ್ತುಗಳನ್ನು ನಿಗದಿಪಡಿಸಬಹುದು; ಅಂಥ ದರ, ದಿನಾಂಕಗಳು ಮತ್ತು ಷರತ್ತುಗಳನ್ನು,–

(i) 323ನೇ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಅನುಸಾರವಾಗಿಯಾಗಲಿ; ಅಥವಾ

(ii) ಉಪಕರಕ್ಕೆ ಅನ್ಯಥಾ ಗುರಿಯಾಗಬಹುದಾದ ವ್ಯಕ್ತಿಯೊಂದಿಗೆ ಬರಹದಲ್ಲಿನ ಒಪ್ಪಂದದ ಮೂಲಕವಾಗಿಯಾಗಲಿ,

–ನಿರ್ಧರಿಸತಕ್ಕದ್ದು:

ಪರಂತು, ಅಂಥ ದರದ ಮೊಬಲಗನ್ನು, ನಿಗದಿಪಡಿಸುವಲ್ಲಿ ಒದಗಿಸಲಾಗುವ ಸೇವೆಗೆ ಮುನ್ಸಿಪಲ್ ಕೌನ್ಸಿಲಿಗೆ ಸಂಭವನೀಯ ಖರ್ಚಿನ ಬಗ್ಗೆ ಯುಕ್ತ ಗಮನ ನೀಡತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್ ಸವಾರಿ, ಎಳೆಯುವುದಕ್ಕಾಗಿ ಅಥವಾ ಹೊರುವುದಕ್ಕಾಗಿ ಉಪಯೋಗಿಸುವ ಮತ್ತು ಅಂಥ ಉಪಯೋಗಕ್ಕಾಗಿ ಪೌರಸಭೆಯೊಳಗೆ ಇಟ್ಟ ವಾಹನಗಳು ಅಥವಾ ಪ್ರಾಣಿಗಳ ಮೇಲೆ ತೆರಿಗೆಯನ್ನು ವಿಧಿಸಿರುವಲ್ಲಿ, ಹಿಂದೆ ಹೇಳಿದಂತೆ ವಿಧಿಸಿದ ತೆರಿಗೆಯಿಂದಾಗಿ ಸಂದಾಯ ಮಾಡಲು ಅಂಥ ಇಟ್ಟುಕೊಂಡಿರುವವನು ಅನ್ಯಥಾ ಹೊಣೆಗಾರನಾಗಿರುತ್ತಿದ್ದನೋ ಆ ಯಾವುದೇ ಮೊಬಲಗಿಗೆ ಬದಲಾಗಿ, ಒಂದು ಬಾರಿಗೆ ಒಂದು ವರ್ಷ ಮೀರದ ಯಾವುದೇ ಅವಧಿಗಾಗಿ ಒಟ್ಟಿಗೆ ಸಂದಾಯ ಮಾಡುವುದಕ್ಕಾಗಿ ಯಾವುದೇ ಕುದುರೆಶಾಲೆ ಅಥವಾ ಮಾರಾಟಕ್ಕಾಗಿ ಮತ್ತು ಬಾಡಿಗೆಗಾಗಿ ಇಟ್ಟ ಕುದುರೆಗಳನ್ನು ಅಥವಾ ವಾಹನಗಳನ್ನು ಇಟ್ಟುಕೊಂಡಿರುವವನೊಂದಿಗೆ ಅದು ರಾಜಿ ಮಾಡಿಕೊಳ್ಳಬಹುದು.

(4) ಮುನ್ಸಿಪಲ್ ಕೌನ್ಸಿಲು ಯಾರೇ ವ್ಯಕ್ತಿಯೊಂದಿಗೆ ಅಂಥ ವ್ಯಕ್ತಿಗೆ ಸೇರಿದ ಯಾವುದೇ ವಾಹನದ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಎಲ್ಲ ದಾರಿಸುಂಕಗಳಿಗೆ ಬದಲಾಗಿ ಒಮ್ಮೆಗೆ ಒಂದು ವರ್ಷಕ್ಕೆ ಮೀರದಂಥ ಅವಧಿಗೆ ಮುನ್ಸಿಪಲ್ ಕೌನ್ಸಿಲ್ ಅನುಮೋದಿಸಿದ ಪ್ರಮಾಣದ ಅನುಸಾರವಾಗಿ ಮತ್ತು ಮಾಸಿಕವಾಗಿ, ತ್ರೈಮಾಸಿಕವಾಗಿ ಅಥವಾ ಅರ್ಧವಾರ್ಷಿಕವಾಗಿ ಸಂದಾಯ ಮಾಡುವುದಕ್ಕಾಗಿ ರಾಜಿ ಮಾಡಿಕೊಳ್ಳಬಹುದು ಮತ್ತು ಆ ಪುರಸಭೆ ಪರಿಮಿತಿಯೊಳಗೆ ವಾಹನ ಅಥವಾ ಪ್ರಾಣಿಯ ಉಚಿತ ಪ್ರವೇಶಕ್ಕಾಗಿ ಪಾಸನ್ನು ಕೊಡಬಹುದು:

ಪರಂತು, ವಿಧಿಸಿದ ಮೊತ್ತವು ಪಾಸನ್ನು ನೀಡಿದ ಅವಧಿಯಲ್ಲಿ ವಾಹನವು ದಿನಕ್ಕೊಂದು ಬಾರಿ ದಾರಿ ಸುಂಕವನ್ನು ಸಂದಾಯ ಮಾಡಬೇಕಾಗಿದ್ದರೆ ಯಾವ ಮೊಬಲಗನ್ನು ಅಂಥ ವ್ಯಕ್ತಿಯು ಸಂದಾಯ ಮಾಡಲು ಹೊಣೆಯಾಗಿರುತ್ತಿದ್ದನೋ ಆ ಮೊಬಲಗಿಗೆ ಅರ್ಧಕ್ಕಿಂತ ಕಡಿಮೆಯಿಲ್ಲದಂತಿರತಕ್ಕದ್ದು.

(5) (1)ನೆಯ ಉಪ–ಪ್ರಕರಣದ ಮೇರೆಗೆ ಚಾರ್ಜುಗಳು, ಸಂದಾಯಗಳು ಅಥವಾ ವೆಚ್ಚಗಳಿಗಾಗಿ ಅಥವಾ (2)ನೇ ಉಪ–ಪ್ರಕರಣದ ಮೇರೆಗೆ, ವಿಶೇಷ ದರವೆಂದು ಅಥವಾ (3)ನೇ ಉಪ–ಪ್ರಕರಣದ ಮೇರೆಗೆ ಒಟ್ಟು ಮೊತ್ತವೆಂದು ಮುನ್ಸಿಪಲ್ ಕೌನ್ಸಿಲು ಕ್ಲೇಮು ಮಾಡಿದ ಪ್ರತಿಯೊಂದು ಮೊತ್ತವನ್ನು VIIನೇ ಅಧ್ಯಾಯದ ಉದ್ದೇಶಗಳಿಗಾಗಿ ಸದರಿ ಅಧ್ಯಾಯದ ಮೇರೆಗೆ ವಸೂಲು ಮಾಡಬಹುದಾದ ತೆರಿಗೆಯಂತೆ ಕ್ಲೇಮು ಮಾಡಿದ ಮೊಬಲಗಿನ ಹಾಗೆ ಭಾವಿಸತಕ್ಕದ್ದು ಮತ್ತು ಅದೇ ರೀತಿಯಲ್ಲಿಯೇ ವಸೂಲೀಯವಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಮುನ್ಸಿಪಲ್ ಕೌನ್ಸಿಲ್‍ಗೆ ಸೇರಿದ ಆದರೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಾಗಿರದ ಯಾವುದೇ ಪ್ರಮಾಣದ ನೀರನ್ನು ಮುನ್ಸಿಪಲ್ ಕೌನ್ಸಿಲ್ ಸೂಕ್ತವೆಂದು ಯೋಚಿಸಬಹುದಾದಂಥ ದರಗಳು ಮತ್ತು ಷರತ್ತುಗಳ ಮೇಲೆ ಪೌರಸಭೆಯ ಪರಿಮಿತಿಗಳಾಚೆ ಉಪಯೋಗಿಸಲು ಸರಬರಾಜು ಮಾಡಲು ಯಾರೇ ವ್ಯಕ್ತಿಯೊಂದಿಗೆ ಕರಾರು ಮಾಡಿಕೊಳ್ಳಲು ಮುನ್ಸಿಪಲ್ ಕೌನ್ಸಿಲಿನ ಹಕ್ಕು ಅಥವಾ ಅಧಿಕಾರಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**140. ಆಕ್ಷೇಪಣೀಯ ತೆರಿಗೆಗಳ ವಿಧಿಸುವಿಕೆಯನ್ನು ಅಮಾನತುಗೊಳಿಸಲು ಅಥವಾ ನಿಷೇಧಿಸಲು ಸರ್ಕಾರದ ಅಧಿಕಾರ.–** ಮುನ್ಸಿಪಲ್ ಕೌನ್ಸಿಲು ವಿಧಿಸಬಹುದಾದ ಯಾವುದೇ ತೆರಿಗೆ ಅಥವಾ ಫೀಜು ಅದರ ವ್ಯಾಪ್ತಿಯಲ್ಲಿ ಅನುಚಿತವಾದುದು ಅಥವಾ ಅದರ ಅಥವಾ ಅದರ ಯಾವುದೇ ಭಾಗದ ವಿಧಿಸುವಿಕೆಯು ಸಾರ್ವಜನಿಕರ ಹಿತದೃಷ್ಟಿಗಳಿಗೆ ಹಾನಿಕರವಾದುದೆಂದು ಯಾವುದೇ ಸಮಯದಲ್ಲಿ ಮಾಡಿದ ಫಿರ್ಯಾದಿನ ಮೇಲೆ ಅಥವಾ ಅನ್ಯಥಾ ಸರ್ಕಾರಕ್ಕೆ ಕಂಡುಬಂದರೆ ಅದು ಈ ಬಗ್ಗೆ ನಿಗದಿಗೊಳಿಸತಕ್ಕ ಅವಧಿಯೊಳಗೆ ಸದರಿ ತೆರಿಗೆ ಅಥವಾ ಫೀಜಿನಲ್ಲಿ ಇದೆ ಎಂದು ಕಂಡುಬರುವ ಯಾವುವೇ ಆಕ್ಷೇಪಣೆಯನ್ನು ತೆಗೆದುಹಾಕಲು ಕ್ರಮಗಳನ್ನು ಕೈಗೊಳ್ಳಲು ಸದರಿ ಮುನ್ಸಿಪಲ್ ಕೌನ್ಸಿಲ್‍ನ್ನು ಅಗತ್ಯಪಡಿಸಬಹುದು ಮತ್ತು ಹಾಗೆ ನಿಗದಿಪಡಿಸಿದ ಅವಧಿಯೊಳಗೆ ಅಂಥ ಅಗತ್ಯತೆಗಳನ್ನು ಸರ್ಕಾರಕ್ಕೆ ತೃಪ್ತಿಯಾಗುವಂತೆ ಜಾರಿಗೆ ತಾರದಿದ್ದರೆ ಅದು ಅಧಿಸೂಚನೆಯ ಮೂಲಕ ಅದಕ್ಕೆ ಆಕ್ಷೇಪಣೆಯನ್ನು ತೆಗೆದುಹಾಕುವ ಸಮಯದವರೆಗೆ ಅಂಥ ತೆರಿಗೆ ಅಥವಾ ಫೀಜು ಅಥವಾ ಅದರ ಅಂಥ ಭಾಗದ ವಸೂಲಿಯನ್ನು ಅಮಾನತುಗೊಳಿಸಬಹುದು.

(2) ಸರ್ಕಾರವು ಯಾವುದೇ ಕಾಲದಲ್ಲಿ ಅಧಿಸೂಚನೆಯ ಮೂಲಕ ಯಾವುದೇ ಅಂಥ ಅಮಾನತನ್ನು ರದ್ದುಗೊಳಿಸಬಹುದು.

**141. ತೆರಿಗೆಗಳನ್ನು ವಿಧಿಸಲು ಮುನ್ಸಿಪಲ್ ಕೌನ್ಸಿಲನ್ನು ಅಗತ್ಯಪಡಿಸಲು ಸರ್ಕಾರದ ಅಧಿಕಾರ.–** ಮುನ್ಸಿಪಲ್ ಕೌನ್ಸಿಲ್ ತನ್ನ ಅನಿವಾರ್ಯ ಕಾರ್ಯಗಳನ್ನು ನೆರವೇರಿಸಲು ಅದಕ್ಕೆ ಹೆಚ್ಚುವರಿ ನಿಧಿಯು ಅಗತ್ಯವೆಂದು ಅಥವಾ 307ನೆಯ ಪ್ರಕರಣದ ಮೇರೆಗೆ ವಹಿಸಲಾದ ವೆಚ್ಚವನ್ನು ಭರಿಸಲು ಅಥವಾ 313ನೇ ಪ್ರಕರಣದ ಮೇರೆಗೆ ಅದು ಘೋಷಿಸತಕ್ಕ ಯಾವ ಕರ್ತವ್ಯಗಳಿಗೆ ಸಂಬಂಧಿಸಿದಂತೆ ಅದು ಪಾಲಿಸಲು ತಪ್ಪು ಮಾಡಿದೆಯೋ ಆ ಯಾವುದೇ ಕರ್ತವ್ಯಗಳನ್ನು ಪಾಲಿಸುವುದಕ್ಕಾಗಿ ಮುನ್ಸಿಪಲ್ ಕೌನ್ಸಿಲಿನ ನಿಧಿಯ ಶಿಲ್ಕು ಸಾಕಷ್ಟಿಲ್ಲವೆಂದು ಸರ್ಕಾರಕ್ಕೆ ಕಂಡುಬಂದಾಗಲೆಲ್ಲಾ 94ನೇ ಪ್ರಕರಣದ ಮೇರೆಗೆ ವಿಧಿಸಬಹುದಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಂಥ ತೆರಿಗೆಯನ್ನು ಪೌರಸಭೆಯಲ್ಲಿ ಅದರಲ್ಲಿ ಅಂಥ ಯಾವುದೇ ತೆರಿಗೆಯನ್ನು ವಿಧಿಸಿರದಿದ್ದರೆ, ವಿಧಿಸಲು ಸರ್ಕಾರವು ಸೂಕ್ತವೆಂದು ಪರಿಗಣಿಸಬಹುದಾದಂಥ ರೀತಿಯಲ್ಲಿ ಮತ್ತು ಅಷ್ಟರವರೆಗೆ ಈಗಿರುವ ತೆರಿಗೆಯನ್ನು ಹೆಚ್ಚಿಸಲು ಅಗತ್ಯಪಡಿಸಬಹುದು ಮತ್ತು 95ನೇ ಪ್ರಕರಣದ ಮೇರೆಗಿನ ಉದ್ದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲು ನಿರ್ಣಯವನ್ನು ಅಂಗೀಕರಿಸಿದ್ದರೆ ಹೇಗೋ ಹಾಗೆ ಮುನ್ಸಿಪಲ್ ಕೌನ್ಸಿಲ್ ತತ್‍ಕ್ಷಣವೇ ಈ ಅಧ್ಯಾಯದ ಉಪಬಂಧಗಳ ಮೇರೆಗೆ ಅಂಥ ತೆರಿಗೆಯನ್ನು ಕೋರಿಕೆಯ ಅನುಸಾರವಾಗಿ ವಿಧಿಸಲು ಅಥವಾ ಹೆಚ್ಚಿಸಲು ಮುಂದುವರಿಯತಕ್ಕದ್ದು:

ಪರಂತು,–

(ಕ) ಸರ್ಕಾರವು ಅಂಥ ತೆರಿಗೆಯನ್ನು ವಿಧಿಸುವುದರ ಅಥವಾ ಹೆಚ್ಚಿಸುವುದರ ವಿರುದ್ಧ ಮುನ್ಸಿಪಲ್ ಕೌನ್ಸಿಲ್ ಅಥವಾ ಪೌರಸಭೆಯ ಯಾರೇ ನಿವಾಸಿಯ ಯಾವುದೇ ಆಕ್ಷೇಪಣೆಯನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದು;

(ಖ) ಅಂಥ ತೆರಿಗೆಯನ್ನು ವಿಧಿಸಿದಾಗ ಅದನ್ನು ಬಿಟ್ಟುಬಿಡುವುದು ಅಥವಾ ಮಾರ್ಪಾಡು ಮಾಡುವುದು ಅಥವಾ ರದ್ದುಗೊಳಿಸುವುದು ಮುನ್ಸಿಪಲ್ ಕೌನ್ಸಿಲಿಗೆ ಕಾನೂನು ಬದ್ಧವಾಗಿರತಕ್ಕದ್ದಲ್ಲ; ಮತ್ತು

(ಗ) ಸರ್ಕಾರವು, ಈ ಪ್ರಕರಣದ ಮೇರೆಗೆ ಅದು ಮಾಡಿದ ಯಾವುದೇ ಕೋರಿಕೆಯನ್ನು ಯಾವುದೇ ಕಾಲದಲ್ಲಿ ರದ್ದುಗೊಳಿಸಬಹುದು ಅಥವಾ ಮಾರ್ಪಾಡು ಮಾಡಬಹುದು ಮತ್ತು ಪ್ರಾಪ್ತವಾದ ಬಾಕಿಗಳು ಮತ್ತು ಬಾಕಿಗೆ ಸಂಬಂಧಿಸಿದಂತೆ ಹೊರತು, ತೆರಿಗೆಯ ವಸೂಲಿ ಅಥವಾ ಹೆಚ್ಚಿಸುವಿಕೆಯ ತದನಂತರ ತದನುಸಾರವಾಗಿ ನಿಂತುಹೋಗತಕ್ಕದ್ದು ಅಥವಾ ಮಾರ್ಪಾಡಾಗತಕ್ಕದ್ದು.

## ಅಧ್ಯಾಯ–VII

## ಪೌರಸಭಾ ಕ್ಲೇಮುಗಳನ್ನು ವಸೂಲಿ ಮಾಡುವುದು

**142. ತೆರಿಗೆಗಳಿಗಾಗಿ ಬಿಲ್ಲನ್ನು ಸಲ್ಲಿಸುವುದು.–** (1) (ಕ) ಈ ಅಧಿನಿಯಮದ ಯಾವುದೇ ಉಪಬಂಧಗಳ ಮೂಲಕ ಅಥವಾ ಮೇರೆಗೆ ಈ ಅಧ್ಯಾಯದ ಮೂಲಕ ಉಪಬಂಧಿಸಲಾದ ರೀತಿಯಲ್ಲಿ ಯಾವುದೇ ಮೊಬಲಗನ್ನು ವಸೂಲೀಯವಾಗತಕ್ಕದ್ದೆಂದು ಘೋಷಿಸಿದಾಗ; ಅಥವಾ

(ಖ) ಯಾವುದೇ ಪೌರಸಭೆಯಲ್ಲಿ ಈಗ ವಿಧಿಸಿದ ಅಥವಾ ಇನ್ನು ಮುಂದೆ ವಿಧಿಸಬಹುದಾದ ಯಾವುದೇ ತೆರಿಗೆಯ ಬಾಬ್ತಿನ ಮೊಬಲಗು ಅಥವಾ ಕಂತು ಆಗಿ ಕ್ಲೇಮು ಮಾಡಬಹುದಾದಂಥ ಯಾವುದೇ ಮೊಬಲಗು ಬಾಕಿಯಾಗಿರುವಾಗ,

ಮುನ್ಸಿಪಲ್ ಕೌನ್ಸಿಲು, ಕಾರ್ಯಸಾಧ್ಯವಾದಷ್ಟು ಕಡಿಮೆ ವಿಳಂಬದಲ್ಲಿ ಅದರ ಸಂದಾಯಕ್ಕೆ ಹೊಣೆಯಾಗಿರುವ ವ್ಯಕ್ತಿಗೆ, ಬಾಕಿಯೆಂದು ಕ್ಲೇಮು ಮಾಡಿದ ಮೊತ್ತಕ್ಕಾಗಿ ಬಿಲ್ಲನ್ನು ಸಲ್ಲಿಸುವಂತೆ ಮಾಡತಕ್ಕದ್ದು:

ಪರಂತು, ಯಾವುದೇ ಅಂಥ ಬಿಲ್ಲು,–

(i) ವಾಹನಗಳ ಮೇಲೆ ತೆರಿಗೆ;

(ii) ನಾಯಿಗಳ ಮೇಲೆ ತೆರಿಗೆ;

(iii) ತಗಾದೆಯ ಮೇಲೆ ಸಂದಾಯ ಮಾಡಬೇಕಾದ ದಾರಿಸುಂಕ;

(iv) ಜಾಹಿರಾತುಗಳ ಮೇಲಿನ ತೆರಿಗೆ

–ಇವುಗಳ ಸಂದರ್ಭದಲ್ಲಿ ಅವಶ್ಯವಾಗಿರತಕ್ಕದ್ದಲ್ಲ:

ಮತ್ತು ಪರಂತು, ಅಂಥ ಯಾವುದೇ ಬಿಲ್ಲನ್ನು ಯಾರೇ ವ್ಯಕ್ತಿಗೆ ಅವನ ನಿಯೋಜಕನು ಅವನ ಸಂಬಳ, ಮಜೂರಿ ಅಥವಾ ಸಂಭಾವನೆಯಿಂದ ಮುರಿದುಕೊಳ್ಳಲಾದ ತೆರಿಗೆಯಷ್ಟರ ಮಟ್ಟಿಗೆ ವೃತ್ತಿ ತೆರಿಗೆ ಸಂದಾಯಕ್ಕಾಗಿ ಸಲ್ಲಿಸತಕ್ಕದ್ದಲ್ಲ.

(2) ಪ್ರತಿಯೊಂದು ಅಂಥ ಬಿಲ್ಲು,–

(ಕ) ಯಾವ ಅವಧಿಗಾಗಿ ಎಂಬುದನ್ನು; ಮತ್ತು

(ಖ) ಯಾವ ಸ್ವತ್ತು, ಉದ್ಯೋಗ ಅಥವಾ ವಸ್ತುವಿಗೆ ಸಂಬಂಧಪಟ್ಟಂತೆ ಮೊತ್ತವನ್ನು ಕ್ಲೇಮು ಮಾಡಲಾಗಿದೆಯೋ ಆ ಸ್ವತ್ತು, ಉದ್ಯೋಗ ಅಥವಾ ವಸ್ತುವನ್ನು ನಿರ್ದಿಷ್ಟಪಡಿಸತಕ್ಕದ್ದು, ಮತ್ತು,–

(i) ಸಂದಾಯ ಮಾಡಲು ತಪ್ಪಿದಲ್ಲಿ ಗುರಿಯಾದ ಹೊಣೆಗಾರಿಕೆ; ಮತ್ತು

(ii) ಅಂಥ ಕ್ಲೇಮಿನ ವಿರುದ್ಧ ಇಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ ಯಾವ ಕಾಲದೊಳಗೆ ಅಪೀಲನ್ನು ಸಲ್ಲಿಸಬಹುದೋ ಆ ಕಾಲದ ಬಗ್ಗೆ ನೋಟೀಸನ್ನು ಸಹ ಕೊಡತಕ್ಕದ್ದು.

(3) ಯಾವ ಮೊತ್ತಕ್ಕಾಗಿ ಯಾವುದೇ ಬಿಲ್ಲನ್ನು ಹಿಂದೆ ಹೇಳಿದಂತೆ ಸಲ್ಲಿಸಲಾಗಿದೆಯೋ ಆ ಯಾವುದೇ ಮೊತ್ತವನ್ನು ಪೌರಸಭೆ ಕಚೇರಿಯಲ್ಲಿ ಅಥವಾ ಅಂಥ ಸಂದಾಯಗಳನ್ನು ಸ್ವೀಕರಿಸುವುದಕ್ಕಾಗಿ ಆ ಬಗ್ಗೆ ಯಾವುದೇ ನಿಯಮದ ಮೂಲಕ ಅಧಿಕೃತನಾದ ವ್ಯಕ್ತಿಗೆ ಅದನ್ನು ಸಲ್ಲಿಸಿದಂದಿನಿಂದ ಹದಿನೈದು ದಿನಗಳೊಳಗಾಗಿ ಸಂದಾಯ ಮಾಡದಿದ್ದರೆ ಅಥವಾ ವಾಹನಗಳ ಮೇಲಿನ ತೆರಿಗೆ ಅಥವಾ ನಾಯಿಗಳ ಮೇಲಿನ ತೆರಿಗೆ ಅಥವಾ ಜಾಹಿರಾತಿನ ಮೇಲಿನ ತೆರಿಗೆಯನ್ನು ಅದು ಬಾಕಿಯಾದ ತರುವಾಯ ಸಂದಾಯ ಮಾಡದಿದ್ದರೆ, ಮುನ್ಸಿಪಲ್ ಕೌನ್ಸಿಲ್ ಅದನ್ನು ಸಂದಾಯ ಮಾಡಲು ಹೊಣೆಗಾರನಾದ ವ್ಯಕ್ತಿಯ ಮೇಲೆ Xನೇ ಅನುಸೂಚಿಯಲ್ಲಿ ವಿವರಿಸಿದ ನಮೂನೆಯಲ್ಲಿ ಅಥವಾ ಅಂಥದೇ ಪರಿಣಾಮವುಳ್ಳ ತಗಾದೆ ನೋಟೀಸನ್ನು ಜಾರಿ ಮಾಡಿಸತಕ್ಕದ್ದು.

**143. ಜಪ್ತಿ.**– 142ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ತಗಾದೆ ನೋಟೀಸನ್ನು ಯಾವ ವ್ಯಕ್ತಿಯ ಮೇಲೆ ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯು ಅಂಥ ತಗಾದೆಯ ನೋಟೀಸು ಜಾರಿ ಮಾಡಿದಂದಿನಿಂದ ಮೂವತ್ತು ದಿನಗಳೊಳಗಾಗಿ,–

(ಕ) ನೋಟೀಸಿನಲ್ಲಿ ತಗಾದೆ ಮಾಡಿದ ಮೊತ್ತವನ್ನು ಸಂದಾಯ ಮಾಡದಿದ್ದರೆ;

(ಖ) ಅದನ್ನು ಏಕೆ ಸಂದಾಯ ಮಾಡಲಾಗುವುದಿಲ್ಲವೆಂದು ಮುನ್ಸಿಪಲ್ ಕೌನ್ಸಿಲು ಅಥವಾ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲ್ ನಿಯಮದ ಮೂಲಕ ನೇಮಕ ಮಾಡಬಹುದಾದಂಥ ಅಧಿಕಾರಿ ಅಥವಾ ಪೌರಸಭೆ

ಕಮಿಷನರ್ ಅಥವಾ ಚೀಫ್ ಆಫೀಸರ್ ಯಾರಾದರೂ ಇದ್ದರೆ, ಅವರಿಗೆ, ಮನದಟ್ಟಾಗುವಂತೆ ಕಾರಣವನ್ನು ತೋರಿಸದಿದ್ದರೆ; ಅಥವಾ

(ಗ) ತಗಾದೆ ವಿರುದ್ಧ 150ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ಅಪೀಲನ್ನು ಸಲ್ಲಿಸದಿದ್ದರೆ

–ಅವನು ಸಂದಾಯ ಮಾಡಲು ತಪ್ಪಿರುವನೆಂದು ಭಾವಿಸತಕ್ಕದ್ದು ಮತ್ತು ಆ ತರುವಾಯ ಪೌರಸಭೆ ಕಮಿಷನರರನು ಅಥವಾ ಚೀಫ್ ಆಫೀಸರನು ನಿರ್ಧರಿಸಬಹುದಾದಂತೆ ತೆರಿಗೆ ಮೊಬಲಗಿನ ಶೇಕಡಾ ಇಪ್ಪತ್ತೈದರಷ್ಟಕ್ಕೆ ಮೀರದಂಥ ಮೊತ್ತವನ್ನು ತೆರಿಗೆಯ ಬಾಕಿಯೆಂಬಂತೆ ತೆರಿಗೆಯ ಮೊಬಲಗಿನ ಜೊತೆಗೆ ಅವನಿಂದ ದಂಡದ ರೂಪವಾಗಿ ವಸೂಲಿ ಮಾಡಬಹುದು ಮತ್ತು ತೆರಿಗೆ ಹಾಗೂ ವಸೂಲಿಯ ಎಲ್ಲ ಖರ್ಚುಗಳೊಂದಿಗೆ ದಂಡವನ್ನು XIನೇ ಅನುಸೂಚಿಯಲ್ಲಿ ವಿವರಿಸಿದ ಅಥವಾ ಅಂಥದೇ ಪರಿಣಾಮದ ನಮೂನೆಯಲ್ಲಿ ಮುನ್ಸಿಪಲ್ ಕೌನ್ಸಿಲು ಹೊರಡಿಸುವಂತೆ ಮಾಡುವ ವಾರಂಟಿನ ಮೂಲಕ ತಪ್ಪಿತಸ್ಥನ ಚರಸ್ವತ್ತಿನ ಜಪ್ತಿ ಮಾರಾಟದ ಅಥವಾ ಸ್ಥಿರಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ವಸೂಲ್ಮಾಡಬಹುದು:

ಪರಂತು, ಸರ್ಕಾರವು ಕ್ಲೇಮು ಮಾಡಿದ ಯಾವುದೇ ಮೊತ್ತದ ವಸೂಲಿಗಾಗಿ ಯಾವುದೇ ಅಂಥ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಮುನ್ನೆಚ್ಚರಿಕೆ ಅಥವಾ ಅನ್ಯಥಾ ಕ್ರಮಗಳನ್ನು ತೆಗೆದುಕೊಂಡಿರುವಲ್ಲಿ, ಅಂಥ ಸ್ವತ್ತಿಗೆ ಸಂಬಂಧಸಿದಂತೆ ಈ ಅಧ್ಯಾಯದ ಮೇರೆಗಿನ ಯಾವುವೇ ವ್ಯವಹರಣೆಗಳು ಕೊನೆಗೊಳ್ಳತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ವಾರಂಟಿಗೆ ಅದನ್ನು ಹೊರಡಿಸುವಂತೆ ಮಾಡಿದ ಪೌರಸಭೆ ಕಮಿಷನರನು ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಚೀಫ್ ಆಫೀಸರನು ರುಜು ಮಾಡತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್‌ನ ನಿಯಂತ್ರಣದಲ್ಲಿರುವ ಪ್ರದೇಶದಲ್ಲಿ ಆ ಸ್ವತ್ತು ಇರುವಲ್ಲಿ ವಾರಂಟನ್ನು ಮುನ್ಸಿಪಲ್ ಕೌನ್ಸಿಲಿನ ಒಬ್ಬ ಅಧಿಕಾರಿಗೆ ಸಂಬೋಧಿಸತಕ್ಕದ್ದು. ಈ ಅಧಿನಿಯಮದ ಅಥವಾ 1949ರ ಬೆಂಗಳೂರು ನಗರ ಪೌರಸಭಾ ನಿಗಮದ ಅಧಿನಿಯಮದ ಅಥವಾ 1949ರ ಮುಂಬೈ ಪ್ರಾಂತೀಯ ಪೌರಸಭೆ ನಿಗಮಗಳ ಅಧಿನಿಯಮದ ಮೇರೆಗೆ ರಚಿಸಲಾದ ಬೇರೊಂದು ಪೌರಸಭೆಯಲ್ಲಿ ಅಥವಾ ದಂಡು ಪ್ರದೇಶದಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ರಚಿತವಾದ ಪೌರಸಭೆಯಲ್ಲದಂಥ ಸ್ಥಳದಲ್ಲಿ ಸ್ವತ್ತು ಇರುವಲ್ಲಿ ವಾರಂಟನ್ನು ಸಂದರ್ಭಾನುಸಾರ ಸಂಬಂಧಪಟ್ಟ ನಿಗಮವು ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಪೌರಸಭೆ ಕಮಿಷನರ್ ಅಥವಾ ಚೀಫ್ ಅಫೀಸರನಿಗೆ ಅಥವಾ ದಂಡು ಪ್ರದೇಶದ ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ತಾಲ್ಲೂಕಿನ ತಹಸೀಲ್ದಾರನಿಗೆ ಸಂಬೋಧಿಸತಕ್ಕದ್ದು:

ಪರಂತು, ಅಂಥ ಪೌರಸಭೆ ಕಮಿಷನರ್, ಚೀಫ್ ಆಫೀಸರ್, ಕಾರ್ಯನಿರ್ವಾಹಕ ಅಧಿಕಾರಿ ಅಥವಾ ತಹಸೀಲ್ದಾರನು ಅಂಥ ವಾರಂಟನ್ನು ಅಧೀನ ಅಧಿಕಾರಿಗೆ ಹಿಂಬರಹ ಮಾಡಬಹುದು.

(4) (2)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಲಾದ ವಾರಂಟನ್ನು ಯಾವ ಅಧಿಕಾರಿಗೆ ಸಂಬೋಧಿಸಲಾಗಿದೆಯೋ ಅಥವಾ ಹಿಂಬರಹ ಮಾಡಲಾಗಿದೆಯೋ ಆ ಯಾರೇ ಅಧಿಕಾರಿಗೆ ಅಭಿಗ್ರಹಿಸಲು ಗುರಿಯಾಗಿರುವಂಥ ಸ್ವತ್ತನ್ನು ಅಂಥ ಕಟ್ಟಡವು ಒಳಗೊಂಡಿದೆಯೆಂದು ನಂಬಲು ಅವನಿಗೆ ಯುಕ್ತ ಆಧಾರಗಳಿದ್ದರೆ, ಮತ್ತು ತನ್ನ ಅಧಿಕಾರ ಮತ್ತು ಉದ್ದೇಶವನ್ನು ತಿಳಿಸಿದ ತರುವಾಯ ಮತ್ತು ಪ್ರವೇಶಕ್ಕೆ ಕ್ರಮಬದ್ಧವಾಗಿ ತಗಾದೆ ಮಾಡಿಯೂ, ಅವನು ಅನ್ಯಥಾ ಪ್ರವೇಶವನ್ನು ಪಡೆಯಲಾಗದಿದ್ದರೆ ವಾರಂಟಿನಲ್ಲಿ ನಿರ್ದೇಶಿಸಿದ ಜಪ್ತಿಯನ್ನು ಮಾಡುವ ದೃಷ್ಟಿಯಿಂದ ಕಟ್ಟಡದ ಯಾವುದೇ ಹೊರ ಅಥವಾ ಒಳ ಬಾಗಿಲು ಅಥವಾ ಕಿಟಕಿಯನ್ನು ಸೂರ್ಯೋದಯ ಮತ್ತು ಸೂರ್ಯಾಸ್ತಮಾನದ ಮಧ್ಯ ಯಾವುದೇ ಕಾಲದಲ್ಲಿ ಒಡೆದು ತೆಗೆಯಲು

ಈ ಬಗ್ಗೆ ಅವನನ್ನು ಅಧಿಕೃತಗೊಳಿಸುವ ವಿಶೇಷ ಆದೇಶವನ್ನು ವಾರಂಟು ಒಳಗೊಂಡಿದ್ದರೆ, ಒಡೆದು ತೆಗೆಯುವುದು ಕಾನೂನುಸಮ್ಮತವಾಗಿರತಕ್ಕದ್ದು:

ಪರಂತು, ಅಂಥ ಅಧಿಕಾರಿಯು ಮಹಿಳೆಯರು ಇರುವ ಯಾವುದೇ ಭಾಗವನ್ನು ತನ್ನ ಉದ್ದೇಶದ ಬಗ್ಗೆ ಮೂರು ಗಂಟೆಗಳ ನೋಟೀಸನ್ನು ಕೊಟ್ಟ ಮತ್ತು ಅಂಥ ಮಹಿಳೆಯು ಹಿಂತೆಗೆಯಲು ಅವಕಾಶವನ್ನು ಕೊಟ್ಟ ಹೊರತು ಪ್ರವೇಶಿಸತಕ್ಕದ್ದಲ್ಲ ಅಥವಾ ಬಾಗಿಲನ್ನು ಮುರಿದು ತೆರೆಯತಕ್ಕದ್ದಲ್ಲ.

(5) ಈ ಕೆಳಕಂಡ ಷರತ್ತುಗಳು, ಅಪವಾದಗಳು ಮತ್ತು ವಿನಾಯಿತಿಗಳಿಗೊಳಪಟ್ಟು ವಾರಂಟಿನ ಮೂಲಕ ಅಧಿಕೃತನಾದ ಯಾರೇ ಅಂಥ ಅಧಿಕಾರಿಗೆ (1)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟಿನಲ್ಲಿ ತಪ್ಪಿತನೆಂದು ಹೆಸರಿಸಿದ ವ್ಯಕ್ತಿಯ ಯಾವುದೇ ಚರಸ್ವತ್ತನ್ನು, ಅದು ಎಲ್ಲಿಯೇ ಕಂಡುಬರಲಿ, ಜಪ್ತಿ ಮಾಡಲು ಅಥವಾ ಯಾವುದೇ ಸ್ಥಿರ ಸ್ವತ್ತನ್ನು ಜಪ್ತಿ ಮಾಡಲು ಕಾನೂನು ಸಮ್ಮತವಾಗಿರತಕ್ಕದ್ದು, ಎಂದರೆ:–

(ಕ) ಕೆಳಕಂಡ ಸ್ವತ್ತನ್ನು ಜಪ್ತಿ ಮಾಡತಕ್ಕದ್ದಲ್ಲ,–

(i) ತಪ್ಪಿತನ, ಅವನ ಹೆಂಡತಿ ಮತ್ತು ಮಕ್ಕಳ ಅವಶ್ಯಕ ಧರಿಸುವ ಉಡುಪುಗಳು; ಮತ್ತು ಹಾಸಿಗೆ ಸಾಮಾನುಗಳು ಮತ್ತು ಅವರ ಅಡಿಗೆ ಮಾಡುವ ಮತ್ತು ಊಟ ಮಾಡುವ ಪಾತ್ರೆಗಳು;

(ii) ಕುಶಲ ಕರ್ಮಿಗಳ ಉಪಕರಣಗಳು;

(iii) ಲೆಕ್ಕ ಪುಸ್ತಕಗಳು; ಅಥವಾ

(iv) ತಪ್ಪಿತನು ಕೃಷಿಕನಾಗಿರುವಾಗ ಅವನ ಕೃಷಿ ಉಪಕರಣಗಳು, ಬೀಜ, ಧಾನ್ಯ ಮತ್ತು ತಪ್ಪಿತನು ತನ್ನ ಜೀವನೋಪಾಯವನ್ನು ಮಾಡಲು ಶಕ್ತಗೊಳಿಸಲು ಅವಶ್ಯಕಗೊಳಿಸುವಂಥ ಜಾನುವಾರುಗಳು;

(ಖ) ಎಂದರೆ ಜಪ್ತಿ ಮಾಡಲಾದ ಸ್ವತ್ತು ವಾರಂಟು ಮೇರೆಗೆ ವಸೂಲೀ ಜಪ್ತಿಯೇ ಮಿತಿ ಮೀರತಕ್ಕದ್ದಲ್ಲ. ವಸೂಲೀಯವಾದ ಮೊಬಲಗಿನ ಮೌಲ್ಯಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ಸಮನಾಗಿರತಕ್ಕದ್ದು, ಮತ್ತು (2)ನೇ ಉಪ–ಪ್ರಕರಣದ ಮೂಲಕ ಅಥವಾ ಅದರ ಮೇರೆಗೆ ವಾರಂಟಿಗೆ ಸಹಿ ಹಾಕಲು ಅಧಿಕೃತನಾದ ವ್ಯಕ್ತಿಯ ಅಥವಾ ವಾರಂಟನ್ನು ಯಾರಿಗೆ ಸಂಭೋದಿಸಲಾಗಿದೆಯೋ ಆ ವ್ಯಕ್ತಿಯ ಅಭಿಪ್ರಾಯದಲ್ಲಿ ಯಾವ ವಸ್ತುಗಳನ್ನು ಜಪ್ತಿ ಮಾಡಲಾಗಿದೆಯೋ ಆ ಯಾವುದೇ ವಸ್ತುಗಳನ್ನು ಹಾಗೆ ಜಪ್ತಿ ಮಾಡಕೂಡದಾಗಿತ್ತು ಎಂದಾದರೆ, ಅವುಗಳನ್ನು ತತ್‌ಕ್ಷಣವೇ ಬಿಡುಗಡೆ ಮಾಡತಕ್ಕದ್ದು;

(ಗ) ಅಧಿಕಾರಿಯು, ಸ್ವತ್ತನ್ನು ಜಪ್ತಿ ಮಾಡಿದ ಕೂಡಲೇ, ಅದರ ವಿವರಣ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ಅವನು ಸಾಗಿಸುವ ಮುಂಚೆ ಜಪ್ತಿ ಮಾಡುವ ಕಾಲದಲ್ಲಿ ಅದರ ಸ್ವಾಧೀನತೆ ಹೊಂದಿದ ವ್ಯಕ್ತಿಗೆ, XIIನೇ ಅನುಸೂಚಿಯಲ್ಲಿ ವಿವರಿಸಿದ ನಮೂನೆಯಲ್ಲಿ ಬರಹದಲ್ಲಿ ನೋಟೀಸನ್ನು ಕೊಡತಕ್ಕದ್ದು;

(ಘ) (i) ಸ್ವತ್ತು, ಸ್ಥಿರಸ್ವತ್ತಾಗಿದ್ದಾಗ ತಪ್ಪಿತನು ಸ್ವತ್ತನ್ನು ಯಾವುದೇ ರೀತಿಯಲ್ಲಿ ವರ್ಗಾವಣೆ ಅಥವಾ ಋಣಭಾರ ಹೊರಿಸುವುದನ್ನು ಮತ್ತು ಎಲ್ಲಾ ವ್ಯಕ್ತಿಗಳು ಅಂಥ ವರ್ಗಾವಣೆ ಅಥವಾ ಋಣಭಾರದಿಂದ ಪ್ರಯೋಜನವನ್ನು ತೆಗೆದುಕೊಳ್ಳುವುದನ್ನು ನಿಷೇಧಿಸುವ ಆದೇಶ ಯಾವುದೇ ಮೂಲಕ ಜಪ್ತಿಯನ್ನು ಮಾಡತಕ್ಕದ್ದು;

(ii) ಆದೇಶವನ್ನು ಸ್ವತ್ತಿನ ಮೇಲೆ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇ ಸ್ಥಳದಲ್ಲಿ ಡಂಗೂರ ಹೊಡೆಯುವ ಮೂಲಕ ಅಥವಾ ಇತರ ರೂಢಿಗತ ವಿಧಾನದ ಮೂಲಕ ಘೋಷಿಸತಕ್ಕದ್ದು

ಮತ್ತು ಆದೇಶದ ಪ್ರತಿಯನ್ನು ಸ್ವತ್ತಿನ ಎದ್ದು ಕಾಣುವ ಭಾಗದಲ್ಲಿ ಮತ್ತು ಪೌರಸಭೆ ಕಚೇರಿಯ ನೋಟೀಸು ಬೋರ್ಡಿನ ಮೇಲೆ ಹಾಗೂ ಸ್ವತ್ತು ಭೂಮಿಯಾಗಿದ್ದು ಸರ್ಕಾರಕ್ಕೆ ಕಂದಾಯವನ್ನು ಸಂದಾಯ ಮಾಡುತ್ತಿರುವಲ್ಲಿ ಆ ಭೂಮಿ ಇರುವ ತಾಲ್ಲೂಕಿನ ತಹಸೀಲ್ದಾರನ ಕಛೇರಿಯಲ್ಲಿಯೂ ಸಹ ಅಂಟಿಸತಕ್ಕದ್ದು;

(ಐ) ಜಪ್ತಿ ಮಾಡಿದ ಸ್ವತ್ತಿನ ಅಥವಾ ಅದರಲ್ಲಿನ ಯಾವುದೇ ಹಿತಾಸಕ್ತಿಯ ಯಾವುದೇ ವರ್ಗಾವಣೆ ಅಥವಾ ಅದರ ಮೇಲಿನ ಋಣಭಾರವನ್ನು ಪೌರಸಭಾ ಕಮಿಷನರನ ಅಥವಾ ಚೀಫ್ ಆಫೀಸರನ ಬರಹದಲ್ಲಿನ ಅನುಮತಿಯಿಲ್ಲದೆ ಮಾಡಿದರೆ, ಅದು, ಜಪ್ತಿ ಮೇರೆಗೆ ಜಾರಿಗೊಳಿಸಬಹುದಾದ ಮುನ್ಸಿಪಲ್ ಕೌನ್ಸಿಲ್‌ನ ಎಲ್ಲಾ ಕ್ಲೇಮುಗಳ ವಿರುದ್ಧ ಶೂನ್ಯವಾಗತಕ್ಕದ್ದು.

**144. ಕರಸ್ಥಗೊಳಿಸಿದ ಅಥವಾ ಜಪ್ತಿ ಮಾಡಿದ ಸರಕುಗಳ ಮತ್ತು ಸ್ವತ್ತಿನ ಮಾರಾಟ.–** (1) ಅಭಿಗ್ರಹಣ ಮಾಡಿದ ಸ್ವತ್ತು ತ್ವರಿತವಾಗಿ ಮತ್ತು ನೈಸರ್ಗಿಕ ನಾಶಕ್ಕೆ ಒಳಪಟ್ಟಿದ್ದಾಗ ಅಥವಾ ಅದನ್ನು ಅಭಿರಕ್ಷೆಯಲ್ಲಿಟ್ಟುಕೊಳ್ಳುವ ವೆಚ್ಚವು ವಸೂಲಿ ಮಾಡಬಹುದಾದ ಮೊಬಲಗಿನೊಂದಿಗೆ ಸೇರಿ ಅದರ ಮೌಲ್ಯವನ್ನು ಮೀರುವ ಸಂಭವವಿದ್ದರೆ, ವಾರಂಟನ್ನು ರುಜು ಮಾಡಿದ ಅಧಿಕಾರಿಯು, ಕರಸ್ಥಗೊಳಿಸಿದಾಗ ಆ ಸ್ವತ್ತು ಯಾರ ಸ್ವಾಧೀನದಲ್ಲಿತ್ತೋ ಆ ವ್ಯಕ್ತಿಗೆ, ಅದನ್ನು ಕೂಡಲೇ ಮಾರಾಟ ಮಾಡಲಾಗುವುದು ಎಂಬ ಬಗ್ಗೆ ನೋಟೀಸನ್ನು ಕೂಡಲೇ ಕೊಡತಕ್ಕದ್ದು ಮತ್ತು ವಾರಂಟಿನಲ್ಲಿ ನಮೂದಿಸಿದ ಮೊಬಲಗನ್ನು ತತ್‌ಕ್ಷಣವೇ ಸಂದಾಯ ಮಾಡಿದ ಹೊರತು ಬಹಿರಂಗ ಹರಾಜಿನಲ್ಲಿ ಅದನ್ನು ತದನುಸಾರವಾಗಿ ಮಾರಾಟ ಮಾಡತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ಕೂಡಲೇ ಅದನ್ನು ಮಾರಾಟ ಮಾಡದಿದ್ದರೆ, ಕರಸ್ಥಗೊಳಿಸಿದ ಸ್ವತ್ತು ಅಥವಾ ಅದರ ಸಾಕಷ್ಟು ಭಾಗ ಅಥವಾ ಜಪ್ತಿ ಮಾಡಲಾದ ಸ್ವತ್ತು ಸ್ಥಿರ ಸ್ವತ್ತಾಗಿದ್ದರೆ, ಅದರ ಸಾಕಷ್ಟು ಭಾಗವನ್ನು, ವಾರಂಟಿಗೆ ಸಹಿ ಮಾಡಿದ ವ್ಯಕ್ತಿಯು ಅದನ್ನು ಅಮಾನತುಗೊಳಿಸಿದ ಅಥವಾ ತಪ್ಪಿತನಿಂದ ಬಾಕಿಯಾಗಿರುವ ಮೊತ್ತವನ್ನು ನೋಟೀಸು, ವಾರೆಂಟು ಮತ್ತು ಕರಸ್ಥ ಅಥವಾ ಜಪ್ತಿ ಅಥವಾ ಸ್ವತ್ತನ್ನು ತಡೆಹಿಡಿದಿರಿಸುವಿಕೆಗೆ ಪ್ರಾಸಂಗಿಕವಾದ ಎಲ್ಲಾ ಖರ್ಚುಗಳ ಸಹಿತವಾಗಿ ಸಂದಾಯ ಮಾಡಿದ ಹೊರತು, ವಾರಂಟನ್ನು ಜಾರಿ ಮಾಡುವ ಅಧಿಕಾರಿಯು ಜಾರಿ ಮಾಡಿದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲವು ಮುಕ್ತಾಯವಾದ ಮೇಲೆ ಪೌರಸಭೆ ಕಮಿಷನರ್‌ನ ಅಥವಾ ಚೀಫ್ ಆಫೀಸರನ ಆದೇಶಗಳ ಮೇರೆಗೆ ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಬಹುದು ಮತ್ತು ಉತ್ಪತ್ತಿಗಳನ್ನು ಮತ್ತು ಅವಶ್ಯವಾಗತಕ್ಕ ಅದರ ಅಂಥ ಭಾಗವನ್ನು ಮೊದಲನೆಯದಾಗಿ, ಅಂಥ ಸ್ವತ್ತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಬಾಕಿಯಿರುವ ಯಾವುದೇ ಮೊತ್ತದ ತೀರಿಕೆಗೆ ಮತ್ತು ಎರಡನೆಯದಾಗಿ ಬಾಕಿಯಿರುವ ಮೊತ್ತದ ಮತ್ತು ಹಿಂದೆ ಹೇಳಿದ ಹಾಗೆ ಅಂಥ ಪ್ರಾಸಂಗಿಕ ಖರ್ಚುಗಳನ್ನು ತೀರಿಸುವುದಕ್ಕಾಗಿ ವಿನಿಯೋಗಿಸತಕ್ಕದ್ದು.

(3) ಖರ್ಚುಗಳೊಂದಿಗೆ ಬಾಕಿಯಾಗಿರುವ ಮೊತ್ತವನ್ನು ಹಿಂದೆ ಹೇಳಿದಂತೆ ತಪ್ಪಿತನು ಸಂದಾಯ ಮಾಡಿರುವಲ್ಲಿ, ಯಾವುದೇ ಸ್ಥಿರ ಸ್ವತ್ತಿನ ಜಪ್ತಿಯನ್ನು ತೆಗೆದುಹಾಕಲಾಗಿದೆಯೆಂದು ಭಾವಿಸತಕ್ಕದ್ದು. (2)ನೇ ಉಪ–ಪ್ರಕರಣದ ಮೇರೆಗೆ ಚರ ಅಥವಾ ಸ್ಥಿರ ಸ್ವತ್ತಿನ ಮಾರಾಟವನ್ನು 145ನೇ ಪ್ರಕರಣದಲ್ಲಿ ಮತ್ತು ಆ ಬಗ್ಗೆ ರಚಿಸಲಾದ ನಿಯಮಗಳಲ್ಲಿ ಹೇಳಲಾದ ರೀತಿಯಲ್ಲಿ ನಡೆಸತಕ್ಕದ್ದು.

**145. ಮಾರಾಟಗಳಿಗೆ ಸಂಬಂಧಿಸಿದಂತೆ ಪ್ರಕ್ರಿಯೆ ಇತ್ಯಾದಿ.–** (1) ಈ ಅಧ್ಯಾಯದ ಉಪಬಂಧಗಳ ಮೇರೆಗೆ ಚರಸ್ವತ್ತನ್ನಾಗಲಿ ಅಥವಾ ಸ್ಥಿರ ಸ್ವತ್ತನ್ನಾಗಲಿ ಮಾರಾಟ ಮಾಡಲು ಆದೇಶಿಸಿರುವಾಗ, ಸಂಬಂಧಪಟ್ಟ ಅಧಿಕಾರಿಯು, ಅವನು ಅವಶ್ಯಕವೆಂದು ಭಾವಿಸಬಹುದಾದ ಯಾವುವೇ ಇತರ ವಿವರಗಳೊಂದಿಗೆ ಮಾರಾಟದ ಕಾಲ ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸಿ ಉದ್ದೇಶಿತ ಮಾರಾಟದ ಬಗ್ಗೆ ಉದ್ಘೋಷಣೆಯನ್ನು ಹೊರಡಿಸತಕ್ಕದ್ದು ಅಂಥ ಉದ್ಘೋಷಣೆಯನ್ನು, ಪೌರಸಭೆ ಕಮಿಷನರನು ಅಥವಾ ಚೀಫ್ ಆಫೀಸರನು ನಿರ್ದೇಶಿಸಬಹುದಾದಂಥ ಸ್ಥಳಗಳಲ್ಲಿ ಮತ್ತು ಅಂಥ ಇತರ ರೀತಿಯಲ್ಲಿ ಡಂಗುರ ಹೊಡೆಯುವ ಮೂಲಕ ಮಾಡತಕ್ಕದ್ದು.

(2) ಸ್ಥಿರ ಸ್ವತ್ತಿನ ಉದ್ದೇಶಿತ ಮಾರಾಟದ ಮತ್ತು ಅದರ ಕಾಲ ಹಾಗೂ ಸ್ಥಳದ ಬಗೆಗಿನ ನೋಟೀಸನ್ನು ಪೌರಸಭಾ ಕಚೇರಿಯ ಸ್ವತ್ತು ಇರುವ ತಾಲ್ಲೂಕಿನ ತಹಸೀಲ್ದಾರರ ಕಚೇರಿಯ ನೋಟೀಸು ಬೋರ್ಡಿನ ಮೇಲೆ ನಿಯಮಿಸಬಹುದಾದಂಥ ಇತರ ಸ್ಥಳಗಳಲ್ಲಿ ಅಂಟಿಸತಕ್ಕದ್ದು. ಚರ ಸ್ವತ್ತಿನ ಸಂದರ್ಭದಲ್ಲಿ ಉದ್ದೇಶಿತ ಮಾರಾಟದ ನೋಟೀಸನ್ನು, ಪೌರಸಭೆ ಕಚೇರಿ ನೋಟೀಸು ಬೋರ್ಡಿನ ಮೇಲೆ ಮತ್ತು ನಿಯಮಿಸಬಹುದಾದಂಥ ಇತರ ಸ್ಥಳಗಳಲ್ಲಿ ಅಂಟಿಸತಕ್ಕದ್ದು, ನೋಟೀಸನ್ನು ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಸಹಾ ಪ್ರಕಟಿಸತಕ್ಕದ್ದು.

(3) ಯಾವುದೇ ಮಾರಾಟವನ್ನು, ಸಾರ್ವತ್ರಿಕ ರಜಾ ದಿನದಂದು, ಇಲ್ಲವೇ, (2)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ನೋಟೀಸುಗಳನ್ನು ಪ್ರಕಟಿಸಲಾದಂಥ ಇತ್ತೀಚಿನ ದಿನಾಂಕದಿಂದ, ಸ್ಥಿರ ಸ್ವತ್ತಿನ ಸಂದರ್ಭದಲ್ಲಿ ಕನಿಷ್ಠ ಪಕ್ಷ ಮೂವತ್ತು ದಿನಗಳು ಅಥವಾ ಚರ ಸ್ವತ್ತಿನ ಸಂದರ್ಭದಲ್ಲಿ ಏಳು ದಿನಗಳು ಮುಕ್ತಾಯವಾಗುವವರೆಗೆ ಮಾಡತಕ್ಕದ್ದಲ್ಲ.

(4) ಮಾರಾಟ ನಡೆಸುತ್ತಿರುವ ಅಧಿಕಾರಿಗೆ ಸ್ವತ್ತಿನ ಹರಾಜನ್ನು ಕೊನೆಗೊಳಿಸುವ ಮುಂಚೆ ಯಾವುದೇ ಕಾಲದಲ್ಲಿ, ತಪ್ಪಿತನು ಅಥವಾ ಅವನ ಪರವಾಗಿ ಯಾರೇ ವ್ಯಕ್ತಿಯು, ಬಾಕಿಯಿರುವ ಮೊತ್ತ ಮತ್ತು ಎಲ್ಲಾ ಇತರ ಚಾರ್ಜುಗಳನ್ನು ಸಂದಾಯ ಮಾಡಿದರೆ, ಮಾರಾಟವನ್ನು ನಿಲ್ಲಿಸತಕ್ಕದ್ದು.

(5) 144ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಮಾರಾಟ ಮಾಡಲಾದ ಸ್ವತ್ತಲ್ಲದ ಚರ ಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ, ಖರೀದಿದಾರನೆಂದು ಘೋಷಿಸಲಾದ ವ್ಯಕ್ತಿಯು, ಅವನ ಸವಾಲಿನ ಮೊಬಲಗಿನ ಶೇಕಡ ಇಪ್ಪತ್ತೈದರಷ್ಟು ಮೊಬಲಗನ್ನು ಕೂಡಲೇ ಠೇವಣಿ ಇಡತಕ್ಕದ್ದು; ಮತ್ತು ಅಂಥ ಠೇವಣಿಯನ್ನು ಇಡಲು ತಪ್ಪಿದರೆ, ಸ್ವತ್ತನ್ನು ತತ್‌ಕ್ಷಣವೇ ಪುನಃ ಹರಾಜಿಗೆ ಇಡತಕ್ಕದ್ದು ಮತ್ತು ಮಾರಾಟ ಮಾಡತಕ್ಕದ್ದು. ಖರೀದಿ ಹಣದ ಸಂಪೂರ್ಣ ಮೊಬಲಗನ್ನು, ಮಾರಾಟವನ್ನು ಸ್ಥಿರೀಕರಿಸಲಾಯಿತೆಂದು ಪೌರಸಭಾ ಕಮಿಷನರನು ಅಥವಾ ಚೀಫ್ ಆಫೀಸರನು ಅವನಿಗೆ ತಿಳಿಸಿದ ದಿನದ ನಂತರ ಮುಂದಿನ ಕೆಲಸದ ದಿನದಂದು ಖರೀದಿದಾರನು ಸಂದಾಯ ಮಾಡತಕ್ಕದ್ದು. ಖರೀದಿ ಹಣದ ಅಂಥ ಸಂಪೂರ್ಣ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಖರೀದಿದಾರನಿಗೆ ಅದರ ಬಗ್ಗೆ ರಸೀತಿಯನ್ನು ಕೊಡತಕ್ಕದ್ದು ಮತ್ತು ಮಾರಾಟವು ಎಲ್ಲಾ ವ್ಯಕ್ತಿಗಳ ವಿರುದ್ಧ ನಿರುಪಾಧಿಕವಾಗಿರತಕ್ಕದ್ದು.

(6) ಸ್ಥಿರಸ್ವತ್ತಿನ ಮಾರಾಟಕ್ಕೆ ಸಂಬಂಧಿಸಿದಂತೆ, ಖರೀದಿದಾರನೆಂದು ಘೋಷಿಸಲಾದ ವ್ಯಕ್ತಿಯು, ಅವನ ಸವಾಲಿನ ಶೇಕಡ ಇಪ್ಪತ್ತೈದರಷ್ಟು ಮೊಬಲಗನ್ನು ಕೂಡಲೇ, ಠೇವಣಿ ಇಡತಕ್ಕದ್ದು, ಮತ್ತು ಅಂಥ ಠೇವಣಿಯನ್ನು ಇಡಲು ತಪ್ಪಿದರೆ, ಸ್ವತ್ತನ್ನು ತತ್‌ಕ್ಷಣವೇ ಪುನಃ ಹರಾಜಿಗೆ ಇಡತಕ್ಕದ್ದು ಮತ್ತು ಮಾರಾಟ ಮಾಡತಕ್ಕದ್ದು. ಖರೀದಿ ಹಣದ ಪೂರ್ಣ ಮೊಬಲಗನ್ನು ಸ್ವತ್ತು ಮಾರಾಟವಾದ ದಿನದಿಂದ ಹದಿನಾರನೇ ದಿನಕ್ಕೆ ಮುಂಚೆ ಖರೀದಿದಾರನು ಸಂದಾಯ ಮಾಡತಕ್ಕದ್ದು.

(7) ಖರೀದಿ ಹಣದ ಸಂಪೂರ್ಣ ಮೊಬಲಗನ್ನು, (5)ನೇ ಉಪ–ಪ್ರಕರಣದ ಅಥವಾ (6)ನೇ ಉಪ–ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸಂದಾಯ ಮಾಡಲು ತಪ್ಪಿದರೆ, ಪೌರಸಭಾ ಕಮಿಷನರನು ಅಥವಾ ಚೀಫ್ ಆಫೀಸರನು ತನ್ನ ವಿವೇಚನಾನುಸಾರ, ಮಾರಾಟದ ವೆಚ್ಚಗಳನ್ನು ಠೇವಣಿಯಿಂದ ಮುರಿದುಕೊಂಡ ತರುವಾಯ ಅದನ್ನು ಸಂಪೂರ್ಣ ಅಥವಾ ಭಾಗಶಃ ಹಣವನ್ನು ಮುನ್ಸಿಪಲ್ ಕೌನ್ಸಿಲಿಗೆ ಮುಟ್ಟುಗೋಲಾಗಿಸತಕ್ಕದ್ದೆಂದು ಹಾಗೂ ಆ ಸ್ವತ್ತನ್ನು ಮರು ಮಾರಾಟ ಮಾಡತಕ್ಕದ್ದು ಎಂದು ನಿರ್ದೇಶಿಸಬಹುದು ಮತ್ತು ಆ ತರುವಾಯ, ನಿರ್ದೇಶಿಸಿದಂತೆ ಠೇವಣಿಯು ಮುಟ್ಟುಗೋಲಾಗತಕ್ಕದ್ದು ಮತ್ತು ತಪ್ಪಿತನಾದ ಖರೀದಿದಾರನು, ಆ ಸ್ವತ್ತಿಗೆ ಅಥವಾ ಯಾವ ಮೊತ್ತಕ್ಕಾಗಿ ಅದನ್ನು ತದನಂತರ ಮಾರಾಟ ಮಾಡಬಹುದೋ ಆ ಮೊತ್ತದ ಯಾವುದೇ ಭಾಗಕ್ಕೆ ಎಲ್ಲಾ ಕ್ಲೇಮನ್ನು ಕಳೆದುಕೊಳ್ಳತಕ್ಕದ್ದು. ಖರೀದಿದಾರನ ಈ

ತಪ್ಪಿನ ಕಾರಣದಿಂದ ನಡೆಸಿದ ಮರು ಮಾರಾಟದಿಂದ ಬಂದ ಉತ್ಪತ್ತಿಗಳು, ಹಾಗೆ ತಪ್ಪಿತ ಖರೀದಿದಾರನ ಸವಾಲಿನ ಬೆಲೆಗಿಂತ ಕಡಿಮೆಯಾದರೆ, ವ್ಯತ್ಯಾಸದ ಹಣವು, ಅವನಿಂದ ಮುನ್ಸಿಪಲ್ ಕೌನ್ಸಿಲಿಗೆ ಬರಬೇಕಾದ ಮೊಬಲಗು ಎಂಬಂತೆ, ಮುನ್ಸಿಪಲ್ ಕೌನ್ಸಿಲ್ ಅವನಿಂದ ಈ ಅಧ್ಯಾಯದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಸೂಲೀಯವಾಗತಕ್ಕದ್ದು.

(8) ಖರೀದಿ ಹಣ ಸಂದಾಯ ಮಾಡಲು ತಪ್ಪಿದಾಗ ಅಥವಾ ಮೊದಲನೆಯ ಮಾರಾಟದ ಮುಂದೂಡಿಕೆಯ ತರುವಾಯದ ಸ್ವತ್ತಿನ ಪ್ರತಿಯೊಂದು ಮರು ಮಾರಾಟವನ್ನು, ತತ್‌ಕ್ಷಣವೇ ಅಂಥ ಮರು ಮಾರಾಟವಾಗುವ ಹೊರತು, ಮೂಲ ಮಾರಾಟಗಳಿಗೆ ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಹೊಸ ನೋಟೀಸನ್ನು ಕೊಟ್ಟ ತರುವಾಯ ಮಾಡತಕ್ಕದ್ದು.

(9) ಈ ಪ್ರಕರಣದ ಮೇರೆಗೆ ಮಾರಾಟ ಮಾಡಲಾದ ಯಾವುದೇ ಸ್ಥಿರ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯ ಒಡೆತನವಿರುವ ಅಥವಾ ಅದನ್ನು ಕ್ಲೇಮು ಮಾಡುವ ಯಾರೇ ವ್ಯಕ್ತಿಯು, ಮಾರಾಟ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ; ಯಾವುದೇ ಕಾಲದಲ್ಲಿ ಪೌರಸಭಾ ಕಚೇರಿಯಲ್ಲಿ,–

(i) ಖರೀದಿ ಹಣದ ಶೇಕಡ ಹತ್ತರಷ್ಟಕ್ಕೆ ಸಮನಾದ ಮೊತ್ತವನ್ನು; ಮತ್ತು

(ii) ಯಾವ ಮೊತ್ತವು ಬಾಕಿಯಿದೆಯೆಂದು ಸ್ಥಿರ ಸ್ವತ್ತನ್ನು ಮಾರಾಟ ಮಾಡಲಾಗಿದೆಯೋ, ಆ ಬಾಕಿಯಿರುವ ಮೊತ್ತಕ್ಕೆ ಸಮನಾದ ಮೊತ್ತವನ್ನು, ಅದರ ಮೇಲೆ ವರ್ಷಕ್ಕೆ ಶೇಕಡ ಒಂಭತ್ತರಷ್ಟು ಬಡ್ಡಿ ಜೊತೆಗೆ ಮತ್ತು ಜಪ್ತಿ, ವ್ಯವಸ್ಥಾಪನ ಮತ್ತು ಮಾರಾಟದ ವೆಚ್ಚಗಳು ಮತ್ತು ಬಾಕಿ ಮೊತ್ತಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ಇತರ ವೆಚ್ಚಗಳನ್ನು

–ಠೇವಣಿ ಇಡಬಹುದು.

ಮತ್ತು ಮಾರಾಟವನ್ನು ರದ್ದುಗೊಳಿಸಲು ಪೌರಸಭೆ ಕಮಿಷನರ್ ಅಥವಾ ಚೀಫ್ ಆಫೀಸರನಿಗೆ ಅರ್ಜಿ ಸಲ್ಲಿಸಬಹುದು.

ಅಂಥ ಠೇವಣಿ ಮಾಡಿದ ಮೇಲೆ ಮತ್ತು ಅರ್ಜಿಯನ್ನು ಸಲ್ಲಿಸಿದ ಮೇಲೆ ಪೌರಸಭಾ ಕಮಿನಷರನು ಅಥವಾ ಚೀಫ್ ಆಫೀಸರನು, ಆದೇಶದ ಮೂಲಕ ಮಾರಾಟವನ್ನು ರದ್ದುಗೊಳಿಸತಕ್ಕದ್ದು ಮತ್ತು ಖರೀದಿದಾರನಿಗೆ, ಅವನು ಠೇವಣಿ ಮಾಡಿದ ಖರೀದಿ ಹಣವನ್ನು, ಅರ್ಜಿದಾರನು ಠೇವಣಿಯಿಟ್ಟ ಶೇಕಡ ಹತ್ತರಷ್ಟರ ಜೊತೆಗೆ ಮರು ಸಂದಾಯ ಮಾಡತಕ್ಕದ್ದು:

ಪರಂತು, ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಅಂಥ ಠೇವಣಿ ಮತ್ತು ಅರ್ಜಿಯನ್ನು ಮಾಡಿದರೆ, ಮೊದಲನೆಯ ಠೇವಣಿದಾರನ ಅರ್ಜಿಯನ್ನು ಅಂಗೀಕರಿಸತಕ್ಕದ್ದು:

ಮತ್ತೂ ಪರಂತು, ಅರ್ಜಿದಾರನು (10)ನೇ ಉಪ–ಪ್ರಕರಣದ ಮೇರೆಗೆ ಸಹ ಅರ್ಜಿದಾರನಾಗಿದ್ದರೆ, ಈ ಉಪ–ಪ್ರಕರಣದ ಮೇರೆಗಿನ ಅವನ ಅರ್ಜಿಯನ್ನು (10)ನೇ ಉಪ–ಪ್ರಕರಣದ ಮೇರೆಗೆ ಅವನ ಅರ್ಜಿಯನ್ನು ಅವನು ಹಿಂತೆಗೆದುಕೊಂಡ ಹೊರತು ಪರಿಗಣಿಸತಕ್ಕದ್ದಲ್ಲ.

(10) ಸ್ಥಿರ ಸ್ವತ್ತಿನ ಮಾರಾಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಯಾವುದೇ ಕಾಲದಲ್ಲಿ, ಮಾರಾಟವನ್ನು ಪ್ರಕಟಿಸುವುದರಲ್ಲಿ ಅಥವಾ ನಡೆಸುವುದರಲ್ಲಿ ಯಾವುದೇ ಮುಖ್ಯ ಅಕ್ರಮತೆ ಅಥವಾ ತಪ್ಪು ಅಥವಾ ಮೋಸವಾಗಿದೆ ಎಂಬ ಕಾರಣದ ಮೇಲೆ ಅದನ್ನು ರದ್ದುಗೊಳಿಸಲು ಪೌರಸಭೆ ಕಮಿಷನರ್ ಅಥವಾ ಚೀಫ್ ಆಫೀಸರನಿಗೆ ಅರ್ಜಿಯನ್ನು ಮಾಡಿಕೊಳ್ಳಬಹುದು; ಆದರೆ (11)ನೇ ಉಪ–ಪ್ರಕರಣದಲ್ಲಿ ಅನ್ಯಥಾ

ಉಪಬಂಧಿಸಿದಂತೆ ಹೊರತು, ಯಾವುದೇ ಮಾರಾಟವನ್ನು ಅವನಿಗೆ ಅದರ ಕಾರಣದಿಂದಾಗಿ ಗಣನೀಯ ಹಾನಿಯುಂಟಾಗಿದೆಯೆಂದು ಪೌರಸಭೆ ಕಮಿಷನರ್ ಅಥವಾ ಚೀಫ್ ಆಫೀಸರನಿಗೆ ಅರ್ಜಿದಾರನು ಮನದಟ್ಟಾಗುವಂತೆ ರುಜುವಾತು ಪಡಿಸಿದ ಹೊರತು, ಯಾವುದೇ ಅಂಥ ಅಕ್ರಮತೆ ಅಥವಾ ತಪ್ಪಿನ ಆಧಾರದ ಮೇಲೆ ರದ್ದುಗೊಳಿಸತಕ್ಕದ್ದಲ್ಲ. ಅರ್ಜಿಯನ್ನು ಪುರಸ್ಕರಿಸಿದರೆ, ಪೌರಸಭೆ ಕಮಿಷನರನು ಅಥವಾ ಚೀಫ್ ಆಫೀಸರನು ಮಾರಾಟವನ್ನು ರದ್ದುಗೊಳಿಸತಕ್ಕದ್ದು ಮತ್ತು ಹೊಸ ಮಾರಾಟಕ್ಕೆ ನಿರ್ದೇಶಿಸತಕ್ಕದ್ದು.

(11) ಮಾರಾಟವಾದ ದಿನಾಂಕದಿಂದ ಮೂವತ್ತು ದಿನಗಳು ಮುಕ್ತಾಯವಾದ ಮೇಲೆ, (9)ನೇ ಉಪ-ಪ್ರಕರಣದ ಅಥವಾ (10)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಮಾಡಿರದಿದ್ದರೆ ಅಥವಾ (10)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಅರ್ಜಿಯನ್ನು ತಿರಸ್ಕರಿಸಿದರೆ, ಪೌರಸಭಾ ಕಮಿಷನರ್ ಅಥವಾ ಚೀಫ್ ಆಫೀಸರನು ಮಾರಾಟವನ್ನು ಸ್ಥಿರೀಕರಿಸಿ ಆದೇಶವನ್ನು ಮಾಡತಕ್ಕದ್ದು:

ಪರಂತು, ಯಾವುದೇ ಕಾರಣದಿಂದಾಗಿ ನ್ಯಾಯದ ಹಿತದೃಷ್ಟಿಗಳಿಂದ ಮಾರಾಟವನ್ನು ರದ್ದುಗೊಳಿಸತಕ್ಕದ್ದೆಂದು ಪೌರಸಭಾ ಕಮಿಷನರನು ಅಥವಾ ಚೀಫ್ ಆಫೀಸರನು ಪರ್ಯಾಲೋಚಿಸಿದರೆ, ಅವನು, ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಮತ್ತು ಅವನು ಸೂಕ್ತವೆಂದು ಭಾವಿಸುವಂಥ ಷರತ್ತುಗಳ ಮೇಲೆ ಮಾರಾಟವನ್ನು ರದ್ದುಗೊಳಿಸಬಹುದು.

(12) ಯಾವುದೇ ಸ್ವತ್ತಿನ ಮಾರಾಟವು ಸ್ಥಿರೀಕರಿಸದಿರುವಾಗಲೆಲ್ಲಾ ಅಥವಾ ರದ್ದುಗೊಳಿಸಿದಾಗಲೆಲ್ಲಾ ಖರೀದಿದಾರನು, ಸಂದರ್ಭಾನುಸಾರ ಅವನ ಠೇವಣಿ ಅಥವಾ ಖರೀದಿ ಹಣದ ಮರುಸಂದಾಯಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(13) ಈ ಅಧ್ಯಾಯದ ಮೇರೆಗೆ ಕರಸ್ಥಗೊಳಿಸಿದ ಯಾವುದೇ ಚರಸ್ವತ್ತಿಗೆ ಯಾರೇ ವ್ಯಕ್ತಿಯು, ಯಾವುದೇ ಕ್ಲೇಮನ್ನು ಮಾಡಿದರೆ, ಪೌರಸಭೆ ಕಮಿಷನರನು ಅಥವಾ ಚೀಫ್ ಆಫೀಸರನು ಕ್ಷಿಪ್ರ ವಿಚಾರಣೆಯ ನಂತರ ಕ್ಲೇಮನ್ನು ಅಂಗೀಕರಿಸತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು. ಕ್ಲೇಮನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಅಂಗೀಕರಿಸಿದರೆ, ಸ್ವತ್ತಿನ ಬಗ್ಗೆ ತದನುಸಾರವಾಗಿ ವ್ಯವಹರಿಸತಕ್ಕದ್ದು. ಕ್ಲೇಮನ್ನು ಹಾಗೆ ಅಂಗೀಕರಿಸಿರುವಷ್ಟರ ಮಟ್ಟಿಗೆ ಹೊರತು, ಸ್ವತ್ತನ್ನು ಮಾರಾಟ ಮಾಡತಕ್ಕದ್ದು ಮತ್ತು ಖರೀದಿದಾರನ ಸ್ವಾಮ್ಯವು ಎಲ್ಲಾ ಉದ್ದೇಶಗಳಿಗಾಗಿ ಮಾನ್ಯವಾಗಿರತಕ್ಕದ್ದು ಮತ್ತು ಉತ್ಪತ್ತಿಗಳು 144ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ವಿಲೆಗೆ ಯೋಗ್ಯವಾಗಿರತಕ್ಕದ್ದು.

(14) 16ನೇ ಪ್ರಕರಣದ ಮೇರೆಗೆ ಯಾವುದೇ ಸ್ಥಿರ ಸ್ವತ್ತನ್ನು ಮುನ್ಸಿಪಲ್ ಕೌನ್ಸಿಲ್ ತಾನೇ ಖರೀದಿ ಮಾಡಿದಲ್ಲಿ, ಅದು ಮಾರಾಟದ ದಿನಾಂಕದಿಂದ ಒಂದು ವರ್ಷದ ಒಳಗೆ ತಪ್ಪಿತ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿನ ಸವಾಲಿನ ಮೊಬಲಗನ್ನು ಮತ್ತು ಜಪ್ತಿಯ, ವ್ಯವಸ್ಥಾಪನೆ, ಮಾರಾಟದ ವೆಚ್ಚಗಳು ಮತ್ತು ಇತರ ಖರ್ಚುಗಳನ್ನು, ಅದರ ಮೇಲೆ ವರ್ಷಕ್ಕೆ ಶೇಕಡ ಒಂಭತ್ತರಷ್ಟು ಬಡ್ಡಿಯೊಂದಿಗೆ ಸಂದಾಯ ಮಾಡಿದ ಮೇಲೆ ತಪ್ಪಿತನಿಗೆ ಸ್ವತ್ತನ್ನು ಹಿಂತಿರುಗಿ ಕೊಡತಕ್ಕದ್ದು.

(15) ಹಿಂದೆ ಹೇಳಿದಂತೆ ಹರಾಜಿನ ಮೂಲಕ ಸ್ಥಿರಸ್ವತ್ತನ್ನು ಮಾರಾಟ ಮಾಡಿದ ತರುವಾಯ ಪೌರಸಭೆ ಕಮಿಷನರ್‌ನು ಅಥವಾ ಚೀಫ್ ಆಫೀಸರನು, ಖರೀದಿದಾರನೆಂದು ಘೋಷಿತನಾದ ವ್ಯಕ್ತಿಗೆ ಅದರ ಸ್ವಾಧೀನವನ್ನು ನೀಡತಕ್ಕದ್ದು ಮತ್ತು ಆ ಪ್ರಮಾಣ ಪತ್ರವು ತಿಳಿಸುವ ಸ್ವತ್ತನ್ನು ಅವನು ಖರೀದಿ ಮಾಡಿರುವನೆಂಬ ಬಗ್ಗೆ ಒಂದು ಪ್ರಮಾಣ ಪತ್ರವನ್ನು ಅವನಿಗೆ ಕೊಡತಕ್ಕದ್ದು.

(16) ಹರಾಜಿಗೆ ಇಡಲಾದ ಯಾವುದೇ ಸ್ಥಿರಸ್ವತ್ತಿನ ಸಂದರ್ಭದಲ್ಲಿ ಸವಾಲು ಕೂಗುವುದು, ಮುನ್ಸಿಪಲ್ ಕೌನ್ಸಿಲಿಗೆ ಕಾನೂನು ಸಮ್ಮತವಾಗಿರತಕ್ಕದ್ದು: ಪರಂತು, ಅಂಥ ಸವಾಲು ಕೂಗಲು ಡೆಪ್ಯುಟಿ ಕಮಿಷನರರ ಪೂರ್ವಾನುಮೋದನೆಯನ್ನು ಪಡೆದಿರಬೇಕು.

(17) ಮಾರಾಟದ ಉತ್ಪತ್ತಿಗಳ ಹೆಚ್ಚುವರಿ ಯಾವುದಾದರೂ ಇದ್ದರೆ, ಅದನ್ನು ಸ್ವತ್ತಿನ ಮಾರಾಟದ ತರುವಾಯ ಕೂಡಲೇ ಪೌರಸಭಾ ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ಅಂಥ ಜಮೆಯ ನೋಟೀಸನ್ನು, ಅದೇ ಸಮಯದಲ್ಲಿ ಒಡೆಯನಿಗೆ ಅಥವಾ ಕರಸ್ಥ ಜಪ್ತಿ ಅಥವಾ ಜಪ್ತಿಯ ಕಾಲದಲ್ಲಿ, ಸ್ವತ್ತಿನ ಸ್ವಾಧೀನತೆ ಹೊಂದಿದ್ದ ವ್ಯಕ್ತಿಗೆ ಕೊಡತಕ್ಕದ್ದು ಮತ್ತು ಅದನ್ನು ನೋಟೀಸಿನ ದಿನಾಂಕದಿಂದ ಮೂರು ವರ್ಷದೊಳಗಾಗಿ ಬರಹದಲ್ಲಿ ಅರ್ಜಿಯನ್ನು ಮಾಡಿಕೊಂಡರೆ, ಅಂಥ ವ್ಯಕ್ತಿಗೆ ಮರು ಸಂದಾಯ ಮಾಡತಕ್ಕದ್ದು. ಅಂಥ ನೋಟೀಸಿನ ದಿನಾಂಕದಿಂದ ಮೂರು ವರ್ಷದೊಳಗಾಗಿ ಕ್ಲೇಮು ಮಾಡದ ಯಾವುದೇ ಮೊತ್ತವು ಮುನ್ಸಿಪಲ್ ಕೌನ್ಸಿಲಿನ ಸ್ವತ್ತಾಗಿರತಕ್ಕದ್ದು.

**146. ಜಿಲ್ಲೆಯ ಹೊರಗಡೆ ಮಾರಾಟ.–** ವಾರಂಟನ್ನು ಪೌರಸಭೆ ಹೊರಗಡೆಗೆ ಸಂಭೋದಿಸಿರುವಲ್ಲಿ, ಪೌರಸಭೆ ಕಮಿಷನರರನು ಅಥವಾ ಚೀಫ್ ಆಫೀಸರರನು, ವಾರಂಟನ್ನು ಸಂಭೋದಿಸಿದ ಅಧಿಕಾರಿಗೆ ಕರಸ್ಥ ಅಥವಾ ಜಪ್ತಿ ಮಾಡಿದ ಸ್ವತ್ತನ್ನು ಮಾರಾಟ ಮಾಡುವಂತೆ ಹಿಂಬರಹದ ಮೂಲಕ ನಿರ್ದೇಶಿಸಬಹುದು; ಅಂಥ ಸಂದರ್ಭದಲ್ಲಿ ಅಂಥ ಅಧಿಕಾರಿಯು, ಸ್ವತ್ತನ್ನು ಮಾರಲು ಮತ್ತು 144 ಮತ್ತು 145ನೇ ಪ್ರಕರಣಗಳ ಉಪಬಂಧಗಳ ಅನುಸಾರವಾಗಿ ಮಾರಾಟಕ್ಕೆ ಪ್ರಾಸಂಗಿಕವಾದ ಎಲ್ಲಾ ವಿಷಯಗಳನ್ನು ಮಾಡಲು ಮತ್ತು 144ನೇ ಪ್ರಕರಣದ (1) ಮತ್ತು (2)ನೇ ಉಪ–ಪ್ರಕರಣಗಳ ಮೇರೆಗೆ, ಅಂಥ ಮಾರಾಟಕ್ಕೆ ಸಂಬಂಧಿಸಿದಂತೆ ವಾರಂಟನ್ನು ಅಮಾನತುಗೊಳಿಸುವ ಅಧಿಕಾರವನ್ನು ಹೊರತುಪಡಿಸಿ, ಪೌರಸಭೆ ಕಮಿಷನರ್ ಅಥವಾ ಚೀಫ್ ಆಫೀಸರ್‌ನ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಕರ್ತವ್ಯಗಳನ್ನು ನೆರವೇರಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು. ಅಂಥ ಅಧಿಕಾರಿಯು, ಅವನು ವಸೂಲಿಗಾಗಿ ವಹಿಸಿದ ಎಲ್ಲಾ ಖರ್ಚುಗಳನ್ನು ಮುರಿದುಕೊಂಡ ತರುವಾಯ, ವಾರೆಂಟ್ ಮೇರೆಗೆ ವಸೂಲಿ ಮಾಡಿದ ಮೊಬಲಗನ್ನು ಅದನ್ನು ಹೊರಡಿಸಿದ ಪೌರಸಭಾ ಕಮೀಷನರ್ ಅಥವಾ ಚೀಫ್ ಆಫೀಸರನಿಗೆ ಜಮೆ ಕಟ್ಟತಕ್ಕದ್ದು; ಅವನು 144ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ಅದನ್ನು ವಿಲೆ ಮಾಡತಕ್ಕದ್ದು.

**147. ಕರಸ್ಥವು ಕಾರ್ಯಸಾಧ್ಯವಲ್ಲದಾಗ ಪ್ರಕ್ರಿಯೆ.–** (1) ಈ ಅಧ್ಯಾಯದ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ತಪ್ಪಿತನ ಸ್ವತ್ತಿನ ಕರಸ್ಥ ಅಥವಾ ಸಾಕಷ್ಟು ಕರಸ್ಥವು ಯಾವುದೇ ಕಾರಣದಿಂದ ಕಾರ್ಯ ಸಾಧ್ಯವಾಗದಿದ್ದರೆ, ಮುನ್ಸಿಪಲ್ ಕೌನ್ಸಿಲು, ತಪ್ಪಿತನನ್ನು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ಮುಂದೆ ಪ್ರಾಸಿಕ್ಯೂಟ್ ಮಾಡಬಹುದು:

ಪರಂತು, ಯಾವುದಕ್ಕೆ ಸಂಬಂಧಿಸಿದಂತೆ ಯಾವುದೇ ತೆರಿಗೆಯು ಸಂಪೂರ್ಣವಾಗಿ ಅಥವಾ ಭಾಗಶಃ ಸಂದಾಯವಾಗದೆ ಉಳಿದಿದೆಯೋ ಆ ಕಟ್ಟಡದ ಅಥವಾ ಭೂಮಿಯ ಅಧಿಭೋಗದಾರನು, ಸಂಬಂಧಿಸಿದ ಕಟ್ಟಡ ಅಥವಾ ಭೂಮಿಯ ಮೇಲೆ ಕಂಡುಬರುವ ಚರಸ್ವತ್ತಿನ ಕರಸ್ಥ ಅಥವಾ ಸಾಕಷ್ಟು ಕರಸ್ಥವನ್ನು ಉದ್ದೇಶಪೂರ್ವಕವಾಗಿ ತಡೆಗಟ್ಟಿದ ಹೊರತು ಅವನಿಂದ ವಸೂಲೀಯವಾಗಬಹುದಾದ ಯಾವುದೇ ಮೊತ್ತಕ್ಕೆ ಸಂಬಂಧಪಟ್ಟಂತೆ ಪ್ರಾಸಿಕ್ಯೂಷನ್‌ಗೆ ಗುರಿಯಾಗತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗೆ ಪ್ರಾಸಿಕ್ಯೂಟ್ ಆದ ಪ್ರತಿಯೊಬ್ಬ ವ್ಯಕ್ತಿಯು, ತನ್ನಿಂದ ಬಾಕಿಯಿರುವ ಮೊಬಲಗನ್ನು ಸಂದಾಯ ಮಾಡಲು ಉದ್ದೇಶಪೂರ್ವಕವಾಗಿ ತಪ್ಪಿರುವುದಾಗಿ ಮ್ಯಾಜಿಸ್ಟ್ರೇಟನಿಗೆ ಮನದಟ್ಟಾಗುವಂತೆ ರುಜುವಾತುಪಡಿಸಿದ ಮೇಲೆ,–

(ಕ) ತೆರಿಗೆ ಮತ್ತು ವಾರಂಟು ಫೀಜು ಯಾವುದಾದರೂ ಇದ್ದರೆ; ಮತ್ತು

(ಖ) ಕರಸ್ಥಗೊಳಿಸಲಾಗಿದ್ದರೆ, ಕರಸ್ಥ ಫೀಜು ಮತ್ತು ಕರಸ್ಥಗೊಳಿಸಿದ ಸ್ವತ್ತಿನ ಹಿಡಿದಿರಿಸುವಿಕೆ ಮತ್ತು ಮಾರಾಟಕ್ಕೆ ಪ್ರಾಸಂಗಿಕವಾದ ವೆಚ್ಚಗಳು ಯಾವುದಾದರೂ ಇದ್ದರೆ

–ಅವುಗಳ ಬಾಬ್ತು ಅವನು ಬಾಕಿಯಾಗಿರಬಹುದಾದಂಥ ಮೊಬಲಗಿನ ಎರಡರಷ್ಟಕ್ಕೆ ಮೀರದ ಜುಲ್ಮಾನೆಯನ್ನು ಸಂದಾಯ ಮಾಡಲು ಗುರಿಯಾಗತಕ್ಕದ್ದು.

(3) (2)ನೇ ಉಪ–ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯು, ಅಪರಾಧದ ಅಪರಾಧಿಯೆಂದು ನಿರ್ಣೀತನಾದಾಗಲೆಲ್ಲಾ, ಮ್ಯಾಜಿಸ್ಟ್ರೇಟನು, ವಿಧಿಸಬಹುದಾದ ಯಾವುದೇ ಜುಲ್ಮಾನೆಯ ಜೊತೆಗೆ, (2)ನೇ ಉಪ–ಪ್ರಕರಣದ (ಕ) ಮತ್ತು (ಖ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಶೀರ್ಷಿಕೆಗಳಡಿಯಲ್ಲಿ ಬಾಕಿಯಾಗಿರುವ ಮೊಬಲಗು, ಯಾವುದಾದರೂ ಇದ್ದರೆ, ಅದನ್ನು ಕ್ಷಿಪ್ರವಾಗಿ ವಸೂಲಿ ಮಾಡತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲಿಗೆ ಸಂದಾಯ ಮಾಡಬೇಕು, ಮತ್ತು ತನ್ನ ವಿವೇಚನಾನುಸಾರ ಪ್ರಾಸಿಕ್ಯೂಷನ್ ಖರ್ಚುಗಳೆಂದು ನಿಗದಿಪಡಿಸಬಹುದಾದ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ಸಹ ಕ್ಷಿಪ್ರವಾಗಿ ವಸೂಲಿ ಮಾಡಬಹುದು, ಮುನ್ಸಿಪಲ್ ಕೌನ್ಸಿಲಿಗೆ ಸಂದಾಯ ಮಾಡಬಹುದು.

**148. ಪೌರಸಭೆಯನ್ನು ಬಿಡಲಿರುವ ವ್ಯಕ್ತಿಗಳ ವಿರುದ್ಧ ಕ್ಷಿಪ್ರ ವ್ಯವಹರಣೆಯನ್ನು ತೆಗೆದುಕೊಳ್ಳಬಹುದು.–** (1) ಯಾವ ವ್ಯಕ್ತಿಯಿಂದ ಈ ಅಧಿನಿಯಮದ ಮೇರೆಗೆ ವಸೂಲಿ ಮಾಡಬಹುದಾದ ಯಾವುದೇ ಮೊತ್ತವು ಬಾಕಿಯಿದೆಯೋ ಅಥವಾ ಬಾಕಿಯಾಗುವಂತಿದೆಯೋ, ಆ ಯಾರೇ ವ್ಯಕ್ತಿಯು, ಪೌರಸಭೆಯನ್ನು ಬಿಡಲಿದ್ದಾನೆ ಎಂದು ಮುನ್ಸಿಪಲ್ ಕೌನ್ಸಿಲಿಗೆ ನಂಬಲು ಕಾರಣಗಳಿದ್ದರೆ, ಪೌರಸಭೆಗೆ ಬಾಕಿಯಿರುವ ಅಥವಾ ಬಾಕಿಯಾಗಬಹುದಾದ ಮೊತ್ತಕ್ಕಾಗಿ ಬಿಲ್ಲನ್ನು ಅಂಥ ವ್ಯಕ್ತಿಗೆ ಸಲ್ಲಿಸುವಂತೆ ಮಾಡಬಹುದು ಮತ್ತು ಅದನ್ನು ಕೂಡಲೇ ಸಂದಾಯ ಮಾಡುವಂತೆ ತಗಾದೆ ಮಾಡಬಹುದು.

(2) ಅಂಥ ಬಿಲ್ಲನ್ನು ಸಲ್ಲಿಸಿದ ಮೇಲೆ, ಸದರಿ ವ್ಯಕ್ತಿಯು, ಅವನಿಂದ ಬಾಕಿಯಿರುವ ಅಥವಾ ಬಾಕಿಯಾಗಬಹುದಾದ ಮೊತ್ತವನ್ನು ತತ್‌ಕ್ಷಣವೇ ಸಂದಾಯ ಮಾಡದಿದ್ದರೆ, ಮೊಬಲಗನ್ನು ತಪ್ಪಿತನ ಚರ ಸ್ವತ್ತಿನ ಕರಸ್ಥ ಮತ್ತು ಮಾರಾಟದ ಮೂಲಕ ಅಥವಾ ಸ್ಥಿರ ಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಇಲ್ಲಿ ಇನ್ನು ಮುಂದೆ ನಿಯಮಿಸಲಾದ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು. ಆದರೆ ತಗಾದೆಯ ಯಾವುದೇ ನೋಟೀಸನ್ನು ತಪ್ಪಿತನ ಮೇಲೆ ಜಾರಿ ಮಾಡುವುದು ಅವಶ್ಯಕವಾಗಿರತಕ್ಕದ್ದಲ್ಲ ಮತ್ತು ಮುನ್ಸಿಪಲ್ ಕೌನ್ಸಿಲಿನ ಕರಸ್ಥ ಅಥವಾ ಜಪ್ತಿ ಮತ್ತು ಮಾರಾಟದ ವಾರಂಟನ್ನು ವಿಳಂಬವಿಲ್ಲದೆ ಹೊರಡಿಸಬಹುದು ಮತ್ತು ಜಾರಿಗೊಳಿಸಬಹುದು.

**149. ಫೀಜುಗಳು.–** (ಕ) 142ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ನೋಟೀಸಿಗೆ,–

(ಖ) 143ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ವಾರಂಟಿಗೆ; ಮತ್ತು

(ಗ) 143ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಕರಸ್ಥ ಮತ್ತು ಜಪ್ತಿಗೆ–ಫೀಜುಗಳನ್ನು;

–143ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಅಭಿಗ್ರಹಣ ಮಾಡಿದ ಯಾರೇ ಪಶುಸಂಪತ್ತಿನ ನಿರ್ವಹಣೆ ಖರ್ಚನ್ನು ನಿಯಮಗಳಲ್ಲಿ ಆ ಬಗ್ಗೆ ನಿರ್ದಿಷ್ಟಪಡಿಸಿದ ಅನುಕ್ರಮ ದರಗಳಲ್ಲಿ ವಿಧಿಸತಕ್ಕದ್ದು ಮತ್ತು 144ನೇ ಪ್ರಕರಣದ ಮೇರೆಗೆ ವಸೂಲ್ಮಾಡಬೇಕಾದ ವಸೂಲಿ ಖರ್ಚಿನಲ್ಲಿ ಸೇರಿಸತಕ್ಕದ್ದು.

**150. ಮ್ಯಾಜಿಸ್ಟ್ರೇಟನಿಗೆ ಅಪೀಲು.–** 142ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಅಥವಾ 148ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಜಾರಿ ಮಾಡಿದ ತಗಾದೆಯ ನೋಟೀಸಿನಲ್ಲಿ ಒಳಗೊಂಡ ಯಾವುದೇ ಕ್ಲೇಮಿನ ವಿರುದ್ಧ ಅಪೀಲುಗಳನ್ನು, ಸಂಬಂಧಪಟ್ಟ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿ ಹೊಂದಿರುವ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಮಾಡಬಹುದು.

ಆದರೆ ಅಂಥ ಯಾವುದೇ ಅಪೀಲನ್ನು,–

(ಕ) ದೂರಲಾದ ನೋಟೀಸಿನ ಜಾರಿಯ ತರುವಾಯ ಒಂದು ತಿಂಗಳೊಳಗಾಗಿ ಅಪೀಲನ್ನು ಮಾಡಿಕೊಂಡಿರುವ ಹೊರತು; ಮತ್ತು

(ಖ) ಯಾವ ಕಾರಣಗಳ ಮೇಲೆ ಆ ಕ್ಲೇಮನ್ನು ಪ್ರಶ್ನಿಸಲಾಗಿದೆಯೋ ಆ ಕಾರಣಗಳನ್ನು ತಿಳಿಸಿ, ಎಂದರೆ:–

(i) ಕಟ್ಟಡಗಳ ಅಥವಾ ಭೂಮಿಗಳ ಸಂದರ್ಭದಲ್ಲಿ ಸಂದರ್ಭಾನುಸಾರ ನಿರ್ಧಾರಕ ಅಥವಾ ಚೀಫ್ ಆಫೀಸರ್ ಅಥವಾ ಪೌರಸಭಾ ಕಮಿಷನರನಿಗೆ ಯಾವ ತೆರಿಗೆ ನಿರ್ಧರಣೆ ಅಥವಾ ಬದಲಾವಣೆ ಅನುಸಾರವಾಗಿ ನೋಟೀಸನ್ನು ತಯಾರಿಸಲಾಗಿದೆಯೋ ಆ ತೆರಿಗೆ ನಿರ್ಧರಣೆ ಅಥವಾ ಬದಲಾವಣೆಯ ಬಗ್ಗೆ 106 ಮತ್ತು 107ನೇ ಪ್ರಕರಣದ ಮೇರೆಗೆ ಕೊಟ್ಟ ನೋಟೀಸಿನಲ್ಲಿ ನಿಗದಿಪಡಿಸಿದ ಕಾಲದೊಳಗೆ;

(ii) ಯಾವ ಕ್ಲೇಮಿನ ಬಗ್ಗೆ 142ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ತಗಾದೆ ನೋಟೀಸನ್ನು ಸಲ್ಲಿಸಲಾಗಿದೆಯೋ ಆ ಯಾವುದೇ ಇತರ ಕ್ಲೇಮಿನ ಸಂದರ್ಭದಲ್ಲಿ ಅಂಥ ನೋಟೀಸನ್ನು ಜಾರಿ ಮಾಡಿದ ತರುವಾಯ ಮುಂದಿನ ಹದಿನೈದು ದಿನಗಳೊಳಗೆ ಮುನ್ಸಿಲ್ ಕೌನ್ಸಿಲಿಗೆ, ಬರಹದಲ್ಲಿ ಅರ್ಜಿಯನ್ನು ಮಾಡಿರುವ ಹೊರತು; ಮತ್ತು

(ಗ) ಅಪೀಲುದಾರನು ಒಪ್ಪಿಕೊಂಡ ಮೊಬಲಗನ್ನು ಅವನು ಪೌರಸಭಾ ಕಚೇರಿಯಲ್ಲಿ ಠೇವಣಿಯಿರಿಸಿರುವ ಹೊರತು

– ಸುನಾವಣೆ ಮಾಡತಕ್ಕದ್ದಲ್ಲ ಮತ್ತು ನಿರ್ಧರಿಸತಕ್ಕದ್ದಲ್ಲ.

(2) ಯಾವುದೇ ಅಪೀಲಿನ ಮೇಲೆ ಮ್ಯಾಜಿಸ್ಟ್ರೇಟನ ತೀರ್ಮಾನವು, ಯಾರೇ ಪಕ್ಷಕಾರನ ಕೋರಿಕೆಯಂತೆ, ಯಾವ ನ್ಯಾಯಾಲಯಕ್ಕೆ ಸಾಮಾನ್ಯವಾಗಿ ಇವನು ನೀಡುವ ತೀರ್ಮಾನದ ಮೇಲೆ ಅಪೀಲು ಮಾಡಲು ಅವಕಾಶವಿದೆಯೋ, ಆ ನ್ಯಾಯಾಲಯವು ಪುನರೀಕ್ಷಣೆಗೆ ಒಳಪಟ್ಟಿರತಕ್ಕದ್ದು.

(3) (2)ನೇ ಉಪ–ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಪ್ರಕರಣದ ಮೇರೆಗಿನ ಯಾವುದೇ ಅಪೀಲು ಅಥವಾ ಪುನರೀಕ್ಷಣೆಯ ಮೇಲೆ ಮ್ಯಾಜಿಸ್ಟ್ರೇಟನ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲ್ ಅದನ್ನು ಕಾರ್ಯಗತಗೊಳಿಸತಕ್ಕದ್ದು.

(4) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ತೆರಿಗೆ ನಿರ್ಧರಣಾ ಪಟ್ಟಿಯಲ್ಲಿ ಮಾಡಲಾದ ಯಾವುದೇ ನಮೂದು ಮತ್ತು ಈ ಅಧ್ಯಾಯದ ಮೇರೆಗೆ

ಯಾರೇ ವ್ಯಕ್ತಿಯು ಕ್ಲೇಮು ಮಾಡಿದ ಯಾವುದೇ ಮೊತ್ತವನ್ನು, ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರದ ಮುಂದೆ ಪ್ರಶ್ನಿಸತಕ್ಕದ್ದಲ್ಲ.

**151. ತೆರಿಗೆಗಾಗಿ ಭೂಮಿ ಕಟ್ಟಡ ಇತ್ಯಾದಿಗಳ ಹೊಣೆಗಾರಿಕೆ.–** 110ನೇ ಪ್ರಕರಣದಲ್ಲಿ ನಮೂದಿಸಿದ ಭೂಮಿಗಳ ಅಥವಾ ಕಟ್ಟಡಗಳ ಅಥವಾ ಅವೆರಡರ ಮೇಲೆ ತೆರಿಗೆಯ ರೂಪದಲ್ಲಿ ವಿಧಿಸಿದ ಯಾವುದೇ ತೆರಿಗೆಯಿಂದಾಗಿ ಬಾಕಿಯಿರುವ ಎಲ್ಲಾ ಮೊತ್ತಗಳು, ಅದರ ಮೇಲೆ ಸರ್ಕಾರಕ್ಕೆ ಬಾಕಿಯಿರುವ, ಭೂಕಂದಾಯ ಯಾವುದಾದರೂ ಇದ್ದರೆ, ಅದರ ಪೂರ್ವ ಸಂದಾಯಕ್ಕೆ ಒಳಪಟ್ಟು, ಅಂಥ ತೆರಿಗೆಯನ್ನು ವಿಧಿಸಬಹುದಾದಂಥ ಕಟ್ಟಡ ಅಥವಾ ಭೂಮಿ ಮೇಲೆ ಮತ್ತು ಅಂಥ ಕಟ್ಟಡ ಅಥವಾ ಭೂಮಿಯೊಳಗೆ ಅಥವಾ ಮೇಲೆ ಕಂಡು ಬರುವ ಮತ್ತು ಅಂಥ ತೆರಿಗೆ ಅಥವಾ ತೆರಿಗೆಗಳಿಗೆ ಹೊಣೆಯಾದ ವ್ಯಕ್ತಿಗೆ ಸೇರಿದ ಚರಸ್ವತ್ತು ಯಾವುದಾದರೂ ಇದ್ದರೆ ಅದರ ಮೇಲೆ ಮೊದಲ ಋಣಭಾರವಾಗಿರತಕ್ಕದ್ದು ಮತ್ತು ಅದನ್ನು ಭೂಕಂದಾಯ ಬಾಕಿಗಳೆಂಬಂತೆ ಅವು ವಸೂಲೀಯವಾಗತಕ್ಕದ್ದು:

ಪರಂತು, ಯಾವುದೇ ಅಂಥ ತೆರಿಗೆಯ ಯಾವುದೇ ಬಾಕಿಯನ್ನು ಒಡೆಯನಲ್ಲದ ಯಾರೇ ಅಧಿಭೋಗದಾರನಿಂದ ಅದು ಮೂರು ವರ್ಷಗಳಿಗಿಂತ ಹೆಚ್ಚು ಕಾಲ ಅಥವಾ ಅಂಥ ಅಧಿಭೋಗದಾರನು ಅದರ ಅಧಿಭೋಗದಲ್ಲಿರದ ಅವಧಿಗಾಗಿ ಬಾಕಿಯಾಗಿದ್ದರೆ ವಸೂಲ್ಮಾಡತಕ್ಕದ್ದಲ್ಲ.

**152. ಕರಸ್ಥ ಮತ್ತು ಮಾರಾಟದ ಮೂಲಕ ವಸೂಲಿ ಮಾಡುವ ಅಧಿಕಾರದ ನಿಲಂಬನ.–** ಸರ್ಕಾರವು, ಯಾವುದೇ ಕಾಲದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಪೌರಸಭೆಯಲ್ಲಿ 143 ಮತ್ತು 144ನೇ ಪ್ರಕರಣಗಳ ಪ್ರವರ್ತನೆಯನ್ನು ನಿಲಂಬನಗೊಳಿಸಬಹುದು ಮತ್ತು ಅಧಿಸೂಚನೆಯಲ್ಲಿ ಈ ಬಗ್ಗೆ ನಿಗದಿಪಡಿಸತಕ್ಕಂಥ ದಿನಾಂಕದಿಂದ ಸದರಿ ಪ್ರಕರಣಗಳ ಮೇರೆಗೆ ವಸೂಲ್ಮಾಡಬಹುದಾದ ಯಾವುದೇ ತೆರಿಗೆಯಿಂದಾಗಿ ಬಾಕಿಯಿರುವ ಪ್ರತಿಯೊಂದು ಮೊಬಲಗು, 276ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ, ಅದರಲ್ಲಿ ಉಲ್ಲೇಖಿಸಲಾದಂಥ ಜುಲ್ಮಾನೆಗಳ ವಸೂಲಿಗಾಗಿ ಉಪಬಂಧಿಸಿದ ರೀತಿಯಲ್ಲಿ ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟನಿಗೆ ಸಲ್ಲಿಸಿದ ಅರ್ಜಿಯ ಮೇಲೆ, ವಸೂಲೀಯವಾಗತಕ್ಕದ್ದು ಮತ್ತು ಅನ್ಯಥಾ ಅಲ್ಲ.

**153. ಎಲ್ಲಾ ಸಂದಾಯಗಳಿಗೆ ರಸೀತಿಯನ್ನು ಕೊಡತಕ್ಕದ್ದು.–** ಈ ಅಧಿನಿಯಮದ ಮೇರೆಗೆ ಯಾವುದೇ ತೆರಿಗೆಯ ಬಾಬ್ತು ಸಂದಾಯ ಮಾಡಿದ ಎಲ್ಲಾ ಮೊತ್ತಗಳಿಗಾಗಿ, ಮೊಬಲಗು ಮತ್ತು ಆ ತೆರಿಗೆಯನ್ನು ಯಾವುದಕ್ಕಾಗಿ ಸಂದಾಯ ಮಾಡಲಾಗಿದೆಯೋ ಅದನ್ನು ನಮೂದಿಸಿ, ಒಂದು ರಸೀತಿಯನ್ನು ಅದನ್ನು ಸ್ವೀಕರಿಸುವ ವ್ಯಕ್ತಿಯು ಕೊಡಮಾಡತಕ್ಕದ್ದು.

**154. ಭೂಮಿಯ ಮೇಲಿನ ಬಾಡಿಗೆ ವಸೂಲಿ.–** (1) ಬಾಡಿಗೆ ಬಾಬ್ತು ಯಾರೇ ವ್ಯಕ್ತಿಯಿಂದ ಯಾವುದೇ ಮೊತ್ತವು, ಮುನ್ಸಿಪಲ್ ಕೌನ್ಸಿಲಿಗೆ ಸಂಬಂಧಿಸಿದಂತೆ ಮತ್ತು ಅದರಲ್ಲಿ ನಿಹಿತವಾದ ಅಥವಾ ಅದರ ವ್ಯವಸ್ಥಾಪನೆಗೆ ವಹಿಸಿದ ಯಾವುದೇ ಮೊತ್ತವು ಬಾಕಿಯಿರುವಲ್ಲಿ ಅಂಥ ಬಾಡಿಗೆಯ ಯಾವುದೇ ಬಾಕಿಯನ್ನು ಅದು ಭೂಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲ್ಮಾಡಲು ಮುನ್ಸಿಪಲ್ ಕೌನ್ಸಿಲ್, ಡೆಪ್ಯುಟಿ ಕಮಿಷನರನಿಗೆ ಅರ್ಜಿ ಸಲ್ಲಿಸಬಹುದು.

(2) ಡೆಪ್ಯುಟಿ ಕಮಿಷನರನು, ಮೊತ್ತವು ಬಾಕಿಯಿದೆಯೆಂದು ಮನದಟ್ಟು ಮಾಡಿಕೊಂಡ ಮೇಲೆ ಅದನ್ನು ಭೂಕಂದಾಯದ ಬಾಕಿಯೆಂಬಂತೆ ವಸೂಲು ಮಾಡಲು ಮುಂದುವರೆಯತಕ್ಕದ್ದು.

## ಅಧ್ಯಾಯ–VIII

## ಮೇಲ್ಪಾಟು ಯೋಜನೆಗಳು ಮತ್ತು ಮೇಲ್ಪಾಟು ಮಂಡಲಿಗಳು

**155. ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಮೇಲ್ಪಾಟುಗಳಿಗಾಗಿ ವೆಚ್ಚವನ್ನು ವಹಿಸಲು ಮುನ್ಸಿಪಲ್ ಕೌನ್ಸಿಲಿನ ಅಧಿಕಾರ ಇತ್ಯಾದಿ.–** ಮುನ್ಸಿಪಲ್ ಕೌನ್ಸಿಲ್, ಸರ್ಕಾರದ ನಿಯಂತ್ರಣಕ್ಕೊಳಪಟ್ಟು,–

(1) (ಕ) ಪೌರಸಭೆಯೊಳಗಿನ ಪ್ರದೇಶಗಳ ಮೇಲ್ಪಾಟಿಗಾಗಿ ಅಥವಾ ವಿಸ್ತರಣೆಗಾಗಿ ಅಥವಾ ಅವೆರಡಕ್ಕಾಗಿ ವಿವರವಾದ ಯೋಜನೆಗಳನ್ನು (ಇಲ್ಲಿ ಇನ್ನು ಮುಂದೆ ಮೇಲ್ಪಾಟು ಯೋಜನೆಯೆಂದು ಉಲ್ಲೇಖಿಸಲಾದ) ರೂಪಿಸಬಹುದು;

(ಖ) ಯಾವುದೇ ಅಂಥ ಪ್ರದೇಶದ ಮೇಲ್ಪಾಟು ಅಥವಾ ಅಭಿವೃದ್ಧಿಗಾಗಿ ಮತ್ತು ಕಾಲಕಾಲಕ್ಕೆ ಅವಶ್ಯವಕವಾಗಬಹುದಾದಂಥ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ಯಾವುವೇ ಕಾಮಗಾರಿಗಳನ್ನು ಕೈಗೊಳ್ಳಬಹುದು ಮತ್ತು ಯಾವುದೇ ವೆಚ್ಚವನ್ನು ವಹಿಸಬಹುದು.

(2) ತನ್ನ ಸಾಧನ ಸಂಪತ್ತುಗಳು ಸಾಕಷ್ಟಿವೆಯೆಂದು ಮುನ್ಸಿಪಲ್ ಕೌನ್ಸಿಲಿಗೆ ಮನದಟ್ಟಾದರೆ, ಅದು ತಾನಾಗಿಯೇ ಕಾಲಕಾಲಕ್ಕೆ ಯಾವುದೇ ಹೊಸ ಅಥವಾ ಹೆಚ್ಚಿನ ಮೇಲ್ಪಾಟು ಯೋಜನೆಗಳನ್ನು ಸಹ ಮಾಡಬಹುದು.

(3) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದಾಗ್ಯೂ ಸರ್ಕಾರವು, ಅದು ಅವಶ್ಯವೆಂದು ಭಾವಿಸಿದಾಗಲೆಲ್ಲಾ, ಯಾವುದೇ ಮೇಲ್ಪಾಟು ಯೋಜನೆ ಅಥವಾ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಹಾಗೂ ಆ ಯೋಜನೆ ಅಥವಾ ಕಾಮಗಾರಿಯನ್ನು ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆ ಮತ್ತು ಷರತ್ತುಗಳಿಗೊಳಪಟ್ಟು ಕಾರ್ಯಗತಗೊಳಿಸಬೇಕೆಂದು ಮುನ್ಸಿಪಲ್ ಕೌನ್ಸಿಲನ್ನು ಅಗತ್ಯಪಡಿಸಬಹುದು.

(4) ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಮೇಲ್ಪಾಟು ಯೋಜನೆಯು ಅಗತ್ಯವೆಂದು ಮುನ್ಸಿಪಲ್ ಕೌನ್ಸಿಲು ನಿರ್ಣಯವನ್ನು ಅಂಗೀಕರಿಸಿದ ಮೇಲೆ, ಈ ಬಗ್ಗೆ ಮುನ್ಸಿಪಲ್ ಕೌನ್ಸಿಲಿನಿಂದ ಸಾಮಾನ್ಯವಾಗಿಯಾಗಲಿ ಅಥವಾ ವಿಶೇಷವಾಗಿಯಾಗಲಿ ಅಧಿಕೃತನಾದ ಯಾರೇ ವ್ಯಕ್ತಿ ಮತ್ತು ಆತನಿಗೆ ಸಹಾಯ ನೀಡುವ ಪೌರಸಭಾ ನೌಕರರು, 1984ರ ಭೂ ಆರ್ಜನಾ ಅಧಿನಿಯಮದ 4ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸಲು ಸರ್ಕಾರದಿಂದ ಕ್ರಮಬದ್ಧವಾಗಿ ಅಧಿಕೃತನಾದ ಅಧಿಕಾರಿ ಮತ್ತು ಆ ಮೇರೆಗೆ ಕೆಲಸ ಮಾಡಲು ಆತನ ನೌಕರರು ಹಾಗೂ ಕೆಲಸಗಾರರು ಕಾನೂನು ಸಮ್ಮತವಾಗಿರುವಂತೆ, ಆ ಪ್ರದೇಶದಲ್ಲಿನ ಭೂಮಿಯ ಮೇಲೆ ಅಥವಾ ಅದರ ಸಂಬಂಧದಲ್ಲಿ ಮಾಡುವುದು ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಸದರಿ ಅಧಿನಿಯಮದ 5ನೇ ಪ್ರಕರಣದಲ್ಲಿ ಅಡಕವಾದ ಉಪಬಂಧಗಳು ಮೊದಲು ತಿಳಿಸಿರುವ ಯಾವುದೇ ಕಾರ್ಯಗಳ ಮೂಲಕ ಉಂಟಾದ ಹಾನಿಯ ಸಂಬಂಧದಲ್ಲಿಯೂ ಸಹ ಅದೇ ರೀತಿಯಾಗಿ ಅನ್ವಯವಾಗತಕ್ಕದ್ದು.

**156. ಮೇಲ್ಪಾಟು ಯೋಜನೆಯಲ್ಲಿ ಒದಗಿಸಬೇಕಾದ ವಿವರಗಳು.–** 155ನೇ ಪ್ರಕರಣದ ಮೇರೆಗಿನ ಪ್ರತಿಯೊಂದು ಮೇಲ್ಪಾಟು ಯೋಜನೆಯು,–

(1) ಯೋಜನೆಯಲ್ಲಿ ಒಳಗೊಂಡ ಪ್ರದೇಶದ ಪರಿಮಿತಿಗಳೊಳಗೆ,–

(ಕ) ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಯಾವ ಭೂಮಿಯಲ್ಲಿ, ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವಶ್ಯವೋ ಅಥವಾ ಅದರಿಂದ ಬಾಧಿತವಾಗುವುದೋ ಆ ಯಾವುದೇ ಭೂಮಿಯ ಆರ್ಜನೆಗಾಗಿ;

(ಖ) ಕಟ್ಟಡಗಳ ನಿರ್ಮಾಣ ಮತ್ತು ಪುನರ್ನಿರ್ಮಾಣ ಹಾಗೂ ಬೀದಿಗಳ ರಚನೆ ಮತ್ತು ಬದಲಾವಣೆಗಳನ್ನೊಳಗೊಂಡಂತೆ ಎಲ್ಲಾ ಅಥವಾ ಯಾವುದೇ ಭೂಮಿಯನ್ನು ಪುನರ್ ರೂಪುರೇಷೆಗೊಳಿಸುವುದು;

(ಗ) ಹಾಗೆ ರಚಿಸಿದ ಅಥವಾ ಬದಲಾಯಿಸಿದ ಬೀದಿಗಳ ಚರಂಡಿ ವ್ಯವಸ್ಥೆಗಾಗಿ

–ಉಪಬಂಧಿಸತಕ್ಕದ್ದು.

(2) ಹಿಂದೆ ಹೇಳಿದ ಪರಿಮಿತಿಗಳೊಳಗೆ–

(ಕ) ಆ ಪ್ರದೇಶದ ಉತ್ತಮ ಚರಂಡಿ ವ್ಯವಸ್ಥೆಗಾಗಿ ಎತ್ತರಿಸುವುದು ವಿಹಿತವೆಂದು ಮುನ್ಸಿಪಲ್ ಕೌನ್ಸಿಲು ಭಾವಿಸಬಹುದಾದಂಥ ಯಾವುದೇ ಭೂಮಿಯನ್ನು ಎತ್ತರಿಸುವುದಕ್ಕಾಗಿ;

(ಖ) ಯೋಜನೆಯಲ್ಲಿ ಒಳಗೊಂಡ ಯಾವುದೇ ಪ್ರದೇಶದ ಅಥವಾ ಅದಕ್ಕೆ ಹೊಂದಿಕೊಂಡ ಯಾವುದೇ ಪ್ರದೇಶದ ಉತ್ತಮ ವಾಯು ಸಂಚಾರಕ್ಕಾಗಿ ತೆರೆದ ಸ್ಥಳಗಳನ್ನು ರಚಿಸುವುದಕ್ಕಾಗಿ;

(ಗ) ಅಗತ್ಯವಾಗಿರುವ ನೈರ್ಮಲ್ಯ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಥವಾ ಅದರ ಯಾವುದೇ ಭಾಗಕ್ಕಾಗಿ; ಮತ್ತು

(ಘ) ಮಾರುಕಟ್ಟೆಗಳ ಮತ್ತು ಇತರ ಸಾರ್ವಜನಿಕ ಅವಶ್ಯಕತೆಗಳು ಅಥವಾ ಸೌಕರ್ಯಗಳ ಸ್ಥಾಪನೆ ಅಥವಾ ನಿರ್ಮಾಣಕ್ಕಾಗಿ

–ಉಪಬಂಧಿಸಬಹುದು.

(3) ಹಿಂದೆ ಹೇಳಿದಂಥ ಪರಿಮಿತಿಗಳೊಳಗೆ ಅಥವಾ ಹೊರಗೆ ಯೋಜನೆಯನ್ನು ಜಾರಿಗೊಳಿಸುವಲ್ಲಿ ಸ್ಥಳಾಂತರಿಸಲಾಗುವಂಥ ವರ್ಗಗಳ ಎಲ್ಲ ಅಥವಾ ಅವುಗಳ ಭಾಗವನ್ನೊಳಗೊಂಡು, ಬಡ ಹಾಗೂ ಕಾರ್ಮಿಕ ವರ್ಗಗಳಿಗೆ ವಸತಿಗಾಗಿ ಕಟ್ಟಡಗಳ ನಿರ್ಮಾಣಕ್ಕಾಗಿ ಉಪಬಂಧಿಸಬಹುದು.

**157. ಯೋಜನೆಯು ಪೂರ್ಣಗೊಂಡ ಮೇಲೆ ಪ್ರಕ್ರಿಯೆ.–** (1) ಯಾವುದೇ ಮೇಲ್ಪಾಟು ಯೋಜನೆಯು ಪೂರ್ಣಗೊಂಡ ಮೇಲೆ ಮುನ್ಸಿಪಲ್ ಕೌನ್ಸಿಲು, ಯೋಜನೆಯನ್ನು ಮಾಡಲಾಗಿರುವ ಸಂಗತಿ ಮತ್ತು ಅದರಲ್ಲಿ ಒಳಗೊಂಡಿರುವ ಪರಿಮಿತಿಗಳನ್ನು ಮತ್ತು ಯೋಜನೆಯ ವಿವರಗಳು ಮತ್ತು ಅದರಲ್ಲಿ ಒಳಗೊಂಡಿರುವ ಪ್ರದೇಶದ ನಕ್ಷೆ, ಆರ್ಜಿಸಲು ಉದ್ದೇಶಿಸಿರುವಂಥ ಮತ್ತು ಯಾವ ಭೂಮಿಗೆ ಸಂಬಂಧಪಟ್ಟಂತೆ ಅಭಿವೃದ್ಧಿ ಫೀಜನ್ನು ವಿಧಿಸಲು ಉದ್ದೇಶಿಸಲಾಗಿದೆಯೋ ಆ ಭೂಮಿಯನ್ನು ನಿರ್ದಿಷ್ಟಪಡಿಸುವ ವಿವರಪಟ್ಟಿಯನ್ನು ಎಲ್ಲ ಯುಕ್ತ ಸಮಯದೊಳಗೆ ನೋಡಬಹುದಾದಂಥ ಸ್ಥಳವನ್ನು ಹೆಸರಿಸಿ ಅಧಿಸೂಚನೆಯನ್ನು ತಯಾರಿಸತಕ್ಕದ್ದು; ಮತ್ತು ಸದರಿ ಅಧಿಸೂಚನೆಯ ಪ್ರತಿಯನ್ನು ಸರ್ಕಾರಿ ರಾಜಪತ್ರದಲ್ಲಿ ಮೂರು ನಿರಂತರ ವಾರಗಳ ಅವಧಿಯಲ್ಲಿ ಪ್ರಕಟಿಸುವಂತೆ ಮತ್ತು ಪೌರಸಭಾ ಕಛೇರಿಯ ಮತ್ತು ತಹಸೀಲ್ದಾರರ ಕಛೇರಿಯ ಯಾವುದೇ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

(2) ಸರ್ಕಾರಿ ರಾಜಪತ್ರದಲ್ಲಿ ಅಂಥ ಅಧಿಸೂಚನೆ ಪ್ರಕಟವಾದ ದಿನಾಂಕದ ನಂತರದ ಮೂವತ್ತು ದಿನಗಳ ಅವಧಿಯಲ್ಲಿ, ಮುನ್ಸಿಪಲ್ ಕೌನ್ಸಿಲ್‌ನ ತೆರಿಗೆ ನಿರ್ಧಾರಣೆ ಪಟ್ಟಿಯಲ್ಲಿ ಅಥವಾ ಭೂ ಕಂದಾಯದ ರಿಜಿಸ್ಟರಿನಲ್ಲಿ, ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಯಾವ ಕಟ್ಟಡ ಅಥವಾ ಭೂಮಿಯನ್ನು ಆರ್ಜಿಸಲು ಉದ್ದೇಶಿಸಲಾಗಿದೆಯೋ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲ್ ಅಭಿವೃದ್ಧಿ ಫೀಜನ್ನು ವಸೂಲ್ಮಾಡಲು ಉದ್ದೇಶಿಸಿದೆಯೋ ಆ ಯಾವುದೇ ಕಟ್ಟಡ ಅಥವಾ ಭೂಮಿಯ ಮೇಲೆ ಸ್ವತ್ತು ತೆರಿಗೆ ಅಥವಾ ಭೂ ಕಂದಾಯದ ನಿರ್ಧಾರಣೆಯನ್ನು ಸಂದಾಯ ಮಾಡಲು ಮುಖ್ಯವಾಗಿ ಹೊಣೆಗಾರನೆಂದು ಕಂಡುಬರುವ ಹೆಸರಿನ ಪ್ರತಿಯೊಬ್ಬ ವ್ಯಕ್ತಿಗೆ ನೋಟೀಸನ್ನು, ಮುನ್ಸಿಪಲ್ ಕೌನ್ಸಿಲ್ ಮೇಲ್ಪಾಟು ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಂಥ ಕಟ್ಟಡ ಅಥವಾ ಭೂಮಿಯನ್ನು ಆರ್ಜಿಸಲು ಅಥವಾ ಅಂಥ ಅಭಿವೃದ್ಧಿ ಫೀಜನ್ನು ವಸೂಲ್ಮಾಡಲು ಉದ್ದೇಶಿಸಿರುವುದೆಂದು ಮತ್ತು ಹಾಗೆ ಯಾರ ಮೇಲೆ ಜಾರಿ ಮಾಡಲಾಗಿದೆಯೋ ಆ ವ್ಯಕ್ತಿಯು ಕಟ್ಟಡ ಅಥವಾ ಭೂಮಿಯ ಅಂಥ ಆರ್ಜನೆ ಅಥವಾ ಅಂಥ ಅಭಿವೃದ್ಧಿ ಫೀಜಿನ ವಸೂಲಾತಿಗೆ ಆಕ್ಷೇಪಿಸುತ್ತಾನೆಯೇ ಎಂಬ ಬಗ್ಗೆ ಮತ್ತು ಆ ವ್ಯಕ್ತಿಯು ಆಕ್ಷೇಪಿಸಿದರೆ, ಅಂಥ ಆಕ್ಷೇಪಣೆಗೆ ಕಾರಣಗಳನ್ನು

ನಮೂದಿಸಿದ ನೋಟೀಸಿನ ಜಾರಿಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಉತ್ತರವನ್ನು ಅಗತ್ಯಪಡಿಸಿ, ಜಾರಿ ಮಾಡತಕ್ಕದ್ದು.

(3) ಅಂಥ ನೋಟೀಸಿಗೆ ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಅಥವಾ ಅವನ ಆದೇಶದ ಮೇರೆಗೆ ಸಹಿ ಮಾಡತಕ್ಕದ್ದು ಮತ್ತು 262ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಅದನ್ನು ಜಾರಿ ಮಾಡತಕ್ಕದ್ದು.

**158. ಯೋಜನೆಯನ್ನು ಆನಂತರ ಮಂಜೂರಾತಿಗಾಗಿ ಸರ್ಕಾರಕ್ಕೆ ಕಳುಹಿಸಿಕೊಡುವುದು.–** (1) ಯೋಜನೆಗಳ ಪ್ರಕಟಣೆ ಮತ್ತು ನೋಟೀಸುಗಳನ್ನು ಜಾರಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಹಿಂದೆ ಹೇಳಿದ ಉಪಬಂಧಗಳನ್ನು ಪಾಲಿಸಿದ ಮೇಲೆ ಮುನ್ಸಿಪಲ್ ಕೌನ್ಸಿಲು, 157ನೇ ಪ್ರಕರಣದ ಮೇರೆಗೆ ಸ್ವೀಕರಿಸಿದ ಯಾವುದೇ ಮನವಿ ಅಥವಾ ಉತ್ತರವನ್ನು ಪರ್ಯಾಲೋಚಿಸಿದ ತರುವಾಯ, ಮತ್ತು ಅದು ತಾನು ಸೂಕ್ತವೆಂದು ಯೋಚಿಸುವಂಥ ಮಾರ್ಪಾಡುಗಳನ್ನು ಯೋಜನೆಯಲ್ಲಿ ಸೇರಿಸಿದ ತರುವಾಯ ಯೋಜನೆಯ ಮಂಜೂರಾತಿಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

(2) ಮಂಜೂರಾತಿಗಾಗಿನ ಅರ್ಜಿಯು, (3)ನೇ ಉಪ–ಪ್ರಕರಣದಲ್ಲಿ ಉಪಬಂಧಿಸಿರುವ ಸಂದರ್ಭದ ಹೊರತು,–

(ಕ) ಯೋಜನೆಯಲ್ಲಿ ಸೇರಿಸಿರುವ ಯಾವುದೇ ಮಾರ್ಪಾಡಿಗಾಗಿ ಕಾರಣವನ್ನು ಒಳಗೊಂಡು ಅದರ ಪೂರ್ಣ ವಿವರಗಳ ಸಹಿತವಾದ ವರ್ಣನೆ;

(ಖ) ಪೂರ್ಣ ನಕ್ಷೆಗಳು ಮತ್ತು ಯೋಜನೆಯನ್ನು ಕಾರ್ಯಗತಗೊಳಿಸಲು ತಗಲುವ ಖರ್ಚಿನ ಅಂದಾಜುಗಳು;

(ಗ) ಆರ್ಜಿಸಲು ಪ್ರಸ್ತಾವಿಸಲಾದ ಭೂಮಿಯನ್ನು ನಿರ್ದಿಷ್ಟಪಡಿಸುವ ವಿವರ ಪಟ್ಟಿ;

(ಘ) 157ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಸ್ವೀಕರಿಸಿದ ಯಾವುದೇ ಮನವಿ;

(ಙ) 157ನೇ ಪ್ರಕರಣದ ಮೇರೆಗೆ ಭೂಮಿಗೆ ಸಂಬಂಧಪಟ್ಟಂತೆ ಅಧಿಸೂಚನೆಯ ಪ್ರಕಟಣೆ ದಿನಾಂಕದಂದು ಪೌರಸಭಾ ತೆರಿಗೆ ನಿರ್ಧರಣಾ ಪುಸ್ತಕದಲ್ಲಿ ನಮೂದಿಸಿರುವಂತೆ ತೆರಿಗೆಗೆ ಗುರಿಯಾಗುವ ಮೌಲ್ಯ ಅಥವಾ (ಗ) ಖಂಡದ ಮೇರೆಗೆ ವಿವರ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲಾ ಭೂಮಿಗಳ ತೆರಿಗೆ ನಿರ್ಧಾರಣೆಯನ್ನು ತೋರಿಸುವ ಅನುಸೂಚಿ; ಮತ್ತು

(ಚ) ನಿಯಮಿಸಹಬಹುದಾದಂಥ ಇತರ ಹೆಚ್ಚಿನ ವಿವರಗಳು, ಯಾವುದಾದರೂ ಇದ್ದರೆ, ಅವು

–ಇವುಗಳೊಂದಿಗೆ ಇರತಕ್ಕದ್ದು.

(3) ಕಡು ಬಡವರಿಗೆ ಮತ್ತು ಕಾರ್ಮಿಕ ವರ್ಗಗಳಿಗೆ ವಾಸದ ಮನೆಗಳ ನಿರ್ಮಾಣಕ್ಕಾಗಿ ಯಾವುದೇ ಮೇಲ್ಪಾಟು ಯೋಜನೆಯ ಮೇರೆಗೆ ಯಾವುದೇ ಏರ್ಪಾಡು ಮಾಡಿದಾಗ, ಮುನ್ಸಿಪಲ್ ಕೌನ್ಸಿಲು 157ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಿದ ತರುವಾಯು ಅಂಥ ವಾಸದ ಮನೆಗಳ ನಿರ್ಮಾಣಕ್ಕಾಗಿ ನಕ್ಷೆಗಳ ಮತ್ತು ಅಂದಾಜು ವೆಚ್ಚಗಳ ಮಂಜೂರಾತಿಗಾಗಿ ಅವುಗಳನ್ನು ತತ್‌ಕ್ಷಣ ಸರ್ಕಾರಕ್ಕೆ ಒಪ್ಪಿಸಬಹುದು ಮತ್ತು

ಅಂಥ ಮಂಜೂರಾತಿಯನ್ನು ಸ್ವೀಕರಿಸಿದ ನಂತರ, 159ನೇ ಪ್ರಕರಣದ ಉಪಬಂಧಗಳು, ಎಲ್ಲಾ ಅವಶ್ಯಕ ಮಾರ್ಪಾಡುಗಳೊಂದಿಗೆ ಅಂಥ ವಾಸದ ಮನೆಗಳ ನಿರ್ಮಾಣಕ್ಕಾಗಿ ಏರ್ಪಾಡು ಮಾಡಿರುವ ಯೋಜನೆಯ ಭಾಗಕ್ಕೆ; ಅಂಥ ಭಾಗವು ಯೋಜನೆಯಾಗಿದ್ದರೆ ಹೇಗೋ ಹಾಗೆ ಅನ್ವಯಿಸತಕ್ಕದ್ದು.

**159. ಮಂಜೂರಾತಿಯನ್ನು ಸ್ವೀಕರಿಸಿದ ಮೇಲೆ ಆರ್ಜಿಸಬೇಕಾದ ಭೂಮಿಯ ವಿವರಗಳನ್ನು ಕೊಟ್ಟು ಘೋಷಣೆಯನ್ನು ಪ್ರಕಟಿಸುವುದು.–** (1) ಸರ್ಕಾರದ ಮಂಜೂರಾತಿಯನ್ನು ಸ್ವೀಕರಿಸಿದ ಮೇಲೆ, ಪೌರಸಭಾ ಕಮಿಷನರ್ ಅಥವಾ ಚೀಫ್ ಆಫೀಸರನು, ಅಂಥ ಮಂಜೂರಾತಿಯ ಸಂಗತಿ ಮತ್ತು ಈ ಯೋಜನೆಯ ಉದ್ದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲು ಆರ್ಜಿಸಲು ಪ್ರಸ್ತಾವಿಸಿರುವ ಭೂಮಿಯ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದೆಯೆಂಬ ಘೋಷಣೆಯನ್ನು ಸರ್ಕಾರವು ಅಧಿಸೂಚಿಸುವ ಸಲುವಾಗಿ ಕಳುಹಿಸಿಕೊಡತಕ್ಕದ್ದು.

(2) ಘೋಷಣೆಯನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆರ್ಜಿಸಲು ಪ್ರಸ್ತಾವಿಸಲಾಗಿರುವ ಭೂಮಿಯು ಇರುವ ಪರಿಮಿತಿಗಳು, ಅದು ಯಾವ ಉದ್ದೇಶಕ್ಕಾಗಿ ಅಗತ್ಯವಿದೆಯೋ ಆ ಉದ್ದೇಶ, ಅದರ ಸರಿಸುಮಾರು ವಿಸ್ತೀರ್ಣ, ಹಾಗೂ ಭೂಮಿಯ ನಕ್ಷೆಯನ್ನು ಪರಿಶೀಲಿಸಬಹುದಾದ ಸ್ಥಳ ಇವುಗಳನ್ನು ತಿಳಿಸತಕ್ಕದ್ದು. ಅಂಥ ಘೋಷಣೆಯ ಪ್ರಕಟಣೆಯನ್ನು, 1894ರ ಭೂ ಆರ್ಜನಾ ಅಧಿನಿಯಮದ 6ನೇ ಪ್ರಕರಣದ ಮೇರೆಗಿನ ಘೋಷಣೆಯ ಪ್ರಕಟಣೆ ಎಂದು ಭಾವಿಸತಕ್ಕದ್ದು.

(3) ಭೂಮಿಯು ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಾಗಿದೆ ಎಂಬುದಕ್ಕೆ ಸದರಿ ಘೋಷಣೆಯು ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು ಮತ್ತು ಸದರಿ ಘೋಷಣೆಯ ನಂತರ, ಮುನ್ಸಿಪಲ್ ಕೌನ್ಸಿಲು ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದುವರಿಯತಕ್ಕದ್ದು.

(4) 155ನೇ ಪ್ರಕರಣದ (4)ನೇ ಉಪ–ಪ್ರಕರಣದ ಮತ್ತು ಈ ಪ್ರಕರಣದ (2) ಮತ್ತು (3)ನೇ ಉಪ–ಪ್ರಕರಣದ ಉಪಬಂಧಗಳಿಗೊಳಪಟ್ಟು, 1894ರ ಭೂ ಆರ್ಜನಾ ಅಧಿನಿಯಮದ ಉಪಬಂಧಗಳು, ಈ ಅಧ್ಯಾಯದ ಮೇರೆಗಿನ ಮೇಲ್ಪಾಟು ಯೋಜನೆಗೆ ಸಂಬಂಧಿಸಿದಂತೆ ಭೂಮಿಯ ಆರ್ಜನೆಯ ಉದ್ದೇಶಗಳಿಗೆ ಅನ್ವಯಿಸತಕ್ಕದ್ದು; ಮತ್ತು 1894ರ ಭೂ ಆರ್ಜನಾ ಅಧಿನಿಯಮದ 16ನೇ ಪ್ರಕರಣದ ಮೇರೆಗೆ ಭೂಮಿಯು ಸರ್ಕಾರದಲ್ಲಿ ನಿಹಿತವಾದ ತರುವಾಯ, ಡೆಪ್ಯೂಟಿ ಕಮಿಷನರನು, ಆರ್ಜನೆಯ ಖರ್ಚುಗಳ ಸಂದಾಯದ ತರುವಾಯ ಮತ್ತು ಆರ್ಜನೆಯಿಂದಾಗಿ ವಹಿಸಬಹುದಾದಂಥ ಯಾವುವೇ ಹೆಚ್ಚಿನ ಖರ್ಚುಗಳನ್ನು ಸಂದಾಯ ಮಾಡಲು ಮುನ್ಸಿಪಲ್ ಕೌನ್ಸಿಲು ಒಪ್ಪಿದ ಮೇಲೆ, ಭೂಮಿಯನ್ನು ಮುನ್ಸಿಪಲ್ ಕೌನ್ಸಿಲಿಗೆ ವರ್ಗಾವಣೆ ಮಾಡತಕ್ಕದ್ದು ಮತ್ತು ಭೂಮಿಯು ಆ ತರುವಾಯ ಸದರಿ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು.

**160. ಅಭಿವೃದ್ಧಿ ಫೀಜಿನ ಸಂದಾಯ.–** (1) ಯಾವುದೇ ಮೇಲ್ಪಾಟು ಯೋಜನೆಯನ್ನು ಮಾಡಿರುವುದರಿಂದ, ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯವಿಲ್ಲದಿರುವ ಆದರೆ, ಈ ಯೋಜನೆಯಲ್ಲಿ ಸೇರಿರುವ ಪ್ರದೇಶದಲ್ಲಿನ ಯಾವುದೇ ಭೂಮಿಯ ಮೌಲ್ಯವು ಹೆಚ್ಚುವುದೆಂದು ಮುನ್ಸಿಪಲ್ ಕೌನ್ಸಿಲು ಅಭಿಪ್ರಾಯಪಟ್ಟಾಗ ಮುನ್ಸಿಪಲ್ ಕೌನ್ಸಿಲು ಯೋಜನೆಯನ್ನು ರೂಪಿಸುವಾಗ; ಭೂಮಿಯ ಒಡೆಯ ಅಥವಾ ಯೋಜನೆಯ ಜಾರಿಯ ಪರಿಣಾಮವಾಗಿ ಭೂಮಿಯ ಮೌಲ್ಯದ ಹೆಚ್ಚಳದ ಸಂಬಂಧದಲ್ಲಿ, ಅದರಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯು ಅಭಿವೃದ್ಧಿ ಫೀಜನ್ನು ಸಂದಾಯ ಮಾಡತಕ್ಕದ್ದೆಂದು ಘೋಷಿಸಬಹುದು.

(2) ಮೌಲ್ಯದಲ್ಲಿಯ ಅಂಥ ಹೆಚ್ಚಳವು, ಯೋಜನೆಯ ಜಾರಿಯು ಪೂರ್ಣಗೊಂಡ ಮೇಲೆ ಕಟ್ಟಡಗಳಿಲ್ಲದ ಭೂಮಿ ಆಗಿದ್ದರೆ ಹೇಗೊ ಹಾಗೇ ಅಂದಾಜು ಮಾಡಲಾದ ಭೂಮಿಯ ಮೌಲ್ಯವು, ಯೋಜನೆಯ ಜಾರಿಗೆ ಮುಂಚೆ ಅದೇ ರೀತಿಯಲ್ಲಿ ಅಂದಾಜು ಮಾಡಲಾದ ಭೂಮಿಯ ಮೌಲ್ಯವನ್ನು ಮೀರುವುದೋ ಆ

ಮೊಬಲಗು ಆಗಿರತಕ್ಕದ್ದು ಮತ್ತು ಅಭಿವೃದ್ಧಿ ಫೀಜು ಮೌಲ್ಯದಲ್ಲಿ ಉಂಟಾದ ಅಂಥ ಹೆಚ್ಚಳದ ಮೂರನೇ ಒಂದರಷ್ಟಾಗಿರತಕ್ಕದ್ದು.

**161. ಮುನ್ಸಿಪಲ್ ಕೌನ್ಸಿಲಿನಿಂದ ಅಭಿವೃದ್ಧಿ ಫೀಜಿನ ನಿರ್ಧಾರಣೆ.–** (1) ಅಭಿವೃದ್ಧಿ ಫೀಜಿನ ಮೊಬಲಗನ್ನು ನಿರ್ಧರಿಸಲು ಸಾಧ್ಯವಾಗುವಷ್ಟು ಪ್ರಮಾಣದಲ್ಲಿ ಮೇಲ್ಪಾಟು ಯೋಜನೆಯು ಸಾಕಷ್ಟು ಮುಂದುವರಿದಿದೆ ಎಂದು ಮುನ್ಸಿಪಲ್ ಕೌನ್ಸಿಲಿಗೆ ಕಂಡುಬಂದರೆ, ಮುನ್ಸಿಪಲ್ ಕೌನ್ಸಿಲು, ಈ ಬಗ್ಗೆ ಅಂಗೀಕರಿಸಿದ ನಿರ್ಣಯದ ಮೂಲಕ ಅಂಥ ಫೀಜಿನ ನಿರ್ಧರಣೆಯ ಉದ್ದೇಶಕ್ಕಾಗಿ ಯೋಜನೆಯನ್ನು ಕಾರ್ಯಗತಗೊಳಿಸುವುದು ಮುಕ್ತಾಯವಾಗಿದೆ ಎಂದು ಭಾವಿಸತಕ್ಕದ್ದೆಂದು ಘೋಷಿಸತಕ್ಕದ್ದು ಮತ್ತು ಆ ತರುವಾಯ, 157ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ತೆರಿಗೆ ನಿರ್ಧಾರಣೆಯನ್ನು ಮಾಡಬೇಕಾದ ಭೂಮಿಯ ಸಂಬಂಧದಲ್ಲಿ ಯಾವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಲಾಗಿದೆಯೋ ಅಂಥ ಪ್ರತಿಯೊಬ್ಬ ವ್ಯಕ್ತಿಗೆ ಅಥವಾ ಅಂಥ ವ್ಯಕ್ತಿಯ ಹಿತಾಸಕ್ತಿಯ ಉತ್ತರಾಧಿಕಾರಿಗೆ 160ನೇ ಪ್ರಕರಣದ ಮೇರೆಗಿನ ಅಂಥ ಭೂಮಿಯ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಅಭಿವೃದ್ಧಿ ಫೀಜಿನ ಮೊಬಲಗನ್ನು ನಿರ್ಧರಿಸಲು ಮುನ್ಸಿಪಲ್ ಕೌನ್ಸಿಲು ಪ್ರಸ್ತಾವಿಸಿದೆಯೆಂದು ಬರಹದಲ್ಲಿ ನೋಟೀಸನ್ನು ಕೊಡತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲು, ಸಂಬಂಧಪಟ್ಟಂಥ ಪ್ರತಿಯೊಬ್ಬ ವ್ಯಕ್ತಿಯು ಸಂದಾಯ ಮಾಡಬೇಕಾದ ಅಭಿವೃದ್ಧಿ ಫೀಜಿನ ಮೊಬಲಗನ್ನು ಅಂಥ ವ್ಯಕ್ತಿ ಅಹವಾಲು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ, ಅಂಥ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿನಿಂದ ಅಂಥ ನಿರ್ಧರಣೆಯ ಬಗ್ಗೆ ಬರಹದಲ್ಲಿನ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ನಿರ್ಧರಣೆಯನ್ನು ಅವನು ಒಪ್ಪಿರುವನೋ ಅಥವಾ ಇಲ್ಲವೋ ಎಂಬ ಬಗ್ಗೆ ಬರಹದಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ತಿಳಿಸತಕ್ಕದ್ದು.

(3) (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯೊಳಗಾಗಿ ಮುನ್ಸಿಪಲ್ ಕೌನ್ಸಿಲು ಪ್ರಸ್ತಾವಿಸಿದ ನಿರ್ಧಾರಣೆಯನ್ನು ಸಂಬಂಧಪಟ್ಟ ವ್ಯಕ್ತಿಯು ಒಪ್ಪಿದಾಗ, ಅಂಥ ನಿರ್ಧಾರಣೆಯು ಅಂತಿಮವಾಗಿರತಕ್ಕದ್ದು.

**162. ಮಧ್ಯಸ್ಥಗಾರನಿಂದ ಅಭಿವೃದ್ಧಿ ಫೀಜಿನ ನಿರ್ಧಾರ.–** (1) ಮುನ್ಸಿಪಲ್ ಕೌನ್ಸಿಲಿನ ನಿರ್ಧಾರಣೆಯನ್ನು ಸಂಬಂಧಪಟ್ಟ ವ್ಯಕ್ತಿಯು ಒಪ್ಪಿಕೊಳ್ಳದಿದ್ದರೆ ಅಥವಾ 161ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಅಗತ್ಯಪಡಿಸಿರುವ ಮಾಹಿತಿಯನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಮುನ್ಸಿಪಲ್ ಕೌನ್ಸಿಲಿಗೆ ಕೊಡಲು ತಪ್ಪಿದರೆ, ಆ ವಿಷಯವನ್ನು ಸರ್ಕಾರವು ನೇಮಕ ಮಾಡಿದ ಮಧ್ಯಸ್ಥಗಾರನಿಂದ ನಿರ್ಧಾರಿತವಾಗತಕ್ಕದ್ದು.

(2) (1)ನೇ ಉಪ–ಪ್ರಕರಣದ ಮೇರೆಗೆ ನೇಮಕಗೊಂಡಿರುವ ಮಧ್ಯಸ್ಥಗಾರನು,–

(i) ಕನಿಷ್ಠ ಪಕ್ಷ ಐದು ವರ್ಷಗಳವರೆಗೆ ರಾಜ್ಯದಲ್ಲಿ ನ್ಯಾಯಿಕ ಪದವನ್ನು ಧಾರಣ ಮಾಡಿರುವ; ಅಥವಾ

(ii) ಕನಿಷ್ಠ ಪಕ್ಷ ಐದು ವರ್ಷಗಳವರೆಗೆ ಅಡ್ವೋಕೇಟನಾಗಿರುವ

–ಒಬ್ಬ ವ್ಯಕ್ತಿಯಾಗಿರತಕ್ಕದ್ದು.

(3) ಸರ್ಕಾರವು ತಾನು ಸೂಕ್ತವೆಂದು ಭಾವಿಸಿದಂಥ ವಿಚಾರಣೆಯ ನಂತರ (1)ನೇ ಉಪ–ಪ್ರಕರಣದ ಮೇರೆಗೆ ನೇಮಕಗೊಂಡ ಯಾರೇ ಮಧ್ಯಸ್ಥಗಾರನು ಸ್ವತಃ ದುರ್ನಡತೆಯುಳ್ಳವನೆಂದು ಅದಕ್ಕೆ ಮನದಟ್ಟಾದರೆ, ಸರ್ಕಾರವು ಅವನನ್ನು ತೆಗೆದು ಹಾಕಬಹುದು.

(4) ಅಂಥ ಯಾರೇ ಮಧ್ಯಸ್ಥಗಾರನು ಮೃತನಾದರೆ, ರಾಜೀನಾಮೆ ನೀಡಿದರೆ, ಅನರ್ಹಗೊಂಡರೆ, ಅವನನ್ನು ತೆಗೆದುಹಾಕಿದರೆ ಅಥವಾ ತನ್ನ ಪ್ರಕಾರ್ಯಗಳನ್ನು ನೆರವೇರಿಸಿದರೆ ಅಥವಾ ಸರ್ಕಾರದ ಅಭಿಪ್ರಾಯಲ್ಲಿ ನಿರ್ಲಕ್ಷಿಸಿದರೆ ಅಥವಾ ಅಸಮರ್ಥಗೊಂಡರೆ, ಸರ್ಕಾರವು ತತ್‌ಕ್ಷಣ ಬೇರೊಬ್ಬ ಮಧ್ಯಸ್ಥಗಾರನನ್ನು ನೇಮಿಸತಕ್ಕದ್ದು.

(5) ಮಧ್ಯಸ್ಥಗಾರನು ತನ್ನ ಐತೀರ್ಪನ್ನು ನೀಡಿದಾಗ, ಅದಕ್ಕೆ ಅವನು ಸಹಿ ಮಾಡಿ ಮುನ್ಸಿಪಲ್ ಕೌನ್ಸಿಲಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಅಂಥ ಐತೀರ್ಪು (6)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಅಂತಿಮ ಹಾಗೂ ನಿರ್ಣಾಯಕವಾಗಿರತಕ್ಕದ್ದು ಮತ್ತು ಎಲ್ಲಾ ವ್ಯಕ್ತಿಗಳ ಮೇಲೆ ಬಂಧಕವಾಗಿರತಕ್ಕದ್ದು.

(6) 164ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಖರ್ಚುಗಳ ಮೇಲಿನ ನಿರ್ಣಯವು ಯಾವುದಾದರೂ ಇದ್ದರೆ, ಅದನ್ನೊಳಗೊಂಡ ಐತೀರ್ಪಿನಿಂದ ಬಾಧಿತವಾದ ಯಾವುದೇ ಪಕ್ಷವು, ಅದನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆ ಪೌರಸಭೆಯ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶನಿಗೆ ಅಪೀಲು ಸಲ್ಲಿಸಬಹುದು ಮತ್ತು ಸದರಿ ಜಿಲ್ಲಾ ನ್ಯಾಯಾಧೀಶನ ಯಾವುದೇ ಆದೇಶ ಅಥವಾ ತೀರ್ಮಾನವು ಅಂತಿಮ ಹಾಗೂ ನಿರ್ಣಾಯಕವಾಗಿರತಕ್ಕದ್ದು ಮತ್ತು ಎಲ್ಲಾ ವ್ಯಕ್ತಿಗಳ ಮೇಲೆ ಬಂಧಕವಾಗಿರತಕ್ಕದ್ದು.

**163. ಮಧ್ಯಸ್ಥಗಾರನ ಫೀಜು.–** ಮಧ್ಯಸ್ಥಗಾರನ ಸೇವೆಗಳನ್ನು ಉಪಯೋಗಿಸಿಕೊಂಡ ಸಂಪೂರ್ಣ ಯೋಜನೆಯ ಸಂಬಂಧದಲ್ಲಿ ಸರ್ಕಾರವು ನಿರ್ಧರಿಸುವಂಥ ಫೀಜನ್ನು ಮುನ್ಸಿಪಲ್ ಕೌನ್ಸಿಲು ಆತನಿಗೆ ಸಂದಾಯ ಮಾಡತಕ್ಕದ್ದು.

**164. ಮಧ್ಯಸ್ಥಗಾರನ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಮಧ್ಯಸ್ಥಗಾರನು ತನ್ನ ವ್ಯವಹರಣೆಗಳ ಬಗ್ಗೆ ನೋಟೀಸು ಕೊಡತಕ್ಕದ್ದು ಮತ್ತು ಅವುಗಳನ್ನು ನಿಯಮಿಸದ ರೀತಿಯಲ್ಲಿ ನಡೆಸತಕ್ಕದ್ದು, ಹಾಗೂ ತನ್ನ ಐತೀರ್ಪಿನ ಸಾರಂಶವನ್ನು ಬರಹದಲ್ಲಿ ಸಂಬಂಧಪಟ್ಟ ಪಕ್ಷಕ್ಕೆ ತಿಳಿಸತಕ್ಕದ್ದು:

ಪರಂತು, ಅಂಥ ವ್ಯವಹಣೆಗಳ ಪ್ರತಿಯೊಂದು ಪಕ್ಷವು, ಖುದ್ದಾಗಿಯಾಗಲಿ ಅಥವಾ ಅವನಿಂದ ಅಧಿಕೃತನಾದ ಏಜೆಂಟನ ಮೂಲಕವಾಗಲಿ ಮಧ್ಯಸ್ಥಗಾರನ ಮುಂದೆ ಹಾಜರಾಗಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಪ್ರಮಾಣದ ಮೇಲೆ ಸಾಕ್ಷ್ಯವನ್ನು ತೆಗೆದುಕೊಳ್ಳುವ ಮತ್ತು ಸಾಕ್ಷಿದಾರರ ಹಾಜರಾತಿಯನ್ನು ಒತ್ತಾಯಪಡಿಸುವ ಮತ್ತು ದಸ್ತಾವೇಜುಗಳ ಹಾಗೂ ಇತರ ಮುಖ್ಯ ವಸ್ತುಗಳನ್ನು ಹಾಜರುಪಡಿಸಲು ಒತ್ತಾಯಿಸುವ ಉದ್ದೇಶಕ್ಕಾಗಿ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ (1908ರ ಕೇಂದ್ರ ಅಧಿನಯಮ ಸಂಖ್ಯೆ V) ಮೇರೆಗೆ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಮಧ್ಯಸ್ಥಗಾರನು ಹೊಂದಿರತಕ್ಕದ್ದು.

(3) ಮಧ್ಯಸ್ಥಗಾರನ ಮುಂದೆ ನಡೆಯುವ ಎಲ್ಲಾ ವ್ಯವಹರಣೆಗಳ ಖರ್ಚುಗಳು ಮತ್ತು ಅವುಗಳಿಗೆ ಪ್ರಾಸಂಗಿಕವಾದವುಗಳು ಅವನ ವಿವೇಚನಾನುಸಾರ ಇರತಕ್ಕದ್ದು ಮತ್ತು ಅಂಥ ವೆಚ್ಚಗಳು ಯಾರಿಂದ ಅಥವಾ ಯಾವ ಸ್ವತ್ತಿನಿಂದ ಮತ್ತು ಎಷ್ಟು ಸಂದಾಯವಾಗಬೇಕು ಎಂಬುದನ್ನು ನಿರ್ಧರಿಸಲು ಮತ್ತು ಆ ಉದ್ದೇಶಕ್ಕಾಗಿ ಅವಶ್ಯಕವಾದ ಎಲ್ಲಾ ನಿರ್ದೇಶನಗಳನ್ನು ನೀಡುವುದಕ್ಕಾಗಿ ಮಧ್ಯಸ್ಥಗಾರನು ಪೂರ್ಣ ಅಧಿಕಾರವನ್ನು ಹೊಂದಿರತಕ್ಕದ್ದು.

**165. ಅಭಿವೃದ್ಧಿ ಫೀಜಿನ ಸಂದಾಯಕ್ಕೆ ಹೊಣೆಯಾಗಿರುವ ವ್ಯಕ್ತಿಗಳಿಗೆ ಮುನ್ಸಿಪಲ್ ಕೌನ್ಸಿಲು ನೋಟೀಸು ಕೊಡುವುದು.–** ಯೋಜನೆಯಲ್ಲಿ ಒಳಗೊಂಡಿರುವ ಪ್ರದೇಶದಲ್ಲಿಯ ಭೂಮಿಗೆ ಸಂಬಂಧಪಟ್ಟಂತೆ ಸಂದಾಯವಾಗಬೇಕಾದ ಅಭಿವೃದ್ಧಿ ಫೀಜಿನ ಮೊಬಲಗನ್ನು ಸಂದರ್ಭಾನುಸಾರ 161 ಅಥವಾ 162ನೇ ಪ್ರಕರಣದ

ಮೇರೆಗೆ ನಿರ್ಧರಿಸಿರುವಾಗ, ಅಂಥ ಸಂದಾಯವನ್ನು ಯಾವ ದಿನಾಂಕದೊಳಗಾಗಿ ಮಾಡತಕ್ಕದ್ದೆಂಬುದನ್ನು ನಿಗದಿಪಡಿಸಿ, ಆ ದಿನಾಂಕದಂದು ಬಾಕಿ ಉಳಿಯುವ ಯಾವುದೇ ಮೊಬಲಗಿನ ಮೇಲೆ ಶೇಕಡಾ ನಾಲ್ಕರ ದರದಲ್ಲಿ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದೆಂದು ಬರಹದಲ್ಲಿಯ ನೋಟೀಸನ್ನು ಅಂಥ ಸಂದಾಯಕ್ಕೆ ಹೊಣೆಯಾಗಿರುವ ಎಲ್ಲಾ ವ್ಯಕ್ತಿಗಳ ಮೇಲೆ ಮುನ್ಸಿಪಲ್ ಕೌನ್ಸಿಲು ಜಾರಿ ಮಾಡತಕ್ಕದ್ದು.

**166. ಭೂಮಿಯ ಮೇಲಿನ ಋಣಭಾರವೆಂದು ಅಭಿವೃದ್ಧಿ ಫೀಜಿನ ಸಂದಾಯ ಮಾಡಲು ಒಪ್ಪಂದ.–** ಯಾವುದೇ ಭೂಮಿಗೆ ಸಂಬಂಧಪಟ್ಟಂತೆ ಅಭಿವೃದ್ಧಿ ಫೀಜನ್ನು ಸಂದಾಯ ಮಾಡಲು ಹೊಣೆಯಾಗಿರುವ ಯಾರೇ ವ್ಯಕ್ತಿಯು, ಅದನ್ನು ಮುನ್ಸಿಪಲ್ ಕೌನ್ಸಿಲಿಗೆ ಸಂದಾಯ ಮಾಡುವ ಬದಲು, ವರ್ಷಕ್ಕೆ ಶೇಕಡ ಆರರ ದರದ ಪ್ರಕಾರ ಬಡ್ಡಿಯನ್ನೊಳಗೊಂಡು ಐದು ವರ್ಷಗಳಿಗೆ ಮೀರದ ಅವಧಿಯಲ್ಲಿ ಸಂದಾಯ ಮಾಡುವುದಕ್ಕೆ ಅಂಥ ಬಡ್ಡಿಯ ಮೊದಲನೇ ವಾರ್ಷಿಕ ಸಂದಾಯವನ್ನು 165ನೇ ಪ್ರಕರಣದಲ್ಲಿ ಉಲ್ಲೇಖಿಸಿದ ದಿನಾಂಕದಿಂದ ಒಂದು ವರ್ಷದಲ್ಲಿ ಮಾಡುವುದಕ್ಕೆ ಒಳಪಟ್ಟು ಭೂಮಿಯಲ್ಲಿ ಅವನ ಹಿತಾಸಕ್ತಿಯ ಮೇಲೆ ಋಣಭಾರವಾಗಿ ಸಂದಾಯವನ್ನು ಬಾಕಿ ಬಿಡಲು ಮುನ್ಸಿಪಲ್ ಕೌನ್ಸಿಲಿನೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಬಹುದು.

**167. ಅಭಿವೃದ್ಧಿ ಫೀಜನ್ನು ಸಂದಾಯ ಮಾಡುವುದು ಪ್ರಥಮ ಋಣಭಾರವಾಗಿರತಕ್ಕದ್ದು.–** (1) ಅಭಿವೃದ್ಧಿ ಫೀಜಿಗೆ ಸಂಬಂಧಪಟ್ಟಂತೆ ಯಾರೇ ವ್ಯಕ್ತಿಯಿಂದ ಬಾಕಿಯಿರುವ ಪ್ರತಿಯೊಂದು ಸಂದಾಯವು ಮತ್ತು 166ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಪ್ರತಿಯೊಂದು ಋಣಭಾರವು, ಇತರ ಯಾವುದೇ ಅಧಿನಿಯಮಿತಿಯಲ್ಲಿ ಏನೇ ಅಡಕವಾಗಿದ್ದಾಗ್ಯೂ ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯೇ ಆಗಲಿ ಅಥವಾ ತರುವಾಯವೇ ಆಗಲಿ ಸೃಜಿಸಿದ ಕಾನೂನು ಮಾನ್ಯ ಅಥವಾ ನ್ಯಾಯ ಸಮ್ಮತವಾದ ಯಾವುದೇ ಅಡಮಾನ ಅಥವಾ ಇತರ ಋಣಭಾರದ ಅಸ್ತಿತ್ವ ಇದ್ದಾಗ್ಯೂ ಮತ್ತು ಸರ್ಕಾರಕ್ಕೆ ಬಾಕಿಯಿರುವ ಭೂಕಂದಾಯದ ಪೂರ್ವ ಸಂದಾಯಕ್ಕೆ ಒಳಪಟ್ಟು, ಅಂಥ ಭೂಮಿಯಲ್ಲಿ ಅಂಥ ವ್ಯಕ್ತಿಯ ಹಿತಾಸಕ್ತಿಯ ಮೇಲೆ ಪ್ರಥಮ ಋಣಭಾರವಾಗಿರತಕ್ಕದ್ದು.

(2) 166ನೇ ಪ್ರಕರಣದನುಸಾರವಾಗಿ ಮಾಡಿಕೊಂಡಿರುವ ಒಪ್ಪಂದದ ಮೇರೆಗೆ ಬಾಕಿಯಿರುವ ಬಡ್ಡಿಯ ಯಾವುದೇ ಕಂತನ್ನು ಅದು ಯಾವ ದಿನಾಂಕದಂದು ಬಾಕಿಯಾಗುವುದೋ ಆ ದಿನಾಂಕದಂದು ಸಂದಾಯ ಮಾಡದಿದ್ದರೆ, ಸದರಿ ಕಂತಿನ ಜೊತೆಗೆ, ಆ ದಿನಾಂಕದಂದು, ಅಭಿವೃದ್ಧಿ ಫೀಜನ್ನು ಸಂದಾಯ ಮಾಡಬೇಕಾಗುವುದು.

(3) 166ನೇ ಪ್ರಕರಣದ ಅನುಸಾರವಾಗಿ ಮಾಡಿಕೊಂಡ ಒಪ್ಪಂದದ ತರುವಾಯ ಯಾವುದೇ ಕಾಲದಲ್ಲಿ ಯಾರೇ ವ್ಯಕ್ತಿಯು, ಅದರಿಂದ ಸೃಜಿಸಿದ ಋಣಭಾರವನ್ನು, ಅಂಥ ಸಂದಾಯದ ದಿನಾಂಕದವರೆಗೆ ವರ್ಷಕ್ಕೆ ಶೇಕಡಾ ಆರರಂತೆ ಬಡ್ಡಿಯೊಂದಿಗೆ ತೀರಿಸಬಹುದು.

**168, 161, 162 ಅಥವಾ 162ನೇ ಪ್ರಕರಣದನುಸಾರವಾಗಿ ಸಂದಾಯವಾಗಬೇಕಾದ ಹಣದ ವಸೂಲಿ.–** 161ನೇ ಪ್ರಕರಣ ಅಥವಾ 162ನೇ ಪ್ರಕರಣದ ಮೇರೆಗೆ ಅಭಿವೃದ್ಧಿ ಫೀಜಿನ ಸಂಬಂಧದಲ್ಲಿ ಯಾರೇ ವ್ಯಕ್ತಿಯಿಂದ ಅಥವಾ 166ನೇ ಪ್ರಕರಣಕ್ಕನುಸಾರವಾಗಿ ಮಾಡಿಕೊಂಡ ಒಪ್ಪಂದದ ಮೇರೆಗೆ ಯಾರೇ ವ್ಯಕ್ತಿಯಿಂದ ಯಾವುದೇ ಭೂಮಿಯ ಸಂಬಂಧದಲ್ಲಿ ಸಂದಾಯವಾಗಬೇಕಾದ ಎಲ್ಲಾ ಹಣವನ್ನು, ವರ್ಷಕ್ಕೆ ಶೇಕಡಾ ನಾಲ್ಕರ ದರದ ಪ್ರಕಾರ ವಸೂಲಿಯ ದಿನಾಂಕದವರೆಗೆ ಬಾಕಿಯಿರುವ ಬಡ್ಡಿ ಸಹಿತ ಸದರಿ ವ್ಯಕ್ತಿಯಿಂದ ಅಥವಾ ಅಂಥ ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವ ಅವನ ಉತ್ತರಾಧಿಕಾರಿಯಿಂದ VIIನೇ ಅಧ್ಯಾಯದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಮುನ್ಸಿಪಲ್ ಕೌನ್ಸಿಲಿನಿಂದ ವಸೂಲೀಯವಾಗತಕ್ಕದ್ದು.

**169. ಸಂದಾಯದ ಒಪ್ಪಂದವು ಹೊಸ ಘೋಷಣೆಯ ಮೇರೆಗಿನ ಆರ್ಜನೆಗೆ ಅಡ್ಡಿಯಾಗತಕ್ಕದ್ದಲ್ಲ.–** 161ನೇ ಪ್ರಕರಣದ (3)ನೇ ಉಪ–ಪ್ರಕರಣದನುಸಾರವಾಗಿ ಯಾವುದಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಫೀಜಿನ

ಸಂದಾಯವನ್ನು ಒಪ್ಪಿಕೊಳ್ಳಲಾಗಿದೆಯೋ ಅಥವಾ 162ನೇ ಪ್ರಕರಣದ ಮೇರೆಗೆ ಅದರ ನಿರ್ಧರಣೆಯ ತರುವಾಯ ಮಾಡಲಾಗಿದೆಯೋ ಅಥವಾ 166ನೇ ಪ್ರಕರಣದ ಮೇರೆಗೆ ಅಭಿವೃದ್ಧಿ ಫೀಜಿನ ಬಗ್ಗೆ ಒಪ್ಪಂದವನ್ನು ಯಾವುದಕ್ಕೆ ಸಂಬಂಧಪಟ್ಟಂತೆ ಮಾಡಿಕೊಳ್ಳಲಾಗಿದೆಯೋ ಆ ಯಾವುದೇ ಭೂಮಿಯು ಈ ಅಧ್ಯಾಯದ ಯಾವುದೇ ಉದ್ದೇಶಕ್ಕಾಗಿ ತರುವಾಯ ಅಗತ್ಯಬಿದ್ದರೆ, ಆ ಸಂದಾಯ ಅಥವಾ ಒಪ್ಪಂದವು 1894ರ ಭೂ ಆರ್ಜನಾ ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಪ್ರಕಟಿಸಲಾದ ಹೊಸ ಘೋಷಣೆಗನುಸಾರವಾಗಿ ಆ ಭೂಮಿಯ ಆರ್ಜನೆಯನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ.

**170. ಹೊಸ ಬಡಾವಣೆಗಳು ಅಥವಾ ಲೇಔಟುಗಳನ್ನು ರೂಪಿಸುವುದು ಅಥವಾ ಹೊಸ ಖಾಸಗಿ ಬೀದಿಗಳನ್ನು ನಿರ್ಮಿಸುವುದು.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾದುದು ಏನೇ ಇದ್ದಾಗ್ಯೂ, ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಸ್ಪಷ್ಟ ಮಂಜೂರಾತಿಯಿಲ್ಲದೆ ಮತ್ತು ಮುನ್ಸಿಪಲ್ ಕೌನ್ಸಿಲು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಅನುಸಾರವಾಗಿ ಅಲ್ಲದೆ ಯಾವುದೇ ಬಡಾವಣೆ ಅಥವಾ ಲೇಔಟನ್ನು ಅದರ ಮೇಲೆ ಕಟ್ಟಡಗಳನ್ನು ಕಟ್ಟುವ ಉದ್ದೇಶಕ್ಕಾಗಿ ರೂಪಿಸತಕ್ಕದ್ದಲ್ಲ ಅಥವಾ ರೂಪಿಸಲು ಪ್ರಯತ್ನಿಸತಕ್ಕದ್ದಲ್ಲ ಅಥವಾ ಯಾವುದೇ ಖಾಸಗಿ ಹೊಸ ಬೀದಿಯನ್ನು ನಿರ್ಮಿಸತಕ್ಕದ್ದಲ್ಲ.

(2) ಬಡಾವಣೆ ಅಥವಾ ಲೇಔಟನ್ನು ರೂಪಿಸಲು ಅಥವಾ ಹೊಸ ಖಾಸಗಿ ರಸ್ತೆಯನ್ನು ನಿರ್ಮಿಸಲು ಉದ್ದೇಶಿಸಿದ ಯಾರೇ ವ್ಯಕ್ತಿಯು, ಈ ಕೆಳಕಂಡ ವಿವರಗಳನ್ನು ತೋರಿಸುವ ನಕ್ಷೆಗಳು ಮತ್ತು ವಿಭಾಗಗಳ ಸಹಿತ ಬರಹದಲ್ಲಿನ ಅರ್ಜಿಯನ್ನು ಮುನ್ಸಿಪಲ್ ಕೌನ್ಸಿಲಿಗೆ ಕಳುಹಿಸತಕ್ಕದ್ದು,–

(ಕ) ಪ್ರದೇಶದ ನಿವೇಶನಗಳನ್ನು, ಬೀದಿಗಳು, ಗಲ್ಲಿ ಅಥವಾ ತೆರೆದ ಸ್ಥಳಗಳ ರೂಪುರೇಷೆಗೊಳಿಸುವುದು;

(ಖ) ಬೀದಿಗಳ ಉದ್ದೇಶಿತ ಮಟ್ಟ, ದಿಕ್ಕು ಮತ್ತು ಅಗಲ;

(ಗ) ಬೀದಿ ಪಂಕ್ತಿಕರಣ, ಕಟ್ಟಡದ ಸಾಲು ಮತ್ತು ರಸ್ತೆಗಳಿಗೆ ಹೊಂದಿಕೊಂಡಂತೆ ಪ್ರಸ್ತಾವಿತ ನಿವೇಶನಗಳು;

(ಘ) ಬೀದಿಗಳನ್ನು ಮಟ್ಟಗೊಳಿಸಲು, ನೆಲಗಟ್ಟು ಮಾಡಲು, ಜಲ್ಲಿ ಹಾಕಲು, ನೆಲಕ್ಕೆ ಚಪ್ಪಡಿ, ಹಾಸಲು, ಮಾರ್ಗ ನಿರ್ಮಿಸಲು, ಗ್ರಾಮಸಾರಚರಂಡಿ, ಚರಂಡಿ ವ್ಯವಸ್ಥೆ, ನಿರ್ಮಲೀಕರಣ, ಮತ್ತು ದೀಪ ವ್ಯವಸ್ಥೆ ಮತ್ತು ಸಾಕಷ್ಟು ಕುಡಿಯುವ ನೀರಿನ ಸರಬರಾಜಿಗಾಗಿ ಮಾಡಬೇಕಾದ ಏರ್ಪಾಡುಗಳು.

(3) ಬೀದಿಗಳ ಮಟ್ಟ ಹಾಗೂ ಅಗಲ ಮತ್ತು ಅವುಗಳಿಗೆ ಹೊಂದಿಕೊಂಡಿರುವ ಕಟ್ಟಡಗಳ ಎತ್ತರಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳು, (2)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿರುವ ರಸ್ತೆಗಳ ಸಂದರ್ಭದಲ್ಲಿಯೂ ಸಹ ಅನ್ವಯವಾಗತಕ್ಕದ್ದು ಮತ್ತು ಆ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಎಲ್ಲಾ ವಿವರಗಳು ಮುನ್ಸಿಪಲ್ ಕೌನ್ಸಿಲಿನ ಅನುಮೋದನೆಗಾಗಿ ಒಳಪಟ್ಟಿರತಕ್ಕದ್ದು.

(4) (2)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಆರು ತಿಂಗಳುಗಳೊಳಗಾಗಿ, ಮುನ್ಸಿಪಲ್ ಕೌನ್ಸಿಲು, ತಾನು ಸೂಕ್ತವೆಂದು ಯೋಚಿಸುವಂಥ ಷರತ್ತುಗಳ ಮೇಲೆ ಬಡಾವಣೆ ಅಥವಾ ಲೇಔಟುಗಳನ್ನು ರೂಪಿಸಲು ಅಥವಾ ಬೀದಿಯನ್ನು ನಿರ್ಮಿಸಲು ಅದು ಮಂಜೂರಾತಿ ನೀಡತಕ್ಕದ್ದು ಇಲ್ಲವೆ ಅದನ್ನು ನಿರಾಕರಿಸತಕ್ಕದ್ದು ಅಥವಾ ಅದಕ್ಕೆ ಸಂಬಂಧಿಸಿದಂತೆ ಇನ್ನಷ್ಟು ಮಾಹಿತಿಯನ್ನು ಕೇಳತಕ್ಕದ್ದು.

(5) ಮುನ್ಸಿಪಲ್ ಕೌನ್ಸಿಲು, ಅರ್ಜಿಯನ್ನು ಮಂಜೂರು ಮಾಡುವುದಕ್ಕೆ ಮುಂಚೆ ರಸ್ತೆಗಳು, ರಸ್ತೆ ಬೀದಿಯ ಚರಂಡಿಗಳು, ಅಡಿಗಾಲುವೆಗಳು, ಒಳಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜು ಹಾಗೂ ದೀಪದ ವ್ಯವಸ್ಥೆ ಮಾಡುವುದಕ್ಕಾಗುವ ವೆಚ್ಚವನ್ನು ಮತ್ತು ಮುನ್ಸಿಪಲ್ ಕೌನ್ಸಿಲು ಅಂಥ ಅರ್ಜಿದಾರನನ್ನು ಕೋರಬಹುದಾದಂಥ ಇತರ ಉದ್ದೇಶಗಳಿಗಾಗಿನ ವೆಚ್ಚಗಳನ್ನು ಪೂರೈಸಲು ಅರ್ಜಿದಾರನನ್ನು ಅಗತ್ಯಪಡಿಸಬಹುದು:

ಪರಂತು, ಅರ್ಜಿದಾರನು, ರಸ್ತೆಗಳು, ಚರಂಡಿಗಳು, ನೀರು ಸರಬರಾಜಿನ ಕೊಳವೆಗಳು ಮತ್ತು ಅವನು ರೂಪಿಸಿದ ಖಾಲಿ ಸ್ಥಳಗಳ ಒಡೆತನವನ್ನು ಮುನ್ಸಿಪಲ್ ಕೌನ್ಸಿಲಿಗೆ, ಅವುಗಳಿಗಾಗಿ ಯಾವುದೇ ನಷ್ಟಪರಿಹಾರವನ್ನು ಕ್ಲೇಮು ಮಾಡದೆ ಶಾಶ್ವತವಾಗಿ ವರ್ಗಾಯಿಸಲು ಸಹ ಒಪ್ಪತಕ್ಕದ್ದು.

(6) ಅಂಥ ಮಂಜೂರಾತಿಯನ್ನು–

(i) ಮುನ್ಸಿಪಲ್ ಕೌನ್ಸಿಲಿನಿಂದ ಉದ್ದೇಶಿತ ಬೀದಿಯು ಮೇಲ್ಪಾಟಿನ ಯಾವುದೇ ಸಾರ್ವತ್ರಿಕ ಯೋಜನೆಯನ್ನು ಅಥವಾ ಮೇಲ್ಪಾಟಿನ ಅಥವಾ ವಿಸ್ತರಣಾ ಇತರ ಯೋಜನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಈಗಾಗಲೇ ಮಾಡಿಕೊಂಡಿರುವ ಅಥವಾ ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಮಾಡಿಕೊಳ್ಳುವ ಸಂಭವವಿರುವ ಯಾವುದೇ ಏರ್ಪಾಡುಗಳೊಂದಿಗೆ ಘರ್ಷಣೆಯಾಗುವಂತಿದ್ದರೆ;

(ii) ಪ್ರಸ್ತಾವಿತ ಬೀದಿಯು (3)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿರುವ ಈ ಅಧಿನಿಯಮದ ಅಥವಾ ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳಿಗೆ ಅನುನುಗಣವಾಗಿಲ್ಲದಿದ್ದರೆ ಅಥವಾ;

(iii) ಪ್ರಸ್ತಾವಿತ ಬೀದಿಯನ್ನು ಈಗಾಗಲೇ ತೆರೆದಿರುವ ಬೀದಿಯೊಂದಿಗೆ ಸಂಪರ್ಕಿಸುವ ಹಾಗೆ ವಿನ್ಯಾಸಿಸದಿದ್ದರೆ;

(iv) ಅಸ್ತಿತ್ವದಲ್ಲಿರುವ ಅಥವಾ ಮುನ್ಸಿಪಲ್ ಕೌನ್ಸಿಲಿನ ಪ್ರಸ್ತಾವಿತ ವಿಸ್ತರಣೆ ಅಥವಾ ಮೇಲ್ಪಾಟು ಯೋಜನೆಗಳೊಂದಿಗೆ ಆ ಲೇಔಟನ್ನು ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಹೊಂದಿಸಲಾಗದಿದ್ದರೆ

–ನಿರಾಕರಿಸಬಹುದು.

(7) (4)ನೇ ಉಪ–ಪ್ರಕರಣದ ಮೇರೆಗೆ ಅರ್ಜಿದಾರನಿಂದ ಇನ್ನಷ್ಟು ಮಾಹಿತಿ ಮುನ್ಸಿಪಲ್ ಕೌನ್ಸಿಲಿಗೆ ಅಗತ್ಯವಿದ್ದರೆ, ಅಂಥ ಮಾಹಿತಿಯನ್ನು ಪಡೆದ ತರುವಾಯ ಮುನ್ಸಿಪಲ್ ಕೌನ್ಸಿಲು ಆದೇಶಗಳನ್ನು ಮಾಡುವವರೆಗೆ, ಅವನು ಬಡಾವಣೆ ಅಥವಾ ಲೇಔಟನ್ನು ರೂಪಿಸಲು ಅಥವಾ ಬೀದಿಯನ್ನು ನಿರ್ಮಿಸಲು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಸದರಿ ಅರ್ಜಿಯ ಬಗ್ಗೆ ಅಂತಿಮವಾಗಿ ವ್ಯವಹರಿಸಲು ಅದು ಶಕ್ತವಾಗಲು ಅವಶ್ಯವೆಂದು ಪರಿಗಣಿಸಿದಂಥ ಎಲ್ಲಾ ಮಾಹಿತಿಯನ್ನು ಮುನ್ಸಿಪಲ್ ಕೌನ್ಸಿಲು ಪಡೆದ ತರುವಾಯ, ಅಂಥ ಆದೇಶಗಳನ್ನು ಹೊರಡಿಸಲು, ಯಾವುದೇ ಸಂದರ್ಭದಲ್ಲಿ ಆರು ತಿಂಗಳಿಗಿಂತ ಹೆಚ್ಚಿನ ವಿಳಂಬವಾಗತಕ್ಕದ್ದಲ್ಲ.

(8) (2)ನೇ ಉಪ–ಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅಥವಾ (7)ನೇ ಉಪ–ಪ್ರಕರಣದ ಮೇರೆಗೆ ಕೇಳಲಾದ ಎಲ್ಲಾ ಮಾಹಿತಿಯನ್ನು ಸ್ವೀಕರಿಸಿದ ದಿನಾಂಕದಿಂದ ಆರು

ತಿಂಗಳೊಳಗಾಗಿ ಅದರ ಮಂಜೂರಾತಿಯನ್ನು ಮುನ್ಸಿಪಲ್ ಕೌನ್ಸಿಲು ನಿರಾಕರಿಸಿದರೆ ಅಂಥ ಮಂಜೂರಾತಿಯನ್ನು ನೀಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅರ್ಜಿದಾರನು ಈ ಬಡಾವಣೆ ಅಥವಾ ಲೇಔಟನ್ನು ರೂಪಿಸಲು ಅಥವಾ ಬೀದಿಯನ್ನು ನಿರ್ಮಿಸಲು ಮುಂದುವರೆಯಬಹುದು, ಆದರೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಅಥವಾ ಉಪವಿಧಿಗಳ ಉಪಬಂಧಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸುವಂತೆ ಅಲ್ಲ.

(9) (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಬಡಾವಣೆ ಅಥವಾ ಲೇಔಟನ್ನು ರೂಪಿಸುವ ಅಥವಾ ರೂಪಿಸಲು ಪ್ರಯತ್ನಿಸುವ ಅಥವಾ ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲಿನ ಆದೇಶಗಳಿಗೆ ಅನುಗುಣವಾಗಿ ಅಲ್ಲದೆ ಅಥವಾ ಅನ್ಯಥಾ ಯಾವುದೇ ಬೀದಿಯನ್ನು ನಿರ್ಮಿಸುವ ಯಾರೇ ವ್ಯಕ್ತಿಯು, ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**171. ಬಡಾವಣೆ, ಲೇಔಟು ಅಥವಾ ಬೀದಿಯ ಬದಲಾವಣೆ ಅಥವಾ ನಾಶಪಡಿಸುವಿಕೆ.–** (1) 170ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಬಡಾವಣೆ ಅಥವಾ ಲೇಔಟನ್ನು ಯಾರೇ ವ್ಯಕ್ತಿ ರೂಪಿಸಿದರೆ ಅಥವಾ ಯಾವುದೇ ರಸ್ತೆಯನ್ನು ನಿರ್ಮಿಸಿದರೆ ಅಥವಾ 170ನೇ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲಿನ ಆದೇಶಗಳಿಲ್ಲದೆ ಅಥವಾ ಆದೇಶಗಳಿಗನುಗುಣವಾಗಲ್ಲದೆ ಅನ್ಯಥಾ ಯಾವುದೇ ಕಟ್ಟಡವನ್ನು ನಿರ್ಮಿಸಿದರೆ, ಈ ಅಧಿನಿಯಮದ ಮೇರೆಗೆ ತಪ್ಪಿತಸ್ಥನನ್ನು, ಪ್ರಾಸಿಕ್ಯೂಟ್ ಮಾಡಲಿ ಅಥವಾ ಮಾಡದಿರಲಿ ಮುನ್ಸಿಪಲ್ ಕೌನ್ಸಿಲು, ನೋಟೀಸಿನ ಮೂಲಕ–

(ಕ) ಅಂಥ ಬಡಾವಣೆ, ಲೇಔಟು ಅಥವಾ ಬೀದಿಯನ್ನು ಮುನ್ಸಿಪಲ್ ಕೌನ್ಸಿಲಿಗೆ ಮನದಟ್ಟಾಗುವಂತೆ ಏಕೆ ಬದಲಾಯಿಸಬಾರದು ಅಥವಾ ಅಂಥ ಬದಲಾವಣೆಯು ಕಾರ್ಯ ಸಾಧ್ಯವಿಲ್ಲವೆಂದು ಮುನ್ಸಿಪಲ್ ಕೌನ್ಸಿಲು ಭಾವಿಸಿದರೆ ಅಂಥ ಬಡಾವಣೆ, ಲೇಔಟು ಅಥವಾ ಬೀದಿಯನ್ನು ಏಕೆ ನಾಶಪಡಿಸಬಾರದು ಎಂಬುದಕ್ಕೆ ಸಾಕಷ್ಟು ಕಾರಣಗಳನ್ನು ತೋರಿಸಲು ಅವನು ರುಜು ಮಾಡಿದ ಬರಹದಲ್ಲಿಯ ಹೇಳಿಕೆಯ ಮೂಲಕ ನೋಟೀಸಿನಲ್ಲಿ ನಿದಿಷ್ಟಪಡಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಮುನ್ಸಿಪಲ್ ಕೌನ್ಸಿಲಿಗೆ ಕಳುಹಿಸತಕ್ಕದ್ದೆಂದು ತಪ್ಪಿತಸ್ಥನನ್ನು ಅಗತ್ಯಪಡಿಸಬಹುದು; ಅಥವಾ

(ಖ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸಮಯ ಮತ್ತು ಸ್ಥಳದಲ್ಲಿ ಖುದ್ದಾಗಿ ಅಥವಾ ಅಧಿಕೃತ ಏಜೆಂಟನ ಮೂಲಕ ಮುನ್ಸಿಪಲ್ ಕೌನ್ಸಿಲಿನ ಮುಂದೆ ಹಾಜರಾಗಲು ಮತ್ತು ಹಿಂದೆ ಹೇಳಿದ ಹಾಗೆ ಕಾರಣ ತೋರಿಸಲು ತಪ್ಪಿತಸ್ಥನನ್ನು ಅಗತ್ಯಪಡಿಸಬಹುದು.

(2) ಅಂಥ ನೋಟೀಸನ್ನು ಯಾರಿಗೆ ಜಾರಿ ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು, ಅಂಥ ಬಡಾವಣೆ, ಲೇಔಟು ಅಥವಾ ಬೀದಿಯನ್ನು ಏಕೆ ಹಾಗೆ ಬದಲಾಯಿಸಬಾರದು ಅಥವಾ ನಾಶಪಡಿಸಬಾರದು ಎಂಬುದಕ್ಕೆ ಮುನ್ಸಿಪಲ್ ಕೌನ್ಸಿಲಿಗೆ ಮನದಟ್ಟಾಗುವಂತೆ ಸಾಕಷ್ಟು ಕಾರಣ ತೋರಿಸಲು ತಪ್ಪಿದರೆ, ಮುನ್ಸಿಪಲ್ ಕೌನ್ಸಿಲು ಅಂಥ ಬಡಾವಣೆ, ಲೇಔಟು ಅಥವಾ ಬೀದಿಯ ಬದಲಾವಣೆ, ನಾಶವನ್ನು ನಿರ್ದೇಶಿಸುವ ಆದೇಶವನ್ನು ಮುನ್ಸಿಪಲ್ ಕೌನ್ಸಿಲು ಹೊರಡಿಸಬಹುದು.

**172. ಕಾಮಗಾರಿಯನ್ನು ನಿರ್ವಹಿಸುವಂತೆ ಆದೇಶಿಸಲು ಅಥವಾ ತಪ್ಪಿದರೆ, ಅದನ್ನು ತಾನೇ ಸ್ವತಃ ನೆರವೇರಿಸಲು ಮುನ್ಸಿಪಲ್ ಕೌನ್ಸಿಲಿನ ಅಧಿಕಾರ.–** (1) ಮುನ್ಸಿಪಲ್ ಕೌನ್ಸಿಲು–

(ಕ) 170ನೇ ಪ್ರಕರಣದ ಮೇರೆಗೆ ಅನುಮತಿಗಾಗಿ ಅರ್ಜಿ ಸಲ್ಲಿಸಿರುವ ಮತ್ತು ಆ ಸಂಬಂಧದಲ್ಲಿ ಬಡಾವಣೆ ಅಥವಾ ಲೇಔಟನ್ನು ರೂಪಿಸುವುದಕ್ಕೆ ಅಥವಾ ಬೀದಿಯನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಸ್ವತಃ ನಿರ್ವಹಿಸಬೇಕೆಂದು ಮುನ್ಸಿಪಲ್ ಕೌನ್ಸಿಲಿನಿಂದ ಸ್ಪಷ್ಟವಾಗಿ ಅನುಮತಿ ಪಡೆದಿರುವ ಯಾರೇ ವ್ಯಕ್ತಿಯು ಅದನ್ನು ನಿರ್ವಹಿಸದಿದ್ದರೆ; ಅಥವಾ

(ಖ) ಯಾವುದೇ ಖಾಸಗಿ ಬೀದಿ ಅಥವಾ ಅದರ ಭಾಗವನ್ನು ಮಟ್ಟ, ನೆಲಗಟ್ಟು, ಜಲ್ಲಿ ಹಾಕುವುದು, ಚಪ್ಪಡಿ ಹಾಕುವುದು, ಮಾರ್ಗ ನಿರ್ಮಿಸುವುದು, ಒಳಚರಂಡಿ ವ್ಯವಸ್ಥೆ ಮಾಡುವುದು, ಚರಂಡಿ ವ್ಯವಸ್ಥೆ ಮಾಡುವುದು, ನಿರ್ಮಲೀಕರಣ ಮಾಡುವುದು ಅಥವಾ ದೀಪದ ವ್ಯವಸ್ಥೆಯನ್ನು ಮುನ್ಸಿಪಲ್ ಕೌನ್ಸಿಲಿಗೆ ಸಮಾಧಾನವಾಗುವಂತೆ ಮಾಡದಿದ್ದರೆ, ಅದು

–ನೋಟಿಸಿನ ಮೂಲಕ, ಬಡಾವಣೆ ಅಥವಾ ಲೇಔಟನ್ನು ರೂಪಿಸುವ ವ್ಯಕ್ತಿಯನ್ನು ಅಥವಾ ಅಂಥ ಬೀದಿ ಅಥವಾ ಭಾಗದ ಒಡೆಯರನ್ನು ಮತ್ತು ಅಂಥ ಬೀದಿ ಅಥವಾ ಭಾಗಕ್ಕೆ ಮುಖವಾಗಿರುವ ಅಥವಾ ಹೊಂದಿಕೊಂಡಿರುವ ಕಟ್ಟಡಗಳ ಮತ್ತು ಭೂಮಿಗಳ ಒಡೆಯರನ್ನು ಬೇರೆಯಾಗಿರುವ ಸಂದರ್ಭದಲ್ಲಿ, ಭೂಮಿ ಮತ್ತು ಕಟ್ಟಡದ ಒಡೆಯರಿಬ್ಬರನ್ನು ಭೂಮಿಯ ಮತ್ತು ಅದರ ಮೇಲಿನ ಕಟ್ಟಡದ ಒಡೆಯರು ಬೇರೆ ಬೇರೆಯಾಗಿರುವ ಸಂದರ್ಭದಲ್ಲಿ ಭೂಮಿ ಮತ್ತು ಕಟ್ಟಡದ ಒಡೆಯರಿಬ್ಬರನ್ನು ಒಳಗೊಂಡು ತನ್ನ ಅಭಿಪ್ರಾಯದಲ್ಲಿ ಅವಶ್ಯವಿರಬಹುದಾದಂಥ ಯಾವುದೇ ಕಾಮಗಾರಿಯನ್ನು ಮತ್ತು ಅಂಥ ನೋಟೀಸನ್ನು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ನಿರ್ವಹಿಸಲು ಅಗತ್ಯಪಡಿಸಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಕಾಲದೊಳಗಾಗಿ ಅಂಥ ಯಾವುದೇ ಕಾಮಗಾರಿಯನ್ನು ನಿರ್ವಹಿಸದಿದ್ದರೆ; ಮುನ್ಸಿಪಲ್ ಕೌನ್ಸಿಲು ತಾನು ಸೂಕ್ತವೆಂದು ಯೋಚಿಸಿದರೆ, ಅದನ್ನು ಕಾರ್ಯಗತಗೊಳಿಸಬಹುದು, ಅಥವಾ ಕಾರ್ಯಗತಗೊಳಿಸುವಂತೆ ಮಾಡಬಹುದು ಮತ್ತು ವಹಿಸಿದ ವೆಚ್ಚಗಳನ್ನು ಮುನ್ಸಿಪಲ್ ಕೌನ್ಸಿಲು ನಿರ್ಧರಿಸಬಹುದಾದಂಥ ಪ್ರಮಾಣಗಳಲ್ಲಿ (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳು ಅಥವಾ ಒಡೆಯರು ಸಂದಾಯ ಮಾಡತಕ್ಕದ್ದು, ಅಂಥ ವೆಚ್ಚಗಳನ್ನು, ಸಂಬಂಧಪಟ್ಟ ವ್ಯಕ್ತಿಗಳಿಂದ ಭೂಕಂದಾಯದ ಬಾಕಿಯಂತೆ ವಸೂಲು ಮಾಡಬಹುದು.

**173. ಮೇಲ್ಪಾಟು ಮಂಡಲಿಯ ಸ್ಥಾಪನೆ.–** (1) ಯಾವುದೇ ಪೌರಸಭೆಯಲ್ಲಿ ಮೇಲ್ಪಾಟು ಯೋಜನೆಗಳನ್ನು ಈ ಅಧ್ಯಾಯದ ಮೇರೆಗೆ ಕೈಗೊಳ್ಳುವ ಮತ್ತು ನಿರ್ವಹಿಸುವ ಉದ್ದೇಶಕ್ಕಾಗಿ, ಸರ್ಕಾರವು ಮುನ್ಸಿಪಲ್ ಕೌನ್ಸಿಲಿನೊಡನೆ ಸಮಾಲೋಚಿಸಿದ ತರುವಾಯ, ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಮೇಲ್ಪಾಟು ಮಂಡಲಿಯನ್ನು ಸ್ಥಾಪಿಸಲು ನಿರ್ದೇಶಿಸಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ಮೇಲ್ಪಾಟು ಮಂಡಲಿಯನ್ನು ಸ್ಥಾಪಿಸಬೇಕೆಂದು ಸರ್ಕಾರವು ನಿರ್ದೇಶಿಸಿದಾಗ, ...................... ಮೇಲ್ಪಾಟು ಮಂಡಲಿ ಎಂದು ಕರೆಯಲಾಗುವ ಈ ಕೆಳಕಂಡ ಏಳು ಸದಸ್ಯರನ್ನೊಳಗೊಂಡ ಒಂದು ಮಂಡಲಿಯನ್ನು ರಚಿಸತಕ್ಕದ್ದು:–

(ಕ) ಸರ್ಕಾರವು ನೇಮಕ ಮಾಡತಕ್ಕ ಮಂಡಲಿಯ ಅಧ್ಯಕ್ಷ;

(ಖ) * * * *

(ಗ) ಮುನ್ಸಿಪಲ್ ಕೌನ್ಸಿಲಿನ ತತ್ಕಾಲದಲ್ಲಿನ ಪೌರಸಭಾ ಕಮಿಷನರ್ ಅಥವಾ ಚೀಫ್ ಆಫೀಸರ್;

(ಘ) ಸಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಸರ್ಕಾರ ನಿರ್ದಿಷ್ಟಪಡಿಸಿದ ನಗರ ಯೋಜನಾ ನಿರ್ದೇಶಕರ ನಾಮ ನಿರ್ದೇಶಿತ;

(ಙ) ಸರ್ಕಾರವು ನೇಮಕ ಮಾಡಬೇಕಾದ ಇಬ್ಬರು ಸದಸ್ಯರು;

(ಚ) ಪೌರಸಭೆಯ ಪೌರಸಭಾ ಕೌನ್ಸಿಲರುಗಳು ನಿಯಮಿಸಲಾದ ರೀತಿಯಲ್ಲಿ ತಮ್ಮೊಳಗಿನಿಂದ ಚುನಾಯಿಸಬೇಕಾದ ಅಥವಾ ಹಿಂದೆ ಹೇಳಿದಂತೆ ಚುನಾಯಿಸಲು ತಪ್ಪಿದರೆ, ಸರ್ಕಾರವು ಪೌರಸಭೆಯ ಪೌರಸಭಾ ಕೌನ್ಸಿಲರುಗಳೊಳಗಿಂದ ನೇಮಕಮಾಡಬೇಕಾದ ಇಬ್ಬರು ಸದಸ್ಯರು.

(3) ಈ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ಮೇಲ್ವಾಟು ಮಂಡಲಿಯ, (15)ನೇ ಉಪ-ಪ್ರಕರಣದ ಮೇರೆಗೆ ಅದನ್ನು ವಿಘಟಿಸುವವರೆಗೆ, ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಹಾಗೂ ಅದನ್ನು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(4) ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಮೇಲ್ವಾಟು ಮಂಡಲಿಯ ಅಧ್ಯಕ್ಷ ಮತ್ತು ಸದಸ್ಯರ ಹೆಸರುಗಳನ್ನು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು.

(5) ಮೇಲ್ವಾಟು ಮಂಡಲಿಯ ಅಧ್ಯಕ್ಷ ಮತ್ತು ಪದನಿಮಿತ್ತ ಸದಸ್ಯರಾಗಿರದ ಇತರ ಸದಸ್ಯರ ಪದಾವಧಿಯು, ಅವರ ಹೆಸರುಗಳನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂರು ವರ್ಷಗಳಾಗಿರತಕ್ಕದ್ದು ಮತ್ತು ಮೂರು ವರ್ಷಗಳ ಸದರಿ ಅವಧಿಯ ಸಮಾಪ್ತಿ ಹಾಗೂ ನಂತರ ಅಧಿಕಾರಕ್ಕೆ ಬರುವ ಮಂಡಲಿಯ ಅಧ್ಯಕ್ಷರ ಮತ್ತು ಇತರ ಸದಸ್ಯರ ಹೆಸರುಗಳು ರಾಜ್ಯಪತ್ರದಲ್ಲಿ ಪ್ರಕಟವಾಗುವ ದಿನಾಂಕದ ನಡುವೆ ಗತಿಸಿಹೋಗುವ ಯಾವುದೇ ಇನ್ನಷ್ಟು ಅವಧಿಯನ್ನು ಒಳಗೊಂಡಿರತಕ್ಕದ್ದು.

(6) ಸದಸ್ಯನ ಮರಣ, ರಾಜೀನಾಮೆ ಅಥವಾ ತೆಗೆದುಹಾಕುವುದರಿಂದ ಉಂಟಾಗುವ ಅವನ ಸ್ಥಾನದಲ್ಲಿನ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ಆದಷ್ಟು ಬೇಗನೇ ಮಂಡಲಿಯ ಸದಸ್ಯರ ಮೂಲ ನೇಮಕಾತಿಗಳು ಮತ್ತು ಚುನಾವಣೆಗಳ ಸಂದರ್ಭದಲ್ಲಿ ಅನ್ವಯವಾಗುವಂಥ ರೀತಿಯಲ್ಲಿ ಅವೇ ಪ್ರಾಧಿಕಾರಗಳಿಂದ ಮತ್ತು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅವೇ ಉಪಬಂಧಗಳಿಗೊಳಪಟ್ಟು ಭರ್ತಿ ಮಾಡತಕ್ಕದ್ದು:

ಪರಂತು, ಹಾಗೆ ಆಯ್ಕೆಗೊಂಡ ಸದಸ್ಯರು, ಅಂಥ ಖಾಲಿ ಸ್ಥಾನವು ಉಂಟಾಗದಿದ್ದರೆ ಆ ಸ್ಥಾನವನ್ನು ತೆರಪು ಮಾಡುವ ಸದಸ್ಯನು ಅದನ್ನು ಧಾರಣ ಮಾಡಿರುತ್ತಿದ್ದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

(7) ಅಧ್ಯಕ್ಷ ಮತ್ತು ಪದನಿಮಿತ್ತ ಸದಸ್ಯರಲ್ಲದ ಇತರ ಸದಸ್ಯರು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಆ ಭತ್ಯೆಗಳನ್ನು ಮೇಲ್ವಾಟು ಮಂಡಲಿಯ ನಿಧಿಗಳಿಂದ ಸಂದಾಯ ಮಾಡತಕ್ಕದ್ದು.

(8) ಪದನಿಮಿತ್ತ ಸದಸ್ಯನಾಗಿರುವ ವ್ಯಕ್ತಿಯನ್ನು ಹೊರತುಪಡಿಸಿ, ಯಾರೇ ವ್ಯಕ್ತಿಯು, ಅವನು–

(ಕ) ಮಂಡಲಿ ಅಥವಾ ಮುನ್ಸಿಪಲ್ ಕೌನ್ಸಿಲು ಅಥವಾ ಸರ್ಕಾರದ ಅಧೀನದಲ್ಲಿ ಯಾವುದೇ ಲಾಭದ ಪದವನ್ನು ಧಾರಣ ಮಾಡಿದ್ದರೆ; ಅಥವಾ

(ಖ) ಅಸ್ವಸ್ಥ ಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿತನಾಗಿದ್ದರೆ; ಅಥವಾ

(ಗ) ಅನುನ್ಮುಕ್ತ ದಿವಾಳಿಯಾಗಿದ್ದರೆ ಅಥವಾ ದಿವಾಳಿಯೆಂದು ನಿರ್ಣೀತನಾಗಲು ಅರ್ಜಿ ಸಲ್ಲಿಸಿದ್ದರೆ; ಅಥವಾ

(ಘ) ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಪತನವನ್ನೊಳಗೊಳ್ಳುವಂಥ ಅಪರಾಧದ ಬಗ್ಗೆ ಅಪರಾಧ ನಿರ್ಣೀತನಾಗಿದ್ದರೆ; ಅಥವಾ

(ಙ) ತಾನಾಗಿಯೇ, ತನ್ನ ಹೆಂಡತಿ ಅಥವಾ ಮಗನ ಅಥವಾ ಅವನ ಮೇಲೆ ಅವಲಂಬಿತನಾದ ಇತರ ಯಾರೇ ಹತ್ತಿರದ ಬಂಧುವಿನ ಮೂಲಕ ಅಥವಾ ಯಾರೇ ಪಾಲುದಾರನ ಮೂಲಕ ನೇರವಾಗಿ ಅಥವಾ ಪರೋಕ್ಷವಾಗಿ ಮೇಲ್ಪಾಟು ಮಂಡಲಿಯ ಮೂಲಕ ಅಥವಾ ಅದರ ಪರವಾಗಿ ಅಸ್ತಿತ್ವದಲ್ಲಿರುವ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಆಸಕ್ತಿಯನ್ನು ಹೊಂದಿದ್ದರೆ; ಅಥವಾ

(ಚ) ಮೇಲ್ಪಾಟು ಮಂಡಲಿಯಿಂದ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವಂಥ ಯಾವುದೇ ನಿಗಮಿತ ನಿಕಾಯದ ಕಾರ್ಯದರ್ಶಿ ಅಥವಾ ವ್ಯವಸ್ಥಾಪಕ ಅಥವಾ ವೇತನ ಪಡೆಯುವ ಇತರ ಅಧಿಕಾರಿಯಾಗಿದ್ದರೆ,

–ಮೇಲ್ಪಾಟು ಮಂಡಲಿಯ ಸದಸ್ಯನಾಗಿ ಆಯ್ಕೆಯಾಗಲು ಅಥವಾ ಸದಸ್ಯನಾಗಿರಲು ಅನರ್ಹಗೊಳ್ಳತಕ್ಕದ್ದು:

ಪರಂತು, ವ್ಯಕ್ತಿಯು, ತಾನು ಕಾಲಕಾಲಕ್ಕೆ ಧಾರಣ ಮಾಡಿದ ಷೇರಿನ ಸ್ವರೂಪ ಮತ್ತು ವ್ಯಾಪ್ತಿಯನ್ನು ಸರ್ಕಾರಕ್ಕೆ ಬಹಿರಂಗಪಡಿಸಿದ್ದರೆ, ಮಂಡಲಿಯೊಂದಿಗೆ ಕರಾರು ಮಾಡಿಕೊಂಡಿರುವಂಥ ನಿಗಮಿತ ನಿಕಾಯದ ಷೇರು ಹೊಂದಿರುವವನು ಎಂಬ ಕಾರಣ ಮಾತ್ರದಿಂದಲೇ (ಙ) ಖಂಡದ ಮೇರೆಗೆ ಅನರ್ಹಗೊಳ್ಳತಕ್ಕದ್ದಲ್ಲ ಅಥವಾ ಮೇಲ್ಪಾಟು ಮಂಡಳಿಯ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರಿನಲ್ಲಿ ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿ ಹೊಂದಿರುವುದಾಗಿ ಭಾವಿಸತಕ್ಕದ್ದಲ್ಲ.

(9) ಸರ್ಕಾರವು ಅವಶ್ಯವೆಂದು ಭಾವಿಸುವಂಥ ವಿಚಾರಣೆಯ ತರುವಾಯ ಅಧ್ಯಕ್ಷ ಅಥವಾ ಪದನಿಮಿತ್ತ ಸದಸ್ಯನಲ್ಲದ ಯಾರೇ ಇತರ ಸದಸ್ಯನನ್ನು ಅವನು,–

(ಕ) ಕಾರ್ಯ ನಿರ್ವಹಿಸಲು ನಿರಾಕರಿಸಿದರೆ; ಅಥವಾ

(ಖ) ಕಾರ್ಯ ನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಗ) ಸರ್ಕಾರದ ಅಭಿಪ್ರಾಯದಲ್ಲಿ, ಮಂಡಲಿಯಲ್ಲಿ ಅವನ ಮುಂದುವರಿಕೆಯು ಅದರ ಹಿತಾಸಕ್ತಿಗೆ ಹಾನಿಕರವಾಗುವಂತೆ ಮಂಡಲಿಯಲ್ಲಿ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ; ಅಥವಾ

(ಘ) ಸರ್ಕಾರದ ಅಭಿಪ್ರಾಯದಲ್ಲಿ, ಸಾಕಷ್ಟು ಕಾರಣಗಳಿಲ್ಲದೆ ಮಂಡಲಿಯ ನಿರಂತರ ಮೂರು ಸಭೆಗಳಿಗೆ ಹಾಜರಾಗಲು ತಪ್ಪಿದರೆ; ಅಥವಾ

(ಙ) ಯಾವ ಪೌರಸಭೆಯ ಸಂಬಂಧದಲ್ಲಿ ಮೇಲ್ಪಾಟು ಮಂಡಲಿಯನ್ನು ಸ್ಥಾಪಿಸಲಾಗಿದೆಯೋ ಆ ಪೌರಸಭೆಯ ಪರಿಮಿತಿಯೊಳಗೆ ವಾಸಿಸುವುದು ಕೊನೆಗೊಂಡರೆ; ಅಥವಾ

(ಚ) ಸರ್ಕಾರದ ಅಭಿಪ್ರಾಯದಲ್ಲಿ, ಅವನ ನೇಮಕಾತಿಯ ತರುವಾಯ (8)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅನರ್ಹತೆಗೆ ಗುರಿಯಾಗಿದ್ದರೆ; ಅಥವಾ

(ಛ) ಸರ್ಕಾರದ ಅಭಿಪ್ರಾಯದಲ್ಲಿ, ಅವನು ಮೇಲ್ಪಾಟು ಮಂಡಲಿಯಲ್ಲಿ ಮುಂದುವರಿಯಲು ಅನ್ಯಥಾ ಯೋಗ್ಯನಲ್ಲದಿದ್ದರೆ

–ಅವನ ಪದದಿಂದ ತೆಗೆದುಹಾಕಬಹುದು:

ಪರಂತು, ಸರ್ಕಾರಕ್ಕೆ ತನ್ನ ವಿವರಣೆ ಸಲ್ಲಿಸಲು ಸಂಬಂಧಪಟ್ಟ ಸದಸ್ಯನಿಗೆ ಅವಕಾಶವನ್ನು ಕೊಟ್ಟಿದ್ದ ಹೊರತು, ಈ ಉಪ–ಪ್ರಕರಣದ ಮೇರೆಗೆ ತೆಗೆದುಹಾಕುವಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(10) ಮೇಲ್ಪಾಟು ಮಂಡಲಿಯು, ಮಂಡಲಿಯ ಕಚೇರಿಯಲ್ಲಿ ಸಭೆ ಸೇರತಕ್ಕದ್ದು ಮತ್ತು ವ್ಯವಹಾರ ನಿರ್ವಹಣೆಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ಪ್ರಕ್ರಿಯೆ ನಿಯಮಗಳನ್ನು ಪಾಲಿಸತಕ್ಕದ್ದು.

(11) ಮೇಲ್ಪಾಟು ಮಂಡಲಿಯ ಯಾವುದೇ ಕಾರ್ಯವು, ಮಂಡಲಿಯ ರಚನೆಯಲ್ಲಿನ ಯಾವುದೇ ದೋಷ ಅಥವಾ ಯಾವುದೇ ಅನರ್ಹತೆಯ ಅಥವಾ ಅವನ ನೇಮಕಾತಿಯಲ್ಲಿನ ಅಥವಾ ಚುನಾವಣೆಯಲ್ಲಿನ ಯಾವುದೇ ಅಕ್ರಮತೆಯ ಕಾರಣದಿಂದ ಪದಧಾರಣ ಮಾಡಲು ಅಥವಾ ಅದರಲ್ಲಿ ಮುಂದುವರಿಯಲು ಯಾರೇ ಸದಸ್ಯನು ಹಕ್ಕುಳ್ಳವನಾಗಿದ್ದಲ್ಲಿ ಎಂಬ ಕಾರಣದ ಮೇಲೆ ಅಥವಾ ಮಂಡಲಿಯ ಯಾರೇ ಸದಸ್ಯನ ಪದದಲ್ಲಿನ ಯಾವುದೇ ಖಾಲಿ ಸ್ಥಾನದ ಅವಧಿಯಲ್ಲಿ ಅಂಥ ಯಾವುದೇ ಕಾರ್ಯವನ್ನು ಮಾಡಲಾಯಿತೆಂಬ ಕಾರಣದಿಂದ ಅಸಿಂಧುವಾಗಿರುವುದಾಗಿ ಭಾವಿಸತಕದ್ದಲ್ಲ.

(12) ನಿಯಮಿಬಹುದಾದಂಥ ಮೇಲ್ಪಾಟು ಮಂಡಲಿಯ ಸಿಬ್ಬಂದಿಯ ಅಂಥ ಸದಸ್ಯರನ್ನು ಕಮಿಷನರನು, ಕರ್ನಾಟಕ ಪೌರಸಭಾ ಆಡಳಿತ ಸೇವೆಯ ಸದಸ್ಯರಿಂದ ನೇಮಕ ಮಾಡತಕ್ಕದ್ದು. ಮಂಡಲಿಯು ಸರ್ಕಾರದ ಮಂಜೂರಾತಿಯೊಂದಿಗೆ ಅವಶ್ಯವೆಂದು ಭಾವಿಸುವ ಅದರ ಸಿಬ್ಬಂದಿಯ ಇತರ ಸದಸ್ಯರನ್ನು ನೇಮಕ ಮಾಡಬಹುದು.

(13) ಮೇಲ್ಪಾಟು ಮಂಡಲಿಯು, ಈ ಅಧ್ಯಾಯದ ಮೇರೆಗಿನ ಯಾವುದೇ ಉದ್ದೇಶವನ್ನು ಕಾರ್ಯಗತಗೊಳಿಸುವ ಅವಶ್ಯ ಅಥವಾ ವಿಹಿತವೆಂದು ಪರ್ಯಾಲೋಚಿಸಬಹುದಾದಂಥ ಎಲ್ಲ ಕರಾರುಗಳನ್ನು ಮಾಡಿಕೊಳ್ಳಬಹುದು ಹಾಗೂ ನೆರವೇರಿಸಬಹುದು; ಮತ್ತು ಅಧ್ಯಕ್ಷನು ಮಂಡಲಿಯ ಪರವಾಗಿ ಪ್ರತಿಯೊಂದು ಕರಾರನ್ನು ಮಾಡಿಕೊಳ್ಳತಕ್ಕದ್ದು ಮತ್ತು ನಿಯಮಿಸಬಹುದಾದಂಥ ಷರತ್ತುಗಳನ್ನು ಪಾಲಿಸಿದ ತರುವಾಯ ಮತ್ತು ಅಂಥ ರೀತಿಯಲ್ಲಿ ಮಾಡಿಕೊಳ್ಳತಕ್ಕದ್ದು; ಮತ್ತು ಈ ಉಪ–ಪ್ರಕರಣದಲ್ಲಿ ಮತ್ತು ಈ ಬಗ್ಗೆ ರಚಿಸಿದ ನಿಯಮಗಳಲ್ಲಿ ಉಪಬಂಧಿಸಿದ ರೀತಿಯಲ್ಲಿ ಬರೆದುಕೊಟ್ಟಿರದ ಕರಾರು ಮಂಡಲಿಯ ಮೇಲೆ ಬಾಧಕವಾಗತಕ್ಕದ್ದಲ್ಲ.

(14) ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದು ಮತ್ತು ಅವುಗಳನ್ನು ಕಾರ್ಯಗತಗೊಳಿಸುವುದು ಮತ್ತು ಪೌರಸಭೆಯ ಮೇಲ್ಪಾಟಿನ ಉದ್ದೇಶಗಳಿಗಾಗಿ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸುವಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು ಮೇಲ್ಪಾಟು ಮಂಡಲಿಯ ಕರ್ತವ್ಯವಾಗಿರತಕ್ಕದ್ದು.

(15) ಸರ್ಕಾರವು ಅವಶ್ಯವೆಂದು ಭಾವಿಸುವಂಥ ಎಲ್ಲ ಅಂಥ ಮೇಲ್ಪಾಟು ಯೋಜನೆಗಳನ್ನು ಮೇಲ್ಪಾಟು ಮಂಡಲಿಯು ಕಾರ್ಯಗತಗೊಳಿಸಿದೆ ಮತ್ತು ಪೌರಸಭೆಯ ಮೇಲ್ಪಾಟಿಗಾಗಿ ಅವಶ್ಯವಾಗಬಹುದಾದ ಇನ್ನಷ್ಟು ಕ್ರಮಗಳನ್ನು ಮುನ್ಸಿಪಲ್ ಕೌನ್ಸಿಲು ಅನುಕೂಲಕರವಾಗಿ ಕೈಗೊಳ್ಳಬಹುದು ಎಂದು ಸರ್ಕಾರಕ್ಕೆ

ಮನದಟ್ಟಾದಾಗ, ಸರ್ಕಾರವು ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸತಕ್ಕ ದಿನಾಂಕದಿಂದ ಮೇಲ್ಪಾಟು ಮಂಡಲಿಯು ವಿಘಟಿತಗೊಳ್ಳತಕ್ಕದ್ದು ಎಂದು ಘೋಷಿಸಬಹುದು. ಅಂಥ ಪ್ರತಿಯೊಂದು ಅಧಿಸೂಚನೆಯು ಮಂಡಲಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪ್ರಾಪ್ತಿ, ಮಂಡಲಿಯಲ್ಲಿ ನಿಹಿತವಾಗಿರುವ ಸ್ವತ್ತಿನ ವಿಲೆ ಅಥವಾ ವ್ಯವಸ್ಥಾಪನೆ ಅಪೂರ್ಣ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಮಂಡಲಿಯ ವಿಘಟನೆಗೆ ಹಾಗೂ ಅದರ ವ್ಯವಹಾರಗಳನ್ನು ಸಮಾಪ್ತಗೊಳಿಸುವುದಕ್ಕೆ ಸಂಬಂಧಿಸಿದ ಇತರ ಎಲ್ಲ ವಿಷಯಗಳಿಗೆ ಸಂಬಂಧಪಟ್ಟಂತೆ ಉಪಬಂಧಗಳನ್ನು ಒಳಗೊಳ್ಳತಕ್ಕದ್ದು:

ಪರಂತು, ಮಂಡಲಿಯ ವಿಘಟನೆಯ ದಿನಾಂಕದಂದು ಅದರಲ್ಲಿ ನಿಹಿತವಾಗಿದ್ದ ಹಾಗೂ ಸದರಿ ಅಧಿಸೂಚನೆಯಲ್ಲಿ ಸ್ಪಷ್ಟವಾಗಿ ಸರ್ಕಾರಕ್ಕೆ ಕಾಯ್ದಿರಿಸಿದ ಎಲ್ಲ ಸ್ಥಿರ ಸ್ವತ್ತುಗಳು ಅನಂತರ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು.

**174. ಮೇಲ್ಪಾಟು ಮಂಡಲಿಯ ಸ್ವತ್ತು, ಹಣಕಾಸು, ಅಧಿಕಾರಗಳು ಇತ್ಯಾದಿ.–** (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧ್ಯಾಯದ ಉದ್ದೇಶಗಳಿಗಾಗಿ ಹಾಗೂ ಅದು ವಿಧಿಸಬಹುದಾದ ಪರಿಮಿತಿಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಮತ್ತು ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, ಸರ್ಕಾರವು ಕಾಲಕಾಲಕ್ಕೆ, ಸರ್ಕಾರಕ್ಕೆ ಅಥವಾ ಮುನ್ಸಿಪಲ್ ಕೌನ್ಸಿಲಿಗೆ ಸೇರಿದ ಯಾವುದೇ ಸ್ಥಿರ ಸ್ವತ್ತನ್ನು ಮೇಲ್ಪಾಟು ಮಂಡಲಿಗೆ ವರ್ಗಾಯಿಸಬಹುದು ಮತ್ತು ಅದರಲ್ಲಿ ನಿಹಿತಗೊಳಿಸಬಹುದು:

ಪರಂತು, ಸರ್ಕಾರವು ನಿರ್ಧರಿಸಬಹುದಾದ ನಿಬಂಧನೆಗಳು ಯಾವುದಾದರೂ ಇದ್ದರೆ, ಅವುಗಳ ಮೇಲೆ ಅಂಥ ಯಾವುದೇ ಸ್ಥಿರ ಸ್ವತ್ತನ್ನು, ಸಂದರ್ಭಾನುಸಾರ ಸರ್ಕಾರವು ಅಥವಾ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮುನ್ಸಿಪಲ್ ಕೌನ್ಸಿಲು ಯಾವುದೇ ಕಾಲದಲ್ಲಿ ಮರಳಿ ಪಡೆಯಬಹುದು.

(2) ಮೇಲ್ಪಾಟು ಮಂಡಲಿಯು ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಎಲ್ಲಾ ಬಾಡಿಗೆಗಳು ಲಾಭಗಳು ಮತ್ತು ಎಲ್ಲಾ ಭೂಮಿಗಳ ಕಟ್ಟಡಗಳು ಹಾಗೂ ಮಂಡಲಿಯಲ್ಲಿ ನಿಹಿತವಾಗುವ ಅಥವಾ ಅದು ಆರ್ಜಿಸಿದ ಇತರ ಸ್ವತ್ತಿನ ಮಾರಾಟದ ಎಲ್ಲ ಉತ್ಪತ್ತಿಗಳನ್ನು ಅದಕ್ಕೆ ಜಮೆ ಮಾಡತಕ್ಕದ್ದು ಮತ್ತು ಮಂಡಲಿಯ ಎಲ್ಲ ಸಂದಾಯಗಳನ್ನು ಅದರಿಂದ ಪೂರೈಸತಕ್ಕದ್ದು. ಸದರಿ ನಿಧಿಗೆ–

(ಕ) ಈ ಅಧ್ಯಾಯದ ಉದ್ದೇಶಗಳಿಗಾಗಿ ಮಂಡಲಿಯ ವಿಲೆಗಾಗಿ ಕಾಲಕಾಲಕ್ಕೆ ಸರ್ಕಾರವು ಒದಗಿಸಬಹುದಾದಂಥ ಮೊತ್ತಗಳು;

(ಖ) ಮಂಡಲಿಯು ಕೈಗೊಂಡಿರುವ ಮೇಲ್ಪಾಟು ಯೋಜನೆಗಳ ಪರಿಣಾಮವಾಗಿ ಪ್ರಾಪ್ತವಾಗಿರುವ ಅಥವಾ ಪ್ರಾಪ್ತವಾಗುವ ಸಂಭವವಿರುವ ಪೌರಸಭೆಯ ಸಂಪನ್ಮೂಲಗಳಿಗೆ ನೆರವು ಅಥವಾ ಸೇರಿಸುವಿಕೆಯನ್ನು ಸರ್ಕಾರವು ಪರ್ಯಾಲೋಚಿಸಿದ ಮೇಲೆ, ಕಾಲಕಾಲಕ್ಕೆ ಸರ್ಕಾರವು ಪೌರಸಭಾ ನಿಧಿಯಿಂದ ಮಾಡಬೇಕೆಂದು ತಿಳಿಸುವಂಥ ವಂತಿಗೆಗಳು; ಮತ್ತು

(ಗ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಂಡಲಿಗೆ ಸಂದಾಯ ಮಾಡಿದ ಅಥವಾ ಮಂಡಲಿಯು ವಸೂಲಿ ಮಾಡಿದ ಅಭಿವೃದ್ಧಿ ಫೀಜು ಅಥವಾ ಬಾಕಿಯಿರುವ ಇತರ ಮೊತ್ತಗಳು

–ಇವುಗಳನ್ನು ಸಹ ಜಮೆ ಮಾಡತಕ್ಕದ್ದು.

(3) ಮೇಲ್ಪಾಟು ಮಂಡಲಿಯು, ಪ್ರತಿಯೊಂದು ವರ್ಷದಲ್ಲಿ ಅದು ಮುಂಬರುವ ವರ್ಷದಲ್ಲಿ ಉದ್ದೇಶಿಸಿದಂಥ ಸಂಭವನೀಯ ಸ್ವೀಕೃತಿಗಳು ಮತ್ತು ವೆಚ್ಚವನ್ನು ತೋರಿಸುವ ಬಜೆಟನ್ನು ತಯಾರಿಸತಕ್ಕದ್ದು

ಹಾಗೂ ಬಜೆಟಿನ ಒಂದು ಪ್ರತಿಯನ್ನು, ಈ ಸಂಬಂಧದಲ್ಲಿ ಅದು ನಿಗದಿಪಡಿಸಬಹುದಾದಂಥ ದಿನಾಂಕಕ್ಕೆ ಮುಂಚೆ, ಸರ್ಕಾರದ ಅನುಮೋದನೆಗಾಗಿ ಒಪ್ಪಿಸತಕ್ಕದ್ದು. ಮಂಡಲಿಯ ಕರ್ತವ್ಯಗಳನ್ನು ನಿರ್ವಹಿಸಲು ಹಾಗೂ ಕಾರ್ಯಾರ್ಥ ಶಿಲ್ಕಿನ ನಿರ್ವಹಣೆಗಾಗಿ ಸರ್ಕಾರವು ಸಮ್ಮತಿಸಬಹುದಾದಷ್ಟು ಹಣಕಾಸಿನ ವ್ಯವಸ್ಥೆಯನ್ನು ಆ ಬಜೆಟ್ಟು ಹೊಂದಿರತಕ್ಕದ್ದು. ಸರ್ಕಾರದ ಅಭಿಪ್ರಾಯದಲ್ಲಿ ಸಾಕಷ್ಟಾಗುವ ಏರ್ಪಾಟುಗಳನ್ನು ಬಜೆಟ್ಟು ಒಳಗೊಂಡಿರತಕ್ಕದ್ದು. ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ಮಾರ್ಪಾಡುಗಳಿಗೊಳಪಟ್ಟು ಬಜೆಟನ್ನು ಅನುಮೋದಿಸಬಹುದು.

(4) ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಮೇಲ್ವಾಟು ಮಂಡಲಿಯು ಅದರ ಆದಾಯ ಮತ್ತು ವೆಚ್ಚಗಳ ಸರಿಯಾದ ಲೆಕ್ಕಪತ್ರಗಳನ್ನು ಇಡತಕ್ಕದ್ದು. ಸರ್ಕಾರವು ನಿರ್ದೇಶಿಸಬಹುದಾದಂಥ ಅಧಿಕಾರಿಗಳಿಂದ, ಅಂಥ ಲೆಕ್ಕ ಪರಿಶೋಧನೆಗೆ ಅಂಥ ಲೆಕ್ಕಪತ್ರಗಳು ಒಳಪಡತಕ್ಕದ್ದು.

(5) ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರುವ, ಅಸ್ತಿತ್ವದಲ್ಲಿರುವ ಸಾರ್ವಜನಿಕ ರಸ್ತೆ ಅಥವಾ ಇತರ ಭೂಮಿಯ ಪೂರ್ತ ಅಥವಾ ಯಾವುದೇ ಭಾಗವನ್ನು ಯಾವುದೇ ಮೇಲ್ವಾಟಿನ ಯೋಜನೆಯ ಮೇರೆಗೆ, ಮೇಲ್ವಾಟು ಮಂಡಲಿಯಿಂದ ರೂಪಿಸಬೇಕಾದ, ಬದಲಾಯಿಸಬೇಕಾದ, ಅಗಲಗೊಳಿಸಬೇಕಾದ, ಮಾರ್ಗಪಲ್ಲಟಗೊಳಿಸಬೇಕಾದ, ಎತ್ತರಿಸಬೇಕಾದ, ಪುನಃ ವ್ಯವಸ್ಥೆಗೊಳಿಸಬೇಕಾದ ಅಥವಾ ಪುನರ್ ನಿರ್ಮಿಸಬೇಕಾದ ಬೀದಿಯ ಯಾವುದೇ ಭಾಗದ ನಿವೇಶನದಲ್ಲಿ ಸೇರಿಸಿದಾಗಲೆಲ್ಲಾ, ಅಂಥ ಅಸ್ತಿತ್ವದಲ್ಲಿರುವ ಬೀದಿ ಅಥವಾ ಭೂಮಿಯ (ಇನ್ನು ಮುಂದೆ "ಅಗತ್ಯವಾದ ಭಾಗ" ಎಂದು ಉಲ್ಲೇಖಿಸಲಾಗಿದೆ) ಸಂದರ್ಭಾನುಸಾರ ಪೂರ್ಣ ಅಥವಾ ಅದರ ಭಾಗವು ಹಿಂದೆ ಹೇಳಿದಂತೆ ಬೀದಿಯ ಭಾಗವೆಂಬಂತೆ ವ್ಯವಹರಿಸಲು ಮಂಡಲಿಗೆ ಅಗತ್ಯವಿದೆ ಎಂದು ಮುನ್ಸಿಪಲ್ ಕೌನ್ಸಿಲಿಗೆ ಮಂಡಲಿಯು ನೋಟೀಸನ್ನು ಕೊಡತಕ್ಕದ್ದು ಮತ್ತು ಆ ತರುವಾಯ ಅಗತ್ಯವಾದ ಭಾಗವು (8)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಮಂಡಲಿಯಲ್ಲಿ ನಿಹಿತವಾಗತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿ ಒಳಗೊಂಡಿರುವುದಾಗಿ ಯಾವುದೇ ಪೌರಸಭಾ ಚರಂಡಿ ಅಥವಾ ಕಾಮಗಾರಿಯಲ್ಲಿ ಅಥವಾ ಅದರ ಮೇಲೆ ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲಿನ ಹಕ್ಕು ಅಥವಾ ಅಧಿಕಾರಗಳಿಗೆ ಬಾಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

(6) ಯಾವುದೇ ಪೌರಸಭೆಗೆ ಸಂಬಂಧಪಟ್ಟಂತೆ ಮೇಲ್ವಾಟು ಮಂಡಲಿಯು ಸ್ಥಾಪನೆಯಾದ ಮೇಲೆ, ಮತ್ತು ಅದು ವಿಘಟಿತವಾಗುವವರೆಗೆ, 155 ರಿಂದ 169ರ ವರೆಗಿನ (ಎರಡೂ ಒಳಗೊಂಡಂತೆ) ಪ್ರಕರಣಗಳ ಮೇರೆಗಿನ ಮುನ್ಸಿಪಲ್ ಕೌನ್ಸಿಲಿನ ಎಲ್ಲಾ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಮೇಲ್ವಾಟು ಮಂಡಲಿ ಮತ್ತು ಅದರ ಅಧ್ಯಕ್ಷನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು. ಮತ್ತು ಸದರಿ ಪ್ರಕರಣಗಳಲ್ಲಿ ಮುನ್ಸಿಪಲ್ ಕೌನ್ಸಿಲು, ಪೌರಸಭಾ ಕಮಿಷನರು ಮತ್ತು ಚೀಫ್ ಆಫೀಸರ್‌ನ ಬಗ್ಗೆ ಮಾಡಿದ ಉಲ್ಲೇಖಗಳನ್ನು ಮೇಲ್ವಾಟು ಮಂಡಲಿ ಮತ್ತು ಅದರ ಅಧ್ಯಕ್ಷರಿಗೆ ಮಾಡಿದ ಉಲ್ಲೇಖಗಳೆಂದು ಓದಿಕೊಳ್ಳತಕ್ಕದ್ದು:

ಪರಂತು, 155ನೇ ಪ್ರಕರಣದ ಮೇರೆಗೆ ಮಂಡಲಿಯು ತಯಾರಿಸಿದ ಪ್ರತಿಯೊಂದು ಯೋಜನೆಯನ್ನು, ಮುನ್ಸಿಪಲ್ ಕೌನ್ಸಿಲಿಗೆ ಕಳುಹಿಸಿಕೊಡತಕ್ಕದ್ದು ಮತ್ತು ಯೋಜನೆಯನ್ನು ಕಳುಹಿಸಿಕೊಟ್ಟ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಮಂಡಲಿಯು ಸ್ವೀಕರಿಸಿದ ಕೌನ್ಸಿಲಿನ ಅಭಿಪ್ರಾಯಗಳನ್ನು, ಮಂಡಲಿಯು ತನ್ನ ಟೀಕೆಗಳೊಂದಿಗೆ 158ನೇ ಪ್ರಕರಣದ ಮೇರೆಗೆ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು:

ಮತ್ತು ಪರಂತು, ಮುನ್ಸಿಪಲ್ ಕೌನ್ಸಿಲಿನ ಸಹಮತಿ ಇಲ್ಲದೆ 170ನೇ ಪ್ರಕರಣದ ಮೇರೆಗೆ ಯಾವುದೇ ಬಡಾವಣೆ ಅಥವಾ ಲೇಔಟಿಗೆ ಮಂಡಲಿಯು ಮಂಜೂರಾತಿ ನೀಡತಕ್ಕದ್ದಲ್ಲ ಮತ್ತು ಮಂಡಲಿ ಹಾಗೂ ಮುನ್ಸಿಪಲ್ ಕೌನ್ಸಿಲಿನ ನಡುವೆ ಭಿನ್ನಾಭಿಪ್ರಾಯವಿರುವಲ್ಲಿ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು.

(7) (ಕ) ಸರ್ಕಾರವು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ಅಂಥ ಅವಧಿಗಾಗಿ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪರಿಬಂಧಗಳು ಹಾಗೂ ಮಾರ್ಪಾಡುಗಳಿಗೊಳಪಟ್ಟು,–

(i) ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಹಾಗೂ ಉಪವಿಧಿಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲಿನ ಅಥವಾ ಅದರ ಸಮಿತಿಯ ಅಧಿಕಾರಗಳು ಹಾಗೂ ಪ್ರಕಾರ್ಯಗಳನ್ನು ಮಂಡಲಿಯು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ii) ಈ ಅಧಿನಿಯಮದ ಮೇರೆಗಿನ ಮುನ್ಸಿಪಲ್ ಕೌನ್ಸಿಲಿನ ಪೌರಸಭಾ ಕಮಿಷನರ್ ಅಥವಾ ಚೀಫ್ ಆಫೀಸರ್ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಮಂಡಲಿಯ ಅಧ್ಯಕ್ಷನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು

–ಎಂಬುದಾಗಿ ಸಹ, ಅಧಿಸೂಚನೆಯ ಮೂಲಕ ಘೋಷಿಸಬಹುದು:

ಪರಂತು, ಅಂಥ ಘೋಷಣೆಯನ್ನು ಮಾಡುವ ಮೊದಲು ಮುನ್ಸಿಪಲ್ ಕೌನ್ಸಿಲಿನೊಂದಿಗೆ ಸಮಾಲೋಚಿಸತಕ್ಕದ್ದು.

(ಖ) (ಕ) ಖಂಡದ ಮೇರೆಗೆ ಘೋಷಣೆಯನ್ನು ಮಾಡಿದ ಮೇಲೆ, ಈ ಅಧಿನಿಯಮದ ಇತರ ಯಾವುದೇ ಉಪಬಂಧದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮುನ್ಸಿಪಲ್ ಕೌನ್ಸಿಲು ಅಥವಾ ಅದರ ಯಾವುದೇ ಸಮಿತಿ ಅಥವಾ ಮುನ್ಸಿಪಲ್ ಕೌನ್ಸಿಲಿನ ಪೌರಸಭಾ ಕಮಿಷನರನು ಅಥವಾ ಚೀಫ್ ಆಫೀಸರನು, ಅಂಥ ಘೋಷಣೆಯ ಮೂಲಕ ಸಂದರ್ಭಾನುಸಾರ ಮಂಡಲಿ ಅಥವಾ ಮಂಡಲಿಯ ಅಧ್ಯಕ್ಷನಿಗೆ ಪ್ರದತ್ತವಾದ ಅಥವಾ ವಿಧಿಸಿದ ಅಧಿಕಾರಗಳು ಅಥವಾ ಪ್ರಕಾರ್ಯಗಳನ್ನು ಚಲಾಯಿಸುವುದು ಅಥವಾ ನಿರ್ವಹಿಸುವುದು ಸಕ್ಷಮವಾಗಿರತಕ್ಕದ್ದಲ್ಲ.

(8) (ಕ) ಸರ್ಕಾರವು ಮೇಲ್ಪಾಟು ಮಂಡಲಿಯಿಂದ ನಿರ್ಮಿತವಾದ ಯಾವುದೇ ಬೀದಿಯನ್ನು ಯಾವುದೇ ಮೇಲ್ಪಾಟು ಯೋಜನೆಗಳ ನಕ್ಷೆಗಳಲ್ಲಿ ತೋರಿಸಿರುವ ರೀತಿಯಲ್ಲಿ ಸರಿಯಾಗಿ ಮಟ್ಟಗೊಳಿಸಲಾಗಿದೆ, ನೆಲಗಟ್ಟು ಮಾಡಲಾಗಿದೆ, ಜಲ್ಲಿ ಹಾಕಲಾಗಿದೆ, ಚಪ್ಪಡಿ ಹಾಸಲಾಗಿದೆ, ಮಾರ್ಗ ನಿರ್ಮಿಸಲಾಗಿದೆ, ಚರಂಡಿ ಹಾಗೂ ಹಾಗೂ ಗ್ರಾಮಸಾರ ಚರಂಡಿ ಹಾಗೂ ಗ್ರಾಮಸಾರ ಚರಂಡಿ ವ್ಯವಸ್ಥೆ ಮಾಡಲಾಗಿದೆ ಮತ್ತು ಮಂಡಲಿಯು ದೀಪ ವ್ಯವಸ್ಥೆಗೆ ಅವಶ್ಯವೆಂದು ಪರಿಗಣಿಸಿದ ಹಾಗೂ ಮಂಡಲಿಯು ಒದಗಿಸಬೇಕಾದಂಥ ದೀಪಗಳನ್ನು, ದೀಪದ ಸ್ತಂಭಗಳನ್ನು ಮತ್ತು ಇತರ ಸಲಕರಣೆಗಳನ್ನು ಒದಗಿಸಲಾಗಿದೆ ಎಂದು ಸರ್ಕಾರವು ಸಮಾಧಾನ ಹೊಂದಿದರೆ, ಅದು ಮುನ್ಸಿಪಲ್ ಕೌನ್ಸಿಲಿನೊಂದಿಗೆ ಸಮಾಲೋಚಿಸಿದ ತರುವಾಯ, ಅಂಥ ಬೀದಿಯನ್ನು ಸಾರ್ವಜನಿಕ ಬೀದಿ ಎಂದು ಘೋಷಿಸತಕ್ಕದ್ದು ಮತ್ತು ಆ ತರುವಾಯ ಅಂಥ ಬೀದಿಯು ಸಂದರ್ಭಾನುಸಾರ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು ಅಥವಾ ಪುನರ್ ನಿಹಿತವಾಗತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲು ಆ ತರುವಾಯ ಅಂಥ ಬೀದಿಯನ್ನು ನಿರ್ವಹಿಸತಕ್ಕದ್ದು, ಸುಸ್ಥಿತಿಯಲ್ಲಿಡತಕ್ಕದ್ದು, ದೀಪ ಒದಗಿಸತಕ್ಕದ್ದು, ಹಾಗೂ ಸ್ವಚ್ಛಗೊಳಿಸತಕ್ಕದ್ದು.

(ಖ) ಪೌರಸಭೆಯ ಯಾವುದೇ ಭಾಗದಲ್ಲಿ ವಾಯು ಸಂಚಾರಕ್ಕಾಗಿ ಕಾಯ್ದಿರಿಸಿದ ಮತ್ತು ಸುಧಾರಣಾ ಮಂಡಲಿಯು ಕಾರ್ಯಗತಗೊಳಿಸಿದ ಯಾವುದೇ ಮೇಲ್ಪಾಟು ಯೋಜನೆಯ ಭಾಗವಾಗಿ ಒದಗಿಸಲಾದ ಯಾವುದೇ ತೆರದ ಸ್ಥಳವನ್ನು, ಪೂರ್ಣಗೊಂಡನಂತರ, ಮುನ್ಸಿಪಲ್ ಕೌನ್ಸಿಲಿನ ವೆಚ್ಚಗಳಿಂದ ಅದನ್ನು ನಿರ್ವಹಿಸಿಕೊಂಡು ಬರಲು ಮುನ್ಸಿಪಲ್ ಕೌನ್ಸಿಲಿಗೆ ವರ್ಗಾಯಿಸತಕ್ಕದ್ದು.

(9) ಮೇಲ್ಪಾಟು ಮಂಡಲಿ ಮತ್ತು ಮುನ್ಸಿಪಲ್ ಕೌನ್ಸಿಲಿನ ನಡುವೆ ಯಾವುದೇ ವಿಷಯದ ಬಗ್ಗೆ ಉದ್ಭವಿಸುವಂಥ ಯಾವುದೇ ವಿವಾದವನ್ನು ಸರ್ಕಾರವು ನಿರ್ಧರಿಸತಕ್ಕದ್ದು, ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

## ಅಧ್ಯಾಯ–IX

## ಅಧಿಕಾರಗಳು ಮತ್ತು ಅಪರಾಧಗಳು

### ರಸ್ತೆಗಳಿಗೆ ಸಂಬಂಧಿಸಿದಂತೆ ಅಧಿಕಾರಗಳು

**175. ರಸ್ತೆ ಇತ್ಯಾದಿಗಳ ಬಗ್ಗೆ ಅಧಿಕಾರ.–** (1) ಹೊಸ ಸಾರ್ವಜನಿಕ ಬೀದಿಗಳನ್ನು ರೂಪಿಸಲು ಹಾಗೂ ನಿರ್ಮಿಸಲು ಮತ್ತು ಅವುಗಳಿಗೆ ಸಹಾಯಕ ಸುರಂಗ ಮಾರ್ಗಗಳನ್ನು ಮತ್ತು ಇತರ ಕಾಮಗಾರಿಗಳನ್ನು ನಿರ್ಮಿಸಲು ಮತ್ತು ಅಂಥ ಯಾವುದೇ ಬೀದಿಗಳನ್ನು ಅಗಲ ಮಾಡಲು, ತೆರೆಯಲು, ವಿಸ್ತರಿಸಲು ಅಥವಾ ಅನ್ಯಥಾ ಮೇಲ್ಪಾಟುಗೊಳಿಸಲು ಮತ್ತು ಅಂಥ ಯಾವುವೇ ಬೀದಿಗಳನ್ನು ತಿರುಗಿಸಲು, ಮಾರ್ಗಪಲ್ಲಟಗೊಳಿಸಲು, ಮುಂದುವರಿಸದಿರಲು ಅಥವಾ ಮುಚ್ಚಲು ಮತ್ತು 72ನೇ ಪ್ರಕರಣದ (1), (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಯಾವುದೇ ಸಾರ್ವಜನಿಕ ರಸ್ತೆಗಾಗಿ ಅಥವಾ ಈ ಅಧಿನಿಯಮದ ಯಾವುದೇ ಇತರ ಉದ್ದೇಶಕ್ಕಾಗಿ ಅಗತ್ಯವಿಲ್ಲದಿರಬಹುದಾದ, ಮುನ್ಸಿಪಲ್ ಕೌನ್ಸಿಲು ಅಂಥ ಬೀದಿಗಳ ಉದ್ದೇಶಗಳಿಗಾಗಿ ಅಲ್ಲಿಯವರೆಗೆ ಉಪಯೋಗಿಸಿದ ಅಥವಾ ಆರ್ಜಿಸಿದಂಥ ಭೂಮಿಯನ್ನು ಬಾಡಿಗೆಗೆ ಕೊಡುವುದು ಅಥವಾ ಮಾರಾಟ ಮಾಡುವುದು ಮುನ್ಸಿಪಲ್ ಕೌನ್ಸಿಲಿಗೆ ಕಾನೂನು ಸಮ್ಮತವಾಗಿರತಕ್ಕದ್ದು:

ಪರಂತು, ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗುವ ಯಾವುದೇ ಸಾರ್ವಜನಿಕ ಬೀದಿಯನ್ನು, ಮುನ್ಸಿಪಲ್ ಕೌನ್ಸಿಲು ಹಾಗೆ ಮಾಡುವ ತನ್ನ ಉದ್ದೇಶವನ್ನು ಪ್ರಕಟಿಸುವುದಕ್ಕೆ ಮತ್ತು ಆಕ್ಷೇಪಣೆಗಳನ್ನು ಕರೆಯುವ ಮತ್ತು ಸರ್ಕಾರದ ಅಥವಾ ಸರ್ಕಾರವು ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯ ಅನುಮೋದನೆಯನ್ನು ಪಡೆಯುವುದಕ್ಕೆ ಮೊದಲು ಮಾರ್ಗಪಲ್ಲಟಗೊಳಿಸತಕ್ಕದ್ದಲ್ಲ, ಮುಂದುವರಿಸದಿರತಕ್ಕದ್ದಲ್ಲ ಅಥವಾ ಮುಚ್ಚತಕ್ಕದ್ದಲ್ಲ. ಸರ್ಕಾರ ಅಥವಾ ಅಂಥ ಇತರ ಅಧಿಕಾರಿಗೆ ಕೌನ್ಸಿಲಿನ ನಿರ್ಣಯದ ಪ್ರತಿಯನ್ನು ಮತ್ತು ಅದರ ಬಗೆಗಿನ ಆಕ್ಷೇಪಣೆಗಳನ್ನು ಕಳುಹಿಸತಕ್ಕದ್ದು.

(2) ಯಾವುದೇ ಸಾರ್ವಜನಿಕ ಬೀದಿಯನ್ನು ಹಾಕುವಲ್ಲಿ ಅಥವಾ ರಚಿಸುವಲ್ಲಿ ಅಥವಾ ತಿರುಗಿಸುವಲ್ಲಿ, ಮಾರ್ಗಪಲ್ಲಟಗೊಳಿಸುವಲ್ಲಿ, ಅಗಲ ಮಾಡುವಲ್ಲಿ, ತೆರೆಯುವಲ್ಲಿ, ವಿಸ್ತರಿಸುವಲ್ಲಿ ಅಥವಾ ಅನ್ಯಥಾ ಮೇಲ್ಪಾಟುಗೊಳಿಸುವಲ್ಲಿ ಗಾಡಿ ದಾರಿ ಹಾಗೂ ಕಾಲುದಾರಿ ಮತ್ತು ಅದರ ಚರಂಡಿಗಳಿಗೆ ಅಗತ್ಯವಾದ ಭೂಮಿಯ ಜೊತೆಗೆ ಮುನ್ಸಿಪಲ್ ಕೌನ್ಸಿಲು, ಸದರಿ ಭೂಮಿಯನ್ನು ರೂಪಿಸಲು ಮನೆಗಳಿಗೆ ಮತ್ತು ಕಟ್ಟಡಗಳಿಗೆ ಅವಶ್ಯವಾದ ಭೂಮಿಯನ್ನು ಖರೀದಿಸಬಹುದು ಮತ್ತು 72ನೇ ಪ್ರಕರಣದ (1), (2) ಮತ್ತು (3)ನೇ ಉಪ–ಪ್ರಕರಣಗಳಲ್ಲಿ ಅಡಕವಾದ ಉಪಬಂಧಕ್ಕೊಳಪಟ್ಟು, ತಾನು ಸೂಕ್ತವೆಂದು ಭಾವಿಸುವಂತೆ, ಅದರ ಮೇಲೆ ನಿರ್ಮಿಸಬೇಕಾದ ಮನೆಗಳ ಅಥವಾ ಕಟ್ಟಡಗಳ ವರ್ಗ ಮತ್ತು ವರ್ಣನೆಯ ಬಗೆಗಿನ ಷರತ್ತುಗಳೊಡನೆ ಅಂಥ ಹೆಚ್ಚಿನ ಭೂಮಿಯನ್ನು ಮಾರಾಟ ಮಾಡಬಹುದು ಅಥವಾ ವರ್ಷಗಳ ಅವಧಿಗಾಗಿ ಬಾಡಿಗೆಗೆ ಕೊಡಬಹುದು.

**176. ಬೀದಿಗಳನ್ನು ದುರಸ್ತಿಗೊಳಿಸಲು ಮತ್ತು ಅಂಥ ಬೀದಿಗಳು ಸಾರ್ವಜನಿಕವಾದವುಗಳೆಂದು ಘೋಷಿಸಲು ಅಧಿಕಾರ.**– (1) ಸಾರ್ವಜನಿಕ ಬೀದಿಯಲ್ಲದ ಯಾವುದೇ ಬೀದಿಯಲ್ಲಿ ಅಥವಾ ಪೌರಸಭೆಯೊಳಗಿನ ಅಂಥ ಬೀದಿಯ ಯಾವುದೇ ಭಾಗದಲ್ಲಿ, ಸಾರ್ವಜನಿಕ ಆರೋಗ್ಯ, ಅನುಕೂಲತೆ ಅಥವಾ ಸುರಕ್ಷತೆಗಾಗಿ ಅದನ್ನು ಮಟ್ಟಗೊಳಿಸುವುದು, ನೆಲಗಟ್ಟು ಮಾಡುವುದು, ಜಲ್ಲಿ ಹಾಕುವುದು, ಚಪ್ಪಡಿ ಹಾಸುವುದು, ಮಾರ್ಗ ನಿರ್ಮಿಸುವುದು, ಅದಕ್ಕೆ ಚರಂಡಿ ವ್ಯವಸ್ಥೆ ಮಾಡುವುದು, ದೀಪದ ವ್ಯವಸ್ಥೆ ಮಾಡುವುದು ಅಥವಾ ಸ್ವಚ್ಛಗೊಳಿಸುವುದಕ್ಕೆ ಯಾವುದೇ ಕೆಲಸ ಮಾಡುವುದು ಅವಶ್ಯವಾಗಿದೆಯೆಂದು ಮುನ್ಸಿಪಲ್ ಕೌನ್ಸಿಲು ಪರ್ಯಾಲೋಚಿಸಿದರೆ, ಮುನ್ಸಿಪಲ್ ಕೌನ್ಸಿಲು ಬರಹದಲ್ಲಿನ ನೋಟಿಸಿನ ಮೂಲಕ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕೆಲಸವನ್ನು ಅಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಕಾರ್ಯಗತಗೊಳಿಸಲು ಅಂಥ ಬೀದಿ ಅಥವಾ ಅದರ ಭಾಗದ ಮೇಲೆ ಅಭಿಮುಖವಾಗಿರುವ, ಹೊಂದಿಕೊಂಡಿರುವ ಅಥವಾ ಲಗತ್ತಾಗಿರುವ ಭೂಮಿಗಳ ಅಥವಾ ಕಟ್ಟಡಗಳ ಸಂಬಂಧಪಟ್ಟ ಒಡೆಯರನ್ನು ಅಗತ್ಯಪಡಿಸಬಹುದು.

(2) ಅಂಥ ಕೆಲಸವನ್ನು ಅಂಥ ಒಡೆಯರು ಅಥವಾ ಅಂಥ ಒಡೆಯರ ವೆಚ್ಚದಲ್ಲಿ ಮುನ್ಸಿಪಲ್ ಕೌನ್ಸಿಲು 264ನೇ ಪ್ರಕರಣದಲ್ಲಿ ಉಪಬಂಧಿಸಲಾದಂತೆ, ಕಾರ್ಯಗತಗೊಳಿಸಿದ ತರುವಾಯ, ಅಂಥ ಕೆಲಸವನ್ನು ಮಾಡಲಾಗಿರುವಂಥ ಬೀದಿ ಅಥವಾ ಅದರ ಭಾಗವು ಸದರಿ ಒಡೆಯರಲ್ಲಿ ಬಹುಸಂಖ್ಯಾತರ ಜಂಟಿ ಕೋರಿಕೆಯ ಮೇಲೆ, ಮುನ್ಸಿಪಲ್ ಕೌನ್ಸಿಲು ಅಲ್ಲಿ ಹಾಕಿದ ಸಾರ್ವಜನಿಕ ನೋಟೀಸಿನ ಮೂಲಕ ಅದು ಸಾರ್ವಜನಿಕ ಬೀದಿಯಾಗಿರುವುದಾಗಿ ಘೋಷಿಸತಕ್ಕದ್ದು.

(3) (1)ನೇ ಉಪ–ಪ್ರಕರಣದ ಮೇರೆಗಿನ ನೋಟೀಸನ್ನು, ಪಾಲಿಸದಿದ್ದರೆ ಮತ್ತು ಅಂಥ ಕೆಲಸವನ್ನು 264ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಮುನ್ಸಿಪಲ್ ಕೌನ್ಸಿಲು ಕಾರ್ಯಗತಗೊಳಿಸಿದ್ದರೆ, ಆ ಬಗ್ಗೆ ವಹಿಸಿದ ವೆಚ್ಚಗಳನ್ನು, ಮುನ್ಸಿಪಲ್ ಕೌನ್ಸಿಲು, ಅದು ಅವಶ್ಯವೆಂದು ಭಾವಿಸಿದರೆ ಅಂಥ ಯಾವುದೇ ಭೂಮಿಗಳ ಅಥವಾ ಕಟ್ಟಡಗಳ ಒಡೆಯರು ಅಥವಾ ಅಧಿಭೋಗದಾರರು ಈಗಾಗಲೇ ಮಾಡಿರುವ ಯವುದೇ ಕೆಲಸದ ಪ್ರಮಾಣ ಮತ್ತು ಮೌಲ್ಯವನ್ನು ಗಮನದಲ್ಲಿಟ್ಟುಕೊಂಡು ಅದು ಸೂಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಅಂಥ ಒಡೆಯರ ನಡುವೆ ಮುನ್ಸಿಪಲ್ ಕೌನ್ಸಿಲು ಹಂಚತಕ್ಕದ್ದು.

**177. ಒಡೆಯರ ಆಕ್ಷೇಪಣೆಗಳಿಗೊಳಪಟ್ಟು ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿ ಎಂದು ಘೋಷಿಸಲು ಅಧಿಕಾರ.–** ಮುನ್ಸಿಪಲ್ ಕೌನ್ಸಿಲು, ನಿರ್ವಹಿಸಬೇಕಾಗಿಲ್ಲದ ಯಾವುದೇ ಬೀದಿ ಅಥವಾ ಬೀದಿಯ ಭಾಗದಲ್ಲಿ, ನೋಟೀಸನ್ನು ನೆಲೆಗೊಳಿಸುವ ಮೂಲಕ ಅದು ಸಾರ್ವಜನಿಕ ಬೀದಿಯಾಗಿರುವುದಾಗಿ ಘೋಷಿಸುವ ತನ್ನ ಉದ್ದೇಶದ ತಿಳುವಳಿಕೆಯನ್ನು ಯಾವುದೇ ಸಮಯದಲ್ಲಿ ಕೊಡಬಹುದು ಮತ್ತು ಅಂಥ ನೋಟೀಸನ್ನು ಹಾಗೆ ಹಾಕಿದ ತರುವಾಯ ಕೂಡಲೇ ಒಂದು ತಿಂಗಳೊಳಗೆ ಅಂಥ ಬೀದಿಯ ಅಥವಾ ಬೀದಿಯ ಅಂಥ ಭಾಗದ ಒಡೆಯ ಅಥವಾ ಹಲವಾರು ಒಡೆಯರಲ್ಲಿ ಬಹುಸಂಖ್ಯಾತರು, ಪೌರಸಭಾ ಕಚೇರಿಯಲ್ಲಿ ಅದಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಿದ ಹೊರತು ಮುನ್ಸಿಪಲ್ ಕೌನ್ಸಿಲು ಅಂಥ ಬೀದಿ ಅಥವಾ ಅಂಥ ಭಾಗಗಳಲ್ಲಿ ಹಾಕಿದ ಬರಹದಲ್ಲಿನ ನೋಟೀಸಿನ ಮೂಲಕ, ಅದು ಸಾರ್ವಜನಿಕ ಬೀದಿಯೆಂದು ಘೋಷಿಸಬಹುದು.

**178. ಬೀದಿಗಳನ್ನು ತಾತ್ಕಾಲಿಕವಾಗಿ ಮುಚ್ಚುವುದು.–** ಮುನ್ಸಿಪಲ್ ಕೌನ್ಸಿಲು ಬರಹದಲ್ಲಿನ ಆದೇಶದ ಮೂಲಕ ದುರಸ್ತಿಗಾಗಿ ಅಥವಾ ಚರಂಡಿ ವ್ಯವಸ್ಥೆಗೆ ನೀರು ಸರಬರಾಜು ಅಥವಾ ದೀಪದ ವ್ಯವಸ್ಥೆಗೆ ಅಥವಾ ಈ ಅಧಿನಿಯಮದ ಯಾವುದೇ ಉದ್ದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಕೆಲಸವನ್ನು ನಿರ್ವಹಿಸಲು ಯಾವುದೇ ಬೀದಿಯನ್ನು ತಾತ್ಕಾಲಿವಾಗಿ ಸಂಚಾರಕ್ಕೆ ಮುಚ್ಚಬಹುದು:

ಪರಂತು, ಮುನ್ಸಿಪಲ್ ಕೌನ್ಸಿಲು, ಮುಗಿಸಬೇಕಾದ ದುರಸ್ತಿ ಅಥವಾ ಕೆಲಸವನ್ನು ಆದಷ್ಟು ಯುಕ್ತ ವೇಗದಲ್ಲಿ ಮಾಡಿಸತಕ್ಕದ್ದು.

**179. ಸಾರ್ವಜನಿಕ ಬೀದಿಯ ನಿಯತ ರೇಖೆ.–** (1) ಸರ್ಕಾರದ ಮಂಜೂರಾತಿಯೊಂದಿಗೆ ಮುನ್ಸಿಪಲ್ ಕೌನ್ಸಿಲು ಪೌರಸಭೆಯೊಳಗಿನ ಯಾವುದೇ ಸಾರ್ವಜನಿಕ ಬೀದಿಯ ಒಂದು ಪಕ್ಕದಲ್ಲಿ ಅಥವಾ ಎರಡು ಪಕ್ಕಗಳಲ್ಲಿ ರೇಖೆಯನ್ನು ಗೊತ್ತುಪಡಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲು, ಅದೇ ರೀತಿಯ ಮಂಜೂರಾತಿಯೊಂದಿಗೆ ಕಾಲಕಾಲಕ್ಕೆ, ಹಾಗೆ ಗೊತ್ತುಪಡಿಸಿದ ರೇಖೆ ಅಥವಾ ಅದರ ಯಾವುದೇ ಭಾಗಕ್ಕೆ ಬದಲಾಗಿ ಒಂದು ಹೊಸ ರೇಖೆಯನ್ನು ಗೊತ್ತುಪಡಿಸಬಹುದು:

ಪರಂತು,–

(ಕ) ಸಂದರ್ಭಾನುಸಾರ ಅಂಥ ರೇಖೆಯನ್ನು ಅಥವಾ ಅಂಥ ಹೊಸ ರೇಖೆಯನ್ನು ಗೊತ್ತುಪಡಿಸುವುದಕ್ಕೆ ಕನಿಷ್ಠಪಕ್ಷ ಒಂದು ತಿಂಗಳಿಗೆ ಮೊದಲು ಮುನ್ಸಿಪಲ್ ಕೌನ್ಸಿಲು ಅದನ್ನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಅದರ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡತಕ್ಕದ್ದು ಮತ್ತು ಯಾವ ಬೀದಿ ಅಥವಾ ಬೀದಿಯ ಭಾಗಕ್ಕೆ ಅಂಥ ರೇಖೆ ಅಥವಾ ಹೊಸ ರೇಖೆಯನ್ನು ಗೊತ್ತುಪಡಿಸಲು ಪ್ರಸ್ತಾವಿಸಲಾಗಿದೆಯೋ, ಆ ಬೀದಿ ಅಥವಾ ಬೀದಿಯ ಭಾಗದಲ್ಲಿ ಅದರ ವಿಶೇಷ ನೋಟೀಸನ್ನು ಸಹ ಹಾಕತಕ್ಕದ್ದು ಮತ್ತು ಅಂಥ ಪಂಕ್ತೀಕರಣದಿಂದ ಬಾಧಿತರಾದ ಭೂಮಿಗಳ ಒಡೆಯರು ಅಥವಾ ಅಧಿಭೋಗದಾರರಿಗೆ ನೋಟೀಸನ್ನು ಸಹ ಕೊಡತಕ್ಕದ್ದು.

(ಖ) ಮುನ್ಸಿಪಲ್ ಕೌನ್ಸಿಲು ಅಂಥ ಸಾರ್ವಜನಿಕ ಅಥವಾ ವಿಶೇಷ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮುನ್ಸಿಪಲ್ ಕೌನ್ಸಿಲಿನ ಕಚೇರಿಯಲ್ಲಿ ಕೊಟ್ಟ ಅಂಥ ಪ್ರಸ್ತಾವನೆ ಬಗ್ಗೆ ಯಾವುದೇ ಬರಹದಲ್ಲಿನ ಆಕ್ಷೇಪಣೆ ಅಥವಾ ಸಲಹೆಯನ್ನು ಅದು ಪರ್ಯಾಲೋಚಿಸತಕ್ಕದ್ದು; ಮತ್ತು

(ಗ) ಮುನ್ಸಿಪಲ್ ಕೌನ್ಸಿಲು ಸದರಿ ರೇಖೆ ಹಾಗೂ ಸಂಬಂಧಪಟ್ಟ ಬೀದಿಯೊಳಗೆ ಒಳಗೊಂಡ ಪ್ರದೇಶದ ನಕ್ಷೆಯನ್ನು ಮತ್ತು ಅದರಲ್ಲಿ ಆವೃತವಾದ ಭೂಮಿಗಳನ್ನು ನಿರ್ದಿಷ್ಟಪಡಿಸುವ ವಿವರಣ ಪಟ್ಟಿಯನ್ನು ತಯಾರಿಸತಕ್ಕದ್ದು, ಅದು ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.

(2) ತಾತ್ಕಾಲಿಕವಾಗಿ ಹಾಗೆ ಗೊತ್ತುಪಡಿಸಿದ ರೇಖೆಯನ್ನು "ಸಾರ್ವಜನಿಕ ಬೀದಿಯ ನಿಯತ ರೇಖೆ" ಎಂದು ಕರೆಯತಕ್ಕದ್ದು.

**180. ಬೀದಿಗಳ ನಿಯತ ರೇಖೆಯೊಳಗೆ ಕಟ್ಟಡಗಳ ನಿರ್ಮಾಣದ ನಿಯಂತ್ರಣ.–** (1) 208ನೇ ಪ್ರಕರಣದ ಉಪಬಂಧಗಳ ಮೇರೆಗಲ್ಲದೆ, 187ನೇ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲಿನ ಅನುಮತಿ ಇಲ್ಲದೆ ಯಾರೇ ವ್ಯಕ್ತಿಯು ಸಾರ್ವಜನಿಕ ಬೀದಿಯ ನಿಯತ ರೇಖೆಯ ಒಳಗೆ ಯಾವುದೇ ಕಟ್ಟಡದ ಯಾವುದೇ ಭಾಗವನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಪುನರ್ ನಿರ್ಮಿಸತಕ್ಕದ್ದಲ್ಲ.

(2) ಸಾರ್ವಜನಿಕ ಬೀದಿಯ ನಿಯತ ರೇಖೆಯ ಒಳಗೆ ಯಾವುದೇ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ನಿರ್ಮಿಸಲು ಅಥವಾ ಪುನರ್ ನಿರ್ಮಿಸಲು ಮುನ್ಸಿಪಲ್ ಕೌನ್ಸಿಲು ಅನುಮತಿಯನ್ನು ನಿರಾಕರಿಸುವಲ್ಲಿ ಅಂಥ ಪ್ರದೇಶವನ್ನು ಆ ತರುವಾಯ ಮುನ್ಸಿಪಲ್ ಕೌನ್ಸಿಲು ಆರ್ಜಿಸತಕ್ಕದ್ದು ಮತ್ತು ಅದನ್ನು ಸಾರ್ವಜನಿಕ ಬೀದಿಯ ಭಾಗವೆಂದು ಭಾವಿಸತಕ್ಕದ್ದು.

(3) ವಿವಾದದ ಸಂದರ್ಭದಲ್ಲಿ, 268ನೇ ಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕ ಮತ್ತು ನಿರ್ಧರಿಸತಕ್ಕಂಥ ಮೊಬಲಗಿನ ನಷ್ಟಪರಿಹಾರವನ್ನು (2)ನೇ ಉಪ–ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲು ಆರ್ಜಿಸಿದ ಯಾವುದೇ ಭೂಮಿಯ ಒಡೆಯರಿಗೆ, ಸದರಿ ಭೂಮಿಯ ಮೌಲ್ಯಕ್ಕಾಗಿ ಮತ್ತು ಸದರಿ ಉಪ–ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲು ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಆದೇಶದ ಪರಿಣಾಮವಾಗಿ ಅವನಿಗೆ ಉಂಟಾದ ಯಾವುದೇ ನಷ್ಟ, ಹಾನಿ ಅಥವಾ ಅವನು ವಹಿಸಿದ ವೆಚ್ಚಕ್ಕಾಗಿ ಸಹ ಮುನ್ಸಿಪಲ್ ಕೌನ್ಸಿಲು ಸಂದಾಯ ಮಾಡತಕ್ಕದ್ದು.

(4) (1)ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು, ಮತ್ತು ಮುನ್ಸಿಪಲ್ ಕೌನ್ಸಿಲು,–

(ಕ) ಕಟ್ಟುವುದನ್ನು ನಿಲ್ಲಿಸತಕ್ಕದ್ದು ಎಂದು ನಿರ್ದೇಶಿಸಬಹುದು; ಮತ್ತು

(ಖ) ಬರಹದಲ್ಲಿನ ನೋಟೀಸಿನ ಮೂಲಕ, ಅದು ಅವಶ್ಯಕವೆಂದು ಭಾವಿಸಬಹುದಾದಂತೆ ಅಂಥ ಕಟ್ಟಡ ಅಥವಾ ಅದರ ಭಾಗವನ್ನು ಬದಲಾಯಿಸಲು ಅಥವಾ ಕೆಡವಲು ಅಗತ್ಯಪಡಿಸಬಹುದು.

**ಕಟ್ಟಡಗಳು ಮೊದಲಾದವುಗಳನ್ನು ನಿಯಂತ್ರಿಸಲು ಅಧಿಕಾರಗಳು**

**181. ಮುಂಚಾಚಿಕೊಂಡಿರುವ ಕಟ್ಟಡಗಳನ್ನು ಹಿಂದಕ್ಕೆ ಸರಿಸುವುದು.–** (1) ಕಟ್ಟಡದ ಯಾವುದೇ ಭಾಗವು, 179ನೇ ಪ್ರಕರಣದ ಮೇರೆಗೆ ಗೊತ್ತುಪಡಿಸಿದಂತೆ ಸಾರ್ವಜನಿಕ ಬೀದಿಯ ನಿಯತ ರೇಖೆಯಾಚೆ ಅದರ ಎರಡೂ ಪಕ್ಕದ ಕಟ್ಟಡದ ಮುಂಭಾಗದಿಂದ ಆಚೆಗೆ ಮುಂಚಾಚಿಕೊಂಡಿದ್ದರೆ ಮುನ್ಸಿಪಲ್ ಕೌನ್ಸಿಲು,–

(ಕ) ಅದರ ಮುಂಚಾಚಿಕೊಂಡಿರುವ ಭಾಗವು ವರಾಂಡ, ಮೆಟ್ಟಿಲು ಅಥವಾ ಮುಖ್ಯ ಕಟ್ಟಡಕ್ಕೆ ಇತರ ಬಾಹ್ಯ ರಚನೆಯಾಗಿದ್ದರೆ, ಯಾವುದೇ ಕಾಲದಲ್ಲಿ; ಅಥವಾ

(ಖ) ಮುಂಚಾಚಿರುವ ಭಾಗವು ಹಿಂದೆ ಹೇಳಿದಂತೆ ಬಾಹ್ಯ ರಚನೆಯಾಗಿರದಿದ್ದರೆ, ಆಗ ಅಂಥ ಕಟ್ಟಡದ ದೊಡ್ಡದಾದ ಭಾಗವನ್ನು ಅಥವಾ ಅಂಥ ಮುಂಚಾಚಿದ ಯಾವುದೇ ಮುಖ್ಯ ಭಾಗವನ್ನು

ಕೆಳಗಿಳಿಸಿರುವಾಗ ಅಥವಾ ಸುಟ್ಟು ಹಾಕಿದಾಗ ಅಥವಾ ಬಿದ್ದು ಹೋಗಿರುವಾಗ, ಬರಹದಲ್ಲಿನ ನೋಟೀಸಿನ ಮೂಲಕ, ನಿಯತ ರೇಖೆಯಿಂದಾಚೆ ಅಥವಾ ಅದರ ಎರಡೂ ಪಕ್ಕದಲ್ಲಿ ಹೊಂದಿಕೊಂಡಿರುವ ಕಟ್ಟಡದ ಸದರಿ ಮುಂಭಾಗದಿಂದಾಚೆ ಮುಂಚಾಚಿಕೊಂಡಿರುವ ಭಾಗವನ್ನು ಅಥವಾ ಆ ಭಾಗದ ಯಾವುದೇ ಭಾಗವನ್ನು ತೆಗೆದು ಹಾಕತಕ್ಕದ್ದೆಂದು ಅಥವಾ ಅಂಥ ಕಟ್ಟಡವನ್ನು ಪುನರ್ ನಿರ್ಮಿಸುತ್ತಿರುವಾಗ ಸದರಿ ನಿಯತ ರೇಖೆ ಅಥವಾ ಅಂಥ ಕಟ್ಟಡದ ಮುಂಭಾಗಕ್ಕೆ ಅಥವಾ ಅದರೆಡೆಗೆ ಹಿಂದೆ ಸರಿಸತಕ್ಕದ್ದೆಂದು ಅಗತ್ಯಪಡಿಸಬಹುದು. ಮತ್ತು ಅಂಥ ಹಿಂದೆ ಸರಿಸುವಿಕೆ ಅಥವಾ ತೆಗೆದುಹಾಕುವಿಕೆಯಿಂದ ಬೀದಿಗೆ ಸೇರಿಸಿದ ಭೂಮಿಯ ಭಾಗವನ್ನು ಆ ತರುವಾಯ ಸಾರ್ವಜನಿಕ ಬೀದಿಯ ಭಾಗವೆಂಬುದಾಗಿ ಭಾವಿಸತಕ್ಕದ್ದು ಮತ್ತು ಅದು ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರದ ಅನಾವೃತವಾದುದೇ ಆಗಿರಲಿ ಅಥವಾ ಆವೃತವಾದುದೇ ಆಗಿರಲಿ, ಯಾವುದೇ ಭೂಮಿಯು ಸಾರ್ವಜನಿಕ ಬೀದಿಯ ನಿಯತ ರೇಖೆಯ ಒಳಗಿದ್ದರೆ ಮತ್ತು ಜಗಲಿ, ವರಾಂಡ, ಮೆಟ್ಟಿಲು ಅಥವಾ ಇತರ ಬಾಹ್ಯ ರಚನೆಯನ್ನು ಹೊರತುಪಡಿಸಿ ಕಟ್ಟಡದಿಂದ ಆಕ್ರಮಿತವಾಗಿಲ್ಲದಿದ್ದರೆ, ಮುನ್ಸಿಪಲ್ ಕೌನ್ಸಿಲು, ತನ್ನ ಉದ್ದೇಶದ ಬಗ್ಗೆ ಸ್ಪಷ್ಟ ಹದಿನೈದು ದಿವಸಗಳಿಗಿಂತ ಕಡಿಮೆಯಿಲ್ಲದ ಬರಹದಲ್ಲಿನ ನೋಟೀಸನ್ನು ಭೂಮಿಯ ಒಡೆಯನಿಗೆ ಕೊಟ್ಟ ತರುವಾಯ ಅಥವಾ ಭೂಮಿಯು ಸರ್ಕಾರದಲ್ಲಿ ನಿಹಿತವಾಗಿದ್ದರೆ, ಆಗ ಡೆಪ್ಯೂಟಿ ಕಮಿಷನರರ ಬರಹದಲ್ಲಿನ ಅನುಮತಿಯೊಂದಿಗೆ, ಸದರಿ ಭೂಮಿಯನ್ನು, ಅದರ ಆವೃತಗೋಡೆ, ಮುಳ್ಳುಬೇಲಿ ಅಥವಾ ಬೇಲಿ ಯಾವುವಾದರೂ ಇದ್ದರೆ ಅವುಗಳೊಂದಿಗೆ ಸ್ವಾಧೀನಪಡಿಸಿಕೊಳ್ಳಬಹುದು ಮತ್ತು ಅವಶ್ಯವಾದರೆ ಅದನ್ನು ಬರಿದು ಮಾಡಬಹುದು ಮತ್ತು ಹಾಗೆ ಆರ್ಜಿಸಿದ ಭೂಮಿಯನ್ನು ಆ ತರುವಾಯ ಸಾರ್ವಜನಿಕ ಬೀದಿಯ ಭಾಗವೆಂದು ಭಾವಿಸತಕ್ಕದ್ದು ಮತ್ತು ಅದು ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು.

(3) ವಿವಾದದ ಸಂದರ್ಭದಲ್ಲಿ 268ನೇ ಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕ ಮತ್ತು ನಿರ್ಧರಿಸತಕ್ಕಂಥ ಮೊಬಲಗಿನ ನಷ್ಟ ಪರಿಹಾರವನ್ನೂ (1)ನೇ ಉಪ–ಪ್ರಕರಣದ ಮೇರೆಗೆ ಬೀದಿಗೆ ಸೇರಿಸಿದ ಅಥವಾ (2)ನೇ ಉಪ–ಪ್ರಕರಣದ ಮೇರೆಗೆ ಆರ್ಜಿಸಿದ ಯಾವುದೇ ಭೂಮಿಯ ಒಡೆಯನಿಗೆ, ಸದರಿ ಭೂಮಿಯ ಮೌಲ್ಯಕ್ಕಾಗಿ ಮತ್ತು ಯಾವುದೇ ಕಟ್ಟಡದ ಒಡೆಯನಿಗೆ, ಸದರಿ ಉಪ ಪ್ರಕರಣಗಳಲ್ಲಿ ಎರಡರಲ್ಲಿ ಯಾವುದಾದರೂ ಒಂದರ ಮೇರೆಗೆ ಮುನ್ಸಿಪಲ್ ಕೌನ್ಸಿಲು ಕೈಗೊಂಡ ಯಾವುದೇ ಕ್ರಮದ ಪರಿಣಾಮವಾಗಿ ಉಂಟಾದ ಯಾವುದೇ ನಷ್ಟ, ಹಾನಿ ಅಥವಾ ಅವನು ವಹಿಸಿದ ಯಾವುದೇ ವೆಚ್ಚಕ್ಕಾಗಿ ಮುನ್ಸಿಪಲ್ ಕೌನ್ಸಿಲು ಸಂದಾಯ ಮಾಡತಕ್ಕದ್ದು: ಪರಂತು, 213ನೇ ಪ್ರಕರಣವು ಅನ್ವಯವಾಗುವಂಥ ಪ್ರಕರಣಗಳಲ್ಲಿ ಅಂಥ ಯಾವುದೇ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

(4) ನಷ್ಟ ಪರಿಹಾರದ ಮೊಬಲಗನ್ನು ಹಾಗೆ ಖಚಿತಪಡಿಸಿಕೊಂಡು ನಿರ್ಧರಿಸಿರುವಾಗ ಅಥವಾ (1)ನೇ ಉಪ–ಪ್ರಕರಣದ ವ್ಯಾಪ್ತಿಯಲ್ಲಿ ಬರುವ ಪಾಳುಬಿದ್ದಿರುವ ಅಥವಾ ಅಪಾಯಕಾರಿ ಕಟ್ಟಡವನ್ನು 213ನೇ ಪ್ರಕರಣದ ಉಪಬಂಧಗಳ ಮೇರೆಗೆ ಕೆಡವಿ ಹಾಕಿರುವಾಗ, ಮುನ್ಸಿಪಲ್ ಕೌನ್ಸಿಲು ಸಂದಾಯ ಮಾಡಬಹುದಾದ ನಷ್ಟ ಪರಿಹಾರದ ಮೊಬಲಗು ಯಾವುದಾದರೂ ಇದ್ದರೆ, ಅದನ್ನು ಕೊಡಮಾಡಿದ ತರುವಾಯ, ಬೀದಿಗೆ ಹಾಗೆ ಸೇರಿಸಿದ ಭೂಮಿಯನ್ನು ಸ್ವಾಧೀನದಲ್ಲಿ ತೆಗೆದುಕೊಳ್ಳಬಹುದು ಮತ್ತು ಅವಶ್ಯವಿದ್ದರೆ ಅದನ್ನು ಬರಿದು ಮಾಡಬಹುದು.

**182. ಬೀದಿಯ ನಿಯತ ರೇಖೆಯನ್ನು ಮುಂದಕ್ಕೆ ಸರಿಸುವುದು.–** (1) ಮುನ್ಸಿಪಲ್ ಕೌನ್ಸಿಲು, ಅದು ಸೂಕ್ತವೆಂದು ಯೋಚಿಸಬಹುದಾದಂಥ ನಿಬಂಧನೆಗಳ ಮೇಲೆ ಅಂಥ ಕಟ್ಟಡವು ಇರುವಂಥ ಯಾವುದೇ ಸಾರ್ವಜನಿಕ ಬೀದಿಯ ರೇಖೆಯನ್ನು ಮೇಲ್ಪಾಟು ಮಾಡುವುದಕ್ಕಾಗಿ, ಯಾವುದೇ ಕಟ್ಟಡವನ್ನು ಮುಂದಕ್ಕೆ ಸರಿಸಲು ಅನುಮತಿಸಬಹುದು.

(2) ಕಟ್ಟಡವನ್ನು ಮುಂದಕ್ಕೆ ಸರಿಸಲು (1)ನೇ ಪ್ರಕರಣದ ಮೇರೆಗೆ ಅನುಮತಿ ಕೊಟ್ಟ ಯಾರೇ ವ್ಯಕ್ತಿಯ ಕಟ್ಟಡದ ಆವರಣದಲ್ಲಿ ಒಳಗೊಳ್ಳಬಹುದಾದಂಥ ಭೂಮಿಯು ಮುನ್ಸಿಪಲ್ ಕೌನ್ಸಿಲಿಗೆ ಸೇರಿದ್ದರೆ, ಕಟ್ಟಡವನ್ನು ಮುಂದಕ್ಕೆ ಸರಿಸಲು ಮುನ್ಸಿಪಲ್ ಕೌನ್ಸಿಲಿನ ಅನುಮತಿಯು ಸದರಿ ಭೂಮಿಯ ಸದರಿ ಒಡೆಯನಿಗೆ ಸಾಕಷ್ಟು ಹಸ್ತಾಂತರಣವಾಗತಕ್ಕದ್ದು ಮತ್ತು ಅಂಥ ಭೂಮಿಗಾಗಿ ಸದರಿ ಒಡೆಯನು ಮುನ್ಸಿಪಲ್ ಕೌನ್ಸಿಲಿಗೆ ಸಂದಾಯ ಮಾಡಬೇಕಾದ ಬೆಲೆ ಮತ್ತು ಹಸ್ತಾಂತರಣದ ಇತರ ನಿಬಂಧನೆಗಳು ಮತ್ತು ಷರತ್ತುಗಳನ್ನು ಸದರಿ ಅನುಮತಿಯಲ್ಲಿ ನಮೂದಿಸತಕ್ಕದ್ದು.

**183. ಬೀದಿಗಳ ಮೂಲೆಯಲ್ಲಿರುವ ಕಟ್ಟಡಗಳು.–** (1) ಮುನ್ಸಿಪಲ್ ಕೌನ್ಸಿಲು ಎರಡು ಬೀದಿಗಳ ಮೂಲೆಯಲ್ಲಿ ನಿರ್ಮಿಸಲು ಉದ್ದೇಶಿಸಿದ ಯಾವುದೇ ಕಟ್ಟಡವನ್ನು, ತಾನು ನಿರ್ಧರಿಸಬಹುದಾದಂಥ ಎತ್ತರಕ್ಕೆ ಮತ್ತು ಅಂಥ ವ್ಯಾಪ್ತಿಗೆ ಅಥವಾ ಅನ್ಯಥಾ ಸೇರ್ಪಡಿಸಲು ಅಥವಾ ವಾರೆಮಾಡಲು ಅಗತ್ಯಪಡಿಸಬಹುದು ಮತ್ತು ಸಾರ್ವಜನಿಕ ಅನುಕೂಲತೆ ಅಥವಾ ಸೌಕರ್ಯಕ್ಕಾಗಿ ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಮೂಲೆಯಲ್ಲಿನ ನಿವೇಶನದ ಅಂಥ ಭಾಗವನ್ನು ಆರ್ಜಿಸಬಹುದು.

(2) ಹಾಗೆ ಆರ್ಜಿಸಿದ ಯಾವುದೇ ಭೂಮಿಗಾಗಿ, ಮುನ್ಸಿಪಲ್ ಕೌನ್ಸಿಲು ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(3) ಅಂಥ ಪರಿಹಾರವನ್ನು ನಿರ್ಧರಿಸುವಲ್ಲಿ ಬೀದಿಗಳ ಮೇಲ್ಪಾಟಿನಿಂದ ಅದೇ ಆವರಣಕ್ಕೆ ಒದಗಿಬರುವ ಯಾವುದೇ ಪ್ರಯೋಜನಕ್ಕಾಗಿ ಅವಕಾಶ ಮಾಡತಕ್ಕದ್ದು.

**184. ಕಟ್ಟಡಗಳ ಚಾವಣಿ ಮತ್ತು ಹೊರಗೋಡೆಗಳನ್ನು ಸುಲಭ ದಹ್ಯ ಸಾಮಗ್ರಿಗಳಿಂದ ಮಾಡತಕ್ಕದ್ದಲ್ಲ.–** (1) ಈ ಅಧಿನಿಯಮ ಜಾರಿಗೆ ಬಂದ ತರುವಾಯ ನಿರ್ಮಿಸಿದ ಅಥವಾ ನವೀಕರಿಸಿದ ಕಟ್ಟಡಗಳ ಹೊರಚಾವಣಿಗಳು ಮತ್ತು ಗೋಡೆಗಳನ್ನು ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಒಪ್ಪಿಗೆಯಿಂದ ಹೊರತು ಹುಲ್ಲು, ಮರ, ಬಟ್ಟೆ, ತಟ್ಟು, ಎಲೆಗಳು, ಚಾಪೆಗಳು ಅಥವಾ ಇತರ ಸುಲಭ ದಹ್ಯ ಸಾಮಗ್ರಿಗಳಿಂದ ಮಾಡತಕ್ಕದ್ದಲ್ಲ. ಅದನ್ನು ವೈಯಕ್ತಿಕ ಸಂದರ್ಭಗಳಲ್ಲಿ ವಿಶೇಷವಾಗಿ ಆಗಲಿ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿಯೇ ಆಗಲಿ ಕೊಡಬಹುದು.

(2) ಮುನ್ಸಿಪಲ್ ಕೌನ್ಸಿಲು ಯಾವುದೇ ಕಾಲದಲ್ಲಿ ಬರಹದಲ್ಲಿನ ನೋಟೀಸಿನ ಮೂಲಕ ಹಿಂದೆ ಹೇಳಿದಂತೆ ಅಂಥ ಯಾವುದೇ ಸಾಮಗ್ರಿಗಳಿಂದ ಮಾಡಿದ ಹೊರಚಾವಣಿ ಅಥವಾ ಗೋಡೆಯನ್ನು ಹೊಂದಿರುವಂಥ ಯಾವುದೇ ಕಟ್ಟಡದ ಒಡೆಯನನ್ನು ಅಂಥ ಚಾವಣಿ ಅಥವಾ ಗೋಡೆಯನ್ನು ಈ ಅಧಿನಿಯಮವು ಜಾರಿಗೆ ಬಂದಂಥ ದಿನಾಂಕಕ್ಕೆ ಮುಂಚೆ ಮಾಡಿರಲಿ ಅಥವಾ ಮಾಡಿಲ್ಲದಿರಲಿ ಮತ್ತು ಅದನ್ನು ಮುನ್ಸಿಪಲ್ ಕೌನ್ಸಿಲಿನ ಸಮ್ಮತಿಯಿಂದಾಗಲಿ ಅಥವಾ ಇಲ್ಲದೆ ಮಾಡಿರಲಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸತಕ್ಕಂಥ ಯುಕ್ತ ಕಾಲದೊಳಗೆ ಅಂಥ ಚಾವಣಿ ಅಥವಾ ಗೋಡೆಯನ್ನು ತೆಗೆದುಹಾಕಲು ಅಗತ್ಯಪಡಿಸಬಹುದು.

(3) ಯಾರೇ ಆಗಲಿ (1)ನೇ ಉಪ–ಪ್ರಕರಣವು ಅಗತ್ಯಪಡಿಸಿದಂಥ ಸಮ್ಮತಿಯಿಲ್ಲದೆಯೇ ಹಿಂದೆ ಹೇಳಿದ ಸಾಮಗ್ರಿಗಳ ಯಾವುದೇ ಚಾವಣಿ ಅಥವಾ ಗೋಡೆಯನ್ನು ಮಾಡಿದರೆ ಅಥವಾ ಮಾಡಿಸಿದರೆ ಅಥವಾ (2)ನೇ ಉಪ–ಪ್ರಕರಣದ ಮೇರೆಗೆ ಕೊಟ್ಟ ನೋಟೀಸಿನ ಅಗತ್ಯತೆಗಳನ್ನು ಉಲ್ಲಂಘಿಸಿ, ಅವು ಉಳಿಯಲು ಅವಕಾಶ ಮಾಡಿಕೊಟ್ಟರೆ, ಅವನು ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲನೆಯ ಅಪರಾಧ ನಿರ್ಣಯದ ದಿನಾಂಕದ ತರುವಾಯ ಅಪರಾಧವನ್ನು ಮುಂದುವರಿಸುವಂಥ ಪ್ರತಿಯೊಂದು ದಿನಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**185. ಕಟ್ಟಡಗಳ ಮಟ್ಟ.–** ಯಾವುದೇ ಕಟ್ಟಡವನ್ನು ಅಥವಾ ಪುರಸಭಾ ಪರಿಷತ್ತು ಆಗ ಅಸ್ತಿತ್ವದಲ್ಲಿರುವ ಅಥವಾ ಮುನ್ಸಿಪಲ್ ಕೌನ್ಸಿಲು ಪ್ರಸ್ತಾವಿಸಿರುವ ಯಾವುದೇ ಸಾರ್ವಜನಿಕ ಗ್ರಾಮಸಾರ ಚರಂಡಿ ಅಥವಾ ಯಾವುದೇ ಹಳ್ಳ ಅಥವಾ ನದಿಯೊಳಕ್ಕೆ ಅಥವಾ ಸಮುದ್ರಕ್ಕೆ ಅಥವಾ ಯಾವುದೇ ರೊಚ್ಚು ಗುಂಡಿ ಅಥವಾ ಮುನ್ಸಿಪಲ್ ಕೌನ್ಸಿಲು ಅನುಮೋದಿಸಬಹುದಾದಂಥ ಇತರ ಸೂಕ್ತ ಸ್ಥಳಕ್ಕೆ ಅದರ ಚರಂಡಿ ನೀರನ್ನು ಒಯ್ಯಲು ಅವಕಾಶ ನೀಡುವ ಮಟ್ಟಕ್ಕಿಂತ ಕಡಿಮೆ ಮಟ್ಟದಲ್ಲಿ ಕಟ್ಟತಕ್ಕದ್ದಲ್ಲ.

**186. ಧಾನ್ಯವನ್ನು ಸಂಗ್ರಹಿಸಲು ಉಗ್ರಾಣಗಳಿಗಾಗಿ ಇಲಿಗಳಿಗೆ ಅಭೇದ್ಯವಾದ ಕಟ್ಟಡ.–** ಉಗ್ರಾಣಗಳ ನಿರ್ಮಾಣವನ್ನು ನಿಯಂತ್ರಿಸುವ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು, ಮುನ್ಸಿಪಲ್ ಕೌನ್ಸಿಲು, ಧಾನ್ಯಗಳ ಸಂಗ್ರಹಣೆಗಾಗಿ ಉಗ್ರಾಣವಾಗಿ ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿದ ಯಾವುದೇ ಕಟ್ಟಡವನ್ನು ಇಲಿಗಳಿಗೆ ಅಭೇಧ್ಯವಾಗಿರುವಂತೆ ಸಂರಕ್ಷಿಸತಕ್ಕದ್ದು ಅಥವಾ ನಿರ್ಮಿಸತಕ್ಕದ್ದು ಎಂದು ಅಗತ್ಯಪಡಿಸಬಹುದು ಮತ್ತು ಈ ಉದ್ದೇಶಕ್ಕಾಗಿ ಅಳವಡಿಸಬೇಕಾದ ನಕ್ಷೆ ಹಾಗೂ ವಿನ್ಯಾಸವನ್ನು ಮತ್ತು ಅಂಥ ಕಟ್ಟಡಕ್ಕಾಗಿ ಉಪಯೋಗಿಸಬೇಕಾದ ಸಾಮಗ್ರಿಗಳನ್ನು ಗೊತ್ತುಪಡಿಸಬಹುದು.

**187. ಹೊಸ ಕಟ್ಟಡಗಳ ಬಗ್ಗೆ ನೋಟೀಸು.–** (1) ಯಾವುದೇ ಕಟ್ಟಡವನ್ನು ನಿರ್ಮಿಸುವ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡಕ್ಕೆ ಹೊರಗೆ ಬದಲಾವಣೆ ಮಾಡುವ ಅಥವಾ ಅದಕ್ಕೆ ಸೇರಿಸುವ ಅಥವಾ ಯಾವ ಕಟ್ಟಡದ ಸಂಬಂಧದಲ್ಲಿ ಮುನ್ಸಿಪಲ್ ಕೌನ್ಸಿಲನ್ನು 181ನೇ ಪ್ರಕರಣದ ಮೂಲಕ ತೆಗೆದುಹಾಕಲು ಅಥವಾ ಹಿಂದಕ್ಕೆ ಸರಿಸಲು ಜಾರಿಗೊಳಿಸಲು ಶಕ್ತಗೊಳಿಸಲಾಗಿದೆಯೋ ಆ ಯಾವುದೇ ಕಟ್ಟಡದ ಯಾವುದೇ ಮುಂಚಾಚಿರುವ ಭಾಗವನ್ನು ಅಥವಾ ಯಾವುದರ ನಿರ್ಮಾಣ ಅಥವಾ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದಂತೆ 179ನೇ ಪ್ರಕರಣದ ಮೂಲಕ ಅನುಮತಿಯನ್ನು ಕೊಡಲು ಮುನ್ಸಿಪಲ್ ಕೌನ್ಸಿಲನ್ನು ಶಕ್ತಗೊಳಿಸಲಾಗಿದೆಯೋ ಆ ಕಟ್ಟಡವನ್ನು ನಿರ್ಮಿಸುವುದಕ್ಕೆ ಅಥವಾ ಪುನರ್ ನಿರ್ಮಿಸುವುದನ್ನು ಪ್ರಾರಂಭಿಸುವುದಕ್ಕೆ ಮೊದಲು, ಹಾಗೆ ನಿರ್ಮಿಸಲು, ಬದಲಾಯಿಸಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಉದ್ದೇಶಿಸುವ ವ್ಯಕ್ತಿಯು, ಅದರ ಬಗ್ಗೆ ನೋಟೀಸನ್ನು ಬರಹದಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ಕೊಡತಕ್ಕದ್ದು ಮತ್ತು ಅದೇ ಕಾಲದಲ್ಲಿ ಅಂಥ ಕಟ್ಟಡದ ತಳಪಾಯ ಮತ್ತು ಅತಿ ಕೆಳಗಿನ ನೆಲ ಅಂತಸ್ತಿನ ಮಟ್ಟಗಳನ್ನು, ಮುನ್ಸಿಪಲ್ ಕೌನ್ಸಿಲಿಗೆ ತಿಳಿದಿರುವ ಯಾವುದೇ ಮಟ್ಟಕ್ಕೆ ಉಲ್ಲೇಖಿಸುವ ಮೂಲಕ ಯಾವ ಮಟ್ಟಗಳಲ್ಲಿ ಹಾಕಲು ಪ್ರಸ್ತಾವಿಸಲಾಗಿದೆಯೋ ಆ ಮಟ್ಟಗಳನ್ನು ತೋರಿಸುವ ನಕ್ಷೆಯನ್ನು, ಮತ್ತು ಪ್ರಸ್ತಾವಿತ ಕಟ್ಟಡದ ಪರಿಮಿತಿಗಳು, ಉದ್ದಗಲ, ವಿನ್ಯಾಸ, ವಾಯು ಸಂಚಾರ, ಸಾಮಗ್ರಿಗಳ ಬಗ್ಗೆ ಉಪವಿಧಿಗಳ ಮೂಲಕ ಅಗತ್ಯಪಡಿಸಿದ ಅಥವಾ ಮುನ್ಸಿಪಲ್ ಕೌನ್ಸಿಲು ತಗಾದೆ ಮಾಡಿದ ಎಲ್ಲ ಮಾಹಿತಿಯನ್ನು ಮತ್ತು ಅದಕ್ಕೆ ಸಂಬಂಧಿಸಿದಂತೆ ಉಪಯೋಗಿಸಬೇಕಾದ ಚರಂಡಿಗಳು, ಗ್ರಾಮಸಾರ ಚರಂಡಿಗಳು, ಕಕ್ಕಸುಗಳು, ಶೌಚಗೃಹಗಳು ಮತ್ತು ರೊಚ್ಚುಗುಂಡಿಗಳು ಯಾವುದಾದರೂ ಇದ್ದರೆ ಅವುಗಳ ಉದ್ದೇಶಿತ ಸ್ಥಳ ಮತ್ತು ನಿರ್ಮಾಣದ ಬಗ್ಗೆ ಯಾವುದೇ ಅಸ್ತಿತ್ವದಲ್ಲಿರುವ ಅಥವಾ ಯೋಜಿತ ಬೀದಿಗಳಿಗೆ ಸಂಬಂಧಪಟ್ಟಂತೆ ಕಟ್ಟಡದ ಸ್ಥಳ ಹಾಗೂ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸಬೇಕಾಗಿದೆಯೋ ಆ ಉದ್ದೇಶದ ಬಗ್ಗೆ ಎಲ್ಲ ಮಾಹಿತಿಯನ್ನು ಒದಗಿಸತಕ್ಕದ್ದು.

(2) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ನಿರ್ಮಾಣ ಅಥವಾ ಪುನರ್ ನಿರ್ಮಾಣವನ್ನು ಈ ಅಧಿನಿಯಮದ ಮೇರೆಗೆ ಕೆಲಸದ ನಿರ್ವಹಣೆಗಾಗಿ ಅನುಮತಿಯನ್ನು ಕೊಟ್ಟ ಹೊರತು ಮತ್ತು ಅಲ್ಲಿಯವರೆಗೆ ಪ್ರಾರಂಭಿಸತಕ್ಕದ್ದಲ್ಲ.

(3) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಉಪವಿಧಿಗಳಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು ಮುನ್ಸಿಪಲ್ ಕೌನ್ಸಿಲು–

(ಕ) ಒದಗಿಸಿರುವ ನಕ್ಷೆ ಮತ್ತು ಮಾಹಿತಿಗನುಸಾರವಾಗಿ ನಿರ್ಮಿಸಲು, ಬದಲಾಯಿಸಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಅನುಮತಿಯನ್ನು ನೀಡಬಹುದು; ಅಥವಾ

(ಖ) ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಹಾಗೂ ಉಪವಿಧಿಗಳಿಗನುಸಾರವಾಗಿ, ಮಟ್ಟ, ಚರಂಡಿ ವ್ಯವಸ್ಥೆ ನೈರ್ಮಲ್ಯ, ವಿನ್ಯಾಸ, ಸಾಮಗ್ರಿಗಳು ಅಥವಾ ಕೊಠಡಿಗಳು, ಬಾಗಿಲುಗಳು, ಕಿಟಕಿಗಳು ಮತ್ತು ವಾಯು ಸಂಚಾರಕ್ಕಾಗಿನ ಕಿಂಡಿಗಳ ಉದ್ದಗಲಗಳು ಮತ್ತು ಘನ ಪರಿಮಾಣದ ಅಥವಾ ನಿರ್ಮಿಸಬೇಕಾದ ಮಹಡಿಗಳ ಸಂಖ್ಯೆಯ ಬಗ್ಗೆ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡ ಅಥವಾ ಬೀದಿಗೆ ಸಂಬಂಧಪಟ್ಟಂತೆ ಅಥವಾ ಅಸ್ತಿತ್ವದಲ್ಲಿರುವ ಅಥವಾ ಪ್ರಸ್ತಾವಿತ ಕಟ್ಟಡ ಸ್ಥಳದ ಬಗ್ಗೆ ಅಥವಾ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸಬೇಕಾಗಿದೆಯೋ ಆ ಉದ್ದೇಶಕ್ಕೆ ಸಂಬಂಧಿಸಿದಂತೆ ಬರಹದಲ್ಲಿ ಷರತ್ತುಗಳನ್ನು ವಿಧಿಸಬಹುದು; ಅಥವಾ

(ಗ) ಕಟ್ಟಡದ ಸ್ಥಳ ಮತ್ತು ಅಂಥ ಯಾವುದೇ ಬೀದಿಯ ಅನುಕ್ರಮ ಸ್ಥಳಕ್ಕೆ ಸಂಬಂಧಪಟ್ಟಂತೆ ಎಲ್ಲ ಪ್ರಶ್ನೆಗಳನ್ನು ತನಗೆ ಸಮಾಧಾನವಾಗುವಂತೆ ತೀರ್ಮಾನಿಸಿದ ಹೊರತು ಮತ್ತು ಅಲ್ಲಿಯವರೆಗೆ ಕೆಲಸಗಳನ್ನು ಮುಂದುವರಿಸತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(ಘ) ಕೆಳಗೆ ನಮೂದಿಸಿದ ಸಂದರ್ಭಗಳಲ್ಲಿ, ಒದಗಿಸಿದ ನಕ್ಷೆ ಮತ್ತು ಮಾಹಿತಿಗನುಸಾರವಾಗಿ ನಿರ್ಮಿಸಲು, ಬದಲಾಯಿಸಲು, ಸೇರಿಸಲು ಅಥವಾ ಪುನರ್ ನಿರ್ಮಿಸಲು ಅನುಮತಿಯನ್ನು ನಿರಾಕರಿಸಬಹುದು. ಅಂಥ ನಿರಾಕರಣೆಗೆ ಕಾರಣಗಳನ್ನು ಆದೇಶದಲ್ಲಿ ನಿರೂಪಿಸತಕ್ಕದ್ದು:–

(i) ಕೆಲಸವು ಅಂಥ ಕೆಲಸಕ್ಕಾಗಿನ ನಿವೇಶನದ ಉಪಯೋಗವು ಅಥವಾ ನಿವೇಶನ ನಕ್ಷೆ, ಭೂ ನಕ್ಷೆ, ಉನ್ನತಿ ನಕ್ಷೆಗಳು, ವಿಭಾಗಗಳು, ಅಥವಾ ತಪಸೀಲು ಪಟ್ಟಿಗಳಲ್ಲಿ ಒಳಗೊಂಡಿರುವ ಯಾವುದೇ ವಿವರವು ಯಾವುದೇ ಕಾನೂನಿನ ನಿರ್ದಿಷ್ಟ ಉಪಬಂಧವನ್ನು ಅಥವಾ ಯಾವುದೇ ಕಾನೂನಿನ ಮೇರೆಗೆ ಮಾಡಿದ ಯಾವುದೇ ನಿರ್ದಿಷ್ಟ ಆದೇಶ, ನಿಯಮ, ಘೋಷಣೆ ಅಥವಾ ಉಪವಿಧಿಯನ್ನು ಉಲ್ಲಂಘಿಸುವುದು;

(ii) ಅಂಥ ಅನುಮತಿಗಾಗಿನ ಅರ್ಜಿಯು ವಿವರಗಳನ್ನು ಒಳಗೊಂಡಿಲ್ಲದಿರುವುದು ಅಥವಾ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಿದ ರೀತಿಯಲ್ಲಿ ತಯಾರಿಸಿಲ್ಲದಿರುವುದು;

(iii) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ದಸ್ತಾವೇಜನ್ನು ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಅಗತ್ಯಪಡಿಸಿದಂತೆ ರುಜು ಮಾಡಿಲ್ಲದಿರುವುದು;

(iv) ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲು ಅಗತ್ಯಪಡಿಸಿದ ಯಾವುದೇ ಮಾಹಿತಿ ಅಥವಾ ದಸ್ತಾವೇಜುಗಳನ್ನು ಕ್ರಮಬದ್ಧವಾಗಿ ಒದಗಿಸಿಲ್ಲದಿರುವುದು;

(v) 170ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಬೀದಿಗಳು ಅಥವಾ ರಸ್ತೆಗಳನ್ನು ಮಾಡಿಲ್ಲದಿರುವುದು;

(vi) ಪ್ರಸ್ತಾವಿತ ಕಟ್ಟಡವು, ಸರ್ಕಾರ ಅಥವಾ ಪೌರಸಭೆಯ ಭೂಮಿಯ ಮೇಲೆ ಒತ್ತುವರಿಯಾಗುವುದು;

(vii) ಅಂಥ ಕಟ್ಟಡದ ನಿವೇಶನ ಬೀದಿ ಅಥವಾ ಪ್ರಸ್ತಾವಿತ ಬೀದಿಗೆ ಲಗತ್ತಾಗಿಲ್ಲದಿರುವುದು ಮತ್ತು ಅಂಥ ಕಟ್ಟಡಕ್ಕೆ ಅಂಥ ಯಾವುದೇ ಬೀದಿಯಿಂದ ಅಂಥ ನಿವೇಶನಕ್ಕೆ ಲಗತ್ತಾಗಿರುವ

ಮತ್ತು ಯಾವುದೇ ಭಾಗದಲ್ಲಿ ಹನ್ನೆರಡು ಅಡಿಗಳಿಗಿಂತ ಕಡಿಮೆಯಿಲ್ಲದ ಮಾರ್ಗ ಅಥವಾ ದಾರಿಯ ಮೂಲಕ ಪ್ರವೇಶಾವಕಾಶವಿಲ್ಲದಿರುವುದು;

(viii) ಹಾಗೆ ಅರ್ಜಿ ಸಲ್ಲಿಸುವ ವ್ಯಕ್ತಿಗೆ, ಸಂಬಂಧಪಟ್ಟ ಭೂಮಿ ಮೇಲೆ ಯಾವ ಹಕ್ಕೂ ಇಲ್ಲದಿರುವುದು ಅಥವಾ ನಿರ್ಮಿಸುವ, ಬದಲಾಯಿಸುವ, ಸೇರಿಸುವ ಅಥವಾ ಪುನರ್ ನಿರ್ಮಿಸುವ ಹಕ್ಕು ಇಲ್ಲದಿರುವುದು;

(ix) ಯಾವ ಭೂಮಿಯ ಮೇಲೆ ಯಾವುದೇ ಕಟ್ಟಡವನ್ನು ನಿರ್ಮಿಸಲು ಪ್ರಸ್ತಾವಿಸಲಾಗಿದೆಯೋ ಆ ಭೂಮಿ ಅಥವಾ ಇರುವ ಕಟ್ಟಡದ ಮೇಲೆ ಬದಲಾಯಿಸುವುದನ್ನು, ಸೇರಿಸುವುದನ್ನು ಅಥವಾ ಮರು ನಿರ್ಮಿಸುವುದನ್ನು ಪ್ರಸ್ತಾವಿಸಲಾಗಿದೆಯೋ ಆ ಯಾವುದೇ ಕಟ್ಟಡವು ಮುನ್ಸಿಪಲ್ ಕೌನ್ಸಿಲಿಗೆ ಅಗತ್ಯವಾಗಿದ್ದರೆ ಮತ್ತು ಅದನ್ನು ಆರ್ಜಿಸಲು ಕ್ರಮವನ್ನು ತೆಗೆದುಕೊಳ್ಳಲಾಗುತ್ತಿರುವುದು:

ಪರಂತು, (ಗ) ಖಂಡದ ಮೇರೆಗಿನ ನಿರ್ದೇಶನವು; ಆ ನಿರ್ದೇಶನವನ್ನು ಕೊಟ್ಟ ದಿನಾಂಕದಿಂದ ಒಂದು ವರ್ಷದ ತರುವಾಯ ಜಾರಿಯಲ್ಲಿರತಕ್ಕದ್ದಲ್ಲ.

(4) (3)ನೇ ಉಪ-ಪ್ರಕರಣದ ಮೇರೆಗೆ ಯಾವುವೇ ಆದೇಶಗಳನ್ನು ಹೊರಡಿಸುವುದಕ್ಕೆ ಮುಂಚೆ, ಮುನ್ಸಿಪಲ್ ಕೌನ್ಸಿಲು ಅಂಥ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ,-

(ಕ) ಅಂಥ ಆದೇಶದ ದಿನಾಂಕದಿಂದ ಒಂದು ತಿಂಗಳಿಗೆ ಮೀರದಂಥ ಅವಧಿಯವರೆಗೆ ಉದ್ದೇಶಿತ ಕೆಲಸವನ್ನು ಮುಂದುವರಿಸತಕ್ಕದ್ದಲ್ಲವೆಂಬ ತಾತ್ಕಾಲಿಕ ಆದೇಶವನ್ನು ಹೊರಡಿಸಬಹುದು; ಅಥವಾ

(ಖ) ಇನ್ನೂ ಹೆಚ್ಚಿನ ವಿವರಗಳನ್ನು ಕೇಳಬಹುದು.

(5) (1)ನೇ ಉಪ-ಪ್ರಕರಣದ ಮೇರೆಗೆ ಕೊಟ್ಟಿರುವ ನೋಟೀಸಿನಲ್ಲಿ ಪ್ರಸ್ತಾವಿಸಿರುವ ಕಟ್ಟಡ ಕಟ್ಟುವುದನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ತಾತ್ಕಾಲಿಕವಾಗಿ ಜಾರಿಯಲ್ಲಿರುವ ಯಾವುದೇ ನಿಯಮ ಅಥವಾ ಉಪವಿಧಿಯ ಯಾವುದೇ ಉಪಬಂಧಕ್ಕೆ ಅಸಂಗತವಾದಂತೆ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಲಾಗಿರಬಹುದಾದಂಥ ರೀತಿಯಲ್ಲಿ ಈ ಕೆಳಕಂಡ ಸಂದರ್ಭಗಳಲ್ಲಿ ಮುಂದುವರಿಸಬಹುದು ಎಂದರೆ:-

(ಕ) (1)ನೇ ಉಪ-ಪ್ರಕರಣದ ಮೇರೆಗೆ ಕೊಟ್ಟಿರುವ ನೋಟೀಸನ್ನು ಸ್ವೀಕರಿಸಲಾದಂದಿನಿಂದ ಒಂದು ತಿಂಗಳೊಳಗಾಗಿ ಮುನ್ಸಿಪಲ್ ಕೌನ್ಸಿಲು,-

(i) (3)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಆದೇಶಗಳನ್ನು ಮಾಡಿದ್ದು ಉದ್ದೇಶಿತ ಕೆಲಸಕ್ಕೆ ಸಂಬಂಧಿಸಿದಂತೆ ಅದರ ಬಗ್ಗೆ ನೋಟೀಸನ್ನು ಜಾರಿ ಮಾಡಿಲ್ಲದಿರುವುದು; ಅಥವಾ

(ii) (4)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ತಾತ್ಕಾಲಿಕ ಆದೇಶವನ್ನು ಹೊರಡಿಸದಿರುವುದು ಅಥವಾ ಇನ್ನಷ್ಟು ವಿವರಗಳಿಗಾಗಿ ಯಾವುದೇ ತಗಾದೆಯನ್ನು ಮಾಡಿಲ್ಲದಿರುವುದು;

(ಖ) ಮುನ್ಸಿಪಲ್ ಕೌನ್ಸಿಲು ಅಂಥ ಹೆಚ್ಚಿನ ವಿವರಗಳಿಗಾಗಿ ಅಂಥ ತಗಾದೆಯನ್ನು ಮಾಡಿದ್ದು ಮತ್ತು ಅವುಗಳನ್ನು ಈ ಬಗ್ಗೆ ಜಾರಿಯಲ್ಲಿರುವ ಉಪವಿಧಿಗಳಿಗನುಸಾರವಾಗಿ ಸ್ವೀಕರಿಸಿದ್ದು, ಅಂಥ ವಿವರಗಳನ್ನು ಸ್ವೀಕರಿಸಿದಂದಿನಿಂದ ಒಂದು ತಿಂಗಳೊಳಗಾಗಿ ಯಾವುದೇ ಹೆಚ್ಚಿನ ಆದೇಶಗಳನ್ನು ಹೊರಡಿಸದಿರುವುದು.

(6) (1)ನೇ ಉಪ–ಪ್ರಕರಣದ ಮೂಲಕ ನೋಟೀಸು ಅಗತ್ಯವಾಗಿರುವಂಥ ಯಾವುದೇ ಉದ್ದೇಶಿತ ಕೆಲಸವನ್ನು ಮುಂದುವರಿಸಲು (3)ನೇ ಉಪ–ಪ್ರಕರಣದ ಅಥವಾ (5)ನೇ ಉಪ–ಪ್ರಕರಣದ ಮೇರೆಗೆ ಹಕ್ಕುಳ್ಳವನಾಗುವ ಯಾರೇ ವ್ಯಕ್ತಿಯು (1)ನೇ ಉಪ–ಪ್ರಕರಣದ ಮೇರೆಗೆ ಹೊಸ ಅರ್ಜಿಯನ್ನು ಮಾಡಿದ್ದ ಹೊರತು ಮತ್ತು (3)ನೇ ಉಪ–ಪ್ರಕರಣದ ಮೇರೆಗೆ ಹೊಸ ಅನುಮತಿಯನ್ನು ಮಂಜೂರ್ಮಾಡಿದ್ದ ಹೊರತು ಅಥವಾ (5)ನೇ ಉಪ–ಪ್ರಕರಣದ ಮೇರೆಗೆ ಮಂಜೂರ್ಮಾಡಲಾಗಿದೆಯೆಂದು ಭಾವಿಸಿರುವ ಹೊರತು ಹಾಗೆ ಅದನ್ನು ಮುಂದುವರಿಸಲು ಮೊದಲು ಅವನು ಹಕ್ಕುಳ್ಳವನಾದಂಥ ದಿನಾಂಕದಿಂದ ಒಂದು ವರ್ಷದ ಅವಧಿಯ ಮುಕ್ತಾಯದ ತರುವಾಯ ಅಂಥ ಕೆಲಸವನ್ನು ಪ್ರಾರಂಭಿಸತಕ್ಕದ್ದಲ್ಲ.

(7) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಯಾವುದೇ ಕಟ್ಟಡವನ್ನು ಅದರ ನಿರ್ಮಾಣ, ಪುನರ್‌ನಿರ್ಮಾಣ ಕಟ್ಟುವಿಕೆಯ ಕಾಲದಲ್ಲಿ ಪರಿಶೀಲಿಸಬಹುದು ಮತ್ತು ಅವನಿಗೆ ಆ ಕೆಲಸವು,–

(ಕ) ಅನುಮೋದಿಸಲಾಗಿರುವಂಥ ನಕ್ಷೆಗಳು ಅಥವಾ ತಪಸೀಲು ಪಟ್ಟಿಗಳಿಗನುಸಾರವಾಗಿ ಅಲ್ಲದೆ ಅನ್ಯಥಾ ಇರುವುದೆಂದು; ಅಥವಾ

(ಖ) ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ನಿಯಮ, ಉಪವಿಧಿ, ಆದೇಶ ಅಥವಾ ಘೋಷಣೆಯ ಆ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವುದೆಂದು ಮಾಲೀಕನಿಗೆ ಕಂಡುಬಂದರೆ ಅವನು ನೋಟೀಸಿನ ಮೂಲಕ ಕಟ್ಟಡದ ಒಡೆಯನನ್ನು ನಮೂದಿಸಿದ ಅವಧಿಯೊಳಗೆ,–

(i) ಅಂಥ ಬದಲಾವಣೆಗಳನ್ನು ಏಕೆ ಮಾಡಬಾರದು ಎಂಬುದಕ್ಕೆ ಕಾರಣವನ್ನು ತೋರಿಸುವುದಕ್ಕೆ ಆಗಲಿ ಅಥವಾ;

(ii) ಸದರಿ ನಕ್ಷೆಗಳು, ತಪಸೀಲು ಪಟ್ಟಿಗಳು ಅಥವಾ ಉಪಬಂಧಗಳಿಗನುಗುಣವಾಗಿ ಕೆಲಸವು ಇರುವಂತೆ ಮಾಡುವ ಉದ್ದೇಶಕ್ಕಾಗಿ ಸದರಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬದಲಾವಣೆಗಳನ್ನು ಮಾಡುವುದಕ್ಕೆ ಆಗಲಿ

–ಅಗತ್ಯಪಡಿಸಬಹುದು.

ಹಿಂದೆ ಹೇಳಿದಂತೆ ಒಡೆಯನು ಕಾರಣವನ್ನು ತೋರಿಸದಿದ್ದರೆ, ಅವನು ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಬದಲಾವಣೆಗಳನ್ನು ಮಾಡಲು ಬದ್ಧನಾಗಿರತಕ್ಕದ್ದು. ಹಿಂದೆ ಹೇಳಿದಂತೆ ಒಡೆಯನು ಕಾರಣ ತೋರಿಸಿದರೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಆದೇಶದ ಮೂಲಕ ಆ ನೋಟೀಸನ್ನು ರದ್ದುಪಡಿಸತಕ್ಕದ್ದು ಅಥವಾ ತಾನು ಸೂಕ್ತವೆಂದು ಯೋಚಿಸಬಹುದಾದಂಥ ಮಾರ್ಪಾಗಳಿಗೊಳಪಟ್ಟು ಅವನ್ನು ಸ್ಥಿರೀಕರಿಸತಕ್ಕದ್ದು.

(8) ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ಮುನ್ಸಿಪಲ್ ಕಮಿಷನರು ಅಥವಾ ಚೀಫ್ ಆಫೀಸರನು ಮುಂದುವರಿಯುತ್ತಿರುವ ಕೆಲಸವು ಮಾನವ ಜೀವನಕ್ಕೆ ಅಪಾಯಕಾರಿಯೆಂದು ಅವನು ಅಭಿಪ್ರಾಯಪಟ್ಟರೆ ಯಾವುದೇ ಕಾಲದಲ್ಲಿ ಯಾವುದೇ ಕಟ್ಟಡದ ನಿರ್ಮಾಣ, ಪುನರ್ ನಿರ್ಮಾಣ ಅಥವಾ ಕಟ್ಟುವಿಕೆಯನ್ನು ನಿಲ್ಲಿಸಬಹುದು.

(9) (ಕ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್‌ನಿಗೆ,–

(i) ಕಟ್ಟಡದ ನಿರ್ಮಾಣ, ಪುನರ್ ನಿರ್ಮಾಣ ಅಥವಾ ಕಟ್ಟುವಿಕೆಯನ್ನು,–

(ಕ) ಮುನ್ಸಿಪಲ್ ಕೌನ್ಸಿಲ್‌ನ ಅನುಮತಿಯನ್ನು ಪಡೆಯದೆ ಪ್ರಾರಂಭಿಸಲಾಗಿದೆ; ಅಥವಾ

(ಖ) ಅನುಮತಿಯನ್ನು ಮಂಜೂರ್ಮಾಡಲಾಗಿದ್ದು ನಕ್ಷೆಗಳು ಅಥವಾ ವಿವರಗಳಿಗೆ ಅನುಸಾರವಾಗಿಯಲ್ಲದ ಅನ್ಯಥಾ ಕಾರ್ಯಗತಗೊಳಿಸಲಾಗುತ್ತಿದೆ ಅಥವಾ ಸಂಪೂರ್ಣಗೊಳಿಸಲಾಗಿದೆ; ಅಥವಾ

(ಗ) ಈ ಅಧಿನಿಯಮದ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಯಾವುದೇ ಉಪಬಂಧಗಳ ಅಥವಾ ಈ ಅಧಿನಿಯಮ ಅಥವಾ ಅಂಥ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಕಾನೂನುಬದ್ಧವಾಗಿ ಕೊಟ್ಟ ಅಥವಾ ಮಾಡಿದ ಯಾವುದೇ ನಿರ್ದೇಶನ ಕಡ್ಡಾಯ ಅಥವಾ ಕೋರಿಕೆಯ ಉಲ್ಲಂಘನೆಯಲ್ಲಿ ಕಾರ್ಯಗತಗೊಳಿಸಲಾಗುತ್ತಿದ್ದರೆ ಅಥವಾ ಪೂರ್ಣಗೊಳಿಸಲಾಗಿದೆ;

(ii) (8)ನೇ ಉಪ–ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ನೋಟೀಸಿನ ಮೂಲಕ ಅಗತ್ಯಪಡಿಸಿದ ಯಾವುವೇ ಬದಲಾವಣೆಗಳನ್ನು ಕ್ರಮಬದ್ಧವಾಗಿ–

ಮಾಡಿಲ್ಲ ಎಂದು ಮನದಟ್ಟಾದರೆ,–

–ಮಾಡಿದ ಕೆಲಸವನ್ನು ಅಥವಾ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನ ಅಭಿಪ್ರಾಯದಲ್ಲಿ ಕಾನೂನು ಬಾಹಿರವಾಗಿ ನಿರ್ವಹಿಸಲಾಗಿರುವಷ್ಟನ್ನು ಕೆಡವಿ ಹಾಕಲು ಅಥವಾ ಮುನ್ಸಿಪಲ್ ಕಮಿಷನರನ ಅಥವಾ ಚೀಫ್ ಆಫೀಸರನ ಅಭಿಪ್ರಾಯದಲ್ಲಿ, ಹಿಂದೆ ಹೇಳಿದಂತೆ ಈ ಅಧಿನಿಯಮ, ನಿಯಮಗಳು, ಉಪವಿಧಿಗಳು, ನಿರ್ದೇಶನ ಅಥವಾ ಕಡ್ಡಾಯ ಕೋರಿಕೆ ಅಥವಾ ಅಂಥ ಅನುಮತಿಯು ಆಧಾರಿತವಾದಂಥ ನಕ್ಷೆಗಳು ಅಥವಾ ವಿವರಗಳಿಗನುಗುಣವಾಗಿ ಆ ಕೆಲಸವನ್ನು ತರಲು ಅವಶ್ಯವಾಗಬಹುದಾದಂಥ ಬದಲಾವಣೆಗಳನ್ನು ಮಾಡಲು ಒಡೆಯ ಅಥವಾ ಕಟ್ಟುವವನನ್ನು ಅಗತ್ಯಪಡಿಸುವ ತಾತ್ಕಾಲಿಕ ಆದೇಶವನ್ನು ಅವನು ಮಾಡಬಹುದು. ಮತ್ತು ಸದರಿ ಆದೇಶವನ್ನು ಪಾಲಿಸುವವರೆಗೆ ಒಡೆಯ ಅಥವಾ ಕಟ್ಟುವವನನ್ನು, ಕಟ್ಟಡ ಕಟ್ಟುವುದನ್ನು ಮುಂದುವರಿಸತಕ್ಕದ್ದಲ್ಲವೆಂದೂ ಸಹ ನಿರ್ದೇಶಿಸಬಹುದು.

(ಖ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು (ಕ) ಖಂಡದ ಮೇರೆಗೆ ಮಾಡಿದ ತಾತ್ಕಾಲಿಕ ಆದೇಶದ ಪ್ರತಿಯನ್ನು, ಆದೇಶವನ್ನು ಏಕೆ ಸ್ಥಿರೀಕರಿಸಬಾರದು ಎಂಬುದರ ಬಗ್ಗೆ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ, ಮೂರು ದಿನಗಳಿಗಿಂತ ಕಡಿಮೆಯಿಲ್ಲದ, ಯುಕ್ತ ಕಾಲದೊಳಗೆ ಕಾರಣ ತೋರಿಸಲು ಅವನನ್ನು ಅಗತ್ಯಪಡಿಸುವ ನೋಟೀಸಿನೊಂದಿಗೆ ಕಟ್ಟಡದ ಒಡೆಯನಿಗೆ ಜಾರಿ ಮಾಡತಕ್ಕದ್ದು.

(ಗ) ಒಡೆಯನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನಿಗೆ ಮನದಟ್ಟಾಗುವಂತೆ ಕಾರಣ ತೋರಿಸಲು ತಪ್ಪಿದರೆ, ಅವನು ಮಾಡಲು ಸೂಕ್ತವೆಂದು ಯೋಚಿಸಬಹುದಾದಂಥ ಯಾವುದೇ ಮಾರ್ಪಾಟಿನೊಂದಿಗೆ ಆದೇಶವನ್ನು ಅವನು ಸ್ಥಿರೀಕರಿಸಬಹುದು ಮತ್ತು ಅಂಥ ಆದೇಶವು ಆನಂತರ ಒಡೆಯನ ಮೇಲೆ ಬಂಧನಕಾರಿಯಾಗಿರತಕ್ಕದ್ದು.

(ಘ) (ಗ) ಖಂಡದ ಮೇರೆಗೆ ಮಾಡಿದ ಆದೇಶದಲ್ಲಿ ನಮೂದಿಸಿದ ಯುಕ್ತ ಕಾಲದೊಳಗೆ ಮುನ್ಸಿಪಲ್ ಕಮಿನಷನರ್ ಅಥವಾ ಚೀಫ್ ಆಫೀಸರನು, ಆ ಆದೇಶವನ್ನು ಯುಕ್ತವಾಗಿ ಪರಿಣಾಮಕಾರಿಯಾಗಿಸುವುದಕ್ಕೆ ಅವನ ಅಭಿಪ್ರಾಯದಲ್ಲಿ ಅವಶ್ಯವಾಗಬಹುದಾದ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಬಹುದು ಅಥವಾ ಏನನ್ನಾದರೂ ಮಾಡಬಹುದು.

(ಜ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು (ಘ) ಖಂಡದ ಮೇರೆಗೆ ವಹಿಸಿದ ಯಾವುದೇ ಯುಕ್ತ ವೆಚ್ಚಗಳನ್ನು, ಆ ಆದೇಶವನ್ನು ಯಾರಿಗೆ ಸಂಬೋಧಿಸಲಾಗಿತ್ತೋ ಆ ವ್ಯಕ್ತಿಯಿಂದ ಈ ಅಧಿನಿಯಮದ ಮೇರೆಗಿನ ಕಟ್ಟಡದ ಮೇಲಿನ ತೆರಿಗೆಯಂತೆ ಅದೇ ರೀತಿಯಲ್ಲಿ ವಸೂಲ್ಮಾಡತಕ್ಕದ್ದು ಮತ್ತು ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ, ಸಂಬಂಧಿಸಿದ ಸ್ವತ್ತಿನ ಮೇಲೆ ಕಂಡುಬರುವ ಯಾವುವೇ ಸಾಮಗ್ರಿಗಳನ್ನು ಉಪಯೋಗಿಸಿಕೊಳ್ಳಬಹುದು. ಮತ್ತು ಅವುಗಳನ್ನು ಮಾರಬಹುದು, ಮಾರಾಟದ ಉತ್ಪತ್ತಿಗಳನ್ನು ವಹಿಸಿದ ವೆಚ್ಚಗಳನ್ನು ಸಂದಾಯ ಮಾಡಲು ವಿನಿಯೋಗಿಸಬಹುದು.

**ವಿವರಣೆ:**– ಈ ಅಧ್ಯಾಯದಾದ್ಯಂತ "ಕಟ್ಟಡವನ್ನು ಕಟ್ಟುವುದು" ಎಂಬ ಪದಾವಳಿಯು,–

(ಕ) ಯಾವುದೇ ಕಟ್ಟಡ ಅಥವಾ ಕಾಂಪೌಂಡ್ ಗೋಡೆಯನ್ನೊಳಗೊಂಡು ಯಾವುದೇ ಗೋಡೆ ಮತ್ತು ಕಟ್ಟಡದ ಭಾಗವಾಗಿರಲಿ ಅಥವಾ ಇಲ್ಲದಿರಲಿ, ಬೇಲಿ, ವರಾಂಡ, ಜೋಡಿಸಿದ ಜಗಲಿ ಮೇಲುಪಾಯ, ಬಾಗಿಲು ಮೆಟ್ಟಿಲು, ಅಥವಾ ಅಂಥವುಗಳ ಯಾವುದೇ ಮುಖ್ಯ ಬದಲಾವಣೆ, ವಿಸ್ತರಣೆ ಅಥವಾ ಪುನರ್ ನಿರ್ಮಾಣ;

(ಖ) ಮೂಲತಃ ಮಾನವನ ವಸತಿಗಾಗಿ ನಿರ್ಮಿಸಿರದ ಯಾವುದೇ ಕಟ್ಟಡವನ್ನು ವಾಸದ ಮನೆಯಾಗಿ ಪರಿವರ್ತಿಸುವುದು ಅಥವಾ ಮೂಲತಃ ಹಾಗೆ ನಿರ್ಮಿಸಿದ್ದು, ತರುವಾಯ ಯಾವುದೇ ಇತರ ಉದ್ದೇಶಕ್ಕಾಗಿ ಬಳಸಿಕೊಳ್ಳುವುದು;

(ಗ) ಮೂಲತಃ ಒಂದೇ ವಾಸದ ಮನೆಯಾಗಿ ಮಾತ್ರ ನಿರ್ಮಿಸಿದ ಕಟ್ಟಡವನ್ನು ಒಂದಕ್ಕಿಂತ ಹೆಚ್ಚು ವಾಸದ ಮನೆಗಳಾಗಿ ಪರಿವರ್ತಿಸುವುದು;

(ಘ) ಮಾನವನು ವಾಸಿಸುವ ಎರಡು ಅಥವಾ ಹೆಚ್ಚು ಸ್ಥಳಗಳನ್ನು ಹೆಚ್ಚಿನ ಸಂಖ್ಯೆಯು ಅಂಥ ಸ್ಥಳಗಳಾಗಿ ಪರಿವರ್ತಿಸುವುದು;

(ಙ) ಧಾರ್ಮಿಕ ಪೂಜಾ ಸ್ಥಳವಾಗಿ ಅಥವಾ ಅಂಥ ಉದ್ದೇಶಕ್ಕಾಗಿ ಮೂಲತಃ ನಿರ್ಮಿಸಿರದ ಯಾವುದೇ ಕಟ್ಟಡವನ್ನು ಪವಿತ್ರ ಉದ್ದೇಶಕ್ಕಾಗಿನ ಕಟ್ಟಡವಾಗಿ ಪರಿವರ್ತಿಸುವುದು;

(ಚ) ಮೂಲತಃ ಹಾಗೆ ಉಪಯೋಗಿಸುವುದಕ್ಕಾಗಿ ನಿರ್ಮಿಸಿರದ ಅಥವಾ ಬದಲಾವಣೆಗೆ ಮುಂಚೆ ಹಾಗೆ ಉಪಯೋಗಿಸಿದಂಥ ಯಾವುದೇ ಕಟ್ಟಡವನ್ನು ಮಳಿಗೆ, ಅಂಗಡಿ, ಉಗ್ರಾಣ ಅಥವಾ ಗೋದಾಮು, ಲಾಯ, ಕಾರ್ಖಾನೆ ಅಥವಾ ಗ್ಯಾರೇಜ್ ಆಗಿ ಪರಿವರ್ತಿಸುವುದು;

(ಛ) ಕಟ್ಟಡದ ಚರಂಡಿ ವ್ಯವಸ್ಥೆ, ವಾಯು ಸಂಚಾರ ಅಥವಾ ಇತರ ನೈರ್ಮಲ್ಯ ವ್ಯವಸ್ಥೆಗಳನ್ನು ಅಥವಾ ಅದರ ಸುರಕ್ಷತೆ ಅಥವಾ ಭದ್ರತೆಗೆ ಬಾಧಿತವಾಗುವಂತೆ ಅದರ ಒಳ ವ್ಯವಸ್ಥೆಗಳ ಅಂಥ ಬದಲಾವಣೆ; ಮತ್ತು

(ಜ) ಯಾವುದೇ ಕಟ್ಟಡಗಳಿಗೆ ಯಾವುವೇ ಕೊಠಡಿಗಳು, ಕಟ್ಟಡಗಳು ಅಥವಾ ಇತರೆ ರಚನೆಗಳನ್ನು ಸೇರಿಸುವುದು

–ಇವುಗಳನ್ನು ಒಳಗೊಳ್ಳುತ್ತದೆ. ಮತ್ತು ಹಾಗೆ ಬದಲಾಯಿಸಿದ, ವಿಸ್ತರಿಸಿದ, ಪುನರ್ ನಿರ್ಮಿಸಿದ, ಪರಿವರ್ತಿಸಿದ ಅಥವಾ ಸೇರಿಸಿದ ಕಟ್ಟಡವು ಈ ಅಧ್ಯಾಯದ ಉದ್ದೇಶಕ್ಕಾಗಿ ಹೊಸ ಕಟ್ಟಡವೆಂದು ಭಾವಿಸತಕ್ಕದ್ದು.

(10) (3)ನೇ ಉಪ-ಪ್ರಕರಣದ (ಫ) ಖಂಡದ (ix)ನೇ ಉಪಖಂಡದ ಮೇರೆಗೆ, ಅನುಮತಿಯನ್ನು ನಿರಾಕರಿಸಿದಂಥ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಮುನ್ಸಿಪಲ್ ಕೌನ್ಸಿಲು, ಭೂಮಿಯನ್ನು ಆರ್ಜಿಸದಿದ್ದರೆ ಅಥವಾ ಅಂಥ ಅವಧಿಯೊಳಗೆ, 1894ರ ಭೂ ಆರ್ಜನಾ ಅಧಿನಿಯಮದ ಉಪಬಂಧಗಳ ಮೇರೆಗೆ ಕಡ್ಡಾಯ ಆರ್ಜನೆಗಾಗಿ, ವ್ಯವಹರಣೆಗಳ ಹೂಡಿಕೆಗಾಗಿ ಡೆಪ್ಯೂಟಿ ಕಮಿಷನರನಿಗೆ ಅರ್ಜಿಯನ್ನು ಮಾಡಿಕೊಳ್ಳದಿದ್ದರೆ ಅಥವಾ ಮುನ್ಸಿಪಲ್ ಕೌನ್ಸಿಲು ಭೂಮಿಯನ್ನು ಆರ್ಜಿಸುವ ಪ್ರಸ್ತಾಪವನ್ನು ಕೈಬಿಟ್ಟರೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಸಂಬಂಧಪಟ್ಟ ವ್ಯಕ್ತಿಗೆ, ಕಟ್ಟಲು ಅಥವಾ ಬದಲಾಯಿಸುವ ಬಗೆಗಿನ ನಿರಾಕರಣೆಯನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ತಿಳಿಸತಕ್ಕದ್ದು ಮತ್ತು ಅರ್ಜಿಯನ್ನು ಗುಣಾವಗುಣಗಳ ಮೇಲೆ ಇನ್ನಷ್ಟು ಪರ್ಯಾಲೋಚಿಸತಕ್ಕದ್ದು.

**188. ತಪ್ಪು ನಿರೂಪಣೆಯ ಮೇರೆಗೆ ಕೊಡಲಾದ ಮಂಜೂರಾತಿ.–** ಯಾವುದೇ ಕಟ್ಟಡಕ್ಕೆ ಅಥವಾ ಕೆಲಸಕ್ಕೆ ಮಂಜೂರಾತಿಯನ್ನು ಕೊಟ್ಟ ತರುವಾಯ, ಯಾವುದೇ ಕಾಲದಲ್ಲಿ 187ನೇ ಪ್ರಕರಣದ ಮೇರೆಗೆ ಕೊಡಲಾದ ನೋಟೀಸು ಅಥವಾ ಒದಗಿಸಲಾದ ಮಾಹಿತಿಯಲ್ಲಿ ಒಳಗೊಂಡ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನಿಗೆ ಯಾವುದೇ ಮುಖ್ಯ ತಪ್ಪು ನಿರೂಪಣೆ ಅಥವಾ ಮೋಸದ ಹೇಳಿಕೆಯ ಪರಿಣಾಮವಾಗಿ ಅಂಥ ಮಂಜೂರಾತಿಯನ್ನು ಕೊಡಲಾಗಿದೆಯೆಂದು ಮನದಟ್ಟಾದರೆ, ಅವನು ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಬರಹದಲ್ಲಿನ ಆದೇಶದ ಮೂಲಕ ಅಂಥ ಮಂಜೂರಾತಿಯನ್ನು ರದ್ದುಪಡಿಸಬಹುದು. ಮತ್ತು ಪ್ರಾರಂಭಿಸಲಾದ, ನಿರ್ಮಿಸಲಾದ ಅಥವಾ ಮಾಡಲಾದ ಯಾವುದೇ ಕಟ್ಟಡ ಅಥವಾ ಕೆಲಸವನ್ನು ಅಂಥ ಮಂಜೂರಾತಿ ಇಲ್ಲದೆಯೇ ಪ್ರಾರಂಭಿಸಲಾಗಿದೆ, ನಿರ್ಮಿಸಲಾಗಿದೆ ಅಥವಾ ಮಾಡಲಾಗಿದೆ ಎಂದು ಭಾವಿಸತಕ್ಕದ್ದು:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವ ಮೊದಲು, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಅಂಥ ಆದೇಶವನ್ನು ಏಕೆ ಮಾಡಬಾರದು ಎಂಬ ಬಗ್ಗೆ ಕಾರಣವನ್ನು ತೋರಿಸಲು ಬಾಧಿತನಾದ ವ್ಯಕ್ತಿಗೆ ಯುಕ್ತ ಅವಕಾಶವನ್ನು ಕೊಡತಕ್ಕದ್ದು.

**189. ಕೆಲವು ಪ್ರದೇಶಗಳ ಅನುಮತಿ ಇಲ್ಲದೆ ಕಟ್ಟಡಗಳ ಕಟ್ಟುವಿಕೆಯನ್ನು ನಿಷೇಧಿಸಲು ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಮತ್ತು ಮುನ್ಸಿಪಲ್ ಕೌನ್ಸಿಲಿನೊಡನೆ ಸಮಾಲೋಚಿಸಿದ ತರುವಾಯ, ಈ ಬಗ್ಗೆ ಸರ್ಕಾರದಿಂದ ಕೊಟ್ಟ ಅನುಮತಿಯಿಂದ ಹೊರತು, ಪೌರಸಭೆಯಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶದೊಳಗೆ ಯಾವುದೇ ಕಟ್ಟಡ ಕಟ್ಟುವುದನ್ನು, ಅಧಿಸೂಚನೆಯ ಮೂಲಕ ನಿಷೇಧಿಸಬಹುದು.

ಪರಂತು, ಅಂಥ ಅನುಮತಿಯನ್ನು ಅಂಥ ಅಧಿಸೂಚನೆಯ ಪ್ರಕಟಣೆಗೆ ಮುಂದೆ ಸರ್ಕಾರ ಅಥವಾ ಮುನ್ಸಿಪಲ್ ಕೌನ್ಸಿಲು ಕಟ್ಟಡ ನಿವೇಶನ ಎಂದು ಪ್ರತ್ಯೇಕವಾಗಿರಿಸಿದಂಥ ಭೂಮಿಯ ಸಂದರ್ಭದಲ್ಲಿ ನಿರಾಕರಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗಿನ ಯಾವುದೇ ಅನುಮತಿಯ ಮಂಜೂರಾತಿಯು, ಸರ್ಕಾರವು ಪ್ರತಿಯೊಂದು ಸಂದರ್ಭದಲ್ಲಿ ಅಥವಾ ಸಾಮಾನ್ಯವಾಗಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟಿರಬಹುದು.

(3) (1)ನೇ ಉಪಪ್ರಕರಣದ ಉಪಬಂಧಗಳನ್ನು ಅಥವಾ (2)ನೇ ಉಪಪ್ರಕರಣದ ಮೇರೆಗೆ ವಿಧಿಸಲಾದ ಷರತ್ತುಗಳಿಗೆ ತದ್ವಿರುದ್ಧವಾಗಿ ಯಾವುದೇ ಕಟ್ಟಡಗಳನ್ನು ಯಾರೇ ಆಗಲಿ ಕಟ್ಟಿದರೆ ಅವನು ಎರಡು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) ಸರ್ಕಾರವು (1)ನೇ ಉಪಪ್ರಕರಣದ ಉಪಬಂಧಗಳಿಗೆ ಅಥವಾ (2)ನೇ ಉಪಪ್ರಕರಣದ ಮೇರೆಗೆ ವಿಧಿಸಲಾದ ಷರತ್ತುಗಳಿಗೆ ತದ್ವಿರುದ್ಧವಾಗಿ ಕಟ್ಟಿದ ಯಾವುದೇ ಕಟ್ಟಡವನ್ನು ಕೆಡವಿ ಹಾಕಬಹುದು.

**190. ಮುಕ್ತಾಯ ಪ್ರಮಾಣ ಪತ್ರಗಳನ್ನು ಸ್ವಾಧೀನಪಡಿಸಿಕೊಳ್ಳಲು ಅಥವಾ ಉಪಯೋಗಿಸಲು ಅನುಮತಿ.–** (1) 187ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ವಿವರಿಸಲಾಗಿರುವಂತೆ ಕಟ್ಟಡವನ್ನು ಕಟ್ಟುವ ಅಥವಾ ಕೆಲಸವನ್ನು ನಿರ್ವಹಿಸುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಕಟ್ಟಡ ಕಟ್ಟುವುದು ಅಥವಾ ಅಂಥ ಕೆಲಸವನ್ನು ನಿರ್ವಹಿಸುವುದು ಮುಕ್ತಾಯವಾದ ತರುವಾಯ ಒಂದು ತಿಂಗಳ ಒಳಗಾಗಿ ಅಂಥ ಮುಕ್ತಾಯದ ಬರಹದಲ್ಲಿನ ನೋಟೀಸನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್‌ನಿಗೆ ಅವನ ಕಚೇರಿಯಲ್ಲಿ ವಶಾವಣೆ ಮಾಡತಕ್ಕದ್ದು ಅಥವಾ ಕಳಿಸತಕ್ಕದ್ದು ಅಥವಾ ವಶಾವಣೆ ಮಾಡುವಂತೆ ಅಥವಾ ಪ್ರತಿನಿಯೋಜಿಸಲಾದ ಮುನ್ಸಿಪಲ್ ಕೌನ್ಸಿಲಿನ ಅಧಿಕಾರಿಗೆ ಅಂಥ ಕಟ್ಟಡದ ಅಥವಾ ಅಂಥ ಕೆಲಸದ ಪರಿಶೀಲನೆಗಾಗಿ ಎಲ್ಲ ಅವಶ್ಯ ಸೌಲಭ್ಯಗಳನ್ನು ಕೊಡತಕ್ಕದ್ದು:

ಪರಂತು,–

(ಕ) ಅಂಥ ಪರಿಶೀಲನೆಯನ್ನು, ಮುಕ್ತಾಯದ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳ ಒಳಗಾಗಿ ಪ್ರಾರಂಭಿಸತಕ್ಕದ್ದು; ಮತ್ತು

(ಖ) ಮುನ್ಸಿಪಲ್ ಕಮಿಷನರು ಅಥವಾ ಚೀಫ್ ಆಫೀಸರನು, ಮುಕ್ತಾಯದ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳು ಮೀರದಂತೆ ಯಾವ ವ್ಯಕ್ತಿಯಿಂದ ಮುಕ್ತಾಯದ ನೋಟೀಸನ್ನು ಸ್ವೀಕರಿಸಲಾಗಿತ್ತೋ ಆ ವ್ಯಕ್ತಿಗೆ ಸಂಭೋಧಿಸಿದ ಮತ್ತು ಅಂಥ ನೋಟೀಸಿನಲ್ಲಿ ಹೇಳಿರುವಂಥ ಅವನ ವಿಳಾಸದಲ್ಲಿ ಕೊಡಲಾದ ಅಥವಾ ಅಂಥ ವಿಳಾಸವು ಇಲ್ಲದಿರುವಲ್ಲಿ, ಅಂಥ ನೋಟೀಸಿಗೆ ಸಂಬಂಧಪಟ್ಟಂತೆ ಕಟ್ಟಡದ ಎದ್ದುಕಾಣುವ ಭಾಗಕ್ಕೆ ಅಂಟಿಸಲಾದ ತಿಳುವಳಿಕೆ ಮೂಲಕ,–

(i) ಅಂಥ ಕಟ್ಟಡವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಅಥವಾ ಅಂಥ ಕೆಲಸದಿಂದ ಬಾಧಿತವಾದ ಕಟ್ಟಡದ ಅಥವಾ ಅದರ ಭಾಗವನ್ನು ಉಪಯೋಗಿಸುವುದಕ್ಕಾಗಿ ಅನುಮತಿಯನ್ನು ಕೊಡಬಹುದು; ಅಥವಾ

(ii) ಅಂಥ ಕಟ್ಟಡವನ್ನು ಅಥವಾ ಅಂಥ ಕೆಲಸವನ್ನು ಆಗ ಜಾರಿಯಲ್ಲಿದ್ದ ಈ ಅಧಿನಿಯಮ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಅಥವಾ 187ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸುವ ಹಾಗೆ ಕಟ್ಟಿದ ಅಥವಾ ನಿರ್ವಹಿಸಿದ ಸಂದರ್ಭದಲ್ಲಿ ಅಂಥ ಅನುಮತಿಯನ್ನು, ಅಂಥ ನಿರಾಕರಣೆಗಾಗಿನ ಕಾರಣಗಳನ್ನು 187ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಟೀಸನ್ನು ಕೊಟ್ಟಿರುವ ವ್ಯಕ್ತಿಗೆ ತಿಳಿಸಿ, ಮತ್ತು ಅಂಥ ವ್ಯಕ್ತಿ ಅಥವಾ 187ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನೋಟೀಸನ್ನು ಕೊಡಲು ಹೊಣೆಯಾಗಿರುವ ವ್ಯಕ್ತಿಯು, ಅಂಥ ನೋಟೀಸಿನ ಕಾಲದಲ್ಲಿ ಅಂಥ ಕಟ್ಟಡ ಅಥವಾ ಕೆಲಸದ ಒಡೆಯನಾಗಿರದಿದ್ದರೆ, ಆಗ ಅಂಥ ಒಡೆಯನನ್ನು, ಆ ಕಾಲದಲ್ಲಿ ಜಾರಿಯಲ್ಲಿದ್ದ ಈ ಅಧಿನಿಯಮ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಅಥವಾ 187ನೇ ಪ್ರಕರಣದ (3)ನೆಯ ಉಪಪ್ರಕರಣದ ಮೇರೆಗೆ, ಮಾಡಿದ ಯಾವುದೇ ಆದೇಶದ ಯಾವುದೇ ಉಪಬಂಧಕ್ಕೆ ತದ್ವಿರುದ್ಧವಾದಂತಹುದನ್ನು, ಯಾವುದನ್ನು ತಿದ್ದುಪಡಿ ಮಾಡಿಸಲು ಅಥವಾ ಏನನ್ನಾದರೂ ಮಾಡಲು ಅಂಥ ಉಪಬಂಧ ಅಥವಾ ನಿಯಮ ಅಥವಾ ಉಪವಿಧಿ ಅಥವಾ ಆದೇಶದ ಮೂಲಕ ಮಾಡಲು ಅವನನ್ನು

ಅಗತ್ಯಪಡಿಸಲಾಗಿದೆಯೋ ಆದರೆ, ಮಾಡಲು ತಪ್ಪಿರುವನೋ, ಆ ಯಾವುದೇ ತಿದ್ದುಪಡಿಯನ್ನು ಮಾಡಿಸಲು ಅಥವಾ ಏನನ್ನಾದರೂ ಮಾಡಲು, ಅಗತ್ಯಪಡಿಸಿ, ನಿರಾಕರಿಸಬಹುದು.

(2) ಯಾರೇ ವ್ಯಕ್ತಿಯು,–

(ಕ) (1)ನೇ ಉಪಪ್ರಕರಣದ (ಖ) ಪರಂತುಕದಲ್ಲಿ ಉಲ್ಲೇಖಿಸಿದ ಅನುಮತಿಯನ್ನು ಸ್ವೀಕರಿಸುವವರೆಗೆ; ಅಥವಾ

(ಖ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು, ಮುಕ್ತಾಯದ ನೋಟೀಸನ್ನು ಸ್ವೀಕರಿಸಿದ ತರುವಾಯ ಒಂದು ತಿಂಗಳಿನವರೆಗೆ, ಸದರಿ ಅನುಮತಿಯ ಬಗ್ಗೆ ತನ್ನ ನಿರಾಕರಣೆಯನ್ನು ಹಿಂದೆ ಹೇಳಿದಂತೆ ತಿಳಿಸಲು ತಪ್ಪುವವರೆಗೆ,

–ಅಂಥ ಯಾವುದೇ ಕೆಲಸದಿಂದ ಬಾಧಿತವಾದ, ಅಂಥ ಯಾವುದೇ ಕಟ್ಟಡವನ್ನು ಸ್ವಾಧೀನಪಡಿಸಿಕೊಳ್ಳತಕ್ಕದ್ದಲ್ಲ ಅಥವಾ ಸ್ವಾಧೀನಪಡಿಸಿಕೊಳ್ಳಲು ಅನುಮತಿಸತಕ್ಕದ್ದಲ್ಲ ಅಥವಾ ಆ ಕಟ್ಟಡದ ಅದರ ಭಾಗವನ್ನು ಉಪಯೋಗಿಸಿಕೊಳ್ಳತಕ್ಕದ್ದಲ್ಲ ಅಥವಾ ಉಪಯೋಗಿಸಲು ಅನುಮತಿಸತಕ್ಕದ್ದಲ್ಲ.

(3) ಈ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶ ಅಥವಾ ಕಡ್ಡಾಯ ಕೋರಿಕೆಯನ್ನು ಪಾಲಿಸಲು ತಪ್ಪುವ ಯಾರೇ ಆಗಲಿ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಮುಂದುವರಿಯುತ್ತಿರುವ ಉಲ್ಲಂಘನೆ ಅಥವಾ ಅನನುಪಾಲನೆಯ ಸಂದರ್ಭದಲ್ಲಿ ಅಂಥ ಮೊದಲನೇ ಉಲ್ಲಂಘನೆಯ ಅಥವಾ ಅನನುಪಾಲನೆಗಾಗಿ ಅಪರಾಧ ನಿರ್ಣಯದ ತರುವಾಯ, ಅಂಥ ಉಲ್ಲಂಘನೆ ಅಥವಾ ಅನನುಪಾಲನೆಯು ಮುಂದುವರಿಯುತ್ತಿರುವಂಥ ಕಾಲದಲ್ಲಿ ಪ್ರತಿಯೊಂದು ದಿವಸಕ್ಕೆ ಹತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**191. ಗುಡಿಸಲುಗಳ ನಿಯಂತ್ರಣ.–** ಯಾರೇ ವ್ಯಕ್ತಿಗೆ, ಮುನ್ಸಿಪಲ್ ಕೌನ್ಸಿಲಿಗೆ ಮುಂಚಿತವಾಗಿ ನೋಟೀಸನ್ನು ಕೊಡದೆಯೆ ಮತ್ತು ಅದರ ಅನುಮತಿಯನ್ನು ಪಡೆಯದೆಯೆ ಯಾವುದೇ ಗುಡಿಸಲು, ಷೆಡ್ಡು ಅಥವಾ ಗುಡಿಸಲುಗಳ ಅಥವಾ ಷೆಡ್ಡುಗಳ ಸಾಲು ಅಥವಾ ಬ್ಲಾಕನ್ನು ನಿರ್ಮಿಸಲು ಅಥವಾ ಈ ಅಧಿನಿಯಮವು ಜಾರಿಗೆ ಬಂದಾಗ ಈಗಾಗಲೇ ಅಸ್ತಿತ್ವದಲ್ಲಿರುವ ಯಾವುದೇ ಗುಡಿಸಲುಗಳ ಅಥವಾ ಷೆಡ್ಡುಗಳ ಯಾವುದೇ ಸಾಲು ಅಥವಾ ಬ್ಲಾಕಿಗೆ ಯಾವುದೇ ಗುಡಿಸಲು ಅಥವಾ ಷೆಡ್ಡನ್ನು ಸೇರಿಸುವುದು ಕಾನೂನುಬದ್ಧವಾಗಿರತಕ್ಕದ್ದಲ್ಲ ಮತ್ತು ಮುನ್ಸಿಪಲ್ ಕೌನ್ಸಿಲು ವಾಯು ಸಂಚಾರಕ್ಕಾಗಿ ಮತ್ತು ನಿರ್ಮಲೀಕರಣಕ್ಕೆ ಅನುಕೂಲವಾಗಲು ಮತ್ತು ಸಾಕಷ್ಟು ಚರಂಡಿ ವ್ಯವಸ್ಥೆಗೆ ಅವಕಾಶವಾಗುವಂಥ ಮಟ್ಟದಲ್ಲಿ, ಮುನ್ಸಿಪಲ್ ಕೌನ್ಸಿಲು ಸರಿಯೆಂದು ಯೋಚಿಸಬಹುದಾದಂತೆ, ಪ್ರತಿ ಎರಡು ಸಾಲುಗಳ ಮುಂದೆ ಮತ್ತು ನಡುವೆ ಅಂಥ ಅಗಲದ ಮುಕ್ತ ಮಾರ್ಗ ಅಥವಾ ದಾರಿಯೊಂದಿಗೆ ಅಂಥ ಗುಡಿಸಲು ಅಥವಾ ಷೆಡ್ಡುಗಳು ನಿಯಮಿತ ಸಾಲುಗಳಲ್ಲಿ ಇರುವ ಹಾಗೆ ಕಟ್ಟತಕ್ಕದ್ದೆಂದು ಅಗತ್ಯಪಡಿಸಬಹುದು ಮತ್ತು ಅದಕ್ಕೆ ಅವಶ್ಯವೆಂದು ತೋರಬಹುದಾದಂಥ ಸಂಖ್ಯೆಯ ಕಕ್ಕಸುಗಳನ್ನು ಮತ್ತು ಚರಂಡಿ ವ್ಯವಸ್ಥೆಯ ಅಂಥ ಸಾಧನಗಳನ್ನು ಒದಗಿಸಬೇಕೆಂದು ಅಗತ್ಯಪಡಿಸಬಹುದು. ಮುನ್ಸಿಪಲ್ ಕೌನ್ಸಿಲಿಗೆ ಅಂಥ ನೋಟೀಸನ್ನು ಕೊಡದೆಯೆ, ಯಾವುದೇ ಗುಡಿಸಲು ಅಥವಾ ಷೆಡ್ಡು ಅಥವಾ ಸಾಲು ಅಥವಾ ಬ್ಲಾಕನ್ನು ಕಟ್ಟಿದರೆ, ಮುನ್ಸಿಪಲ್ ಕೌನ್ಸಿಲು ಅದರ ಒಡೆಯ ಅಥವಾ ಕಟ್ಟಿದವನಿಗೆ ಅಥವಾ ಕಟ್ಟಲಾಗುತ್ತಿರುವ ಅಥವಾ ಅದನ್ನು ಕಟ್ಟಲಾಗಿರುವಂಥ ಭೂಮಿಯ ಒಡೆಯ ಅಥವಾ ಸ್ವಾಧೀನದಾರನಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದಂಥ ಯುಕ್ತ ಕಾಲದೊಳಗೆ ಅದನ್ನು ಕೆಳಗಿಳಿಸಲು ಅಥವಾ ತೆಗೆದು ಹಾಕಲು ಅಥವಾ ಮುನ್ಸಿಪಲ್ ಕೌನ್ಸಿಲು ಯುಕ್ತವೆಂದು ಯೋಚಿಸಬಹುದಾದಂಥ ನೈರ್ಮಲ್ಯ ಅಂಶಗಳನ್ನು ಗಮನದಲ್ಲಿರಿಸಿ ಅದರಲ್ಲಿ ಅಂಥ

ಬದಲಾವಣೆಗಳನ್ನು ಅಥವಾ ಅದಕ್ಕೆ ಸೇರ್ಪಡೆಗಳನ್ನು ಮಾಡಲು ಅವನನ್ನು ಅಗತ್ಯಪಡಿಸಿ, ಬರಹದಲ್ಲಿನ ನೋಟೀಸನ್ನು ಕೊಡಬಹುದು.

**192. ಗುಡಿಸಲುಗಳ ಮೇಲ್ವಾಟು.–** (1) (ಕ) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರರ ಅಭಿಪ್ರಾಯದಲ್ಲಿ, ವಾಸಗೃಹಗಳಾಗಿಯಾಗಲಿ ಅಥವಾ ಲಾಯಗಳಾಗಿಯೇ ಆಗಲಿ ಅಥವಾ ಇತರ ಯಾವುದೇ ಉದ್ದೇಶಗಳಿಗೇ ಆಗಲಿ ಉಪಯೋಗಿಸಿದ ಮತ್ತು ಈ ಅಧಿನಿಯಮವು ಜಾರಿಗೆ ಬಂದ ಕಾಲದಲ್ಲಿ ಅಸ್ತಿತ್ವದಲ್ಲಿದ್ದುದೇ ಆಗಿರಲಿ ಅಥವಾ ಆ ತರುವಾಯ, ಕಟ್ಟಿದವುಗಳೇ ಆದ ಯಾವುದೇ ಗುಡಿಸಲುಗಳು ಅಥವಾ ಷೆಡ್ಡುಗಳು;–

(i) ವಾಯು ಸಂಚಾರವು ಸಾಕಷ್ಟಿಲ್ಲದಿರುವ ಅಥವಾ ಅಂಥ ಗುಡಿಸಲುಗಳು ಅಥವಾ ಷೆಡ್ಡುಗಳನ್ನು ಒಟ್ಟಾಗಿ ದಟ್ಟಗೊಳಿಸಿರುವಂಥ ರೀತಿಯ; ಅಥವಾ

(ii) ಮೇಲ್ವಾಯ ಅಥವಾ ಸಾಕಷ್ಟು ಮೇಲ್ವಾಯ ಅಥವಾ ಸಾಕಷ್ಟು ಚರಂಡಿ ವ್ಯವಸ್ಥೆಯು ಇಲ್ಲದಿರುವ; ಅಥವಾ

(iii) ನಿರ್ಮಲೀಕರಣ ಕಾರ್ಯ ಸಾಧ್ಯವಿಲ್ಲದಿರುವ ಕಾರಣದಿಂದಾಗಿ

–ನೆರೆಹೊರೆಯ ನಿವಾಸಿಗಳಿಗೆ ರೋಗದ ಅಪಾಯವಿದ್ದರೆ, ಅವನು, ಆ ಒಡೆಯ ಅಥವಾ ಅದರ ಸ್ವಾಧೀನದಾರನನ್ನು, ಅಥವಾ ಅಂಥ ಗುಡಿಸಲು ಅಥವಾ ಷೆಡ್ಡನ್ನು ಕಟ್ಟಿರುವಂಥ ಭೂಮಿಯ ಒಡೆಯನನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಆ ಉದ್ದೇಶಕ್ಕಾಗಿ ನಿಗದಿಪಡಿಸಬಹುದಾದಂಥ ಯುಕ್ತಕಾಲದೊಳಗೆ, ಅಂಥ ಗುಡಿಸಲು ಅಥವಾ ಷೆಡ್ಡನ್ನು ಕೆಳಗಿಳಿಸಲು ಮತ್ತು ತೆಗೆದುಹಾಕಲು ಅಥವಾ ಅಂಥ ಅಪಾಯವನ್ನು ತಪ್ಪಿಸುವುದಕ್ಕಾಗಿ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಅವಶ್ಯವೆಂದು ಭಾವಿಸಬಹುದಾದಂಥ ಕಾರ್ಯಾಚರಣೆಗಳನ್ನು ನಿರ್ವಹಿಸಲು ಅಗತ್ಯಪಡಿಸಿ, ಅಂಥ ಪ್ರತಿಯೊಂದು ಗುಡಿಸಲು ಅಥವಾ ಷೆಡ್ಡಿನ ಯಾವುದೇ ಎದ್ದುಕಾಣುವ ಭಾಗಕ್ಕೆ ನೋಟೀಸನ್ನು ಅಂಟಿಸುವಂತೆ ಮಾಡತಕ್ಕದ್ದು.

(ಖ) (ಕ) ಖಂಡದ ಮೇರೆಗೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿಗೆ ಅಂಥ ಆದೇಶವನ್ನು ರದ್ದುಪಡಿಸಲು, ತಿದ್ದುಪಡಿ ಮಾಡಲು ಅಥವಾ ಮನರೀಕ್ಷಿಸಲು ಅರ್ಜಿ ಸಲ್ಲಿಸಬಹುದು ಮತ್ತು ಮುನ್ಸಿಪಲ್ ಕೌನ್ಸಿಲು ಅಂಥ ಅರ್ಜಿಯ ಮೇಲೆ ಆ ಆದೇಶವನ್ನು ರದ್ದುಪಡಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಅನ್ಯಥಾ ಮನರೀಕ್ಷಿಸಬಹುದು.

(2) ಅಂಥ ಯಾರೇ ಒಡೆಯ ಅಥವಾ ಸ್ವಾಧೀನದಾರನು ಅಂಥ ಗುಡಿಸಲು ಅಥವಾ ಷೆಡ್ಡುಗಳನ್ನು ಕೆಳಗಿಳಿಸಲು ಮತ್ತು ತೆಗೆದುಹಾಕಲು ಅಥವಾ ಗೊತ್ತುಪಡಿಸಿದ ಕಾಲದೊಳಗೆ ಅಂಥ ಕಾರ್ಯಾಚರಣೆಗಳನ್ನು ನಿರ್ವಹಿಸಲು ನಿರಾಕರಿಸಿದ ಅಥವಾ ಉಪೇಕ್ಷಿಸಿದ ಸಂದರ್ಭದಲ್ಲಿ ಮುನ್ಸಿಪಲ್ ಕಮೀಷನರ್ ಅಥವಾ ಚೀಫ್ ಆಫೀಸರನು, ಸದರಿ ಗುಡಿಸಲುಗಳು ಅಥವಾ ಷೆಡ್ಡುಗಳನ್ನು ಕೆಳಗಿಳಿಸುವಂತೆ ಅಥವಾ ಅಂಥ ಗುಡಿಸಲುಗಳ ಅಥವಾ ಷೆಡ್ಡುಗಳಿಗೆ ಸಂಬಂಧಿಸಿದಂತೆ ಅಂಥ ಅಪಾಯವನ್ನು ತಡೆಗಟ್ಟಲು ತಾನು ಅವಶ್ಯವೆಂದು ಭಾವಿಸಬಹುದಾದಂಥ ಕಾರ್ಯಾಚರಣೆಯನ್ನು ನೆರವೇರಿಸುವಂತೆ ಮಾಡಬಹುದು.

(3) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಅಂಥ ಗುಡಿಸಲು ಅಥವಾ ಷೆಡ್ಡುಗಳನ್ನು ಕೆಡವಿ ಹಾಕಿದರೆ, ಪ್ರತಿಯೊಂದು ಗುಡಿಸಲು ಅಥವಾ ಷೆಡ್ಡಿನ ಸಾಮಗ್ರಿಗಳನ್ನು ಅಂಥ ಮಾರಾಟವನ್ನು ಮಾಡಬಹುದಾದಲ್ಲಿ, ಪ್ರತ್ಯೇಕವಾಗಿ ಮಾರಾಟ ಮಾಡುವಂತೆ ಮಾಡಿಸತಕ್ಕದ್ದು ಮತ್ತು ಎಲ್ಲ

ವೆಚ್ಚಗಳನ್ನು ಕಳೆದ ತರುವಾಯದ ಉತ್ಪತ್ತಿಗಳನ್ನು ಗುಡಿಸಲು ಅಥವಾ ಷೆಡ್ಡಿನ ಒಡೆಯನಿಗೆ ಸಂದಾಯ ಮಾಡತಕ್ಕದ್ದು ಅಥವಾ ಒಡೆಯನು ಗೊತ್ತಿಲ್ಲದಿದ್ದರೆ ಅಥವಾ ಸ್ವಾಮ್ಯವು ವಿವಾದದಲ್ಲಿದ್ದರೆ, ಅದರಲ್ಲಿ ಹಿತಾಸಕ್ತಿ ಹೊಂದಿದ ವ್ಯಕ್ತಿಯು ಅದರ ಸಂದಾಯಕ್ಕಾಗಿ ಸಕ್ಷಮ ನ್ಯಾಯಾಲಯದ ಆದೇಶವನ್ನು ಪಡೆಯುವವರೆಗೆ, ಮುನ್ಸಿಪಲ್ ಕೌನ್ಸಿಲು ಅದನ್ನು ಠೇವಣಿಯಾಗಿ ಇಟ್ಟುಕೊಂಡಿರತಕ್ಕದ್ದು:

ಪರಂತು, ಯಾವ ಭೂಮಿಯ ಮೇಲೆ ಅವು ಇರುವವೋ ಆ ಭೂಮಿಯು ಪ್ರಥಮತಃ ಪೌರಸಭೆಯ ಭಾಗದ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಯಾವುವೇ ಗುಡಿಸಲುಗಳು ಅಥವಾ ಷೆಡ್ಡುಗಳನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನ ಆದೇಶದ ಮೂಲಕ ಅಥವಾ ಅವನ ನೋಟೀಸಿನ ಅನುಸರಣೆಯಲ್ಲಿ ಈ ಪ್ರಕರಣದ ಮೇರೆಗೆ ಕೆಡವಿಹಾಕುವಲ್ಲಿ ಅದರ ಒಡೆಯ ಅಥವಾ ಒಡೆಯರಿಗೆ ನಷ್ಟ ಪರಿಹಾರವನ್ನು ಇನ್ನಷ್ಟು ಕೊಡತಕ್ಕದ್ದು ಮತ್ತು ವಿವಾದವಿದ್ದಲ್ಲಿ, 268ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಅದರ ಮೊಬಲಗನ್ನು ಸುನಿಶ್ಚಿತಗೊಳಿಸತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

### ಚರಂಡಿ ವ್ಯವಸ್ಥೆ, ನೀರು ಸರಬರಾಜು ಗೃಹಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ

**193. ಚರಂಡಿಗಳು ಇತ್ಯಾದಿಗಳ ಮೇಲೆ ಪೌರಸಭೆಯ ನಿಯಂತ್ರಣ.–** ಪೌರಸಭೆಯೊಳಗಿರುವ ಎಲ್ಲ ಗ್ರಾಮಸಾರ ಚರಂಡಿಗಳು, ಶೌಚಗೃಹಗಳು, ಮನೆಗಳು ಮೋರಿಗಳು ಮತ್ತು ರೊಚ್ಚುಗುಂಡಿಗಳು ಮುನ್ಸಿಪಲ್ ಸಮೀಕ್ಷೆಗೆ ಮತ್ತು ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

(2) ಸಾರ್ವಜನಿಕವಾದುವೇ ಆಗಲಿ ಅಥವಾ ಖಾಸಗಿಯವೇ ಆಗಿರಲಿ ಎಲ್ಲ ಮುಚ್ಚಿರುವ ಗ್ರಾಮಸಾರ ಚರಂಡಿಗಳು ಮತ್ತು ಚರಂಡಿಗಳು, ಎಲ್ಲ ರೊಚ್ಚುಗುಂಡಿಗಳಿಗೆ, ಸರಿಯಾದ ದುರ್ವಾಯು ತಡೆ, ಅಥವಾ ಇತರ ಮುಚ್ಚಳಗಳನ್ನು ಅಥವಾ ವಾಯು ಸಂಚಾರದ ಸಾಧನಗಳನ್ನು ಮುನ್ಸಿಪಲ್ ಕೌನ್ಸಿಲು ಅಥವಾ ಯಾರಿಗೆ ಅವು ಪ್ರತ್ಯೇಕವಾಗಿ ಸೇರಿರುವವೋ ಆ ಇತರ ವ್ಯಕ್ತಿಯು ಒದಗಿಸತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲು ಬರಹದಲ್ಲಿನ ನೋಟೀಸಿನ ಮೂಲಕ, ಯಾವುದೇ ಅಂಥ ಮುಚ್ಚಿದ ಗ್ರಾಮಸಾರ ಚರಂಡಿಗಳು ಅಥವಾ ರೊಚ್ಚುಗುಂಡಿಯ ಒಡೆಯನನ್ನು ತದನುಸಾರವಾಗಿ ವ್ಯವಸ್ಥೆ ಮಾಡಲು ಕೇಳಬಹುದು.

**194. ಚರಂಡಿಗಳನ್ನು ಮಾಡುವುದಕ್ಕಾಗಿ ಅಧಿಕಾರಗಳು.–** (1) ಯಾವುದೇ ಚರಂಡಿ ವ್ಯವಸ್ಥೆಯ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕಾಗಿ ಯಾವುದೇ ಚರಂಡಿ, ಗ್ರಾಮಸಾರ ಚರಂಡಿ, ನಳಿಕೆ, ಸುರಂಗಮಾರ್ಗ, ಅಡಿಗಾಲುವೆ, ಕೊಳವೆ ಅಥವಾ ಜಲಮಾರ್ಗವನ್ನು ಯಾವುದೇ ಬೀದಿ ಅಥವಾ ಬೀದಿಗಾಗಿ ರೂಪಿಸಿದ ಅಥವಾ ಅದಕ್ಕಾಗಿ ಉದ್ದೇಶಿಸಿದ ಯಾವುದೇ ಸ್ಥಳದ ಮೂಲಕ ಅಡ್ಡಲಾಗಿ ಅಥವಾ ಕೆಳಗೆ ಅಥವಾ ಯಾವುದೇ ಬೀದಿಯ ಕೆಳಗೆ ಇರಬಹುದಾದಂಥ ಯಾವುದೇ ನೆಲಮನೆ ಅಥವಾ ನೆಲಮಾಳಿಗೆಯ ಕೆಳಗೆ ಮತ್ತು ಪೌರಸಭೆಯೊಳಗಿನ ಯಾವುದೇ ಭೂಮಿಯೊಳಕ್ಕೆ, ಮೂಲಕ ಅಥವಾ ಕೆಳಗೆ ಅದರ ಒಡೆಯ ಅಥವಾ ಸ್ವಾಧೀನದಾರನಿಗೆ ಬರಹದಲ್ಲಿನ ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಒಯ್ಯುವುದು ಮುನ್ಸಿಪಲ್ ಕೌನ್ಸಿಲಿಗೆ ಕಾನೂನು ಸಮ್ಮತವಾಗಿರತಕ್ಕದ್ದು; ಮತ್ತು

(2) ಮುನ್ಸಿಪಲ್ ಕೌನ್ಸಿಲು ಅಥವಾ ಅಂಥ ಉದ್ದೇಶಕ್ಕಾಗಿ ಅದು ನೇಮಕ ಮಾಡಿದ ಯಾರೇ ಅಧಿಕಾರಿಯು ಯಾವ ಭೂಮಿಯಲ್ಲಿ ಮುನ್ಸಿಪಲ್ ಕೌನ್ಸಿಲುಗಳಲ್ಲಿ ನಿಹಿತವಾಗಿರುವ ಯಾವುದೇ ಚರಂಡಿಯನ್ನು ಈಗಾಗಲೇ ಕಟ್ಟಲಾಗಿದೆಯೋ ಆ ಯಾವುದೇ ಭೂಮಿಯ ಮೇಲೆ ಪ್ರವೇಶಿಸಬಹುದು ಅಥವಾ ಅದರಲ್ಲಿ ಅಸ್ತಿತ್ವದಲ್ಲಿರುವ ಚರಂಡಿಯ ಬದಲಾಗಿ, ಯಾವುದೇ ಹೊಸ ಚರಂಡಿಯನ್ನು ಕಟ್ಟಬಹುದು ಅಥವಾ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರುವ ಯಾವುದೇ ಚರಂಡಿಯನ್ನು ದುರಸ್ತಿಗೊಳಿಸಬಹುದು ಅಥವಾ ಬದಲಾಯಿಸಬಹುದು.

(3) ಈ ಪ್ರಕರಣದ ಮೇರೆಗೆ ಯಾವುದೇ ಅಧಿಕಾರವನ್ನು ಚಲಾಯಿಸುವಲ್ಲಿ ಯಾವುದೇ ಅನಗತ್ಯ ಹಾನಿಯನ್ನುಂಟು ಮಾಡತಕ್ಕದ್ದಲ್ಲ. ವಿವಾದದ ಸಂದರ್ಭದಲ್ಲಿ 268ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಸುನಿಶ್ಚಿತಗೊಳಿಸಿಕೊಳ್ಳಬೇಕಾದ ಮತ್ತು ನಿರ್ಧರಿಸಿಕೊಳ್ಳಬೇಕಾದ ನಷ್ಟ ಪರಿಹಾರವನ್ನು ಅಂಥ ಅಧಿಕಾರವನ್ನು ಚಲಾಯಿಸಿದ್ದರಿಂದ ಹಾನಿಗೀಡಾದ ಯಾವುದೇ ವ್ಯಕ್ತಿಗೆ ಮುನ್ಸಿಪಲ್ ಕೌನ್ಸಿಲು ಸಂದಾಯ ಮಾಡತಕ್ಕದ್ದು.

**195. ಮನೆಗಳಿಗೆ ಸಾಕಷ್ಟು ಚರಂಡಿ ವ್ಯವಸ್ಥೆ.–** (1) ಯಾವುದೇ ಕಟ್ಟಡ ಅಥವಾ ಭೂಮಿಗೆ ಕಡಿಮೆ ಚರಂಡಿ ವ್ಯವಸ್ಥೆ ಇದ್ದರೆ ಅಥವಾ ಮುನ್ಸಿಪಲ್ ಕೌನ್ಸಿಲಿಗೆ ಸಮಾಧಾನವಾಗುವಂತೆ ಚರಂಡಿ ವ್ಯವಸ್ಥೆಯಿಲ್ಲದಿದ್ದರೆ, ಮುನ್ಸಿಪಲ್ ಕೌನ್ಸಿಲು ಬರಹದಲ್ಲಿ ನೋಟೀಸಿನ ಮೂಲಕ,–

(ಕ) ಯಾವುದೇ ಚರಂಡಿ ಅಥವಾ ಗ್ರಾಮಸಾರ ಚರಂಡಿ, ಸೂಕ್ತ ಚರಂಡಿ ಅಥವಾ ಗ್ರಾಮಸಾರ ಚರಂಡಿಯು, ಅಂಥ ಕಟ್ಟಡ ಅಥವಾ ಭೂಮಿಯ ಯಾವುದೇ ಭಾಗಕ್ಕೆ ಐವತ್ತು ಅಡಿಗಳೊಳಗೆ ಇದ್ದರೆ ಅದರೊಳಕ್ಕೆ; ಅಥವಾ

(ಖ) ಅಂಥ ಒಡೆಯನು ಒದಗಿಸಬೇಕಾದ ಮುಚ್ಚಿದ ರೊಚ್ಚುಗುಂಡಿಯೊಳಕ್ಕೆ;

–ಅಂಥ ಕಟ್ಟಡ ಅಥವಾ ಭೂಮಿಯ ಚರಂಡಿ ವ್ಯವಸ್ಥೆಗಾಗಿ ಅವಶ್ಯಕವೆಂದು ಅದು ಯೋಚಿಸುವಂಥ ಗಾತ್ರ ಮತ್ತು ಸಾಮಗ್ರಿಗಳ, ಅಂಥ ಮಟ್ಟದಲ್ಲಿ ಮತ್ತು ಅಂಥ ಇಳಿವುನೊಂದಿಗೆ, ಚರಂಡಿ ಅಥವಾ ತೊಳಿಕೆಯನ್ನು ಅಂಥ ಕಟ್ಟಡ ಅಥವಾ ಭೂಮಿಯಿಂದ ನಿರ್ಮಿಸಲು ಅಥವಾ ಹಾಕಲು ಒಡೆಯನನ್ನು ಕೇಳಬಹುದು.

(2) ಯಾವುದೇ ಕಟ್ಟಡವನ್ನು ಹೊಸದಾಗಿ ನಿರ್ಮಿಸಲು ಅಥವಾ ಯಾವುದೇ ಕಟ್ಟಡವನ್ನು ಪುನರ್ನಿರ್ಮಿಸಲು ಅಥವಾ ಹೊಸದಾಗಿ ನಿರ್ಮಿಸಿದ ಅಥವಾ ಪುನರ್ನಿರ್ಮಿಸಿದ ಯಾವುದೇ ಕಟ್ಟಡವನ್ನು ಸ್ವಾಧೀನ ಹೊಂದಲು,–

(ಕ) ಅಂಥ ಕಟ್ಟಡದ ಪರಿಣಾಮಕಾರಿ ಚರಂಡಿ ವ್ಯವಸ್ಥೆಗಾಗಿ ಮುನ್ಸಿಪಲ್ ಕೌನ್ಸಿಲಿಗೆ ಅವಶ್ಯವೆಂದು ಕಂಡು ಬರುವಂಥ ಗಾತ್ರದ, ಸಾಮಗ್ರಿಗಳ ಮತ್ತು ವಿವರಣೆಯ, ಅಂಥ ಮಟ್ಟದಲ್ಲಿ ಮತ್ತು ಅಂಥ ಇಳಿವುನೊಂದಿಗೆ ಚರಂಡಿಯನ್ನು ನಿರ್ಮಿಸಿದ ಹೊರತು ಮತ್ತು ಅಲ್ಲಿಯವರೆಗೆ; ಅಥವಾ

(ಖ) ಅಂಥ ಕಟ್ಟಡದಲ್ಲಿ ಮತ್ತು ಅದಕ್ಕೆ ಲಗತ್ತಾದ ಭೂಮಿಯಲ್ಲಿ ಯಾವುದೇ ಸ್ಥಾಪನೆಯಾಗಿ, ಸದರಿ ಕಟ್ಟಡ ಮತ್ತು ಸದರಿ ಭೂಮಿಯಿಂದ ಹರಿದುಬರುವುದನ್ನು, ಸಂಗ್ರಹಿಸುವ ಮತ್ತು ಸ್ವೀಕರಿಸುವ ಮತ್ತು ಅದನ್ನು ಸದರಿ ಕಟ್ಟಡ ಮತ್ತು ಭೂಮಿಯಾಚೆ ಸಾಗಿಸುವ ಮತ್ತು ಸದರಿ ಕಟ್ಟಡದಿಂದ ಚರಂಡಿ ನೀರು ಹರಿದು ಬರುವುದನ್ನು ಪರಿಣಾಮಕಾರಿಯಾಗಿ ಹೊರಹಾಕುವ ಉದ್ದೇಶಗಳಿಗಾಗಿ ಮುನ್ಸಿಪಲ್ ಕೌನ್ಸಿಲಿಗೆ ಅವಶ್ಯವೆಂದು ತೋರಬಹುದಾದಂಥ ಎಲ್ಲ ಉಪಕರಣಗಳು ಮತ್ತು ಜೋಡಣೆಗಳನ್ನು ಮತ್ತು ಅವುಗಳಿಗೆ ಸಂಬಂಧಪಟ್ಟ ಪ್ರತಿಯೊಂದು ಜೋಡಣೆಯನ್ನು ಒದಗಿಸಿದ ಹೊರತು ಮತ್ತು ಅಲ್ಲಿಯವರೆಗೆ ಕಾನೂನು ಸಮ್ಮತವಾಗಿರತಕ್ಕದ್ದಲ್ಲ.

(3) ಹಿಂದೆ ಹೇಳಿದಂತೆ ನಿರ್ಮಿಸಬೇಕಾಗಿರುವ ಚರಂಡಿಯನ್ನು ಪೌರಸಭಾ ಚರಂಡಿಯೊಳಕ್ಕೆ ಅಥವಾ ಅಂಥ ಕಟ್ಟಡದಿಂದ ಐವತ್ತು ಅಡಿಗಳಿಗೆ ಮೀರದ ಅಂತರದಲ್ಲಿರುವ ಚರಂಡಿ ನೀರನ್ನು ವಿಸರ್ಜಿಸಲು ಕಾನೂನು ಸಮ್ಮತವಾಗಿ ಪ್ರತ್ಯೇಕವಾಗಿರಿಸಿದ ಯಾವುದೇ ಸ್ಥಳದೊಳಕ್ಕೆ ಹರಿಯತಕ್ಕದ್ದು; ಆದರೆ ಅಂತರದೊಳಗೆ ಅಂಥ ಚರಂಡಿ ಅಥವಾ ಸ್ಥಳವು ಇಲ್ಲದಿದ್ದರೆ, ಆಗ ಅಂಥ ಚರಂಡಿಯು ಮುನ್ಸಿಪಲ್ ಕೌನ್ಸಿಲು ನಿರ್ದೇಶಿಸುವಂಥ ರೊಚ್ಚು ಗುಂಡಿಯೊಳಕ್ಕೆ ಹರಿದು ಹೋಗತಕ್ಕದ್ದು.

**196. ಪೌರಸಭಾ ಚರಂಡಿಗಳೊಳಕ್ಕೆ ಹರಿಯಬಿಡಲು ಕಟ್ಟಡಗಳ ಅಥವಾ ಭೂಮಿಗಳ ಒಡೆಯರ ಮತ್ತು ಅಧಿಭೋಗದಾರರ ಅಧಿಕಾರ.–** ಪೌರಸಭೆಯೊಳಗಿನ ಯಾವುದೇ ಕಟ್ಟಡ ಅಥವಾ ಭೂಮಿಯ ಒಡೆಯ ಅಥವಾ ಅಧಿಭೋಗದಾರನು ತನ್ನ ಚರಂಡಿಯನ್ನು ಮುನ್ಸಿಪಲ್ ಕೌನ್ಸಿಲಿನ ಗ್ರಾಮಸಾರ ಚರಂಡಿಯೊಳಕ್ಕೆ ಹರಿಸಲು ಹಕ್ಕುಳ್ಳವನಾಗಿರತಕ್ಕದ್ದು: ಪರಂತು, ಅವನು ಮೊದಲು ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿನ ಅನುಮತಿಯನ್ನು ಪಡೆಯತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರದ ಚರಂಡಿಗಳು ಮತ್ತು ಹಾಗೆ ನಿಹಿತವಾಗಿರುವಂಥ ಚರಂಡಿಗಳ ನಡುವೆ, ಸಂಪರ್ಕಗಳನ್ನು ಒದಗಿಸಬೇಕಾದಂಥ ವಿಧಾನ ಮತ್ತು ಯಾವ ಅಧೀಕ್ಷಣೆಯ ಬಗ್ಗೆ ಮುನ್ಸಿಪಲ್ ಕೌನ್ಸಿಲು ನಿಯಮಿಸಬಹುದಾದಂಥ ಷರತ್ತುಗಳನ್ನು ಅವನು ಪಾಲಿಸತಕ್ಕದ್ದು.

**197. ಇತರ ವ್ಯಕ್ತಿಗಳಿಗೆ ಸೇರಿದ ಭೂಮಿಯ ಮೂಲಕ ಅಥವಾ ಚರಂಡಿಯನ್ನು ಒಯ್ಯಲು ಹಕ್ಕು.–** (1) ಯಾವುದೇ ಕಟ್ಟಡ ಅಥವಾ ಭೂಮಿಯ ಒಡೆಯ ಅಥವಾ ಅಧಿಭೋಗದಾರನು ಬೇರೆ ಇತರ ವ್ಯಕ್ತಿಗೆ ಸೇರಿದ ಅವನ ಸ್ವಾಧೀನದಲ್ಲಿರುವ ಅಥವಾ ಅವನ ಉಪಯೋಗದಲ್ಲಿರುವ ಭೂಮಿಯ ಮೂಲಕ ನಿರ್ಮಿಸಬೇಕಾದ ಚರಂಡಿಯ ಮೂಲಕ ಅಥವಾ ಚರಂಡಿಯೊಂದಿಗೆ ಸಂಪರ್ಕಿಸಬೇಕಾದ ಯಾವುದೇ ಪೌರಸಭೆಯ ಚರಂಡಿಯೊಂದಿಗೆ ಸೇರಿಸಲು ಇಚ್ಛಿಸಿದರೆ, ಅವನು ಆ ಬಗ್ಗೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನಿಗೆ ಬರಹದಲ್ಲಿ ಅರ್ಜಿಯನ್ನು ಮಾಡಿಕೊಳ್ಳಬಹುದು.

(2) ಆ ತರುವಾಯ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಅಂಥ ಇತರ ವ್ಯಕ್ತಿಗೆ ಅಂಥ ಅರ್ಜಿಯ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ತಿಳಿಸಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಯಾವುದೇ ಆಕ್ಷೇಪಣೆಯನ್ನು ಎತ್ತದಿದ್ದರೆ ಅಥವಾ ಎತ್ತಿದಂಥ ಯಾವುದೇ ಆಕ್ಷೇಪಣೆಯು ಅವನ ಅಭಿಪ್ರಾಯದಲ್ಲಿ ಸಾಕಷ್ಟಾಗಿರದಿದ್ದರೆ, ಬಾಡಿಗೆ ಅಥವಾ ನಷ್ಟ ಪರಿಹಾರದ ಸಂದಾಯದ ಬಗ್ಗೆ ಮತ್ತು ಅವನಿಗೆ ಸಾಕಷ್ಟು ಮತ್ತು ನ್ಯಾಯ ಸಮ್ಮತವೆಂದು ತೋರಬಹುದಾದಂತೆ ಸದರಿ ಚರಂಡಿಗಳ ನಿರ್ವಹಣೆ, ದುರಸ್ತು, ನೀರು ಹರಿಸಿ ತೊಳೆಯುವಿಕೆ, ಬರಿದು ಮಾಡುವಿಕೆ ಮತ್ತು ಹರಿಯುವಿಕೆಯ ಬಗ್ಗೆ ಪಕ್ಷಕಾರರು ತಮ್ಮ ತಮ್ಮ ಜವಾಬ್ದಾರಿಗಳ ಬಗ್ಗೆ, ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳ ಮೇಲೆ ಸಂದರ್ಭಾನುಸಾರ, ಸದರಿ ಭೂಮಿಯೊಳಕ್ಕೆ ಮೂಲಕ, ಅಥವಾ ಅದರ ಕೆಳಗೆ ಅಥವಾ ಸದರಿ ಚರಂಡಿಯೊಳಕ್ಕೆ ಅವನ ಚರಂಡಿಯನ್ನು ಒಯ್ಯಲು ಬರಹದಲ್ಲಿನ ಆದೇಶದ ಮೂಲಕ ಅರ್ಜಿದಾರರನ್ನು ಅಧಿಕೃತಗೊಳಿಸಬಹುದು.

(3) ಭೂಮಿ ಅಥವಾ ಚರಂಡಿಯ ಒಡೆಯನಿಗೆ, ಅಧಿಭೋಗದಾರನಿಗೆ ಅಥವಾ ಉಪಯೋಗಿಸುವವನಿಗೆ ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿದ ನಷ್ಟ ಪರಿಹಾರ ಅಥವಾ ಬಾಡಿಗೆ ಯಾವುದಾದರೂ ಇದ್ದರೆ ಅದನ್ನು ಕೊಟ್ಟ ಅಥವಾ ಕೊಡ ಮಾಡಿದ ಮತ್ತು ಸದರಿ ಆದೇಶದ ಷರತ್ತುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಅನ್ಯಥಾ ಈಡೇರಿಸಿದ ತರುವಾಯ ಮತ್ತು ಸದರಿ ಒಡೆಯ, ಅಧಿಭೋಗದಾರ ಅಥವಾ ಉಪಯೋಗಿಸುವವನಿಗೆ ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಯಾವುದೇ ಕಾಲದಲ್ಲಿ ಸಹಾಯಕರು ಮತ್ತು ಕೆಲಸಗಾರರೊಂದಿಗೆ ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಭೂಮಿಯ ಮೇಲೆ ಪ್ರವೇಶಿಸಲು ಬರಹದಲ್ಲಿ ಯುಕ್ತ ನೋಟೀಸನ್ನು ಕೊಟ್ಟ ತರುವಾಯ ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು,–

(ಕ) ಸದರಿ ಆದೇಶದ ಮೂಲಕ ಅಧಿಕೃತಗೊಳಿಸಬಹುದಾದಂತೆ, ಚರಂಡಿಯ ನಿರ್ಮಾಣ ಅಥವಾ ಸಂಪರ್ಕಕ್ಕಾಗಿ;

(ಖ) ಕಾಲಕಾಲಕ್ಕೆ ಅಗತ್ಯವಾಗಬಹುದಾದಂತೆ ಅದರ ನವೀಕರಣ, ದುರಸ್ತಿ ಅಥವಾ ಬದಲಾವಣೆಗಾಗಿ;

(ಗ) ಸದರಿ ಚರಂಡಿ ಅಥವಾ ಅದರ ಯಾವುದೇ ಭಾಗದ ನಿರ್ವಹಣೆ, ದುರಸ್ತಿ, ನೀರು ಹರಿಸಿ ತೊಳೆಯುವುದು, ಸ್ವಚ್ಛಪಡಿಸುವುದು ಅಥವಾ ಹರಿಯುವಿಕೆಯ ಬಗ್ಗೆ ಆದೇಶದ ನಿಬಂಧನೆಗಳ ಮೇರೆಗೆ ಅವನಿಗೆ ವಹಿಸಲಾದ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕಾಗಿ

–ಅಗತ್ಯವಾಗಬಹುದಾದಂಥ ಎಲ್ಲ ಕೆಲಸಗಳನ್ನು ಮಾಡಲು, ಅಂಥ ಪ್ರತಿಯೊಂದು ಆದೇಶವು, ಯಾರ ಪರವಾಗಿ ಅದನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಥವಾ ಈ ಉದ್ದೇಶಕ್ಕಾಗಿ ಅವನಿಂದ ನಿಯೋಜಿತನಾದ ಯಾರೇ ಏಜೆಂಟ್ ಅಥವಾ ಇತರ ವ್ಯಕ್ತಿಗೆ ಸಂಪೂರ್ಣ ಅಧಿಕಾರವಾಗಿರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಯಾವುದೇ ಕೆಲಸವನ್ನು ನಿರ್ವಹಿಸುವಲ್ಲಿ ಸಾಧ್ಯವಾದಷ್ಟು ಕಡಿಮೆ ಹಾನಿಯನ್ನುಂಟು ಮಾಡತಕ್ಕದ್ದು ಮತ್ತು ಯಾವ ಕಟ್ಟಡಗಳ ಅಥವಾ ಭೂಮಿಗಳ ಪ್ರಯೋಜನಕ್ಕಾಗಿ ಆ ಕೆಲಸವನ್ನು ಮಾಡಲಾಗಿದೆಯೋ ಆ ಕಟ್ಟಡಗಳ ಅಥವಾ ಭೂಮಿಗಳ ಒಡೆಯ ಅಥವಾ ಅಧಿಭೋಗದಾರನು,–

(ಕ) ಕಾರ್ಯಸಾಧ್ಯವಾಗುವಷ್ಟು ಕಡಿಮೆ ವಿಳಂಬದಲ್ಲಿ ಆ ಕೆಲಸಗಳನ್ನು;

–ನಿರ್ವಹಿಸುವಂತೆ ಮಾಡತಕ್ಕದ್ದು.

(ಖ) ಸದರಿ ಕೆಲಸಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ತೆರೆದ, ಮುರಿದ ಅಥವಾ ತೆಗೆದುಹಾಕಿದ ನೆಲ ಅಥವಾ ಕಟ್ಟಡದ ಅಥವಾ ಇತರ ರಚನೆಯ ಯಾವುದೇ ಭಾಗವನ್ನು ತನ್ನ ಸ್ವಂತ ಖರ್ಚಿನಲ್ಲಿ ಮತ್ತು ಕಾರ್ಯ ಸಾಧ್ಯವಾದಷ್ಟು ಕಡಿಮೆ ವಿಳಂಬದಲ್ಲಿ ಭರ್ತಿ ಮಾಡತಕ್ಕದ್ದು, ಪುನಃ ಸ್ಥಾಪಿಸತಕ್ಕದ್ದು ಮತ್ತು ಸರಿಪಡಿಸತಕ್ಕದ್ದು.

(ಗ) ಸದರಿ ಕೆಲಸದ ನಿರ್ವಹಣೆಯಿಂದಾಗಿ ಹಾನಿಗೆ ಅನುಭವಿಸಿದ ಯಾರೇ ವ್ಯಕ್ತಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

**198. ಚರಂಡಿಯನ್ನು ಒಯ್ಯಲಾಗಿರುವಂಥ ಭೂಮಿಯ ಒಡೆಯನಿಗೆ, ಅದರ ಮೇಲೆ ತರುವಾಯ ಕಟ್ಟುವುದರ ಬಗೆಗಿನ ಇರುವ ಹಕ್ಕುಗಳು.–** 197ನೇ ಪ್ರಕರಣದ ಮೇರೆಗೆ ಯಾವ ಭೂಮಿಯ ಮೂಲಕ ಅಥವಾ ಅದರ ಕೆಳಗೆ ಅಂಥ ಭೂಮಿಯ ಮೇಲೆ ಕಟ್ಟಡವನ್ನು ಕಟ್ಟಿಲ್ಲದಿದ್ದಾಗ ಚರಂಡಿಯನ್ನು ಒಯ್ಯಲಾಗಿದೆಯೋ ಆ ಯಾವುದೇ ಭೂಮಿಯ ಒಡೆಯನು, ತರುವಾಯದ ಯಾವುದೇ ಕಾಲದಲ್ಲಿ ಅದರ ಮೇಲೆ ಕಟ್ಟಡವನ್ನು ನಿರ್ಮಿಸಲು ಇಚ್ಛಿಸಿದರೆ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಸ್ಥಾಯೀ ಸಮಿತಿಯ ನಿಯಂತ್ರಣಕ್ಕೊಳಪಟ್ಟು ಅಂಥ ಕಟ್ಟಡದ ನಿರ್ಮಾಣಕ್ಕೆ ಮಂಜೂರಾತಿಯನ್ನು ಅವನು ಕೊಟ್ಟರೆ, ಯಾವ ಕಟ್ಟಡ ಅಥವಾ ಭೂಮಿಯ ಪ್ರಯೋಜನಕ್ಕಾಗಿ ಅಂಥ ಚರಂಡಿಯನ್ನು ನಿರ್ಮಿಸಲಾಗಿತ್ತೋ ಆ ಕಟ್ಟಡ ಅಥವಾ ಭೂಮಿಯ ಒಡೆಯ ಅಥವಾ ಅಧಿಭೋಗದಾರನನ್ನು, ಅದನ್ನು ಮುಚ್ಚಲು, ತೆಗೆದುಹಾಕಲು ಅಥವಾ ಮಾರ್ಗಪಲ್ಲಟಗೊಳಿಸಲು ಮತ್ತು ಉದ್ದೇಶಿತ ಕಟ್ಟಡದ ನಿರ್ಮಾಣ ಅಥವಾ ಸುರಕ್ಷಿತ ಅನುಭೋಗಕ್ಕೆ ಅವಕಾಶ ಮಾಡಿಕೊಡುವ ದೃಷ್ಟಿಯಿಂದ ಅವನು ಅವಶ್ಯವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಆ ಭೂಮಿಯನ್ನು ಭರ್ತಿ ಮಾಡಲು, ಪುನಃ ಸ್ಥಾಪಿಸಲು ಮತ್ತು ಸರಿಪಡಿಸಲು ಬರಹದಲ್ಲಿನ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

**199. ಕಕ್ಕಸುಗಳು, ಇತ್ಯಾದಿಗಳ ಬಗ್ಗೆ ವ್ಯವಸ್ಥೆ.–** (1) ಯಾವುದೇ ಕಟ್ಟಡ ಅಥವಾ ಭೂಮಿಯಲ್ಲಿ ಅಥವಾ ಅದರ ಮೇಲೆ ಯಾವುದೇ ಕಕ್ಕಸು ಅಥವಾ ರೊಚ್ಚುಗುಂಡಿ ಅಥವಾ ಹೆಚ್ಚುವರಿ ಶೌಚಗೃಹಗಳು ಅಥವಾ ರೊಚ್ಚುಗುಂಡಿಗಳನ್ನು ಒದಗಿಸಬೇಕೆಂದು ಅಥವಾ ಯಾವುದೇ ಕಟ್ಟಡ ಅಥವಾ ಭೂಮಿಯಿಂದ ಅವುಗಳನ್ನು ಸ್ಥಳಾಂತರಿಸಬೇಕೆಂದು ಅಥವಾ ತೆಗೆದುಹಾಕಬೇಕೆಂದು ಅಥವಾ ಶೌಚಗೃಹ ವ್ಯವಸ್ಥೆಯನ್ನು

ಪ್ರಾರಂಭಿಸಲಾಗಿರುವಂಥ ಯಾವುದೇ ಪೌರಸಭೆಯಲ್ಲಿ, ಯಾವುದೇ ಕಟ್ಟಡ ಅಥವಾ ಭೂಮಿಯಲ್ಲಿ ಅಥವಾ ಮೇಲೆ ಅಸ್ತಿತ್ವದಲ್ಲಿರುವ ಕಕ್ಕಸುಗೃಹಗಳಿಗೆ ಬದಲಾಗಿ ಶೌಚಗೃಹಗಳನ್ನು ತಾನು ಒದಗಿಸಬೇಕೆಂದು ಅಥವಾ ಅದರಲ್ಲಿ ಅಥವಾ ಅದರ ಮೇಲೆ ಹೆಚ್ಚುವರಿ ಶೌಚಗೃಹಗಳನ್ನು ಒದಗಿಸತಕ್ಕದ್ದೆಂದು ಮುನ್ಸಿಪಲ್ ಕೌನ್ಸಿಲು ಅಭಿಪ್ರಾಯಪಡುವ ಸಂದರ್ಭದಲ್ಲಿ, ಮುನ್ಸಿಪಲ್ ಕೌನ್ಸಿಲು ಸರಿಯೆಂದು ಭಾವಿಸಬಹುದಾದಂಥ ಕಕ್ಕಸುಗೃಹಗಳು, ರೊಚ್ಚುಗುಂಡಿಗಳು ಅಥವಾ ಶೌಚಗೃಹಗಳನ್ನು ಒದಗಿಸಲು ಕೇಳಬಹುದು.

(2) ಮುನ್ಸಿಪಲ್ ಕೌನ್ಸಿಲು ಇಪ್ಪತ್ತಕ್ಕಿಂತಲೂ ಹೆಚ್ಚು ಸಂಖ್ಯೆಯ ಕೆಲಸಗಾರರನ್ನು ಅಥವಾ ಕಾರ್ಮಿಕರನ್ನು ನಿಯೋಜಿಸಿಕೊಳ್ಳುವ ಅಥವಾ ಯಾವುದೇ ಮಾರುಕಟ್ಟೆ, ಶಾಲೆ ಅಥವಾ ರಂಗಮಂಟಪದ ಅಥವಾ ಸಾರ್ವಜನಿಕರು ಸೇರುವ ಇತರ ಸ್ಥಳದ ಒಡೆತನ ಹೊಂದಿರುವ ಅಥವಾ ಅದನ್ನು ನಿರ್ವಹಿಸುತ್ತಿರುವ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳನ್ನು, ಮುನ್ಸಿಪಲ್ ಕೌನ್ಸಿಲು ನಿರ್ದೇಶಿಸಬಹುದಾದಂಥ ಪಾಯಿಖಾನೆಗಳು ಮತ್ತು ಮೂತ್ರಿಗಳನ್ನು ಒದಗಿಸಲು ಮತ್ತು ಅವುಗಳನ್ನು ಸರಿಯಾದ ಸ್ಥಿತಿಯಲ್ಲಿಡಲು ಮತ್ತು ಪ್ರತಿದಿನವೂ ಸ್ವಚ್ಛಗೊಳಿಸುವಂತೆ ಮಾಡಲು ಬರಹದಲ್ಲಿನ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

(3) ಮುನ್ಸಿಪಲ್ ಕೌನ್ಸಿಲು ಶೌಚಗೃಹ ಅಥವಾ ಮೂತ್ರಿಯು ಇರುವಂಥ ಯಾವುದೇ ಭೂಮಿಯ ಒಡೆಯ ಅಥವಾ ಅಧಿಭೋಗದಾರನನ್ನು ಅಲ್ಲಿ ಓಡಾಡುವ ವ್ಯಕ್ತಿಗಳ ಅಥವಾ ನೆರೆಹೊರೆಯ ವಾಸಿಸುವ ವ್ಯಕ್ತಿಗಳ ದೃಷ್ಟಿಯಿಂದ ಸಾಕಷ್ಟು ಚಾವಣಿ ಮತ್ತು ಗೋಡೆ ಅಥವಾ ಬೇಲಿಯ ಮೂಲಕ ಅಂಥವುಗಳನ್ನು ಮರೆ ಮಾಡಲು ಅಥವಾ ಬೀದಿಯ ಕಡೆಗೆ ತೆರೆಯುವಂಥ ಮತ್ತು ಅದು ಹೇಸಿಗೆಯಾಗಿರುವುದಾಗಿ ಭಾವಿಸುವಂಥ ಯಾವುದೇ ಕಕ್ಕಸಿನ ಬಾಗಿಲು ಅಥವಾ ನೆಲಬಾಗಿಲನ್ನು ಅದು ನಿರ್ದೇಶಿಸಬಹುದಾದಂತೆ ಬದಲಾಯಿಸಲು ಬರಹದಲ್ಲಿನ ನೋಟೀಸನ ಮೂಲಕ ಅಗತ್ಯಪಡಿಸಬಹುದು.

**200. ಕಕ್ಕಸುಗಳು ಇತ್ಯಾದಿಗಳನ್ನು ಬದಲಾಯಿಸುವ, ದುರಸ್ತಿ ಮಾಡುವ ಮತ್ತು ಸರಿಯಾದ ಸ್ಥಿತಿಯಲ್ಲಿಡುವ ಬಗ್ಗೆ ಖರ್ಚು.–** (1) ಪೌರಸಭೆಯೊಳಗಿನ ಎಲ್ಲಾ ಗ್ರಾಮಸಾರ ಚರಂಡಿಗಳು, ಚರಂಡಿ ಕಕ್ಕಸುಗಳು, ಶೌಚಗೃಹಗಳು, ಗೃಹಚರಂಡಿಗಳು ಮತ್ತು ರೊಚ್ಚುಗುಂಡಿಗಳನ್ನು ಮುನ್ಸಿಪಲ್ ಕೌನ್ಸಿಲಿನ ಖರ್ಚಿನಲ್ಲಿ ನಿರ್ಮಿಸಿದ್ದ ಹೊರತು, ಅವುಗಳು ಯಾವುದಕ್ಕೆ ಸೇರಿವೆಯೋ ಅಥವಾ ಅವುಗಳನ್ನು ಯಾವುದರ ಉಪಯೋಗಕ್ಕಾಗಿ ನಿರ್ಮಿಸಲಾಗಿದೆಯೋ ಅಥವಾ ಮುಂದುವರಿಸಲಾಗಿದೆಯೋ ಆ ಭೂಮಿ ಅಥವಾ ಕಟ್ಟಡಗಳ ಒಡೆಯರ ಖರ್ಚು ಮತ್ತು ವೆಚ್ಚಗಳಲ್ಲಿ ಬದಲಾಯಿಸತಕ್ಕದ್ದು, ದುರಸ್ತಿ ಮಾಡತಕ್ಕದ್ದು ಮತ್ತು ಸರಿಯಾದ ಸ್ಥಿತಿಯಲ್ಲಿಡತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲು ಅದು ಸೂಕ್ತವೆಂದು ಯೋಚಿಸುವಂಥ ರೀತಿಯಲ್ಲಿ ಅದನ್ನು ಬದಲಾಯಿಸಲು, ದುರಸ್ತಿ ಮಾಡಲು ಮತ್ತು ಸುಸ್ಥಿತಿಯಲ್ಲಿರಿಸಲು ಅಂಥ ಒಡೆಯನನ್ನು ಬರಹದಲ್ಲಿನ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

(2) ಮುನ್ಸಿಪಲ್ ಕೌನ್ಸಿಲು, ಯಾವುದೇ ಕಕ್ಕಸು ಅಥವಾ ರೊಚ್ಚುಗುಂಡಿಯನ್ನು, ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚೆಯಾಗಲಿ ಅಥವಾ ತರುವಾಯವೇ ಆಗಲಿ ಅದು ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಹೇಸಿಗೆಯಾಗಿದ್ದರೆ, ಅಥವಾ ನಿರ್ಮಲೀಕರಣದ ಉದ್ದೇಶಕ್ಕಾಗಿ ಪ್ರವೇಶ ಸಾಧ್ಯವಿಲ್ಲದಿರುವ ಹಾಗೆ ಅಥವಾ ಸರಿಯಾಗಿ ಸ್ವಚ್ಛಗೊಳಿಸಲು ಅಥವಾ ಸುಸ್ಥಿತಿಯಲ್ಲಿಡಲು ಆಗದ ಹಾಗೆ ಕಟ್ಟಿದರೆ ಬರಹದಲ್ಲಿನ ನೋಟೀಸಿನ ಮೂಲಕ ಒಡೆಯನನ್ನು ಕೆಡವಿ ಹಾಕಲು ಅಥವಾ ಮುಚ್ಚಲು ಅಗತ್ಯಪಡಿಸಬಹುದು.

**201. ಅಸ್ತಿತ್ವದಲ್ಲಿರುವ ಖಾಸಗಿ ಚರಂಡಿಗಳನ್ನು ಮುಚ್ಚಲು ಅಧಿಕಾರ.–** ಪೌರಸಭೆಯೊಳಗಿರುವ ಯಾವುದೇ ಕಟ್ಟಡ ಅಥವಾ ಭೂಮಿಯ ಯಾವುದೇ ರೊಚ್ಚುಗುಂಡಿ ಅಥವಾ ಗ್ರಾಮಸಾರ ಚರಂಡಿಯೊಂದಿಗೆ ಸಂಪರ್ಕವುಳ್ಳ ಚರಂಡಿಯನ್ನು ಹೊಂದಿರುವಾಗ, ಅಂಥ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು, ಅಂಥ ಚರಂಡಿ, ಅಂಥ ಕಟ್ಟಡ ಅಥವಾ ಭೂಮಿಯ ಚರಂಡಿ ವ್ಯವಸ್ಥೆಗೆ ಸಾಕಷ್ಟಾಗಿರಬಹುದಾಗಿದ್ದರೂ, ಮತ್ತು ಅದು

ಅನ್ಯಥಾ ಅನಾಪೇಕ್ಷಣೀಯವಾಗಿರಬಹುದಾಗಿದ್ದರೂ, ಆ ಸ್ಥಳದ ಸಾಮಾನ್ಯ ಗ್ರಾಮ ಚರಂಡಿ ವ್ಯವಸ್ಥೆಗೆ ಅಳವಡಿಸಿಲ್ಲವೆಂದು ಪರ್ಯಾಲೋಚಿಸಿದರೆ, ಸ್ಥಾಯಿ ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಅವು ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾದ ಭೂಮಿಯ ಮೇಲೆ ಇರಲಿ ಅಥವಾ ಇಲ್ಲದಿರಲಿ, ಅಂಥ ಕಟ್ಟಡ ಅಥವಾ ಭೂಮಿಯ ಚರಂಡಿ ವ್ಯವಸ್ಥೆಗಾಗಿ ಸಮಾನ ಪರಿಣಾಮಕಾರಿಯಾದ ಚರಂಡಿ ಅಥವಾ ಚರಂಡಿಗಳನ್ನು ಒದಗಿಸಿದ ಮೇಲೆ ಅಂಥ ಚರಂಡಿ ಮತ್ತು ಅಂಥ ರೊಚ್ಚುಗುಂಡಿ ಅಥವಾ ಗ್ರಾಮಸಾರ ಚರಂಡಿಯನ್ನು ಮುಚ್ಚಬಹುದು ಮತ್ತು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಹಿಂದೆ ಹೇಳಿದ್ದಕ್ಕೆ ಒಳಪಟ್ಟು ಆ ಉದ್ದೇಶಕ್ಕಾಗಿ ಅವಶ್ಯವಾದ ಯಾವುದೇ ಕೆಲಸವನ್ನು ಮಾಡಬಹುದು.

**202. ಅನಧಿಕೃತವಾಗಿ ನಿರ್ಮಿಸಿದ ಪುನರ್ ನಿರ್ಮಿಸಿದ ಅಥವಾ ನಿಲ್ಲಿಸದ ಗ್ರಾಮಸಾರ ಚರಂಡಿಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ.–** ಮುನ್ಸಿಪಲ್ ಕೌನ್ಸಿಲು, ಪೌರಸಭಾ ಪರಿಮಿತಿಗಳೊಳಗಿನ ಯಾವುದೇ ಭೂಮಿಯ ಮೇಲೆ ಯಾವುದೇ ಗ್ರಾಮಸಾರ ಚರಂಡಿ, ಚರಂಡಿ, ಕಕ್ಕಸು, ಮೂತ್ರಿ, ಶೌಚಗೃಹ, ಗೃಹಚರಂಡಿ ಅಥವಾ ರೊಚ್ಚುಗುಂಡಿಯನ್ನು;

(ಕ) ಅಂಥ ಭೂಮಿಯು ಪೌರಸಭೆಯ ಭಾಗವಾದ ತರುವಾಯ; ಮತ್ತು

(ಖ) ಮುನ್ಸಿಪಲ್ ಕೌನ್ಸಿಲಿನ ಸಮ್ಮತಿಯಿಲ್ಲದ ಅಥವಾ ಅದರ ಆದೇಶಗಳು, ನಿರ್ದೇಶನಗಳು ಅಥವಾ ಸಾಮಾನ್ಯ ವಿನಿಯಮಗಳ ಅಥವಾ ಉಪವಿಧಿಗಳಿಗೆ ತದ್ವಿರುದ್ಧವಾಗಿ ಅಥವಾ ಅದನ್ನು ಹಾಗೆ ನಿರ್ಮಿಸಿದ, ಪುನರ್ ನಿರ್ಮಿಸಿದ ಅಥವಾ ನಿಲ್ಲಿಸದ ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಅಧಿನಿಯಮಿತಿಯ ಉಪಬಂಧಗಳಿಗೆ ತದ್ವಿರುದ್ಧವಾಗಿ,–

–ನಿರ್ಮಿಸಿದ್ದರೆ, ಪುನರ್ ನಿರ್ಮಿಸಿದ್ದರೆ, ಅಥವಾ ನಿಲ್ಲಿಸಿರದಿದ್ದರೆ, ತಾನು ಸೂಕ್ತವೆಂದು ಭಾವಿಸಬಹುದಾದಂತೆ ಅದನ್ನು ಹಾಗೆ ನಿರ್ಮಿಸಿದ, ಪುನರ್ ನಿರ್ಮಿಸಿದ ಅಥವಾ ನಿಲ್ಲಿಸದಿದ್ದ ವ್ಯಕ್ತಿಯು ಕೆಡವಿಹಾಕತಕ್ಕದ್ದು ಅಥವಾ ಬದಲಾಯಿಸತಕ್ಕದ್ದೆಂದು ಬರಹದಲ್ಲಿನ ನೋಟೀಸಿನ ಮೂಲಕ ಅಗತ್ಯಪಡಿಸಬಹುದು. ಮತ್ತು ಯಾವುದೇ ಅಂಥ ಗ್ರಾಮಸಾರ ಚರಂಡಿ, ಚರಂಡಿ, ಕಕ್ಕಸು, ಶೌಚಗೃಹ, ಗೃಹಚರಂಡಿ ಅಥವಾ ರೊಚ್ಚುಗುಂಡಿಯನ್ನು ಹಾಗೆ ನಿರ್ಮಿಸುವ, ಪುನರ್ ನಿರ್ಮಿಸುವ ಅಥವಾ ನಿಲ್ಲಿಸದ ಪ್ರತಿಯೊಬ್ಬ ವ್ಯಕ್ತಿಯು, ಅಂಥ ನೋಟೀಸನ್ನು ಸ್ವೀಕರಿಸಿರಲಿ ಅಥವಾ ಇಲ್ಲದಿರಲಿ, ಅಥವಾ ಅದನ್ನು ಪಾಲಿಸಲಿ ಅಥವಾ ಪಾಲಿಸದಿರಲಿ, ಅಂಥ ಅನನುಪಾಲನೆಯ ಕಾರಣದಿಂದಾಗಿ ಅವನು ಗುರಿಯಾಗಬಹುದಾದಂಥ ಯಾವುದೇ ದಂಡನೆಯ ಜೊತೆಗೆ, ಇಪ್ಪತ್ತೈದು ರೂ. ಗಳ ವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**203. ಪೌರಸಭಾ ಚರಂಡಿಗಳ ಮೇಲೆ ಒತ್ತುವರಿ, ಇತ್ಯಾದಿ.–** (1) ಯಾರೇ ಆಗಲಿ, ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಅನುಮತಿಯನ್ನು ಮೊದಲು ಪಡೆಯದೆ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರುವ ಯಾವುದೇ ಗ್ರಾಮಸಾರ ಚರಂಡಿ ಅಥವಾ ಚರಂಡಿಯೊಳಗೆ ಅಥವಾ ಅದರಿಂದ ಹೊರಗೆ ಯಾವುದೇ ಚರಂಡಿಯನ್ನು ಮಾಡಿದರೆ ಅಥವಾ ಮಾಡಿಸಿದರೆ ಅವನು ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು. ಮತ್ತು ಮುನ್ಸಿಪಲ್ ಕೌನ್ಸಿಲು, ಬರಹದಲ್ಲಿನ ನೋಟೀಸಿನ ಮೂಲಕ ಅಂಥ ವ್ಯಕ್ತಿಯನ್ನು ಅಂಥ ಚರಂಡಿಯನ್ನು ಕೆಡವಲು, ಬದಲಾಯಿಸಲು, ಪುನರ್‌ರಚಿಸಲು ಅಥವಾ ತಾನು ಸೂಕ್ತವೆಂದು ಯೋಚಿಸುವಂತೆ ಅದರೊಡನೆ ಅನ್ಯಥಾ ವ್ಯವಹರಿಸುವಂತೆ, ಅಗತ್ಯಪಡಿಸಬಹುದು.

(2) ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಸಮ್ಮತಿಯಿಲ್ಲದೆ, ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರುವ ಯಾವುದೇ ಗ್ರಾಮಸಾರ ಚರಂಡಿ, ಚರಂಡಿ, ಅಡಿಗಾಲುವೆ ಅಥವಾ ಮೋರಿಯ ಮೇಲೆ ಯಾವುದೇ ಕಟ್ಟಡವನ್ನು ಹೊಸದಾಗಿ ನಿರ್ಮಿಸತಕ್ಕದ್ದಲ್ಲ ಅಥವಾ ಪುನರ್‌ನಿರ್ಮಿಸತಕ್ಕದ್ದಲ್ಲ. ಮತ್ತು ಮುನ್ಸಿಪಲ್

ಕೌನ್ಸಿಲು, ಅಂಥ ಕಟ್ಟಡವನ್ನು ನಿರ್ಮಿಸಿದ ಅಥವಾ ಪುನರ್ ನಿರ್ಮಿಸಿರಬಹುದಾದ ವ್ಯಕ್ತಿಯನ್ನು, ಅದನ್ನು ಕೆಡವಲು ಅಥವಾ ತಾನು ಸೂಕ್ತವೆಂದು ಯೋಚಿಸಬಹುದಾದಂತೆ ಅದರೊಡನೆ ಅನ್ಯಥಾ ವ್ಯವಹರಿಸುವಂತೆ ಬರಹದಲ್ಲಿನ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

**204. ಚರಂಡಿಗಳು, ಇತ್ಯಾದಿಗಳ ಪರಿಶೀಲನೆ.–** (1) ಮುನ್ಸಿಪಲ್ ಕೌನ್ಸಿಲು ಅಥವಾ ಅಂಥ ಉದ್ದೇಶಗಳಿಗಾಗಿ ಅದು ನೇಮಕ ಮಾಡಿದ ಯಾರೇ ಅಧಿಕಾರಿಯು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಯಾವುದೇ ಗ್ರಾಮಸಾರ ಚರಂಡಿ, ಚರಂಡಿ, ಕಕ್ಕಸು, ಗೃಹ, ಗೃಹಚರಂಡಿ ಅಥವಾ ರೊಚ್ಚುಗುಂಡಿಯನ್ನು ಪರಿಶೀಲಿಸಬಹುದು ಮತ್ತು ಆ ಉದ್ದೇಶಕ್ಕಾಗಿ, ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಯಾವುದೇ ಕಾಲದಲ್ಲಿ, ಸಹಾಯಕರು ಮತ್ತು ಕೆಲಸಗಾರರೊಂದಿಗೆ ಯಾವುವೇ ಭೂಮಿಗಳು ಅಥವಾ ಕಟ್ಟಡಗಳನ್ನು ಪ್ರವೇಶಿಸಬಹುದು ಮತ್ತು ಸಾಧ್ಯವಾದಷ್ಟು ಕಡಿಮೆ ಹಾನಿ ಮಾಡುವಂತೆ ಅವನು ಅಥವಾ ಅದು ಸೂಕ್ತವೆಂದು ಯೋಚಿಸಬಹುದಾದ ಸ್ಥಳದಲ್ಲಿ ನೆಲವನ್ನು ತೆರೆಯುವಂತೆ ಮಾಡಬಹುದು.

(2) ಅಂಥ ಪರಿಶೀಲನೆಯ ಮತ್ತು ಮೊದಲಿನಂತೆ ನೆಲವನ್ನು ಮುಚ್ಚಿಸುವ ಮತ್ತು ಸರಿ ಮಾಡುವ ವೆಚ್ಚವನ್ನು ಆ ಗ್ರಾಮಸಾರ ಚರಂಡಿ, ಚರಂಡಿ, ಕಕ್ಕಸ್ಸು, ಶೌಚಗೃಹ, ಗೃಹಚರಂಡಿ ಅಥವಾ ರೊಚ್ಚುಗುಂಡಿಯು ಕೆಟ್ಟ ರೀತಿಯಲ್ಲಿ ಮತ್ತು ದುಃಸ್ಥಿತಿಯಲ್ಲಿದ್ದ ಅಥವಾ ಆ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯ ಅಥವಾ ಮುನ್ಸಿಪಲ್ ಕೌನ್ಸಿಲಿನ ಯಾವುದೇ ಉಪ ವಿಧಿಯ ಉಪಬಂಧಗಳ ಉಲ್ಲಂಘನೆಯಲ್ಲಿ ಕಟ್ಟಿಸಿದ್ದ ಹೊರತು, ಮುನ್ಸಿಪಲ್ ಕೌನ್ಸಿಲು ಭರಿಸತಕ್ಕದ್ದು. ಅಂಥ ಸಂದರ್ಭದಲ್ಲಿ ಅಂಥ ಗ್ರಾಮಸಾರ ಚರಂಡಿ, ಚರಂಡಿ, ಕಕ್ಕಸು, ಶೌಚಗೃಹ, ಗೃಹಚರಂಡಿ ಅಥವಾ ರೊಚ್ಚುಗುಂಡಿಯ ಒಡೆಯನು ಅಂಥ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು. ಮತ್ತು VIIನೇ ಅಧ್ಯಾಯದ ಮೇರೆಗೆ ವಸೂಲೀಯವಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನ ರೀತಿಯಲ್ಲಿಯೇ ವಸೂಲೀಯವಾಗತಕ್ಕದ್ದು.

**205. ಮುನ್ಸಿಪಲ್ ಕೌನ್ಸಿಲುಗಳನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ಅವುಗಳನ್ನು ನಿರ್ವಹಿಸುವ ಆಯ್ಕೆಯ ಅವಕಾಶವನ್ನು ಕೊಡದೆಯೆ ನಿರ್ವಹಿಸಬಹುದು.–** (1) ಮುನ್ಸಿಪಲ್ ಕೌನ್ಸಿಲು ತಾನು ಸೂಕ್ತವೆಂದು ಯೋಚಿಸಿದರೆ, 193 ರಿಂದ 204ನೇ ಪ್ರಕರಣಗಳ ಯಾವುದೇ ಅಥವಾ ಯಾವುದೇ ಉಪಬಂಧಗಳು ಅನ್ವಯಿಸುವಂಥ ಸ್ವರೂಪದ ಯಾವುದೇ ಕೆಲಸವನ್ನು ತನ್ನದೇ ಆದ ಆದೇಶಗಳ ಮೇರೆಗೆ ಅದನ್ನು ಅನ್ಯಥಾ ಯಾರಿಂದ ನಿರ್ವಹಿಸಬೇಕಾಗಿರುತ್ತಿತ್ತೋ ಅದನ್ನು ಮಾಡುವ ಆಯ್ಕೆಯ ಅವಕಾಶವನ್ನು ಮೊದಲು ಕೊಡದೆ, ಪೌರಸಭೆ ಅಥವಾ ಇತರ ಏಜೆನ್ಸಿಯ ಮೂಲಕ ನಿರ್ವಹಿಸುವಂತೆ ಮಾಡತಕ್ಕದ್ದು.

(2) ಹಾಗೆ ಮಾಡಿದ ಯಾವುದೇ ಕೆಲಸದ ವೆಚ್ಚಗಳನ್ನು, ಮುನ್ಸಿಪಲ್ ಕೌನ್ಸಿಲು ಸಾಮಾನ್ಯ ಅಥವಾ ವಿಶೇಷ ಆದೇಶ ಅಥವಾ ನಿರ್ಣಯದ ಮೂಲಕ ಪೌರಸಭೆಯ ನಿಧಿಯ ವೆಚ್ಚದಲ್ಲಿ ಅಂಥ ಕೆಲಸವನ್ನು ನಿರ್ವಹಿಸಲು ಮಂಜೂರ್ಮಾಡಿದ ಹೊರತು ಹಿಂದೆ ಹೇಳಿದ ವ್ಯಕ್ತಿಯು ಸಂದಾಯ ಮಾಡತಕ್ಕದ್ದು.

(3) ಖಾಸಗಿ ಕಟ್ಟಡಗಳು ಅಥವಾ ಭೂಮಿಗಳ ಚರಂಡಿ ವ್ಯವಸ್ಥೆಗಾಗಿ ಅಥವಾ ಅದರೊಂದಿಗೆ ಸಂಪರ್ಕ ಹೊಂದಿದ ಯಾವುದೇ ಕೊಳವೆಗಳು, ಜೋಡಣೆಗಳು, ಸಂಪುಟಗಳು ಅಥವಾ ಇತರ ಉಪಕರಣಗಳನ್ನು ಮುನ್ಸಿಪಲ್ ಕೌನ್ಸಿಲಿನ ವೆಚ್ಚದಲ್ಲಿ ಸರಬರಾಜು ಮಾಡಿದ್ದರೆ, ನಿರ್ಮಿಸಿದ್ದರೆ, ಅಥವಾ ಕಟ್ಟಿದ್ದರೆ, ಮುನ್ಸಿಪಲ್ ಕೌನ್ಸಿಲು ಅದರಲ್ಲಿನ ತನ್ನ ಹಿತಾಸಕ್ತಿಯನ್ನು ಅಂಥ ಕಟ್ಟಡ ಅಥವಾ ಭೂಮಿಗಳ ಒಡೆಯನಿಗೆ ವರ್ಗಾಯಿಸಿದ್ದ ಹೊರತು, ಅವುಗಳು ಪೌರಸಭೆಯ ಸ್ವತ್ತಾಗಿರುವುದಾಗಿ ಭಾವಿಸತಕ್ಕದ್ದು.

**206. ಪ್ರಧಾನ ನೀರು ಕೊಳವೆ ಇತ್ಯಾದಿಗಳನ್ನು ಒಯ್ಯುವ ಅಧಿಕಾರ.–** ಪೌರಸಭೆಗೆ ನೀರು ಸರಬರಾಜು ಮಾಡುವುದಕ್ಕಾಗಿ ನೀರು ಸರಬರಾಜು ಗೃಹಗಳ ನಿರ್ಮಾಣ ಮತ್ತು ನಿರ್ವಹಿಸುವ ಕರ್ತವ್ಯವು ಯಾರಲ್ಲಿ

ನಿಹಿತವಾಗಿದೆಯೋ ಸಂದರ್ಭಾನುಸಾರ ಆ ಸರ್ಕಾರ ಅಥವಾ ಮುನ್ಸಿಪಲ್ ಕೌನ್ಸಿಲು ಪೌರಸಭೆಯೊಳಗೆ ಚರಂಡಿಗಳನ್ನು ಒಯ್ಯುವುದು, ನವೀಕರಿಸುವುದು ಮತ್ತು ದುರಸ್ತಿ ಮಾಡುವುದಕ್ಕಾಗಿ ಈ ಮೊದಲು ಒಳಗೊಂಡ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಪೌರಸಭೆಯ ವ್ಯಾಪ್ತಿಯೊಳಗಿನ ಅಥವಾ ಉಪಬಂಧಗಳ ಮೇರೆಗೆ ಹೊಂದಿದ ಮತ್ತು ಅವುಗಳಿಗೆ ಒಳಪಟ್ಟ ಹಾಗೆ ಪೌರಸಭೆಯೊಳಗೆ ಅಥವಾ ಹೊರಗೆ ಪ್ರಧಾನ ನೀರು ಕೊಳವೆಗಳು, ಕೊಳವೆಗಳು ಮತ್ತು ನಳಿಕೆಗಳನ್ನು ಒಯ್ಯುವುದು, ನವೀಕರಿಸುವುದು ಮತ್ತು ದುರಸ್ತಿ ಮಾಡುವುದಕ್ಕಾಗಿ ಅದೇ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅದೇ ಪರಿಬಂಧಗಳಿಗೆ ಒಳಪಟ್ಟಿರತಕ್ಕದ್ದು.

**207. ಲೈಸೆನ್ಸ್ ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರನು ಮಾಡಬೇಕಾದ ಕೆಲಸಗಳು.–** (1) ಲೈಸೆನ್ಸ್ ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟರುದಾರರನ್ನು ಹೊರತುಪಡಿಸಿ, ಇತರ ಯಾರೇ ವ್ಯಕ್ತಿಯು, ಚರಂಡಿ ವ್ಯವಸ್ಥೆ ಅಥವಾ ನೀರು ಸರಬರಾಜಿಗೆ ಸಂಬಂಧಿಸಿದ ಯಾವುದೇ ಕೆಲಸವನ್ನು ನಿರ್ವಹಿಸತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು, ಲೈಸೆನ್ಸ್ ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ಕಂಟ್ರಾಕ್ಟುದಾರನ ಮೂಲಕವಲ್ಲದ ಯಾವುದೇ ಅಂಥ ಕೆಲಸವನ್ನು ನಿರ್ವಹಿಸಲು ಅನುಮತಿಸತಕ್ಕದ್ದಲ್ಲ:

ಪರಂತು, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಕೆಲಸವು ಅಲ್ಪಸ್ವರೂಪದ್ದೆಂದು ಅಭಿಪ್ರಾಯಪಟ್ಟರೆ, ಲೈಸೆನ್ಸ್ ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟುದಾರನನ್ನು ಹೊರತುಪಡಿಸಿ ಇತರ ವ್ಯಕ್ತಿಯು ಅಂಥ ಕೆಲಸವನ್ನು ನಿರ್ವಹಿಸುವುದಕ್ಕೆ ಬರಹದಲ್ಲಿ ಅನುಮತಿಯನ್ನು ಮಂಜೂರು ಮಾಡಬಹುದು.

(2) ಯಾವುದೇ ಕೆಲಸವನ್ನು ನಿರ್ವಹಿಸಲು ಲೈಸೆನ್ಸ್ ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟುದಾರನನ್ನು ನಿಯೋಜಿಸಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯು ಹಾಗೆ ಅಗತ್ಯಪಡಿಸಿದಾಗ ಮುನ್ಸಿಪಲ್ ಕಮಿಷನರಿಗೆ ಅಥವಾ ಚೀಫ್ ಆಫೀಸರನಿಗೆ ಅಂಥ ಕೊಳಾಯಿಗಾರ ಅಥವಾ ಕಂಟ್ರಾಕ್ಟರನ ಹೆಸರನ್ನು ಒದಗಿಸತಕ್ಕದ್ದು.

(3) (1)ನೇ ಉಪ–ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಅಲ್ಲದೆ ಯಾವುದೇ ಕೆಲಸವನ್ನು ನಿರ್ವಹಿಸಿದಾಗ, ಅಂಥ ಕೆಲಸವನ್ನು ಯಾರಿಂದಾಗಿ ನಿರ್ವಹಿಸಲಾಗಿದೆಯೋ ಆ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಟ್ ಮಾಡಲು ಕೌನ್ಸಿಲಿನ ಹಕ್ಕಿಗೆ ಬಾಧಕವಾಗದಂತೆ ಮುನ್ಸಿಪಲ್ ಕೌನ್ಸಿಲಿನಿಂದ ಅಂಥ ಕೆಲಸವು ಕೆಡವಿ ಹಾಕುವುದಕ್ಕೆ ಗುರಿಯಾಗತಕ್ಕದ್ದು.

(4) ಲೈಸೆನ್ಸ್ ಪಡೆದ ಯಾರೇ ಕೊಳಾಯಿಗಾರ ಅಥವಾ ಲೈಸೆನ್ಸ್ ಪಡೆದ ನೀರು ಸರಬರಾಜು ಕಂಟ್ರಾಕ್ಟುದಾರನು 324ನೇ ಪ್ರಕರಣದ (1)ನೇ ಉಪಪ್ರಕರಣದ (ಗಗ) ಖಂಡದ ಮೇರೆಗೆ ರಚಿಸಿದ ಯಾವುದೇ ಉಪವಿಧಿಯನ್ನು ಅಥವಾ ಅವನ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿದರೆ, ಅವನನ್ನು ಈ ಅಧಿನಿಯಮದ ಮೇರೆಗೆ ಪ್ರಾಸಿಕ್ಯೂಟ್ ಮಾಡಿರಲಿ ಅಥವಾ ಇಲ್ಲದಿರಲಿ ಅವನ ಲೈಸೆನ್ಸನ್ನು ಅಮಾನತುಗೊಳಿಸಬಹುದು ಅಥವಾ ರದ್ದುಪಡಿಸಬಹುದು.

(5) (1) ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**ಬಾಹ್ಯ ರಚನೆಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಅಧಿಕಾರ**

**208. ಕೆಲವು ಮುಂಚಾಚುವಿಕೆಗಳಿಗೆ ಅನುಮತಿ ಅಗತ್ಯ.–** (1) ಮುನ್ಸಿಪಲ್ ಕೌನ್ಸಿಲು, ಕಟ್ಟಡಗಳ ಒಡೆಯರು ಅಥವಾ ಅಧಿಭೋಗದಾರರಿಗೆ ಸಾರ್ವಜನಿಕ ಬೀದಿಗಳಲ್ಲಿ, ಮುನ್ಸಿಪಲ್ ಕೌನ್ಸಿಲು ಕಾಲಕಾಲಕ್ಕೆ ಉಪವಿಧಿಗಳ ಮೂಲಕ ನಿಗದಿಪಡಿಸಬಹುದಾದಂತೆ ಬೀದಿಯ ಮೇಲ್ಮಟ್ಟದಿಂದ ಅಂಥ ಎತ್ತರದಲ್ಲಿ ಮತ್ತು ಮೇಲುಪಾಯ ಅಥವಾ ತಳಮಟ್ಟದ ಗೋಡೆಯ ರೇಖೆಯ ಆಚೆ ನಾಲ್ಕು ಅಡಿಗಳಿಗೆ ಮೀರದಷ್ಟು ಅದರ ಯಾವುದೇ ಮೇಲ್ಮಹಡಿಯಿಂದ ಮುಂದಕ್ಕೆ ಚಾಚುವಂತೆ ತೆರೆದ ವರಾಂಡಗಳು, ಬಾಲ್ಕನಿಗಳು ಅಥವಾ ಕೊಠಡಿಗಳನ್ನು ನಿರ್ಮಿಸಲು ಬರಹದಲ್ಲಿ ಅನುಮತಿಯನ್ನು ಕೊಡಬಹುದು ಮತ್ತು ಚಾವಣಿಗಳು, ಸೂರುಗಳು, ಮಳೆ ಹಲಗೆ, ಅಂಗಡಿ ಫಲಕಗಳನ್ನು ಮತ್ತು ಅಂಥಹುಗಳೇ ಆದುವನ್ನು ಎಷ್ಟರಮಟ್ಟಿಗೆ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಅಂಥ ಬೀದಿಗಳ ಮುಂಚಾಚಲು ಅವಕಾಶ ಕೊಡಬಹುದಾದುದನ್ನು ನಿಯಮಿಸಬಹುದು.

(2) ಅಂಥ ಯಾರೇ ಒಡೆಯ ಅಥವಾ ಅಧಿಭೋಗದಾರನು ಹಿಂದೆ ಹೇಳಿದಂತೆ ಯಾವುದೇ ಅಂಥ ಮುಂಚಾಚುವಿಕೆಗಳನ್ನು ಅಂಥ ಅನುಮತಿಯಿಲ್ಲದೆ ಅಥವಾ ಅಂಥ ಆದೇಶಗಳನ್ನು ಉಲ್ಲಂಘಿಸಿ ನಿರ್ಮಿಸಿರುವಲ್ಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಯಾವುದಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಅಪರಾಧಿಯೆಂದು ಅವನು ನಿರ್ಣೀತನಾಗಿದ್ದಾನೆಯೋ, ಹಿಂದೆ ಹೇಳಿದಂತೆ ಆ ಯಾವುದೇ ಮುಂಚಾಚುವಿಕೆಯನ್ನು ತೆಗೆದು ಹಾಕಲು ಅಂಥ ಒಡೆಯ ಅಥವಾ ಅಧಿಭೋಗದಾರನು ತಪ್ಪಿದರೆ, ಅವನ ತಪ್ಪುವಿಕೆ ಅಥವಾ ಉಪೇಕ್ಷೆಯು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ 5 ರೂಪಾಯಿಗಳವರೆಗೆ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲು, ಅಂಥ ಕಟ್ಟಡದ ನಿವೇಶನವು ಪೌರಸಭೆಯ ಭಾಗವಾಗುವುದಕ್ಕೆ ಮುಂಚೆಯೇ ಆಗಲಿ ಅಥವಾ ಅದಕ್ಕೆ ತರುವಾಯವೇ ಆಗಲಿ ನಿರ್ಮಿಸಿದಂಥ, ಅಂಥ ಕಟ್ಟಡದ ಎದುರಿಗೆ ಅಥವಾ ಮುಂಭಾಗದಲ್ಲಿ ನಿರ್ಮಿಸಲಾದ ಅಥವಾ ಇಡಲಾದ; ಮತ್ತು

(ಕ) ಸಾರ್ವಜನಿಕ ಬೀದಿಯ ಸುರಕ್ಷತೆ ಮತ್ತು ಸುಗಮ ಸಂಚಾರಕ್ಕೆ ಅಡ್ಡಿಯಾಗುವ ಹಾಗೆ, ಯಾವುದೇ ಅಂಥ ಬೀದಿಯ ಮೇಲೆ ಬಾಗಿರುವ ಅಥವಾ ಅದರೊಳಗೆ ಮುಂದಕ್ಕೆ ಚಾಚಿರುವ ಅಥವಾ ಯಾವುದೇ ರೀತಿಯಲ್ಲಿ ಮುಂಚಾಚಿರುವಂಥ ಅಥವಾ ಒತ್ತುವರಿಯಾಗಿರುವಂಥ; ಅಥವಾ

(ಖ) ಮೇಲ್ಗಾಲುವೆ, ಚರಂಡಿ ಅಥವಾ ಗ್ರಾಮಸಾರ ಚರಂಡಿಗೆ ಅಥವಾ ಅದರ ಸರಿಯಾದ ಕಾರ್ಯ ನಿರ್ವಹಣೆಗೆ ಅಡ್ಡಿ ಅಥವಾ ನಡುವೆ ಬರುವ ಹಾಗೆ ಅಂಥ ಬೀದಿಯಲ್ಲಿನ ಅಂಥ ಮುಚ್ಚಿರದ ಮೇಲ್ಗಾಲುವೆ, ಚರಂಡಿ ಅಥವಾ ಗ್ರಾಮಸಾರ ಚರಂಡಿಯೊಳಕ್ಕೆ ಅಥವಾ ಅದರ ಮೇಲೆ ಮುಂಚಾಚುವ ಅಥವಾ ಒತ್ತುವರಿ ಮಾಡುವಂಥ ಮುಂಚಾಚುವಿಕೆ, ಒತ್ತುವರಿ ಅಥವಾ ಅಡ್ಡಿಯನ್ನು ತೆಗೆದು ಹಾಕಲು ಅಥವಾ ಬದಲಾಯಿಸಲು ಯಾವುದೇ ಕಟ್ಟಡದ ಒಡೆಯ ಅಥವಾ ಅಧಿಭೋಗದಾರನನ್ನು ಬರಹದಲ್ಲಿಯ ನೋಟೀಸಿನ ಮೂಲಕ ಅಗತ್ಯಪಡಿಸಬಹುದು:

ಪರಂತು, ಮುನ್ಸಿಪಲ್ ಕೌನ್ಸಿಲು ಅಂಥ ಸ್ಥಳವು ಪೌರಸಭೆಯ ಭಾಗವಾದ ದಿನಾಂಕಕ್ಕೆ ಮುಂಚೆ ಅಥವಾ ಅಂಥ ದಿನಾಂಕದ ತರವಾಯ ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಅನುಮತಿಯೊಂದಿಗೆ ಯಾವುದೇ ಸ್ಥಳದಲ್ಲಿ ಅಂಥ ಮುಂಚಾಚುವಿಕೆ, ಒತ್ತುವರಿ ಅಥವಾ ಅಡ್ಡಿಯನ್ನು ಮಾಡಲಾಗಿದ್ದರೆ, ಅಂಥ ತೆಗೆದುಹಾಕುವಿಕೆ ಅಥವಾ ಬದಲಾವಣೆಯಿಂದ ಹಾನಿಗೀಡಾದ ಪ್ರತಿಯೊಬ್ಬ ವ್ಯಕ್ತಿಗೆ ಯುಕ್ತ ಪರಿಹಾರವನ್ನು ಕೊಡತಕ್ಕದ್ದು, ಮತ್ತು ಅಂಥ ನಷ್ಟ ಪರಿಹಾರದ ಮೊಬಲಗಿಗೆ ಸಂಬಂಧಿಸಿದಂತೆ ಯಾವುದೇ ವಿವಾದವು ಉದ್ಭವಿಸಿದರೆ, ಅದನ್ನು 268ನೇ ಪ್ರಕರಣದಲ್ಲಿ ಉಪಬಂಧಿಸಲಾದ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

**209. ಮಳೆ ನೀರಿಗಾಗಿ ಹರಿದೋಣಿಗಳು ಮತ್ತು ಕೊಳವೆಗಳು.–** ಮುನ್ಸಿಪಲ್ ಕೌನ್ಸಿಲು ಯಾವುದೇ ಬೀದಿಯಲ್ಲಿನ ಪ್ರತಿಯೊಂದು ಕಟ್ಟಡದ ಒಡೆಯನನ್ನು ಅಂಥ ಕಟ್ಟಡದ ಚಾವಣಿ ಮತ್ತು ಇತರ ಭಾಗಗಳಿಂದ ನೀರನ್ನು ಹಿಡಿಯಲು ಮತ್ತು ಒಯ್ಯಲು ಸೂಕ್ತ ಮತ್ತು ಅದನ್ನು ಹೊರಗೆಡಹಲು ಸರಿಯಾದ ಹರಿದೋಣಿಗಳನ್ನು ಮತ್ತು ಕೊಳವೆಗಳನ್ನು, ಬೀದಿಯಲ್ಲಿ ಓಡಾಡುವ ವ್ಯಕ್ತಿಯ ಮೇಲೆ ಅದು ಬೀಳದಂತೆ ಅಥವಾ ಬೀದಿಗೆ ಹಾನಿಯನ್ನುಂಟು ಮಾಡದಂತೆ ಅದು ಸೂಕ್ತವೆಂದು ಯೋಚಿಸಬಹುದಾದಂಥ ರೀತಿಯಲ್ಲಿ ಹಾಕಲು ಮತ್ತು ಸುಸ್ಥಿತಿಯಲ್ಲಿಡಲು ಬರಹದಲ್ಲಿನ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

**210. ಮನೆಗಳಿಗೆ ಬ್ರ್ಯಾಕೆಟ್ಟುಗಳು, ಇತ್ಯಾದಿಗಳನ್ನು ಜೋಡಿಸುವುದು.–** ಮುನ್ಸಿಪಲ್ ಕೌನ್ಸಿಲು, ಯಾವುದೇ ಕಟ್ಟಡದ ಹೊರಭಾಗದಲ್ಲಿ ಎಣ್ಣೆ ಅಥವಾ ಅನಿಲದಿಂದ ಬೆಳಗಿಸಬೇಕಾದ ದೀಪಗಳಿಗಾಗಿ, ಅಥವಾ ವಿದ್ಯುಚ್ಛಕ್ತಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು ವಿದ್ಯುಚ್ಛಕ್ತಿಯಿಂದ ಅಥವಾ ಅನ್ಯಥಾ ಬೆಳಗಿಸಬೇಕಾದ ದೀಪಗಳಿಗಾಗಿ, ಟೆಲಿಗ್ರಾಫುಗಳಿಗೆ ಸಂಬಂಧಪಟ್ಟಂತೆ ಜಾರಿಯಲ್ಲಿರುವ ಟೆಲಿಗ್ರಾಫು ತಂತಿಗಳು ಮತ್ತು ದೂರವಾಣಿ ತಂತಿಗಳಿಗಾಗಿ ಅಥವಾ ಪ್ರಯಾಣ ಸಾಧನ ಅಥವಾ ಇತರ ಉದ್ದೇಶಗಳಿಗಾಗಿ ವಿದ್ಯುಚ್ಛಕ್ತಿಯ ವಹನಕ್ಕಾಗಿ ಬ್ರ್ಯಾಕೆಟ್ಟುಗಳನ್ನು ಅಥವಾ ಗ್ರಾಮಸಾರ ಚರಂಡಿ ಮತ್ತು ನೀರು ಸರಬರಾಜು ಗೃಹಗಳ ಸರಿಯಾದ ವಾಯು ಸಂಚಾರಕ್ಕಾಗಿ ಅದು ಅವಶ್ಯವೆಂದು ಭಾವಿಸಬಹುದಾದಂಥ ಕೊಳವೆಗಳನ್ನು ನಿರ್ಮಿಸಬಹುದು ಅಥವಾ ಜೋಡಿಸಬಹುದು ಮತ್ತು ಅಂಥ ಬ್ರ್ಯಾಕೆಟ್ಟುಗಳು ಮತ್ತು ಕೊಳವೆಗಳನ್ನು ಸದರಿ ಕಟ್ಟಡದ ಅಧಿಭೋಗದಾರನಿಗೆ ಅಥವಾ ನೆರೆಹೊರೆಯಲ್ಲಿನ ಯಾರೇ ಇತರರಿಗೆ ಅಥವಾ ಸಾರ್ವಜನಿಕರಿಗೆ ಯಾವುದೇ ಅನಾನುಕೂಲತೆ ಅಥವಾ ಉಪದ್ರವ ಉಂಟಾಗದ ಹಾಗೆ ನಿರ್ಮಿಸತಕ್ಕದ್ದು.

**211. ಬೀದಿಗಳಿಗೆ ಹೆಸರಿಡುವುದು ಮತ್ತು ಮನೆಗಳಿಗೆ ಸಂಖ್ಯೆ ಕೊಡುವುದು.–** ಮುನ್ಸಿಪಲ್ ಕೌನ್ಸಿಲು, ಕಾಲಕಾಲಕ್ಕೆ, ಪ್ರತಿಯೊಂದು ಬೀದಿಯ ಪ್ರತಿಯೊಂದು ಕೊನೆ, ಮೂಲೆ ಅಥವಾ ಪ್ರವೇಶದಲ್ಲಿ ಅಥವಾ ಅದರ ಹತ್ತಿರ ಯಾವುದೇ ಕಟ್ಟಡದ ಎದ್ದು ಕಾಣುವ ಭಾಗದ ಮೇಲೆ ಅಂಥ ಬೀದಿಯು ಗೊತ್ತಾಗಬೇಕಾದಂಥ ಹೆಸರನ್ನು ಹಾಕುವಂತೆ ಅಥವಾ ಬಣ್ಣದಲ್ಲಿ ಬರೆಯುವಂತೆ ಮಾಡತಕ್ಕದ್ದು ಮತ್ತು ಕಾಲಕಾಲಕ್ಕೆ ಯಾವುದೇ ಕಟ್ಟಡದ ಹೊರಭಾಗದಲ್ಲಿ ಅಥವಾ ಬೀದಿಗೆ ಅಭಿಮುಖವಾದ ಅದರ ಆವರಣದ ಪ್ರವೇಶದಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಸಂಖ್ಯೆಯನ್ನು ಜೋಡಿಬಹುದು:

ಪರಂತು, ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಮುನ್ಸಿಪಲ್ ಕೌನ್ಸಿಲು ಯಾವುದೇ ಬೀದಿಗೆ ಹೆಸರಿಡತಕ್ಕದ್ದಲ್ಲ ಅಥವಾ ಪುನಃ ಹೆಸರಿಡತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ಅಂಥ ಯಾವುದೇ ಹೆಸರು ಅಥವಾ ಸಂಖ್ಯೆಯನ್ನು ನಾಶಪಡಿಸತಕ್ಕದ್ದಲ್ಲ, ತೆಗೆದುಹಾಕತಕ್ಕದ್ದಲ್ಲ, ವಿರೂಪಗೊಳಿಸತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಹಾನಿಗೊಳಿಸತಕ್ಕದ್ದಲ್ಲ ಅಥವಾ ಬದಲಾಯಿಸತಕ್ಕದ್ದಲ್ಲ ಅಥವಾ ಮುನ್ಸಿಪಲ್ ಕೌನ್ಸಿಲಿನ ಆದೇಶದ ಮೂಲಕ ಹಾಕಿದ ಅಥವಾ ಬಣ್ಣದಲ್ಲಿ ಬರೆಯಲಾದ ಹೆಸರು ಅಥವಾ ಸಂಖ್ಯೆಗೆ ವಿಭಿನ್ನವಾಗಿ ಯಾವುದೇ ಬೇರೆ ಹೆಸರು ಅಥವಾ ಸಂಖ್ಯೆಯನ್ನು ಹಾಕತಕ್ಕದ್ದಲ್ಲ ಅಥವಾ ಬಣ್ಣದಲ್ಲಿ ಬರೆಯತಕ್ಕದ್ದಲ್ಲ.

(3) (ಕ) ಒಡೆಯ ಅಥವಾ ಅಧಿಭೋಗದಾರನ ಸಮ್ಮತಿಯಿಲ್ಲದೆಯೆ ಯಾವುದೇ ಭಿತ್ತಿಪತ್ರ, ಪ್ರಕಟಣೆ, ಪ್ರಕಟಣಾ ಪತ್ರ ಅಥವಾ ಇತರ ಕಾಗದ ಅಥವಾ ಜಾಹೀರಾತಿನ ಸಾಧನಗಳನ್ನು ಯಾವುದೇ ಕಟ್ಟಡ, ಗೋಡೆ, ಫಲಕ, ಬೇಲಿ ಅಥವಾ ಎಲ್ಲೆ, ಸ್ತಂಭ, ದೀಪದ ಕಂಬ ಅಥವಾ ಅಂಥವುಗಳ ಇದಿರು ಅಥವಾ ಮೇಲೆ ಅಂಟಿಸುವಲ್ಲಿ; ಅಥವಾ

(ಖ) ಹಿಂದೆ ಹೇಳಿದಂಥ ಸಮ್ಮತಿಯಿಲ್ಲದೆ ಯಾವುದೇ ಅಂಥ ಕಟ್ಟಡ, ಗೋಡೆ, ಫಲಕ, ಬೇಲಿ, ಅಥವಾ ಎಲ್ಲೆ, ಸ್ತಂಭ, ದೀಪದ ಕಂಬ ಅಥವಾ ಅಂಥವುಗಳ ಮೇಲೆ ಸುಣ್ಣ ಅಥವಾ ಬಣ್ಣ ಅಥವಾ ಇತರ ಯಾವುದೇ ಆದ ರೀತಿಯಲ್ಲಿ ಬರೆಯುವ, ಕೊಳೆ ಮಾಡುವ, ವಿರೂಪಗೊಳಿಸುವ ಅಥವಾ ಗುರುತು ಮಾಡುವ ಯಾರೇ ವ್ಯಕ್ತಿಯು, ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**212. ಮುಳ್ಳುಬೇಲಿಗಳು, ಮರಗಳು ಇತ್ಯಾದಿಗಳನ್ನು ತೆಗೆದುಹಾಕುವುದು ಮತ್ತು ಸವರುವುದು.–** ಮುನ್ಸಿಪಲ್ ಕೌನ್ಸಿಲು ಬರಹದಲ್ಲಿನ ನೋಟೀಸಿನ ಮೂಲಕ ಯಾವುದೇ ಭೂಮಿಯ ಒಡೆಯ ಅಥವಾ ಅಧಿಭೋಗದಾರನನ್ನು ಯಾವುದೇ ಬೀದಿಯ ಅಂಚಿನಲ್ಲಿರುವ ಅದರ ಮುಳ್ಳು ಬೇಲಿಗಳನ್ನು, ಆ ಬೀದಿಯ ಮಟ್ಟದಿಂದ ಸದರಿ ಬೇಲಿಗಳು ನಾಲ್ಕು ಅಡಿ ಎತ್ತರವನ್ನು ಮತ್ತು ನಾಲ್ಕು ಅಡಿ ಅಗಲವನ್ನು ಮೀರದ ಹಾಗೆ ಸವರಲು ಅಥವಾ ಕತ್ತರಿಸಲು ಮತ್ತು ಯಾವುದೇ ಸಾರ್ವಜನಿಕ ಬೀದಿಯ ಮೇಲೆ ಯಾವುದೇ ರೀತಿಯಲ್ಲಿ ಮುಂದೆ ಬಾಗಿರುವ, ಅಪಾಯವನ್ನುಂಟು ಮಾಡುವ ಅಥವಾ ಅಡ್ಡಿಪಡಿಸುವಂಥ ಅಥವಾ ಮುಂದೆ ಬಾಗುವ ಅಪಾಯವನ್ನುಂಟು ಮಾಡುವ ಅಥವಾ ಅಡ್ಡಿಪಡಿಸುವ ಅಥವಾ ಅದಕ್ಕೆ ಹಾನಿಯನ್ನುಂಟು ಮಾಡುವ ಸಂಭವವಿರುವುದೆಂದು ಅದು ಭಾವಿಸುವಂಥ ಯಾವುದೇ ಸಾರ್ವಜನಿಕ ಕೆರೆ, ಬಾವಿ, ಅಥವಾ ನೀರು ಸರಬರಾಜಿಗಾಗಿನ ಇತರ ವ್ಯವಸ್ಥೆಯಲ್ಲಿನ ನೀರನ್ನು ಕಲುಷಿತಗೊಳಿಸುವ ಹಾಗೆ ಅಥವಾ ಕಲುಷಿತಗೊಳಿಸುವ ಸಂಭವವಿರುವ ಹಾಗೆ ಮುಂದೆ ಬಾಗಿರುವಂಥ ಎಲ್ಲ ಮರಗಳನ್ನು ಅಥವಾ ಗಿಡಗೆಂಟೆಗಳನ್ನು ಕಡಿದು ಹಾಕಲು, ಸವರಲು, ಅಥವಾ ಸವರಲು ಅಗತ್ಯಪಡಿಸಬಹುದು.

### ಸಾರ್ವಜನಿಕ ಆರೋಗ್ಯ ಸುರಕ್ಷತೆ ಮತ್ತು ಅನುಕೂಲತೆಯ ಸಂವರ್ಧನೆಗಾಗಿ ಅಧಿಕಾರ

**213. ಪಾಳುಬಿದ್ದ ಅಥವಾ ಅಪಾಯಕಾರಿಯಾದ ಕಟ್ಟಡಗಳು.–** (1) ಯಾವುದೇ ಕಟ್ಟಡ ಅಥವಾ ಅದರ ಮೇಲೆ ಅಂಟಿಸಿದ ಯಾವುದೇ ಪಾಳುಬಿದ್ದ ಸ್ಥಿತಿಯಲ್ಲಿವೆಯೆಂದು ಅಥವಾ ಬೀಳುವ ಸಂಭವವಿದೆಯೆಂದು ಅಥವಾ ಅಂಥ ಕಟ್ಟಡ ಅಥವಾ ಅಂಥ ಕಟ್ಟಡದ ನೆರೆಹೊರೆಯ ಯಾವುದೇ ಇತರ ಕಟ್ಟಡ ಅಥವಾ ಸ್ಥಳದ ಸ್ವಾಧೀನದಲ್ಲಿರುವ, ಅಲ್ಲಿಗೆ ಹೋಗುವ ಅಥವಾ ಅದರ ಪಕ್ಕದಲ್ಲಿ ಹಾದು ಹೋಗುವ ಯಾರೇ ವ್ಯಕ್ತಿಗೆ ಯಾವುದೇ ಇತರ ರೀತಿಯಲ್ಲಿ ಅಪಾಯಕಾರಿಯಾಗಿದೆಯೆಂದು ಮುನ್ಸಿಪಲ್ ಕೌನ್ಸಿಲು ಭಾವಿಸಿದರೆ, ಮುನ್ಸಿಪಲ್ ಕೌನ್ಸಿಲು, ತನಗೆ ಅವಶ್ಯವೆಂದು ಕಂಡುಬಂದರೆ, ಅಲ್ಲಿ ಹಾದುಹೋಗುವ ಮತ್ತು ಇತರ ವ್ಯಕ್ತಿಗಳ ಸಂರಕ್ಷಣೆಗಾಗಿ ಸರಿಯಾದ ಹಲಗೆ ತಟ್ಟಿಯನ್ನು ಅಥವಾ ಬೇಲಿಯನ್ನು ಕೂಡಲೇ ಹಾಕುವಂತೆ ಮಾಡತಕ್ಕದ್ದು, ಮತ್ತು ಈ ಉಪಪ್ರಕರಣದ ಮೇರೆಗೆ, ಮುನ್ಸಿಪಲ್ ಕೌನ್ಸಿಲು ವಹಿಸಿದ ಎಲ್ಲ ವೆಚ್ಚಗಳನ್ನು ಅಂಥ ಕಟ್ಟಡದ ಒಡೆಯ ಅಥವಾ ಸ್ವಾಧೀನದಾರನಿಂದ ಸಂದಾಯವಾಗತಕ್ಕದ್ದು ಮತ್ತು VIIನೇ ಅಧ್ಯಾಯದ ಮೇರೆಗೆ ವಸೂಲೀಯವಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಲಾದಂಥಹುದೇ ರೀತಿಯಲ್ಲಿ ಅದು ವಸೂಲೀಯವಾಗತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲು, ಪ್ರಕರಣವು ಅಗತ್ಯಪಡಿಸತಕ್ಕಂತೆ ಅಂಥ ಕಟ್ಟಡ ಅಥವಾ ಅದರ ಮೇಲೆ ಅಂಟಿಸಿದ ವಸ್ತುವನ್ನು ತತ್‌ಕ್ಷಣವೇ ಕೆಡವಲು, ಭದ್ರಪಡಿಸಲು ಅಥವಾ ದುರಸ್ತಿ ಮಾಡಲು ಅಂಥ ಒಡೆಯ ಅಥವಾ ಸ್ವಾಧೀನದಾರನನ್ನು ಅಗತ್ಯಪಡಿಸುವ ಬರಹದಲ್ಲಿನ ನೋಟೀಸನ್ನು ಒಡೆಯ ಅಥವಾ ಸ್ವಾಧೀನದಾರನಿಗೆ ಕೊಡುವಂತೆ ಸಹ ಮಾಡತಕ್ಕದ್ದು ಮತ್ತು ಅಂಥ ನೋಟೀಸನ್ನು ಜಾರಿಗೊಳಿಸಿದ ತರುವಾಯ ಮೂರು ದಿವಸಗಳೊಳಗಾಗಿ ಅಂಥ ಒಡೆಯ ಅಥವಾ ಸ್ವಾಧೀನದಾರನು ಅಂಥ ಕಟ್ಟಡವನ್ನು ಅಥವಾ ವಸ್ತುವನ್ನು ಕೆಡವಲು, ಭದ್ರಪಡಿಸಲು ಅಥವಾ ದುರಸ್ತಿ ಮಾಡಲು ಪ್ರಾರಂಭಿಸದಿದ್ದರೆ ಮತ್ತು ಯುಕ್ತ ಶ್ರದ್ಧೆಯಿಂದ ಅಂಥ ಕೆಲಸವನ್ನು ಪೂರ್ಣಗೊಳಿಸದಿದ್ದರೆ, ಮುನ್ಸಿಪಲ್ ಕೌನ್ಸಿಲು ತಾನು ಅವಶ್ಯವೆಂದು ಯೋಚಿಸಬಹುದಾದಂಥ ಅಂಥ ಕಟ್ಟಡ ಅಥವಾ ವಸ್ತುವನ್ನು ಪೂರ್ಣವಾಗಿ ಅಥವಾ ಅಷ್ಟರಮಟ್ಟಿಗೆ ಕೆಡವಿಹಾಕುವಂತೆ, ದುರಸ್ತಿ ಮಾಡುವಂತೆ ಅಥವಾ ಅನ್ಯಥಾ ಭದ್ರಪಡಿಸುವಂತೆ ಮಾಡತಕ್ಕದ್ದು :

ಪರಂತು, ಅಪಾಯವು ಸನ್ನಿಹಿತವಾಗಿರದಿದ್ದರೆ, ಮುನ್ಸಿಪಲ್ ಕೌನ್ಸಿಲು ಸ್ವತಃ ಹಲಗೆ ತಟ್ಟಿ ಅಥವಾ ಬೇಲಿಯನ್ನು ಹಾಕುವಂತೆ ಮಾಡುವುದರ ಬದಲಾಗಿ ಸರಿಯಾದ ಹಲಗೆ ತಟ್ಟಿ ಅಥವಾ ಬೇಲಿಯನ್ನು ಹಾಕಲು ಒಡೆಯ ಅಥವಾ ಸ್ವಾಧೀನದಾರನಿಗೆ ಮೊದಲು ಬರಹದರಲ್ಲಿನ ನೋಟೀಸನ್ನು ಕೊಡುವುದು ಅದರ ವಿವೇಚನೆಗೆ ಸೇರಿದ್ದಾಗಿರತಕ್ಕದ್ದು ಮತ್ತು ಅಂಥ ನೋಟೀಸಿನ ಜಾರಿಯ ದಿನಾಂಕದಿಂದ ಎರಡು ದಿವಸಗಳೊಳಗಾಗಿ, ಪ್ರಕರಣದ ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲು ಸಾಕಷ್ಟೆಂದು ಪರ್ಯಾಲೋಚಿಸುವಂಥ ಹಲಗೆ ತಟ್ಟಿ ಅಥವಾ ಬೇಲಿಯನ್ನು ಆ ಒಡೆಯ ಅಥವಾ ಸ್ವಾಧೀನದಾರನು ಹಾಕಲು ತಪ್ಪಿದಲ್ಲಿ, ಮುನ್ಸಿಪಲ್ ಕೌನ್ಸಿಲು ಅಂಥ ಹಲಗೆ ತಟ್ಟಿ ಅಥವಾ ಬೇಲಿಯನ್ನು ಕೂಡಲೇ ಹಾಕುವಂತೆ ಮಾಡತಕ್ಕದ್ದು ಮತ್ತು ಆ ತರುವಾಯ (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಉಪಬಂಧಿಸುವಂತೆ ಮುಂದುವರಿಯತಕ್ಕದ್ದು.

**213ಕ. ಅಪಾಯಕಾರಿ ಮರಗಳ ಸಂದರ್ಭದಲ್ಲಿ ಮುನ್ನೆಚ್ಚರಿಕೆ.–** (1) ಯಾವುದೇ ಮರ ಅಥವಾ ಮರದ ಯಾವುದೇ ಕೊಂಬೆ ಅಥವಾ ಯಾವುದೇ ಮರದ ಹಣ್ಣು ಬೀಳುವ ಮತ್ತು ಆ ಮೂಲಕ ಯಾರೇ ವ್ಯಕ್ತಿ ಅಥವಾ ಯಾವುದೇ ರಚನೆಗೆ ಅಪಾಯವುಂಟು ಮಾಡುವ ಸಂಭವವಿದೆಯೆಂದು ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮಿಷನರನಿಗೆ ಕಂಡುಬಂದರೆ, ಚೀಫ್ ಆಫೀಸರನು ಅಥವಾ ಮುನ್ಸಿಪಲ್ ಕಮಿಷನರನು ನೋಟೀಸಿನ ಮೂಲಕ, ಸದರಿ ಮರದ ಒಡೆಯನನ್ನು, ಅದರಿಂದ ಉಂಟಾಗುವ ಯಾವುದೇ ಅಪಾಯವನ್ನು ತಡೆಗಟ್ಟಲು, ಸದರಿ ಮರವನ್ನು ಸಂರಕ್ಷಿಸಲು, ಸವರಲು ಅಥವಾ ಕತ್ತರಿಸಿ ಹಾಕಲು ಅಗತ್ಯಪಡಿಸಬಹುದು.

(2) ಕೂಡಲೇ ಕ್ರಮ ಕೈಗೊಳ್ಳುವುದು ಅವಶ್ಯವಾದರೆ, ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮಿಷನರನು ಅಂಥ ನೋಟೀಸನ್ನು ಕೊಡುವುದಕ್ಕೆ ಮುಂಚೆ ಅಥವಾ ಅಂಥ ನೋಟೀಸಿನ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಸದರಿ ಮರವನ್ನು ತಾನಾಗಿಯೇ ಸುರಕ್ಷಿಸತಕ್ಕದ್ದು; ಸವರತಕ್ಕದ್ದು ಅಥವಾ ಕತ್ತರಿಸಿ ಹಾಕತಕ್ಕದ್ದು ಅಥವಾ ಅದರ ಹಣ್ಣನ್ನು ತೆಗೆದುಹಾಕತಕ್ಕದ್ದು ಅಥವಾ ಯಾವುದೇ ಬೀದಿಯ ಭಾಗಕ್ಕೆ ಬೇಲಿ ಹಾಕತಕ್ಕದ್ದು ಅಥವಾ ಅಪಾಯವನ್ನು ತಡೆಗಟ್ಟಲು ತಾನು ಯೋಗ್ಯವೆಂದು ಆಲೋಚಿಸುವಂಥ ಇತರ ತಾತ್ಕಾಲಿಕ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಹಾಗೆ ಮಾಡುವುದರ ವೆಚ್ಚವನ್ನು ಆ ಮರದ ಒಡೆಯನಿಂದ, VIIನೇ ಅಧ್ಯಾಯದ ಮೇರೆಗೆ ವಸೂಲೀಯವಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂಥದೇ ರೀತಿಯಲ್ಲಿ ವಸೂಲೀಯವಾಗತಕ್ಕದ್ದು.

**214. ಅಪಾಯಕಾರಿ ಹರಿಯದೇ ನಿಂತ ಅಥವಾ ಅನ್ನೈರ್ಮಲ್ಯ ನೀರು ಸರಬರಾಜು ಮೂಲಗಳ ಬಗೆಗಿನ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಮುನ್ಸಿಪಲ್ ಕೌನ್ಸಿಲು, ಯಾವುದೇ ಕಾಲದಲ್ಲಿ, ಯಾವುದೇ ಬಾವಿ, ತೊರೆ, ಕಾಲುವೆ, ಕೆರೆ ಅಥವಾ ನೀರು ಸರಬರಾಜಿನ ಇತರ ಮೂಲದ, ಅದು ಖಾಸಗಿ ಸ್ವತ್ತಾಗಿರಲಿ ಅಥವಾ ಇಲ್ಲದಿರಲಿ, ಒಡೆಯನನ್ನು ಅಥವಾ ಅದರ ಮೇಲೆ ನಿಯಂತ್ರಣ ಹೊಂದಿರುವ ಯಾರೇ ವ್ಯಕ್ತಿಯನ್ನು,–

(ಕ) ತೊರೆಯನ್ನು ಹೊರತುಪಡಿಸಿ ಯಾವುದೇ ಅಂಥ ನೀರು ಸರಬರಾಜು ಮೂಲವನ್ನು ಸುಸ್ಥಿತಿಯಲ್ಲಿಡಲು ಮತ್ತು ನಿರ್ವಹಿಸಲು; ಅಥವಾ

(ಖ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಬೇಕಾದ ಯುಕ್ತ ಕಾಲದೊಳಗಾಗಿ ಹೂಳು, ಕಸ ಅಥವಾ ಕೊಳೆಯುತ್ತಿರುವ ಸಸ್ಯಗಳನ್ನು ತೆಗೆದು ಯಾವುದೇ ಅಂಥ ನೀರು ಸರಬರಾಜು ಮೂಲವನ್ನು ಸ್ವಚ್ಛಪಡಿಸಲು; ಅಥವಾ

(ಗ) ಮುನ್ಸಿಪಲ್ ಕೌನ್ಸಿಲು ನಿಯಮಿಸಬಹುದಾದಂಥ ರೀತಿಯಲ್ಲಿ ಮೇಲ್ಮೈ ಚರಂಡಿ ವ್ಯವಸ್ಥೆಯಿಂದ ಕಲುಷಿತವಾಗುವುದರಿಂದ ಯಾವುದೇ ಅಂಥ ನೀರು ಸರಬರಾಜು ಮೂಲವನ್ನು ಸಂರಕ್ಷಿಸಲು; ಅಥವಾ

(ಫ) ತೊರೆಯು ಸ್ವಾಭಾವಿಕವಾಗಿ ಹರಿಯುವುದನ್ನು ಅದು ಹೊರತುಪಡಿಸಿ ಅಂಥ ಯಾವುದೇ ನೀರು ಸರಬರಾಜು ಮೂಲವನ್ನು, ಸಾಕಷ್ಟು ದುರಸ್ತಿ, ಸಂರಕ್ಷಣೆ ಅಥವಾ ಬೇಲಿಯಿಲ್ಲದೆ ಇರುವುದಕ್ಕಾಗಿ ಅಂಥ ನೀರು ಸರಬರಾಜು ಮೂಲವು, ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಸಾರ್ವಜನಿಕರ ಆರೋಗ್ಯ ಅಥವಾ ಸುರಕ್ಷತೆಗೆ ಅಥವಾ ಅದನ್ನು ಉಪಯೋಗಿಸಲು ಅಥವಾ ಹಾದು ಹೋಗುವ ಅಥವಾ ಅದರ ಹತ್ತಿರಕ್ಕೆ ಹೋಗುವ ಸಂದರ್ಭವಿರುವ ಯಾರೇ ವ್ಯಕ್ತಿಗೆ ಅಪಾಯಕಾರಿಯಾಗಿದ್ದರೆ, ಮುನ್ಸಿಪಲ್ ಕೌನ್ಸಿಲು ಅನುಮೋದಿಸಬಹುದಾದಂಥ ರೀತಿಯಲ್ಲಿ ಅಂಥ ನೋಟೀಸಿನ ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ದುರಸ್ತಿ ಮಾಡಲು, ಸಂರಕ್ಷಿಸಲು ಅಥವಾ ಬೇಲಿ ಹಾಕಲು; ಅಥವಾ

(ಐ) ಸ್ವಾಭಾವಿಕವಾಗಿ ಹರಿಯುವ ತೊರೆಯಲ್ಲದೆ, ಕುಡಿಯುವುದಕ್ಕಾಗಿ ಯೋಗ್ಯವಾಗಿಲ್ಲವೆಂದು ಮುನ್ಸಿಪಲ್ ಕೌನ್ಸಿಲಿಗೆ ಸಮಾಧಾನವಾಗುವಂತೆ ರುಜುವಾತುಪಡಿಸಿದಂಥ ನೀರು ಸರಬರಾಜಿನ ಅಂಥ ಯಾವುದೇ ಮೂಲವನ್ನು ಉಪಯೋಗಿಸದಂತೆ ಮತ್ತು ಇತರರು ಉಪಯೋಗಿಸಲು ಅನುಮತಿಸದಂತೆ;

(ಚ) (ಐ) ಖಂಡದ ಮೇರೆಗೆ ಯಾವುದೇ ಅಂಥ ನೋಟೀಸು ಇದ್ದಾಗ್ಯೂ, ಅಂಥ ಉಪಯೋಗವು ಮುಂದುವರಿದರೆ ಮತ್ತು ಅನ್ಯಥಾ ತಡೆಗಟ್ಟಲು ಆಗುವುದಿಲ್ಲವೆಂದು ಮುನ್ಸಿಪಲ್ ಕೌನ್ಸಿಲು ಅಭಿಪ್ರಾಯಪಟ್ಟರೆ ಹಿಂದೆ ಹೇಳಿದಂಥ ನೀರು ಸರಬರಾಜಿನ ಮೂಲದ ಅಂಥ ಉಪಯೋಗವನ್ನು ತಡೆಗಟ್ಟಲು ಸಾಕಷ್ಟೆಂದು ಮುನ್ಸಿಪಲ್ ಕೌನ್ಸಿಲು ಪರ್ಯಾಲೋಚಿಸುವಂಥ ರೀತಿಯಲ್ಲಿ ತಾತ್ಕಾಲಿಕವಾಗಿಯಾಗಲಿ ಅಥವಾ ಖಾಯಂ ಆಗಿ ಆಗಲಿ ಮುಚ್ಚಲು ಅಥವಾ ಭರ್ತಿ ಮಾಡಲು ಅಥವಾ ಆವೃತಗೊಳಿಸಲು ಅಥವಾ ಬೇಲಿ ನಿರ್ಮಿಸಲು; ಅಥವಾ

(ಛ) ನೆರೆಹೊರೆಯ ಆರೋಗ್ಯಕ್ಕೆ ಹಾನಿಕಾರಕ ಅಥವಾ ಅಸಹ್ಯಕರವೆಂದು ಮುನ್ಸಿಪಲ್ ಕೌನ್ಸಿಲು ಪರ್ಯಾಲೋಚಿಸುವಂಥ ಯಾವುದೇ ಹರಿಯದೆ ನಿಂತ ನೀರನ್ನು ಅಂಥ ಯಾವುದೇ ನೀರು ಸರಬರಾಜಿನ ಮೂಲದಿಂದ ಅಥವಾ ಯಾವುದೇ ಭೂಮಿ ಅಥವಾ ಆವರಣ ಅಥವಾ ಅದಕ್ಕೆ ಲಗತ್ತಾದ ಅಥವಾ ಹೊಂದಿಕೊಂಡಿರುವ ಸಂಪುಟ ಅಥವಾ ಜಲಾಶಯದಿಂದ ಹರಿದುಹೋಗುವಂತೆ ಮಾಡಲು ಅಥವಾ ಅನ್ಯಥಾ ತೆಗೆದುಹಾಕಲು ಬರಹದಲ್ಲಿನ ನೋಟೀಸಿನ ಮೂಲಕ ಅಗತ್ಯಪಡಿಸಬಹುದು.

(2) ಹಿಂದೆ ಹೇಳಿದಂತೆ ನಿಯಂತ್ರಣವನ್ನು ಹೊಂದಿರುವ ಒಡೆಯ ಅಥವಾ ವ್ಯಕ್ತಿಯು, (1)ನೇ ಉಪಪ್ರಕರಣದ ಉಪಬಂಧಗಳ ಮೂಲಕ ಅಥವಾ ಅದರ ಮೇರೆಗೆ ಅಗತ್ಯಪಡಿಸಲಾದ ಕಾಲದೊಳಗೆ ಯಾವುದೇ ಅಂಥ ಕಡ್ಡಾಯ ಕೋರಿಕೆಯನ್ನು ಪಾಲಿಸಲು ತಪ್ಪಿದರೆ ಅಥವಾ ಉಪೇಕ್ಷಿಸಿದರೆ, ಮುನ್ಸಿಪಲ್ ಕೌನ್ಸಿಲು ಅಂಥ ನೋಟೀಸಿನ ಮೂಲಕ ಅಗತ್ಯಪಡಿಸಿದ ಕೆಲಸವನ್ನು ನಿರ್ವಹಿಸಲು ಮುಂದುವರಿಯಬಹುದು ಮತ್ತು ತನ್ನ ಅಭಿಪ್ರಾಯದಲ್ಲಿ ಯಾರೇ ವ್ಯಕ್ತಿಯ ಆರೋಗ್ಯ ಅಥವಾ ಸುರಕ್ಷತೆಯನ್ನು ಸಂರಕ್ಷಿಸಲು ಕೂಡಲೇ ಕ್ರಮ ಕೈಕೊಳ್ಳುವುದು ಅವಶ್ಯವಾದರೆ ಕೂಡಲೇ ಅದನ್ನು ನಿರ್ವಹಿಸಲು ಮುಂದುವರಿಯತಕ್ಕದ್ದು. ಮತ್ತು ಮುನ್ಸಿಪಲ್ ಕೌನ್ಸಿಲು ಆ ಬಗ್ಗೆ ವಹಿಸಿದ ಎಲ್ಲ ವೆಚ್ಚಗಳನ್ನು ಅಂಥ ನೀರು ಸರಬರಾಜಿನ ಒಡೆಯ ಅಥವಾ ಅದರ ಮೇಲೆ ನಿಯಂತ್ರಣ ಹೊಂದಿರುವ ವ್ಯಕ್ತಿಯು ಸಂದಾಯ ಮಾಡತಕ್ಕದ್ದು ಮತ್ತು VIIನೇ ಅಧ್ಯಾಯದ ಮೇರೆಗೆ ವಸೂಲೀಯವಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂತೆ ಅದೇ ರೀತಿಯಲ್ಲಿ ವಸೂಲೀಯವಾಗತಕ್ಕದ್ದು:

ಪರಂತು, ಯಾವುದೇ ಬಾವಿ ಅಥವಾ ಖಾಸಗಿ ತೊರೆ ಅಥವಾ ಯಾವುದೇ ಖಾಸಗಿ ಕಾಲುವೆ, ಕೆರೆ ಅಥವಾ ನೀರು ಸರಬರಾಜಿನ ಇತರ ಮೂಲದ ಸಂದರ್ಭದಲ್ಲಿ, ಅದರ ನೀರನ್ನು ಸಾರ್ವಜನಿಕರು ಅಥವಾ ಸಾರ್ವಜನಿಕರ ಯಾವುದೇ ವರ್ಗವು ಹಕ್ಕಿನಂತೆ ಉಪಯೋಗಿಸುತ್ತಿದ್ದರೆ ಮುನ್ಸಿಪಲ್ ಕೌನ್ಸಿಲು, ವಹಿಸಿದ ಅಥವಾ

ಅಂಥ ಒಡೆಯ ಅಥವಾ ಅಂಥ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ಅವಶ್ಯವಾಗಿ ವಹಿಸಿದ ವೆಚ್ಚವನ್ನು ಮುನ್ಸಿಪಲ್ ಕೌನ್ಸಿಲು ಹಾಗೆ ನಿರ್ದೇಶಿಸಿದರೆ, ಪೌರಸಭಾ ನಿಧಿಯಿಂದ ಸಂದಾಯ ಮಾಡತಕ್ಕದ್ದು.

**215. ನೆಲಗಟ್ಟು ಇತ್ಯಾದಿಗಳನ್ನು ಸ್ಥಳ ತಪ್ಪಿಸುವುದು.–** (1) ಮುನ್ಸಿಪಲ್ ಕೌನ್ಸಿಲಿನ ಅಥವಾ ಇತರ ಕಾನೂನು ಸಮ್ಮತ ಪ್ರಾಧಿಕಾರಿಯ ಬರಹದಲ್ಲಿನ ಸಮ್ಮತಿಯಿಲ್ಲದೆ ಯಾವುದೇ ಸಾರ್ವಜನಿಕ ಬೀದಿಯ ನೆಲಗಟ್ಟು, ಮೋರಿ, ಹಾಸುಗಲ್ಲುಗಳು ಅಥವಾ ಇತರ ಸಾಮಗ್ರಿಗಳನ್ನು ಅಥವಾ ಅದರ ಬೇಲಿಗಳು, ಗೋಡೆಗಳು ಅಥವಾ ಸ್ತಂಭಗಳನ್ನು ಅಥವಾ ಅದರಲ್ಲಿನ ಯಾವುದೇ ಮುನ್ಸಿಪಲ್ ದೀಪ, ದೀಪದ ಕಂಬ, ಬ್ರಾಕೆಟ್ ಜಲಸ್ಥಳ, ನೀರೆತ್ತುವ ಕೊಳವೆ ಅಥವಾ ಇತರ ಅಂಥ ಪೌರಸಭೆಯ ಸ್ವತ್ತನ್ನು ಸ್ಥಳ ತಪ್ಪಿಸುವ, ತೆಗೆದುಕೊಳ್ಳುವ ಅಥವಾ ಯಾವುದೇ ಬದಲಾವಣೆ ಮಾಡುವ ಯಾರೇ ವ್ಯಕ್ತಿಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವುದೇ ಸಾರ್ವಜನಿಕ ಬೀದಿಯ ಅಂಥ ಯಾವುದೇ ನೆಲಗಟ್ಟು ಮೋರಿ, ಹಾಸುಗಲ್ಲುಗಳು ಅಥವಾ ಇತರ ಸಾಮಗ್ರಿಗಳಲ್ಲಿ ಅಥವಾ ಬೇಲಿ ಗೋಡೆಗಳು, ಸ್ತಂಭಗಳು, ಮುನ್ಸಿಪಲ್ ದೀಪಗಳು, ದೀಪಕಂಬಗಳು, ಬ್ರಾಕೆಟುಗಳು, ಜಲಸ್ಥಳಗಳು, ನೀರೆತ್ತುವ ಕೊಳವೆಗಳು ಅಥವಾ ಇತರ ಮುನ್ಸಿಪಲ್ ಸ್ವತ್ತನ್ನು ಸ್ಥಳ ತಪ್ಪಿಸಿದ, ತೆಗೆದುಕೊಂಡ ಅಥವಾ ಬದಲಾವಣೆ ಮಾಡಿದ ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿಗೆ ಸಮಾಧಾನವಾಗುವಂತೆ ಅದನ್ನು ಪುನಃ ಸ್ಥಾಪಿಸಲು ಅಥವಾ ಪೂರ್ವಸ್ಥಿತಿಗೆ ತರಲು, ಹಾಗೆ ಮಾಡಲು ನೋಟೀಸನ್ನು ಕೊಟ್ಟ ತರುವಾಯ, ತಪ್ಪಿದರೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಯಾವುದೇ ವೆಚ್ಚವನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ವೆಚ್ಚಗಳನ್ನು VIIನೇ ಅಧಿನಿಯಮದ ಮೇರೆಗೆ ವಸೂಲೀಯವಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂತೆ ಅದೇ ರೀತಿಯಲ್ಲಿ ವಸೂಲೀಯವಾಗತಕ್ಕದ್ದು.

**216. ಸಾರ್ವಜನಿಕ ಬೀದಿಗಳು ಮತ್ತು ಬಹಿರಂಗ ಜಾಗಗಳ ಮೇಲೆ ಅಡ್ಡಿ ಮತ್ತು ಒತ್ತುವರಿಗಳು.–** (1) ಯಾವುದೇ ಸ್ಥಳದಲ್ಲಿ ಅದು ಪೌರಸಭೆಯಾದ ತರುವಾಯ, ಯಾವುದೇ ಸಾರ್ವಜನಿಕ ಬೀದಿಯಲ್ಲಿ ಚರಂಡಿಗಳ ಮೇಲಿನ ಮೆಟ್ಟಿಲುಗಳನ್ನು ಹೊರತುಪಡಿಸಿ, ಯಾವುದೇ ಗೋಡೆ ಅಥವಾ ಯಾವುದೇ ಬೇಲಿ, ಕಂಬಿ, ಸ್ತಂಭ, ಮಳಿಗೆ, ವರಾಂಡ, ಜಗಲಿ, ಮೇಲ್ಛಾವಣಿ, ಮೆಟ್ಟಿಲು ಅಥವಾ ಯಾವುದೇ ಮುಂಚಾಚುವ ರಚನೆ ಅಥವಾ ವಸ್ತುವನ್ನು ಕಟ್ಟಿರುವ ಅಥವಾ ಸ್ಥಾಪಿಸಿರುವ ಅಥವಾ ಕಟ್ಟುವ ಅಥವಾ ಸ್ಥಾಪಿಸುವ ಅಥವಾ ಅಂಥ ಬೀದಿಯಲ್ಲಿ ಯಾವುದೇ ತೆರೆದ ಚರಂಡಿ, ಮೋರಿ, ಗ್ರಾಮಸಾರ ಚರಂಡಿ ಅಥವಾ ಮೇಲ್ಗಾಲುವೆಯಲ್ಲಿ ಅಥವಾ ಅದರಾಚೆ ಅಥವಾ ಅದರ ಮೇಲೆ ಯಾವುದೇ ಪಟ್ಟಿಗೆ, ಬೇಲಿ, ಪ್ಯಾಕೇಜು ಅಥವಾ ಸರಕನ್ನು ಅಥವಾ ಅಂಥ ಬೀದಿಯಲ್ಲಿ ಯಾವುದೇ ಇತರ ವಸ್ತುವನ್ನು ಇಡುವ ಅಥವಾ ಇಡುವಂತೆ ಮಾಡುವ ಅಥವಾ ಇಟ್ಟರೆ ಆ ಯಾರೇ ವ್ಯಕ್ತಿಯು ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲು, ಅಂಥ ಅಡ್ಡಿ ಅಥವಾ ಒತ್ತುವರಿ ಮತ್ತು ತೆಗೆದು ಹಾಕಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಖಾಸಗಿ ಸ್ವತ್ತಾಗಿರದ ಯಾವುದೇ ಬಹಿರಂಗ ಜಾಗದಲ್ಲಿ ಅಂಥ ಬಹಿರಂಗ ಜಾಗವು ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರಲಿ ಅಥವಾ ಇಲ್ಲದಿರಲಿ ಅಂಥದೇ ಸ್ವರೂಪದ ಅನಧಿಕೃತ ಬಡ್ಡಿ ಅಥವಾ ಒತ್ತುವರಿಯನ್ನು ತೆಗೆದುಹಾಕಲು ಅಂಥದೇ ಅಧಿಕಾರವನ್ನು ಹೊಂದಿರತಕ್ಕದ್ದು:
ಪರಂತು, ಆ ಜಾಗವು ಸರ್ಕಾರದಲ್ಲಿ ನಿಹಿತವಾಗಿದ್ದರೆ ಡೆಪ್ಯೂಟಿ ಕಮಿಷನರರ ಅನುಮತಿಯನ್ನು ಮೊದಲು ಪಡೆದಿರತಕ್ಕದ್ದು ಮತ್ತು ಅಂಥ ತೆಗೆದುಹಾಕುವಿಕೆಯ ವೆಚ್ಚವನ್ನು ಸದರಿ ಅಡ್ಡಿ ಅಥವಾ ಒತ್ತುವರಿಗೆ ಕಾರಣನಾದ ವ್ಯಕ್ತಿಯು ಸಂದಾಯ ಮಾಡತಕ್ಕದ್ದು ಮತ್ತು VIIನೇ ಅಧ್ಯಾಯದ ಮೇರೆಗೆ ವಸೂಲೀಯವಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನ ರೀತಿಯಲ್ಲಿಯೇ ವಸೂಲೀಯವಾಗತಕ್ಕದ್ದು.

(3) ಆ ಬಗ್ಗೆ ಕ್ರಮಬದ್ಧವಾಗಿ ಅಧಿಕೃತನಾಗಿರದ ಮಣ್ಣು, ಮರಳು ಅಥವಾ ಇತರ ಸಾಮಗ್ರಿಯನ್ನು ಖಾಸಗಿ ಸ್ವತ್ತಾಗಿರದಂಥ ಯಾವುದೇ ಬಹಿರಂಗ ಜಾಗದಿಂದ ಅಥವಾ ಅದರಲ್ಲಿ ಅಥವಾ ಅದರ ಮೇಲೆ ಯಾವುದೇ ಒತ್ತುವರಿ ಮಾಡುವ ಯಾರೇ ಆಗಲಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಒತ್ತುವರಿಯ ಸಂದರ್ಭದಲ್ಲಿ ಅಂಥ ಅಪರಾಧಕ್ಕಾಗಿ ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಒತ್ತುವರಿ ಮುಂದುವರಿಯುವಂಥ ಪ್ರತಿ ದಿವಸಕ್ಕೆ 10 ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(4) ಈ ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ ಮುನ್ಸಿಪಲ್ ಕೌನ್ಸಿಲನ್ನು ಹಬ್ಬಗಳು ಮತ್ತು ಸಮಾರಂಭಗಳ ಸಂದರ್ಭಗಳಲ್ಲಿ ಯಾವುದೇ ಸಾರ್ವಜನಿಕ ಬೀದಿಯ ಯಾವುದೇ ತಾತ್ಕಾಲಿಕ ಸ್ವಾಧೀನವನ್ನು ಅಥವಾ ಅಲ್ಲಿ ಯಾವುದೇ ನಿರ್ಮಾಣಕ್ಕೆ ಅವಕಾಶ ಕೊಡುವುದನ್ನು ಅಥವಾ ಉಪಬೀದಿಗಳಲ್ಲಿ ಅಥವಾ ಜಾಗಗಳಲ್ಲಿ ನಾಲ್ಕು ದಿವಸಗಳಿಗೆ ಹೆಚ್ಚಿಲ್ಲದಂತೆ ಮತ್ತು ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ಅನಾನುಕೂಲವಾಗದಂತೆ ಉರುವಲನ್ನು ಗುಡ್ಡೆ ಹಾಕುವುದಕ್ಕೆ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ಉಪವಿಧಿಗಳಿಗೆ ಅನುಸಾರವಾಗಿ ಯಾವುದೇ ಇತರೆ ಉದ್ದೇಶಕ್ಕಾಗಿ ಯಾವುದೇ ಅಂಥ ಬೀದಿಗಳು ಅಥವಾ ಜಾಗದ ಸ್ವಾಧೀನ ಅಥವಾ ಅದರ ಮೇಲೆ ರಚನೆಯ ತಾತ್ಕಾಲಿಕ ನಿರ್ಮಾಣಕ್ಕೆ ಅವಕಾಶ ನೀಡುವುದನ್ನು ತಡೆಗಟ್ಟತಕ್ಕದ್ದಲ್ಲ.

(5) ಈ ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, 208ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಯಾವುದೇ ಮುಂಚಾಚುವಿಕೆಗೆ ಅಥವಾ ಈ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಕೊಟ್ಟಿರುವ ಅನುಮತಿಯ ಸಂದರ್ಭದಲ್ಲಿ ಅನ್ವಯಿಸತಕ್ಕದ್ದಲ್ಲ.

**217. ದುರಸ್ತಿ ಇತ್ಯಾದಿಗಳನ್ನು ಮಾಡುವಾಗ ಹಲಗೆ ಬೇಲಿಗಳನ್ನು ಹಾಕತಕ್ಕದ್ದು.–** (1) ಯಾವುದೇ ಬೀದಿಯಲಿ ಆ ಕೆಲಸವು ಅಡ್ಡಿ, ಅಪಾಯ ಅಥವಾ ಅನಾನುಕೂಲತೆ ಉಂಟುಮಾಡುವ ಹಾಗೆ ಅಥವಾ ಉಂಟುಮಾಡಬಹುದಾದ ಸಂಭವವಿರುವಂಥ ಸ್ಥಿತಿಯಲ್ಲಿ ಅಥವಾ ಸನ್ನಿವೇಶಗಳಲ್ಲಿ ಯಾವುದೇ ಕಟ್ಟಡವನ್ನು ಕಟ್ಟಲು ಅಥವಾ ಕೆಳಗಿಳಿಸಲು ಅಥವಾ ಯಾವುದೇ ಕಟ್ಟಡದ ಹೊರಭಾಗವನ್ನು ಬದಲಾಯಿಸಲು ಅಥವಾ ದುರಸ್ತಿ ಮಾಡಲು ಉದ್ದೇಶಿಸಿರುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಕೆಲಸವನ್ನು ಪ್ರಾರಂಭಿಸುವುದಕ್ಕೆ ಮುಂಚೆ;

(ಕ) ಹಾಗೆ ಮಾಡಲು ಮುನ್ಸಿಪಲ್ ಕೌನ್ಸಿಲಿನಿಂದ ಬರಹದಲ್ಲಿ ಲೈಸೆನ್ಸನ್ನು ಮೊದಲು ಪಡೆಯತಕ್ಕದ್ದು; ಮತ್ತು

(ಖ) ಅಂಥ ಕೆಲಸಗಳನ್ನು ನಡೆಸಲಾಗುತ್ತಿರುವ ಕಟ್ಟಡವನ್ನು ಬೀದಿಯಿಂದ ಪ್ರತ್ಯೇಕಿಸಲು ಸಾಕಷ್ಟು ಹಲಗೆ ಬೇಲಿಗಳು ಅಥವಾ ಬೇಲಿಗಳನ್ನು ಹಾಕುವಂತೆ ಮಾಡತಕ್ಕದ್ದು ಮತ್ತು ಸಾರ್ವಜನಿಕ ಸುರಕ್ಷತೆ ಅಥವಾ ಅನುಕೂಲತೆ ಅಗತ್ಯಪಡಿಸುವಂತೆ ಅಂಥ ಕಾಲದಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ಸಮಾಧಾನವಾಗುವಂತೆ, ಅಂಥ ಹಲಗೆ ಬೇಲಿ ಅಥವಾ ಬೇಲಿಯನ್ನು ನಿಂತಿರುವಂತೆ ಮತ್ತು ಸುಸ್ಥಿತಿಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಅದಕ್ಕೆ ರಾತ್ರಿಯ ವೇಳೆಯಲ್ಲಿ ಸಾಕಷ್ಟು ಬೆಳಕಿನ ವ್ಯವಸ್ಥೆ ಮಾಡಿಸತಕ್ಕದ್ದು ಮತ್ತು ಅದನ್ನು, ಮುನ್ಸಿಪಲ್ ಕೌನ್ಸಿಲು ನಿರ್ದೇಶಿಸಿದಾಗ ತೆಗೆದುಹಾಕತಕ್ಕದ್ದು.

(2) ಈ ಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾರೇ ಆಗಲಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯದ ದಿನಾಂಕದ ತರುವಾಯ ಮುಂದುವರಿಯುವಂಥ ಉಲ್ಲಂಘನೆಗೆ ಸಂದರ್ಭಾನುಸಾರ ಪ್ರತಿಯೊಂದು ಹಗಲು

ಅಥವಾ ರಾತ್ರಿಗೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**218. ಸಾರ್ವಜನಿಕ ಬೀದಿಯಲ್ಲಿ ಕೆಲಸವನ್ನು ನಿರ್ವಹಿಸಿದಾಗ ಸೌಲಭ್ಯಗಳ ವ್ಯವಸ್ಥೆ.–** (1) ಮುನ್ಸಿಪಲ್ ಕೌನ್ಸಿಲು, ಯಾವುದೇ ಸಾರ್ವಜನಿಕ ಬೀದಿಯಲ್ಲಿ ಯಾವುದೇ ಕೆಲಸವನ್ನು ನಿರ್ವಹಿಸುತ್ತಿರುವಾಗ ಯುಕ್ತವಾಗಿ ಆಗುವಷ್ಟರ ಮಟ್ಟಿಗೆ,

(ಕ) ಸಂಚಾರದ ಹಾಯುವಿಕೆ ಅಥವಾ ಮಾರ್ಗಪಲ್ಲಟನ;

(ಖ) ಅಂಥ ಬೀದಿಯಿಂದ ಆವರಣಕ್ಕೆ ತಲುಪಲು ಸರಿಯಾದ ಪ್ರವೇಶಾವಕಾಶ; ಮತ್ತು

(ಗ) ಅಂಥ ಕೆಲಸದ ನಿರ್ವಹಣೆಯಿಂದ ಅಡ್ಡಿಗೆ ಒಳಗಾದಂಥ ಯಾವುದೇ ಚರಂಡಿ ವ್ಯವಸ್ಥೆ, ನೀರು ಸರಬರಾಜು ಅಥವಾ ಬೆಳಕಿನ ಸಾಧನಗಳು,

–ಇವುಗಳಿಗೆ ಸಾಕಷ್ಟು ವ್ಯವಸ್ಥೆ ಮಾಡತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲು ತನ್ನಲ್ಲಿ ನಿಹಿತವಾದ ಯಾವುವೇ ಬೀದಿ, ಗ್ರಾಮಸಾರ ಚರಂಡಿ, ಚರಂಡಿ ಅಥವಾ ಇತರ ಆವರಣದ ನಿರ್ಮಾಣ ಅಥವಾ ದುರಸ್ತಿಯ ಕಾಲದಲ್ಲಿ ಹೊಂದಿಕೊಂಡಂತಿರುವ ಕಟ್ಟಡಗಳನ್ನು ಸಂರಕ್ಷಿಸುವ ಮೂಲಕ ಅಪಘಾತದ ವಿರುದ್ಧ ರಕ್ಷಣೆಗಾಗಿ ಸೂಕ್ತ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳತಕ್ಕದ್ದು ಮತ್ತು ತನಗೆ ಸರಿಯೆಂದು ತೋರುವಂತೆ ಅಂಥ ಕೆಲಸಗಳನ್ನು ನಿರ್ವಹಿಸುವಲ್ಲಿ, ವಾಹನಗಳು, ಗಾಡಿಗಳು ಅಥವಾ ಇತರ ವಾಹನಗಳು ಅಥವಾ ಜಾನುವಾರು ಅಥವಾ ಕುದುರೆಗಳ ಓಡಾಟವನ್ನು ತಡೆಗಟ್ಟಲು ಯಾವುದೇ ಬೀದಿಗೆ ಅಡ್ಡಲಾಗಿ ಅಥವಾ ಅದರಲ್ಲಿ ಅಂಥ ಸರಕುಗಳು, ಸರಪಳಿಗಳು, ಸ್ತಂಭಗಳನ್ನು ಜೋಡಿಸುವಂತೆ ಮಾಡತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲು ಬೀದಿಗಳಲ್ಲಿನ ಯಾವುದೇ ಗ್ರಾಮಸಾರ ಚರಂಡಿ, ಚರಂಡಿ ಅಥವಾ ಇತರ ಕೆಲಸಗಳನ್ನು ಅವುಗಳ ನಿರ್ಮಾಣ ಅಥವಾ ದುರಸ್ತಿ ಮಾಡುವಾಗ ರಾತ್ರಿಯ ಕಾಲದಲ್ಲಿ ಸಾಕಷ್ಟು ಬೆಳಕಿರುವಂತೆ ಮತ್ತು ರಕ್ಷಣೆ ಇರುವಂತೆ ಮಾಡಿಸತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲಿನ ಅಧಿಕಾರ ಅಥವಾ ಅದರ ಸಮ್ಮತಿಯಿಲ್ಲದೆ, ಯಾರೇ ಆಗಲಿ ಸರಳುಗಳು, ಸರಪಳಿಗಳು ಅಥವಾ ಸ್ತಂಭಗಳನ್ನು ಕೆಳಗಿಳಿಸುವ, ಬದಲಾಯಿಸುವ ಅಥವಾ ತೆಗೆದುಹಾಕುವ ಅಥವಾ ಯಾವುದೇ ಅಂಥ ದೀಪವನ್ನು ತೆಗೆದುಹಾಕುವ ಅಥವಾ ನಂದಿಸುವ ಯಾರೇ ಆಗಲಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**219. ಅನುಮತಿಯಿಲ್ಲದೆ ಬೀದಿಯಲ್ಲಿ ಮರಮುಟ್ಟುಗಳನ್ನು ಇಡತಕ್ಕದ್ದಲ್ಲ ಅಥವಾ ರಂಧ್ರ ಮಾಡತಕ್ಕದ್ದಲ್ಲ.–** (1) ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿನ ಅನುಮತಿಯಿಲ್ಲದೆ ಅಥವಾ ಅದರಲ್ಲಿ ನಿಯಮಿಸಬಹುದಾದಂಥ ಷರತ್ತುಗಳಿಗೆ ಅನುಸಾರವಾಗಿ ಅಲ್ಲದೇ, ಯಾವುದೇ ಬೀದಿಯಲ್ಲಿ ರಂಧ್ರವನ್ನು ಮಾಡತಕ್ಕದ್ದಲ್ಲ ಅಥವಾ ಕಟ್ಟಡಕ್ಕಾಗಿ ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿದ ಯಾವುದೇ ಮರಮುಟ್ಟು, ಕಲ್ಲು, ಇಟ್ಟಿಗೆ, ಮಣ್ಣು ಅಥವಾ ಸಾಮಗ್ರಿಯನ್ನು ಅದರ ಮೇಲೆ ನಿಲ್ಲಿಸತಕ್ಕದ್ದಲ್ಲ ಅಥವಾ ಇಡತಕ್ಕದ್ದಲ್ಲ. ಮತ್ತು ಮುನ್ಸಿಪಲ್ ಕೌನ್ಸಿಲಿನ ವಿವೇಚನೆಯಲ್ಲಿ ಅಂಥ ಅನುಮತಿಯು ಕೊನೆಗೊಳಿಸಬಹುದಾದುದಾಗಿರತಕ್ಕದ್ದು ಮತ್ತು ಅದನ್ನು ಯಾರೇ ವ್ಯಕ್ತಿಗೆ ಸಾಕಷ್ಟಾಗಿ ಮಂಜೂರ್ಮಾಡಿಸತಕ್ಕದ್ದು. ಅವನು ತನ್ನ ಸ್ವಂತ ವೆಚ್ಚದಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ಸಮಾಧಾನವಾಗುವಂತೆ ಸಾಮಗ್ರಿಗಳನ್ನು ತೆಗೆದುಹಾಕುವ ಅಥವಾ ರಂಧ್ರವನ್ನು ಭರ್ತಿ ಮಾಡುವ ಅಥವಾ ಅನ್ಯಥಾ ಭದ್ರಪಡಿಸುವವರೆಗೆ ಅಂಥ ಸಾಮಗ್ರಿಗಳು ಅಥವಾ ಅಂಥ ರಂಧ್ರಕ್ಕೆ ಸಾಕಷ್ಟು ಬೇಲಿ ಹಾಕಿಸತಕ್ಕದ್ದು ಮತ್ತು ಆವೃತಗೊಳಿಸುವಂತೆ ಮಾಡತಕ್ಕದ್ದು ಮತ್ತು ರಾತ್ರಿ ಕಾಲದಲ್ಲಿ ಅದಕ್ಕೆ ಸಾಕಷ್ಟು ಬೆಳಕನ್ನು ಒದಗಿಸುವಂತೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಅಂಥ ಉಲ್ಲಂಘನೆ ಮುಂದುವರಿಯುವ ಸಂದರ್ಭಾನುಸಾರ ಪ್ರತಿಯೊಂದು ಹಗಲು ಅಥವಾ ರಾತ್ರಿಗೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**220. ಅಸಾಧಾರಣ ಸಂಚಾರದ ಮೂಲಕ ಉಂಟಾದ ವೆಚ್ಚಗಳನ್ನು ವಸೂಲ್ಮಾಡಲು ಮುನ್ಸಿಪಲ್ ಕೌನ್ಸಿಲಿನ ಅಧಿಕಾರ.–** ಸರ್ಕಾರದ ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟೀವ್ ಇಂಜಿನಿಯರನ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯು ನೀಡಿದ ಪ್ರಮಾಣಪತ್ರದಿಂದ, ನೆರೆಹೊರೆಯಲ್ಲಿರುವ ರಸ್ತೆಗಳ ದುರಸ್ತಿಗೆ ಆಗುವ ಸರಾಸರಿ ವೆಚ್ಚವನ್ನು ಗಮನಿಸಿ, ಬೀದಿಗುಂಟ ಅಧಿಕ ಭಾರವು ಹಾಯುವುದರಿಂದ ಅಥವಾ ಅದರ ಮೇಲಿನ ಅಸಾಧಾರಣ ಸಂಚಾರದಿಂದಾಗಿ ಬೀದಿಯನ್ನು ದುರಸ್ತಿ ಮಾಡುವಲ್ಲಿ ಮುನ್ಸಿಪಲ್ ಕೌನ್ಸಿಲು ಅಸಾಧಾರಣ ವೆಚ್ಚವನ್ನು ವಹಿಸಿರುವುದಾಗಿ ಮುನ್ಸಿಪಲ್ ಕೌನ್ಸಿಲಿಗೆ ಕಂಡುಬಂದರೆ, ಅಂಥ ಭಾರ ಅಥವಾ ಸಂಚಾರವನ್ನು ಯಾರ ಆದೇಶದಿಂದ ಅಥವಾ ಆದೇಶದ ಪರಿಣಾಮವಾಗಿ ಹಾಯಿಸಲಾಯಿತೋ ಆ ವ್ಯಕ್ತಿಯಿಂದ ಹಿಂದೆ ಹೇಳಲಾದ ಅಂಥ ಭಾರ ಅಥವಾ ಸಂಚಾರದಿಂದ ಉಂಟಾದ ಹಾನಿಯಿಂದಾಗಿ ಅಂಥ ಕೌನ್ಸಿಲು ವಹಿಸಿದ ಅಂಥ ನ್ಯಾಯಾಲಯಕ್ಕೆ ಸಮಾಧಾನವಾಗುವಂತೆ ರುಜುವಾತುಪಡಿಸಬಹುದಾದಂಥ ವೆಚ್ಚಗಳನ್ನು ಮೊಬಲಗನ್ನು ವಸೂಲ್ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾರ ವಿರುದ್ಧ ವೆಚ್ಚಗಳು ವಸೂಲೀಯವಾಗಿರುವವೋ ಅಥವಾ ವಸೂಲೀಯವಾಗಬಹುದೋ, ಆ ಯಾರೇ ವ್ಯಕ್ತಿಯು ಅಂಥ ಭಾರ ಅಥವಾ ಸಂಚಾರಕ್ಕೆ ಸಂಬಂಧಿಸಿದಂತೆ ರಾಜಿಯ ಮೂಲಕ ಯಾವುದೇ ಮೊಬಲಗನ್ನು ಮುನ್ಸಿಪಲ್ ಕೌನ್ಸಿಲಿಗೆ ಸಂದಾಯ ಮಾಡಲು ಅದರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಬಹುದು ಮತ್ತು ಆ ತರುವಾಯ ಹಾಗೆ ಸಂದಾಯ ಮಾಡುವ ವ್ಯಕ್ತಿಯು, ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಗಳಿಗೆ ಒಳಪಡತಕ್ಕದ್ದಲ್ಲ.

**221. ಅಪಾಯಕಾರಿ ಕಲ್ಲುಗಣಿ ಕೆಲಸ.–** ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಯಾವುದೇ ಕಲ್ಲುಗಣಿಯನ್ನು ನಡೆಸುವುದು ಅಥವಾ ಯಾವುದೇ ಸ್ಥಳದಲ್ಲಿ ಭೂಮಿಯಿಂದ ಕಲ್ಲು, ಮಣ್ಣು ಅಥವಾ ಇತರ ಸಾಮಗ್ರಿಯನ್ನು ತೆಗೆಯುವುದು ಅದರ ನೆರೆಹೊರೆಯಲ್ಲಿ ಅಥವಾ ಅದಕ್ಕೆ ಕಾನೂನುಸಮ್ಮತ ಪ್ರವೇಶಾವಕಾಶವನ್ನು ಹೊಂದಿರುವ ವ್ಯಕ್ತಿಗಳಿಗೆ ಅಪಾಯಕಾರಿಯೆಂದು ಅಥವಾ ಉಪದ್ರವವುಂಟು ಮಾಡಿದರೆ ಅಥವಾ ಉಂಟುಮಾಡುವ ಸಂಭವವಿದ್ದರೆ, ಮುನ್ಸಿಪಲ್ ಕೌನ್ಸಿಲು ಬರಹದಲ್ಲಿನ ನೋಟೀಸಿನ ಮೂಲಕ ಸದರಿ ಕಲ್ಲುಗಣಿಯ ಅಥವಾ ಸ್ಥಳದ ಒಡೆಯನನ್ನು ಅಂಥ ಕೆಲಸಕ್ಕೆ ಅಥವಾ ತೆಗೆಯುವುದಕ್ಕೆ ಜವಾಬ್ದಾರನಾದ ವ್ಯಕ್ತಿಯನ್ನು ಅಂಥ ಕಲ್ಲುಗಣಿಯ ಕೆಲಸವನ್ನು ಅಥವಾ ಅಂಥ ಸಾಮಗ್ರಿಯನ್ನು ತೆಗೆಯುವುದನ್ನು ಮುಂದುವರಿಸದಿರಲು ಅಥವಾ ಅನುಮತಿಸದಿರಲು ಅಥವಾ ಅದರಿಂದ ಉಂಟಾಗುವ ಅಥವಾ ಉಂಟಾಗುವ ಸಂಭವವಿರುವ ಅಪಾಯವನ್ನು ತಡೆಗಟ್ಟುವ ಅಥವಾ ಉಪದ್ರವವನ್ನು ಉಪಶಮನಗೊಳಿಸುವ ಉದ್ದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲು ನಿರ್ದೇಶಿಸತಕ್ಕಂತೆ ಅಂಥ ಕಲ್ಲುಗಣಿ ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ವ್ಯವಸ್ಥೆಯನ್ನು ಮಾಡಲು ಅಗತ್ಯಪಡಿಸಬಹುದು:

ಪರಂತು, ಅಂಥ ಕಲ್ಲುಗಣಿ ಅಥವಾ ಸ್ಥಳವು ಸರ್ಕಾರದಲ್ಲಿ ನಿಹಿತವಾಗಿದ್ದರೆ ಅಥವಾ ಹಿಂದೆ ಹೇಳಿದಂತೆ ಅದರ ಅಂಥ ಕೆಲಸವು ಅಥವಾ ಅದರಿಂದ ತೆಗೆಯುವುದನ್ನು ಸರ್ಕಾರದ ಅಥವಾ ಹಾಗೆಂದು ಕಾರ್ಯ ನಿರ್ವಹಿಸುತ್ತಿರುವ ಸರ್ಕಾರದ ಯಾರೇ ಅಧಿಕಾರಿಯ ಅನುಮತಿ ಅಥವಾ ಅಧಿಕಾರದ ಮೇರೆಗೆ ನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯು ನಡೆಸುತ್ತಿದ್ದರೆ ಮುನ್ಸಿಪಲ್ ಕೌನ್ಸಿಲ್ಲು ಅದು ಹಾಗೆ ಮಾಡಲು ಡೆಪ್ಯೂಟಿ ಕಮಿಷನರನು ಸಮ್ಮತಿಸದ ಹೊರತು ಮತ್ತು ಅಲ್ಲಿಯವರೆಗೆ ಅಂಥ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ:

ಮತ್ತೂ ಪರಂತು, ಈ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಸಂದರ್ಭದಲ್ಲಿ ಸನ್ನಿಹಿತ ಅಪಾಯವನ್ನು ತಡೆಗಟ್ಟುವುದಕ್ಕಾಗಿ ಮುನ್ಸಿಪಲ್ ಕೌನ್ಸಿಲು ಅದಕ್ಕೆ ಅವಶ್ಯವೆಂದು ಕಂಡುಬಂದರೆ ಅಂಥ ಕಲ್ಲುಗಣಿ ಅಥವಾ ಸ್ಥಳದ ಹತ್ತಿರ ಪ್ರಯಾಣಿಕರ ಸಂರಕ್ಷಣೆಗಾಗಿ ಸರಿಯಾದ ಹಲಗೆ ಬೇಲಿ ಅಥವಾ ಬೇಲಿಯನ್ನು ಕೂಡಲೇ ಹಾಕುವಂತೆ ಮಾಡತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ಕ್ರಮವನ್ನು ಕೈಗೊಳ್ಳುವಲ್ಲಿ ಮುನ್ಸಿಪಲ್ ಕೌನ್ಸಿಲು ವಹಿಸಿದ ಯಾವುದೇ ವೆಚ್ಚವನ್ನು ಹಿಂದೆ ಹೇಳಿದಂಥ ಒಡೆಯ ಅಥವಾ ಇತರ ವ್ಯಕ್ತಿಯು ಸಂದಾಯ ಮಾಡತಕ್ಕದ್ದು. VIIನೇ ಅಧ್ಯಾಯದ ಮೇರೆಗಿನ ವಸೂಲೀಯವಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂಥದೇ ರೀತಿಯಲ್ಲಿ ವಸೂಲೀಯವಾಗತಕ್ಕದ್ದು.

**222. ನಾಯಿಗಳ ಬಗ್ಗೆ ಉಪಬಂಧ.–** (1) ಪ್ರತಿಯೊಂದು ನಾಯಿಯನ್ನು ಮುನ್ಸಿಪಲ್ ಕೌನ್ಸಿಲ್ಲು ಸಾರ್ವಜನಿಕ ನೋಟೀಸಿನ ಮೂಲಕ, ಬೀದಿಗಳಲ್ಲಿರುವಾಗ ಮತ್ತು ಯಾರೇ ವ್ಯಕ್ತಿಯಿಂದ ಕರೆದೊಯ್ಯದಿರುವಾಗ ಅದು ಕಚ್ಚುವುದನ್ನು ಪರಿಣಾಮಕಾರಿಯಾಗಿ ತಡೆಗಟ್ಟುತ್ತ ಆ ನಾಯಿಯು ಸರಾಗವಾಗಿ ಉಸಿರಾಡಲು ಮತ್ತು ಕುಡಿಯಲು ಅವಕಾಶವಿರುವ ರೀತಿಯಲ್ಲಿ ಬಾಯಿಗೆ ಕುಕ್ಕೆ ಹಾಕುವಂತೆ ಅಗತ್ಯಪಡಿಸಬಹುದು;

(2) (3)ನೇ ಉಪ–ಪ್ರಕರಣದ ಉಪಬಂಧಗಳಿಗೊಳಪಟ್ಟು ಮುನ್ಸಿಪಲ್ ಕೌನ್ಸಿಲು, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಬಾಯಿಗೆ ಕುಕ್ಕೆ ಇಲ್ಲದೇ ಅಲೆದಾಡುತ್ತಿರುವ ಯಾವುದೇ ನಾಯಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಅದರ ಒಡೆಯನು ಅದನ್ನು ಕ್ಲೇಮು ಮಾಡುವ, ಅದಕ್ಕೆ ಸರಿಯಾದ ಕುಕ್ಕೆಯನ್ನು ಒದಗಿಸುವ, ಮತ್ತು ಅದನ್ನು ತಡೆಹಿಡಿದಿಟ್ಟುಕೊಳ್ಳುವ ಬಗೆಗಿನ ಎಲ್ಲ ವೆಚ್ಚಗಳನ್ನು ಸಂದಾಯ ಮಾಡುವವರೆಗೆ ಅಂಥ ನಾಯಿಯನ್ನು ತಡೆಹಿಡಿದಿಟ್ಟುಕೊಳ್ಳಬಹುದು ಅಥವಾ ಅದನ್ನು ನಾಶಪಡಿಸುವಂತೆ ಮಾಡಬಹುದು.

(3) (2)ನೇ ಉಪ–ಪ್ರಕರಣದ ಮೇರೆಗೆ ತಡೆಹಿಡಿದಿಟ್ಟಿರಲಾದಂಥ ನಾಯಿಯ ಒಡೆಯನ ಹೆಸರು ಮತ್ತು ವಿಳಾಸವನ್ನು ಅದರ ಮೇಲೆ ಹೊಂದಿದ ಕೊರಳ ಪಟ್ಟಿಯನ್ನು ಧರಿಸಿರುವಾಗ ಅಂಥ ನಾಯಿಯನ್ನು ಅದನ್ನು ಹಾಗೆ ತಡೆ ಹಿಡಿಯಲಾದ ಎಂಬ ಸಂಗತಿಯನ್ನು ತಿಳಿಸುವ ಪತ್ರವನ್ನು ಸದರಿ ವಿಳಾಸಕ್ಕೆ ಕಳುಹಿಸುವ ಮತ್ತು ನಾಯಿಯನ್ನು ಸ್ಪಷ್ಟ ಮೂರು ದಿವಸಗಳವರೆಗೆ ಕ್ಲೇಮು ಮಾಡದಿರುವವರೆಗೆ ಅಂಥ ನಾಯಿಯನ್ನು ನಾಶಪಡಿಸತಕ್ಕದ್ದಲ್ಲ:

ಪರಂತು, ಹುಚ್ಚು ಹಿಡಿದಿರುವುದಾಗಿ ಕಂಡುಬಂದಂಥ ಯಾವುದೇ ನಾಯಿಯನ್ನು ಯಾವುದೇ ಕಾಲದಲ್ಲಿ ನಾಶಪಡಿಸಬಹುದು.

(4) ಕ್ಲೇಮು ಮಾಡಿಲ್ಲದ ಯಾವುದೇ ನಾಯಿ ಮತ್ತು ಒಡೆಯನಿದ್ದೂ, ಅವನು ತಡೆ ಹಿಡಿದಿರುವಿಕೆಯ ವೆಚ್ಚಗಳನ್ನು ಸಂದಾಯ ಮಾಡಲು ನಿರಾಕರಿಸುವಂಥ ಯಾವುದೇ ನಾಯಿಯನ್ನು ಮೂರು ಸ್ಪಷ್ಟ ದಿವಸಗಳ ಸದರಿ ಅವಧಿಗೆ ತಡೆಹಿಡಿದಿಟ್ಟ ತರುವಾಯ ಮಾರಾಟ ಮಾಡಬಹುದು ಅಥವಾ ನಾಶಪಡಿಸಬಹುದು.

(5) ಈ ಪ್ರಕರಣದ ಮೇರೆಗೆ ಮುನಿಸಿಪಲ್ ಕೌನ್ಸಿಲ್ ವಹಿಸಿದ ಎಲ್ಲ ವೆಚ್ಚಗಳನ್ನು ಸ್ವಾಧೀನಪಡಿಸಿಕೊಳ್ಳಲಾದ ಅಥವಾ ತಡೆಹಿಡಿದಿಟ್ಟುಕೊಳ್ಳಲಾದಂಥ ಯಾವುದೇ ನಾಯಿಯ ಒಡೆಯನಿಂದ VIIನೇ ಅಧ್ಯಾಯದ ಮೂಲಕ ಉಪಬಂಧಿಸಿದ ರೀತಿಯಲ್ಲಿ ವಸೂಲು ಮಾಡಿಕೊಳ್ಳಬಹುದು.

(6) ಈ ಪ್ರಕರಣದ ಮೇರೆಗೆ ನಾಶಪಡಿಸಲಾದ ಯಾವುದೇ ನಾಯಿಗೆ ಸಂಬಂಧಿಸಿದಂತೆ ಯಾವುದೇ ಹಾನಿಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

**223. ಹಂದಿಗಳನ್ನು ಇಟ್ಟುಕೊಳ್ಳುವ ಬಗ್ಗೆ ಉಪಬಂಧ.–** (1) ಪೌರಸಭೆಯ ಪರಿಮಿತಿಯೊಳಗೆ ಹಂದಿಗಳನ್ನು ಇಡುವುದರಿಂದ ಸಾರ್ವಜನಿಕರಿಗೆ ಉಪದ್ರವ ಅಥವಾ ಕಿರುಕುಳ ಉಂಟಾಗುತ್ತದೆಂದು ಯಾವುದೇ

ಕಾಲದಲ್ಲಿ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನಿಗೆ ಕಂಡುಬಂದರೆ ಮುನಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಸಾರ್ವಜನಿಕ ನೋಟೀಸಿನ ಮೂಲಕ ಬರಹದಲ್ಲಿನ ಅವನ ಅನುಮತಿಯಿಲ್ಲದೆ ಅಥವಾ ಅಂಥ ಅನುಮತಿಯ ನಿಬಂಧನೆಗಳಿಗೆ ಅನುಸಾರವಾಗಿ ಅಲ್ಲದೇ ಅನ್ಯಥಾ ಪೌರಸಭೆಯ ಯಾವುದೇ ಭಾಗದಲ್ಲಿ ಯಾವುವೇ ಹಂದಿಗಳನ್ನು ಇಡತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(2) ಅಂಥ ನಿರ್ದೇಶನದ ತರುವಾಯ, ಹಿಂದೆ ಹೇಳಿದಂತೆ ಅಗತ್ಯಪಡಿಸಿದ ಅನುಮತಿಯಿಲ್ಲದೆ ಅಥವಾ ಅದರ ನಿಬಂಧನೆಗಳಿಗೆ ಅನುಸಾರವಾಗಿ ಅಲ್ಲದೇ ಅನ್ಯಥಾ ಪೌರಸಭೆಯ ಪರಿಮಿತಿಯೊಳಗೆ ಯಾವುದೇ ಸ್ಥಳದಲ್ಲಿ ಯಾವುವೇ ಹಂದಿಗಳನ್ನು ಇಡುವ ಯಾರೇ ಆಗಲಿ, ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಅಲೆದಾಡುತ್ತಿರುವುದಾಗಿ ಕಂಡುಬಂದ ಯಾವುವೇ ಹಂದಿಗಳನ್ನು ತತ್‌ಕ್ಷಣವೇ ನಾಶಪಡಿಸಬಹುದು ಮತ್ತು ಅವುಗಳ ಹೆಣಗಳನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ನಿರ್ದೇಶಿಸತಕ್ಕಂತೆ ವಿಲೆ ಮಾಡಬಹುದು. ಹಾಗೆ ನಾಶಪಡಿಸಲಾದ ಯಾವುದೇ ಹಂದಿಗಳಿಗಾಗಿ ನಷ್ಟಪರಿಹಾರಕ್ಕಾಗಿನ ಯಾವುದೇ ಕ್ಲೇಮು ಇರತಕ್ಕದ್ದಲ್ಲ.

**ಉಪದ್ರವವನ್ನು ತಡೆಗಟ್ಟಲು ಅಧಿಕಾರಗಳು**

**224. ಧೂಳು ಇತ್ಯಾದಿಗಳನ್ನು ತಂದು ಹಾಕುವುದು.–** (1) ಮುನಿಸಿಪಲ್ ಕೌನ್ಸಿಲ್ಲು ಗೊತ್ತುಪಡಿಸತಕ್ಕಂಥ ಸ್ಥಳದಲ್ಲಿದ್ದಂಥ ರೀತಿಯಲ್ಲಿ ಮತ್ತು ಅಂಥ ಕಾಲಗಳಲ್ಲಿ ಹೊರತುಪಡಿಸಿ, ಯಾವುದೇ ಬೀದಿಯಲ್ಲಿ ಅಥವಾ ಬೀದಿಯ ಕೆಳಗಿನ ಯಾವುದೇ ಕಮಾನಿನಲ್ಲಿ ಅಥವಾ ಬೀದಿಯ ಬದಿಯ ಯಾವುದೇ ಚರಂಡಿಯಲ್ಲಿ ಅಥವಾ ಯಾವುದೇ ಬಹಿರಂಗ ಜಾಗದ ಮೇಲೆ ಅಥವಾ ಯಾವುದೇ ನದಿ ಜಲಮಾರ್ಗ ಅಥವಾ ನಾಲೆಯ ದಂಡೆಯ ಮೇಲೆ ಉಪದ್ರವಕಾರಿಯಾಗಿರುವ ಅಥವಾ ಉಪದ್ರವಕಾರಿಯಾಗಬಹುದಾದ ಯಾವುದೇ ಧೂಳು, ಸಗಣಿ ಅಥವಾ ಬೂದಿ ಅಥವಾ ತೋಟ ಅಡುಗೆಮನೆ ಅಥವಾ ಲಾಯದ ಕಸಕಡ್ಡಿ ಅಥವಾ ಯಾವುದೇ ಬಗೆಯ ಹೊಲಸು ಅಥವಾ ಯಾವುದೇ ಪ್ರಾಣಿಯ ವಸ್ತು ಅಥವಾ ಯಾವುದೇ ಒಡೆದ ಗಾಜು ಅಥವಾ ಮಣ್ಣಿನ ಪಾತ್ರೆಯ ಚೂರು ಅಥವಾ ಇತರ ಕಸಕುಪ್ಪೆ ಅಥವಾ ಇತರ ವಸ್ತುವನ್ನು ತಂದು ಹಾಕುವ ಅಥವಾ ಕುಟುಂಬದ ಅಥವಾ ಮನೆಯ ಯಾರೇ ಸದಸ್ಯನು ತಂದು ಹಾಕದಂತೆ ಮಾಡುವ ಅಥವಾ ಎಡೆಕೊಡುವ ಯಾರೇ ಆಗಲಿ ಮತ್ತು ಹಿಂದೆ ಹೇಳಿದಂತೆ ಯಾವುದೇ ಅಂಥ ಸ್ಥಳದಲ್ಲಿ ಉಪದ್ರವ ಉಂಟು ಮಾಡುವ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನು ಹಾಗೆ ಮಾಡಲು ಎಡೆಕೊಡುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಮೇಲೆ ವಿವರಿಸಲಾದ ಯಾವುದೇ ವಸ್ತುವನ್ನು ಎಸೆಯುವ ಅಥವಾ ಹಾಕುವ ಅಥವಾ ತನ್ನ ಕುಟುಂಬದ ಅಥವಾ ಮನೆಯ ಯಾರೇ ಸದಸ್ಯನು ಎಸೆಯಲು ಅಥವಾ ಹಾಕುವಂತೆ ಮಾಡುವ, ಮಾಡಲು ಎಡೆಮಾಡಿಕೊಡುವ ಅಥವಾ ಮುನಿಸಿಪಲ್ ಕೌನ್ಸಿಲಿನ ಅನುಮತಿ ಇಲ್ಲದೇ ಯಾವುದೇ ಮಲವನ್ನು ಯಾವುದೇ ಗ್ರಾಮಸಾರ ಚರಂಡಿ, ಅಡಿಗಾಲುವೆ, ಸುರಂಗ, ಮೋರಿ ಅಥವಾ ಜಲಮಾರ್ಗದೊಳಕ್ಕೆ ಎಸೆಯುವ ಅಥವಾ ಚರಂಡಿಗೆ ಹಾಕುವ ಅಥವಾ ಅವನ ಕುಟುಂಬದ ಅಥವಾ ಅವನ ಮನೆಯ ಯಾರೇ ಸದಸ್ಯನು ಎಸೆಯುವಂತೆ ಅಥವಾ ಹಾಕುವಂತೆ ಮಾಡುವ ಅಥವಾ ಮಾಡಲು ಎಡೆಕೊಡುವ ಯಾರೇ ಆಗಲಿ ಮತ್ತು ಅಂಥ ಯಾವುದೇ ಚರಂಡಿ ಅಡಿಗಾಲುವೆ ಸುರಂಗ ಮಾರ್ಗ, ಅಥವಾ ಜಲಮಾರ್ಗದಲ್ಲಿ ಅಥವಾ ಅದನ್ನು ಕಲುಷಿತಗೊಳಿಸುವ ಹಾಗೆ ಅದಕ್ಕೆ ಅಂಥ ಅತೀ ಸಮೀಪದಲ್ಲಿ ಹೇಳಿಕೆಯನ್ನು ಮಾಡುವ ಅಥವಾ ಅವನ ಕುಟುಂಬದ ಯಾರೇ ಸದಸ್ಯನು ಹೇಸಿಕೆಯನ್ನು ಮಾಡಲು ಎಡೆಮಾಡಿಕೊಡುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**225. ಗ್ರಾಮಸಾರವನ್ನು ಹೊರಬಿಡುವುದು, ಇತ್ಯಾದಿ.–** ಮುನಿಸಿಪಲ್ ಕೌನ್ಸಿಲಿನ ಬರಹದಲ್ಲಿನ ಅನುಮತಿಯಿಲ್ಲದೆ ತನ್ನ ನಿಯಂತ್ರಣದಲ್ಲಿರುವ ಯಾವುದೇ ಕಟ್ಟಡ ಅಥವಾ ಭೂಮಿಯಿಂದ ಯಾವುದೇ ಬಚ್ಚಲುಗುಂಡಿ ಅಥವಾ ಗ್ರಾಮಸಾರ ಚರಂಡಿಯ ನೀರನ್ನು ಅಥವಾ ಅಸಹ್ಯಕರವಾಗಿರುವ ಅಥವಾ ಅಸಹ್ಯಕರವಾಗಬಹುದಾದ ಸಂಭವವಿರುವಂಥ ಯಾವುದೇ ಇತರ ದ್ರವ ಅಥವಾ ಇತರ ವಸ್ತುವನ್ನು ಯಾವುದೇ ಬೀದಿ ಅಥವಾ ಬಹಿರಂಗ ಜಾಗದಲ್ಲಿ ಹರಿಯುವಂತೆ, ಬಸಿದುಹೋಗುವಂತೆ, ಎಸೆಯುವಂತೆ ಅಥವಾ ಮೇಲೆ ಹಾಕಲು ಅಥವಾ ಯಾವುದೇ ಹೊರಗೋಡೆಯ ಮೂಲಕ ತೊಯ್ದುಹೋಗುವಂತೆ ಅಥವಾ ಯಾವುದೇ ಬೀದಿಯಲ್ಲಿನ ಮೇಲೆ ಚರಂಡಿಯೊಳಕ್ಕೆ ಯಾವುದೇ ಗ್ರಾಮಸಾರ ಚರಂಡಿ ಅಥವಾ ಕಕ್ಕಸ್ಸಿನಿಂದ ಯಾವುದೇ ಅಸಹ್ಯಕರವಾದ ವಸ್ತುವನ್ನು ಯಾವುದೇ ಬೀದಿಯಲ್ಲಿ ಹರಿಯುವಂತೆ, ಬಸಿಯುವಂತೆ ಅಥವಾ ಎಸೆಯುವಂತೆ ಮಾಡುವ ಅಥವಾ ಅವಕಾಶ ಕೊಡುವ ಅಥವಾ ಅಂಥ ಅನುಮತಿಯಲ್ಲಿ ನಿಯಮಿಸಿದ ಯಾವುದೇ ಷರತನ್ನು ಪಾಲಿಸಲು ತಪ್ಪುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**226. ಹೊಲಸನ್ನು ತೆಗೆದುಹಾಕದೇ ಇರುವುದು, ಇತ್ಯಾದಿ.–** ಸಗಣಿ, ಮೂಳೆಗಳು, ಬೂದಿ, ಮಲ, ಹೊಲಸು ಅಥವಾ ಯಾವುದೇ ಹಾನಿಕಾರಕ ಅಥವಾ ಅಸಹ್ಯಕಾರಿ ವಸ್ತುವನ್ನು ಇಪ್ಪತ್ನಾಲ್ಕು ಗಂಟೆಗಳಿಗಿಂತ ಹೆಚ್ಚಾಗಿ ಯಾವುದೇ ಸಂಪುಟದಲ್ಲಿ ಅಲ್ಲದೆ ಅನ್ಯಥಾ ಕಟ್ಟಡ ಅಥವಾ ಭೂಮಿಯಲ್ಲಿ ಅಥವಾ ಅದರ ಮೇಲೆ ಇಡುವ ಅಥವಾ ಇಟ್ಟುಕೊಳ್ಳಲು ಅವಕಾಶ ಕೊಡುವ ಅಥವಾ ಅಂಥ ಸಂಪುಟವನ್ನು ಹೊಲಸು ಅಥವಾ ಹಾನಿಕಾರಕ ಸ್ಥಿತಿಯಲ್ಲಿಡಲು ಎಡೆಕೊಡುವ ಅಥವಾ ಅಂಥ ಸಂಪುಟದಿಂದ ಹೊಲಸನ್ನು ತೆಗೆದುಹಾಕಲು ಮತ್ತು ಅದನ್ನು ಸ್ವಚ್ಛಗೊಳಿಸಲು ಮತ್ತು ಶುದ್ಧಗೊಳಿಸಲು ಸೂಕ್ತಸಾಧನಗಳನ್ನು ಅಂಥ ಸಂಪುಟದಿಂದ ಹೊಲಸನ್ನು ತೆಗೆದುಹಾಕಲು ಮತ್ತು ಅದನ್ನು ಸ್ವಚ್ಛಗೊಳಿಸಲು, ಉಪಯೋಗಿಸಲು, ನಿರ್ಲಕ್ಷಿಸುವ ಅಥವಾ ಅಂಥ ಕಟ್ಟಡ ಅಥವಾ ಭೂಮಿಯಲ್ಲಿ ಅಥವಾ ಅದರ ಮೇಲೆ ಉಪದ್ರವವುಂಟು ಮಾಡುವ ರೀತಿಯಲ್ಲಿ ಯಾವುದೇ ಪ್ರಾಣಿಯನ್ನು ಇಡುವ ಅಥವಾ ಇಡಲು ಅವಕಾಶ ಮಾಡಿಕೊಡುವ ಯಾವುದೇ ಕಟ್ಟಡ ಅಥವಾ ಭೂಮಿಯ ಒಡೆಯ ಅಥವಾ ಅಧಿಭೋಗದಾರನಾಗಿರುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಮತ್ತು ಮೊದಲ ಬಾರಿಗೆ ಅಪರಾಧವು ನಿರ್ಣಯವಾದ ದಿನಾಂಕದ ತರುವಾಯ ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೂ ಅಂಥ ಅಪರಾಧಿಯು ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**227. ಮಲವನ್ನು ಹೊರಹಾಕುವುದು.–** (1) ಮುನ್ಸಿಪಲ್ ಕೌನ್ಸಿಲಿನ ಯಾವುದೇ ಮಲ ಅಥವಾ ಇತರ ಅಸಹ್ಯಕರ ವಸ್ತುವನ್ನು ತೆಗೆದುಹಾಕಲು ಕಾನೂನು ಸಮ್ಮತವಾಗಿರತಕ್ಕ ಮಾತ್ರವೇ ಆದಂತ ವೇಳೆಗಳನ್ನು ಕಾಲಕಾಲಕ್ಕೆ ನಿಗದಿಪಡಿಸಬಹುದು.

(2) (ಕ) ಮುನಿಸಿಪಲ್ ಕೌನ್ಸಿಲ್ಲು ಅಂಥ ವೇಳೆಗಳನ್ನು ಗೊತ್ತುಪಡಿಸಿರುವಾಗ ಮತ್ತು ಡಂಗೂರ ಹೊಡೆಸುವುದರ ಮೂಲಕ ಅದರ ಸಾರ್ವಜನಿಕ ನೋಟೀಸನ್ನು ಕೊಟ್ಟಿರುವಾಗ ಹಾಗೆ ನಿಗದಿಪಡಿಸಿದ ವೇಳೆಗಳಲ್ಲಿ ಅಲ್ಲದೇ ಯಾವುದೇ ಕಾಲದಲ್ಲಿ ಅಂಥ ಯಾವುದೇ ಅಸಹ್ಯಕರ ವಸ್ತುವನ್ನು ಯಾವುದೇ ಬೀದಿಯಗುಂಟ ತೆಗೆದುಹಾಕುವ ಅಥವಾ ತೆಗೆದುಹಾಕುವಂತೆ ಮಾಡುವ; ಅಥವಾ

(ಖ) ಮುನಿಸಿಪಲ್ ಕೌನ್ಸಿಲ್ಲು ಅಂಥ ವೇಳೆಗಳನ್ನು ನಿಗದಿಪಡಿಸಿರಲಿ ಅಥವಾ ಪಡಿಸದೇ ಇರಲಿ ಯಾವುದೇ ಕಾಲದಲ್ಲಿ;

(i) ಯಾವುದೇ ಅಂಥ ಉದ್ದೇಶಕ್ಕಾಗಿ ಅದರಲ್ಲಿ ಇರುವುದು ಸೋರಿ ಹೋಗುವುದನ್ನು ತಡೆಗಟ್ಟುವುದಕ್ಕಾಗಿ ಮತ್ತು ಅದರಿಂದ ಹೊರಡುವ ದುರ್ಗಂಧವನ್ನು ತಡೆಗಟ್ಟುವುದಕ್ಕಾಗಿ

ಸರಿಯಾದ ಮುಚ್ಚಳವನ್ನು ಹೊಂದಿಲ್ಲದ ಯಾವುದೇ ಗಾಡಿ, ವಾಹನ, ಸಂಪುಟ ಅಥವಾ ಪಾತ್ರೆಯನ್ನು ಉಪಯೋಗಿಸುವ; ಅಥವಾ

(ii) ಯಾವುದೇ ಅಂಥ ಅಸಹ್ಯಕರ ವಸ್ತುವನ್ನು ಅದನ್ನು ತೆಗೆದು ಹಾಕುವಲ್ಲಿ ನಿರ್ಲಕ್ಷತೆಯಿಂದ ತುಳುಕಿಸುವ ಅಥವಾ ಚೆಲ್ಲುವ; ಅಥವಾ

(iii) ಯಾವುದೇ ಅಂಥ ಅಸಹ್ಯಕರ ವಸ್ತುವನ್ನು ತುಳುಕಿಸಿದ ಅಥವಾ ಚೆಲ್ಲಿದಂಥ ಪ್ರತಿಯೊಂದು ಸ್ಥಳವನ್ನು ಎಚ್ಚರಿಕೆಯಿಂದ ಗುಡಿಸಿದ ಅಥವಾ ಸ್ವಚ್ಛಗೊಳಿಸಿದ; ಅಥವಾ

(iv) ಅಂಥ ಅಸಹ್ಯಕರ ವಸ್ತುವನ್ನು ಒಳಗೊಂಡಿರುವ ಯಾವುದೇ ಪಾತ್ರೆಯನ್ನು ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಇಡುವ ಅಥವಾ ಕೆಳಗಿಳಿಸುವ; ಅಥವಾ

(v) ಹಿಂದೆ ಹೇಳಿದಂತೆ ಯಾವುದೇ ಅಂಥ ಉದ್ದೇಶಕ್ಕಾಗಿ ಉಪಯೋಗಿಸಿದ ಯಾವುದೇ ಗಾಡಿ, ವಾಹನ, ಸಂಪುಟ ಅಥವಾ ಪಾತ್ರೆಯನ್ನು ಸಾರ್ವಜನಿಕ ನೋಟೀಸಿನ ಮೂಲಕ ಮುನಿಸಿಪಲ್ ಕೌನ್ಸಿಲು ಆ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥಹುದೇ ಬೇರೆ ಯಾವುದೇ ಬೀದಿ ಅಥವಾ ಯಾವುದೇ ಮಾರ್ಗದ ಮೂಲಕ ಚಾಲನೆ ಮಾಡುವಂತೆ ಅಥವಾ ತೆಗೆದುಕೊಂಡು ಹೋಗುವಂತೆ ಮಾಡುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**228. ಹೊಲಸು ಕಟ್ಟಡಗಳು, ಇತ್ಯಾದಿ.–** (1) ವಾಸ ಯೋಗ್ಯವಾದುದಾಗಿರಲಿ ಅಥವಾ ಅನ್ಯಥಾ ಇರಲಿ ಆ ಯಾವುದೇ ಕಟ್ಟಡ ಅಥವಾ ಭೂಮಿಯ ಒಡೆಯ ಅಥವಾ ಅಧಿಭೋಗದಾರನಾಗಿರುವ ಯಾರೇ ಆಗಲಿ ಅದನ್ನು ಹೊಲಸು ಮತ್ತು ಅನಾರೋಗ್ಯ ಸ್ಥಿತಿಯಲ್ಲಿರಲು ಅಥವಾ ಮುನಿಸಿಪಲ್ ಕೌನ್ಸಿಲ್ಲಿನ ಅಭಿಪ್ರಾಯವನ್ನು ನೆರೆಹೊರೆಯಲ್ಲಿ ವಾಸಿಸುವ ವ್ಯಕ್ತಿಗಳಿಗೆ ಉಪದ್ರವಕಾರಿಯಾಗಿರಲು ಅಥವಾ ಪಾಪಾಸುಕಳ್ಳಿ ಅಥವಾ ಗಾಬು ಬೆಳೆದ ಮತ್ತು ಹಾನಿಕಾರಕ ಸಸ್ಯಗಳು ನಿಬಿಡವಾಗಿ ಬೆಳೆಯಲು ಎಡೆಮಾಡಿಕೊಡುವ ಮತ್ತು ಅದನ್ನು ಸ್ವಚ್ಛಗೊಳಿಸಲು, ಬರಿದು ಮಾಡಲು ಅಥವಾ ಅನ್ಯಥಾ ಅದನ್ನು ಸರಿಯಾದ ಸ್ಥಿತಿಯಲ್ಲಿ ಇಡಲು ಮುನಿಸಿಪಲ್ ಕೌನ್ಸಿಲಿನ ಬರಹದಲ್ಲಿನ ನೋಟೀಸಿನ ತರುವಾಯ ಯುಕ್ತ ಕಾಲದೊಳಗೆ ಅಂಥ ನೋಟೀಸಿನಲ್ಲಿ ಕಡ್ಡಾಯ ಕೋರಿಕೆಯನ್ನು ಪಾಲಿಸದೇ ಇರತಕ್ಕವನು ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಬಾರಿಗೆ ಅಪರಾಧ ನಿರ್ಣಯವಾದ ದಿನಾಂಕದ ತರುವಾಯ ಸದರಿ ನೋಟೀಸನ್ನು ಪಾಲಿಸಲು ತಪ್ಪುವುದು ಮುಂದುವರೆಯುವಂಥ ಪ್ರತಿಯೊಂದು ದಿವಸಕ್ಕೆ ಐದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಮುನಿಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಆ ಕಟ್ಟಡದ ಸ್ಥಿತಿಯು ಮನುಷ್ಯನ ವಾಸಕ್ಕೆ ಯೋಗ್ಯವಲ್ಲದಂತಹುದಾಗಿದ್ದರೆ, ಅದನ್ನು ಯೋಗ್ಯಗೊಳಿಸುವವರೆಗೆ ಆ ಉದ್ದೇಶಕ್ಕಾಗಿ ಅದರ ಉಪಯೋಗವನ್ನು ಬರಹದ ನೋಟೀಸಿನ ಮೂಲಕ ನಿಷೇಧಿಸಬಹುದು.

**229. ತ್ಯಜಿಸಿದ ಮತ್ತು ಅಸಹ್ಯವಾದ ಕಟ್ಟಡಗಳು.–** ಯಾವುದೇ ಕಟ್ಟಡವು, ಶಿಥಿಲತೆ, ನಿರ್ಲಕ್ಷತೆ, ತ್ಯಜನ, ದುರುಪಯೋಗ ಅಥವಾ ಒಡೆತನದ ವಿವಾದ ಅಥವಾ ಅದು ವಾಸಯೋಗ್ಯವಿಲ್ಲದೆ ಉಳಿದ ಕಾರಣದಿಂದಾಗಿ ಮತ್ತು ಅದರಿಂದಾಗಿ–

(ಕ) ಸೋಮಾರಿಗಳು ಮತ್ತು ಉಪದ್ರವಕಾರಿ ವ್ಯಕ್ತಿಗಳು ಅಥವಾ ಯಾವುದೇ ಕಂಡು ಬರುವ ಜೀವನೋಪಾಯವಿಲ್ಲದ ವ್ಯಕ್ತಿಗಳ ಅಥವಾ ಅವರ ಬಗೆಗೆ ತೃಪ್ತಿಕರವಾದ ವಿವರವನ್ನು ಕೊಡಲಾಗದಂಥವರಿಗೆ, ಆಶ್ರಯಸ್ಥಳವಾಗಿದ್ದರೆ; ಅಥವಾ

(ಖ) ಯಾವುದೇ ಅನೈರ್ಮಲ್ಯ ಅಥವಾ ಅನೈತಿಕ ಉದ್ದೇಶಕ್ಕಾಗಿ ಉಪಯೋಗಿಸಲು ಬರುವುದಾಗಿದ್ದು; ಅಥವಾ

(ಗ) ಹಾವುಗಳು, ಇಲಿಗಳು ಅಥವಾ ಇತರ ಅಪಾಯಕಾರಿ ಅಥವಾ ಅಸಹ್ಯಕರ ಪ್ರಾಣಿಗಳಿಗೆ ಆಶ್ರಯ ನೀಡಿದ್ದು ಅಂಥ ಕಟ್ಟಡದ ನೆರೆಹೊರೆಯವರಿಗೆ ಅಥವಾ ಅಲ್ಲಿ ಓಡಾಡುವ ವ್ಯಕ್ತಿಗಳಿಗೆ ಉಪದ್ರವಕಾರಿ, ಅಥವಾ ಅಸೌಕರ್ಯ, ಅನಾನುಕೂಲತೆ ಅಥವಾ ಕಿರುಕುಳವನ್ನುಂಟು ಮಾಡುವ ಹಾಗೆ ಅನಾರೋಗ್ಯಕರ ಅಥವಾ ವಿಕಾರವಾಗಿರುವುದೆಂಬ ಆಕ್ಷೇಪಣೆಗೆ ಒಳಗಾಗಿದ್ದರೆ ಮುನ್ಸಿಪಲ್ ಕೌನ್ಸಿಲು, ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಮೇರೆಗೆ ಅಂಥ ಆಕ್ಷೇಪಣೆಯನ್ನು ಅನ್ಯಥಾ ನಿವಾರಿಸಲು ಆಗುವುದಿಲ್ಲವೆಂದು ಅದು ಪರ್ಯಾಲೋಚಿಸಿದರೆ, ಅಂಥ ಕಟ್ಟಡದ ಒಡೆಯನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಯು ಗೊತ್ತಿದ್ದರೆ, ಅಥವಾ ಪೌರಸಭೆಯೊಳಗೆ ಅವನು ವಾಸವಾಗಿದ್ದರೆ, ಅಂಥ ವ್ಯಕ್ತಿಗೆ ನಿರ್ದೇಶಿಸಿದ ಬರಹದಲ್ಲಿನ ನೋಟೀಸಿನ ಮೂಲಕ ಅಂಥ ವ್ಯಕ್ತಿಯನ್ನು ಅಥವಾ ಇತರ ಯಾವುದೇ ಸಂದರ್ಭದಲ್ಲಿ, ಕಟ್ಟಡದ ಬಾಗಿಲಿನ ಮೇಲೆ ಅಥವಾ ಅದರ ಯಾವುದೇ ಇತರ ಎದ್ದುಕಾಣುವ ಜಾಗದ ಮೇಲೆ ಅಂಟಿಸಿದ ಬರಹದಲ್ಲಿನ ನೋಟೀಸಿನ ಮೂಲಕ ಅಂಥ ಕಟ್ಟಡದಲ್ಲಿ ಹಿತಾಸಕ್ತಿಯನ್ನು ಹೊಂದಿರುವುದಾಗಿ ಕ್ಲೇಮು ಮಾಡುವ ಎಲ್ಲಾ ವ್ಯಕ್ತಿಗಳನ್ನು, ಅಂಥ ನೋಟೀಸಿನ ದಿನಾಂಕದಿಂದ ಏಳು ದಿವಸಗಳಿಗೆ ಕಡಿಮೆಯಿಲ್ಲದ, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾಂಥ ಅವಧಿಯಲ್ಲಿ ಅಂಥ ಕಟ್ಟಡವನ್ನು ಕೆಡವಿ ಹಾಕುವಂತೆ ಮತ್ತು ಅದರ ಸಾಮಗ್ರಿಗಳನ್ನು ತೆಗೆದುಹಾಕುವಂತೆ ಅಗತ್ಯಪಡಿಸಬಹುದು, ಮತ್ತು ಅಂಥ ಅಗತ್ಯತೆಯನ್ನು ಪಾಲಿಸದೆ ಇರುವ ಸಂದರ್ಭದಲ್ಲಿ, ಮುನ್ಸಿಪಲ್ ಕೌನ್ಸಿಲು, ಹಿಂದೆ ಹೇಳಿದಂತೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ, ತತ್‌ಕ್ಷಣವೇ ಕಟ್ಟಡವನ್ನು ಕೆಡವಿ ಹಾಕುವಂತೆ ಮತ್ತು ಆ ಸಾಮಗ್ರಿಗಳನ್ನು ತೆಗೆದುಹಾಕುವಂತೆ ಮಾಡಿಸಬಹುದು ಮತ್ತು ಅಂಥ ಸಾಮಗ್ರಿಗಳನ್ನು ಮಾರಾಟ ಮಾಡಬಹುದು ಮತ್ತು ಹಾಗೆ ಮಾಡುವಲ್ಲಿ ಅದು ವಹಿಸಿದ ಯಾವುವೇ ವೆಚ್ಚಗಳನ್ನು ಭರಿಸಿಕೊಳ್ಳಲು ಉತ್ಪತ್ತಿಗಳನ್ನು ವಿನಿಯೋಗಿಸಬಹುದು, ಮತ್ತು ಅದರಿಂದ ಭರಿಸಿಕೊಳ್ಳಲಾಗದಂಥ ಎಲ್ಲ ವೆಚ್ಚಗಳು, VIIನೇ ಅಧ್ಯಾಯದ ಮೇರೆಗೆ ವಸೂಲೀಯವಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂತಹುದೇ ಆದ ರೀತಿಯಲ್ಲಿ ವಸೂಲೀಯವಾತಕ್ಕದ್ದು.

**230. ಮನುಷ್ಯ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳು ಅಥವಾ ಕಟ್ಟಡಗಳಲ್ಲಿನ ಕೊಠಡಿಗಳು.–** (1) ವಾಸದ ಮನೆಗಾಗಿ ಉದ್ದೇಶಿಸಲಾದ ಅಥವಾ ಉಪಯೋಗಿಸಲಾದ ಯಾವುದೇ ಕಟ್ಟಡ ಅಥವಾ ಕಟ್ಟಡದಲ್ಲಿನ ಯಾವುದೇ ಕೊಠಡಿಯು ಮನುಷ್ಯ ವಾಸಕ್ಕೆ ಯೋಗ್ಯವಲ್ಲವೆಂದು ಯಾವುದೇ ಕಾರಣಕ್ಕಾಗಿ ಮುನ್ಸಿಪಲ್ ಕೌನ್ಸಿಲಿಗೆ ಕಂಡುಬಂದರೆ, ಮುನ್ಸಿಪಲ್ ಕೌನ್ಸಿಲು ಅಂಥ ಕಾರಣವನ್ನು ತಿಳಿಸುವ ಮತ್ತು ಸಂದರ್ಭಾನುಸಾರ ಕಟ್ಟಡ ಅಥವಾ ಕೊಠಡಿಯು ಇನ್ನು ಮುಂದೆ ಉಪಯೋಗವನ್ನು ನಿಷೇಧಿಸುವ ತನ್ನ ಉದ್ದೇಶವನ್ನು ಸೂಚಿಸುವ ನೋಟೀಸನ್ನು ಬರಹದಲ್ಲಿ ಅಂಥ ಕಟ್ಟಡದ ಒಡೆಯ ಅಥವಾ ಅಧಿಭೋಗದಾರನಿಗೆ ಕೊಡತಕ್ಕದ್ದು ಮತ್ತು ಅಂಥ ನೋಟೀಸನ್ನು ಸ್ವೀಕರಿಸಿದ ತರುವಾಯ ಮೂವತ್ತು ದಿವಸಗಳೊಳಗಾಗಿ ಅದಕ್ಕೆ ಯಾವುದೇ ಆಕ್ಷೇಪಣೆಯನ್ನು ಬರಹದಲ್ಲಿ ತಿಳಿಸಲು ಹಿಂದೆ ಹೇಳಿದ ಒಡೆಯ ಅಥವಾ ಅಧಿಭೋಗದಾರನಿಗೆ ಅಂಥ ನೋಟೀಸಿನಲ್ಲಿ ಕರೆಕೊಡತಕ್ಕದ್ದು; ಮತ್ತು ಹಿಂದೆ ಹೇಳಿದಂತೆ ಅಂಥ ಅವಧಿಯೊಳಗಾಗಿ ಅಂಥ ಒಡೆಯ ಅಥವಾ ಅಧಿಭೋಗದಾರನು ಯಾವುದೇ ಆಕ್ಷೇಪಣೆಯನ್ನು ಎತ್ತದಿದ್ದರೆ, ಅಥವಾ ಅಂಥ ಅವಧಿಯೊಳಗಾಗಿ ಅಂಥ ಒಡೆಯ ಅಥವಾ ಅಧಿಭೋಗದಾರನು ಎತ್ತಿದಂಥ ಯಾವುದೇ ಆಕ್ಷೇಪಣೆಯು ಅಸಿಂಧು ಅಥವಾ ಸಾಕಷ್ಟಿಲ್ಲವೆಂದು ಸ್ಥಾಯೀ ಸಮಿತಿಗೆ ಕಂಡುಬಂದರೆ ಮುನ್ಸಿಪಲ್ ಕೌನ್ಸಿಲು ಬರಹದಲ್ಲಿನ ಆದೇಶದ ಮೂಲಕ ಅಂಥ ಕಟ್ಟಡ ಅಥವಾ ಕೊಠಡಿಯನ್ನು ವಾಸದ ಮನೆಯಾಗಿ ಇನ್ನು ಮುಂದೆ ಉಪಯೋಗಿಸುವುದನ್ನು ನಿಷೇಧಿಸಬಹುದು.

(2) ಹಿಂದೆ ಹೇಳಿದಂತೆ ಯಾವುದೇ ಅಂಥ ನಿಷೇಧವನ್ನು ಮಾಡಿರುವಾಗ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಅಂಥ ನಿಷೇಧದ ನೋಟೀಸನ್ನು ಸಂದರ್ಭಾನುಸಾರ ಬಾಗಿಲಿನ ಮೇಲೆ

ಅಥವಾ ಅಂಥ ಕಟ್ಟಡದ ಅಥವಾ ಕೊಠಡಿಯ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವಂತೆ ಮತ್ತು ಅದರ ಮೇಲೆ "ಯು.ಹೆಚ್.ಹೆಚ್." ಎಂಬ ಅಕ್ಷರಗಳನ್ನು ಬಣ್ಣದಲ್ಲಿ ಬರೆಯುವಂತೆ ಮಾಡತಕ್ಕದ್ದು ಮತ್ತು ಅಂಥ ಕಟ್ಟಡ ಅಥವಾ ಕೊಠಡಿಯ ಯಾರೇ ಒಡೆಯ ಅಥವಾ ಅಧಿಭೋಗದಾರನು, ಸಂದರ್ಭಾನುಸಾರ ಕಟ್ಟಡ ಅಥವಾ ಕೊಠಡಿಯನ್ನು ಮನುಷ್ಯವಾಸಕ್ಕಾಗಿ ಯೋಗ್ಯಗೊಳಿಸಲಾಗಿದೆ ಎಂದು ಬರಹದಲ್ಲಿ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಪ್ರಮಾಣೀಕರಿಸುವವರೆಗೆ, ಮನುಷ್ಯ ವಾಸಕ್ಕಾಗಿ ಅದನ್ನು ಉಪಯೋಗಿಸತಕ್ಕದ್ದಲ್ಲ ಅಥವಾ ಉಪಯೋಗಿಸಲು ಅವಕಾಶ ಮಾಡಿಕೊಡತಕ್ಕದ್ದಲ್ಲ.

(3) ಮುನ್ಸಿಪಲ್ ಕೌನ್ಸಿಲು, ಅದೂ ಅಲ್ಲದೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮೂವತ್ತು ದಿನಗಳಿಗೆ ಕಡಿಮೆಯಿಲ್ಲದ ಕಾಲದಲ್ಲಿ ಅದರಲ್ಲಿ ನಿರ್ದಿಷ್ಟಪಡಿಸಿದ ಮೇಲ್ಪಾಟು ಕೆಲಸಗಳನ್ನು ನಿರ್ವಹಿಸಲು ಅವನನ್ನು ಅಗತ್ಯಪಡಿಸಿ ಮತ್ತು ತನ್ನ ಅಭಿಪ್ರಾಯದಲ್ಲಿ ಆ ಕೆಲಸಗಳು ಆ ಕಟ್ಟಡವನ್ನು ಮನುಷ್ಯನ ವಾಸಕ್ಕಾಗಿ ಯೋಗ್ಯಗೊಳಿಸುವುವು ಎಂದು ನಿರೂಪಿಸಿ ನೋಟೀಸನ್ನು, ತನ್ನ ವಿವೇಚನೆಯಲ್ಲಿ ಒಡೆಯ ಅಥವಾ ಅಧಿಭೋಗದಾರನಿಗೆ ಜಾರಿ ಮಾಡಬಹುದು. ಒಡೆಯನಿಗೆ ಈ ಪ್ರಕರಣದ ಮೇರೆಗೆ ನೋಟೀಸನ್ನು ಜಾರಿ ಮಾಡುವುದರ ಜೊತೆಗೆ ಮುನ್ಸಿಪಲ್ ಕೌನ್ಸಿಲು, ಆ ಕಟ್ಟಡದಲ್ಲಿ ಬಾಡಿಗೆದಾರನಾಗಿ, ಅಡಮಾನದಾರನಾಗಿ ಅಥವಾ ಅನ್ಯಥಾ ಹಿತಾಸಕ್ತಿಯನ್ನು ಹೊಂದಿರುವ ಯಾರೇ ಇತರ ವ್ಯಕ್ತಿಗೆ ಆ ನೋಟೀಸಿನ ಪ್ರತಿಯನ್ನು ಜಾರಿ ಮಾಡಬಹುದು.

(4) ಕಟ್ಟಡವನ್ನು ಸೂಕ್ತ ವೆಚ್ಚದಲ್ಲಿ ಮನುಷ್ಯನ ವಾಸಕ್ಕೆ ಯೋಗ್ಯಗೊಳಿಸಬಹುದೇ ಎಂಬುದನ್ನು ನಿರ್ಧರಿಸುವಲ್ಲಿ ಅದನ್ನು ಹಾಗೆ ಯೋಗ್ಯಗೊಳಿಸಲು ಅವಶ್ಯವಾದ ಕೆಲಸದ ಅಂದಾಜು ಖರ್ಚು ಮತ್ತು ಕೆಲಸಗಳನ್ನು ಪೂರ್ಣಗೊಳಿಸಿದಾಗ ಕಟ್ಟಡವು ಹೊಂದುವ ಅಂದಾಜು ಮೌಲ್ಯಕ್ಕೆ ಗಮನ ಕೊಡತಕ್ಕದ್ದು.

**231. ಮನುಷ್ಯ ವಾಸಕ್ಕೆ ಯೋಗ್ಯವಲ್ಲದ ಕಟ್ಟಡಗಳನ್ನು ಕೆಡವಿಹಾಕುವುದಕ್ಕೆ ಆದೇಶ ನೀಡಲು ನಗರ ಮುನ್ಸಿಲ್ ಕೌನ್ಸಿಲುಗಳ ಅಧಿಕಾರ.–** (1) ನಗರ ಮುನ್ಸಿಪಲ್ ಕೌನ್ಸಿಲಿಗೆ, ತನ್ನಲ್ಲಿರುವ ಯಾವುದೇ ಮಾಹಿತಿಯ ಮೇಲೆ ಯಾವುದೇ ಕಟ್ಟಡವು ಮನುಷ್ಯನ ವಾಸಕ್ಕೆ ಯೋಗ್ಯವಲ್ಲವೆಂದು ಮತ್ತು ಅದನ್ನು ಯುಕ್ತ ವೆಚ್ಚದಲ್ಲಿ ಯೋಗ್ಯವನ್ನಾಗಿಸಲು ಸಾಧ್ಯವಿಲ್ಲವೆಂದು ಮನದಟ್ಟಾಗಿರುವಲ್ಲಿ, ಕಟ್ಟಡದ ಒಡೆಯನಿಗೆ ಮತ್ತು ಆ ಕಟ್ಟಡದಲ್ಲಿ ಬಾಡಿಗೆದಾರ, ಅಡಮಾನದಾರ ಅಥವಾ ಅನ್ಯಥಾ ಹಿತಾಸಕ್ತಿಯನ್ನು ಹೊಂದಿರುವ ಇತರ ವ್ಯಕ್ತಿಗೆ ಆ ಕಟ್ಟಡವನ್ನು ಕೆಡವಿಹಾಕುವ ಆದೇಶವನ್ನು ಏಕೆ ಮಾಡಕೂಡದೆಂದು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಕಾರಣವನ್ನು ತೋರಿಸಲು ನೋಟೀಸನ್ನು ಜಾರಿ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಲಾಗಿದೆಯೋ, ಆ ಯಾರೇ ವ್ಯಕ್ತಿಯು, ಅದಕ್ಕನುಸಾರವಾಗಿ ಮುನ್ಸಿಪಲ್ ಕೌನ್ಸಿಲಿನ ಮುಂದೆ ಹಾಜರಾಗಿ ಮತ್ತು ಮುನ್ಸಿಪಲ್ ಕೌನ್ಸಿಲು ನಿರ್ದಿಷ್ಟಪಡಿಸಿರುವ ಅವಧಿಯೊಳಗಾಗಿ, ಆ ಕಟ್ಟಡಕ್ಕೆ ಸಂಬಂಧಪಟ್ಟಂತೆ ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಮನುಷ್ಯ ವಾಸಕ್ಕೆ ಆ ಕಟ್ಟಡವನ್ನು ಯೋಗ್ಯಗೊಳಿಸುವ ಹಾಗೆ ಅಂಥ ಮೇಲ್ಪಾಟು ಕೆಲಸವನ್ನು ನಿರ್ವಹಿಸಲು ಅಂಥ ವ್ಯಕ್ತಿಯು ಅದಕ್ಕೆ ವಾಗ್ದಾನ ಮಾಡಿದರೆ ಅಥವಾ ಆ ಉದ್ದೇಶಕ್ಕಾಗಿ ಅದನ್ನು ಯೋಗ್ಯಗೊಳಿಸಲಾಗಿದೆಯೆಂದು ಮುನ್ಸಿಪಲ್ ಕೌನ್ಸಿಲು ಮನದಟ್ಟು ಮಾಡಿಕೊಂಡು, ಆ ವಾಗ್ದಾನವನ್ನು ರದ್ದುಗೊಳಿಸುವವರೆಗೆ ಮನುಷ್ಯನ ವಾಸಕ್ಕಾಗಿ ಆ ಕಟ್ಟಡವನ್ನು ಉಪಯೋಗಿಸುವುದಿಲ್ಲವೆಂದು ವಾಗ್ದಾನವನ್ನು ಮಾಡಿದರೆ ಆ ಕಟ್ಟಡವನ್ನು ಕೆಡವಿಹಾಕುವ ಆದೇಶವನ್ನು ಮುನ್ಸಿಪಲ್ ಕೌನ್ಸಿಲು ಮಾಡತಕ್ಕದ್ದಲ್ಲ.

(3) (2)ನೇ ಉಪಪ್ರಕರಣದಲ್ಲಿ ನಮೂದಿಸಿದಂಥ ಯಾವುದೇ ಅಂಥ ವಾಗ್ದಾನವನ್ನು ಮಾಡಿಲ್ಲದಿದ್ದರೆ, ಅಥವಾ ಯಾವುದೇ ಅಂಥ ವಾಗ್ದಾನವನ್ನು ಮಾಡಿರುವ ಸಂದರ್ಭದಲ್ಲಿ ವಾಗ್ದಾನಕ್ಕೆ ಸಂಬಂಧಿಸಿದಂಥ ಯಾವುದೇ ಮೇಲ್ಪಾಟು ಕೆಲಸವನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ

ಕಾರ್ಯಗತಗೊಳಿಸದಿದ್ದರೆ, ಅಥವಾ ವಾಗ್ದಾನದ ನಿಬಂಧನೆಗಳನ್ನು ಉಲ್ಲಂಘಿಸಿ ಯಾವುದೇ ಕಾಲದಲ್ಲಿ ಕಟ್ಟಡವನ್ನು ಉಪಯೋಗಿಸಿದರೆ, ಮುನ್ಸಿಪಲ್ ಕೌನ್ಸಿಲು ಆದೇಶದ ದಿನಾಂಕದಿಂದ ಮೂವತ್ತು ದಿವಸಗಳಿಗೆ ಕಡಿಮೆಯಿಲ್ಲದಂತೆ ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕ ಅವಧಿಯೊಳಗಾಗಿ ಆ ಕಟ್ಟಡವನ್ನು ಖಾಲಿ ಮಾಡತಕ್ಕದ್ದೆಂದು ಮತ್ತು ಆ ಅವಧಿಯು ಮುಕ್ತಾಯಗೊಂಡ ತರುವಾಯ ಆರು ವಾರಗಳೊಳಗಾಗಿ ಅದನ್ನು ಕೆಡವಿಹಾಕತಕ್ಕದ್ದೆಂದು ಅಗತ್ಯಪಡಿಸಿ ಆ ಕಟ್ಟಡವನ್ನು ಕೆಡವಿಹಾಕುವ ಆದೇಶವನ್ನು ತತ್‌ಕ್ಷಣವೇ ನೀಡತಕ್ಕದ್ದು.

(4) 230ನೇ ಪ್ರಕರಣ ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ ಕಟ್ಟಡವು ಮನುಷ್ಯ ವಾಸಕ್ಕೆ ಯೋಗ್ಯವಾಗಿಲ್ಲವೇ ಎಂಬುದನ್ನು ನಿರ್ಧರಿಸುವಲ್ಲಿ, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಅದರ ಸ್ಥಿತಿಯನ್ನು ಗಮನದಲ್ಲಿಡತಕ್ಕದ್ದು, ಎಂದರೆ,–

(ಕ) ದುರಸ್ತಿ;

(ಖ) ಸ್ಥಿರತೆ;

(ಗ) ತೇವ ಇಲ್ಲದಿರುವುದು;

(ಘ) ಸ್ವಾಭಾವಿಕ ಬೆಳಕು ಮತ್ತು ಗಾಳಿ;

(ಙ) ನೀರು ಸರಬರಾಜು;

(ಚ) ಚರಂಡಿ ವ್ಯವಸ್ಥೆ ಮತ್ತು ನೈರ್ಮಲ್ಯ ಅನುಕೂಲತೆಗಳು;

(ಛ) ಆಹಾರದ ದಾಸ್ತಾನು, ತಯಾರಿಕೆ ಮತ್ತು ಅಡುಗೆ ಬಗ್ಗೆ ಮತ್ತು ಕಸ, ಹೊಲಸು ಮತ್ತು ಇತರ ಕಲುಷಿತ ವಸ್ತುವಿನ ವಿಲೆಗಾಗಿನ ಸೌಲಭ್ಯಗಳು;

ಮತ್ತು ಆ ಕಟ್ಟಡವು, ಆ ಸ್ಥಿತಿಯಲ್ಲಿ ಅಧಿಭೋಗಕ್ಕಾಗಿ ಯುಕ್ತವಾಗಿ ಯೋಗ್ಯವಲ್ಲವೆಂದು, ಸದರಿ ವಿಷಯಗಳ ಬಗ್ಗೆ ಒಂದು ಅಥವಾ ಹೆಚ್ಚು ವಿಷಯಗಳಲ್ಲಿ ಅದು ದೋಷಯುಕ್ತವಾಗಿರುವಷ್ಟರಮಟ್ಟಿಗೆ ಮಾತ್ರವೇ ಹಿಂದೆ ಹೇಳಿದಂತೆ ಯೋಗ್ಯವಾಗಿಲ್ಲವಾಗಿ ಭಾವಿಸತಕ್ಕದ್ದು.

(5) 230ನೇ ಪ್ರಕರಣ ಮತ್ತು ಈ ಪ್ರಕರಣದ ಉದ್ದೇಶಗಳಿಗಾಗಿ ಕಟ್ಟಡಕ್ಕೆ ಸಂಬಂಧಿಸಿದಂತೆ "ಮೇಲ್ಪಾಟು ಕೆಲಸ"ವು ಈ ಕೆಳಕಂಡ ಯಾವುದೇ ಒಂದು ಅಥವಾ ಹೆಚ್ಚು ಕೆಲಸಗಳನ್ನು ಒಳಗೊಳ್ಳುತ್ತದೆ ಎಂದರೆ:–

(ಕ) ಅಗತ್ಯ ದುರಸ್ತಿಗಳು;

(ಖ) ರಚನೆಗೆ ಸಂಬಂಧಿಸಿದಂತೆ ಬದಲಾವಣೆಗಳು;

(ಗ) ದೀಪದ ಸ್ಥಳ ಮತ್ತು ನೀರಿನ ನಲ್ಲಿಗಳ ವ್ಯವಸ್ಥೆ;

(ಘ) ತೆರೆದ ಅಥವಾ ಮುಚ್ಚಲಾಗಿರುವ ಚರಂಡಿಗಳ ನಿರ್ಮಾಣ;

(ಙ) ಕಕ್ಕಸುಗಳು ಮತ್ತು ಮೂತ್ರಿಗಳ ವ್ಯವಸ್ಥೆ;

(ಚ) ಹೆಚ್ಚುವರಿ ಅಥವಾ ಸುಧಾರಿತ ಜೋಡಣೆ ಮತ್ತು ಹೊಂದಾವಣೆಗಳ ವ್ಯವಸ್ಥೆ;

(ಛ) ಅಂಗಳವನ್ನು ಅಗೆಯುವುದು ಅಥವಾ ನೆಲಗಟ್ಟು ಮಾಡುವುದು;

(ಜ) ಕಸ, ಹೊಲಸು ಮತ್ತು ಇತರ ಕಲುಷಿತ ಮತ್ತು ಅಸಹ್ಯಕರ ವಸ್ತುವನ್ನು ತೆಗೆದುಹಾಕುವುದು;

(ಝ) ಮೇಲೆ ನಿರ್ದಿಷ್ಟಪಡಿಸಿದ ಯಾವುದೇ ಕೆಲಸವನ್ನು ನಿರ್ವಹಿಸುವುದಕ್ಕಾಗಿ ಅವಶ್ಯವೆಂದು ಮುನ್ಸಿಪಲ್ ಕೌನ್ಸಿಲು ಅಭಿಪ್ರಾಯಪಡುವಂಥ ಯಾವುದೇ ಕಟ್ಟಡ ಅಥವಾ ಅದರ ಭಾಗವನ್ನು ಕೆಡವಿಹಾಕುವುದನ್ನು ಒಳಗೊಂಡಂತೆ ಯಾವುದೇ ಇತರ ಕೆಲಸ.

**232. ಕಟ್ಟಡಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಇತ್ಯಾದಿಗಳ ಬಗ್ಗೆ ಅಧಿಕಾರ.–** ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಈ ಬಗ್ಗೆ ಮುನ್ಸಿಪಲ್ ಕೌನ್ಸಿಲಿನಿಂದ ಅಧಿಕೃತಗೊಂಡ ಯಾರೇ ಇತರ ಅಧಿಕಾರಿಗೆ, ಇಲ್ಲಿ ಇನ್ನು ಮುಂದೆ ಉಪಬಂಧಿಸಿದಂಥ ನೋಟೀಸನ್ನು ಕೊಟ್ಟ ಮೇಲೆ, ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಯಾವುದೇ ಕಾಲದಲ್ಲಿ ಎಲ್ಲ ಕಟ್ಟಡಗಳು ಮತ್ತು ಭೂಮಿಗಳನ್ನು ಪ್ರವೇಶಿಸಲು ಮತ್ತು ಪರಿಶೀಲಿಸಲು ಮತ್ತು ನೈರ್ಮಲ್ಯದ ಕಾರಣಗಳಿಗಾಗಿ ಒಳಗೆ ಅಥವಾ ಹೊರಗೆ ಎಲ್ಲ ಅಥವಾ ಅದರ ಯಾವುದೇ ಭಾಗಕ್ಕೆ ತತ್‌ಕ್ಷಣವೇ ಸುಣ್ಣ ಬಳಿಸಲು ಅಥವಾ ಅನ್ಯಥಾ ಸ್ವಚ್ಛಗೊಳಿಸಲು ಬರಹದಲ್ಲಿನ ನೋಟೀಸಿನ ಮೂಲಕ ನಿರ್ದೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು.

**233. ಸ್ನಾನ ಸೌಲಭ್ಯಗಳ ವ್ಯವಸ್ಥೆ.–** (1) ಮುನ್ಸಿಪಲ್ ಕೌನ್ಸಿಲು, ಸ್ನಾನ ಸ್ಥಳಗಳಾಗಿ ಉಪಯೋಗಿಸುವ ಉದ್ದೇಶಕ್ಕಾಗಿ ಸಾಕಷ್ಟು ಸಾರ್ವಜನಿಕ ಸ್ಥಳಗಳನ್ನು ಪ್ರತ್ಯೇಕವಾಗಿ ಇಡಬಹುದು ಮತ್ತು ಸ್ನಾನ ಮಾಡಲು ನಿವಾಸಿಗಳಿಗಾಗಿ ಸಾಕಷ್ಟು ಸಂಖ್ಯೆಯ ಅನುಕೂಲಕರವಾದ ತೊಟ್ಟಿಗಳು ಅಥವಾ ನೀರಿನ ಹರವುಗಳನ್ನು ಒದಗಿಸಬಹುದು ಅಥವಾ ಪ್ರತ್ಯೇಕವಾಗಿ ಇಡಬಹುದು ಮತ್ತು ಪ್ರಾಣಿಗಳನ್ನು ಅಥವಾ ಬಟ್ಟೆಗಳನ್ನು ತೊಳೆಯುವುದಕ್ಕಾಗಿ ಮತ್ತು ನಿವಾಸಿಗಳ ಆರೋಗ್ಯ, ಸ್ವಚ್ಛತೆ ಮತ್ತು ಸೌಕರ್ಯಕ್ಕಾಗಿ ತೊಟ್ಟಿಗಳು ಅಥವಾ ಜಲಾಶಯಗಳು ಅಥವಾ ನೀರಿನ ಹರವುಗಳನ್ನು ಪ್ರತ್ಯೇಕವಾಗಿ ಇಡಬಹುದು ಮತ್ತು ಈ ಪ್ರಕರಣದಲ್ಲಿ ನಮೂದಿಸಿದ ಯಾವುದೇ ಉದ್ದೇಶಕ್ಕಾಗಿ ಪೌರಸಭೆಯೊಳಗೆ ಯಾವುದೇ ಅಥವಾ ಎಲ್ಲ ಇತರ ಸಾರ್ವಜನಿಕ ಸ್ಥಳಗಳ ಉಪಯೋಗವನ್ನು ನಿಷೇಧಿಸಬಹುದು.

(2) ಈ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಮತ್ತು ಮುನ್ಸಿಪಲ್ ಕೌನ್ಸಿಲು ಮಾಡಿದ ಎಲ್ಲ ಆದೇಶಗಳ ಮತ್ತು ನೋಟೀಸುಗಳ ಪ್ರತಿಗಳನ್ನು ಪೌರಸಭಾ ಕಚೇರಿಯಲ್ಲಿ ಇಟ್ಟಿರತಕ್ಕದ್ದು ಮತ್ತು ಅವು ಎಲ್ಲಾ ಯುಕ್ತ ಕಾಲಗಳಲ್ಲಿ ಸಾರ್ವಜನಿಕರ ಪರಿಶೀಲನೆಗಾಗಿ ಮುಕ್ತವಾಗಿರತಕ್ಕದ್ದು.

**234. ನೀರನ್ನು ಮಲಿನಗೊಳಿಸುವುದು.–** 233ನೇ ಪ್ರಕರಣ ಅಥವಾ ಯಾವುದೇ ಉಪ ವಿಧಿಯ ಮೇರೆಗೆ ಮುನ್ಸಿಪಲ್ ಕೌನ್ಸಿಲಿನ ಯಾವುದೇ ಆದೇಶವನ್ನು ಉಲ್ಲಂಘಿಸಿ, ಮುನ್ಸಿಪಲ್ ಕೌನ್ಸಿಲಿಗೆ ಸೇರಿದ ಯಾವುದೇ ತೊರೆ, ಕೊಳ, ಕೆರೆ, ಜಲಾಶಯ, ಬಾವಿ, ತೊಟ್ಟಿ, ಕೊಳವೆ ಮತ್ತು ಮೇಲ್ಗಾಲುವೆಯಲ್ಲಿ ಸ್ನಾನ ಮಾಡುವ ಅಥವಾ ಅದರಲ್ಲಿ ಯಾವುದೇ ಪ್ರಾಣಿಯನ್ನು ಅಥವಾ ಯಾವುದೇ ವಸ್ತುವನ್ನು ತೊಳೆಯುವ ಅಥವಾ ತೊಳೆಯುವಂತೆ ಮಾಡುವ ಅಥವಾ ಅದರಲ್ಲಿ ಯಾವುದೇ ಪ್ರಾಣಿಯನ್ನು ಅಥವಾ ಯಾವುದನ್ನೇ ಆಗಲಿ ಎಸೆಯುವ, ಹಾಕುವ ಅಥವಾ ಬಿಸಾಡುವ ಅಥವಾ ಪ್ರವೇಶಿಸುವಂತೆ ಮಾಡುವ ಅಥವಾ ಉಪದ್ರವಕಾರಿಯಾದ ಅಥವಾ ಅಗಬಹುದಾದ ಏನನ್ನಾದರೂ ಅದರೊಳಗೆ ಹರಿಯುವಂತೆ, ಬಸಿಯುವಂತೆ ಅಥವಾ ತರುವಂತೆ ಮಾಡುವ ಅಥವಾ ಮಾಡಲು ಅವಕಾಶ ಮಾಡಿಕೊಡುವ ಅಥವಾ ಅಲ್ಲಿನ ಯಾವುದೇ ನೀರು ಅದರಿಂದಾಗಿ ಯಾವುದೇ ಪ್ರಮಾಣದಲ್ಲಿ ಮಲಿನಗೊಳಿಸುವ ಅಥವಾ ಕೆಡಿಸುವಂತೆ ಎಂಥದನ್ನಾದರೂ ಮಾಡುವ ಯಾರೇ ಆಗಲಿ ಮತ್ತು ಮುನ್ಸಿಪಲ್ ಕೌನ್ಸಿಲಿನ ಅನುಮತಿಯಿಲ್ಲದೆ ಪೌರಸಭೆಯೊಳಗೆ ಅಥವಾ ಎಲ್ಲೆಯಲ್ಲಿ ಯಾವುದೇ ಕೆರೆ, ತೊರೆ

ಅಥವಾ ಹಳ್ಳದಲ್ಲಿ ಅಂಥ ಕೆರೆ, ತೊರೆ ಅಥವಾ ಹಳ್ಳದ ನೀರನ್ನು ಅಸಹ್ಯಕಾರಿ ಅಥವಾ ಉಪದ್ರವಕಾರಿಗೊಳಿಸುವ ಸಂಭವವಿರುವ ಯಾವುದೇ ಪ್ರಾಣಿ, ತರಕಾರಿ ಅಥವಾ ಖನಿಜ ವಸ್ತುವನ್ನು ತೊಳೆಯುವ ಯಾರೇ ಆಗಲಿ, ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**235. ಅಗಸರು ಬಟ್ಟೆ ಒಗೆಯುವುದನ್ನು ನಿಯಂತ್ರಿಸುವುದು.–** (1) ಮುನ್ಸಿಪಲ್ ಕೌನ್ಸಿಲು, ಸಾರ್ವಜನಿಕ ನೋಟೀಸಿನ ಮೂಲಕ ಈ ಉದ್ದೇಶಕ್ಕಾಗಿ ಅದು ಗೊತ್ತುಮಾಡತಕ್ಕಂಥ ಸ್ಥಳಗಳನ್ನು ಹೊರತುಪಡಿಸಿ ಅವರ ವೃತ್ತಿಯನ್ನು ನಡೆಸುವಲ್ಲಿ ಅಗಸರು ಬಟ್ಟೆಗಳನ್ನು ಒಗೆಯುವುದನ್ನು ನಿಷೇಧಿಸಬಹುದು; ಮತ್ತು ಅಂಥ ಯಾವುದೇ ನಿಷೇಧವನ್ನು ಮಾಡಿರುವಾಗ ವೃತ್ತಿಯಿಂದ ಅಗಸನಾಗಿರುವ ಯಾರೇ ವ್ಯಕ್ತಿಯು ಅಂಥ ವ್ಯಕ್ತಿಯು ತನಗಾಗಿ ಅಥವಾ ಅಂಥ ಸ್ಥಳದ ಒಡೆಯ ಅಥವಾ ಅಧಿಭೋಗದಾರನಿಗಾಗಿ ಅಲ್ಲದೆ ಸ್ಥಾಯಿ ಸಮಿತಿಯು ಈ ಉದ್ದೇಶಕ್ಕಾಗಿ ಗೊತ್ತುಪಡಿಸಿರದ ಯಾವುದೇ ಸ್ಥಳದಲ್ಲಿ ಬಟ್ಟೆಗಳನ್ನು ಒಗೆಯತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲು, ಅಗಸರು ತಮ್ಮ ವೃತ್ತಿಯನ್ನು ನಡೆಸುವುದಕ್ಕಾಗಿ ಯೋಗ್ಯ ಸ್ಥಳಗಳನ್ನು ಒದಗಿಸತಕ್ಕದ್ದು ಮತ್ತು ಸರ್ಕಾರದ ಅನುಮೋದನೆಯೊಂದಿಗೆ ಅದು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಯಾವುದೇ ಅಂಥ ಸ್ಥಳದ ಉಪಯೋಗಕ್ಕಾಗಿ ಅಂಥ ಫೀಜುಗಳ ಸಂದಾಯವನ್ನು ಅಗತ್ಯಪಡಿಸಬಹುದು.

(3) ಮುನ್ಸಿಪಲ್ ಕೌನ್ಸಿಲು (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಸಾವರ್ಜನಿಕ ನೋಟೀಸನ್ನು ಹೊರಡಿಸುವ ಮೊದಲು, (2)ನೇ ಉಪಪ್ರಕರಣದ ಮೇರೆಗೆ ಒದಗಿಸಲು ಉದ್ದೇಶಿಸಿದ ಒಗೆಯುವ ಸ್ಥಳಗಳ ಪಟ್ಟಿಯನ್ನು, ಆ ಪಟ್ಟಿಯನ್ನು ಯಾವ ದಿನಾಂಕದಂದು ಅಥವಾ ಆ ತರುವಾಯ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೋ ಆ ದಿನಾಂಕವನ್ನು ನಿರ್ದಿಷ್ಟಪಡಿಸುವ ನೋಟೀಸಿನೊಂದಿಗೆ, ಅದರಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳ ಮಾಹಿತಿಗಾಗಿ, ತನ್ನ ಅಭಿಪ್ರಾಯದಲ್ಲಿ ಸಾಕಷ್ಟಾಗುವಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು; ಮತ್ತು ಸದರಿ ಸ್ಥಳಗಳನ್ನು ಅಂತಿಮವಾಗಿ ನಿಗದಿಪಡಿಸುವ ಮುಂಚೆ, ಹಾಗೆ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಯಾರೇ ವ್ಯಕ್ತಿಯು ಅದಕ್ಕೆ ಸಂಬಂಧಿಸಿದಂತೆ ಬರಹದಲ್ಲಿ ಮಾಡಬಹುದಾದಂಥ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ಸ್ವೀಕರಿಸತಕ್ಕದ್ದು ಮತ್ತು ಪರ್ಯಾಲೋಚಿಸತಕ್ಕದ್ದು.

**236. ಬಾವಿಗಳು ಇತ್ಯಾದಿಗಳಿಂದ ಆಗುವ ಉಪದ್ರವಗಳ ಉಪಶಮನ.–** (1) ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ,–

(ಕ) ಯಾವುದೇ ಹೊಂಡ, ಹಳ್ಳ, ಕಲ್ಲುಗಣಿ, ಕುಳಿ, ಅಗೆತ, ಕೆರೆ, ಬಾವಿ, ಕೊಳ್ಳ, ಚರಂಡಿ, ಜಲಮಾರ್ಗ ಅಥವಾ ನೀರಿನ ಯಾವುದೇ ಸಂಗ್ರಹ;

(ಖ) ಕಟ್ಟಡದ ಒಳಗಾಗಲಿ ಅಥವಾ ಹೊರಗೆ ಆಗಲಿ ನೀರಿಗಾಗಿನ ಯಾವುದೇ ತೊಟ್ಟಿ ಅಥವಾ ಇತರ ಸಂಪುಟ; ಅಥವಾ

(ಗ) ನೀರು ಸಂಗ್ರಹವಾಗುವಂಥ ವಾಸದ ಮನೆಯಾಗಿ ಉಪಯೋಗಿಸುವ ಯಾವುದೇ ಕಟ್ಟಡದಿಂದ ಒಂದು ನೂರು ಗಜಗಳ ಅಂತರದೊಳಗೆ ಇರುವಂಥ ಯಾವುದೇ ಭೂಮಿಯು ಸೊಳ್ಳೆಗಳ ಉತ್ಪತ್ತಿ ಸ್ಥಾನವಾಗಿದ್ದರೆ ಅಥವಾ ಹಾಗೆ ಆಗುವ ಸಂಭವವಿದ್ದರೆ ಅಥವಾ ಇತರ ಯಾವುದೇ ರೀತಿಯಲ್ಲಿ ಉಪದ್ರವಕಾರಿಯಾದರೆ,

–ಮುನ್ಸಿಪಲ್ ಕೌನ್ಸಿಲು ಬರಹದಲ್ಲಿನ ನೋಟೀಸಿನ ಮೂಲಕ ಅದರ ಒಡೆಯನನ್ನು ಮುನ್ಸಿಪಲ್ ಕೌನ್ಸಿಲು ನಿಯಮಿಸತಕ್ಕಂಥ ರೀತಿಯಲ್ಲಿ ಮತ್ತು ಅಂಥ ಸಾಮಗ್ರಿಗಳಿಂದ ಅದನ್ನು ಭರ್ತಿ ಮಾಡಲು, ಮುಚ್ಚಿಬಿಡಲು

ಅಥವಾ ಹರಿಸಿಬಿಡಲು ಅಥವಾ ಮುನ್ಸಿಪಲ್ ಕೌನ್ಸಿಲು ನಿಯಮಿಸತಕ್ಕಂತೆ, ಉಪದ್ರವವನ್ನು ನಿವಾರಿಸುವುದಕ್ಕಾಗಿ ಅಥವಾ ಉಪಶಮನಗೊಳಿಸುವುದಕ್ಕಾಗಿ ಅದರೊಂದಿಗೆ ಅಂಥ ವ್ಯವಸ್ಥೆಯನ್ನು ಮಾಡಲು ಅಗತ್ಯಪಡಿಸಬಹುದು.

(2) (ಕ) ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಪೂರ್ವಾನುಮತಿಯಿಲ್ಲದೆ ಯಾವುದೇ ಹೊಸ ಕೆರೆ ಅಥವಾ ಕೊಳವನ್ನು ತೋಡತಕ್ಕದ್ದಲ್ಲ ಅಥವಾ ನಿರ್ಮಿಸತಕ್ಕದ್ದಲ್ಲ;

(ಖ) ಯಾವುದೇ ಅಂಥ ಕೆಲಸವನ್ನು ಹಾಗೆ ಅನುಮತಿಯಿಲ್ಲದೆ ಪ್ರಾರಂಭಿಸಿದರೆ ಅಥವಾ ಪೂರ್ಣಗೊಳಿಸಿದರೆ ಮುನ್ಸಿಪಲ್ ಕೌನ್ಸಿಲು,–

(i) ಅಂಥ ಕೆಲಸವನ್ನು ಮಾಡಿರುವ ಒಡೆಯ ಅಥವಾ ಇತರ ವ್ಯಕ್ತಿಯನ್ನು ಮುನ್ಸಿಪಲ್ ಕೌನ್ಸಿಲು ನಿಯಮಿಸತಕ್ಕಂಥ ರೀತಿಯಲ್ಲಿ ಅದನ್ನು ಭರ್ತಿ ಮಾಡಲು ಅಥವಾ ಕೆಡವಿ ಹಾಕಲು ಬರಹದಲ್ಲಿನ ನೋಟೀಸಿನ ಮೂಲಕ ಅಗತ್ಯಪಡಿಸಬಹುದು;

(ii) ಅಂಥ ಕೆಲಸವನ್ನು ಉಳಿಸಿಕೊಳ್ಳಲು ಬರಹದಲ್ಲಿನ ಅನುಮತಿಯನ್ನು ಕೊಡಬಹುದು, ಆದರೆ ಅಂಥ ಅನುಮತಿಯು ಈ ಉಪಪ್ರಕರಣದ (ಕ) ಖಂಡದ ಉಪಬಂಧಗಳನ್ನು ಉಲ್ಲಂಘಿಸಿದುದಕ್ಕಾಗಿನ ವ್ಯವಹರಣೆಗಳಿಂದ ಅಂಥ ಒಡೆಯನನ್ನು ವಿನಾಯಿತಿಗೊಳಿಸತಕ್ಕದ್ದಲ್ಲ.

**237. ಕೆಲವು ಬಗೆಯ ಸಾಗುವಳಿಯ ನಿಯಂತ್ರಣ ಅಥವಾ ನಿಷೇಧ.–** ಮುನ್ಸಿಪಲ್ ಕೌನ್ಸಿಲು ಪೌರಸಭೆಯ ಪರಿಮಿತಿಯೊಳಗಿನ ಯಾವುದೇ ಸ್ಥಳದಲ್ಲಿ ಯಾವುದೇ ಬಗೆಯ ಬೆಳೆಯ ಸಾಗುವಳಿ ಅಥವಾ ಯಾವುದೇ ಬಗೆಯ ಗೊಬ್ಬರದ ಉಪಯೋಗ ಅಥವಾ ಭೂಮಿಯ ನೀರಾವರಿಯು ಸಾರ್ವಜನಿಕ ಆರೋಗ್ಯಕ್ಕೆ ಹಾನಿಕರವಾಗಿದೆಯೆಂಬ ಸಾರ್ವಜನಿಕ ಆರೋಗ್ಯ ನಿರ್ದೇಶಕ, ಆರೋಗ್ಯಾಧಿಕಾರಿ ಅಥವಾ ಸ್ಥಳೀಯ ವೈದ್ಯಾಧಿಕಾರಿಯ ವರದಿಯ ಮೇಲೆ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಸಾರ್ವಜನಿಕ ನೋಟೀಸು ಮೂಲಕ ಹಾನಿಕರವೆಂದು ಹಾಗೆ ವರದಿ ಮಾಡಲಾದ ಸಾಗುವಳಿ, ಗೊಬ್ಬರದ ಉಪಯೋಗ ಅಥವಾ ನೀರಾವರಿಯನ್ನು ನಿಯಂತ್ರಿಸಬಹುದು ಅಥವಾ ನಿಷೇಧಿಸಬಹುದು:

ಪರಂತು, ಅಂಥ ಸಾಗುವಳಿ ಅಥವಾ ನೀರಾವರಿಯನ್ನು ಅಂಥ ಸಾರ್ವಜನಿಕ ನೋಟೀಸಿನ ದಿನಾಂಕದ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಬೇಸಾಯದ ಸಾಮಾನ್ಯ ಕ್ರಮವು ಅವಕಾಶ ಮಾಡಲಾಗುವಂತೆ ಎಡಬಿಡದ ಹಾಗೆ ನಡೆಸುತ್ತಿರುವಾಗ ಸಂಪೂರ್ಣ ನಿಷೇಧದಿಂದ ಅವರಿಗೆ ಉಂಟಾದ ಯಾವುದೇ ಹಾನಿಗಾಗಿ ಹಿತಾಸಕ್ತಿಯುಳ್ಳ ಎಲ್ಲಾ ವ್ಯಕ್ತಿಗಳಿಗೆ ಪೌರಸಭಾ ನಿಧಿಯಿಂದ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

**238. ಅಸಹ್ಯಕರ ಗೊಬ್ಬರ ಇತ್ಯಾದಿಯ ಉಪಯೋಗ.–** ಮುನ್ಸಿಪಲ್ ಕೌನ್ಸಿಲಿನ ಬರಹದಲ್ಲಿನ ಅನುಮತಿಯಿಂದಲ್ಲದೆ, ಮತ್ತು ಅಂಥ ಅನುಮತಿಯಲ್ಲಿ ವಿಧಿಸಿದ ರೀತಿಯಲ್ಲಿ ಯಾವುದಾದರೂ ಇದ್ದರೆ; ಅಸಹ್ಯಕರ ವಾಸನೆಯನ್ನು ಹೊರಸೂಸುವ ಮಲ ಅಥವಾ ಇತರ ಗೊಬ್ಬರ ಅಥವಾ ವಸ್ತುವನ್ನು ದಾಸ್ತಾನು ಮಾಡಲು ಅಥವಾ ಉಪಯೋಗಿಸುವ ಯಾರೇ ಆಗಲಿ, ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**239. ಜಾನುವಾರುಗಳನ್ನು ಕಟ್ಟಿಹಾಕುವುದು ಇತ್ಯಾದಿ.–** ಯಾವುದೇ ಸಾರ್ವಜನಿಕ ಬೀದಿ ಅಥವಾ ಸ್ಥಳದಲ್ಲಿ, ಅದರಲ್ಲಿನ ಸಾರ್ವಜನಿಕ ಸಂಚಾರಕ್ಕೆ ಅಡ್ಡಿ ಅಥವಾ ಅಪಾಯವಾಗುವ ಹಾಗೆ ಜಾನುವಾರು ಅಥವಾ ಇತರ ಪ್ರಾಣಿಗಳನ್ನು ಕಟ್ಟಿಹಾಕುವ ಅಥವಾ ಅವನ ಕುಟುಂಬದ ಅಥವಾ ಮನೆಯ ಯಾರೇ ಸದಸ್ಯನು ಅವುಗಳನ್ನು ಕಟ್ಟಿಹಾಕುವಂತೆ ಮಾಡುವ ಅಥವಾ ಅದಕ್ಕೆ ಅವಕಾಶ ಕೊಡುವ ಅಥವಾ ಉಪದ್ರವವನ್ನುಂಟು ಮಾಡುವ ಅಥವಾ ಅಂಥ ಪ್ರಾಣಿಗಳು ರಕ್ಷಕನಿಲ್ಲದೆ ಅಲೆದಾಡುವಂತೆ ಮಾಡುವ ಅಥವಾ ಅದಕ್ಕೆ ಅವಕಾಶ

ಕೊಡುವ ಯಾರೇ ಆಗಲಿ, ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**240. ಪ್ರಾಣಿಗಳಿಗೆ ಹೊಲಸನ್ನು ತಿನ್ನಿಸುವುದು.–** ಹೈನುಗಾರಿಕೆಯ ಉದ್ದೇಶಗಳಿಗಾಗಿ ಇಟ್ಟಿರುವಂಥ ಅಥವಾ ಮಾನವ ಆಹಾರಕ್ಕಾಗಿ ಉದ್ದೇಶಿಸಲಾದಂಥ ಯಾವುದೇ ಪ್ರಾಣಿಗೆ ಅಮೇಧ್ಯ ಸ್ವಭಾವದ ಪದಾರ್ಥ, ಲಾಯದ ಕಸ, ಹೊಲಸು ಅಥವಾ ಇತರ ಅಸಹ್ಯಕರ ಪದಾರ್ಥವನ್ನು ತಿನ್ನಿಸುವ ಅಥವಾ ಅಂಥ ಪದಾರ್ಥವನ್ನು ಅಂಥ ಪ್ರಾಣಿಗೆ ತಿನ್ನಲು ಅಥವಾ ತಿನ್ನಿಸಲು ಅವಕಾಶ ಕೊಡುವ ಯಾರೇ ಆಗಲಿ, ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**241. ಹೊಗೆಯ ಬಳಕೆ.–** (1) ಪೌರಸಭೆಯ ಪರಿಮಿತಿಯೊಳಗೆ, ಯಾವುದೇ ವೃತ್ತಿ ಅಥವಾ ಎಂಥದೇ ತಯಾರಿಕೆಯ ಉದ್ದೇಶಕ್ಕಾಗಿ ಉಪಯೋಗಿಸಿದ ಯಾವುದೇ ಕೆಲಸಗಳಲ್ಲಿ ಅಥವಾ ಕಟ್ಟಡಗಳಲ್ಲಿ, ಅದರಲ್ಲಿ ಹಬೆ ಯಂತ್ರವನ್ನು ಉಪಯೋಗಿಸಿರಲಿ ಅಥವಾ ತೊಡಗಿಸಿರಲಿ ಅಥವಾ ಇಲ್ಲದಿರಲಿ, ತೊಡಗಿಸಿದ ಅಥವಾ ತೊಡಗಿಸಬೇಕಾದ ಪ್ರತಿಯೊಂದು ಕುಲುಮೆಯನ್ನು, ಅಂಥ ಕುಲುಮೆಯಿಂದ ಉದ್ಭವಿಸುವ ಹೊಣೆಯನ್ನು ಕಾರ್ಯಸಾಧ್ಯವಾಗಬಹುದಾದಷ್ಟರಮಟ್ಟಿಗೆ ಬಳಸಿಕೊಳ್ಳುವ, ಸುಡುವ ಅಥವಾ ತಗ್ಗಿಸುವ ಹಾಗೆ ಎಲ್ಲ ಸಂದರ್ಭಗಳಲ್ಲಿ ನಿರ್ಮಿಸತಕ್ಕದ್ದು, ಸೇರಿಸತಕ್ಕದ್ದು ಅಥವಾ ಬದಲಾಯಿಸತಕ್ಕದ್ದೆಂದು ಸಾರ್ವಜನಿಕ ನೋಟೀಸಿನ ಮೂಲಕ ನಿರ್ದೇಶಿಸುವುದು ಮುನ್ಸಿಪಲ್ ಕೌನ್ಸಿಲಿಗೆ ಕಾನೂನುಸಮ್ಮತವಾಗಿರತಕ್ಕದ್ದು.

(2) ಅಂಥ ನಿರ್ದೇಶನದ ತರುವಾಯ ಯಾರೇ ವ್ಯಕ್ತಿಯು ಹಾಗೆ ನಿರ್ಮಿಸದ, ಸೇರಿಸದ ಅಥವಾ ಬದಲಾಯಿಸದ ಅಂಥ ಕುಲುಮೆಯನ್ನು ಉಪಯೋಗಿಸಿದರೆ ಅಥವಾ ಉಪಯೋಗಿಸಲು ಅವಕಾಶ ಕೊಟ್ಟರೆ ಅಥವಾ ಅದರಿಂದ ಉದ್ಭವಿಸುವ ಹೊಗೆಯನ್ನು ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳದ ಅಥವಾ ಸುಡದ ಹಾಗೆ ಅಂಥ ಯಾವುದೇ ಕುಲುಮೆಯನ್ನು ನಿರ್ಲಕ್ಷ್ಯದಿಂದ ಉಪಯೋಗಿಸಿದರೆ ಅಥವಾ ಉಪಯೋಗಿಸಲು ಅವಕಾಶ ನೀಡಿದರೆ ಸದರಿ ಕೆಲಸಗಳು ಅಥವಾ ಕಟ್ಟಡಗಳ ಒಡೆಯ ಅಥವಾ ಅಧಿಭೋಗದಾರನಾಗಿ ಅಥವಾ ಅಂಥ ಒಡೆಯ ಅಥವಾ ಅಧಿಭೋಗದಾರನಿಂದ ಅದರ ವ್ಯವಸ್ಥಾಪನೆಗಾಗಿ ನಿಯೋಜಿತನಾದ ಏಜೆಂಟ್ ಅಥವಾ ಇತರ ವ್ಯಕ್ತಿಗಾಗಿ ಹಾಗೆ ಅಪರಾಧ ಮಾಡುವ ಪ್ರತಿಯೊಬ್ಬ ವ್ಯಕ್ತಿಯು, ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ ಸಂಚಾರದ ಉದ್ದೇಶಕ್ಕಾಗಿ ಯಾವುದೇ ರೈಲ್ವೆ ಅಥವಾ ರಸ್ತೆಗಳ ದುರಸ್ತಿಗಾಗಿ ಉಪಯೋಗಿಸಲಾದ ಸ್ವಯಂಚಾಲಿತ ಇಂಜನ್‌ಗಳಿಗೆ ಅನ್ವಯಿಸುವುದೆಂದು ಗ್ರಹಿಸತಕ್ಕದ್ದಲ್ಲ.

**242. ಉಪದ್ರವದ ನಿಷೇಧ.–**

(ಕ) ಯಾವುದೇ ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಸ್ಥಳದಲ್ಲಿ,–

(i) ತನ್ನ ದೇಹಬಾಧೆಯನ್ನು ತೀರಿಸಿಕೊಳ್ಳುವ; ಅಥವಾ

(ii) ಭಿಕ್ಷೆಗಾಗಿ ಅಲೆದಾಡುವ ಅಥವಾ ಪೀಡಿಸಿ ಬೇಡುವ; ಅಥವಾ

(iii) ದಾನವನ್ನು ಉತ್ತೇಜಿಸುವ ಉದ್ದೇಶದಿಂದ ಯಾವುದೇ ಅಂಗವಿಕಾರ ಅಥವಾ ರೋಗ ಅಥವಾ ಅಸಹ್ಯಕರ ಹುಣ್ಣು ಅಥವಾ ಗಾಯವನ್ನು ತೆರೆದಿಡುವ ಅಥವಾ ಪ್ರದರ್ಶಿಸುವ;

(iv) ಸಾರ್ವಜನಿಕರಿಗೆ ದೃಷ್ಟಿಗೆ ಕಾಣುವಂತೆ ಮಾಂಸವನ್ನು ಕೊಂಡೊಯ್ಯುವ; ಅಥವಾ

(v) ಸರಿಯಾದ ಅಧಿಕಾರವಿಲ್ಲದೆ ಪ್ರಾಣಿಯನ್ನು ತಡೆಯುವ ಅಥವಾ ಗಾಡಿಗಳನ್ನು ಕೂಡಿಹಾಕುವ; ಅಥವಾ

(vi) ಸರಿಯಾದ ಅಧಿಕಾರವಿಲ್ಲದೆ ಯಾವುದೇ ಕಟ್ಟಡ, ಸ್ಮಾರಕ, ಸ್ತಂಭ, ಗೋಡೆ, ಬೇಲಿ, ಮರ ಅಥವಾ ಇತರ ವಸ್ತುವಿನ ಮೇಲೆ ಯಾವುದೇ ಪ್ರಕಟಪತ್ರ, ನೋಟೀಸು, ಅಥವಾ ಇತರ ಕಾಗದ ಪತ್ರವನ್ನು ಅಂಟಿಸುವ; ಅಥವಾ

(vii) ಸರಿಯಾದ ಅಧಿಕಾರವಿಲ್ಲದೆ ಯಾವುದೇ ಕಟ್ಟಡ, ಸ್ಮಾರಕ, ಸ್ತಂಭ, ಗೋಡೆ, ಚಾವಣಿ, ಮರ ಅಥವಾ ಇತರ ವಸ್ತುವನ್ನು ವಿರೂಪಗೊಳಿಸುವ ಅಥವಾ ಅದರ ಮೇಲೆ ಬರೆಯುವ ಅಥವಾ ಅನ್ಯಥಾ ಗುರುತು ಮಾಡುವ; ಅಥವಾ

(viii) ಸರಿಯಾದ ಅಧಿಕಾರವಿಲ್ಲದೆ ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಹಾಕಿರುವ ಅಥವಾ ಪ್ರದರ್ಶಿಸಿರುವ ಯಾವುದೇ ನೋಟೀಸು ಅಥವಾ ಇತರ ಕಾಗದ ಪತ್ರವನ್ನು ತೆಗೆಯುವ, ನಾಶಪಡಿಸುವ, ವಿರೂಪಗೊಳಿಸುವ ಅಥವಾ ಅನ್ಯಥಾ ತೊಡೆದುಹಾಕುವ; ಅಥವಾ

(ಖ) ಅಂಥ ಉದ್ದೇಶಕ್ಕಾಗಿ ಪ್ರತ್ಯೇಕವಾಗಿರಿಸದ ಯಾವುದೇ ಸ್ಥಳದಲ್ಲಿ ಯಾವುದೇ ಸಮಾಧಿಯನ್ನು ನಿರ್ಮಿಸುವ ಅಥವಾ ಯಾವುದೇ ಹೆಣವನ್ನು ಸುಡುವ ಅಥವಾ ಹೂಳುವ; ಅಥವಾ

(ಗ) ಸಾರ್ವಜನಿಕ ಅಥವಾ ವಿಶೇಷ ನೋಟೀಸಿನ ಮೂಲಕ ಮುನ್ಸಿಪಲ್ ಕೌನ್ಸಿಲು ನಿಷೇಧಿಸಿರುವಂಥ ಯಾವುದೇ ಕಾಲ ಅಥವಾ ಸ್ಥಳದಲ್ಲಿ ಯಾವುದೇ ನಗಾರಿ ಅಥವಾ ಟಾಂಟಾಮನ್ನು ಹೊಡೆಯುವ ಅಥವಾ ಕಹಳೆ ಅಥವಾ ತುತ್ತೂರಿ ಊದುವ ಅಥವಾ ಯಾವುದೇ ಪಾತ್ರೆಯನ್ನು ಬಡಿಯುವ ಅಥವಾ ಯಾವುದೇ ಬ್ಯಾಂಡು ಅಥವಾ ಇತರ ವಾದ್ಯವನ್ನು ಬಾರಿಸುವ ಅಥವಾ ಯಾವುದೇ ಸಂಗೀತವನ್ನು ನುಡಿಸುವ; ಅಥವಾ

(ಘ) ಸರಿಯಾದ ಅಧಿಕಾರವಿಲ್ಲದೆ, ಹಾಡುವ, ಅರಚುವ ಅಥವಾ ಕೂಗುವ ಮೂಲಕ ಅಥವಾ ಮನುಷ್ಯರ ಧ್ವನಿಯನ್ನು ವಿಸ್ತರಿಸಲು ಅಥವಾ ಯಥಾವತ್ತಾಗಿ ಬಿತ್ತರಿಸಲು ಮೆಗಾಫೋನ್ ಅಥವಾ ಧ್ವನಿವರ್ಧಕಗಳಂಥ ಯಾವುದೇ ಉಪಕರಣವನ್ನು ಉಪಯೋಗಿಸುವ ಮೂಲಕ ಸಾರ್ವಜನಿಕ ಶಾಂತಿ ಅಥವಾ ವ್ಯವಸ್ಥೆಯನ್ನು ಭಂಗಪಡಿಸುವ; ಅಥವಾ

(ಙ) ಯಾರೇ ವ್ಯಕ್ತಿಗೆ ಕ್ಷತಿ, ಅಪಾಯ, ಗಾಬರಿ ಅಥವಾ ಕಿರುಕುಳವನ್ನುಂಟು ಮಾಡುವ ಹಾಗೆ ಯಾವುದೇ ಪ್ರಾಣಿಯನ್ನು ಬಿಟ್ಟುಬಿಡುವ ಅಥವಾ ಯಾವುದೇ ಪ್ರಾಣಿಯನ್ನು ನಿರ್ಲಕ್ಷ್ಯದಿಂದ ಹಾಗೆ ಮಾಡಲು ಅವಕಾಶ ಮಾಡಿಕೊಡುವ; ಅಥವಾ

(ಚ) ಮುನಿಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನ ಬರಹದಲ್ಲಿನ ಅನುಮತಿ ಮತ್ತು ಅವನು ಅಧಿಕೃತಗೊಳಿಸಬಹುದಾದಂಥ ರೀತಿಯಲ್ಲಿ ಅಲ್ಲದೆ, ಮಲ, ಸಗಣಿ, ಗೊಬ್ಬರ, ಕಸ ಅಥವಾ ಅಸಹ್ಯಕರ ವಾಸನೆಯನ್ನು ಹೊರಸೂಸುವ ಇತರ ಯಾವುದೇ ವಸ್ತುವನ್ನು ಶೇಖರಿಸುವ ಅಥವಾ ಉಪಯೋಗಿಸುವ; ಅಥವಾ

(ಛ) ಆ ಉದ್ದೇಶಕ್ಕಾಗಿ ಉದ್ದೇಶಿಸಿಲ್ಲದ ಯಾವುದೇ ಸ್ಥಳವನ್ನು ಕಕ್ಕಸಿನಂತೆ ಉಪಯೋಗಿಸುವ ಅಥವಾ ಉಪಯೋಗಿಸಲು ಅನುಮತಿಸುವ,

–ಯಾರೇ ಆಗಲಿ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**ಮಾರುಕಟ್ಟೆಗಳು, ಸರಕುಗಳ ಮಾರಾಟ ಇತ್ಯಾದಿಗಳ ನಿಯಂತ್ರಣ**

**243. ಮಾರುಕಟ್ಟೆಗಳು, ಕಸಾಯಿ ಖಾನೆಗಳು ಮತ್ತು ಕೆಲವು ವ್ಯವಹಾರಗಳಿಗೆ ಲೈಸೆನ್ಸ್‌ಗಳನ್ನು ಕೊಡುವುದು.–** (1) ಅಂಥ ಲೈಸೆನ್ಸ್‌ಗಳನ್ನು ಮಂಜೂರ್ಮಾಡಬಹುದಾದಂಥ ಮುನ್ಸಿಪಲ್ ಕೌನ್ಸಿಲ್‌ನಿಂದ ಪಡೆದ ಲೈಸೆನ್ಸ್‌ಗಳ ಷರತ್ತುಗಳ ಮೇರೆಗೆ ಮತ್ತು ಅದಕ್ಕನುಸಾರವಾಗಿ ಅಲ್ಲದೆ, 324ನೇ ಪ್ರಕರಣದ (1)ನೇ ಉಪಪ್ರಕರಣದ (ಖ) ಖಂಡದ (i), (ii), (iii) (iv) ಮತ್ತು (v)ನೇ ಉಪಖಂಡದಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲಿಗೆ ಸೇರಿರದ ಅಥವಾ ಅದರಲ್ಲಿ ನಿಹಿತವಾಗಿರದ ಯಾವುದೇ ಸ್ಥಳವನ್ನು ಉಪಯೋಗಿಸತಕ್ಕದ್ದಲ್ಲವೆಂದು ನಿರ್ದೇಶಿಸುವುದು ಮುನ್ಸಿಪಲ್ ಕೌನ್ಸಿಲಿಗೆ ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಲೈಸೆನ್ಸಿನ ಯಾವುದೇ ಷರತ್ತನ್ನು ಉಲ್ಲಂಘಿಸಿದರೆ ಅಥವಾ ಯಾವುದೇ ಉಪವಿಧಿಯ ಅಥವಾ ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸಿದರೆ ಈ ಅಧಿನಿಯಮದ ಮೇರೆಗೆ ಲೈಸೆನ್ಸ್‌ದಾರನನ್ನು ಪ್ರಾಸಿಕ್ಯೂಟ್ ಮಾಡಿರಲಿ ಅಥವಾ ಮಾಡಿಲ್ಲದಿರಲಿ ಅಂಥ ಲೈಸೆನ್ಸ್‌ನ್ನು ಅಮಾನತುಗೊಳಿಸಬಹುದು, ತಡೆಹಿಡಿಯಬಹುದು ಅಥವಾ ಹಿಂದಕ್ಕೆ ಪಡೆಯಬಹುದು.

(2) ನಿರ್ದೇಶನಕ್ಕೆ ತದ್ವಿರುದ್ಧವಾಗಿ ಅಥವಾ (1)ನೇ ಉಪಪ್ರಕರಣವು ಅಗತ್ಯಪಡಿಸಿದ ಲೈಸೆನ್ಸನ್ನು ಪಡೆಯದೆ ಅಥವಾ ಲೈಸೆನ್ಸಿನ ಯಾವುದೇ ಷರತ್ತನ್ನು ಉಲ್ಲಂಘಿಸಿ ಅಥವಾ ಅದರ ಅಮಾನತ್ತಿನ ಅವಧಿಯಲ್ಲಿ ಯಾವುದೇ ಸ್ಥಳವನ್ನು ಉಪಯೋಗಿಸುವ ಅಥವಾ ಉಪಯೋಗಿಸಲು ಅನುಮತಿಸುವ ಯಾರೇ ಆಗಲಿ ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ, ಅಪರಾಧ ನಿರ್ಣಯವನ್ನು ಪಡೆದುಕೊಂಡ ಮೇಲೆ, ಮ್ಯಾಜಿಸ್ಟ್ರೇಟನು ಮುನ್ಸಿಪಲ್ ಕೌನ್ಸಿಲಿನ ಅರ್ಜಿಯ ಮೇಲೆ, ಆದರೆ ಅನ್ಯಥಾ ಅಲ್ಲ, ಅಂಥ ಸ್ಥಳವನ್ನು ಮುಚ್ಚುವಂತೆ ಆದೇಶಿಸಬಹುದು ಮತ್ತು ಆ ತರುವಾಯ ಅಂಥ ಸ್ಥಳವನ್ನು ಹಾಗೆ ಉಪಯೋಗಿಸುವುದನ್ನು ತಡೆಯಲು ಜನರನ್ನು ನೇಮಿಸತಕ್ಕದ್ದು ಅಥವಾ ಇತರ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು; ಮತ್ತು ಆ ಸ್ಥಳವನ್ನು ಮುಚ್ಚತಕ್ಕದ್ದೆಂದು ಹಾಗೆ ಆದೇಶಿಸಿದ ತರುವಾಯ ಅದನ್ನು ಹಾಗೆ ಉಪಯೋಗಿಸುವ ಅಥವಾ ಉಪಯೋಗಿಸಲು ಅನುಮತಿಸುವ ಪ್ರತಿಯೊಬ್ಬ ವ್ಯಕ್ತಿಯು ಮುಚ್ಚತಕ್ಕದ್ದೆಂದು ಹಾಗೆ ಆದೇಶಿಸಿದ ತರುವಾಯ ಆ ಸ್ಥಳವನ್ನು ಹಾಗೆ ಉಪಯೋಗಿಸುವುದನ್ನು ಮುಂದುವರಿಸುವ ಅಥವಾ ಅಂಥ ಉಪಯೋಗವನ್ನು ಅನುಮತಿಸುವಂಥ ಅವಧಿಯ ಪ್ರತಿಯೊಂದು ದಿನಕ್ಕೆ ಐದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**244. ಮಾರುಕಟ್ಟೆಗಳನ್ನು ಮತ್ತು ಕಸಾಯಿಖಾನೆಗಳನ್ನು ತೆರೆಯುವುದು, ಮುಚ್ಚುವುದು ಮತ್ತು ಬಾಡಿಗೆಗೆ ಕೊಡುವುದು.–** (1) ಮುನ್ಸಿಪಲ್ ಕೌನ್ಸಿಲು ಕಾಲಕಾಲಕ್ಕೆ ಯಾವುದೇ ಸಾರ್ವಜನಿಕ ಮಾರುಕಟ್ಟೆ ಅಥವಾ ಕಸಾಯಿಖಾನೆಯನ್ನು ತೆರೆಯಬಹುದು ಅಥವಾ ಮುಚ್ಚಬಹುದು, ಯಾವುದೇ ಅಂಥ ಮಾರುಕಟ್ಟೆ ಅಥವಾ ಕಸಾಯಿಖಾನೆಯನ್ನು ಯಾರೇ ವ್ಯಕ್ತಿಯು ಉಪಯೋಗಿಸುವುದಕ್ಕಾಗಿ ಅಂಗಡಿ ಸುಂಕವನ್ನಾಗಲಿ ಅಥವಾ ಇತರ ಬಾಡಿಗೆ ಅಥವಾ ಫೀಜುಗಳನ್ನು ಸಹ ಪಡೆಯಬಹುದು ಅಥವಾ ಅಂಥ ಯಾವುದೇ ಮಾರುಕಟ್ಟೆ ಅಥವಾ ಕಸಾಯಿಖಾನೆಯಲ್ಲಿ ಅಂಥ ಯಾವುದೇ ಅಂಗಡಿ ಅಥವಾ ಸ್ಥಳವನ್ನು ಅನುಭೋಗಿಸುವ ಅಥವಾ ಅನ್ಯಥಾ

ಉಪಯೋಗಿಸುವ ವಿಶೇಷಾಧಿಕಾರ ಕಾಲಕಾಲಕ್ಕೆ ಬಹಿರಂಗ ಹರಾಜಿನ ಮೂಲಕ ಅಥವಾ ಅನ್ಯಥಾ ಮಾರಬಹುದು ಮತ್ತು ಬಳಕೆಯ ಉದ್ದೇಶಗಳಿಗಾಗಿ ಯಾವುದೇ ಕಸಾಯಿಖಾನೆಯಲ್ಲಿ ವಧಿಸಿದ ಯಾವುದೇ ಪ್ರಾಣಿಯ ಮೇಲೆ ಫೀಜನ್ನು ವಿಧಿಸಬಹುದು.

(2) ಮುನ್ಸಿಪಲ್ ಕೌನ್ಸಿಲಿನ ಅನುಮತಿ ಅಥವಾ ಲೈಸೆನ್ಸ್ ಪಡೆಯದೆ ಸದರಿ ಮಾರುಕಟ್ಟೆಗಳಲ್ಲಿ ಯಾವುವೇ ವಸ್ತುಗಳನ್ನು ಮಾರಾಟ ಮಾಡುವ ಅಥವಾ ಮಾರಾಟಕ್ಕಾಗಿ ತೆರೆದು ಇಡುವ ಅಥವಾ ಸದರಿ ಕಸಾಯಿಖಾನೆಗಳನ್ನು ಉಪಯೋಗಿಸುವ ಯಾರೇ ವ್ಯಕ್ತಿಯು, ಇಪ್ಪತ್ತೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) (1)ನೇ ಉಪ-ಪ್ರಕರಣದ ಮೇರೆಗೆ ವಿಧಿಸಬಹುದಾದಂಥ ಯಾವುದೇ ಬಾಡಿಗೆ ಅಥವಾ ಫೀಜಿನ ಸಂಗ್ರಹಣೆಯನ್ನು ಪ್ರಕಟಣೆ ಮಾಡಲು ಅಥವಾ ಖಾಸಗೀ ಕರಾರಿನ ಮೂಲಕ ಒಂದು ಬಾರಿಗೆ ಒಂದು ವರ್ಷಕ್ಕೆ ಮೀರಿದ ಅವಧಿಗಾಗಿ ಬಾಡಿಗೆಗೆ ಕೊಡಲು ಮುನ್ಸಿಪಲ್ ಕೌನ್ಸಿಲಿಗೆ ಕಾನೂನುಸಮ್ಮತವಾಗಿರತಕ್ಕದ್ದು.

(4) ಈ ಬಗ್ಗೆ ಮುನ್ಸಿಪಲ್ ಕೌನ್ಸಿಲಿನಿಂದ ವಿಶೇಷವಾಗಿ ಶಕ್ತಗೊಳಿಸಿದ ಯಾರೇ ಅಧಿಕಾರಿಗೆ, ಯಾವುದೇ ಮಾರುಕಟ್ಟೆಯಲ್ಲಿ ಯಾವುದೇ ಅಂಗಡಿ ಅಥವಾ ಸ್ಥಳವನ್ನು ಯಾರೇ ವ್ಯಕ್ತಿಯು ಅನಧಿಕೃತವಾಗಿ ಅನುಭೋಗಿಸುತ್ತಿರುವನೆಂದು ಅಥವಾ ಅಂಗಡಿ ಅಥವಾ ಸ್ಥಳವನ್ನು ಅನುಭೋಗಿಸುವ ಅಧಿಕಾರವು ಕೊನೆಗೊಂಡ ತರುವಾಯ ಅನುಭೋಗಿಸುವುದನ್ನು ಮುಂದುವರೆಸುವುದು ಮನದಟ್ಟಾದರೆ, ಅವನು ಮುನ್ಸಿಪಲ್ ಕೌನ್ಸಿಲಿನ ಪೂರ್ವ ಮಂಜೂರಾತಿಯೊಂದಿಗೆ ಆ ಅಂಗಡಿ ಅಥವಾ ಸ್ಥಳವನ್ನು, ಕಡ್ಡಾಯ ಕೋರಿಕೆಯಲ್ಲಿ ನಮೂದಿಸಬಹುದಾದಂಥ ಅವಧಿಯೊಳಗೆ ಖಾಲಿ ಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು. ಅಂಥ ವ್ಯಕ್ತಿಯು ಆ ಕೋರಿಕೆಯನ್ನು ಪಾಲಿಸಲು ತಪ್ಪಿದರೆ ಅಂಥ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದಂಥ ಯಾವುದೇ ದಂಡನೆಯ ಜೊತೆಗೆ ಆ ಅಂಗಡಿ ಅಥವಾ ಸ್ಥಳದಿಂದ ಕ್ಷಿಪ್ರವಾಗಿ ತೆಗೆದುಹಾಕಬಹುದು.

**245. ಕುಷ್ಠ ರೋಗಿಗಳು ಮತ್ತು ಗಲಭೆಕೋರರು ಮುಂತಾದವರನ್ನು ಮಾರುಕಟ್ಟೆಗಳಿಂದ ಹೊರದೂಡಲು ಅಧಿಕಾರ.–** ಮಾರುಕಟ್ಟೆಯ ಪ್ರಭಾರದಲ್ಲಿರುವ ವ್ಯಕ್ತಿಯು ವ್ರಣಗಳು ಪ್ರಾರಂಭವಾಗಿರುವ ಕುಷ್ಠರೋಗದಿಂದ ಅಥವಾ ಯಾವುದೇ ಅಪಾಯಕಾರಿ ರೋಗದಿಂದ ನರಳುತ್ತಿದ್ದು ಅದರಲ್ಲಿ ಯಾವುದೇ ವಸ್ತುವನ್ನು ಮಾರುವ ಅಥವಾ ಮಾರಾಟಕ್ಕೆ ತೆರೆದಿಟ್ಟಿರುವ ಅಥವಾ ಅದರಲ್ಲಿ ಮಾರಾಟಕ್ಕಾಗಿ ಯಾವುದೇ ವಸ್ತುವನ್ನು ಕೊಂಡಿರದೇ ಅದನ್ನು ಮುಟ್ಟಿ ನೋಡುವ ಯಾರೇ ವ್ಯಕ್ತಿಯು ಮಾರುಕಟ್ಟೆಗೆ ಪ್ರವೇಶಿಸುವುದನ್ನು ತಡೆಯತಕ್ಕದ್ದು ಮತ್ತು ಅಲ್ಲಿಂದ ಅವನನ್ನು ಹೊರದೂಡತಕ್ಕದ್ದು; ಮತ್ತು ಅಲ್ಲಿ ಗಲಭೆ ಎಬ್ಬಿಸುವ ಯಾರೇ ವ್ಯಕ್ತಿಯನ್ನು ಅಲ್ಲಿಂದ ಹೊರದೂಡಬಹುದು.

**246. ಪೌರಸಭಾ ಪರಿಮಿತಿಗಳಿಂದ ಹೊರಗಡೆ ಕಸಾಯಿಖಾನೆಗಳು ಇತ್ಯಾದಿ.–** ಡೆಪ್ಯೂಟಿ ಕಮೀಷನರನ ಮಂಜೂರಾತಿಯೊಂದಿಗೆ ಪುರಸಭಾ ಪರಿಮಿತಿಗಳಿಂದ ಹೊರಗಡೆ ಪ್ರಾಣಿಗಳ ಹೆಣಗಳ ವಿಲೆಗಾಗಿ ಕಸಾಯಿ ಖಾನೆಗಳು ಅಥವಾ ಸ್ಥಳಗಳನ್ನು ಸ್ಥಾಪಿಸುವುದು ಮುನ್ಸಿಪಲ್ ಕೌನ್ಸಿಲಿಗೆ ಕಾನೂನು ಬದ್ಧವಾಗಿರತಕ್ಕದ್ದು ಮತ್ತು ಪುರಸಭಾ ಪರಿಮಿತಿಗಳೊಳಗಿನ ಅಂಥ ಸ್ಥಳಗಳಿಗೆ ಸಂಬಂಧಪಡುವ ಈ ಅಧಿನಿಯಮದ ಮತ್ತು ಅದರಡಿಯಲ್ಲಿ ಜಾರಿಯಲ್ಲಿರುವ ಉಪವಿಧಿಗಳ ಎಲ್ಲ ಉಪಬಂಧಗಳು ಅಂಥ ಸ್ಥಳಗಳು, ಪುರಸಭಾ ಪರಿಮಿತಿಗಳೊಳಗೆ ಇದ್ದಿದ್ದರೆ ಹೇಗೋ ಹಾಗೆ ಅಲ್ಲಿ ಸಂಪೂರ್ಣವಾಗಿ ಜಾರಿಯಲ್ಲಿರತಕ್ಕದ್ದು.

**247. ಅನಾರೋಗ್ಯಕರ ಆಹಾರ ವಸ್ತುಗಳು ಮತ್ತು ಪಾನೀಯ.–** (1) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಥವಾ ಈ ಬಗ್ಗೆ ಮುನಿಸಿಪಲ್ ಕೌನ್ಸಿಲಿನಿಂದ ಅಧಿಕೃತನಾದ ಯಾರೇ ವ್ಯಕ್ತಿಯು ಯಾವುದೇ

ಸೂಕ್ತ ಸಮಯದಲ್ಲಿ ಆಹಾರ ವಸ್ತುಗಳು ಮತ್ತು ಪಾನೀಯದ ದಾಸ್ತಾನು ಅಥವಾ ಮಾರಾಟಕ್ಕಾಗಿ ಉಪಯೋಗಿಸಿದ ಅಥವಾ ಪ್ರಾಣಿಗಳ ವಧೆಗಾಗಿ ಉಪಯೋಗಿಸಿದ ಯಾವುದೇ ಮಾರುಕಟ್ಟೆ, ಕಟ್ಟಡ, ಅಂಗಡಿ, ಮಳಿಗೆ ಅಥವಾ ಸ್ಥಳಕ್ಕೆ ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು ಮತ್ತು ಅಲ್ಲಿ ಇಟ್ಟಿರಬಹುದಾದ ಯಾವುದೇ ಆಹಾರ ವಸ್ತು ಅಥವಾ ಪಾನೀಯ ಅಥವಾ ಯಾವುದೇ ಪ್ರಾಣಿಯನ್ನು ಪರೀಕ್ಷಿಸಬಹುದು ಮತ್ತು ಅಲ್ಲಿನ ಯಾವುದೇ ಆಹಾರ ವಸ್ತು ಅಥವಾ ಪಾನೀಯ ಅಥವಾ ಯಾವುದೇ ಪ್ರಾಣಿಯು ಮಾನವನ ಬಳಕೆಗಾಗಿ ಉದ್ದೇಶಿಸಲಾಗಿದೆ ಎಂದು ಮತ್ತು ಅದಕ್ಕೆ ಆಯೋಗ್ಯವಾಗಿರುವುದಾಗಿ ಕಂಡುಬಂದರೆ, ಅವನು ಅದನ್ನು ಅಭಿಗ್ರಹಿಸಬಹುದು.

(2) ಅಂಥ ವಸ್ತು ಅಥವಾ ಪ್ರಾಣಿಗಳ ಒಡೆಯ ಅಥವಾ ಅವು ಯಾರ ಸ್ವಾಧೀನದಲ್ಲಿ ಕಂಡು ಬರುವುದೋ ಆ ವ್ಯಕ್ತಿಯು ಅದಕ್ಕೆ ಒಪ್ಪಿದರೆ ಮುನಿಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಥವಾ ಅಧಿಕೃತ ವ್ಯಕ್ತಿಯು ಅದನ್ನು ನಾಶಪಡಿಸಬಹುದು ಅಥವಾ ಅದನ್ನು ಮಾರಾಟಕ್ಕಾಗಿ ತೆರೆದಿಡುವುದನ್ನು ಅಥವಾ ಮನುಷ್ಯನ ಬಳಕೆಗಾಗಿ ಉಪಯೋಗಿಸುವುದನ್ನು ತಡೆಗಟ್ಟುವ ಹಾಗೆ ವಿಲೆ ಮಾಡಬಹುದು.

(3) ಅಂಥ ವಸ್ತುವು ಕೆಟ್ಟು ಹೋಗುವ ಸ್ವಭಾವವಾಗಿದ್ದರೆ ಅದನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವ ವ್ಯಕ್ತಿಯು ಸಮ್ಮತಿ ಇಲ್ಲದೆ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅದನ್ನು ವಿಲೇ ಮಾಡಬಹುದು.

(4) ಸರಿಯಾದ ಮತ್ತು ಆರೋಗ್ಯಕರವಾದ ರಕ್ಷಣೆ ಇಲ್ಲದೆ ಯಾವುದೇ ಆಹಾರ ವಸ್ತು ಅಥವಾ ಪಾನೀಯವನ್ನು ಮಾರಾಟಕ್ಕಾಗಿ ತೆರೆದಿಡತಕ್ಕದ್ದಲ್ಲ.

(5) (2) ಮತ್ತು (3)ನೇ ಉಪಪ್ರಕರಣಗಳ ಅಡಿಯಲ್ಲಿ ಬರದಿರುವ ಸಂದರ್ಭಗಳಲ್ಲಿ ಹಿಂದೆ ಹೇಳಿದಂತೆ ಅಭಿಗ್ರಹಿಸಿದ ವಸ್ತು ಅಥವಾ ಪ್ರಾಣಿಯನ್ನು ತತ್‌ಕ್ಷಣ ತೆಗೆಯತಕ್ಕದ್ದು ಮತ್ತು (6)ನೇ ಉಪಪ್ರಕರಣದ ಮೇರೆಗೆ ಆದೇಶಗಳಿಗಾಗಿ ಅದನ್ನು ಮೊದಲನೇ ವರ್ಗದ ಮ್ಯಾಜಿಸ್ಟ್ರೇಟನ ಮುಂದೆ ಇಡತಕ್ಕದ್ದು.

(6) (5)ನೇ ಉಪಪ್ರಕರಣದ ಮೇರೆಗೆ ಯಾವುದೇ ಪ್ರಾಣಿ ಅಥವಾ ವಸ್ತುವನ್ನು ಮ್ಯಾಜಿಸ್ಟ್ರೇಟನ ಮುಂದೆ ತಂದರೆ, ಮ್ಯಾಜಿಸ್ಟ್ರೇಟನು, ಮನುಷ್ಯರ ಬಳಕೆಗಾಗಿ ಆ ವಸ್ತು ಅಥವಾ ಪ್ರಾಣಿಯನ್ನು ಉದ್ದೇಶಿಸಲಾಗಿದೆ ಎಂದು ಮತ್ತು ಅದಕ್ಕಾಗಿ ಅಯೋಗ್ಯವಾಗಿದೆ ಎಂದು ರುಜುವಾತುಪಡಿಸಿದ ಮೇಲೆ, ಆ ವಸ್ತು ಅಥವಾ ಪ್ರಾಣಿಯನ್ನು ನಾಶಪಡಿಸಬೇಕೆಂದು ಅಥವಾ ಅದನ್ನು ಮಾರಾಟಕ್ಕಾಗಿ ತೆರೆದಿಡುವುದನ್ನು ಅಥವಾ ಮನುಷ್ಯನ ಬಳಕೆಗಾಗಿ ಉಪಯೋಗಿಸುವುದನ್ನು ತಡೆಗಟ್ಟುವ ಹಾಗೆ ತಾನು ಸೂಕ್ತವೆಂದು ಯೋಚಿಸಬಹುದಾದಂತೆ ವ್ಯವಹರಿಸಬೇಕೆಂದು ಆದೇಶಿಸಬಹುದು ಮತ್ತು ಅಂಥ ವಸ್ತು ಅಥವಾ ಪ್ರಾಣಿಯ ಒಡೆಯ ಅಥವಾ ಅದನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ವ್ಯಕ್ತಿಯು ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ನಿರ್ದೇಶಿಸಬಹುದು;

ಪರಂತು, ಅದರ ಸ್ವರೂಪದ ತಿಳಿವಳಿಕೆ ಇಲ್ಲದೆ ಯಾವುದೇ ವಸ್ತು ಅಥವಾ ಪ್ರಾಣಿಯನ್ನು ಅದರ ವಾಹಕನಾಗಿ ಅಥವಾ ಸರಕು ರಕ್ಷಕನಾಗಿರುವ ಸ್ವಾಧೀನದಲ್ಲಿರುವ ವ್ಯಕ್ತಿಯು ಈ ಪ್ರಕರಣದ ಮೇರೆಗಿನ ಜುಲ್ಮಾನೆಗೆ ಗುರಿಯಾಗತಕ್ಕದ್ದಲ್ಲ:

ಮತ್ತು ಪರಂತು, ಈ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಆಹಾರ ವಸ್ತು ಅಥವಾ ಪಾನೀಯವು ಆರೋಗ್ಯಕ್ಕೆ ಹಾನಿಕಾರಕವಲ್ಲದ ಯಾವುದೇ ಪದಾರ್ಥವನ್ನು ಅದಕ್ಕೆ ಸೇರಿಸಲಾಗಿದೆಯೆಂಬ ಕಾರಣದಿಂದ ಮಾತ್ರವೇ ಅದು ಏನಾಗಿ ಇರುವುದಾಗಿ ಹೇಳಲಾಗಿದೆಯೋ ಅದು ಆಗಿಲ್ಲವೆಂದು ಕಂಡುಬಂದರೆ, ಆಗ ಅಂಥ ವಸ್ತುವಿನ ಒಡೆಯ ಅಥವಾ ಅದು ಯಾರ ಸ್ವಾಧೀನದಲ್ಲಿ ಇದೆಯೋ ಆ ವ್ಯಕ್ತಿಯು,–

(ಕ) ಅಂಥ ವಸ್ತುವನ್ನು ಆಹಾರ ವಸ್ತು ಅಥವಾ ಪಾನೀಯಕ್ಕೆ ಸೇರಿಸಲಾಗಿದೆ, ಏಕೆಂದರೆ ಅದನ್ನು ವಾಣಿಜ್ಯ ವಸ್ತುವಾಗಿ ಸಾಗಣೆ ಅಥವಾ ಬಳಕೆಗಾಗಿ ಯುಕ್ತ ಸ್ಥಿತಿಯಲ್ಲಿ ಅದನ್ನು ಉತ್ಪಾದಿಸುವುದಕ್ಕಾಗಿ ಅಥವಾ ತಯಾರಿಕೆಗಾಗಿ ಅದು ಅಗತ್ಯವಾಗಿದೆ ಮತ್ತು ಮೋಸದಿಂದ ಆಹಾರ ಮತ್ತು ಪಾನೀಯದ ಗಾತ್ರ, ತೂಕ ಅಥವಾ ಅಳತೆಯನ್ನು ಹೆಚ್ಚಿಸಲು ಅಥವಾ ಅದರ ಕೀಳು ಗುಣಮಟ್ಟವನ್ನು ಬಚ್ಚಿಡಲು ಅಲ್ಲವೆಂದು; ಅಥವಾ

(ಖ) ಅಂಥ ಆಹಾರ ವಸ್ತು ಅಥವಾ ಪಾನೀಯದ ಉತ್ಪತ್ತಿ ತಯಾರಿಕೆ ಅಥವಾ ಸಾಗಣೆ ಕ್ರಮದಲ್ಲಿ ಹೊರಗಿನ ವಸ್ತುವನ್ನು ಅನಿವಾರ್ಯವಾಗಿ ಅದರೊಂದಿಗೆ ಮಿಶ್ರಗೊಳಿಸಿದೆ ಎಂದು; ಅಥವಾ

(ಗ) ಸ್ಪಷ್ಟವಾಗಿ ಮತ್ತು ಸ್ಫುಟವಾಗಿ ಸದರಿ ಆಹಾರವಸ್ತು ಅಥವಾ ಪಾನೀಯದ ಮೇಲೆ ಅಥವಾ ಅದರೊಂದಿಗೆ ಬರೆದ ಅಥವಾ ಮುದ್ರಿಸಿದ ಗುರುತು ಚೀಟಿಯ ಮೂಲಕ ಅಥವಾ ಬಹಿರಂಗ ವರ್ಣನೆಯ ಇತರ ಸಾಧನದ ಮೂಲಕ ಅಂಥ ವಸ್ತುವನ್ನು ಹಾಗೆ ಸೇರಿಸಲಾಗಿದೆ ಎಂದು ತಾನು ಸಾಕಷ್ಟು ನೋಟೀಸನ್ನು ಕೊಟ್ಟಿರುವನೆಂದು; ಅಥವಾ

(ಘ) (i) ಸದರಿ ವಸ್ತುವು ನಿಶ್ಚಿತ ಸ್ವರೂಪದ್ದು, ಸಾರವುಳ್ಳದ್ದು ಮತ್ತು ಗುಣದ್ದು ಆಗಿತ್ತೆಂಬ ಬರಹದಲ್ಲಿನ ಭರವಸೆಯೊಂದಿಗೆ ಸದರಿ ವಸ್ತುವನ್ನು ಖರೀದಿಸಿದ್ದೇನೆಂದು ತಾನು;

(ii) ಹಿಂದೆ ಹೇಳಿದಂತೆ ಅಂಥ ಸ್ವರೂಪ, ಸಾರ ಮತ್ತು ಗುಣವನ್ನು ಹೊಂದಿಲ್ಲವೆಂದು ತಾನು ನಂಬಲು ಯಾವುದೇ ಕಾರಣವಿರಲಿಲ್ಲವೆಂದು; ಮತ್ತು

(iii) ಬರಹದಲ್ಲಿನ ಭರವಸೆಯಲ್ಲಿ ನಿರ್ದಿಷ್ಟಪಡಿಸಿದ ಸ್ವರೂಪ, ಸಾರ ಅಥವಾ ಗುಣ ಹೊಂದಿರುವ ವಸ್ತುವಾಗಿ ಅಲ್ಲದೆ ಅನ್ಯಥಾ ತಾನು ತೆರೆದಿಟ್ಟಿರಲಿಲ್ಲ, ಹೊತ್ತುಕೊಂಡು ಮಾರಾಟ ಮಾಡಿಲ್ಲ ಅಥವಾ ಮಾರಾಟಕ್ಕಾಗಿ ತಂದಿಲ್ಲ ಮತ್ತು ಅದು ತಾನು ಖರೀದಿಸಿದಾಗ ಇದ್ದಂಥ ಸ್ಥಿತಿಯಲ್ಲಿಯೇ ಅದು ಇತ್ತೆಂದು,–

ಅಂಥ ಒಡೆಯ ಅಥವಾ ವ್ಯಕ್ತಿಯು ಮ್ಯಾಜಿಸ್ಟ್ರೇಟನಿಗೆ ಮನದಟ್ಟಾಗುವಂತೆ ರುಜುವಾತುಪಡಿಸಿದರೆ ಆ ವಸ್ತುವಿನ ಒಡೆಯ ಅಥವಾ ಅದನ್ನು ಸ್ವಾಧೀನದಲ್ಲಿ ಇಟ್ಟುಕೊಂಡು ಇರುವುದಾಗಿ ಕಂಡುಬಂದ ವ್ಯಕ್ತಿಯು ಯಾವುದೇ ಅಪರಾಧವನ್ನು ಮಾಡಿರುವನೆಂಬುದಾಗಿ ಭಾವಿಸತಕ್ಕದ್ದಲ್ಲ.

(7) ಯಾವುದೇ ಮಳಿಗೆ ಅಥವಾ ನಿರ್ದಿಷ್ಟ ಸ್ಥಳವನ್ನು ಬೆಣ್ಣೆ ಅಥವಾ ತುಪ್ಪದ ಮಾರಾಟಕ್ಕಾಗಿ ಪ್ರತ್ಯೇಕವಾಗಿಡಲು ಮುನ್ಸಿಪಲ್ ಕೌನ್ಸಿಲಿಗೆ ಅವಕಾಶವಿರುತ್ತದೆ ಮತ್ತು ಅಂಥ ಮಳಿಗೆ ಅಥವಾ ನಿರ್ದಿಷ್ಟ ಸ್ಥಳದಲ್ಲಿ ಇತರ ಯಾವುದೇ ವಸ್ತುವಿನಿಂದ ಕಲಬೆರಕೆಗೊಂಡ ಬೆಣ್ಣೆ ಅಥವಾ ತುಪ್ಪವನ್ನು ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ತೆರೆದಿಡತಕ್ಕದ್ದಲ್ಲ.

(8) ಹಾಗೆ ಪ್ರತ್ಯೇಕವಾಗಿ ಇಟ್ಟ ಯಾವುದೇ ಮಳಿಗೆ ಅಥವಾ ಸ್ಥಳದಲ್ಲಿ ಕಲಬೆರಕೆಯಾದ ಬೆಣ್ಣೆ ಅಥವಾ ತುಪ್ಪವನ್ನು ಮಾರಾಟ ಮಾಡುವ ಅಥವಾ ಮಾರಾಟಕ್ಕಾಗಿ ತೆರೆದಿಡುವ ಯಾರೇ ಆಗಲಿ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಮ್ಯಾಜಿಸ್ಟ್ರೇಟನು ಅಂಥ ತುಪ್ಪವನ್ನು ನಾಶಪಡಿಸುವಂತೆ ಅಥವಾ ಅಂಥ ಮಳಿಗೆ ಅಥವಾ ಸ್ಥಳದಲ್ಲಿ ಅದನ್ನು ಮಾರಾಟಕ್ಕೆ ಇಡುವುದನ್ನು ತಡೆಯುವಂತೆ ವಿಲೆ ಮಾಡಿಸಬಹುದು.

(9) ಈ ಪ್ರಕರಣದ ಮೇರೆಗಿನ ಎಲ್ಲಾ ಪ್ರಾಸಿಕ್ಯೂಷನ್‌ಗಳಲ್ಲಿ ಮ್ಯಾಜಿಸ್ಟ್ರೇಟನು ಅಂಥ ವ್ಯಕ್ತಿಗೆ ಅಪಾದಿಸಿರುವಂಥ ಅಪರಾಧದ ಆರೋಪಿತವಾದ ದಿನಾಂಕದಿಂದ ಸೂಕ್ತ ಕಾಲದೊಳಗೆ ಸಮನಿಗಾಗಿ ಅರ್ಜಿಯನ್ನು ಮಾಡಿಕೊಂಡಿದ್ದ ಹೊರತು ಅದರ ಉಪಬಂಧಗಳ ವಿರುದ್ಧವಾಗಿ ಯಾವುದೇ ಅಪರಾಧದ ಆರೋಪಿತ ವ್ಯಕ್ತಿಯ ಹಾಜರಾತಿಗಾಗಿ ಸಮನು ಹೊರಡಿಸಲು ನಿರಾಕರಿಸತಕ್ಕದ್ದು.

## ಅಪಾಯಕಾರಿ ರೋಗಗಳನ್ನು ತಡೆಗಟ್ಟುವುದು

**248. ಸೋಂಕು ರೋಗಗಳನ್ನು ತಡೆಗಟ್ಟುವುದು.–** (1) ಪ್ರತಿಯೊಂದು ಮುನಿಸಿಪಲ್ ಕೌನ್ಸಿಲು ಈ ಬಗ್ಗೆ ನಿಯಮಿಸಬಹುದಾದಂತೆ ಅಂಥ ಪರಿಮಿತಿಗಳು, ಪರಿಬಂಧಗಳು ಮತ್ತು ಷರತ್ತುಗಳು ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು, ಅಪಾಯಕಾರಿ ರೋಗಗಳನ್ನು ತಡೆಗಟ್ಟುವ ಸಲುವಾಗಿ ಚಲಾಯಿಸಬಹುದು.

(2) ಹಿಂದೆ ಹೇಳಿದ ಉಪಪ್ರಕರಣದ ಮೇರೆಗೆ ಚಲಾಯಿಸಬಹುದಾದಂಥ ಅಧಿಕಾರಗಳು ಎಂದರೆ:–

(ಕ) ಆಸ್ಪತ್ರೆಯಲ್ಲದ ಯಾವುದೇ ವಾಸಸ್ಥಳದಲ್ಲಿ ತನ್ನ ವೃತ್ತಿನಾತೆಯಲ್ಲಿ ತಾನು ಭೇಟಿ ಮಾಡಿದ ಯಾರೇ ವ್ಯಕ್ತಿಯು ಸಾಂಕ್ರಾಮಿಕ ರೋಗವೆಂದು ಯುಕ್ತವಾಗಿ ಶಂಕಿಸಬಹುದಾದಂಥ ಯಾವುದೇ ಕಾಯಿಲೆಯಿಂದ ನರಳುತ್ತಿರುವುದಾಗಿ ತಿಳಿದಿರುವ ಅಥವಾ ನಂಬಲು ಕಾರಣವಿರುವ ಪ್ರತಿಯೊಬ್ಬ ವೈದ್ಯಕೀಯ ವೃತ್ತಿಗಾರನನ್ನು ಅಥವಾ ಯಾವುದೇ ಕಾರ್ಖಾನೆಯ ಅಥವಾ ಶೈಕ್ಷಣಿಕ ಸಂಸ್ಥೆಯ ಯಾವ ವ್ಯವಸ್ಥಾಪಕನು ಅಥವಾ ಮನೆಯ ಮುಖ್ಯಸ್ಥನು ಯಾರೇ ಅಂಥ ವ್ಯವಸ್ಥಾಪಕ ಅಥವಾ ಮನೆಯ ಮುಖ್ಯಸ್ಥರನ ವ್ಯವಸ್ಥಾಪನೆ ಅಥವಾ ನಿಯಂತ್ರಣದಲ್ಲಿನ ಯಾವುದೇ ವಾಸಸ್ಥಳದಲ್ಲಿ ವಾಸಿಸುವ ಯಾರೇ ವ್ಯಕ್ತಿಯು ಸಾಂಕ್ರಾಮಿಕ ರೋಗವೆಂದು ಯುಕ್ತವಾಗಿ ಊಹಿಸಬಹುದಾದಂಥ ಯಾವುದೇ ಕಾಯಿಲೆಯಿಂದ ನರಳುತ್ತಿರುವನೆಂದು ತಿಳಿದಿರುವನೋ ಅಥವಾ ನಂಬಲು ಕಾರಣವನ್ನು ಹೊಂದಿರುವನೋ ಆ ಪ್ರತಿಯೊಬ್ಬ ಮ್ಯಾನೇಜರನು ಅಥವಾ ಮನೆಯ ಮುಖ್ಯಸ್ಥನು ಅದರ ಬಗ್ಗೆ ಮಾಹಿತಿಯನ್ನು ಕಾರ್ಯಸಾಧ್ಯವಾದಷ್ಟು ವಿಳಂಬವಿಲ್ಲದೇ ಮುನಿಸಿಪಲ್ ಕೌನ್ಸಿಲ್ಲು ಆ ಬಗ್ಗೆ ನಾಮನಿರ್ದೇಶಿಸಬಹುದಾದಂಥ ವ್ಯಕ್ತಿಗೆ ಕೊಡತಕ್ಕದ್ದೆಂದು ವಿಶೇಷ ಅಥವಾ ಸಾಮಾನ್ಯ ಅನ್ವಯವುಳ್ಳಂಥ ಆದೇಶಗಳ ಮೂಲಕ ಅಧಿಕಾರ;

(ಖ) ನೋಟೀಸಿಲ್ಲದೆ ಅಥವಾ ನೋಟೀಸನ್ನು ನೀಡದೆ ಅಥವಾ ನಿರ್ದೇಶಿತ ಅಥವಾ ಪ್ರಾಧಿಕೃತ ವ್ಯಕ್ತಿಗೆ ಯುಕ್ತವೆಂದು ತೋರುವಂಥ ನೋಟೀಸನ್ನು ಕೊಟ್ಟು ಯಾವುದೇ ಸಾಂಕ್ರಾಮಿಕ ರೋಗವು ವರದಿಯಾಗಿರುವಂಥ ಅಥವಾ ಇರುವುದಾಗಿ ಶಂಕಿಸಲಾದಂಥ ಯಾವುದೇ ಸ್ಥಳದ ಪರಿಶೀಲನೆಯನ್ನು ನಡೆಸಲು ಮತ್ತು ಅಂಥ ಸ್ಥಳದ ಆಚೆಗೆ ರೋಗವು ಹರಡದಂತೆ ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸುವ ಅಥವಾ ಅಧಿಕೃತಗೊಳಿಸುವ ಅಧಿಕಾರ;

(ಗ) ವೈದ್ಯಾಧಿಕಾರಿಯ ಸಲಹೆಯ ಮೇರೆಗೆ, ಅಪಾಯವಾಗುವ ಸಂಭವವಿರುವ ಯಾವುದೇ ಸಾಂಕ್ರಾಮಿಕ ರೋಗವನ್ನು ಹರಡದಂತೆ ಮಾಡುವ ಸಂಭವವಿರುವ ಯಾವುದೇ ಬಾವಿ, ಕೆರೆ ಅಥವಾ ಇತರ ಸ್ಥಳದಿಂದ ಕುಡಿಯುವ ಉದ್ದೇಶಕ್ಕಾಗಿ ನೀರನ್ನು ತೆಗೆಯುವುದನ್ನು ನಿಷೇಧಿಸುವ ಅಧಿಕಾರ;

(ಘ) ಮುನ್ಸಿಪಲ್ ಕೌನ್ಸಿಲಿನ ಆರೋಗ್ಯಾಧಿಕಾರಿ ಅಥವಾ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲಿನಿಂದ ಅಧಿಕೃತನಾದ ಕ್ರಮಬದ್ಧವಾಗಿ ಅರ್ಹತೆ ಪಡೆದ ಯಾರೇ ವೈದ್ಯ ವೃತ್ತಿಗಳು ರುಜು ಮಾಡಿದ ಪ್ರಮಾಣಪತ್ರದ ಮೇಲೆ, ಸರಿಯಾದ ವಸತಿ ಸೌಕರ್ಯ ಅಥವಾ ಸ್ಥಳವಕಾಶವಿಲ್ಲದ ಅಥವಾ ಒಂದಕ್ಕಿಂತ ಹೆಚ್ಚು ಕುಟುಂಬಗಳ ಸ್ವಾಧೀನದಲ್ಲಿರುವ ಕೊಠಡಿ ಅಥವಾ ಕೊಠಡಿಗಳ ಸಮುಚ್ಚಯದಲ್ಲಿ ಅಥವಾ ಅವನ ಇರುವಿಕೆಯು ನೆರೆಹೊರೆಗೆ ಅಪಾಯಕಾರಿಯಾಗಬಹುದಾದ ಸ್ಥಳದಲ್ಲಿ ವಸತಿ ಪಡೆದಿರುವ ಮತ್ತು ಸೋಂಕುರೋಗದಿಂದ ನರಳುತ್ತಿರುವವನನ್ನು ವೈದ್ಯಕೀಯ ಚಿಕಿತ್ಸೆಗಾಗಿ ಸದರಿ ರೋಗದಿಂದ ನರಳುತ್ತಿರುವ ವ್ಯಕ್ತಿಗಳನ್ನು ಸೇರಿಸಿಕೊಳ್ಳುವಂಥ ಯಾವುದೇ ಆಸ್ಪತ್ರೆ ಅಥವಾ ಸ್ಥಳಕ್ಕೆ ಸ್ಥಳಾಂತರಿಸಲು, ನಿರ್ದೇಶಿಸಲು ಅಥವಾ

ಸ್ಥಳಾಂತರಿಸುವಂತೆ ಮಾಡಲು ಮತ್ತು ಹಾಗೆ ಸ್ಥಳಾಂತರಿತ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿನ ಅನುಮತಿಯಿಲ್ಲದೆಯೇ ಅಂಥ ಆಸ್ಪತ್ರೆ ಅಥವಾ ಸ್ಥಳವನ್ನು ಬಿಡುವುದನ್ನು ನಿಷೇಧಿಸಲು ಅಧಿಕಾರ;

(ಙ) ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗದ ಒಡೆಯ ಅಥವಾ ಅಧಿಭೋಗದಾರ ಅಥವಾ ಅದರಲ್ಲಿರುವ ಯಾವುದೇ ವಸ್ತುವಿನ ಒಡೆತನ ಅಥವಾ ವಶವನ್ನು ಹೊಂದಿರುವ ವ್ಯಕ್ತಿಯನ್ನು ಬರಹದಲ್ಲಿನ ನೋಟೀಸಿನ ಮೂಲಕ ಅಥವಾ ಕಟ್ಟಡ ಅಥವಾ ಅದರ ಭಾಗ ಅಥವಾ ವಸ್ತುವನ್ನು ಅವನ ಸ್ವಂತ ಖರ್ಚಿನಿಂದ ಅಥವಾ ಬಡತನದ ಸಂದರ್ಭದಲ್ಲಿ ಅಥವಾ ಪ್ರಕರಣದ ಸನ್ನಿವೇಶಗಳಲ್ಲಿ ಮುನ್ಸಿಪಲ್ ಕೌನ್ಸಿಲು ಯುಕ್ತವೆಂದು ಪರ್ಯಾಲೋಚಿಸುವಂಥ ಇತರ ಕಾರಣಕ್ಕಾಗಿ ಮುನ್ಸಿಪಲ್ ಕೌನ್ಸಿಲಿನ ವೆಚ್ಚದಲ್ಲಿ, ಸ್ವಚ್ಛಗೊಳಿಸಲು ಅಥವಾ ಸೋಂಕು ನಿವಾರಿಸಲು ಅಧಿಕಾರ;

(ಚ) ಯಾವುದೇ ಸೋಂಕು ರೋಗದಿಂದ ಸೋಂಕಿಗೆ ಒಡ್ಡಲಾಗಿರುವಂಥ ಹಾನಿಗೆ ಅಥವಾ ಇತರ ವಸ್ತುಗಳ ಸೋಂಕು ನಿವಾರಿಸುವುದಕ್ಕಾಗಿ ಅಥವಾ ಒಗೆಯುವುದಕ್ಕಾಗಿ ಸಾಧನಗಳನ್ನು ಒದಗಿಸಲು ಮತ್ತು ಸ್ಥಳಗಳನ್ನು ನಿಯಮಿಸಲು ಮತ್ತು ಅವುಗಳನ್ನು ನಾಶಪಡಿಸುವಂತೆ ನಿರ್ದೇಶಿಸಲು ಅಧಿಕಾರ;

(ಛ) (i) ಯಾವುದೇ ಸೋಂಕು ರೋಗದಿಂದ ನರಳುತ್ತಿರುವ ವ್ಯಕ್ತಿಗಳನ್ನು ಉಚಿತವಾಗಿ ಸಾಗಿಸುವುದಕ್ಕಾಗಿ ಸೂಕ್ತ ವಾಹನವನ್ನು ಒದಗಿಸಲು ಮತ್ತು ಇಟ್ಟುಕೊಂಡು ಬರಲು; ಮತ್ತು

(ii) ಅಂಥ ವ್ಯವಸ್ಥೆಯನ್ನು ಮಾಡಿದಾಗ, ಅಂಥ ವ್ಯಕ್ತಿಗಳನ್ನು ಎಲ್ಲಾ ಅಥವಾ ಯಾವುದೇ ಸಾರ್ವಜನಿಕ ವಾಹನಗಳಲ್ಲಿ ಸಾಗಿಸುವುದನ್ನು ನಿಷೇಧಿಸಲು ಅಧಿಕಾರ; ಮತ್ತು

(iii) ಅಂಥ ಯಾರೇ ವ್ಯಕ್ತಿಯನ್ನು ಸಾಗಿಸುವುದಕ್ಕಾಗಿ ಯಾವುದೇ ಕಾಲದಲ್ಲಿ ಉಪಯೋಗಿಸಬಹುದಾದ ಯಾವುವೇ ವಾಹನಗಳನ್ನು ಕೂಡಲೇ ಸೋಂಕು ನಿವಾರಿಸತಕ್ಕದ್ದೆಂದು ನಿರ್ದೇಶಿಸಲು ಅಧಿಕಾರ;

(ಜ) (i) ಯಾವುದೇ ಸೋಂಕು ರೋಗದಿಂದ ನರಳುತ್ತಿರುವ ಯಾರೇ ವ್ಯಕ್ತಿಯನ್ನು, ಸದರಿ ರೋಗವು ಹರಡುವುದರ ವಿರುದ್ಧ ಸರಿಯಾದ ಮುನ್ನೆಚ್ಚರಿಕೆಗಳಿಲ್ಲದೆ ಯಾವುದೇ ಬೀದಿ ಅಥವಾ ಯಾವುದೇ ಶಾಲೆ ಅಥವಾ ಕಾರ್ಖಾನೆಯಲ್ಲಿ ಅಥವಾ ಯಾವುದೇ ತಂಗುಮನೆ, ಧರ್ಮಶಾಲೆ, ರಂಗಮಂದಿರ, ಮಾರುಕಟ್ಟೆ ಅಥವಾ ಸಾರ್ವಜನಿಕರು ಸೇರುವ ಇತರ ಸ್ಥಳದಲ್ಲಿ ಬುದ್ಧಿ ಪೂರ್ವಕವಾಗಿ ತಾನಾಗಿಯೇ ಪ್ರದರ್ಶಿಸಿಕೊಳ್ಳುವುದನ್ನು; ಅಥವಾ

(ii) ಹಾಗೆ ನರಳುತ್ತಿರುವ ಯಾರೇ ವ್ಯಕ್ತಿಯ ವಶವನ್ನು ಹೊಂದಿರುವ ಯಾರೇ ವ್ಯಕ್ತಿಯು, ಅಂಥ ನರಳುವವನನ್ನು ಹಾಗೆ ಪ್ರದರ್ಶಿಸುವುದನ್ನು ನಿಷೇಧಿಸಲು ಅಧಿಕಾರ;

(ಝ) ಯಾವುದೇ ಸೋಂಕು ರೋಗದಿಂದ ಉಂಟಾಗುವ ಯಾವುದೇ ಬಗೆಯ ಎಂಥದೇ ಸೋಂಕಿಗೆ ಒಡ್ಡಲಾಗಿದೆಯೆಂದು ನಿಷೇಧಿತ ವ್ಯಕ್ತಿಯು ತಿಳಿದಿರುವ ಅಥವಾ ನಂಬಲು ಕಾರಣವಿರುವಂಥ ಯಾವುದೇ ವಸ್ತುವನ್ನು, ಸೋಂಕು ನಿವಾರಣೆ ಉದ್ದೇಶಕ್ಕಾಗಿ ಅಲ್ಲದೆ ಯಾರೇ ವ್ಯಕ್ತಿಯು ಬೇರೊಂದೆಡೆ ಸ್ಥಳಾಂತರಿಸುವುದನ್ನು ಅಥವಾ ಬೇರೊಬ್ಬ ವ್ಯಕ್ತಿಗೆ ವರ್ಗಾಯಿಸುವುದನ್ನು ನಿಷೇಧಿಸಲು ಅಧಿಕಾರ;

(ಞ) ಸೋಂಕು ರೋಗದಿಂದ ನರಳುತ್ತಿರುವ ವ್ಯಕ್ತಿಯು ಇರುವಂಥ ಅಥವಾ ನರಳುತ್ತಿರುವನೆಂದು ನಂಬಲು ಕಾರಣವಿರುವಂಥ ವ್ಯಕ್ತಿಯು ಇರುವಂಥ ಯಾವುದೇ ಹೋಟೆಲು, ತಂಗುಮನೆ, ಧರ್ಮಶಾಲೆ, ಛತ್ರ ಅಥವಾ ಮುಸಾಫಿರ್‌ಖಾನಾದಲ್ಲಿ ಹಾಗೆ ಬಾಡಿಗೆಗೆ ಕೊಡಲು ಅಥವಾ ಸ್ಥಳಾವಕಾಶವನ್ನು

ಒದಗಿಸಲು ಇಚ್ಛಿಸುವ ವ್ಯಕ್ತಿಯು ಸೋಂಕನ್ನು ಉಳಿಸಿಕೊಳ್ಳುವ ಸಂಭವವಿರುವ ಕಟ್ಟಡ ಅಥವಾ ಅದರ ಭಾಗ ಮತ್ತು ಅದರಲ್ಲಿನ ಯಾವುದೇ ವಸ್ತುವನ್ನು ಮುನ್ಸಿಪಲ್ ಕೌನ್ಸಿಲು ಅಥವಾ ಈ ಬಗ್ಗೆ ಮುನ್ಸಿಪಲ್ ಕೌನ್ಸಿಲು ನೇಮಕ ಮಾಡುವ ಅಂಥ ಅಧಿಕಾರಿಗೆ ಮನದಟ್ಟಾಗುವಂತೆ ಸೋಂಕನ್ನು ನಿವಾರಿಸಿದ ಹೊರತು ಮತ್ತು ಅಲ್ಲಿಯವರೆಗೆ ಸ್ಥಳವನ್ನು ಬಾಡಿಗೆಗೆ ಕೊಡುವುದನ್ನು ಅಥವಾ ಒದಗಿಸುವುದನ್ನು ನಿಷೇಧಿಸಲು ಅಧಿಕಾರ;

(ಟ) ಸೋಂಕು ರೋಗದಿಂದ ವ್ಯಕ್ತಿಗಳು ನರಳುತ್ತಿರುವುದಾಗಿ ನಂಬಲು ಕಾರಣವಿರುವಂಥ ಯಾವುದೇ ಅನೈರ್ಮಲ್ಯಕರ ಗುಡಿಸಲುಗಳು ಅಥವಾ ಷೆಡ್ಡುಗಳನ್ನು ಪ್ರತಿಯೊಂದು ಸಂದರ್ಭದಲ್ಲಿ ಎರಡನೇ ದರ್ಜೆಯ ಅಧಿಕಾರಿಗಳಿಗೆ ಕಡಿಮೆಯಲ್ಲದ ಅಧಿಕಾರಗಳನ್ನು ಚಲಾಯಿಸುವ ಮ್ಯಾಜಿಸ್ಟ್ರೇಟನ ಪೂರ್ವ ಮಂಜೂರಾತಿಯೊಂದಿಗೆ ಕೆಡವಿ ಹಾಕಲು ಅಧಿಕಾರ.

(3) ಮುನ್ಸಿಪಲ್ ಕೌನ್ಸಿಲು ತನ್ನ ವಿವೇಚನೆಯಲ್ಲಿ, ಈ ಪ್ರಕರಣದ ಮೇರೆಗೆ ಯಾವುದೇ ಸ್ವತ್ತಿನ ನಾಶದ ಮೂಲಕ ಉಂಟಾದ ಗಣನೀಯ ನಷ್ಟವನ್ನು ಅನುಭವಿಸುವ ಯಾರೇ ವ್ಯಕ್ತಿಗೆ ನಷ್ಟ ಪರಿಹಾರವನ್ನು ಕೊಡಬಹುದು, ಆದರೆ ಮುನ್ಸಿಪಲ್ ಕೌನ್ಸಿಲು ಅವಕಾಶ ಮಾಡಿಕೊಟ್ಟಂತೆ ಹೊರತು, ಅದರಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳ ಯಾವುದೇ ಚಲಾವಣೆಯ ಮೂಲಕ ಉಂಟಾದ ಯಾವುದೇ ನಷ್ಟ ಅಥವಾ ಹಾನಿಗಾಗಿ ನಷ್ಟ ಪರಿಹಾರಕ್ಕಾಗಿನ ಯಾವುದೇ ಕ್ಲೇಮು ಇರತಕ್ಕದ್ದಲ್ಲ.

(4) ಪೌರಸಭೆಯಲ್ಲಿಯ ತತ್ಕಾಲದಲ್ಲಿ ಜಾರಿಯಲ್ಲಿರುವಂಥ ಮತ್ತು ಈ ಪ್ರಕರಣದ ಮೂಲಕ ಅಂಥ ಮುನ್ಸಿಪಲ್ ಕೌನ್ಸಿಲಿಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸುವಲ್ಲಿ ಮುನ್ಸಿಪಲ್ ಕೌನ್ಸಿಲು ಮಾಡಿದಂಥ ಯಾವುದೇ ಆದೇಶವನ್ನು ಉಲ್ಲಂಘಿಸುವ ಅಥವಾ ಅಂಥ ಯಾವುದೇ ಆದೇಶವನ್ನು ಕಾರ್ಯಗತಗೊಳಿಸುವಲ್ಲಿ ಅಥವಾ ಚಲಾಯಿಸುವಲ್ಲಿ ಮುನ್ಸಿಪಲ್ ಕೌನ್ಸಿಲಿನ ಯಾರೇ ಅಧಿಕಾರಿ ಅಥವಾ ಮುನ್ಸಿಪಲ್ ಕೌನ್ಸಿಲಿನ ಅಧಿಕಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಇತರ ವ್ಯಕ್ತಿಗೆ ಅಡ್ಡಪಡಿಸುವ ಅದರಲ್ಲಿನ ಯಾರೇ ವ್ಯಕ್ತಿಯು, ಎರಡು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**249. ಸೋಂಕು ರೋಗ ತಲೆದೋರುವ ಭಯ ಅಥವಾ ವಾಸ್ತವಿಕವಾಗಿ ಅದು ತಲೆದೋರಿದಾಗ ಮುನ್ಸಿಪಲ್ ಕೌನ್ಸಿಲಿನ ಕರ್ತವ್ಯಗಳು.–** (1) ಯಾವುದೇ ಸೋಂಕು ರೋಗವು ಪೌರಸಭೆಯ ಅಥವಾ ಅದರ ಯಾವುದೇ ಭಾಗಕ್ಕೆ ಯಾವುದೇ ಕಾಲದಲ್ಲಿ ತಲೆದೋರುವ ಭಯವಿರುವ ಸೂಚನೆ ಕಂಡುಬಂದಾಗ ಅಥವಾ ತಲೆದೋರಿದ ಸಂದರ್ಭದಲ್ಲಿ, ಮುನ್ಸಿಪಲ್ ಕೌನ್ಸಿಲು, ಅಂಥ ತಲೆದೋರುವಿಕೆಯನ್ನು ತಡೆಗಟ್ಟುವ, ಎದುರಿಸುವ, ಶಮನಗೊಳಿಸುವ ಅಥವಾ ದಮನಗೊಳಿಸುವ ಉದ್ದೇಶಕ್ಕಾಗಿ ಅದು ಅವಶ್ಯವೆಂದು ಭಾವಿಸುವಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಹಿಂದೆ ಹೇಳಿದಂಥ ಸಂದರ್ಭದಲ್ಲಿ, ವಿಶೇಷ ಅಧಿಸೂಚನೆಯ ಮೂಲಕ ಸರ್ಕಾರವು ಅಂಥ ಪುರಸಭೆಯಲ್ಲಿ ಸೋಂಕುರೋಗವು ತಲೆದೋರುವ ಭಯವಿದೆ ಅಥವಾ ಅದು ತಲೆದೋರಿದೆ ಎಂದು ಘೋಷಿಸಿ, ಈ ಮುಂದಿನ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಮುನ್ಸಿಪಲ್ ಕೌನ್ಸಿಲಿಗೆ ಪ್ರದಾನ ಮಾಡಬಹುದು ಮತ್ತು ಅಂಥ ಮುನ್ಸಿಪಲ್ ಕೌನ್ಸಿಲು, ಸರ್ಕಾರವು ಅದೇ ಅಥವಾ ತರುವಾಯದ ಯಾವುದೇ ಅಧಿಸೂಚನೆಯಲ್ಲಿ ನಿಯಮಿಸಬಹುದಾದಂಥ ಪರಿಮಿತಿಗಳು, ಪರಿಬಂಧಗಳು ಮತ್ತು ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೊಳಪಟ್ಟು, ತನಗೆ ಹಾಗೆ ಪ್ರದತ್ತವಾದಂಥ ಪ್ರತಿಯೊಂದು ಅಧಿಕಾರವನ್ನು, ಅದನ್ನು ಅಂತಹುದೇ ಅಧಿಸೂಚನೆಯ ಮೂಲಕ ಹಿಂತೆಗೆದುಕೊಳ್ಳುವವರೆಗೆ ಚಲಾಯಿಸತಕ್ಕದ್ದು.

(3) ಹಿಂದಿನ ಉಪಪ್ರಕರಣದ ಮೇರೆಗೆ ಪ್ರದಾನ ಮಾಡಬಹುದಾದಂಥ ಎಲ್ಲಾ ಅಥವಾ ಯಾವುದೇ ಅಧಿಕಾರಗಳು ಹೀಗಿವೆ,-

(ಕ) (i) ಪ್ರತಿಯೊಂದು ಪ್ರಕರಣದಲ್ಲಿ, ಎರಡನೇ ದರ್ಜೆ ಅಧಿಕಾರಿಗಳಿಗೆ ಕಡಿಮೆಯಿಲ್ಲದ ಅಧಿಕಾರವನ್ನು ಚಲಾಯಿಸುವ ಮ್ಯಾಜಿಸ್ಟ್ರೇಟನ ಅನುಮತಿಯನ್ನು ಮೊದಲು ಪಡೆದುಕೊಳ್ಳುವ;

(ii) ಆದೇಶವು ಸಂಬಂಧಪಡುವ ಎಲ್ಲ ವ್ಯಕ್ತಿಗಳಿಗೆ ಸ್ಥಳಾವಕಾಶವು ಲಭ್ಯವಿರುವ ಅಥವಾ ಬೇರೆಡೆ ಅದನ್ನು ಒದಗಿಸತಕ್ಕದ್ದು. ಕಟ್ಟಡದಲ್ಲಿ ವಾಡಿಕೆಯಾಗಿಯಾಗಲಿ ಅಥವಾ ತಾತ್ಕಾಲಿಕವಾಗಿಯಾಗಲಿ ವಾಸಿಸುತ್ತಿರುವ ವ್ಯಕ್ತಿ ಅಥವಾ ವ್ಯಕ್ತಿಗಳು ವಾಸದ ಮನೆಯೆಂದು ಉಪಯೋಗಿಸಿದ ಸೋಂಕು ತಗುಲಿದ ಕಟ್ಟಡ ಅಥವಾ ಅದರ ಯಾವುದೇ ಭಾಗವನ್ನು ಅಥವಾ ಅಂಥ ಕಟ್ಟಡಕ್ಕೆ ಹೊಂದಿಕೊಂಡಿರುವ ಹಾಗೆ ಉಪಯೋಗಿಸಿದ ಯಾವುದೇ ಕಟ್ಟಡವನ್ನು ಖಾಲಿ ಮಾಡುವ ಷರತ್ತುಗಳಿಗೊಳಪಟ್ಟು ಆದೇಶಿಸಲು ಅಧಿಕಾರ;

(ಖ) ಪೌರಸಭೆಯ ಹೊರಗಿನ ಸ್ಥಳಗಳಿಂದ ಬರುವ ಅಥವಾ ಸೋಂಕು ತಗುಲಿದ ಯಾವುದೇ ಕಟ್ಟಡದಲ್ಲಿ ಅಥವಾ ಸೋಂಕು ತಗುಲಿದ ಯಾವುದೇ ಕಟ್ಟಡಕ್ಕೆ ಹೊಂದಿಕೊಂಡಿರುವ ಕಟ್ಟಡದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳು ವೈದ್ಯಾಧಿಕಾರಿಯಿಂದ ಪರೀಕ್ಷಿಸಿಕೊಳ್ಳಬೇಕೆಂದು ಮತ್ತು ಅವಶ್ಯವಿದ್ದರೆ ಆ ವ್ಯಕ್ತಿಗಳಿಗೆ ಸೇರಿದ ಬಟ್ಟೆ-ಬರೆ, ಹಾಸಿಗೆ ಅಥವಾ ಇತರ ಶಂಕಿತ ವಸ್ತುಗಳ ಸೋಂಕು ನಿವಾರಿಸಬೇಕೆಂದು ನಿರ್ದೇಶಿಸಲು ಮತ್ತು ಅಂಥ ಯಾರೇ ವ್ಯಕ್ತಿಯು ತನ್ನ ವಿಳಾಸವನ್ನು ಕೊಡತಕ್ಕದ್ದೆಂದು ಮತ್ತು ಹತ್ತು ದಿವಸಗಳಿಗೆ ಮೀರದಂಥ ಅವಧಿಗಾಗಿ ನಿರ್ದಿಷ್ಟಪಡಿಸಬಹುದಾದಂಥ ಕಾಲ ಮತ್ತು ಸ್ಥಳಗಳಲ್ಲಿ ವೈದ್ಯಕೀಯ ಪರೀಕ್ಷೆಗಾಗಿ ಪ್ರತಿನಿತ್ಯವೂ ಸ್ವತಃ ಹಾಜರಾಗಬೇಕೆಂದು ನಿರ್ದೇಶಿಸಲು ಅಧಿಕಾರ;

(ಗ) ಸಾರ್ವಜನಿಕವಾದ ಅಥವಾ ಖಾಸಗಿಯಾದ ಯಾವುದೇ ಸ್ಥಳದಲ್ಲಿ ಅಥವಾ ಯಾವುವೇ ಸನ್ನಿವೇಶಗಳಲ್ಲಿ ಅಥವಾ ಯಾವುದೇ ಉದ್ದೇಶಕ್ಕಾಗಿ ಐವತ್ತನ್ನು ಮೀರುವ ಯಾವುದೇ ಸಂಖ್ಯೆಯ ವ್ಯಕ್ತಿಗಳನ್ನೊಳಗೊಂಡ ಸಮೂಹಗಳು ಅಥವಾ ಜಿಲ್ಲಾ ವೈದ್ಯಾಧಿಕಾರಿಯ ಅಥವಾ ಜಿಲ್ಲೆಯ ಇತರ ಹಿರಿಯ ವೈದ್ಯಕೀಯ ಅಥವಾ ಆರೋಗ್ಯಾಧಿಕಾರಿಯ ಅಥವಾ ಈ ಬಗ್ಗೆ ಸರ್ಕಾರದಿಂದ ನೇಮಕಗೊಂಡ ಇತರ ವೈದ್ಯಕೀಯ ಅಥವಾ ಆರೋಗ್ಯಾಧಿಕಾರಿಯ ಬರಹದಲ್ಲಿನ ದಾಖಲ್ಮಾಡಿದ ಅಭಿಪ್ರಾಯದಲ್ಲಿ ಅಂಥ ಸ್ಥಳದಲ್ಲಿ ಅಂಥ ಸನ್ನಿವೇಶಗಳಲ್ಲಿ ಅಥವಾ ಅಂಥ ಉದ್ದೇಶಕ್ಕಾಗಿ ಅಂಥ ಸಮೂಹಗಳು ಹರಡುವ ಸಾಧನಗಳಾಗುವ ಸಂಭವವಿದ್ದರೆ ಅಥವಾ ಅದನ್ನು ಹೆಚ್ಚು ಉಲ್ಬಣಗೊಳಿಸುವುದಾಗಿದ್ದರೆ ಸಾರ್ವತ್ರಿಕವಾಗಿಯೇ ಆಗಲಿ ಅಥವಾ ಯಾವುದೇ ವ್ಯಕ್ತಿಗತ ಸಂದರ್ಭದಲ್ಲಿ ವಿಶೇಷ ಆದೇಶದ ಮೂಲಕ ನಿಷೇಧಿಸಲು ಅಧಿಕಾರ.

(4) ಮುನ್ಸಿಪಲ್ ಕೌನ್ಸಿಲು, ಈ ಪ್ರಕರಣದ ಮೇರೆಗೆ ಯಾವುದೇ ಸ್ವತ್ತಿನ ನಾಶದಿಂದ ಗಣನೀಯ ನಷ್ಟವನ್ನು ಅನುಭವಿಸಿದ ಯಾರೇ ವ್ಯಕ್ತಿಗೆ ಅದರ ವಿವೇಚನೆಯಲ್ಲಿ ನಷ್ಟಪರಿಹಾರವನ್ನು ಕೊಡಬಹುದು; ಆದರೆ ಮುನ್ಸಿಪಲ್ ಕೌನ್ಸಿಲು ಅವಕಾಶ ಮಾಡಿಕೊಟ್ಟಂತೆ ಅಲ್ಲದೆ, ಅದರಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳ ಯಾವುದೇ ಚಲಾಯಿಸುವಿಕೆಯಿಂದ ಉಂಟಾದ ಯಾವುದೇ ನಷ್ಟ ಅಥವಾ ಹಾನಿಗಾಗಿ ನಷ್ಟ ಪರಿಹಾರಕ್ಕಾಗಿ ಯಾವುದೇ ಕ್ಲೇಮು ಇರತಕ್ಕದ್ದಲ್ಲ.

(5) (2)ನೇ ಉಪಪ್ರಕರಣದ ಮೇರೆಗೆ ಹಿಂದೆ ಹೇಳಿದಂತೆ ಅಂಥ ಘೋಷಣೆಯು ತತ್ಕಾಲದಲ್ಲಿ ಜಾರಿಯಲ್ಲಿರುವಂಥ ಯಾವುದೇ ಪೌರಸಭೆಯಲ್ಲಿ, ಯಾರೇ ವ್ಯಕ್ತಿಯು,-

(ಕ) ಅಂಥ ಪೌರಸಭೆಯಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಮತ್ತು 248ನೇ ಪ್ರಕರಣದ ಮೂಲಕ ಅಥವಾ ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲಿಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಿ ಅದು ಮಾಡಿದ ಯಾವುದೇ ಆದೇಶವನ್ನು ತಿಳಿದೂ ತಿಳಿದೂ ಉಲ್ಲಂಘಿಸಿದರೆ;

(ಖ) ಅಂಥ ಯಾವುದೇ ಆದೇಶವನ್ನು ಕಾರ್ಯಗತಗೊಳಿಸುವಲ್ಲಿ ಅಥವಾ ಜಾರಿಗೊಳಿಸುವಲ್ಲಿ ಮುನ್ಸಿಪಲ್ ಕೌನ್ಸಿಲಿನ ಯಾರೇ ಅಧಿಕಾರಿ ಅಥವಾ ಮುನ್ಸಿಪಲ್ ಕೌನ್ಸಿಲಿನ ಅಧಿಕಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಇತರ ವ್ಯಕ್ತಿಗೆ ಅಡ್ಡಿಪಡಿಸಿದರೆ;

–ಅಂಥ ವ್ಯಕ್ತಿಯು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**250. ಅಧಿಕಾರಿಗಳ ಮತ್ತು ಆದೇಶಗಳ ಹಿಂತೆಗೆದುಕೊಳ್ಳುವಿಕೆ ಮತ್ತು ಮಾರ್ಪಾಟು.–** (1) ಸರ್ಕಾರವು, ಅಧಿಸೂಚನೆಯ ಮೂಲಕ ಯಾವುದೇ ಕಾಲದಲ್ಲಿ,–

(ಕ) 248 ಮತ್ತು 249ನೇ ಪ್ರಕರಣದ ಮೂಲಕ ಅಥವಾ ಅವುಗಳ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು;

(ಖ) ಅಂಥ ಯಾವುದೇ ಅಧಿಕಾರಕ್ಕೆ ಸಂಬಂಧಿಸಿದಂತೆ ನಿಯಮಿಸಲಾದ ಯಾವುದೇ ಪರಿಮಿತಿ, ಪರಿಬಂಧ ಅಥವಾ ಷರತ್ತನ್ನು ರದ್ದುಪಡಿಸಬಹುದು ಅಥವಾ ಮಾರ್ಪಾಟು ಮಾಡಬಹುದು; ಅಥವಾ

(ಗ) ಅಂಥ ಯಾವುದೇ ಅಧಿಕಾರವನ್ನು ಚಲಾಯಿಸುವಲ್ಲಿ ಮುನ್ಸಿಪಲ್ ಕೌನ್ಸಿಲು ಮಾಡಿದ ಯಾವುದೇ ಆದೇಶವನ್ನು ರದ್ದುಪಡಿಸಬಹುದು.

(2) ಹಿಂದೆ ಹೇಳಿದಂತೆ ಅಂಥ ಯಾವುದೇ ಅಧಿಕಾರವನ್ನು ಚಲಾಯಿಸುವಲ್ಲಿ ಮುನ್ಸಿಪಲ್ ಕೌನ್ಸಿಲು ಮಾಡಿದ ಪ್ರತಿಯೊಂದು ಆದೇಶವು ಅಂಥ ಅಧಿಕಾರವನ್ನು ಹಿಂತೆಗೆದುಕೊಂಡಮೇಲೆ ಪೌರಸಭೆಯಲ್ಲಿ ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದು.

**251. ಕುದುರೆಗಳು, ನಾಯಿಗಳು, ಜಾನುವಾರುಗಳು, ಕುರಿಗಳು ಅಥವಾ ಮೇಕೆಗಳ ರೋಗಗಳಿಗೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲಿನ ಕರ್ತವ್ಯಗಳು.–** ಯಾವುದೇ ಪೌರಸಭೆಯಲ್ಲಿ ಕುದುರೆಗಳು, ನಾಯಿಗಳು, ಜಾನುವಾರುಗಳು, ಕುರಿಗಳು ಅಥವಾ ಮೇಕೆಗಳಲ್ಲಿ ಯಾವುದೇ ಸೋಂಕು ರೋಗ ತಲೆದೋರಿದರೆ ಅಥವಾ ಅಂಥ ಯಾವುದೇ ರೋಗವು ತಲೆದೋರುವ ಸಂಭವವಿರುವುದು ಕಂಡುಬಂದರೆ ಮುನ್ಸಿಪಲ್ ಕೌನ್ಸಿಲು, ರೋಗವನ್ನು ಅಥವಾ ಅದು ತಲೆದೋರುವುದನ್ನು ಅಥವಾ ಪ್ರಾರಂಭವಾಗುವುದನ್ನು ತಡೆಗಟ್ಟುವ, ಎದುರಿಸುವ, ಶಮನ ಮಾಡುವ ಅಥವಾ ದಮನ ಮಾಡುವ ಉದ್ದೇಶಕ್ಕಾಗಿ ಅದು ಅವಶ್ಯಕವೆಂದು ಭಾವಿಸುವಂಥ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**252. ಕಟ್ಟಡಗಳ ಒಳಭಾಗದಲ್ಲಿ ಜನ ನಿಬಿಡತೆಯನ್ನು ಕಡಿಮೆ ಮಾಡಲು ವ್ಯವಹರಣೆಗಳು.–** (1) ಆ ಕಟ್ಟಡದ ಒಳಭಾಗವೂ ಆ ಕಟ್ಟಡ ಅಥವಾ ಯಾವುದೇ ನೆರೆಹೊರೆಯ ಕಟ್ಟಡದ ನಿವಾಸಿಗಳ ಆರೋಗ್ಯಕ್ಕೆ ಅಪಾಯಕರ ಅಥವಾ ಹಾನಿಕಾರಕವಾಗುವ ಹಾಗೆ ಅಥವಾ ಆಗುವ ಸಂಭವವಿರುವ ಹಾಗೆ ಜನನಿಬಿಡವಾಗಿದೆಯೆಂದು ಪರ್ಯಾಲೋಚಿಸಿದಾಗಲೆಲ್ಲಾ, ಮುನ್ಸಿಪಲ್ ಕೌನ್ಸಿಲು, ಅಂಥ ಜನನಿಬಿಡತೆಯನ್ನು ತಡೆಗಟ್ಟಲು ಆದೇಶವನ್ನು ಪಡೆದುಕೊಳ್ಳುವ ಉದ್ದೇಶಕ್ಕಾಗಿ ಮೊದಲನೇ ದರ್ಜೆಯ ಮ್ಯಾಜಿಸ್ಟ್ರೇಟನ ಮುಂದೆ ವ್ಯವಹರಣೆಗಳನ್ನು ಕೈಗೊಳ್ಳುವಂತೆ ಮಾಡಬಹುದು.

(2) ಅಂಥ ಮ್ಯಾಜಿಸ್ಟ್ರೇಟನು, ದೂರದ ಜನನಿಬಿಡ ರೋಗ ಅಥವಾ ಅಪಾಯ ಅಥವಾ ರೋಗದ ಅಪಾಯ ಉಂಟು ಮಾಡುವ ಸಂಭವವಿದೆಯೆಂದು ತನ್ನ ಅಭಿಪ್ರಾಯವನ್ನು ನಿರೂಪಿಸುವ

ವೈದ್ಯಾಧಿಕಾರಿ ಅಥವಾ ಆರೋಗ್ಯಾಧಿಕಾರಿಯ ಪ್ರಮಾಣಪತ್ರವನ್ನು ಹಾಜರುಪಡಿಸಿದ ಮೇಲೆ ಮತ್ತು ಅಂಥ ಮ್ಯಾಜಿಸ್ಟ್ರೇಟನಿಗೆ, ಅವಶ್ಯವೆಂದು ಕಂಡುಬರಬಹುದಾದಂಥ ಮತ್ತಷ್ಟು ವಿಚಾರಣೆಯು, ಯಾವುದಾದರೂ ಇದ್ದರೆ, ಅದರ ತರುವಾಯ ಆರು ವಾರಗಳನ್ನು ಮೀರದ ಅಥವಾ ಹತ್ತು ದಿನಗಳಿಗೆ ಕಡಿಮೆಯಿಲ್ಲದ ಯುಕ್ತ ಕಾಲದೊಳಗೆ ಅವನು ನಿಯಮಿಸುವುದು ಅವಶ್ಯವೆಂದು ಭಾವಿಸುವಷ್ಟರಮಟ್ಟಿಗೆ, ಸದರಿ ಕಟ್ಟಡದಲ್ಲಿ ವಸತಿ ಪಡೆದವರ, ಬಾಡಿಗೆದಾರರ, ಅಥವಾ ಇತರ ನಿವಾಸಿಗಳ ಸಂಖ್ಯೆಯನ್ನು ಕಡಿಮೆ ಮಾಡಲು ಕಟ್ಟಡದ ಒಡೆಯನನ್ನು ಅಗತ್ಯಪಡಿಸಬಹುದು ಅಥವಾ ಅವನು ನ್ಯಾಯಸಮ್ಮತ ಮತ್ತು ಸರಿಯೆಂದು ಭಾವಿಸಬಹುದಾದಂಥ ಯಾವುದೇ ಇತರ ಆದೇಶವನ್ನು ಮಾಡಬಹುದು.

(3) ಸದರಿ ಕಟ್ಟಡವನ್ನು ಒಳಬಾಡಿಗೆಗೆ ಕೊಟ್ಟಿದ್ದರೆ, ವಸತಿ ಪಡೆದವರ, ಬಾಡಿಗೆದಾರರ ಅಥವಾ ಅದರ ಇತರ ವಾಸ್ತವಿಕ ನಿವಾಸಿಗಳ ಯಜಮಾನನನ್ನು, ಈ ಉಪಪ್ರಕರಣದ ಉದ್ದೇಶಕ್ಕಾಗಿ ಆ ಕಟ್ಟಡದ ಒಡೆಯನೆಂದು ಭಾವಿಸತಕ್ಕದ್ದು.

(4) (2)ನೇ ಉಪಪ್ರಕರಣದ ಮೇರೆಗೆ ಕಡ್ಡಾಯ ಕೋರಿಕೆಯನ್ನು ಕೊಟ್ಟಿರುವ ಯಾರೇ ಒಡೆಯನು, ಅದರಲ್ಲಿ ನಿಯಮಿಸಿದ ಷರತ್ತುಗಳನ್ನು ಪೂರೈಸಲು ಅವಶ್ಯವಾಗಬಹುದಾದಂತೆ ಸದರಿ ಕಟ್ಟಡದಲ್ಲಿ ವಸತಿ ಪಡೆದವರು, ಬಾಡಿಗೆದಾರರು ಅಥವಾ ಇತರ ವಾಸ್ತವಿಕ ನಿವಾಸಿಗಳಿಗೆ ತತ್‌ಕ್ಷಣವೇ ಅಂಥ ಕಡ್ಡಾಯ ಕೋರಿಕೆಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸದರಿ ಕಟ್ಟಡವನ್ನು ಖಾಲಿ ಮಾಡಲು ಬರಹದಲ್ಲಿನ ನೋಟೀಸನ್ನು ಕೊಡುವುದು ಅವನ ಕರ್ತವ್ಯವಾಗಿರತಕ್ಕದ್ದು ಮತ್ತು ಅಂಥ ನೋಟೀಸನ್ನು ಸ್ವೀಕರಿಸುವಂಥ ಅಂಥ ಯಾರೇ ವಸತಿ ಪಡೆದವರು, ಬಾಡಿಗೆದಾರರು, ನಿವಾಸಿಗಳು, ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ ಅದನ್ನು ಪಾಲಿಸಲು ಬದ್ಧರಾಗಿರತಕ್ಕದ್ದು.

(5) (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಕೋರಿಕೆಯಲ್ಲಿ ನಿರ್ದಿಷ್ಟಪಡಿಸಿರುವ ದಿನಾಂಕದ ತರುವಾಯ ಅಂಥ ಕಡ್ಡಾಯ ಕೋರಿಕೆಯನ್ನು ಉಲ್ಲಂಘಿಸಿ ಯಾವುದೇ ಕಟ್ಟಡವು ಜನನಿಬಿಡವಾಗುವುದಕ್ಕೆ ಅನುಮತಿಸುವ ಯಾರೇ ಒಡೆಯ ಮತ್ತು (4)ನೇ ಉಪಪ್ರಕರಣದ ಮೇರೆಗೆ ತನಗೆ ಕೊಟ್ಟ ನೋಟೀಸಿಗನುಸಾರವಾಗಿ ಅಂಥ ಯಾವುದೇ ಕಟ್ಟಡವನ್ನು ಖಾಲಿ ಮಾಡಲು ತಪ್ಪುವ ಯಾರೇ ವ್ಯಕ್ತಿಯು, ಅಂಥ ಜನನಿಬಿಡ ಅಥವಾ ಅಂಥ ಖಾಲಿ ಮಾಡುವುದು ತಪ್ಪುವುದು ಮುಂದುವರಿಯುವಂಥ ಅವಧಿಯಲ್ಲಿ ಅಂಥ ಕಡ್ಡಾಯ ಕೋರಿಕೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ತರುವಾಯದ ಪ್ರತಿಯೊಂದು ದಿವಸಕ್ಕೆ ಹತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾತಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**253. ಸರ್ಕಾರವು ಅಧಿಸೂಚಿಸಿದ ಜನನಿಬಿಡತೆ ಪ್ರದೇಶಗಳಿಗೆ ಸಂಬಂಧಿಸಿದಂತೆ ಸರ್ಕಾರವು ಪ್ರದಾನ ಮಾಡಬಹುದಾದಂಥ ವಿಶೇಷ ಅಧಿಕಾರಗಳು.–** (1) ಈ ಕೆಳಕಂಡ ಯಾವುದೇ ನ್ಯೂನತೆಗಳು, ಎಂದರೆ,–

(ಕ) ಅಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಅಥವಾ ಉದ್ದೇಶಿತ ಕಟ್ಟಡಗಳ ಅಥವಾ ಕಟ್ಟಡಗಳ ಅಥವಾ ಕಟ್ಟಡಗಳ ಬ್ಲಾಕುಗಳು ಒಟ್ಟಾಗಿ ಜನನಿಬಿಡವಾಗಿರುವ ಅಥವಾ ಆಗುವ ಸಂಭವವಿರುವಂಥ ರೀತಿ; ಅಥವಾ

(ಖ) ಈಗಾಗಲೇ ಅಸ್ತಿತ್ವದಲ್ಲಿರುವ ಅಥವಾ ಉದ್ದೇಶಿತ ಅಂಥ ಯಾವುದೇ ಕಟ್ಟಡಗಳು ಅಥವಾ ಕಟ್ಟಡಗಳ ಬ್ಲಾಕುಗಳನ್ನು ಸ್ವಚ್ಛಗೊಳಿಸುವುದರ ಅಸಾಧ್ಯತೆ; ಅಥವಾ

(ಗ) ಹಿಂದೆ ಹೇಳಿದಂತೆ ಅಂಥ ಯಾವುವೇ ಕಟ್ಟಡಗಳ ಅಥವಾ ಬ್ಲಾಕುಗಳ ಅಥವಾ ಪ್ರದೇಶದ ಚರಂಡಿ ವ್ಯವಸ್ಥೆ ಅಥವಾ ನಿರ್ಮಲೀಕರಣಕ್ಕಾಗಿ ಅದರಲ್ಲಿ ಚರಂಡಿ ವ್ಯವಸ್ಥೆ ಅಥವಾ ನಿರ್ಮಲೀಕರಣದ ಅಭಾವ ಅಥವಾ ವ್ಯವಸ್ಥೆಗೊಳಿಸುವ ತೊಂದರೆ; ಅಥವಾ

(ಘ) ಬೀದಿಗಳ ಅಥವಾ ಕಟ್ಟಡಗಳ ಅಥವಾ ಕಟ್ಟಡಗಳ ಸಮೂಹಗಳು ಇಕ್ಕಟ್ಟಾಗಿರುವುದು, ಒತ್ತಾಗಿರುವುದು, ದುರ್‌ವ್ಯವಸ್ಥೆ ಅಥವಾ ದುಸ್ಥಿತಿಯಲ್ಲಿರುವುದು,

–ಇವುಗಳಿಂದಾಗಿ ಯಾವುದೇ ಪ್ರದೇಶದಲ್ಲಿನ ಯಾರೇ ಅಧಿಭೋಗದಾರನಿಗೆ ಆಗಲಿ ಅಥವಾ ಅದರ ನೆರೆಹೊರೆಯಲ್ಲಿನ ಯಾರೇ ನಿವಾಸಿಗಳಿಗೆ ಆಗಲಿ ರೋಗದ ಅಪಾಯ ಉಂಟಾಗಿದೆಯೆಂದು ಅಥವಾ ಉಂಟಾಗುವ ಸಂಭವವಿದೆಯೆಂದು ಸರ್ಕಾರವು ಅಭಿಪ್ರಾಯಪಟ್ಟರೆ, ಸರ್ಕಾರವು ಅಧಿಸೂಚನೆಯ ಮೂಲಕ ಅಂಥ ಪ್ರದೇಶವು ಒಳಪಟ್ಟಿರುವಂಥ ಮುನ್ಸಿಪಲ್ ಕೌನ್ಸಿಲಿಗೆ (2)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಪ್ರದಾನ ಮಾಡಬಹುದು, ಮತ್ತು ಈ ಬಗ್ಗೆ ನಿಯಮಿಸಿದ ಪರಿಮಿತಿಗಳು, ಪರಿಬಂಧಗಳು, ಮಾರ್ಪಾಟುಗಳು, ಷರತ್ತುಗಳು ಅಥವಾ ವಿನಿಯಮಗಳು ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು, ಆ ಪ್ರದೇಶದೊಳಗೆ ಹಾಗೆ ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು, ಸರ್ಕಾರದ ತರುವಾಯದ ಅಧಿಸೂಚನೆಯ ಮೂಲಕ ಆ ಅಧಿಕಾರಗಳನ್ನು ಹಿಂತೆಗೆದುಕೊಂಡ ಹೊರತು ಮತ್ತು ಅಲ್ಲಿಯವರೆಗೆ ಚಲಾಯಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲಿಗೆ ಪ್ರದಾನ ಮಾಡಬಹುದಾದಂಥ ಎಲ್ಲ ಅಥವಾ ಯಾವುದೇ ಅಧಿಕಾರವು ಈ ಕೆಳಕಂಡಂತಿವೆ:–

(ಕ) ಈಗಾಗಲೇ ಅಸ್ತಿತ್ವದಲ್ಲಿರುವ ಅಥವಾ ನಿರ್ಮಾಣವಾಗುತ್ತಿರುವ ಯಾವುದೇ ಕಟ್ಟಡ ಅಥವಾ ಬ್ಲಾಕು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ನ್ಯೂನತೆಯ ಕಾರಣದಿಂದಾಗಿ ಹಿಂದೆ ಹೇಳಿದಂತೆ ಅಂಥ ಅಪಾಯಕ್ಕೆಡೆ ಮಾಡಿಕೊಟ್ಟಿದೆ ಅಥವಾ ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಅದಕ್ಕೆ ಎಡೆ ಮಾಡಿಕೊಡುವ ಸಂಭವವಿದ್ದರೆ, ಅಂಥ ಕಟ್ಟಡ ಅಥವಾ ಬ್ಲಾಕಿನ ಯಾವುದೇ ಎದ್ದು ಕಾಣುವ ಅಂಟಿಸಬೇಕಾದ ಮತ್ತು ಮುನ್ಸಿಪಲ್ ಕೌನ್ಸಿಲು ಯುಕ್ತವೆಂದು ಭಾವಿಸುವಂತೆ ಅವುಗಳ ಒಡೆಯರಿಗೆ ಆಗಲಿ ಅಥವಾ ಅಂಥ ಕಟ್ಟಡ ಅಥವಾ ಬ್ಲಾಕನ್ನು ನಿರ್ಮಿಸಿರುವ ಅಥವಾ ನಿರ್ಮಿಸಲಾಗುತ್ತಿರುವಂಥ ಭೂಮಿಯ ಒಡೆಯರಿಗೆ ಆಗಲಿ ಬರಹದಲ್ಲಿನ ನೋಟೀಸಿನ ಮೂಲಕ ಹಾಗೆ ಸಂಬೋಧಿಸಲಾದ ವ್ಯಕ್ತಿಗಳು, ನೋಟೀಸಿನಲ್ಲಿ ನಿರ್ದಿಷ್ಟಪಡಿಸತಕ್ಕ ಯುಕ್ತ ಅವಧಿಯೊಳಗಾಗಿ ಸದರಿ ಕಟ್ಟಡ ಅಥವಾ ಬ್ಲಾಕನ್ನು ಕೆಡವಿ ಹಾಕುವಂತೆ ಆಗಲಿ ಅಥವಾ ತೆಗೆದುಹಾಕುವಂತೆ ಆಗಲಿ ಅಥವಾ ಅಂಥ ರೋಗದ ಎಲ್ಲ ಅಂಥ ಅಪಾಯವನ್ನು ತಡೆಗಟ್ಟಲು ಅವಶ್ಯವೆಂದು ಮುನ್ಸಿಪಲ್ ಕೌನ್ಸಿಲು ಭಾವಿಸುವಂಥ ಕೆಲಸಗಳನ್ನು ನಿರ್ವಹಿಸಲು ಅಥವಾ ಅದಕ್ಕೆ ಸಂಬಂಧಿಸಿದಂಥ ಕ್ರಮವನ್ನು ಕೈಗೊಳ್ಳಲು ಅಗತ್ಯಪಡಿಸಲು ಅಧಿಕಾರ;

(ಖ) ಸದರಿ ನೋಟೀಸಿನಲ್ಲಿ ಸಂಬೋಧಿಸಲಾದ ವ್ಯಕ್ತಿಗಳು ಅದರಲ್ಲಿ ನಿರ್ದಿಷ್ಟಪಡಿಸಿರುವ ಕಾಲದಲ್ಲಿ ಹಾಗೆ ಮಾಡಲು ನಿರ್ಲಕ್ಷಿಸಿದರೆ ಮುನ್ಸಿಪಲ್ ಅಥವಾ ಇತರ ಏಜೆನ್ಸಿಯು ಸದರಿ ಕಟ್ಟಡ ಅಥವಾ ಬ್ಲಾಕನ್ನು ಕೆಡವಿ ಹಾಕಲು ಅಥವಾ ತೆಗೆದುಹಾಕಲು ಅಥವಾ ಅಂಥ ಕೆಲಸಗಳನ್ನು ನಿರ್ವಹಿಸಲು ಅಥವಾ ಅಂಥ ಕ್ರಮವನ್ನು ತೆಗೆದುಕೊಳ್ಳಲು ಅಧಿಕಾರ;

(ಗ) ಸರ್ಕಾರವು ಈ ಬಗ್ಗೆ ಶಕ್ತಗೊಳಿಸಬಹುದಾದ ಮತ್ತು ಯಾರ ತೀರ್ಮಾನವು ನಿರ್ಣಾಯಕವಾಗಿರತಕ್ಕದ್ದೋ ಆ ಅಧಿಕಾರಿಗೆ ಅಪೀಲು ಮಾಡುವ ಹಕ್ಕಿಗೆ ಒಳಪಟ್ಟು,–

(i) (ಕ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರವನ್ನು ಚಲಾಯಿಸಿ ಪೂರ್ಣವಾಗಿ ಅಥವಾ ಭಾಗಶಃ ಕೆಡವಿ ಹಾಕಿದಂಥ ಯಾವುದೇ ಕಟ್ಟಡದ ನಿವೇಶನದ ಮೇಲೆ;

(ii) ಹಿಂದೆ ಹೇಳಿದಂತೆ, ಅಂಥ ಅಪಾಯವನ್ನು ತಡೆಗಟ್ಟಲು ಅಂಥ ನಿವೇಶನ ಅಥವಾ ಜಾಗದ ಮೇಲೆ ಕಟ್ಟತಕ್ಕದ್ದಲ್ಲವೆಂದು; ಮತ್ತು

(ಕ) ಅಂಥ ನಿವೇಶನ ಅಥವಾ ಜಾಗವನ್ನು ಆರ್ಜಿಸುವುದೇ ಆಗಲಿ; ಅಥವಾ

(ಖ) ಒಡೆಯ ಅಥವಾ ಅಧಿಭೋಗದಾರನು ಉಪಯೋಗಿಸಬಹುದಾದ ಅಥವಾ ಅದರ ಉಪಯೋಗವನ್ನು ಮಾಡಲು ಅನುಮತಿಸುವುದಕ್ಕೆ ಸಂಬಂಧಿಸಿದಂತೆ ಅವಶ್ಯವೆಂದು ಭಾವಿಸಬಹುದಾದಂಥ ಷರತ್ತುಗಳನ್ನು ನಿಯಮಿಸಲು,

–ಮುನ್ಸಿಪಲ್ ಕೌನ್ಸಿಲು ಪರ್ಯಾಲೋಚಿಸಿದರೆ, ಅಂಥ ಜಾಗವು ಖಾಸಗಿ ಸ್ವತ್ತಾಗಿರಲಿ ಅಥವಾ ಅಲ್ಲದಿರಲಿ ಮತ್ತು ಆವೃತವಾಗಿರಲಿ ಅಥವಾ ಇಲ್ಲದಿರಲಿ, ಕಟ್ಟಡವು ಆವರಿಸಿರದ ಯಾವುದೇ ಜಾಗದ ಮೇಲೆ; ಯಾವುದೇ ಕಟ್ಟಡದ ನಿರ್ಮಾಣವನ್ನು ಅಥವಾ ನಿರ್ದಿಷ್ಟಪಡಿಸಬಹುದಾದಂಥ ಉದ್ದಗಲಗಳನ್ನು ಮೀರದ ಯಾವುದೇ ಕಟ್ಟಡವನ್ನು ನಿರ್ಮಿಸಲು, ಅಂಥ ಯಾವುದೇ ನಿವೇಶನ ಅಥವಾ ಜಾಗದ ಒಡೆಯ ಅಥವಾ ಅಧಿಭೋಗದಾರನಿಗೆ ಸಂಭೋಧಿಸಿದ ಬರಹದಲ್ಲಿನ ನೋಟೀಸಿನ ಮೂಲಕ ಮತ್ತು 262ನೇ ಪ್ರಕರಣದ, (6)ನೇ ಉಪಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಪ್ರಕಟಿಸಿದ ಸಾರ್ವತ್ರಿಕ ನೋಟೀಸಿನ ಮೂಲಕ ನಿಷೇಧಿಸಲು ಅಧಿಕಾರ:

ಪರಂತು, ಪ್ರತಿಯೊಂದು ಸಂದರ್ಭದಲ್ಲಿ ನಷ್ಟ ಪರಿಹಾರವನ್ನು ಅಂಥ ನಿಷೇಧದಿಂದ ಯಾರ ಹಕ್ಕುಗಳು ಬಾಧಿತವಾಗಿವೆಯೋ ಆ ಯಾರೇ ವ್ಯಕ್ತಿಗೆ ಅದರ ಮೊಬಲಗು ವಿವಾದದಲ್ಲಿರುವ 268ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗಿನ ಯಾವುದೇ ನೋಟೀಸಿನ ಅನುಸರಣೆಯಲ್ಲಿ ಯಾವುದೇ ಕಟ್ಟಡವನ್ನು ಕೆಡವಿ ಹಾಕಿದಾಗ, ಮುನ್ಸಿಪಲ್ ಕೌನ್ಸಿಲು, ಅದನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ಜಾರಿಯಲ್ಲಿರುವ ಉಪವಿಧಿಯ ಯಾವುದೇ ಉಪಬಂಧಕ್ಕೆ ತದ್ವಿರುದ್ಧವಾಗಿ ಅದನ್ನು ನಿರ್ಮಿಸಲಾಗಿದ್ದ ಹೊರತು, ಅದರಿಂದ ಹಾನಿಯನ್ನು ಅನುಭವಿಸಿರಬಹುದಾದಂಥ ಒಡೆಯ ಅಥವಾ ಅಧಿಭೋಗದಾರನಿಗೆ ಯುಕ್ತ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದು. ಮೊಬಲಗನ್ನು ವಿವಾದದ ಸಂದರ್ಭದಲ್ಲಿ 268ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು.

**254. ಪೂಜಾ ಸ್ಥಳದಲ್ಲಿ ಸಮಾಧಿ ಅಥವಾ ಗೋರಿ ನಿರ್ಮಾಣದ ನಿಷೇಧ.–** (1) ಯಾವುದೇ ಸಾರ್ವಜನಿಕ ಪೂಜಾಸ್ಥಳದ ಗೋಡೆಗಳೊಳಗೆ ಅಥವಾ ಅದರ ಕೆಳಭಾಗದಲ್ಲಿ ಯಾರೇ ವ್ಯಕ್ತಿ ಗುಮ್ಮಟ ಅಥವಾ ಗೋರಿಯನ್ನು ನಿರ್ಮಿಸತಕ್ಕದ್ದಲ್ಲ ಅಥವಾ ಯಾವುದೇ ಶವವನ್ನು ಹೂಳುವಂತೆ ಮಾಡತಕ್ಕದ್ದಲ್ಲ:

ಪರಂತು, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು, ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಯಾವುದೇ ಸಾರ್ವಜನಿಕ ಪೂಜಾ ಸ್ಥಳದ ಆವರಣದೊಳಗೆ ಅಥವಾ ಅದರ ಕೆಳಭಾಗದಲ್ಲಿ ಗುಮ್ಮಟ ಅಥವಾ ಗೋರಿಯನ್ನು ನಿರ್ಮಿಸಲು ಮತ್ತು ಅಂಥ ಗುಮ್ಮಟ ಅಥವಾ ಗೋರಿಯಲ್ಲಿ ಅಥವಾ ಅಸ್ತಿತ್ವದಲ್ಲಿರುವ ಗುಮ್ಮಟ ಅಥವಾ ಗೋರಿಯಲ್ಲಿ ಪೂಜಾರಿಗಳು, ಸನ್ಯಾಸಿಗಳು ಅಥವಾ ಧರ್ಮಗುರುಗಳನ್ನು ಹೂಳುವುದನ್ನು ಅಧಿಕೃತಗೊಳಿಸಬಹುದು.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**255. ಸತ್ತವರ ವಿಲೆಗಾಗಿ ಸ್ಥಳಗಳನ್ನು ಮುಚ್ಚುವುದು.–** (1) ಮುನ್ಸಿಪಲ್ ಕೌನ್ಸಿಲು ಸತ್ತವರ ವಿಲೆಗಾಗಿ ಉಪಯೋಗಿಸುವ ಯಾವುದೇ ಸ್ಥಳವು ಆರೋಗ್ಯಕ್ಕೆ ಹಾನಿಕಾರಕವಾಗುವ ಹಾಗಿರುವ ಅಥವಾ ಹಾನಿಕಾರಕವಾಗುವ ಸಂಭವವುಳ್ಳವಂಥ ಸ್ಥಿತಿಯಲ್ಲಿದೆ ಎಂದು ಅಭಿಪ್ರಾಯಪಟ್ಟರೆ ಅದು ಅದಕ್ಕಾಗಿನ ಕಾರಣಗಳ

ಸಹಿತ ತನ್ನ ಅಭಿಪ್ರಾಯವನ್ನು ಸರ್ಕಾರಕ್ಕೆ ಒಪ್ಪಿಸಬಹುದು ಮತ್ತು ಸರ್ಕಾರವು ತರುವಾಯ ಅದನ್ನು ಮಾಡಿಸುವಂತೆ ಮಾಡಲು ಯುಕ್ತವೆಂದು ಭಾವಿಸುವಂಥ ಹೆಚ್ಚಿನ ವಿಚಾರಣೆ ಯಾವುದಾದರೂ ಇದ್ದರೆ, ಅದನ್ನು ಮಾಡಿದ ತರುವಾಯ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ಆ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಅಂಥ ಸ್ಥಳವನ್ನು ಹಾಗೆ ಉಪಯೋಗಿಸುವುದನ್ನು ನಿಲ್ಲಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) ಅಧಿಸೂಚನೆಯ ಒಂದು ಪ್ರತಿಯನ್ನು ನೆರೆಹೊರೆಯ ಜನರ ಭಾಷೆಯಲ್ಲಿ ಅದರ ಭಾಷಾಂತರದೊಂದಿಗೆ ಸರ್ಕಾರೀ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಪೌರಸಭಾ ಕಛೇರಿಯಲ್ಲಿ ಮತ್ತು ಅದು ಸಂಬಂಧಪಟ್ಟಂಥ ಒಂದು ಅಥವಾ ಹೆಚ್ಚು ಎದ್ದು ಕಾಣುವ ಸ್ಥಳಗಳಲ್ಲಿ ಅಥವಾ ಆ ಸ್ಥಳದ ಹತ್ತಿರ ಹಾಕತಕ್ಕದ್ದು.

(3) ಅದನ್ನು ಮುಚ್ಚಲು ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದ ತರುವಾಯ ಯಾವುದೇ ಅಂಥ ಸ್ಥಳದಲ್ಲಿ ಯಾವುದೇ ಶವವನ್ನು ಹೂಳುವ ಅಥವಾ ಅನ್ಯಥಾ ವಿಲೆ ಮಾಡುವ ಯಾರೇ ವ್ಯಕ್ತಿಯು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**ಕೆಲವು ವ್ಯಾಪಾರಗಳು ಮತ್ತು ಉದ್ಯೋಗಗಳಿಂದ ಉಂಟಾಗುವ ಉಪದ್ರವಗಳು**

**256. ಲೈಸೆನ್ಸ್ ಪಡೆಯದೆ ಕೆಲವು ಉದ್ದೇಶಗಳಿಗಾಗಿ ಆವರಣವನ್ನು ಉಪಯೋಗಿಸತಕ್ಕದ್ದು:–** (1) ಯಾರೇ ವ್ಯಕ್ತಿಯು, ಈ ಬಗ್ಗೆ ಮುನಿಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಮಂಜೂರು ಮಾಡಿದ ಲೈಸೆನ್ಸ್ ಇಲ್ಲದೆ ಅಥವಾ ಅದರ ನಿಬಂಧನೆಗಳಿಗನುಗುಣವಾಗಿ ಅಲ್ಲದೆ ಅನ್ಯಥಾ ಈ ಕೆಳಕಂಡ ಯಾವುದೇ ಉದ್ದೇಶಗಳಿಗಾಗಿ ಯಾವುದೇ ಆವರಣವನ್ನು ಉಪಯೋಗಿಸತಕ್ಕದ್ದಲ್ಲ, ಎಂದರೆ:–

(ಕ) XIIIನೇ ಅನುಸೂಚಿಯ 1ನೇ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶ;

(ಖ) ಮುನಿಸಿಪಲ್ ಕಮಿಷಿಷನರ್ ಅಥವಾ ಚೀಫ್ ಆಫೀಸರನ ಅಭಿಪ್ರಾಯದಂತೆ ಪ್ರಾಣ, ಆರೋಗ್ಯ ಅಥವಾ ಸ್ವತ್ತಿಗೆ ಅಪಾಯಕಾರಿ ಅಥವಾ ಉಪದ್ರವವನ್ನುಂಟು ಮಾಡುವ ಸಂಭವವಿರುವಂಥ ಯಾವುದೇ ಉದ್ದೇಶ;

(ಗ) ಕುದುರೆಗಳು, ಜಾನುವಾರು ಅಥವಾ ಇತರ ಚತುಷ್ಪಾದ ಪ್ರಾಣಿಗಳು ಅಥವಾ ಪಕ್ಷಿಗಳನ್ನು ಸಾಗಣೆ, ಮಾರಾಟ ಅಥವಾ ಬಾಡಿಗೆಗಾಗಿ ಅಥವಾ ಅವುಗಳ ಉತ್ಪನ್ನದ ಮಾರಾಟಕ್ಕಾಗಿ; ಅಥವಾ

(ಘ) ಆ ಯಾವುದೇ ವಸ್ತುವನ್ನು ಗೃಹಪಯೋಗಕ್ಕಲ್ಲದೆ XIIIನೇ ಅನುಸೂಚಿಯ IIನೇ ಭಾಗದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಸ್ತುವಿನ ದಾಸ್ತಾನು:

ಪರಂತು, ಮುನ್ಸಿಪಲ್ ಕೌನ್ಸಿಲು, ಯಾವ ಆವರಣದಲ್ಲಿ ಮಾರಾಟಕ್ಕಾಗಿ ದಾಸ್ತಾನು ಮಾಡಿದ ವಸ್ತುಗಳ ಒಟ್ಟು ಪ್ರಮಾಣವು, ಅಂಥ ಯಾವುವೇ ವಸ್ತುಗಳ ಸಂಬಂಧದಲ್ಲಿ ಉಪವಿಧಿಗಳ ಮೂಲಕ ನಿಯಮಿಸಬಹುದಾದಂಥ ಪ್ರಮಾಣವನ್ನು ಮೀರದಂಥ, ಆ ಯಾವುದೇ ಆವರಣವನ್ನು (ಘ) ಖಂಡದ ಪ್ರವರ್ತನೆಯಿಂದ ವಿನಾಯಿತಿಗೊಳಿಸತಕ್ಕದ್ದೆಂದು ಘೋಷಿಸಬಹುದು.

(2) ಸರ್ಕಾರವು, ಪೌರಸಭೆಯ ಪರಿಮಿತಿಗಳ ಎರಡು ಮೈಲಿಗಳ ಅಂತರದೊಳಗಿನ ಯಾವುದೇ ಆವರಣವನ್ನು ಸಂಬಂಧಪಟ್ಟ ಪೌರಸಭೆಯ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನಿಂದ ಲೈಸೆನ್ಸು ಪಡೆಯದೆ ಮತ್ತು ಅಂಥ ಲೈಸೆನ್ಸಿನಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗನುಸಾರವಾಗಿ ಅಲ್ಲದೆ XIIIನೇ ಅನುಸೂಚಿಯ I ಹಾಗೂ IIನೇ ಭಾಗದಲ್ಲಿ ನಮೂದಿಸಿದ ಯಾವುದೇ ಒಂದು ಅಥವಾ ಹೆಚ್ಚಿನ ಉದ್ದೇಶಗಳಿಗಾಗಿ

ಉಪಯೋಗಿಸತಕ್ಕದ್ದಲ್ಲವೆಂದು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದು ಮತ್ತು (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಪೌರಸಭೆಯೊಳಗಿನ ಯಾವುದೇ ಆವರಣಕ್ಕೆ ಅನ್ವಯವಾಗುವ ಈ ಅಧಿನಿಯಮವು ಮತ್ತು ಅದರ ಮೇರೆಗಿನ ನಿಯಮಗಳು ಹಾಗೂ ಉಪವಿಧಿಗಳ ಉಪಬಂಧಗಳು ಪೌರಸಭೆಯ ಹೊರಗಿರುವ ಆವರಣಕ್ಕೆ ಅನ್ವಯವಾಗತಕ್ಕದ್ದು:

ಪರಂತು, ಅಂಥ ಯಾವುದೇ ಅಧಿಸೂಚನೆಯ ಸರ್ಕಾರೀ ರಾಜಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿವಸಗಳ ಮುಕ್ತಾಯದವರೆಗೆ, ಪರಿಣಾಮಕಾರಿಯಾಗತಕ್ಕದ್ದಲ್ಲ.

(3) ಗಿರಣಿಗಳು ಅಥವಾ ಕಬ್ಬಿಣ ಇಡುವ ಅಂಗಳಗಳಾಗಿ ಅಥವಾ ಅಂಥದೇ ಉದ್ದೇಶಗಳಿಗಾಗಿ, ಆವರಣಗಳನ್ನು ಉಪಯೋಗಿಸುವುದಕ್ಕಾಗಿ ಈ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಲೈಸೆನ್ಸಿನ ನಿಬಂಧನೆಗಳನ್ನು ನಿಯಮಿಸುವಲ್ಲಿ, ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು, ಅವನು, ಯುಕ್ತವೆಂದು ಯೋಚಿಸಿದಾಗ, ಲೈಸೆನ್ಸು ಪಡೆದವನನ್ನು ಭಾರ ಹೇರುವ ಮತ್ತು ಭಾರ ಇಳಿಸುವ ಉದ್ದೇಶಗಳಿಗಾಗಿ ವಾಹನಗಳಿಗೆ ಆವರಣದೊಳಗೆ ಜಾಗ ಅಥವಾ ದಾರಿಯನ್ನು ಒದಗಿಸಲು ಅಗತ್ಯಪಡಿಸಬಹುದು.

(4) ಮುನ್ಸಿಪಲ್ ಕೌನ್ಸಿಲು (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸನ್ನು ನೀಡಿರುವ ಆವರಣಗಳಿಗೆ ಸಂಬಂಧಿಸಿದಂತೆ, ಸಂದಾಯ ಮಾಡಬೇಕಾದ ಫೀಜುಗಳ ಪ್ರಮಾಣವನ್ನು ನಿಗದಿಪಡಿಸತಕ್ಕದ್ದು:

ಪರಂತು, ಅಂಥ ಯಾವುದೇ ಫೀಜು ವರ್ಷಕ್ಕೆ ಐದು ನೂರು ರೂಪಾಯಿಗಳನ್ನು ಮೀರತಕ್ಕದ್ದಲ್ಲ.

(5) ಪೌರಸಭೆಯ ಪರಿಮಿತಿಯ ಹೊರಗಿರುವ ಯಾವುದೇ ಸ್ಥಳವನ್ನು ಉಪಯೋಗಿಸಿ ಕೊಳ್ಳುವುದಕ್ಕಾಗಿ ಈ ಪ್ರಕರಣದ ಮೇರೆಗೆ ಲೈಸೆನ್ಸನ್ನು ಕೊಟ್ಟಿರುವಲ್ಲಿ ಮುನ್ಸಿಪಲ್ ಕೌನ್ಸಿಲು, ಅಂಥ ಸ್ಥಳವು ಇರುವಂಥ ಪರಿಮಿತಿಗಳೊಳಗಿನ ಸ್ಥಳೀಯ ಪ್ರಾಧಿಕಾರಕ್ಕೆ, ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ಧರಿಸಬಹುದಾದಂತೆ ಅಂಥ ಲೈಸೆನ್ಸಿನ ಮಂಜೂರಾತಿ ಅಥವಾ ನವೀಕರಣಕ್ಕಾಗಿ ಮುನ್ಸಿಪಲ್ ಕೌನ್ಸಿಲು ಸ್ವೀಕರಿಸಿದ ಫೀಜಿನ ಅಂಥ ಪ್ರಮಾಣವನ್ನು ಸಂದಾಯ ಮಾಡತಕ್ಕದ್ದು.

(6) (1) ಅಥವಾ (2) ಅಥವಾ (3)ನೇ ಉಪಪ್ರಕರಣದ ಅಥವಾ 324ನೇ ಪ್ರಕರಣದ (1)ನೇ ಉಪಪ್ರಕರಣದ (ಖ) ಖಂಡದ (iv)ನೇ ಉಪಖಂಡದ ಮೇರೆಗೆ ರಚಿಸಲಾದ ಯಾವುದೇ ಉಪವಿಧಿಯ ಉಲ್ಲಂಘನೆಯಲ್ಲಿ ಯಾವುವೇ ಆವರಣಗಳನ್ನು ಉಪಯೋಗಿಸುವ ಯಾರೇ ಆಗಲಿ ಎರಡುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಅಪರಾಧ ನಿರ್ಣಯದ ದಿನಾಂಕದ ತರುವಾಯ ಮುಂದುವರಿಯುವ ಅಂಥ ಉಲ್ಲಂಘನೆಗಾಗಿ ಪ್ರತಿದಿನಕ್ಕೆ ನಲವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಇನ್ನೂ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(7) (1)ನೇ ಉಪಪ್ರಕರಣದ (ಕ) ಅಥವಾ (ಖ) ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸಿದ ಯಾವುದೇ ಆವರಣಕ್ಕೆ ಸಂಬಂಧಿಸಿದಂತೆ, ಈ ಪ್ರಕರಣದ ಮೇರೆಗೆ ಪಡೆದುಕೊಂಡ ಅಪರಾಧ ನಿರ್ಣಯದ ತರುವಾಯ ಮ್ಯಾಜಿಸ್ಟ್ರೇಟನು, ಪರಿಷತ್ತು ಅರ್ಜಿಯ ಮೇಲೆ ಆದರೆ ಅನ್ಯಥಾ ಅಲ್ಲ. ಅಂಥ ಆವರಣವನ್ನು ಮುಚ್ಚಬೇಕೆಂದು ಆದೇಶಿಸತಕ್ಕದ್ದು ಮತ್ತು ಆ ತರುವಾಯ (1)ನೇ ಉಪಪ್ರಕರಣದ (ಕ) ಅಥವಾ (ಖ) ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಆವರಣಗಳನ್ನು ಉಪಯೋಗಿಸಿಕೊಳ್ಳುವುದನ್ನು ತಡೆಗಟ್ಟಲು ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು ಅಥವಾ ಇತರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**257. 256ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಉದ್ದೇಶಗಳಿಗಾಗಿ ವಿಶಿಷ್ಟ ಪ್ರದೇಶಗಳಲ್ಲಿನ ಆವರಣದ ಉಪಯೋಗವನ್ನು ತಡೆಗಟ್ಟಲು ಮುನಿಸಿಪಲ್ ಕಮಿಷನರನ ಅಥವಾ ಚೀಫ್ ಆಫೀಸರನ ಅಧಿಕಾರ.–** (1) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಪ್ರದೇಶದಲ್ಲಿ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ 256ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುವೇ ಉದ್ದೇಶಕ್ಕಾಗಿ ಯಾವುದೇ ಆವರಣವನ್ನು ಯಾವ ವ್ಯಕ್ತಿಯು ಉಪಯೋಗಿಸತಕ್ಕದ್ದಲ್ಲವೆಂದು ಘೋಷಿಸುವ ತನ್ನ ಉದ್ದೇಶದ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡಬಹುದು.

(2) ನೋಟೀಸು ಪ್ರಕಟವಾದ ಒಂದು ತಿಂಗಳ ಅವಧಿಯ ತರುವಾಯ, ಅಂಥ ಯಾವುವೇ ಘೋಷಣೆಗಳ ಬಗ್ಗೆ ಯಾವುವೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(3) ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಸದರಿ ಅವಧಿಯೊಳಗೆ ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳನ್ನು ಅಂಥ ಪರ್ಯಾಲೋಚನೆಯ ಕಾಲದಲ್ಲಿ, ನೋಟೀಸಿನಿಂದ ಬಾಧಿತನಾದ ಯಾರೇ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು, ಅವಕಾಶವನ್ನು ಕೊಟ್ಟು, ಪರ್ಯಾಲೋಚಿಸತಕ್ಕದ್ದು. ಮತ್ತು ಆ ತರುವಾಯ ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಪಾಟುಗಳು ಯಾವುದಾದರೂ ಇದ್ದರೆ ಅವುಗಳೊಂದಿಗೆ, ಆದರೆ ಅದರ ಅನ್ವಯವನ್ನು ವಿಸ್ತರಿಸದಿರುವ ಹಾಗೆ (1)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ನೋಟೀಸಿಗನುಸಾರವಾಗಿ ಘೋಷಣೆಯನ್ನು ಮಾಡಬಹುದು.

(4) ಅಂಥ ಪ್ರತಿಯೊಂದು ಘೋಷಣೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದು, ಅದರ ಪ್ರಕಟಣೆಯ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು.

(5) ಯಾರೇ ವ್ಯಕ್ತಿಯು, (4)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ಯಾವುದೇ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ, 256ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಮತ್ತು ಆ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶಕ್ಕಾಗಿ ಯಾವುದೇ ಆವರಣವನ್ನು ಉಪಯೋಗಿಸತಕ್ಕದ್ದಲ್ಲ ಮತ್ತು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಅಂಥ ಯಾವುದೇ ಆವರಣದ ಉಪಯೋಗವನ್ನು ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಸಾಧನಗಳ ಮೂಲಕ ನಿಲ್ಲಿಸಲು ಅಧಿಕಾರ ಹೊಂದಿರತಕ್ಕದ್ದು.

(6) (4)ನೇ ಉಪ–ಪ್ರಕರಣದ ಮೇರೆಗೆ ಪ್ರಕಟಿಸಲಾದ ಯಾವುದೇ ಘೋಷಣೆಗೆ ತದ್ವಿರುದ್ಧವಾಗಿ 256ನೇ ಪ್ರಕರಣದ 1ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಉದ್ದೇಶಕ್ಕಾಗಿ ಯಾವುದೇ ಆವರಣವನ್ನು ಉಪಯೋಗಿಸುವ ಯಾರೇ ಆಗಲಿ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**258. ಔದ್ಯಮಿಕ ಉದ್ದೇಶಗಳಿಗೆ ಉಪಯೋಗಿಸುವುದಕ್ಕಾಗಿ ಪ್ರದೇಶಗಳನ್ನು ಪ್ರತ್ಯೇಕವಾಗಿರಿಸುವುದು.–** (1) ಮುನ್ಸಿಪಲ್ ಕೌನ್ಸಿಲ್ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶವನ್ನು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಔದ್ಯಮಿಕ ಉದ್ದೇಶಗಳಿಗಾಗಿ ಮಾತ್ರ ಉಪಯೋಗಿಸತಕ್ಕದ್ದೆಂದು ಘೋಷಿಸುವ ತನ್ನ ಉದ್ದೇಶದ ಬಗ್ಗೆ ಸಾರ್ವಜನಿಕ ನೋಟೀಸನ್ನು ಕೊಡಬಹುದು.

(2) ನೋಟೀಸಿನ ಪ್ರಕಟಣೆಯಿಂದ ಒಂದು ತಿಂಗಳ ಅವಧಿಯ ತರುವಾಯ ಯಾವುದೇ ಅಂಥ ಘೋಷಣೆಗಳಿಗೆ ಯಾವುವೇ ಆಕ್ಷೇಪಣೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(3) ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಸದರಿ ಅವಧಿಯೊಳಗೆ ಸ್ವೀಕರಿಸಿದ ಎಲ್ಲಾ ಆಕ್ಷೇಪಣೆಗಳನ್ನು ಅಂಥ ಪರ್ಯಾಲೋಚನೆಯ ಕಾಲದಲ್ಲಿ ನೋಟೀಸಿನಿಂದ ಬಾಧಿತವಾದ ಯಾರೇ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟು ಪರ್ಯಾಲೋಚಿಸತಕ್ಕದ್ದು ಮತ್ತು ಆ ತರುವಾಯ ಅವನು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಪಾಟುಗಳು ಯಾವುದಾದರೂ ಇದ್ದರೆ ಅವುಗಳೊಂದಿಗೆ ಆದರೆ ಅದರ ಅನ್ವಯವನ್ನು ವಿಸ್ತರಿಸದಿರುವ ಹಾಗೆ (1)ನೇ ಉಪ-ಪ್ರಕರಣದ ಮೇರೆಗೆ ಪ್ರಕಟಿಸಿದ ನೋಟೀಸಿಗನುಸಾರವಾಗಿ ಘೋಷಣೆಯನ್ನು ಮಾಡಬಹುದು.

(4) ಅಂಥ ಪ್ರತಿಯೊಂದು ಘೋಷಣೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಅದು ಅದರ ಪ್ರಕಟಣೆಯ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು.

(5) ಯಾರೇ ವ್ಯಕ್ತಿಯು (4)ನೇ ಉಪ-ಪ್ರಕರಣದ ಮೇರೆಗೆ ಪ್ರಕಟಿಸಿದ ಯಾವುದೇ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ ಅಂಥ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕಾಗಿ ಯಾವುದೇ ಸ್ಥಳವನ್ನು ಉಪಯೋಗಿಸತಕ್ಕದ್ದಲ್ಲ ಮತ್ತು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ಸಾಧನಗಳ ಮೂಲಕ ಅಂಥ ಉಪಯೋಗವನ್ನು ನಿಲ್ಲಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(6)ನೇ ಉಪ-ಪ್ರಕರಣದ ಮೇರೆಗೆ ಪ್ರಕಟಿಸಿದ ಯಾವುದೇ ಘೋಷಣೆಗೆ ತದ್ವಿರುದ್ಧವಾಗಿ ಯಾವುದೇ ಅಂಥ ಪ್ರದೇಶದಲ್ಲಿಯ ಯಾವುದೇ ಸ್ಥಳವನ್ನು ಉಪಯೋಗಿಸುವ ಯಾರೇ ಆಗಲಿ ಐದುನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**259. ಜನನಿಬಿಡವಾದ ಸ್ಥಳಗಳಲ್ಲಿನ ಕಾರ್ಖಾನೆಗಳು.–** (1) ಯಾವುದೇ ಪೌರಸಭೆಯಲ್ಲಿ ಯಾರೇ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್ ಬರಹದಲ್ಲಿನ ಪೂರ್ವಾನುಮತಿಯಿಲ್ಲದೆ 1948ರ ಕಾರ್ಖಾನೆಗಳ ಅಧಿನಿಯಮ (1948ರ ಕೇಂದ್ರ ಅಧಿನಿಯಮ ಸಂಖ್ಯೆ XIII)ದಲ್ಲಿ ಪರಿಭಾಷಿಸಿರುವಂತೆ, ಯಾವುದೇ ಕಾರ್ಖಾನೆಯನ್ನು ಯಾವುದೇ ಆವರಣದಲ್ಲಿ ಸ್ಥಾಪಿಸತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲು ಅಂಥ ಅನುಮತಿಯನ್ನು ಉದ್ದೇಶಿತ ಸ್ಥಳದಲ್ಲಿ ಅಂಥ ಕಾರ್ಖಾನೆಯ ಸ್ಥಾಪನೆಯು ಅದರ ನೆರೆಹೊರೆಯ ಜನ ಸಾಂದ್ರತೆಯ ಕಾರಣದಿಂದಾಗಿ ಅಥವಾ ನೆರೆಹೊರೆಯ ನಿವಾಸಿಗಳಿಗೆ ಅದು ಉಪದ್ರವಕಾರಿಯಾಗುವುದೆಂದು ಅಥವಾ ಈ ಬಗ್ಗೆ ರಚಿಸಿದ ಯಾವುದೇ ಉಪವಿಧಿಯ ನಿಬಂಧನೆಗಳನ್ನು ಯಾವುದೇ ಇತರ ರೀತಿಯಲ್ಲಿ ಉಲ್ಲಂಘಿಸುವುದೆಂದು ಅಭಿಪ್ರಾಯಪಟ್ಟರೆ ಕೊಡಲು ನಿರಾಕರಿಸಬಹುದು.

(3) ಮೇಲೆ ಹೇಳಿದಂತೆ ಯಾವುದೇ ಕಾರ್ಖಾನೆಯನ್ನು ಯಾವುದೇ ಆವರಣದಲ್ಲಿ ಅಂಥ ಅನುಮತಿಯಿಲ್ಲದೆ ಅಥವಾ ಅದನ್ನು ನಿರಾಕರಿಸಿದ ತರುವಾಯ ಅಥವಾ ಈ ಬಗ್ಗೆ ರಚಿಸಿದ ಯಾವುದೇ ಉಪವಿಧಿಯ ನಿಬಂಧನೆಗಳ ಉಲ್ಲಂಘನೆಯಲ್ಲಿ ಸ್ಥಾಪಿಸುವ ಯಾರೇ ಆಗಲಿ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮೊದಲ ಅಪರಾಧದ ನಿರ್ಣಯದ ದಿನಾಂಕದ ತರುವಾಯ ಅಂಥ ಸ್ಥಾಪನೆ ಅಥವಾ ಉಲ್ಲಂಘನೆಯು ಮುಂದುವರಿಯುತ್ತಿರುವ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**260. ಕೆಲಸಗಾರರನ್ನು ಕರೆಯಲು ಅಥವಾ ಕಳುಹಿಸಲು ಸೈರನ್ ಅಥವಾ ಶಿಳ್ಳೆಯ ಉಪಯೋಗ:–** (1) ಯಾವುದೇ ಪೌರಸಭೆಯಲ್ಲಿ ಯಾರೇ ವ್ಯಕ್ತಿಯು ಯಾವುದೇ ಕಾರ್ಖಾನೆ ಅಥವಾ ಯಾವುದೇ ಇತರ

ಸ್ಥಳದಲ್ಲಿ ಮುನ್ಸಿಪಲ್ ಕೌನ್ಸಿಲಿನಿಂದ ಪಡೆದ ಲೈಸೆನ್ಸಿನ ಷರತ್ತುಗಳ ಮೇರೆಗೆ ಮತ್ತು ಅವುಗಳಿಗೆ ಅನುಸಾರವಾಗಿ ಅಲ್ಲದೆ, ಕೆಲಸಗಾರರನ್ನು ಅಥವಾ ನಿಯೋಜಿತ ವ್ಯಕ್ತಿಗಳನ್ನು ಕರೆಯುವ ಅಥವಾ ಕಳುಹಿಸುವ ಉದ್ದೇಶಕ್ಕಾಗಿ ಅವು ಯಾಂತ್ರಿಕ ಸಾಧನ ಅಥವಾ ವಿದ್ಯುಚ್ಛಕ್ತಿ ಮೂಲಕ ನಡೆಸಿದ ಯಾವುದೇ ಶಿಳ್ಳೆ ಅಥವಾ ತುತ್ತೂರಿಯನ್ನು ಉಪಯೋಗಿಸತಕ್ಕದಲ್ಲ ಅಥವಾ ಪ್ರಯೋಗಿಸತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲು ಅಂಥ ಲೈಸೆನ್ಸನ್ನು ಅದು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮಂಜೂರ್ಮಾಡಬಹುದು.

(3) ಹಿಂದೆ ಹೇಳಿದಂತೆ ಯಾವುದೇ ಅಂಥ ಶಿಳ್ಳೆ ಅಥವಾ ತುತ್ತೂರಿಯನ್ನು ಅಂಥ ಲೈಸೆನ್ಸನ್ನು ಪಡೆಯದೆ ಅಥವಾ ಅದರ ಯಾವುದೇ ಷರತ್ತಿನ ಉಲ್ಲಂಘನೆಯಲ್ಲಿ ಅಥವಾ ಅದನ್ನು ಹಿಂತೆಗೆದುಕೊಂಡ ತರುವಾಯ ಉಪಯೋಗಿಸುವ ಅಥವಾ ಪ್ರಯೋಗಿಸುವ ಯಾರೇ ಆಗಲಿ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

## ಸಾಮಾನ್ಯ ದಂಡನೆ, ನೋಟೀಸುಗಳ ಜಾರಿ ಮತ್ತು ಸಂಕೀರ್ಣ ಉಪಬಂಧಗಳು

**261. ಅಗ್ನಿಶಾಮಕದಳದವರಿಗೆ ಪೊಲೀಸು ಮತ್ತು ಪೌರಸಭಾ ಅಧಿಕಾರಗಳು ನೆರವು ನೀಡುವುದು.–** (1) ಅಗ್ನಿಶಾಮಕ ದಳಕ್ಕೆ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ನೆರವು ನೀಡುವುದು ಎಲ್ಲಾ ಪೊಲೀಸ್ ಅಧಿಕಾರಿಗಳ ಮತ್ತು ಎಲ್ಲಾ ಪೌರಸಭಾ ಅಧಿಕಾರಿಗಳ ಮತ್ತು ನೌಕರರ ಕರ್ತವ್ಯವಾಗಿರತಕ್ಕದ್ದು. ಅಂಥ ಅಧಿಕಾರಿಗಳು ಮತ್ತು ನೌಕರರು ಯಾವ ಬೀದಿಯಲ್ಲಿ ಅಥವಾ ಅದರ ಹತ್ತಿರ ಬೆಂಕಿಯು ಉರಿಯುತ್ತಿದೆಯೋ ಆ ಯಾವುದೇ ಬೀದಿಯನ್ನು ಮುಚ್ಚಬಹುದು ಮತ್ತು ಅಗ್ನಿಶಾಮಕ ದಳದ ಕಾರ್ಯಾಚರಣೆಯಲ್ಲಿ ತಮ್ಮ ಇರುವಿಕೆಯಿಂದ ಅಡ್ಡಿಪಡಿಸುವಂಥ ಯಾರೇ ವ್ಯಕ್ತಿಗಳನ್ನು ಸ್ಥಳಾಂತರಿಸಬಹುದು.

(2) ಯಾರೇ ವ್ಯಕ್ತಿಯು, ಬೆಂಕಿಯ ಅಪಾಯವನ್ನುಂಟುಮಾಡುವಂಥ ರೀತಿಯಲ್ಲಿ ಯಾವುದೇ ಸಾರ್ವಜನಿಕ ಬೀದಿ ಅಥವಾ ಇತರ ಸಾರ್ವಜನಿಕ ಸ್ಥಳದಲ್ಲಿನ ಯಾವುದೇ ಕಟ್ಟಡದ ಮೇಲೆ ಅಥವಾ ಹತ್ತಿರ ತೆರೆದ ದೀಪವನ್ನು ಇಡತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದಾವುದೂ ಹಬ್ಬ ಅಥವಾ ಸಾರ್ವಜನಿಕ ಅಥವಾ ಖಾಸಗಿ ಮನೋರಂಜನೆಯ ಸಂದರ್ಭದಲ್ಲಿ ದೀಪಾಲಂಕಾರದ ಉದ್ದೇಶಕ್ಕಾಗಿ ದೀಪಗಳನ್ನು ಉಪಯೋಗಿಸುವುದನ್ನು ನಿಷೇಧಿಸುವುದೆಂದು ಭಾವಿಸತಕ್ಕದ್ದಲ್ಲ.

**262. ನೋಟೀಸುಗಳ ಜಾರಿ ಇತ್ಯಾದಿ.–** (1) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮ ಅಥವಾ ಉಪವಿಧಿಯ ಮೂಲಕ ಮುನ್ಸಿಪಲ್ ಕೌನ್ಸಿಲು ಅಥವಾ ಅದರ ಪರವಾಗಿ ಅಥವಾ ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಅಥವಾ ಯಾರೇ ಇತರ ಪೌರಸಭಾ ಅಧಿಕಾರಿಯು ಯಾರೇ ವ್ಯಕ್ತಿಗೆ ಜಾರಿಗೊಳಿಸಬೇಕೆಂದು ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದ ಪ್ರತಿಯೊಂದು ನೋಟೀಸು, ಬಿಲ್ಲು, ಸಮನ್‌ಗಳು, ಆದೇಶ, ಕಡ್ಡಾಯ ಕೋರಿಕೆ ಅಥವಾ ಇತರ ದಸ್ತಾವೇಜನ್ನು, ಈ ಅಧಿನಿಯಮ ಅಥವಾ ಅಂಥ ನಿಯಮ ಅಥವಾ ಉಪ ವಿಧಿಯಲ್ಲಿ ಅನ್ಯಥಾ ಉಪಬಂಧಿಸಿದ್ದಂತೆ ಹೊರತು,–

(ಕ) ಜಾರಿಗೊಳಿಸಬೇಕಾಗಿರುವ ವ್ಯಕ್ತಿಯು ಒಂದು ಕಂಪನಿಯಾಗಿರುವಲ್ಲಿ ದಸ್ತಾವೇಜನ್ನು ನೋಂದಾಯಿತ ಕಚೇರಿ ಅಥವಾ ಅದರ ಮುಖ್ಯ ಕಛೇರಿ ಅಥವಾ ವ್ಯವಹಾರದ ಸ್ಥಳದಲ್ಲಿ ಕಾರ್ಯದರ್ಶಿಗೆ ಸಂಬೋಧಿಸಿದ್ದರೆ; ಮತ್ತು:–

(i) ನೋಂದಾಯಿತ ಅಂಚೆಯ ಮೂಲಕವಾಗಿ ಕಳುಹಿಸಿದ್ದರೆ; ಅಥವಾ

(ii) ಆ ಕಂಪನಿಯ ನೋಂದಾಯಿತ ಕಚೇರಿ ಅಥವಾ ಮುಖ್ಯ ಕಚೇರಿ ಅಥವಾ ವ್ಯವಹಾರದ ಸ್ಥಳದಲ್ಲಿ ವಶಾವಣೆ ಮಾಡಿದ್ದರೆ;

(ಖ) ಜಾರಿಗೊಳಿಸಬೇಕಾದ ವ್ಯಕ್ತಿಯು ಪಾಲುಗಾರಿಕೆಯಾಗಿರುವಲ್ಲಿ ದಸ್ತಾವೇಜನ್ನು ಅದರ ವ್ಯವಹಾರವನ್ನು ನಡೆಸಲಾಗುತ್ತಿರುವಂಥ ಹೆಸರು ಅಥವಾ ಅಂಕಿತನಾಮದಿಂದ ಅದನ್ನು ಗುರುತಿಸಿ ವ್ಯವಹಾರದ ಮುಖ್ಯ ಸ್ಥಳದಲ್ಲಿ ಪಾಲುಗಾರಿಕೆಗೆ ಸಂಭೋದಿಸಿದ್ದರೆ; ಮತ್ತು

(i) ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೆ; ಅಥವಾ

(ii) ಸದರಿ ವ್ಯವಹಾರದ ಸ್ಥಳದಲ್ಲಿ ವಶಾವಣೆ ಮಾಡಿದ್ದರೆ;

(ಗ) ಜಾರಿಗೊಳಿಸಬೇಕಾಗಿರುವ ವ್ಯಕ್ತಿಯು ಸಾರ್ವಜನಿಕ ನಿಕಾಯ ಅಥವಾ ನಿಗಮ, ಸಂಘ ಅಥವಾ ಇತರ ನಿಕಾಯವಾಗಿರುವಲ್ಲಿ ದಸ್ತಾವೇಜನ್ನು ನಿಕಾಯ, ನಿಗಮ ಅಥವಾ ಸಂಘದ ಕಾರ್ಯದರ್ಶಿ, ಖಜಾಂಚಿ ಅಥವಾ ಇತರ ಮುಖ್ಯಾಧಿಕಾರಿಗೆ ಅದರ ಪ್ರಮುಖ ಕಚೇರಿಯಲ್ಲಿ ಸಂಭೋದಿಸಲಾಗಿದ್ದರೆ; ಮತ್ತು

(i) ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೆ; ಅಥವಾ

(ii) ಆ ಕಛೇರಿಯಲ್ಲಿ ವಶಾವಣೆ ಮಾಡಿದ್ದರೆ;

(ಘ) ಇತರ ಯಾವುದೇ ಸಂದರ್ಭದಲ್ಲಿ ಜಾರಿಗೊಳಿಸಬೇಕಾಗಿರುವ ವ್ಯಕ್ತಿಗೆ ದಸ್ತಾವೇಜನ್ನು ಸಂಭೋದಿಸಿದ್ದರೆ; ಮತ್ತು

(i) ಅವನಿಗೆ ಕೊಟ್ಟಿದ್ದರೆ ಅಥವಾ ಕೊಡಮಾಡಲಾಗಿದ್ದರೆ; ಅಥವಾ

(ii) ಅಂಥ ವ್ಯಕ್ತಿಯು ಸಿಗದಿದ್ದರೆ ಅವನ ಕೊನೆಯದಾಗಿ ಗೊತ್ತಿದ್ದ ನಿವಾಸ ಅಥವಾ ವ್ಯವಹಾರ ಸ್ಥಳವು ಪೌರಸಭೆಯೊಳಗಿದ್ದರೆ ಅದರ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅಂಟಿಸಿದರೆ ಅಥವಾ ಅವನ ಕುಟುಂಬದ ಯಾರೇ ವಯಸ್ಕ ಸದಸ್ಯನಿಗೆ ಕೊಟ್ಟಿದ್ದರೆ ಅಥವಾ ಕೊಡ ಮಾಡಿದ್ದರೆ ಅಥವಾ ಅದು ಸಂಬಂಧಪಡುವ ಭೂಮಿ, ಅಥವಾ ಕಟ್ಟಡವು ಯಾವುದಾದರೂ ಇದ್ದರೆ ಅದರ ಯಾವುದೇ ಎದ್ದು ಕಾಣಿಸುವ ಭಾಗದ ಮೇಲೆ ಅಂಟಿಸಲಾಗಿದ್ದರೆ; ಅಥವಾ

(iii) ಆ ವ್ಯಕ್ತಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸಿ ಅದನ್ನು ಕ್ರಮಬದ್ಧವಾಗಿ ಜಾರಿಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

(2) ಯಾವುದೇ ಭೂಮಿ ಅಥವಾ ಕಟ್ಟಡದ ಒಡೆಯ ಅಥವಾ ಅಧಿಭೋಗದಾರನಿಗೆ ಜಾರಿ ಮಾಡಬೇಕೆಂದು ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದಂಥ ಯಾವುದೇ ದಸ್ತಾವೇಜನ್ನು (ಆ ಭೂಮಿ ಅಥವಾ ಕಟ್ಟಡವನ್ನು ಹೆಸರಿಸಿ) ಸಂದರ್ಭಾನುಸಾರ ಆ ಭೂಮಿಯ ಅಥವಾ ಕಟ್ಟಡದ ಒಡೆಯ ಅಥವಾ ಅಧಿಭೋಗದಾರನೆಂದು ಹೆಚ್ಚಿನ ಹೆಸರು ಅಥವಾ ವಿವರಣೆಯಿಲ್ಲದೆ ಸಂಭೋದಿಸಬಹುದು.

(ಕ) ಹಾಗೆ ಸಂಭೋದಿಸಿದ ದಸ್ತಾವೇಜನ್ನು (1)ನೇ ಉಪ-ಪ್ರಕರಣದ (ಘ) ಖಂಡಕ್ಕೆ ಅನುಸಾರವಾಗಿ ಕಳುಹಿಸಿದ್ದರೆ ಅಥವಾ ವಶಾವಣೆ ಮಾಡಿದ್ದರೆ; ಅಥವಾ

(ಖ) ಹಾಗೆ ಸಂಭೋದಿಸಿದ ದಸ್ತಾವೇಜು ಅಥವಾ ಹಾಗೆ ಸಂಭೋದಿಸಿದ ಅದರ ಪ್ರತಿಯನ್ನು ಆ ಭೂಮಿ ಅಥವಾ ಕಟ್ಟಡದಲ್ಲಿನ ಯಾರೇ ವ್ಯಕ್ತಿಗೆ ವಶಾವಣೆ ಮಾಡಿದ್ದರೆ ಅಥವಾ ಯಾರಿಗೆ ಅದನ್ನು ವಶಾವಣೆ ಮಾಡಬಹುದೋ ಆ ವ್ಯಕ್ತಿಯು ಭೂಮಿ ಅಥವಾ ಕಟ್ಟಡದಲ್ಲಿ ಇಲ್ಲದಿರುವಲ್ಲಿ ಆ ಭೂಮಿ ಅಥವಾ ಕಟ್ಟಡದ ಯಾವುದೇ ಎದ್ದು ಕಾಣುವ ಭಾಗದಲ್ಲಿ ಅಂಟಿಸಿದರೆ,–

–ಅದನ್ನು ಕ್ರಮಬದ್ಧವಾಗಿ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(3) ಈ ಪ್ರಕರಣಕ್ಕೆ ಅನುಸಾರವಾಗಿ ದಸ್ತಾವೇಜನ್ನು ಪಾಲುಗಾರಿಕೆಗೆ ಜಾರಿ ಮಾಡಿದಲ್ಲಿ ದಸ್ತಾವೇಜನ್ನು ಪ್ರತಿಯೊಬ್ಬ ಪಾಲುದಾರನಿಗೆ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(4) ದಸ್ತಾವೇಜನ್ನು ಯಾರಿಗೆ ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಅಪ್ರಾಪ್ತ ವಯಸ್ಕನಿರುವಲ್ಲಿ ಅವನ ಪಾಲಕ ಅಥವಾ ಅವನ ಕುಟುಂಬದ ಯಾರೇ ವಯಸ್ಕ ಸದಸ್ಯನಿಗೆ ಮಾಡಿದ ಜಾರಿಯನ್ನು ಅಪ್ರಾಪ್ತ ವಯಸ್ಕನಿಗೆ ಮಾಡಿದ ಜಾರಿಯೆಂದು ಭಾವಿಸತಕ್ಕದ್ದು.

(5) ಈ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ನೌಕರನು ಕುಟುಂಬದ ಸದಸ್ಯನಲ್ಲ ಮತ್ತು ಈ ಪ್ರಕರಣದಲ್ಲಿರುವುದಾವುದೂ ನ್ಯಾಯಾಲಯದಿಂದ ಈ ಅಧಿನಿಯಮದ ಮೇರೆಗೆ ಹೊರಡಿಸಿದ ಯಾವುದೇ ಸಮನ್ಸಿಗೆ ಅನ್ವಯವಾಗತಕ್ಕದ್ದಲ್ಲ.

(6) ಈ ಅಧಿನಿಯಮದ ಮುನಿಸಿಪಲ್ ಕೌನ್ಸಿಲನ್ನು ಸಾರ್ವಜನಿಕ ನೋಟೀಸು ಆಗಿ ಅಥವಾ ಸಾಮಾನ್ಯವಾಗಿಯೇ ಆಗಲಿ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಿದ ವ್ಯಕ್ತಿಗಳಿಗೆ ನೋಟೀಸು ಕೊಡುವುದನ್ನು ಸ್ಪಷ್ಟವಾಗಿ ಅಗತ್ಯಪಡಿಸಿದಂತ ಉಪಬಂಧಗಳ ಮೂಲಕವಾಗಿಯೇ ಆಗಲಿ ಕೊಡಲು ಅಥವಾ ಜಾರಿ ಮಾಡಲು ಅಗತ್ಯಪಡಿಸುವಂಥ ಅಥವಾ ಶಕ್ತಗೊಳಿಸುವಂಥ ಪ್ರತಿಯೊಂದು ನೋಟೀಸನ್ನು ಅದರ ಪ್ರತಿಯನ್ನು ಅಂಥ ಅವಧಿಯಲ್ಲಿ ಪೌರಸಭಾ ಕಚೇರಿಯ ಅಂಥ ಎದ್ದುಕಾಣುವ ಭಾಗದಲ್ಲಿ ಮತ್ತು ಅಂಥ ಇತರ ಸಾರ್ವಜನಿಕ ಕಟ್ಟಡಗಳು ಅಥವಾ ಸ್ಥಳಗಳಲ್ಲಿ ಹಾಕಿದ್ದರೆ ಅಥವಾ ಅಂಥ ಸ್ಥಳೀಯ ವೃತ್ತಪತ್ರಿಕೆಗಳಲ್ಲಿ ಅಥವಾ ಮುನ್ಸಿಪಲ್ ಕೌನ್ಸಿಲು ಉಪವಿಧಿಗಳಲ್ಲಿ ಈ ಬಗ್ಗೆ ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಪ್ರಕಟಿಸಿದ್ದರೆ ಸಾಕಷ್ಟಾಗಿ ಕೊಡಲಾಗಿದೆ ಅಥವಾ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(7) ನಮೂನೆಯಲ್ಲಿನ ದೋಷಕ್ಕಾಗಿ ಯಾವುದೇ ನೋಟೀಸು ಅಥವಾ ಬಿಲ್ಲು ಅಸಿಂಧುವಾಗತಕ್ಕದ್ದಲ್ಲ.

(8) ಈ ಅಧ್ಯಾಯದ ಮೇರೆಗಿನ ಯಾವುದೇ ನೋಟೀಸು ಯಾವುದೇ ಕೆಲಸವನ್ನು ಮಾಡಬೇಕೆಂದು ಅಗತ್ಯಪಡಿಸಿದಾಗ ಅದನ್ನು ಮಾಡಲು ಈ ಅಧಿನಿಯಮದ ಮೇರೆಗೆ ಯಾವುದೇ ಕಾಲವನ್ನು ಗೊತ್ತುಪಡಿಸಿಲ್ಲದಿದ್ದರೆ ಅದನ್ನು ಮಾಡುವುದಕ್ಕಾಗಿ ಆ ನೋಟೀಸು ಯುಕ್ತಕಾಲವನ್ನು ನಿಗದಿಪಡಿಸತಕ್ಕದ್ದು.

(9) ನೋಟೀಸಿನಲ್ಲಿನ ನಿಬಂಧನೆಗಳನ್ನು ಪಾಲಿಸದಿರುವ ಸಂದರ್ಭದಲ್ಲಿ ಅದರ ಮೂಲಕ ಮಾಡಬೇಕೆಂದು ಅಗತ್ಯಪಡಿಸಿದ ಕಾರ್ಯವನ್ನು ಪೂರ್ಣಗೊಳಿಸುವುದಕ್ಕೆ ಅವಶ್ಯವಾಗಬಹುದಾದಂಥ ಕಾರ್ಯ ಅಥವಾ ಅಂಥ ಕ್ರಮಗಳನ್ನು ಕೈಗೊಳ್ಳುವುದು ಮುನ್ಸಿಪಲ್ ಕೌನ್ಸಿಲಿಗೆ ಕಾನೂನುಬದ್ಧವಾಗಿರತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲು ಅದರ ಬಗ್ಗೆ ವಹಿಸಿದ ಎಲ್ಲ ವೆಚ್ಚಗಳನ್ನು ಯಾರಿಗೆ ನೋಟೀಸನ್ನು ಜಾರಿ ಮಾಡಲಾಗಿತ್ತೋ ಆ ವ್ಯಕ್ತಿ ಅಥವಾ ವ್ಯಕ್ತಿಗಳು ಸಂದಾಯ ಮಾಡತಕ್ಕದ್ದು ಮತ್ತು 269ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಸೂಲಿಯಾಗತಕ್ಕದ್ದು.

**263. ಸಾಮಾನ್ಯ ದಂಡನೆ:–** ಈ ಅಧಿನಿಯಮದ ಅಥವಾ ಅದರ ಮೇರೆಗಿನ ಯಾವುದೇ ನಿಯಮ ಅಥವಾ ಉಪವಿಧಿಯ ಮೂಲಕ ಸ್ಪಷ್ಟವಾಗಿ ದಂಡನೆಯನ್ನು ಉಪಬಂಧಿಸದೇ ಇರುವಂಥ ಯಾವುದೇ ಪ್ರಕರಣದಲ್ಲಿ ಅದರ ಯಾವುದೇ ಉಪಬಂಧ ಅಥವಾ ಆ ಮೇರೆಗಿನ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ ಹೊರಡಿಸಿದ ಯಾವುದೇ ನೋಟೀಸು, ಆದೇಶ ಅಥವಾ ಕಡ್ಡಾಯ ಕೋರಿಕೆಯನ್ನು ಪಾಲಿಸಲು ತಪ್ಪುವ ಅಥವಾ ಈ ಅಧಿನಿಯಮ ಅಥವಾ ಅದರ ಮೇರೆಗಿನ ನಿಯಮ ಅಥವಾ ಉಪವಿಧಿಯ ಯಾವುದೇ ಉಪಬಂಧವನ್ನು ಅನ್ಯಥಾ ಉಲ್ಲಂಘಿಸುವ ಯಾರೇ ಆಗಲಿ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಮುಂದುವರೆಯುತ್ತಿರುವ ತಪ್ಪಿತ ಅಥವಾ ಉಲ್ಲಂಘನೆಯ ಸಂದರ್ಭದಲ್ಲಿ ಮೊದಲ ಬಾರಿಗೆ ಅಪರಾಧ ನಿರ್ಣಯದ ತರುವಾಯ ಅವನು ತಪ್ಪಿತ ಅಥವಾ ಉಲ್ಲಂಘನೆಯನ್ನು ಬಿಡದೆ ಮಾಡುವಂಥ ಅವಧಿಯಲ್ಲಿ ಪ್ರತಿದಿವಸಕ್ಕೆ ಹತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**264. ಒಡೆಯ ಅಥವಾ ಅಧಿಭೋಗದಾರನು ತಪ್ಪುವಲ್ಲಿ ಮುನ್ಸಿಪಲ್ ಕೌನ್ಸಿಲು ಕೆಲಸವನ್ನು ನಿರ್ವಹಿಸಬಹುದು ಮತ್ತು ವೆಚ್ಚವನ್ನು ವಸೂಲು ಮಾಡಬಹುದು.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ಕಟ್ಟಡ ಅಥವಾ ಭೂಮಿಯ ಒಡೆಯ ಅಥವಾ ಅಧಿಭೋಗದಾರನು ಯಾವುದೇ ಕೆಲಸವನ್ನು ನಿರ್ವಹಿಸಬೇಕೆಂದು ಅಗತ್ಯಪಡಿಸಿದಾಗಲೆಲ್ಲಾ ಅಂಥ ಕೆಲಸವನ್ನು ನಿರ್ವಹಿಸಲು ತಪ್ಪಿದಲ್ಲಿ ಮುನ್ಸಿಪಲ್ ಕೌನ್ಸಿಲು ಅಂಥ ತಪ್ಪಿಗೆ ಯಾವುದೇ ದಂಡನೆಯನ್ನು ಉಪಬಂಧಿಸಿರಲಿ ಅಥವಾ ಇಲ್ಲದಿರಲಿ ಅಂಥ ಕೆಲಸವನ್ನು ನಿರ್ವಹಿಸುವಂತೆ ಮಾಡಬಹುದು ಮತ್ತು ಆ ಮೂಲಕ ವಹಿಸಿದ ವೆಚ್ಚಗಳನ್ನು ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು ಅಂಥ ಕೆಲಸವನ್ನು ಯಾರು ನಿರ್ವಹಿಸಬೇಕಾಗಿತ್ತೋ ಆ ವ್ಯಕ್ತಿಯು ಅದಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲು ಯೋಗ್ಯವೆಂದು ಯೋಚಿಸುವಂಥ ಒಂದೇ ಮೊತ್ತದಲ್ಲಾಗಲಿ ಅಥವಾ ಕಂತುಗಳ ಮೂಲಕವಾಗಿಯೇ ಆಗಲಿ VIIನೇ ಅಧ್ಯಾಯದ ಮೇರೆಗೆ ವಸೂಲಿಯಾಗಬಹುದಾದಂಥ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂತಹುದೇ ರೀತಿಯಲ್ಲಿ ವಸೂಲಿಯಾಗತಕ್ಕದ್ದು:

ಪರಂತು,–

(ಕ) ಯಾವುದೇ ಮುನ್ಸಿಪಲ್ ಕೌನ್ಸಿಲು ಯಾವುದೇ ಚರಂಡಿ ವ್ಯವಸ್ಥೆ ಯೋಜನೆ ಅಥವಾ ನೀರು ಸರಬರಾಜು ಗೃಹದ ಯೋಜನೆಯನ್ನು ಪ್ರಾರಂಭಿಸಿದಾಗಲೆಲ್ಲಾ 195ನೇ ಪ್ರಕರಣದ (1)ನೇ ಉಪ–ಪ್ರಕರಣ ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಮೇರೆಗೆ ಅದರ ಅಧಿಕಾರಗಳಿಗೆ ಬಾಧಕವಾಗದಂತೆ ಯಾವುದೇ ಕಟ್ಟಡ ಅಥವಾ ಭೂಮಿಯ ಒಡೆಯನೊಂದಿಗೆ ಚರಂಡಿ ವ್ಯವಸ್ಥೆ ಅಥವಾ ಅದರ ನೀರು ಸಂಪರ್ಕವನ್ನು ಯಾವ ರೀತಿಯಲ್ಲಿ ಮಾಡತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲು ಒದಗಿಸತಕ್ಕಂಥ ಹಣಕಾಸಿನ ಅಥವಾ ಇತರ ನೆರವು ಯಾವುದಾದರೂ ಇದ್ದರೆ ಅವುಗಳ ಬಗ್ಗೆ ವಿಶೇಷ ಒಪ್ಪಂದವನ್ನು ಮಾಡಿಕೊಳ್ಳುವುದು ಕಾನೂನುಬದ್ಧವಾಗಿರತಕ್ಕದ್ದು ಮತ್ತು ಒಡೆಯನು ಒಪ್ಪಿಕೊಂಡ ಯಾವುದೇ ಸಂದಾಯವನ್ನು ಅಂಥ ಒಪ್ಪಂದದ ನಿಬಂಧನೆಗಳಿಗನುಸಾರ ಮತ್ತು ತಪ್ಪಿದಲ್ಲಿ (2) ಮತ್ತು (3)ನೇ ಉಪ–ಪ್ರಕರಣಗಳಲ್ಲಿ ವಿವರಿಸಿದಂಥ ರೀತಿಯಲ್ಲಿ ವಸೂಲ್ಮಾಡತಕ್ಕದ್ದು.

(ಖ) 176ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಥವಾ 193, 195, 199 ಅಥವಾ 200ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿರುವಾಗ ಅಥವಾ 196ನೇ ಪ್ರಕರಣದ ಮೇರೆಗೆ ಅನುಮತಿಯನ್ನು ಕೊಟ್ಟಿರುವಾಗ ಅಥವಾ ಈ ಉಪಪ್ರಕರಣದ (ಕ) ಪರಂತುಕದ ಮೇರೆಗೆ ಒಪ್ಪಂದವನ್ನು ಮಾಡಿಕೊಂಡಿರುವಾಗ ಮುನ್ಸಿಪಲ್ ಕೌನ್ಸಿಲು ಈ ಅಧಿನಿಯಮದ ಮೇರೆಗಿನ ಯಾವುದೇ ಇತರ ಅಧಿಕಾರಿಗಳಿಗೆ ಬಾಧಕವಾಗದಂತೆ ಅದು ಸೂಕ್ತವೆಂದು ಯೋಚಿಸಿದರೆ ಮುನ್ಸಿಪಲ್ ಕೌನ್ಸಿಲು ಹಿಂದೆ ಹೇಳಿದಂತೆ ವಹಿಸಿದ

ಯಾವುವೇ ವೆಚ್ಚಗಳನ್ನು ಮೇಲ್ಪಾಟು ವೆಚ್ಚಗಳೆಂದು ಘೋಷಿಸಬಹುದು ಮತ್ತು ಆ ಮೇಲ್ಪಾಟು ವೆಚ್ಚಗಳು ಆ ಆವರಣ ಅಥವಾ ಭೂಮಿಯ ಮೇಲೆ ಋಣಭಾರವಾಗಿರತಕ್ಕದ್ದು ಮತ್ತು ಅವುಗಳನ್ನು ವರ್ಷಕ್ಕೆ ಶೇಕಡಾ ಆರು ದರದಲ್ಲಿ ಬಡ್ಡಿಯನ್ನೊಳಗೊಂಡು ಮುನ್ಸಿಪಲ್ ಕೌನ್ಸಿಲು ನಿರ್ಧರಿಸಬಹುದಾದಂಥ ಕಂತುಗಳಲ್ಲಿ ಸಂಗ್ರಹಿಸತಕ್ಕದ್ದು ಮತ್ತು (2) ಮತ್ತು (3)ನೇ ಉಪ–ಪ್ರಕರಣಗಳಲ್ಲಿ ವಿವರಿಸಿದಂಥ ರೀತಿಯಲ್ಲಿ ಅವು ವಸೂಲಿಯಾಗತಕ್ಕದ್ದು.

(2) ತಪ್ಪಿದವನು ಕಟ್ಟಡದ ಅಥವಾ ಭೂಮಿಯ ಒಡೆಯನಾಗಿದ್ದರೆ, ಮುನ್ಸಿಪಲ್ ಕೌನ್ಸಿಲು ಅಂಥ ಒಡೆಯನ ವಿರುದ್ಧ ದಾವೆ ಅಥವಾ ವ್ಯವಹರಣೆಯನ್ನು ಹೂಡಿರಲಿ ಅಥವಾ ಕೈಗೊಳ್ಳದಿರಲಿ (3)ನೇ ಉಪ–ಪ್ರಕರಣದ ಉಪಬಂಧಗಳಿಗೊಳಪಟ್ಟು ಹೆಚ್ಚಿನ ಪರಿಹಾರೋಪಾಯದ ರೂಪದಲ್ಲಿ ತತ್ಕಾಲದಲ್ಲಿ ಒಡೆಯನಾಗಿರುವವನು ಸಂದಾಯ ಮಾಡಬೇಕಾದ ವೆಚ್ಚಗಳ ಎಲ್ಲ ಅಥವಾ ಯಾವುದೇ ಭಾಗದ ಸಂದಾಯವನ್ನು ಅಂಥ ಒಡೆಯನ ಅಧೀನದಲ್ಲಿ ಕಟ್ಟಡ ಅಥವಾ ಭೂಮಿಯನ್ನು ಆಗ ಅಥವಾ ಆ ತರುವಾಯ ಯಾವುದೇ ಕಾಲದಲ್ಲಿ ಸ್ವಾಧೀನ ಪಡೆದುಕೊಳ್ಳುವ ವ್ಯಕ್ತಿಯಿಂದ ಅಗತ್ಯಪಡಿಸಬಹುದು ಮತ್ತು ತಗಾದೆಯ ಮೇಲೆ ಅಂಥ ಅಧಿಭೋಗದಾರನು ಅದರ ಸಂದಾಯವನ್ನು ಮಾಡಲು ತಪ್ಪಿದಲ್ಲಿ ಅಂಥ ಅಧಿಭೋಗದಾರನಿಂದ ಅದನ್ನು ಸಂಗ್ರಹಿಸಬಹುದು ಮತ್ತು ಹಾಗೆ ಸಂಗ್ರಹಿಸಬಹುದಾದ ಪ್ರತಿಯೊಂದು ಮೊಬಲಗನ್ನು VIIನೇ ಅಧ್ಯಾಯದ ಮೇರೆಗೆ ವಸೂಲಿಯವಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂತಹವುದೇ ರೀತಿಯಲ್ಲಿ ವಸೂಲಿಯಾಗತಕ್ಕದ್ದು ಅಂಥ ಪ್ರತಿಯೊಬ್ಬ ಸ್ವಾಧೀನದಾರನು ಅವನಿಂದ ಅವನ ಯಜಮಾನನಿಗೆ ಸಂದಾಯವಾಗಬೇಕಾದ ಬಾಡಿಗೆಯಿಂದ ಅಂಥ ಯಾವುವೇ ವೆಚ್ಚಕ್ಕೆ ಸಂಬಂಧಿಸಿದಂತೆ ಅಂಥ ಸ್ವಾಧೀನದಾರನು ಹಾಗೆ ಸಂದಾಯ ಮಾಡಿದ ಅಥವಾ ಅವನಿಂದ ವಸೂಲ್ಮಾಡಿರುವಷ್ಟನ್ನು ಮುರಿದುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(3) ಯಾವುದೇ ಕಟ್ಟಡ ಅಥವಾ ಭೂಮಿಯ ಯಾರೇ ಸ್ವಾಧೀನದಾರನು ಅದರ ಒಡೆಯನ ಮೇಲೆ ಈ ಅಧಿನಿಯಮದ ಮೂಲಕ ಹೊರಡಿಸಿದ ಯಾವುವೇ ವೆಚ್ಚಗಳಿಗೆ ಸಂಬಂಧಿಸಿದಂತೆ ಅವನಿಗೆ ಮಾಡಿದ ತಗಾದೆಯ ಕಾಲದಲ್ಲಿ ಯಾವ ಕಟ್ಟಡ ಅಥವಾ ಭೂಮಿಗೆ ಸಂಬಂಧಿಸಿದಂತೆ ಅಂಥ ವೆಚ್ಚಗಳು ಸಂದಾಯವಾಗಬೇಕಾಗಿದೆಯೋ, ಆ ಯಾವುದೇ ಕಟ್ಟಡ ಅಥವಾ ಭೂಮಿಯ ಸ್ವಾಧೀನದಾರನಿಂದ ಬಾಕಿಯಿರುವಂಥ ಅಥವಾ ಅಂಥ ತಗಾದೆ ಮತ್ತು ತನ್ನ ಯಜಮಾನನಿಗೆ ಸಂದಾಯ ಮಾಡದಿರಲು ಕೊಟ್ಟ ನೋಟೀಸಿನ ತರುವಾಯ, ಯಾವುದೇ ಕಾಲದಲ್ಲಿ ಒದಗಿ ಬಂದಂಥ ಮತ್ತು ಅಂಥ ಸ್ವಾಧೀನದಾರನು ಸಂದಾಯ ಮಾಡಬೇಕಾದಂಥ ಬಾಡಿಗೆಯ ಮೊಬಲಗಿಗಿಂತ ಹೆಚ್ಚಿನ ಹಣವನ್ನು ತನ್ನ ಬಾಡಿಗೆಯ ಮೊಬಲಗನ್ನು ಮತ್ತು ಅಂಥ ಬಾಡಿಗೆಯನ್ನು ಯಾರಿಗೆ ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಸತ್ಯವಾಗಿ ಬಹಿರಂಗಪಡಿಸಲು ಮುನ್ಸಿಪಲ್ ಕೌನ್ಸಿಲು ಆ ಉದ್ದೇಶಕ್ಕಾಗಿ ಅವನಿಗೆ ಮಾಡಿಕೊಂಡ ಅರ್ಜಿಯ ಮೇಲೆ ಅವನು ನಿರ್ಲಕ್ಷಿಸಿದ ಅಥವಾ ನಿರಾಕರಿಸಿದ ಹೊರತು ಸಂದಾಯ ಮಾಡಲು ಗುರಿಯಾಗತಕ್ಕದ್ದಲ್ಲ. ಆದರೆ ಯಾವುದೇ ಸ್ವಾಧೀನದಾರನಿಂದ ತಗಾದೆ ಮಾಡಿದ ಮೊತ್ತವು ಅಂಥ ತಗಾದೆಯ ಕಾಲದಲ್ಲಿ ಅವನಿಂದ ಬಾಕಿ ಆಗಿದ್ದಂಥ ಅಥವಾ ಅಂದಿನಿಂದ ಒದಗಿಬಂದಂಥ ಬಾಡಿಗೆಗಿಂತ ಹೆಚ್ಚಾಗಿದೆ ಎಂಬ ರುಜುವಾತಿನ ಭಾರವು ಅಂಥ ಸ್ವಾಧೀನದಾರನ ಮೇಲೆ ಇರತಕ್ಕದ್ದು:

ಪರಂತು, ಇದರಲ್ಲಿ ಅಡಕವಾಗಿರುವುದು ಯಾವುದೂ ಹಿಂದೆ ಹೇಳಿದಂಥ ಯಾವುದೇ ಕೆಲಸಗಳ ವೆಚ್ಚದ ಸಂದಾಯಕ್ಕೆ ಸಂಬಂಧಿಸಿದಂತೆ, ಯಾರೇ ಅಂಥ ಸ್ವಾಧೀನದಾರ ಮತ್ತು ಒಡೆಯನ ನಡುವೆ ಮಾಡಿಕೊಂಡ ಯಾವುದೇ ವಿಶೇಷ ಕರಾರನ್ನು ಬಾಧಿಸುವುದಾಗಿ ತಿಳಿಯತಕ್ಕದ್ದಲ್ಲ.

**265. ಒಡೆಯನು ತಪ್ಪಿದಲ್ಲಿ ಸ್ವಾಧೀನದಾರನು ಕೆಲಸವನ್ನು ನಿರ್ವಹಿಸಬಹುದು ಮತ್ತು ಅವನ ಬಾಡಿಗೆಯಿಂದ ವೆಚ್ಚಗಳನ್ನು ಮುರಿದುಕೊಳ್ಳಬಹುದು.–** ಮುನ್ಸಿಪಲ್ ಕೌನ್ಸಿಲು ಅವನು ನಿರ್ವಹಿಸಬೇಕೆಂದು ಅಗತ್ಯಪಡಿಸಿದ ಯಾವುದೇ ಕೆಲಸದ ನಿರ್ವಹಣೆಯಲ್ಲಿ ಅದೇ ಕಟ್ಟಡ ಅಥವಾ ಭೂಮಿಯ ಒಡೆಯನು ತಪ್ಪಿದಾಗಲೆಲ್ಲಾ ಅಂಥ

ಕಟ್ಟಡ ಅಥವಾ ಭೂಮಿಯ ಸ್ವಾಧೀನದಾರನು ಮುನ್ಸಿಪಲ್ ಕೌನ್ಸಿಲ್‌ನ ಅನುಮೋದನೆಯೊಂದಿಗೆ ಅಂಥ ಕೆಲಸವನ್ನು ನಿರ್ವಹಿಸುವಂತೆ ಮಾಡಬಹುದು ಮತ್ತು ಅದರ ವೆಚ್ಚವನ್ನು ಒಡೆಯನು ಅವನಿಗೆ ಸಂದಾಯ ಮಾಡತಕ್ಕದ್ದು. ಮತ್ತು ಆ ಮೊಬಲಗನ್ನು ಅಂಥ ಒಡೆಯನಿಗೆ ಅವನಿಂದ ಕಾಲಕಾಲಕ್ಕೆ ಬಾಕಿಯಾಗುವ ಬಾಡಿಗೆಯಿಂದ ಮುರಿದುಕೊಳ್ಳತಕ್ಕದ್ದು.

**266. ಅಧಿನಿಯಮದ ಜಾರಿಯನ್ನು ಯಾರೇ ಸ್ವಾಧೀನದಾರನು ವಿರೋಧಿಸಿದರೆ ವ್ಯವಹರಣೆಗಳು.–** ಯಾವುದೇ ಕಟ್ಟಡ ಅಥವಾ ಭೂಮಿಯ ಸ್ವಾಧೀನದಾರನು ಅದರ ಒಡೆಯನು ಅಂಥ ಕಟ್ಟಡ ಅಥವಾ ಭೂಮಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಂಥ ಸ್ವಾಧೀನದಾರನಿಗೆ ಒಡೆಯನು ಅವುಗಳನ್ನು ಜಾರಿಗೆ ತರುವ ತನ್ನ ಉದ್ದೇಶದ ನೋಟೀಸನ್ನು ಕೊಟ್ಟ ತರುವಾಯ ಜಾರಿಗೊಳಿಸುವುದನ್ನು ತಡೆಗಟ್ಟಿದರೆ, ಯಾರೇ ಮ್ಯಾಜಿಸ್ಟ್ರೇಟನು ಅದರ ರುಜುವಾತಿನ ಮೇಲೆ ಮತ್ತು ಒಡೆಯನ ಅರ್ಜಿಯ ಮೇಲೆ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂತೆ ಅಂಥ ಕಟ್ಟಡ ಅಥವಾ ಭೂಮಿಗೆ ಸಂಬಂಧಿಸಿದಂತೆ ಅಂಥ ಎಲ್ಲ ಕೆಲಸಗಳನ್ನು ನಿರ್ವಹಿಸಲು ಒಡೆಯನಿಗೆ ಅವಕಾಶ ಮಾಡಿಕೊಡಲು ಅಂಥ ಸ್ವಾಧೀನದಾರರನ್ನು ಅಗತ್ಯಪಡಿಸುವ ಬರಹದಲ್ಲಿನ ಆದೇಶವನ್ನು ಮಾಡಬಹುದು ಮತ್ತು ಅವನು ಸೂಕ್ತವೆಂದು ಯೋಚಿಸಿದರೆ ಅಂಥ ಅರ್ಜಿ ಅಥವಾ ಆದೇಶಕ್ಕೆ ಸಂಬಂಧಿಸಿದ ಖರ್ಚುಗಳನ್ನು ಒಡೆಯನಿಗೆ ಸಂದಾಯ ಮಾಡಲು ಸ್ವಾಧೀನದಾರನಿಗೆ ಆದೇಶ ಮಾಡಬಹುದು ಮತ್ತು ಆದೇಶದ ದಿನಾಂಕದಿಂದ ಎಂಟು ದಿವಸಗಳ ಮುಕ್ತಾಯದ ತರುವಾಯ ಅಂಥ ಆ ಸ್ವಾಧೀನದಾರನು ಅಂಥ ಕೆಲಸವನ್ನು ನಿರ್ವಹಿಸಲು ಅಂಥ ಒಡೆಯನಿಗೆ ಅವಕಾಶ ಕೊಡಲು ನಿರಾಕರಿಸುವುದನ್ನು ಮುಂದುವರಿಸಿದರೆ ಅಂಥ ಸ್ವಾಧೀನದಾರನು ಅವನು ಹಾಗೆ ನಿರಾಕರಿಸಲು ಮುಂದುವರಿಸುವಂಥ ಕಾಲದಲ್ಲಿ ಪ್ರತಿಯೊಂದು ದಿವಸಕ್ಕೆ ಐವತ್ತು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ಒಡೆಯನು ಅಂಥ ನಿರಾಕರಣೆಯು ಮುಂದುವರಿಯುತ್ತಿರುವ ಅವಧಿಯಲ್ಲಿ ಅಂಥ ಕೆಲಸಗಳನ್ನು ನಿರ್ವಹಿಸುವಲ್ಲಿ ಅವನ ತಪ್ಪಿತದಿಂದಾಗಿ ಅವನು ಅನ್ಯಥಾ ಗುರಿಯಾಗಿರಬಹುದಾಗಿದ್ದಂಥ ಯಾವುದೇ ದಂಡನೆಗಳಿಂದ ವಿಮೋಚಿತನಾಗತಕ್ಕದ್ದು.

**267. ಈ ಅಧಿನಿಯಮದ ಉದ್ದೇಶಗಳಿಗಾಗಿ ಪ್ರವೇಶ.–** ಮುನ್ಸಿಪಲ್ ಕಮಿಷನರ್, ಚೀಫ್ ಆಫೀಸರ್ ಅಥವಾ ಅಂಥ ಉದ್ದೇಶಕ್ಕಾಗಿ ಮುನ್ಸಿಪಲ್ ಕೌನ್ಸಿಲಿನಿಂದ ಅಧಿಕೃತನಾದ ಯಾರೇ ಅಧಿಕಾರಿಗೆ ಈ ಅಧಿನಿಯಮದ ಯಾವುದೇ ಉದ್ದೇಶಕ್ಕಾಗಿ ಯಾವುದೇ ಕಟ್ಟಡ ಅಥವಾ ಭೂಮಿಯೊಳಕ್ಕೆ ಅಥವಾ ಅದರ ಮೇಲೆ ಸೂರ್ಯೋದಯ ಮತ್ತು ಸೂರ್ಯಾಸ್ತಗಳ ನಡುವೆ ಅವನು ಅವಶ್ಯವೆಂದು ಭಾವಿಸುವಂಥ ನೆರವಿನೊಡನೆ ಪ್ರವೇಶಿಸುವುದು ಕಾನೂನು ಸಮ್ಮತವಾಗಿರತಕ್ಕದ್ದು:

ಪರಂತು, ಇಲ್ಲಿ ಅನ್ಯಥಾ ಉಪಬಂಧಿಸಿದ್ದ ಹೊರತು ಆ ಕಾಲದಲ್ಲಿ ಸ್ವಾಧೀನದಲ್ಲಿರಬಹುದಾಗಿದ್ದಂಥ ಯಾವುದೇ ಕಟ್ಟಡ ಅಥವಾ ಭೂಮಿಯನ್ನು ಅದರ ಸ್ವಾಧೀನದಾರನ ಅನುಮತಿಯಿಂದ ಅಲ್ಲದೆ ಸದರಿ ಸ್ವಾಧೀನದಾರನಿಗೆ ಅದರ ಬಗ್ಗೆ ಬರಹದಲ್ಲಿನ ನೋಟೀಸನ್ನು ಕೊಟ್ಟಿರಬಹುದಾದ ಇಪ್ಪತ್ನಾಲ್ಕು ಗಂಟೆಯೊಳಗೆ ಪ್ರವೇಶಿಸತಕ್ಕದ್ದಲ್ಲ:

ಮತ್ತು ಪರಂತು, ಮನುಷ್ಯ ವಾಸಕ್ಕೆಂದು ಉಪಯೋಗಿಸಿದ ಕಟ್ಟಡಗಳ ಸಂದರ್ಭದಲ್ಲಿ ಸ್ವಾಧೀನದಾರರ ಸಾಮಾಜಿಕ ಮತ್ತು ಧಾರ್ಮಿಕ ರೂಢಿಗಳಿಗೆ ಯುಕ್ತ ಗಮನವನ್ನು ಕೊಡತಕ್ಕದ್ದು ಮತ್ತು ಮಹಿಳೆಯರ ವಾಸ್ತವಿಕ ಸ್ವಾಧೀನದಲ್ಲಿನ ಯಾವುದೇ ಕೊಠಡಿಯನ್ನು ಅವನು ಅಲ್ಲಿಂದ ಹಿಂತೆಗೆಯದು. ಅವಳು ಸ್ವತಂತ್ರಳೆಂದು ಅವನಿಗೆ ತಿಳಿಸುವ ಮತ್ತು ಹಿಂತೆಗೆಯಲು ಅವಳಿಗೆ ಎಲ್ಲ ಯುಕ್ತ ಸೌಲಭ್ಯವನ್ನು ಕೊಡುವವರೆಗೆ ಪ್ರವೇಶಿಸತಕ್ಕದ್ದಲ್ಲ.

**268. ಕೆಲವು ಪ್ರಕರಣಗಳಲ್ಲಿ ಪರಿಹಾರದ ನಿರ್ಧರಣೆ.–** (1) 257ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ಹೊರತು ಈ ಅಧಿನಿಯಮದ ಮೂಲಕ ಸಂದಾಯ ಮಾಡಬೇಕೆಂದು ನಿರ್ದೇಶಿಸಲಾದಂಥ ಯಾವುದೇ ನಷ್ಟ ಪರಿಹಾರ ಅಥವಾ ಹಾನಿ ಪರಿಹಾರದ ಮೊಬಲಗಿಗೆ ಸಂಬಂಧಿಸಿದಂತೆ ಒಪ್ಪಂದಕ್ಕೆ ಬಂದಿಲ್ಲದಿದ್ದರೆ ಮತ್ತು ಅವಶ್ಯವಿದ್ದರೆ ಅಂಥ ಮೊಬಲಗಿನ ಹಂಚುವಿಕೆ ಸಂದಾಯ ಮಾಡಬೇಕಾದ ಮೊಬಲಗು ಅಥವಾ ಅದರ ಹಂಚುವಿಕೆಯನ್ನು ಪಟ್ಟಣ ಪೌರಸಭೆಗಳ ಸಂದರ್ಭದಲ್ಲಿ ಆ ಪೌರಸಭೆಯು ಇರುವಂಥ ತಾಲ್ಲೂಕಿನ ಪ್ರಭಾರದಲ್ಲಿನ ಅಸಿಸ್ಟೆಂಟ್ ಕಮಿಷನರ್ ಮತ್ತು ಅಧಿಕಾರಿಯಿಲ್ಲದಿದ್ದರೆ ಡೆಪ್ಯುಟಿ ಕಮಿಷನರನು ಮತ್ತು ನಗರ ಸಭೆಗಳ ಸಂದರ್ಭದಲ್ಲಿ ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು:

ಪರಂತು, ಈ ಉಪ-ಪ್ರಕರಣದಲ್ಲಿರುವುದಾವುದೂ ಇದರಿಂದ ಬಾಧಿತನಾದ ವ್ಯಕ್ತಿಯು ಸಕ್ಷಮ ಅಧಿಕಾರವ್ಯಾಪ್ತಿ ಹೊಂದಿರುವ ಒಂದು ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರವನ್ನು ಕೋರಲು ಅಡ್ಡಿ ಮಾಡತಕ್ಕದ್ದಲ್ಲ.

(2) ಯಾವುದೇ ಭೂಮಿ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ,– ನಷ್ಟ ಪರಿಹಾರವನ್ನು ಕ್ಲೇಮು ಮಾಡಿರುವ ಯಾವುದೇ ಸಂದರ್ಭದಲ್ಲಿ ಸಂದಾಯವಾಗಬೇಕಾದ ನಷ್ಟ ಪರಿಹಾರವನ್ನು ಜಿಲ್ಲಾ ನ್ಯಾಯಾಲಯವು ನಿರ್ಧರಿಸತಕ್ಕದ್ದು ಮತ್ತು ನ್ಯಾಯಾಲಯದ ನಿರ್ಧರಣೆಗಾಗಿ ಒಪ್ಪಿಸಿದ ವಿಷಯಗಳಲ್ಲಿನ ವ್ಯವಹರಣೆಗಳಿಗಾಗಿ 1894ರ ಭೂ ಆರ್ಜನಾ ಅಧಿನಿಯಮವು ಸಾಧ್ಯವಾದಷ್ಟು ಉಪಬಂಧಿಸಿದ ಪ್ರಕ್ರಿಯೆಯನ್ನು ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಅನುಸರಿಸತಕ್ಕದ್ದು:

ಪರಂತು,–

(ಕ) ಒಪ್ಪಿಸುವುದಕ್ಕಾಗಿ ಡೆಪ್ಯುಟಿ ಕಮಿಷನರನಿಗೆ ಯಾವುದೇ ಅರ್ಜಿಯನ್ನು ಮಾಡಿಕೊಳ್ಳುವುದು ಅವಶ್ಯವಿರತಕ್ಕದ್ದಲ್ಲ; ಮತ್ತು

(ಖ) ನ್ಯಾಯಾಲಯವು ಅದು ಸೂಕ್ತವೆಂದು ಯೋಚಿಸುವ ಯಾವುದೇ ರೀತಿಯಲ್ಲಿ ಎಲ್ಲ ವ್ಯವಹರಣೆಗಳ ಖರ್ಚುಗಳನ್ನು ಕೊಡಲು ಮತ್ತು ಹಂಚಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ಯಾವುದೇ ಭೂಮಿ ಅಥವಾ ಕಟ್ಟಡಕ್ಕೆ ಸಂಬಂಧಿಸಿದಂತೆ ನಷ್ಟ ಪರಿಹಾರವನ್ನು ಕ್ಲೇಮು ಮಾಡಿರುವ ಯಾವುದೇ ಪ್ರಕರಣದಲ್ಲಿ ಮುನ್ಸಿಪಲ್ ಕೌನ್ಸಿಲು ಜಿಲ್ಲಾ ನ್ಯಾಯಾಲಯವು ಮಾಡಿದ ಐತೀರ್ಪಿನ ತರುವಾಯ ಜಿಲ್ಲಾ ನ್ಯಾಯಾಲಯವು ನಿರ್ಧರಿಸಿದ ನಷ್ಟ ಪರಿಹಾರವನ್ನು ಅಂಥ ಸಂದಾಯ ಮಾಡಬೇಕಾದ ಪಕ್ಷಕಾರನಿಗೆ ಸಂದಾಯ ಮಾಡಿದ ತರುವಾಯ ಆ ಭೂಮಿ ಅಥವಾ ಕಟ್ಟಡವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. ಅಂಥ ಪಕ್ಷಕಾರನು ಅಂಥ ನಷ್ಟ ಪರಿಹಾರವನ್ನು ಅಂಗೀಕರಿಸಲು ನಿರಾಕರಿಸಿದರೆ ಅಥವಾ ನಷ್ಟ ಪರಿಹಾರದ ಸ್ವಾಮ್ಯದ ಬಗ್ಗೆ ಅಥವಾ ಅದರ ಹಂಚಿಕೆಯ ಬಗ್ಗೆ ಯಾವುದೇ ವಿವಾದವಿದ್ದರೆ ಮುನ್ಸಿಪಲ್ ಕೌನ್ಸಿಲು, ಜಿಲ್ಲಾ ನ್ಯಾಯಾಲಯದಲ್ಲಿ ನಷ್ಟ ಪರಿಹಾರದ ಮೊಬಲಗನ್ನು ಠೇವಣಿಯಿಡತಕ್ಕದ್ದು.

**269. ಖರ್ಚುಗಳನ್ನು ಅಥವಾ ವೆಚ್ಚಗಳನ್ನು ನಿರ್ಧರಿಸುವ ಮತ್ತು ವಸೂಲ್ಮಾಡುವ ಬಗೆ.–** ಈ ಅಧ್ಯಾಯದ ಮೇರೆಗೆ ಯಾರೇ ವ್ಯಕ್ತಿಯು ಸಂದಾಯವಾಗಬೇಕೆಂದು ನಿರ್ದೇಶಿಸಲಾಗಿದ್ದಂಥ ಯಾವುದೇ ಖರ್ಚು ಅಥವಾ ವೆಚ್ಚಗಳ ಬಗ್ಗೆ ವಿವಾದವು ಉದ್ಭವಿಸಿದರೆ ಆ ಮೊಬಲಗು ಮತ್ತು ಅವಶ್ಯವಿದ್ದರೆ ಅದರ ಹಂಚಿಕೆಯನ್ನು ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು ಮುನ್ಸಿಪಲ್ ಕೌನ್ಸಿಲು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ನಿರ್ಧರಿಸತಕ್ಕದ್ದು ಮತ್ತು ಅದನ್ನು VIIನೇ ಅಧ್ಯಾಯದ ಮೇರೆಗೆ ವಸೂಲಿಯಾಗಬಹುದಾದ ಯಾವುದೇ ತೆರಿಗೆಯ ಬಗ್ಗೆ ಕ್ಲೇಮು ಮಾಡಿದ ಮೊಬಲಗಿನಂತಹುದೇ ರೀತಿಯಲ್ಲಿ ವಸೂಲಿಯಾಗತಕ್ಕದ್ದು.

**270. ಪೌರಸಭಾ ಚುನಾವಣೆಗಳಿಗಾಗಿ ಆವರಣಗಳು, ವಾಹನಗಳು ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರುವುದು.–** (1) ಮುನ್ಸಿಪಲ್ ಕಮಿಷನರ್ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಚೀಫ್ ಆಫೀಸರನು ಆ ಬಗ್ಗೆ ಮಾಡಿಕೊಂಡ ಕೋರಿಕೆಯ ಮೇಲೆ ಅಥವಾ ಅದರ ಅಥವಾ ತನ್ನ ಸ್ವಂತ ಇಚ್ಛೆಯ ಮೇಲೆ ಸರ್ಕಾರಕ್ಕೆ ಅಥವಾ ಸರ್ಕಾರದಿಂದ ಅಧಿಕೃತನಾದ ಅಧಿಕಾರಿಗೆ (ಇಲ್ಲಿ ಇನು ಮುಂದೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯೆಂದು ಉಲ್ಲೇಖಿಸಲಾಗಿದೆ) ಈ ಅಧಿನಿಯಮದ ಮೇರೆಗಿನ ಚುನಾವಣೆಗೆ ಸಂಬಂಧಿಸಿದಂತೆ,–

(ಕ) ಮತಗಟ್ಟೆಗಾಗಿ ಉಪಯೋಗಿಸುವ ಅಥವಾ ಮತದಾನದ ತರುವಾಯ ಮತಪೆಟ್ಟಿಗೆ ದಾಸ್ತಾನು ಮಾಡುವ ಉದ್ದೇಶಕ್ಕಾಗಿ ಯಾವುವೇ ಆವರಣಗಳು ಅಗತ್ಯವಾಗಿದೆ ಅಥವಾ ಅಗತ್ಯವಾಗುವ ಸಂಭವವಿದೆಯೆಂದು; ಅಥವಾ

(ಖ) ಯಾವುದೇ ಮತಗಟ್ಟೆಗೆ ಅಥವಾ ಅದರಿಂದ ಮತಪೆಟ್ಟಿಗೆಗಳನ್ನು ಸಾಗಿಸುವ ಅಥವಾ ಅಂಥ ಚುನಾವಣೆ ನಡೆಯುವ ಕಾಲದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದಕ್ಕಾಗಿ ಪೊಲೀಸ್ ದಳದ ಸದಸ್ಯರುಗಳನ್ನು ಸಾಗಿಸುವ ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಯಾರೇ ಅಧಿಕಾರಿ ಅಥವಾ ಇತರ ವ್ಯಕ್ತಿಯನ್ನು ಸಾಗಿಸುವ ಉದ್ದೇಶಕ್ಕಾಗಿ ಯಾವುದೇ ವಾಹನ ನೌಕೆ ಅಥವಾ ಪ್ರಾಣಿಯು ಅಗತ್ಯವಾಗಿದೆ ಅಥವಾ ಅಗತ್ಯವಾಗುವ ಸಂಭವವಿದೆಯೆಂದು ಕಂಡುಬಂದರೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಸಂದರ್ಭಾನುಸಾರ ಅಂಥ ಆವರಣಗಳು ಅಂಥ ವಾಹನ, ನೌಕೆ ಅಥವಾ ಪ್ರಾಣಿಯನ್ನು ಬರಹದಲ್ಲಿನ ಆದೇಶದ ಮೇರೆಗೆ ಕಡ್ಡಾಯವಾಗಿ ಕೋರಬಹುದು ಮತ್ತು ಆ ಕಡ್ಡಾಯ ಕೋರಿಕೆಗೆ ಸಂಬಂಧಪಟ್ಟಂತೆ ಅವಶ್ಯ ಅಥವಾ ವಿಹಿತವೆಂದು ಅದಕ್ಕೆ ಕಂಡುಬರಬಹುದಾದಂಥ ಇನ್ನೂ ಹೆಚ್ಚಿನ ಆದೇಶಗಳನ್ನು ಮಾಡಬಹುದು:

ಪರಂತು, ಅಭ್ಯರ್ಥಿಯ ಚುನಾವಣೆಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಅಭ್ಯರ್ಥಿ ಅಥವಾ ಅವನ ಏಜೆಂಟನು ಕಾನೂನುಸಮ್ಮತವಾಗಿ ಉಪಯೋಗಿಸುತ್ತಿರುವಂಥ ಯಾವುದೇ ವಾಹನ, ನೌಕೆ ಅಥವಾ ಪ್ರಾಣಿಯನ್ನು ಅಂಥ ಚುನಾವಣೆಯಲ್ಲಿ ಮತದಾನವು ಮುಗಿಯುವವರೆಗೆ ಈ ಉಪ–ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರತಕ್ಕದ್ದಲ್ಲ.

(2) ಕಡ್ಡಾಯ ಕೋರಿಕೆಯನ್ನು ಸ್ವತ್ತಿನ ಸ್ವಾಧೀನದಲ್ಲಿರುವ ಒಡೆಯ ಅಥವಾ ವ್ಯಕ್ತಿಯೆಂಬುದಾಗಿ ಕಡ್ಡಾಯ ಕೋರಿಕೆಯನ್ನು ಮಾಡುವ ಪ್ರಾಧಿಕಾರಿಯು ಭಾವಿಸುವ ವ್ಯಕ್ತಿಗೆ ಸಂಭೋದಿಸಿದ ಬರಹದಲ್ಲಿನ ಆದೇಶದ ಮೂಲಕ ಮಾಡತಕ್ಕದ್ದು ಮತ್ತು ಅಂಥ ಆದೇಶವನ್ನು ಅದನ್ನು ಸಂಭೋಧಿಸಿದ ವ್ಯಕ್ತಿಗೆ 252ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಜಾರಿ ಮಾಡತಕ್ಕದ್ದು.

(3) (1)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ ಅಂಥ ಕಡ್ಡಾಯ ಕೋರಿಕೆಯ ಅವಧಿಯನ್ನು ಆ ಉಪ–ಪ್ರಕರಣದಲ್ಲಿ ನಮೂದಿಸಿದ ಯಾವುದೇ ಉದ್ದೇಶಕ್ಕಾಗಿ ಅಂಥ ಸ್ವತ್ತು ಅಗತ್ಯವಾಗಿರುವಂಥ ಆ ಅವಧಿಗೂ ಮೀರಿ ವಿಸ್ತರಿಸತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ 'ಆವರಣಗಳು' ಎಂದರೆ ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಒಂದು ಗುಡಿಸಲು, ಷೆಡ್ಡು ಅಥವಾ ಇತರ ರಚನೆಗಳ ಅಥವಾ ಅದರ ಯಾವುದೇ ಭಾಗವು ಒಳಗೊಳ್ಳುತ್ತದೆ.

**271. ನಷ್ಟ ಪರಿಹಾರದ ಸಂದಾಯ.–** 270ನೇ ಪ್ರಕರಣದ ಅನುಸರಣೆಯಲ್ಲಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಯಾವುದೇ ಆವರಣವನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ ಮುನ್ಸಿಪಲ್ ಕೌನ್ಸಿಲು

ಹಿತಾಸಕ್ತಿಯುಳ್ಳ ವ್ಯಕ್ತಿಗೆ ಈ ಕೆಳಕಂಡವುಗಳನ್ನು ಪರ್ಯಾಲೋಚನೆಗೆ ತೆಗೆದುಕೊಂಡು ನಿರ್ಧರಿಸತಕ್ಕಂಥ ಮೊಬಲಗಿನ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು ಎಂದರೆ:–

(i) ಆ ಆವರಣದಲ್ಲಿ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಬಾಡಿಗೆ ಅಥವಾ ಯಾವುದೇ ಬಾಡಿಗೆಯನ್ನು ಸಂದಾಯ ಮಾಡದಿದ್ದರೆ ಆ ಸ್ಥಳದಲ್ಲಿ ಅಂಥದೇ ಆವರಣಕ್ಕೆ ಸಂದಾಯ ಮಾಡಬೇಕಾದ ಬಾಡಿಗೆ;

(ii) ಆವರಣದ ಕಡ್ಡಾಯ ಕೋರಿಕೆಯ ಪರಿಣಾಮವಾಗಿ ಹಿತಾಸಕ್ತಿಯುಳ್ಳ ವ್ಯಕ್ತಿಯು ತನ್ನ ನಿವಾಸ ಅಥವಾ ವ್ಯವಹಾರದ ಸ್ಥಳವನ್ನು ಬದಲಾಯಿಸಲೇಬೇಕಾದಾಗ ಅಂಥ ಬದಲಾವಣೆಗೆ ಪ್ರಾಸಂಗಿಕವಾಗಿ ಯುಕ್ತ ವೆಚ್ಚಗಳು ಯಾವುದಾದರೂ ಇದ್ದರೆ ಅವುಗಳು:

ಪರಂತು, ಹಿತಾಸಕ್ತನಾದ ಯಾರೇ ವ್ಯಕ್ತಿಯು ಹಾಗೆ ನಿರ್ಧರಿಸಿದ ನಷ್ಟಪರಿಹಾರದ ಮೊಬಲಗಿನಿಂದ ಭಾದಿತನಾಗಿದ್ದು ಕಡ್ಡಾಯ ಕ್ಲೇಮಾಗಿ ಕೋರುವ ಅಧಿಕಾರಿಗೆ, ಮಧ್ಯಸ್ಥಗಾರನಿಗೆ ವಿಷಯವನ್ನು ಒಪ್ಪಿಸುವುದಕ್ಕಾಗಿ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಿದ ಕಾಲದೊಳಗೆ ಅರ್ಜಿಯನ್ನು ಮಾಡಿಕೊಂಡಿರುವಲ್ಲಿ ಸಂದಾಯ ಮಾಡಬೇಕಾದ ನಷ್ಟಪರಿಹಾರದ ಮೊಬಲಗು ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥಗಾರನು ನಿರ್ಧರಿಸಬಹುದಾದಂತೆ ಇರತಕ್ಕದ್ದು:

ಮತ್ತು ಪರಂತು, ನಷ್ಟ ಪರಿಹಾರವನ್ನು ಸ್ವೀಕರಿಸಲು ಸ್ವಾಮ್ಯದ ಬಗ್ಗೆ ಅಥವಾ ನಷ್ಟ ಪರಿಹಾರದ ಮೊಬಲಗಿನ ಹಂಚಿಕೆಯ ಬಗ್ಗೆ ಯಾವುದೇ ವಿವಾದವಿರುವಲ್ಲಿ ನಿರ್ಧರಿಸುವುದಕ್ಕಾಗಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥಗಾರನಿಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಅದನ್ನು ಒಪ್ಪಿಸತಕ್ಕದ್ದು ಮತ್ತು ಅಂಥ ಮಧ್ಯಸ್ಥಗಾರನ ತೀರ್ಮಾನಕ್ಕನುಸಾರ ಅದನ್ನು ನಿರ್ಧರಿಸತಕ್ಕದ್ದು.

**ವಿವರಣೆ:–** ಈ ಉಪ–ಪ್ರಕರಣದಲ್ಲಿ 'ಹಿತಾಸಕ್ತಿಯುಳ್ಳ ವ್ಯಕ್ತಿ' ಎಂಬ ಪದಾವಳಿಯು ಕಡ್ಡಾಯ ಕೋರಿಕೆಯ ನಿಕಟ ಪೂರ್ವದಲ್ಲಿ 270ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾದ ಆವರಣದ ವಾಸ್ತವ ಸ್ವಾಧೀನದಲ್ಲಿದ್ದ ವ್ಯಕ್ತಿ ಅಥವಾ ಯಾರೇ ವ್ಯಕ್ತಿಯು ಅಂಥ ವಾಸ್ತವ ಸ್ವಾಧೀನದಲ್ಲಿ ಇಲ್ಲದಿರುವಲ್ಲಿ ಅಂಥ ಆವರಣಗಳ ಒಡೆಯ ಎಂದು ಅರ್ಥ.

(2) 270ನೇ ಪ್ರಕರಣದ ಅನುಸರಣೆಯಲ್ಲಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಯಾವುದೇ ವಾಹನ, ನೌಕೆ ಅಥವಾ ಪ್ರಾಣಿಯನ್ನು ಕಡ್ಡಾಯವಾಗಿ ಕೋರಿದಾಗಲೆಲ್ಲಾ ಮುನ್ಸಿಪಲ್ ಕೌನ್ಸಿಲ್ಲು ಅಂಥ ವಾಹನ, ನೌಕೆ ಅಥವಾ ಪ್ರಾಣಿಯ ಬಾಡಿಗೆಗಾಗಿ ಆ ಸ್ಥಳದಲ್ಲಿ ಸಲುವಳಿಯಲ್ಲಿರುವ ಹಾಸಲು ಅಥವಾ ದರಗಳ ಆಧಾರದ ಮೇಲೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ನಿರ್ಧರಿಸತಕ್ಕಂಥ ಮೊಬಲಗಿನ ನಷ್ಟ ಪರಿಹಾರವನ್ನು ಅದರ ಒಡೆಯನಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಅಂಥ ವಾಹನ, ನೌಕೆ ಅಥವಾ ಪ್ರಾಣಿಯ ಒಡೆಯನು ಹಾಗೆ ನಿರ್ಧರಿಸಲಾದ ನಷ್ಟ ಪರಿಹಾರದ ಮೊಬಲಗಿನಿಂದ ಬಾಧಿತನಾಗಿದ್ದು ಮಧ್ಯಸ್ಥಗಾರನಿಗೆ ವಿಷಯವನ್ನು ಒಪ್ಪಿಸುವುದಕ್ಕಾಗಿ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಿದ ಕಾಲದೊಳಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಗೆ ಅರ್ಜಿಯನ್ನು ಮಾಡಿಕೊಂಡಲ್ಲಿ ಸಂದಾಯ ಮಾಡಬೇಕಾದ ನಷ್ಟ ಪರಿಹಾರದ ಮೊಬಲಗು ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು,–

ಈ ಬಗ್ಗೆ ನೇಮಕ ಮಾಡಿದ ಮಧ್ಯಸ್ಥಗಾರನು ನಿರ್ಧರಿಸಬಹುದಾದಂತೆ ಇರತಕ್ಕದ್ದು:

ಮತ್ತೂ ಪರಂತು, ಕಡ್ಡಾಯ ಕೋರಿಕೆಯ ನಿಕಟಪೂರ್ವದಲ್ಲಿ ಕಂತು ಖರೀದಿ ಒಪ್ಪಂದದಿಂದಾಗಿ ವಾಹನ ಅಥವಾ ನೌಕೆಯ ಒಡೆಯನಲ್ಲದ ಇತರ ವ್ಯಕ್ತಿಯ ಸ್ವಾಧೀನದಲ್ಲಿದ್ದರೆ ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ, ಸಂದಾಯ ಮಾಡಬೇಕಾದ ಒಟ್ಟು ಪರಿಹಾರವೆಂದು ಈ ಉಪಪ್ರಕರಣದ ಮೇರೆಗೆ ನಿರ್ಧರಿಸಿದ ಮೊಬಲಗನ್ನು ಆ ವ್ಯಕ್ತಿ ಮತ್ತು ಒಡೆಯನ ನಡುವೆ ಅವರು ಒಪ್ಪಬಹುದಾದಂಥ ರೀತಿಯಲ್ಲಿ ಮತ್ತು ಒಪ್ಪಂದವು ಆಗದಿದ್ದಲ್ಲಿ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ನೇಮಕ ಮಾಡಿದ ಮಧ್ಯಸ್ಥಗಾರನು ಈ ಬಗ್ಗೆ ತೀರ್ಮಾನಿಸಬಹುದಾದಂಥ ರೀತಿಯಲ್ಲಿ ಹಂಚತಕ್ಕದ್ದು.

**272. ಮಾಹಿತಿಯನ್ನು ಪಡೆಯಲು ಅಧಿಕಾರ.–** ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, 270ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರುವ ಅಥವಾ 271ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರವನ್ನು ನಿರ್ಧರಿಸುವ ದೃಷ್ಟಿಯಿಂದ ಆದೇಶದ ಮೂಲಕ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾಂಥ ಪ್ರಾಧಿಕಾರಿಗೆ, ನಿರ್ದಿಷ್ಟಪಡಿಸಬಹುದಾದಂಥ ಸ್ವತ್ತಿಗೆ ಸಂಬಂಧಪಟ್ಟಂತೆ ತನ್ನಲ್ಲಿರುವ ಅಂಥ ಮಾಹಿತಿಯನ್ನು ಒದಗಿಸಲು ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

**273. ಕಡ್ಡಾಯವಾಗಿ ಕೋರಲಾದ ಆವರಣದಿಂದ ಹೊರಹಾಕುವುದು.–** (1) 270ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿ, ಕಡ್ಡಾಯವಾಗಿ ಕೋರಿದ ಯಾವುದೇ ಆವರಣದ ಸ್ವಾಧೀನದಲ್ಲಿ ಉಳಿಯುವ ಯಾರೇ ವ್ಯಕ್ತಿಯನ್ನು ಈ ಬಗ್ಗೆ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಶಕ್ತಗೊಳಿಸಿದ ಯಾರೇ ಅಧಿಕಾರಿಯು ಆ ಆವರಣದಿಂದ ಕ್ಷಿಪ್ರವಾಗಿ ಹೊರಹಾಕಬಹುದು.

(2) ಹಾಗೆ ಶಕ್ತಗೊಳಿಸಲಾದ ಯಾರೇ ಅಧಿಕಾರಿಯು, ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಮಹಿಳೆಯರಿಗೆ ಹಿಂತೆಗೆಯಲು ಯುಕ್ತ ಎಚ್ಚರಿಕೆ ಮತ್ತು ಸೌಲಭ್ಯವನ್ನು ಕೊಟ್ಟ ತರುವಾಯ, ಯಾವುದೇ ಬೀಗ ಅಥವಾ ಅಗಳಿಯನ್ನು ತೆಗೆದುಹಾಕಬಹುದು ಮತ್ತು ತೆರೆಯಬಹುದು ಅಥವಾ ಯಾವುದೇ ಬಾಗಿಲು ಅಥವಾ ಕಟ್ಟಡವನ್ನು ಒಡೆಯಬಹುದು ಅಥವಾ ಅಂಥ ಹೊರಹಾಕುವುದನ್ನು ಆಗಗೊಳಿಸಲು ಅವಶ್ಯವಾದ ಯಾವುದೇ ಇತರ ಕಾರ್ಯವನ್ನು ಮಾಡಬಹುದು.

**274. ಕಡ್ಡಾಯ ಕೋರಿಕೆಯಿಂದ ಆವರಣಗಳ ಬಿಡುಗಡೆ:–** (1) 270ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಿದ ಯಾವುದೇ ಆವರಣವನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಬೇಕಾದಾಗ ಆವರಣಗಳನ್ನು ಕಡ್ಡಾಯವಾಗಿ ಕೋರಿದ ಕಾಲದಲ್ಲಿ ಯಾವ ವ್ಯಕ್ತಿಯ ಸ್ವಾಧೀನದಿಂದ ಆ ವ್ಯಕ್ತಿಗೆ ಅವುಗಳನ್ನು ತೆಗೆದುಕೊಳ್ಳಲಾಯಿತೋ ಆ ವ್ಯಕ್ತಿಗೆ ಅಥವಾ ಅಂಥ ಯಾರೇ ವ್ಯಕ್ತಿಯು ಇಲ್ಲದಿದ್ದರೆ, ಅಂಥ ಆವರಣಗಳ ಒಡೆಯನೆಂದು ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಭಾವಿಸುವಂಥ ವ್ಯಕ್ತಿಗೆ, ಅವುಗಳ ಸ್ವಾಧೀನವನ್ನು ಕೊಡತಕ್ಕದ್ದು ಮತ್ತು ಸ್ವಾಧೀನದ ಅಂಥ ಕೊಡುವಿಕೆಯು ಅಂಥ ಕೊಡುವಿಕೆಗೆ ಸಂಬಂಧಿಸಿದ ಎಲ್ಲ ಹೊಣೆಗಾರಿಕೆಗಳಿಂದ ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು ಸಂಪೂರ್ಣವಾಗಿ ವಿಮೋಚಿಸತಕ್ಕದ್ದು, ಆದರೆ ಆವರಣಗಳ ಸ್ವಾಧೀನವನ್ನು ಹಾಗೆ ಯಾರಿಗೆ ಕೊಡಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಯಾರೇ ಇತರ ವ್ಯಕ್ತಿಯು, ಕಾನೂನಿನ ಯುಕ್ತ ಪ್ರಕ್ರಿಯೆಯ ಮೂಲಕ ಜಾರಿಗೊಳಿಸಲು ಹಕ್ಕುಳ್ಳವನಾಗಿರಬಹುದಾದಂಥ ಆವರಣಗಳಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕುಗಳಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(2) 270ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಿದ ಯಾವುವೇ ಆವರಣಗಳ ಸ್ವಾಧೀನವನ್ನು (1)ನೇ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ಕೊಡಬೇಕಾಗಿದೆಯೋ ಆ ವ್ಯಕ್ತಿಯು ಆಗದಿದ್ದರೆ, ಅಥವಾ ಸುಲಭವಾಗಿ ಖಚಿತಪಡಿಸಿಕೊಳ್ಳಲಾಗದಿದ್ದಲ್ಲಿ ಅಥವಾ ಅವನ ಪರವಾಗಿ ವಶಾವಣೆಯನ್ನು ಅಂಗೀಕರಿಸಲು ಯಾರೇ ಏಜೆಂಟ್ ಅಥವಾ ಶಕ್ತಗೊಳಿಸಿದ ಯಾರೇ ಇತರ ವ್ಯಕ್ತಿ ಇಲ್ಲದಿರುವಲ್ಲಿ, ಕಡ್ಡಾಯವಾಗಿ ಕೋರುವ ಪ್ರಾಧಿಕಾರಿಯು, ಅಂಥ ಆವರಣಗಳನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಲಾಗಿದೆಯೆಂದು

ಘೋಷಿಸುವ ನೋಟೀಸನ್ನು ಅಂಥ ಆವರಣಗಳ ಯಾವುದೇ ಎದ್ದು ಕಾಣುವ ಭಾಗದ ಮೇಲೆ ಅಂಟಿಸುವಂತೆ ಮಾಡತಕ್ಕದ್ದು ಮತ್ತು ಆ ನೋಟೀಸನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದಾಗ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಆವರಣಗಳು, ಅಂಥ ಪ್ರಕಟಣೆಯ ದಿನಾಂಕದಂದು ಮತ್ತು ಅಂದಿನಿಂದ ಕಡ್ಡಾಯ ಕೋರಿಕೆಗೆ ಒಳಪಟ್ಟಿರುವುದು ಕೊನೆಗೊಳ್ಳತಕ್ಕದ್ದು ಮತ್ತು ಅದರ ಸ್ವಾಧೀನಕ್ಕೆ ಹಕ್ಕುಳ್ಳ ವ್ಯಕ್ತಿಗೆ ವಶಾವಣೆ ಮಾಡಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಕಡ್ಡಾಯವಾಗಿ ಕೋರಿರುವ ಪ್ರಾಧಿಕಾರಿ ಅಥವಾ ಮುನ್ಸಿಪಲ್ ಕೌನ್ಸಿಲು ಸದರಿ ದಿನಾಂಕದ ತರುವಾಯ ಯಾವುದೇ ಅವಧಿಗೆ ಅಂಥ ಆವರಣಗಳಿಗೆ ಸಂಬಂಧಿಸಿದಂತೆ ಯಾವುದೇ ನಷ್ಟ ಪರಿಹಾರ ಅಥವಾ ಇತರ ಕ್ಲೇಮಿಗೆ ಗುರಿಯಾಗತಕ್ಕದ್ದಲ್ಲ.

**275. ಕಡ್ಡಾಯ ಕೋರಿಕೆಯ ಬಗ್ಗೆ ಯಾವುದೇ ಆದೇಶದ ಉಲ್ಲಂಘನೆಗಾಗಿ ದಂಡನೆ.–** ಯಾರೇ ವ್ಯಕ್ತಿಯು, 270ನೇ ಪ್ರಕರಣದ ಅಥವಾ 272ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ, ಅವನು ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

## ಅಧ್ಯಾಯ–X

## ಪ್ರಾಸಿಕ್ಯೂಷನ್‌ಗಳು, ದಾವೆಗಳು ಮತ್ತು ಪೊಲೀಸರ ಅಧಿಕಾರಗಳು

**276. ಮುನ್ಸಿಪಲ್ ಕೌನ್ಸಿಲು, ಪ್ರಾಸಿಕ್ಯೂಟ್ ಮಾಡಬಹುದು.–** (1) ಮುನ್ಸಿಪಲ್ ಕೌನ್ಸಿಲು ಎಂಥದೇ ಯಾವುದೇ ಸಾರ್ವಜನಿಕ ಉಪದ್ರವಕ್ಕಾಗಿ ಪ್ರಾಸಿಕ್ಯೂಷನ್ನನು ನಿರ್ದೇಶಿಸಬಹುದು ಮತ್ತು ಯಾವುದೇ ದಂಡಗಳನ್ನು ವಸೂಲು ಮಾಡಲು ಮತ್ತು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಉಪಬಂಧಗಳ ವಿರುದ್ಧವಾಗಿ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯ ಶಿಕ್ಷೆಗಾಗಿ ಕೈಗೊಳ್ಳಬೇಕಾದ ವ್ಯವಹರಣೆಗಳನ್ನು ಆದೇಶಿಸಬಹುದು ಮತ್ತು ಅಂಥ ಪ್ರಾಸಿಕ್ಯೂಷನ್‌ಗಳು ಅಥವಾ ಇತರ ವ್ಯವಹರಣೆಗಳ ವೆಚ್ಚಗಳನ್ನು ಪೌರಸಭಾ ನಿಧಿಯಿಂದ ಸಂದಾಯ ಮಾಡಬೇಕೆಂದು ಆದೇಶಿಸಬಹುದು:

ಪರಂತು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮ ಅಥವಾ ಉಪವಿಧಿಯ ಮೇರೆಗಿನ ಅಪರಾಧಕ್ಕಾಗಿ ಯಾವುದೇ ಪ್ರಾಸಿಕ್ಯೂಷನ್ನನ್ನು ಅಂಥ ಅಪರಾಧವನ್ನು ಮಾಡಿದ ದಿನಾಂಕದ ತರುವಾಯ ಅಥವಾ ಅಂಥ ಅಪರಾಧ ಮಾಡಿರುವುದನ್ನು ಅಥವಾ ಅದು ಇರುವುದನ್ನು ಮೊದಲ ಬಾರಿಗೆ

ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್‌ನ ಗಮನಕ್ಕೆ ತಂದಂಥ ದಿನಾಂಕದ ತರುವಾಯ ಆರು ತಿಂಗಳೊಳಗಾಗಿ ಅಲ್ಲದೆ ಹೂಡತಕ್ಕದ್ದಲ್ಲ.

(2) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗಿನ ಯಾವುದೇ ಪ್ರಾಸಿಕ್ಯೂಷನ್ನನ್ನು, ಅದರಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಯಾರೇ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ಮುಂದೆ ಹೂಡಬಹುದು. ಅದರ ಮೇರೆಗೆ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ ಅಥವಾ ಅದರಿಂದಾಗಿ ವಿಧಿಸಿದ ಪ್ರತಿಯೊಂದು ಜುಲ್ಮಾನೆ ಅಥವಾ ದಂಡವನ್ನು ಈ ಅಧಿನಿಯಮದಲ್ಲಿ ಅನ್ಯಥಾ ಯಾವುದೇ ವಿಶೇಷ ಉಪಬಂಧವನ್ನು ಮಾಡಿಲ್ಲದಂಥ ನಷ್ಟ ಪರಿಹಾರ ಅಥವಾ ಇತರ ವೆಚ್ಚಗಳ ವಸೂಲಾತಿಯ ಬಗ್ಗೆ ಎಲ್ಲ ಕ್ಲೇಮುಗಳನ್ನು ಸಹ, ಹಣವನ್ನು ಯಾರಿಂದ ಕ್ಲೇಮು ಮಾಡಬಹುದಾಗಿದೆಯೋ ಆ ವ್ಯಕ್ತಿಗೆ ಸೇರಿದ ಮ್ಯಾಜಿಸ್ಟ್ರೇಟ್‌ನ ಅಧಿಕಾರವ್ಯಾಪ್ತಿಯ ಪರಿಮಿತಿಯೊಳಗಿನ ಯಾವುದೇ ಚರಸ್ವತ್ತಿನ ಜಪ್ತಿ ಮತ್ತು ಮಾರಾಟದ ಮೂಲಕ ಅಂಥವನಿಗೆ ಮಾಡಿಕೊಂಡ ಅರ್ಜಿಯ ಮೇಲೆ ವಸೂಲ್ಮಾಡಬಹುದು.

(3) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ ಒಬ್ಬ ಮ್ಯಾಜಿಸ್ಟ್ರೇಟನು ವಿಧಿಸಿದ, ನಿರ್ಧರಿಸಿದ ಅಥವಾ ವಸೂಲು ಮಾಡಬಹುದಾದ ಯಾವುದೇ ಜುಲ್ಮಾನೆ, ಖರ್ಚುಗಳು, ತೆರಿಗೆ ಅಥವಾ ಇತರ ಹಣದ ಮೊತ್ತವನ್ನು ಸಂದಾಯ ಮಾಡದಿರುವಲ್ಲಿ ಮ್ಯಾಜಿಸ್ಟ್ರೇಟನು, ಭಾರತ ದಂಡ ಸಂಹಿತೆಯ 64 ಮತ್ತು 70ನೇ ಪ್ರಕರಣಗಳಲ್ಲಿ (ಎರಡೂ ಸೇರಿದಂತೆ) ವಿಧಿಸಿದ, ಎಲ್ಲಾ ಪರಿಬಂಧಗಳು, ಪರಿಮಿತಿಗಳು ಮತ್ತು ಷರತ್ತುಗಳಿಗೊಳಪಟ್ಟು, ಸಂದಾಯ ಮಾಡಲು ತಪ್ಪಿದಲ್ಲಿ, ಅಪರಾಧಿಯನ್ನು ಕಾರಾವಾಸದಲ್ಲಿಡುವಂತೆ ಆದೇಶಿಸಬಹುದು.

(4) ಈ ಅಧಿನಿಯಮ ಅಥವಾ ಅದರೆ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ, ಮ್ಯಾಜಿಸ್ಟ್ರೇಟನಿಂದ ವಿಧಿಸಿದ, ನಿರ್ಧರಿಸಿದ ಅಥವಾ ವಸೂಲು ಮಾಡಬಹುದಾದ ಯಾವುದೇ ಜುಲ್ಮಾನೆ, ಖರ್ಚುಗಳು, ತೆರಿಗೆ ಅಥವಾ ಮೊತ್ತವು ಅಂಥ ಮ್ಯಾಜಿಸ್ಟ್ರೇಟನಿಂದ 1898ರ ದಂಡ ಪ್ರಕ್ರಿಯಾ ಸಂಹಿತೆಯ ಮೇರೆಗೆ (1898ರ ಕೇಂದ್ರ ಅಧಿನಿಯಮ V) ವಿಧಿಸಿದ ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ ವಸೂಲೀಯವಾಗತಕ್ಕದ್ದು ಮತ್ತು ಅದನ್ನು ವಸೂಲು ಮಾಡಿದ ಮೇಲೆ ಮುನ್ಸಿಪಲ್ ಕೌನ್ಸಿಲಿಗೆ ಸಂದಾಯ ಮಾಡತಕ್ಕದ್ದು.

**227. ಅಪರಾಧಗಳನ್ನು ರಾಜಿ ಮಾಡಿಕೊಳ್ಳಲು ಅಧಿಕಾರ.–** (1) ಮುನ್ಸಿಪಲ್ ಕೌನ್ಸಿಲು–

(ಕ) ಮುನ್ಸಿಪಲ್ ಕೌನ್ಸಿಲಿನ ಅಭಿಪ್ರಾಯದಲ್ಲಿ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡಿರುವ ಯಾರೇ ವ್ಯಕ್ತಿಯೊಂದಿಗೆ ರಾಜಿ ಮಾಡಿಕೊಳ್ಳಬಹುದು ಮತ್ತು ಅಂಥ ರಾಜಿ ಮಾಡಿಕೊಂಡ ಮೇಲೆ ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ ಅಂಥ ವ್ಯಕ್ತಿಯ ವಿರುದ್ಧ ಯಾವುವೇ ವ್ಯವಹರಣೆಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ;

(ಖ) ಡೆಪ್ಯುಟಿ ಕಮಿಷನರ್‌ನ ಮಂಜೂರಾತಿಯೊಂದಿಗೆ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ ಹೂಡಿದ ಪ್ರಾಸಿಕ್ಯೂಷನ್‌ಗಳಿಂದ ಹಿಂತೆಗೆಯಬಹುದು; ಮತ್ತು

(ಗ) ಸರ್ಕಾರವು ರಚಿಸಿದ ನಿಯಮಗಳ ಮೂಲಕ ರಾಜಿ ಮಾಡಿಕೊಳ್ಳ–ಬಹುದಾದಂಥವುಗಳೆಂದು ಘೋಷಿಸಿದಂಥ ಈ ಅಧಿನಿಯಮದ ವಿರುದ್ಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ವಿರುದ್ಧ ಯಾವುದೇ ಅಪರಾಧವನ್ನು ರಾಜಿ ಮಾಡಿಕೊಳ್ಳಬಹುದು:

ಪರಂತು, ಸರ್ಕಾರವು ಈ ಪ್ರಕರಣದ ಮೇರೆಗೆ ಅಪರಾಧಗಳನ್ನು ರಾಜಿಮಾಡಿಕೊಳ್ಳಲು ಶಕ್ತಗೊಳಿಸಿದ ವ್ಯಕ್ತಿಗಳ ವ್ಯವಹರಣೆಯನ್ನು ನಿಯಂತ್ರಿಸಲು ನಿಯಮಗಳನ್ನು ರಚಿಸಬಹುದು:

ಮತ್ತು ಪರಂತು, ಮುನ್ಸಿಪಲ್ ಕೌನ್ಸಿಲು ಮತ್ತು ಮುನ್ಸಿಪಲ್ ಕೌನ್ಸಿಲು ಅಥವಾ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಇವರ ಪರವಾಗಿ ಹೊರಡಿಸಿದ ನೋಟೀಸು, ಆದೇಶ ಅಥವಾ ಕಡ್ಡಾಯ ಕೋರಿಕೆಯನ್ನು ಪಾಲಿಸುವುದು ಸಾಧ್ಯವಿರುವಷ್ಟರಮಟ್ಟಿಗೆ ಅದನ್ನು ಪಾಲಿಸಿದ್ದ ಹೊರತು ಮತ್ತು ಅಲ್ಲಿಯವರೆಗೆ, ಅದನ್ನು ಪಾಲಿಸಲು ತಪ್ಪುವ ಮೂಲಕ ಮಾಡಿದಂಥ ಯಾವುದೇ ಅಪರಾಧವನ್ನು ರಾಜಿಮಾಡಿಕೊಳ್ಳತಕ್ಕದ್ದಲ್ಲ.

(2) ಅಪರಾಧವನ್ನು ರಾಜಿಮಾಡಿಕೊಂಡಿರುವಲ್ಲಿ ಅಪರಾಧಿಯನ್ನು ವಿಮೋಚನೆಗೊಳಿಸತಕ್ಕದ್ದು ಮತ್ತು ಹಾಗೆ ರಾಜಿ ಮಾಡಿಕೊಂಡ ಅಪರಾಧಕ್ಕೆ ಸಂಬಂಧಿಸಿದಂತೆ ಅವನ ವಿರುದ್ಧ ಯಾವುವೇ ಹೆಚ್ಚಿನ ವ್ಯವಹರಣೆಗಳನ್ನು ತೆಗೆದುಕೊಳ್ಳತಕ್ಕದ್ದಲ್ಲ.

**278. ಜಪ್ತಿ ಇತ್ಯಾದಿಗಾಗಿ ಕಾಲಪರಿಮಿತಿ.–** ಈ ಅಧಿನಿಯಮದ ಮೇರೆಗೆ, ಮುನ್ಸಿಪಲ್ ಕೌನ್ಸಿಲಿಗೆ ಬಾಕಿಯಾಗುವ ಯಾವುದೇ ಮೊತ್ತಕ್ಕೆ ಸಂಬಂಧಿಸಿದಂತೆ ಯಾವುದೇ ಜಪ್ತಿ ಅಥವಾ ಪ್ರಾಸಿಕ್ಯೂಷನ್ನನ್ನು ಅಂಥ ಮೊತ್ತದ ಸಂಬಂಧದಲ್ಲಿ ಸಂದರ್ಭಾನುಸಾರ ಅಂಥ ಜಪ್ತಿಯನ್ನು ಮಾಡಿರಬಹುದಾದಂಥ ಅಂಥ ಪ್ರಾಸಿಕ್ಯೂಷನ್‌ನ್ನು ಮೊದಲ ಬಾರಿಗೆ ಪ್ರಾರಂಭಿಸಬಹುದಾದಂಥ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ ಅಥವಾ ಪ್ರಾರಂಭಿಸತಕ್ಕದ್ದಲ್ಲ.

**279. ನಮೂನೆಯಲ್ಲಿನ ದೋಷವಿದ್ದಾಗ್ಯೂ ಜಪ್ತಿಯು ಕಾನೂನು ಸಮ್ಮತ.–** ಈ ಅಧಿನಿಯಮದಿಂದಾಗಿ ಮಾಡಿದ ಯಾವುದೇ ಜಪ್ತಿಯನ್ನು, ಅದಕ್ಕೆ ಸಂಬಂಧಪಟ್ಟ ಯಾವುದೇ ಸಮನುಗಳು, ಅಪರಾಧ ನಿರ್ಣಯ ಅಥವಾ ಜಪ್ತಿಯ ವಾರೆಂಟ್ ಅಥವಾ ಇತರ ವ್ಯವಹಾರಗಳಲ್ಲಿನ ಯಾವುದೇ ದೋಷ ಅಥವಾ ನಮೂನೆಯ ಅಭಾವದಿಂದಾಗಿ, ಕಾನೂನುಬಾಹಿರವೆಂದು ಭಾವಿಸತಕ್ಕದ್ದಲ್ಲ ಅಥವಾ ಅಂಥ ಪಕ್ಷಕಾರ, ಅವನು ತರುವಾಯ ಮಾಡಿದ ಯಾವುದೇ ಕ್ರಮದೋಷದ ಕಾರಣದಿಂದ, ಪ್ರಾರಂಭದಿಂದಲೇ ಅವನನ್ನು ಅತಿಕ್ರಮಣಕಾರಣನೆಂದು ಭಾವಿಸತಕ್ಕದ್ದಲ್ಲ. ಆದರೆ, ಅಂಥ ಕ್ರಮದೋಷದಿಂದ ಬಾಧಿತರಾದ ಎಲ್ಲ ವ್ಯಕ್ತಿಗಳು, ಸಕ್ಷಮ ಅಧಿಕಾರ ವ್ಯಾಪ್ತಿ ಹೊಂದಿರುವ ಯಾವುದೇ ನ್ಯಾಯಾಲಯದಲ್ಲಿ ವಿಶೇಷ ಹಾನಿ ಪರಿಹಾರಕ್ಕಾಗಿ ಪೂರ್ಣ ಪರಿಹಾರವನ್ನು ಪಡೆಯಬಹುದು.

**280. ಪೌರಸಭಾ ಸ್ವತ್ತಿಗೆ ಆದ ಹಾನಿಯನ್ನು ತುಂಬಿಕೊಡುವ ಬಗ್ಗೆ.–** ಯಾವುದೇ ಕಾರ್ಯ ನಿರ್ಲಕ್ಷತೆ ಅಥವಾ ತಪ್ಪಿತದ ಕಾರಣದಿಂದಾಗಿ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವಿಧಿಸಿದ ಯಾವುದೇ ದಂಡನೆಗೆ ಯಾರೇ ವ್ಯಕ್ತಿಯು ಗುರಿಯಾಗಿದ್ದರೆ, ಅಂಥ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿನ ಸ್ವತ್ತಿಗೆ ಯಾವುದೇ ಹಾನಿಯನ್ನು ಮಾಡಿದ್ದರೆ, ಅವನು ಅಂಥ ಹಾನಿಯನ್ನು ತುಂಬಿಕೊಡಲು ಮತ್ತು ಅಂಥ ದಂಡವನ್ನು ಸಂದಾಯ ಮಾಡಲು ಗುರಿಯಾಗತಕ್ಕದ್ದು ಮತ್ತು ಹಾನಿಪರಿಹಾರದ ಮೊಬಲಗನ್ನು ವಿವಾದವಿರುವ ಸಂದರ್ಭದಲ್ಲಿ ಅಂಥ ದಂಡನೆಗೆ ಗುರಿಯಾಗಿರುವ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದ ಮ್ಯಾಜಿಸ್ಟ್ರೇಟನು ನಿರ್ಧರಿಸತಕ್ಕದ್ದು ಮತ್ತು ತಗಾದೆಯ ಮೇಲೆ ಅಂಥ ಹಾನಿ ಪರಿಹಾರವನ್ನು ಸಂದಾಯ ಮಾಡದಿರುವಾಗ, ಅದನ್ನು ಜಪ್ತಿ ಮೂಲಕ ಸಂಗ್ರಹಿಸತಕ್ಕದ್ದು ಮತ್ತು ಅಂಥ ಮ್ಯಾಜಿಸ್ಟ್ರೇಟನು ತದನುಸಾರ ವಾರಂಟನ್ನು ಹೊರಡಿಸತಕ್ಕದ್ದು.

**281. ದಾವೆಯ ಮೂಲಕ ಪರ್ಯಾಯ ಪ್ರಕ್ರಿಯೆ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅವಕಾಶ ಮಾಡಿಕೊಟ್ಟ ವಸೂಲಿಯ ಯಾವುದೇ ಕ್ರಮಕ್ಕೆ ಬದಲಾಗಿ ಅಥವಾ ಅಂಥ ಕ್ರಮದಿಂದ VIIನೇ ಅಧ್ಯಾಯದ ಉಪಬಂಧಗಳ ಮೇರೆಗೆ ವಸೂಲೀಯವಾಗಬಹುದಾದ ಯಾವುದೇ ಮೊಬಲಗಿನ ಪೂರ್ಣ ಭಾಗ

ಅಥವಾ ಯಾವುದೇ ಭಾಗವನ್ನು ಅಥವಾ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ನಷ್ಟಪರಿಹಾರ, ವೆಚ್ಚಗಳು, ಖರ್ಚುಗಳು ಅಥವಾ ಹಾನಿಪರಿಹಾರವನ್ನು ಪಡೆಯಲು ತಪ್ಪಿದ ಸಂದರ್ಭದಲ್ಲಿ, ಮುನ್ಸಿಪಲ್ ಕೌನ್ಸಿಲಿಗೆ, ಅದನ್ನು ಸಂದಾಯ ಮಾಡಲು ಗುರಿಯಾಗಿರುವ ವ್ಯಕ್ತಿಯ ಮೇಲೆ ಸಕ್ಷಮ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದಲ್ಲಿ ದಾವೆ ಹೂಡುವುದು ಕಾನೂನು ಸಮ್ಮತವಾಗಿರತಕ್ಕದ್ದು.

**282. ರಾಜಿ ಮಾಡಿಕೊಳ್ಳುವ ಅಧಿಕಾರ ಇತ್ಯಾದಿ.–** (1) ಮುನ್ಸಿಪಲ್ ಕೌನ್ಸಿಲು, ತಾನು ಅಥವಾ ತನ್ನ ವಿರುದ್ಧವಾಗಿ ಹೂಡಿದ ಯಾವುದೇ ದಾವೆಗೆ ಸಂಬಂಧಿಸಿದಂತೆ ಅಥವಾ ಈ ಅಧಿನಿಯಮದ ಮೇರೆಗೆ ಅದು ಮಾಡಿಕೊಂಡ ಯಾವುದೇ ಕರಾರಿನಿಂದ ಉದ್ಭವಿಸುವ ಯಾವುದೇ ಕ್ಲೇಮು ಅಥವಾ ತಗಾದೆಗೆ ಸಂಬಂಧಿಸಿದಂತೆ, ಅದು ಸಾಕಷ್ಟೆಂದು ಭಾವಿಸತಕ್ಕಂಥ ಹಣದ ಮತ್ತು ಅಥವಾ ಇತರ ನಷ್ಟ ಪರಿಹಾರಕ್ಕಾಗಿ ಒಡಂಬಡಿಕೆ ಅಥವಾ ರಾಜಿ ಮಾಡಿಕೊಳ್ಳಬಹುದು:

ಪರಂತು, ಯಾವುದೇ ಕರಾರನ್ನು ಮಾಡಿಕೊಳ್ಳುವಲ್ಲಿ ಈ ಅಧಿನಿಯಮದ ಮೂಲಕ ಅಂಥ ಒಪ್ಪಂದದಿಂದ ಉದ್ಭವಿಸುವ ಯಾವುದೇ ಮಂಜೂರಾತಿಯ ಅಗತ್ಯವಿದ್ದರೆ, ಅಂಥ ಕರಾರಿನಿಂದ ಉದ್ಭವಿಸುವ ಯಾವುದೇ ಕ್ಲೇಮು ಅಥವಾ ತಗಾದೆಯ ಒಡಂಬಡಿಕೆ ಅಥವಾ ರಾಜಿಗೆ ಮಂಜೂರಾತಿಯನ್ನು ಪಡೆದುಕೊಳ್ಳತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲು ಈ ಅಧಿನಿಯಮದ ಮೇರೆಗೆ ತನ್ನಲ್ಲಿ, ತನ್ನ ಅಧಿಕಾರಗಳಲ್ಲಿ, ಮತ್ತು ನೌಕರರಲ್ಲಿ ನಿಹಿತವಾಗಿರುವ ಯಾವುದೇ ಅಧಿಕಾರವನ್ನು ಚಲಾಯಿಸುವ ಕಾರಣದಿಂದಾಗಿ ಯಾವುದೇ ಹಾನಿಯನ್ನು ಅನುಭವಿಸುವ ಯಾರೇ ವ್ಯಕ್ತಿಗೆ ಪೌರಸಭಾ ನಿಧಿಯಿಂದ ನಷ್ಟ ಪರಿಹಾರವನ್ನು ಕೊಡಬಹುದು.

(3) ಮುನ್ಸಿಪಲ್ ಕೌನ್ಸಿಲಿನ ಪರವಾಗಿ ನಡೆಸಿದ ಅಥವಾ ಪ್ರತಿರಕ್ಷಿಸಿದ ಯಾವುವೇ ಸಿವಿಲ್ ವ್ಯವಹರಣೆಗಳ ವೆಚ್ಚಗಳನ್ನು ಸಂದಾಯ ಮಾಡಲು ಪೌರಸಭಾ ವಿಧಿಯು, ಹೊಣೆಯಾಗಿರತಕ್ಕದ್ದು.

**283. ಸದ್ಭಾವನೆಯಲ್ಲಿ ಮಾಡಲಾದ ಕಾರ್ಯಗಳಿಗಾಗಿ ಪೌರಸಭೆ ಅದರ ಅಧಿಕಾರಿಗಳು, ನೌಕರರು ಇತ್ಯಾದಿ ವಿರುದ್ಧ ದಾವೆಗಳ ಪ್ರತಿನಿಷೇಧ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುವೇ ಮುನ್ಸಿಪಲ್ ಕೌನ್ಸಿಲ್ ವಿರುದ್ಧ ಅಥವಾ ಈ

ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ಸಮಿತಿಯ ವಿರುದ್ಧ ಅಥವಾ ಮುನ್ಸಿಪಲ್ ಕೌನ್ಸಿಲಿನ ಯಾರೇ ಅಧಿಕಾರಿ ಅಥವಾ ನೌಕರರ ವಿರುದ್ಧ ಅಥವಾ ಯಾವುದೇ ಅಂಥ ಮುನ್ಸಿಪಲ್ ಕೌನ್ಸಿಲ್ ಸಮಿತಿ, ಅಧಿಕಾರಿ, ನೌಕರ ಅಥವಾ ಮ್ಯಾಜಿಸ್ಟ್ರೇಟ್‌ನ ನಿರ್ದೇಶನಗಳ ಮೇರೆಗೆ ಮತ್ತು ಅದಕ್ಕನುಸಾರವಾಗಿ ಕಾರ್ಯ ನಿರ್ವಹಿಸುವ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ.

**284. ದಾವೆಗಳಿಗಾಗಿ ಪೂರ್ವಭಾವಿ ನೋಟೀಸು ನೀಡಿಕೆ.–** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಅನುಸರಣೆಯಲ್ಲಿ ಮಾಡಿದ ಅಥವಾ ಮಾಡಿರುವುದಾಗಿ ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಮುನ್ಸಿಪಲ್ ಕೌನ್ಸಿಲು, ನೌಕರ ಅಥವಾ ಅಂಥ ಮುನ್ಸಿಪಲ್ ಅಧಿಕಾರಿ ಅಥವಾ ನೌಕರನ ಆದೇಶ ಅಥವಾ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ವಿರುದ್ಧ ವ್ಯಾಜ್ಯ ಕಾರಣ ಕೋರಿದ ಪರಿಹಾರದ ಸ್ವರೂಪ, ಕ್ಲೇಮು ಮಾಡಿದ ನಷ್ಟ ಪರಿಹಾರದ ಮೊಬಲಗು, ಉದ್ದೇಶಿತ ವಾದಿಯ ಹೆಸರು ಮತ್ತು ಸ್ಥಳ ಮತ್ತು ಅವನು ಕ್ಲೇಮು ಮಾಡುವಂಥ ಪರಿಹಾರ ಇವುಗಳನ್ನು ನಿರೂಪಿಸುವ ಬರಹದಲ್ಲಿನ ನೋಟೀಸನ್ನು ಮುನ್ಸಿಪಲ್ ಕೌನ್ಸಿಲಿನ ಸಂದರ್ಭದಲ್ಲಿ, ಅದೇ ಕಚೇರಿಯಲ್ಲಿ ತಲುಪಿಸಿದ ಅಥವಾ ಕೊಟ್ಟ ಮತ್ತು ಅಂಥ ಅಧಿಕಾರಿ, ನೌಕರ ಅಥವಾ

ವ್ಯಕ್ತಿಯ ಸಂದರ್ಭದಲ್ಲಿ ಅವನಿಗೆ ತಲುಪಿಸಿದ ಅಥವಾ ಅವನ ಕಚೇರಿಯಲ್ಲಿ ಅಥವಾ ವಾಸಸ್ಥಳದಲ್ಲಿ ಕೊಟ್ಟ ತರುವಾಯ ಮುಂದಿನ ಅರವತ್ತು ದಿವಸಗಳು ಮುಕ್ತಾಯವಾಗುವವರೆಗೆ ಮತ್ತು ಅಂಥ ನೋಟೀಸನ್ನು ಹಾಗೆ ತಲುಪಿಸಲಾಗಿದೆ ಅಥವಾ ಕೊಡಲಾಗಿದೆ ಎಂಬ ನಿರೂಪಣೆಯನ್ನು ವಾದಪತ್ರವು ಒಳಗೊಂಡಿರುವ ಹೊರತು ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ.

(2) ಈ ಪ್ರಕರಣದಲ್ಲಿರುವುದಾವುದೂ ಯಾವ ದಾವೆಯಲ್ಲಿ ಕ್ಲೇಮು ಮಾಡಿದ ಪರಿಹಾರವು ನಿರ್ಬಂಧಕಾಜ್ಞೆ ಮಾತ್ರ ಇರುವುದೋ ಯಾವುದರ ಉದ್ದೇಶವು ನೋಟೀಸನ್ನು ಕೊಡುವುದರ ಅಥವಾ ದಾವೆಯ ಹೂಡುವಿಕೆಯನ್ನು ಮುಂದೂಡುವುದರಿಂದ ವಿಫಲವಾಗುವುದೋ ಆ ಯಾವುದೇ ದಾವೆಗೆ ಅನ್ವಯಿಸುವುದೆಂದು ಭಾವಿಸತಕ್ಕದ್ದಲ್ಲ.

**285. ಪೊಲೀಸ್ ಅಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳು.–** (1) ಈ ಅಧಿನಿಯಮದ ಅಥವಾ ಅದರ ಮೇರೆಗಿನ ಯಾವುದೇ ನಿಯಮ ಅಥವಾ ಉಪವಿಧಿಯ ಯಾವುದೇ ಉಪಬಂಧದ ವಿರುದ್ಧ ತನ್ನ ಮುಂದೆ ಯಾವುದೇ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯನ್ನು, ಅಂಥ ವ್ಯಕ್ತಿಯ ಹೆಸರು ಮತ್ತು ವಿಳಾಸವು ಅವನಿಗೆ ತಿಳಿದಿರದಿದ್ದರೆ ಮತ್ತು ತಗಾದೆ ಮಾಡಿದ ಮೇಲೆ ಅಂಥ ವ್ಯಕ್ತಿಯು ತನ್ನ ಹೆಸರು ಮತ್ತು ವಿಳಾಸವನ್ನು ಕೊಡದಿದ್ದರೆ ಅಥವಾ ಅಂಥ ಅಧಿಕಾರಿಯು ಸುಳ್ಳೆಂದು ನಂಬಲು ಕಾರಣವಿರುವಂಥ ಹೆಸರು ಮತ್ತು ವಿಳಾಸವನ್ನು ಕೊಟ್ಟರೆ ಯಾರೇ ಪೊಲೀಸ್ ಅಧಿಕಾರಿಯ ದಸ್ತಗಿರಿ ಮಾಡಬಹುದು.

(2) ಹಾಗೆ ದಸ್ತಗಿರಿಯಾದ ಯಾರೇ ವ್ಯಕ್ತಿಯನ್ನು, ಅವನ ನಿಜವಾದ ಹೆಸರು ಮತ್ತು ವಿಳಾಸಗಳನ್ನು ಖಚಿತಪಡಿಸಿಕೊಂಡ ತರುವಾಯ ಅಥವಾ ಅತಿ ಹತ್ತಿರದಲ್ಲಿರುವ ಮ್ಯಾಜಿಸ್ಟ್ರೇಟನ ಆದೇಶವಿಲ್ಲದೆ ಅಂಥ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕೆ ದಸ್ತಗಿರಿ ಮಾಡಿದ ಸ್ಥಳದಿಂದ ಪ್ರಯಾಣಕ್ಕೆ ಅವಶ್ಯವಾದ ಕಾಲವನ್ನು ಹೊರತುಪಡಿಸಿ ಅವನ ದಸ್ತಗಿರಿಯಾದ ಕಾಲದಿಂದ ಇಪ್ಪತ್ತುನಾಲ್ಕು ಗಂಟೆಗಳಿಗಿಂತ ಹೆಚ್ಚಾದ ಅವಧಿಗೆ ಅಭಿರಕ್ಷೆಯಲ್ಲಿ ತಡೆಹಿಡಿದಿಟ್ಟಿರತಕ್ಕದ್ದಲ್ಲ.

(3) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಉಪಬಂಧಗಳ ವಿರುದ್ಧವಾಗಿ ಮಾಡಿರುವ ಅಥವಾ ಮಾಡಲು ಪ್ರಯತ್ನಿಸದ ಯಾವುದೇ ಅಪರಾಧದ ತಕ್ಷಣದ ಮಾಹಿತಿಯನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಥವಾ ಪೌರಸಭೆಯ ಇತರ ಸಮುಚಿತ ಪ್ರಾಧಿಕಾರಿಗೆ ಕೊಡುವುದು ಮತ್ತು ಎಲ್ಲ ಪೌರಸಭಾ ಅಧಿಕಾರಿಗಳು ಮತ್ತು ನೌಕರರು ಅವರ ಎಲ್ಲ ಕಾನೂನುಸಮ್ಮತ ಅಧಿಕಾರವನ್ನು ಚಲಾಯಿಸುವುದರಲ್ಲಿ ನೆರವಾಗುವುದು ಎಲ್ಲ ಪೊಲೀಸು ಅಧಿಕಾರಿಗಳ ಕರ್ತವ್ಯಗಳಾಗಿರತಕ್ಕದ್ದು.

# ಅಧ್ಯಾಯ–XI

## ಪೌರಸಭಾ ಲೆಕ್ಕಪತ್ರಗಳು ಮತ್ತು ಆಡಳಿತ ವರದಿಗಳು

**286. ಬಜೆಟ್ ಸೇರಿಸಿರದ ವೆಚ್ಚದ ನಿಷೇಧ.–** ಇಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ ಹೊರತು, ಯಾವುದೇ ಮೊತ್ತದ ಸಂದಾಯವನ್ನು, ಬಜೆಟ್ ಮಂಜೂರಿಯಲ್ಲಿ ಅದರ ವೆಚ್ಚವನ್ನು ಸೇರಿಸಿದ್ದ ಹೊರತು ಪೌರಸಭಾ ನಿಧಿಯಿಂದ ಮಾಡತಕ್ಕದ್ದಲ್ಲ:

ಪರಂತು, ಕೆಳಕಂಡ ಬಾಬುಗಳನ್ನು ಈ ನಿಷೇಧದಿಂದ ಹೊರತುಪಡಿಸತಕ್ಕದ್ದು, ಅಂದರೆ:–

(ಕ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಮುನ್ಸಿಪಲ್ ಕೌನ್ಸಿಲು ಮಾಡಲು ಅಧಿಕೃತಗೊಳಿಸಿದಂಥ ತೆರಿಗೆಗಳ ಮರುಪಾವತಿ ಮತ್ತು ಇತರ ಹಣಗಳ ಮರುಪಾವತಿ;

(ಖ) ಕಂಟ್ರಾಕ್ಟರುಗಳಿಗೆ ಅಥವಾ ಇತರ ವ್ಯಕ್ತಿಗಳಿಗೆ ಸೇರಿದ, ಠೇವಣಿಯಲ್ಲಿಟ್ಟಿರುವ ಹಣವನ್ನು ಮತ್ತು ತಪ್ಪಿನಿಂದ ಪೌರಸಭಾ ನಿಧಿಗೆ ಸಂಗ್ರಹಿಸಿದ ಅಥವಾ ಜಮೆ ಮಾಡಿದ ಹಣದ ಮರುಸಂದಾಯಗಳು;

(ಗ) ಈ ಅಧಿನಿಯಮದ ಮೂಲಕ ಮುನ್ಸಿಪಲ್ ಕೌನ್ಸಿಲನ್ನು ನಷ್ಟ ಪರಿಹಾರದ ರೂಪದಲ್ಲಿ ಸಂದಾಯ ಮಾಡಲು ಅಗತ್ಯಪಡಿಸಿದ ಅಥವಾ ಶಕ್ತಗೊಳಿಸಿದಂಥ ಮೊತ್ತಗಳು;

(ಘ) (i) ಡೆಪ್ಯುಟಿ ಕಮಿಷನರ್ ಅಥವಾ ಸರ್ಕಾರದ ಅಥವಾ ಕಮಿಷನರ್‌ನ ಆದೇಶದ ಮೂಲಕ 307, 317ನೇ ಪ್ರಕರಣಗಳ ಮೇರೆಗೆ ಮತ್ತು ಸರ್ಕಾರದ ಆದೇಶದ ಮೂಲಕ 310, 366 ಮತ್ತು 367ನೇ ಪ್ರಕರಣಗಳ ಮೇರೆಗೆ;

(ii) ಮುನ್ಸಿಪಲ್ ಕೌನ್ಸಿಲಿನ ವಿರುದ್ಧ ಮಾಡಿದ ಸಿವಿಲ್ ನ್ಯಾಯಾಲಯದ ಡಿಕ್ರಿ ಅಥವಾ ಆದೇಶದ ಮೇರೆಗೆ; ಮತ್ತು

(iii) ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳು ಅಥವಾ ಕ್ಲೇಮಿನ ರಾಜಿಯ ಮೇರೆಗೆ

– ಸಂದಾಯ ಮಾಡಬಹುದಾದ ಪ್ರತಿಯೊಂದು ಮೊತ್ತ;

(ಙ) 88ನೇ ಪ್ರಕರಣದ (ಕ) ಖಂಡ ಮತ್ತು 246, 249 ಮತ್ತು 251ನೇ ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ವಹಿಸಿದ್ದ ವೆಚ್ಚಗಳು; ಮತ್ತು

(ಚ) ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಅಥವಾ ಮುನ್ಸಿಪಲ್ ಕೌನ್ಸಿಲುಗಳ ಮತ್ತು ಯಾವುದೇ ಇತರ ಸ್ಥಳೀಯ ಪ್ರಾಧಿಕಾರ ಅಥವಾ ಪ್ರಾಧಿಕಾರಗಳ ಪರವಾಗಿ ಸರ್ಕಾರವು ನಡೆಸುತ್ತಿರುವ ನೀರು ಸರಬರಾಜು ಔಷಧಾಲಯಗಳು, ಶಾಲೆಗಳು ಮತ್ತು ಇತರ ಸಂಸ್ಥೆಗಳ ನಿರ್ವಹಣೆಗಾಗಿ ಸರ್ಕಾರಕ್ಕೆ ಮುನ್ಸಿಪಲ್ ಕೌನ್ಸಿಲಿನಿಂದ ಸಂದಾಯವಾಗಬೇಕಾದ ಎಲ್ಲಾ ವಂತಿಗೆಗಳು.

**287. ಲೆಕ್ಕಪತ್ರಗಳ ಮಂಡನೆ.–** (1) ಚೀಫ್ ಆಫೀಸರ್ ಅಥವಾ ಮುನ್ಸಿಪಲ್ ಕಮಿಷನರ್, ಪ್ರತಿವರ್ಷ ಜನವರಿಯ 15ನೇ ದಿನದಂದು ಅಥವಾ ಅದಕ್ಕೂ ಮುಂಚಿತವಾಗಿ, ಮುಂದೆ ಬರುವ ಏಪ್ರಿಲ್ ಮೊದಲ ದಿನದಂದು ಪ್ರಾರಂಭವಾಗುವ ಮುಂಬರುವ ವರ್ಷಕ್ಕಾಗಿ ಮುನ್ಸಿಪಲ್ ಕೌನ್ಸಿಲಿನ ಆದಾಯ ಮತ್ತು ವೆಚ್ಚದ ವಿವರವಾದ ಅಂದಾಜುಗಳನ್ನೊಳಗೊಂಡ ಬಜೆಟ್ಟನ್ನು, ಮುಂದೆ ಬರುವ ಮಾರ್ಚ್ ಮೂವತ್ತೊಂದನೇ ದಿನದಂದು ಮುಕ್ತಾಯವಾಗುವ ಸರ್ಕಾರಿ ವರ್ಷಕ್ಕಾಗಿ ವಾಸ್ತವಿಕ ಲೆಕ್ಕಪತ್ರ ಮತ್ತು ನಿರೀಕ್ಷಿತ ಜಮೆಗಳು ಮತ್ತು ವೆಚ್ಚಗಳ ಸಂಪೂರ್ಣ ಲೆಕ್ಕದೊಂದಿಗೆ ತಯಾರಿಸಿ ಮುನ್ಸಿಪಲ್ ಕೌನ್ಸಿಲಿಗೆ ಒಪ್ಪಿಸತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲು, ಆ ತರುವಾಯ ಮುಂದೆ ಏಪ್ರಿಲ್ ಮೊದಲನೇ ದಿನದಂದು ಪ್ರಾರಂಭವಾಗುವ ವರ್ಷದ ಬಜೆಟ್‌ನಲ್ಲಿ ಒಳಗೊಂಡಿರುವ ವಿನಿಯೋಗಗಳು ಮತ್ತು ಮಾರ್ಗೋಪಾಯಗಳ ಮೇಲೆ ತೀರ್ಮಾನಿಸತಕ್ಕದ್ದು. ಮುನ್ಸಿಪಲ್ ಕೌನ್ಸಿಲು ಹಾಗೆ ಅಂಗೀಕರಿಸಿದ ಬಜೆಟ್‌ನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಏಕ ಕಾಲದಲ್ಲಿ ಕಮಿಷನರರಿಗೆ ಹಾಗೂ ಪಟ್ಟಣ ಪೌರಸಭೆಗಳ ಸಂಬಂಧದಲ್ಲಿ, ಜಿಲ್ಲೆಯ ಡೆಪ್ಯುಟಿ ಕಮಿಷನರಿಗೂ ಸಹ ಮಾಹಿತಿಗಾಗಿ ಕಳುಹಿಸತಕ್ಕದ್ದು.

(3) ಅಂಥ ಬಜೆಟ್ ಅಂದಾಜಿನಲ್ಲಿ, ಮುನ್ಸಿಪಲ್ ಕೌನ್ಸಿಲು ಇತರ ವಿಷಯಗಳ ಜೊತೆಗೆ,–

(ಕ) ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಮುನ್ಸಿಪಲ್ ಕೌನ್ಸಿಲಿನ ಮೇಲೆ ವಿಧಿಸಲಾಗಿರುವ ಹಲವಾರು ಕರ್ತವ್ಯಗಳನ್ನು ಈಡೇರಿಸುವುದಕ್ಕಾಗಿ ಅಗತ್ಯಪಡಿಸಬಹುದಾದಂಥ ಸೇವೆಗಾಗಿ ಸಾಕಷ್ಟು ಮತ್ತು ಸೂಕ್ತ ವ್ಯವಸ್ಥೆಗಳನ್ನು ಮಾಡತಕ್ಕದ್ದು;

(ಖ) ಮುನ್ಸಿಪಲ್ ಕೌನ್ಸಿಲು ಮಾಡಿದ ಸಾಲಗಳಿಗೆ ಸಂಬಂಧಿಸಿದಂತೆ, ಅದು ಹೊಣೆಯಾಗಬಹುದಾದ ಅಸಲು ಮತ್ತು ಬಡ್ಡಿಯ ಎಲ್ಲಾ ಕಂತುಗಳು, ಅವು ಬಾಕಿಯಾದಂತೆಲ್ಲಾ ಸಂದಾಯಕ್ಕಾಗಿ ವ್ಯವಸ್ಥೆ ಮಾಡತಕ್ಕದ್ದು;

(ಗ) 366, 367ನೇ ಪ್ರಕರಣಗಳ ಮೇರೆಗೆ ಸರ್ಕಾರಕ್ಕೆ ಸಂದಾಯವಾಗಬೇಕಾದ ಎಲ್ಲ ಮೊತ್ತಗಳ ಮತ್ತು ಮುನ್ಸಿಪಲ್ ಕೌನ್ಸಿಲು ಮತ್ತು ಯಾವುದೇ ಇತರ ಸ್ಥಳೀಯ ಪ್ರಾಧಿಕಾರ ಅಥವಾ ಪ್ರಾಧಿಕಾರಗಳ ಪರವಾಗಿ ಸರ್ಕಾರವು ನಡೆಸಿದ ನೀರು ಸರಬರಾಜು, ಔಷಧಾಲಯಗಳು, ಶಾಲೆಗಳು ಮತ್ತು ಇತರ ಸಂಸ್ಥೆಗಳು ಅಥವಾ ಸೇವೆಗಳ ನಿರ್ವಹಣೆಗಾಗಿ ಎಲ್ಲಾ ವಂತಿಕೆಗಳ ಸಂದಾಯಕ್ಕಾಗಿ ವ್ಯವಸ್ಥೆ ಮಾಡತಕ್ಕದ್ದು; ಮತ್ತು

(ಘ) ಸದರಿ ವರ್ಷದ ಕೊನೆಯಲ್ಲಿ ಮೂರು ತಿಂಗಳ ಅವಧಿಗಾಗಿ ಸಿಬ್ಬಂದಿ ಖರ್ಚುಗಳನ್ನು ಭರಿಸಲು ಅಗತ್ಯಪಡಿಸಬಹುದಾದಂಥ ಮೊತ್ತಕ್ಕಿಂತ ಕಡಿಮೆಯಿಲ್ಲದ ಶಿಲ್ಕಿಗಾಗಿ ಅವಕಾಶ ಮಾಡಿ ಕೊಡತಕ್ಕದ್ದು.

(4) ಹಾಗೆ ಒಪ್ಪಿಸಿದ ಬಜೆಟು, (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗಾಗಿ ಸಾಕಷ್ಟು ವ್ಯವಸ್ಥೆ ಮಾಡಲು ತಪ್ಪಿದರೆ, ಸರ್ಕಾರವು ಅಂಥ ವ್ಯವಸ್ಥೆಯನ್ನು ಮಾಡುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಹಾಗೆ ಬಜೆಟಿನ ಯಾವುದೇ ಭಾಗವನ್ನು ಮಾರ್ಪಾಟು ಮಾಡಬಹುದು.

(5) ಸರ್ಕಾರವು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧದ ಅನುಪಾಲನೆಯನ್ನು ಸುನಿಶ್ಚಿತಗೊಳಿಸುವ ಹಾಗೆ ಬಜೆಟನ್ನು ಅಥವಾ ಅದರ ಯಾವುವೇ ಭಾಗವನ್ನು ಸಹ ಮಾರ್ಪಾಟು ಮಾಡಬಹುದು:

ಪರಂತು, ನಗರ ಮುನ್ಸಿಪಲ್ ಕೌನ್ಸಿಲಿನ ಸಂಬಂಧದಲ್ಲಿ ಸ್ಥಾಯೀ ಸಮಿತಿ ಅಥವಾ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಯಾವುದೇ ಇತರ ಸಮಿತಿಯು, ಈ ಪ್ರಕರಣದ ಮೇರೆಗೆ ಮಂಜೂರು ಮಾಡಿರುವ ಬಜೆಟ್‌ನ ವ್ಯಾಪ್ತಿಯಲ್ಲಿ ಒಂದೇ ಪ್ರಧಾನ ಶೀರ್ಷಿಕೆಯ ಅಡಿಯಲ್ಲಿ ಮತ್ತು ಅದೇ ಸಮಿತಿಯ ನಿಯಂತ್ರಣದಲ್ಲಿರುವ ಒಂದು ಉಪಶೀರ್ಷಿಕೆಯಿಂದ ಇನ್ನೊಂದಕ್ಕೆ ಅಥವಾ ಒಂದು ಚಿಕ್ಕ ಶೀರ್ಷಿಕೆಯಿಂದ ಇನ್ನೊಂದು ಚಿಕ್ಕ ಶೀರ್ಷಿಕೆಗೆ ಐದುನೂರು ರೂಪಾಯಿಗಳಿಗೆ ಮೀರದ ಮರು ವಿನಿಯೋಗ ಮಂಜೂರು ಮಾಡಬಹುದು. ಅಂಥ ಮರು ವಿನಿಯೋಗದ ಒಂದು ವಿವರಣ ಪಟ್ಟಿಯನ್ನು ಪ್ರತಿ ತ್ರೈಮಾಸಿಕ ಸಾಮಾನ್ಯ ಸಭೆಯಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ಒಪ್ಪಿಸತಕ್ಕದ್ದು.

**288. ಬಜೆಟ್‌ನ ಪರಿಷ್ಕರಣೆ.–** ಸರ್ಕಾರಿ ವರ್ಷದಲ್ಲಿ ಮುನ್ಸಿಪಲ್ ಕೌನ್ಸಿಲಿಗೆ, ಅದರ ಜಮೆಗಳು ಅಥವಾ ಅದು ಕೈಗೊಳ್ಳುವ ವಿವಿಧ ಸೇವೆಗಳ ಮೇಲೆ ವೆಚ್ಚ ಮಾಡಬೇಕಾದ ಮೊಬಲಗುಗಳನ್ನು ಹಂಚುವಿಕೆಯ ಬಗ್ಗೆ ಬಜೆಟ್‌ನಲ್ಲಿ ತೋರಿಸಿರುವ ಅಂಕಿಗಳನ್ನು ಮಾರ್ಪಾಡುಗೊಳಿಸುವುದು ಅವಶ್ಯವೆಂದು ಕಂಡುಬಂದರೆ, ಅದು ಹಾಗೆ ಮಾಡಬಹುದು:

ಪರಂತು ಸರ್ಕಾರದ ಅನುಮೋದನೆ ಇಲ್ಲದೆ,–

(ಕ) 287ನೇ ಪ್ರಕರಣದ (3)ನೇ ಉಪಪ್ರಕರಣದ (ಖ) ಮತ್ತು (ಗ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಹಲವಾರು ಬಾಬುಗಳಿಗೆ ಹಂಚಲಾದ ಮೊಬಲಗುಗಳಲ್ಲಿ ಯಾವುದೇ ಕಡತವನ್ನು ಮಾಡತಕ್ಕದ್ದಲ್ಲ; ಮತ್ತು

(ಖ) 287ನೇ ಪ್ರಕರಣದ (3)ನೇ ಉಪಪ್ರಕರಣದ (ಫ) ಖಂಡದ ಮೇರೆಗೆ ನಿಗದಿಪಡಿಸಿದ ಮೊತ್ತಕ್ಕಿಂತ ಕೊನೆಯ ಶಿಲ್ಕನ್ನು ಕಡಿಮೆ ಮಾಡತಕ್ಕದ್ದಲ್ಲ.

**289. ಲೆಕ್ಕಪತ್ರಗಳ ನಿರ್ವಹಣೆ ಮತ್ತು ವೆಚ್ಚದ ಮೇಲೆ ನಿರ್ಬಂಧಗಳು:–** (1) ಪೌರಸಭಾ ನಿಧಿಯ ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಇಡತಕ್ಕದ್ದು ಮತ್ತು ಅಂಗೀಕರಿಸಿದ ಜಮೆಗಳು ಮತ್ತು ಈ ಬಗ್ಗೆ ನಿಯಮಿಸಿದ ನಿಯಮಗಳಿಗನುಸಾರವಾಗಿ ಪೌರಸಭಾ ನಿಧಿಯಿಂದ ಸಂದಾಯವನ್ನು ಮಾಡತಕ್ಕದ್ದು.

(2) ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿದ್ದ ಹೊರತು, ಪೌರಸಭಾ ನಿಧಿಯಿಂದ ಮಾಡಲಾದ ವೆಚ್ಚವನ್ನು ಈ ಬಗ್ಗೆ ನಿಯಮಿಸಿದ ನಿಯಮಗಳಲ್ಲಿ ವಿಧಿಸಿದ ನಿರ್ಬಂಧಗಳು, ಷರತ್ತುಗಳು ಮತ್ತು ಪರಿಮಿತಿಗಳಿಗೆ ಒಳಪಟ್ಟು ವಹಿಸತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲು ಏಪ್ರಿಲ್‌ನಲ್ಲಿನ ಸಾಮಾನ್ಯ ಸಭೆಯಲ್ಲಿ ಅಥವಾ ಕಳೆದ ಸರ್ಕಾರಿ ವರ್ಷದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯ ತರುವಾಯ, ಅಂಥ ಲೆಕ್ಕ ಪರಿಶೋಧನೆಯು, ಸಾಮಾನ್ಯ ಸಭೆಗಿಂತ ಮುಂಚೆ ನಡೆಯದಿದ್ದರೆ ಕಳೆದ ಸರ್ಕಾರಿ ವರ್ಷದ ಲೆಕ್ಕಪತ್ರಗಳನ್ನು ಅಂಗೀಕರಿಸತಕ್ಕದ್ದು.

**290. ಲೆಕ್ಕಪತ್ರಗಳ ಲೆಕ್ಕ ಪರಿಶೋಧನ.–** (1) ಪೌರಸಭಾ ಲೆಕ್ಕಪತ್ರಗಳು ಕಾಲಕಾಲಕ್ಕೆ ಮತ್ತು ಕನಿಷ್ಠಪಕ್ಷ ಪ್ರತಿ ವರ್ಷದಲ್ಲಿ ಒಂದು ಬಾರಿ ಸರ್ಕಾರದಿಂದ ನೇಮಕಗೊಂಡ ಲೆಕ್ಕಪರಿಶೋಧಕನಿಂದ ಪರಿಶೋಧನೆಯಾಗತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲಿನ ನಿಯಮಗಳಲ್ಲಿ ನಿಯಮಿಸಬಹುದಾದಂಥ ಇತರ ಏಜೆನ್ಸಿ ಯಾವುದಾದರೂ ಇದ್ದರೆ ಅದರಿಂದ ಸಹ ಲೆಕ್ಕ ಪರಿಶೋಧನೆಯನ್ನು ಮಾಡಿಸತಕ್ಕದ್ದು.

(2) ಲೆಕ್ಕಪರಿಶೋಧಕ ಅಥವಾ ಲೆಕ್ಕಪರಿಶೋಧಕರಿಗೆ ಅವರ ಪದದ ಉದ್ದೇಶಗಳಿಗಾಗಿ ಮುನ್ಸಿಪಲ್ ಕೌನ್ಸಿಲಿನ ಎಲ್ಲಾ ಲೆಕ್ಕಪತ್ರಗಳು ಮತ್ತು ಇತರೆ ದಾಖಲೆಗಳನ್ನು ನೋಡುವ ಅವಕಾಶವಿರತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲು ಪೌರಸಭಾ ನಿಧಿಯಿಂದ ಲೆಕ್ಕಪರಿಶೋಧನಾ ಕಾರ್ಯಕ್ಕಾಗಿ ಒಪ್ಪಿಕೊಳ್ಳಬಹುದಾದಂಥ ವೆಚ್ಚಗಳನ್ನು ಮತ್ತು ಸರ್ಕಾರಿ ಲೆಕ್ಕಪರಿಶೋಧಕನ ಸಂದರ್ಭದಲ್ಲಿ, ಸರ್ಕಾರದಿಂದ ನಿಯಮಿಸಬಹುದಾದಂಥ ವೆಚ್ಚಗಳನ್ನು ಸಂದಾಯ ಮಾಡತಕ್ಕದ್ದು.

**291. ದಸ್ತಾವೇಜುಗಳ ಹಾಜರುಪಡಿಸುವಿಕೆ ಮತ್ತು ಸಂಬಂಧಪಟ್ಟ ವ್ಯಕ್ತಿಗಳ ಹಾಜರಾತಿಯನ್ನು ಅಗತ್ಯಪಡಿಸಲು ಲೆಕ್ಕಪರಿಶೋಧಕನ ಅಧಿಕಾರ ಇತ್ಯಾದಿ.–** (1) 290ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸರ್ಕಾರದಿಂದ ನೇಮಕಗೊಂಡ ಲೆಕ್ಕಪರಿಶೋಧಕನು,–

(ಕ) ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಯೋಚಿಸುವಂಥ ಓಚರುಗಳು, ವಿವರಣೆಗಳು, ವಿವರಪಟ್ಟಿಕೆಗಳು, ಪತ್ರವ್ಯವಹಾರಗಳು, ಟಿಪ್ಪಣಿಗಳು ಅಥವಾ ಇತರ ದಸ್ತಾವೇಜುಗಳನ್ನು ಹಾಜರುಪಡಿಸಲು ಬರಹದ ಮೂಲಕ ಅಗತ್ಯಪಡಿಸಬಹುದು;

(ಖ) ಮುನ್ಸಿಪಲ್ ಕೌನ್ಸಿಲಿನ ಅಂಥ ಓಚರುಗಳು, ವಿವರಣೆಗಳು, ವಿವರ ಪಟ್ಟಿಕೆಗಳು, ಪತ್ರವ್ಯವಹಾರ, ಟಿಪ್ಪಣಿಗಳು ಅಥವಾ ಇತರ ಯಾವುವೇ ದಸ್ತಾವೇಜುಗಳು ಅಥವಾ ಯಾವುದೇ ಸ್ವತ್ತಿನ ಬಗ್ಗೆ ಜವಾಬ್ದಾರನಾಗಿರುವ ಅಥವಾ ಅಭಿರಕ್ಷೆ ಅಥವಾ ನಿಯಂತ್ರಣ ಹೊಂದಿರುವ ಮುನ್ಸಿಪಲ್ ಕೌನ್ಸಿಲಿನ ಯಾವುದೇ

ಸಂಬಳ ಪಡೆಯುವ ನೌಕರನನ್ನು ಅಥವಾ ಮುನ್ಸಿಪಲ್ ಕೌನ್ಸಿಲಿನ ಅಥವಾ ಅದರ ಅಧೀನದಲ್ಲಿ ತಾನಾಗಲಿ ಅಥವಾ ತನ್ನ ಪಾಲುದಾರನ ಮೂಲಕವಾಗಿಯಾಗಲಿ ಯಾವುದೇ ಕರಾರಿನಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾರೇ ವ್ಯಕಿಯನ್ನು ಪೌರಸಭಾ ಕಚೇರಿಯಲ್ಲಿ ತನ್ನ ಮುಂದೆ ಖುದ್ದಾಗಿ ಹಾಜರಾಗಲು ಯಾವುದೇ ಪ್ರಶ್ನೆಯನ್ನು ಉತ್ತರಿಸಲು ಬರಹದಲ್ಲಿ ಅಗತ್ಯಪಡಿಸಬಹುದು; ಮತ್ತು

(ಗ) ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷ ಅಥವಾ ಇತರ ಗೌರವ ಅಧಿಕಾರಿ ಅಥವಾ ಸದಸ್ಯರಿಂದ ಬರಹದಲ್ಲಿ ವಿವರಣೆಯು ಅಗತ್ಯವಿರುವ ಸಂದರ್ಭದಲ್ಲಿ ಅಂಥ ವ್ಯಕ್ತಿಯನ್ನು ತನ್ನನ್ನು ಪೌರಸಭಾ ಕಚೇರಿಯಲ್ಲಿ ಭೇಟಿಯಾಗಲು ಆಹ್ವಾನಿಸಬಹುದು ಮತ್ತು ಅವನ ವಿವರಣೆಯು ಅಗತ್ಯವಿರುವಂಥ ಅಂಶವನ್ನು ಬರಹದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(2) ಲೆಕ್ಕಪರಿಶೋಧಕನು (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಕಡ್ಡಾಯ ಕೋರಿಕೆ ಅಥವಾ ಆಹ್ವಾನದಲ್ಲಿ ಸದರಿ ಕಡ್ಡಾಯ ಕೋರಿಕೆ ಅಥವಾ ಆಹ್ವಾನವನ್ನು ಪಾಲಿಸಲು ಮೂರು ದಿನಗಳಿಗೆ ಕಡಿಮೆ ಇಲ್ಲದ ಯುಕ್ತ ಅವಧಿಯನ್ನು ನಿಗದಿಪಡಿಸಬಹುದು.

(3) ಲೆಕ್ಕಪರಿಶೋಧಕನು ಮುನ್ಸಿಪಲ್ ಕೌನ್ಸಿಲಿಗೆ ಲೆಕ್ಕ ಪರಿಶೋಧನೆಯನ್ನು ಪ್ರಾರಂಭಿಸಲು ತಾನು ಉದ್ದೇಶಪಡುವಂಥ ದಿನಾಂಕದ ಬಗೆಗಿನ ಬರಹದ ನೋಟೀಸನ್ನು ಎರಡು ವಾರಕ್ಕೆ ಕಡಿಮೆಯಿಲ್ಲದ ಅವಧಿಗೆ ಕೊಡತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ಲೆಕ್ಕಪರಿಶೋಧಕನು, ಬರಹದಲ್ಲಿ ದಾಖಲೆ ಮಾಡಬೇಕಾದಂಥ ವಿಶೇಷ ಕಾರಣಗಳಿಗಾಗಿ ಎರಡು ವಾರಗಳಿಗಿಂತ ಕಡಿಮೆ ನೋಟೀಸನ್ನು ಕೊಡಬಹುದು ಅಥವಾ ನೋಟೀಸನ್ನು ಕೊಡದೆಯೇ ಕಮಿಷನರ್ ಅಧಿಕಾರದ ಮೇಲೆ ವಿಶೇಷ ಅಥವಾ ವಿವರವಾದ ಲೆಕ್ಕ ಪರಿಶೋಧನೆಯನ್ನು ಪ್ರಾರಂಭಿಸಬಹುದು.

**292. 291ನೇ ಪ್ರಕರಣದ ಮೇರೆಗೆ ಕಡ್ಡಾಯ ಕೋರಿಕೆಯ ಉಲ್ಲಂಘನೆಗಾಗಿ ದಂಡ.–** (1) ಯಾರೇ ವ್ಯಕ್ತಿಯು, 291ನೇ ಪ್ರಕರಣದ (1)ನೇ ಉಪಪ್ರಕರಣದ (ಕ), (ಖ) ಅಥವಾ (ಗ) ಖಂಡದ ಮೇರೆಗೆ ಅವನಿಗೆ ಕಾನೂನು ಬದ್ಧನಾಗಿ ಮಾಡಿದ ಯಾವುದೇ ಕಡ್ಡಾಯ ಕೋರಿಕೆಯನ್ನು ಪಾಲಿಸಲು ಬುದ್ಧಿಪೂರ್ವಕವಾಗಿ ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ ಅವನು ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ಕಮಿಷನರ್‌ನ ಯಾವುದೇ ಬರಹದಲ್ಲಿನ ವ್ಯವಹರಣೆಗಳನ್ನು ಮಂಜೂರಾತಿಯ ಹೊರತು ಹೂಡತಕ್ಕದ್ದಲ್ಲ:

ಮತ್ತು ಪರಂತು, ಅಂಥ ಮಂಜೂರಾತಿಯನ್ನು ಕೊಡುವುದಕ್ಕೆ ಮುಂಚೆ, ಕಮಿಷನರನು ಯಾರ ಮೇಲೆ ವ್ಯವಹರಣೆಗಳನ್ನು ಹೂಡಬೇಕಾಗಿದೆಯೋ, ಆ ವ್ಯಕ್ತಿಯನ್ನು ಮಂಜೂರಾತಿಯನ್ನು ಏಕೆ ಕೊಡಬಾರದೆಂಬುದಕ್ಕೆ ಕಾರಣ ತೋರಿಸಲು ಕೋರತಕ್ಕದ್ದು.

**293. ಸರ್ಕಾರವು ನಿರ್ದೇಶಿಸಬಹುದಾದಂತೆ ಕೆಲವು ಅಧಿಕಾರಿಗಳಿಗೆ ಮತ್ತು ನಿಕಾಯಗಳಿಗೆ ಲೆಕ್ಕಪರಿಶೋಧನಾ ವರದಿಯನ್ನು ಕಳಿಸತಕ್ಕದ್ದು.–** ಲೆಕ್ಕಪರಿಶೋಧನೆಯ ಮುಕ್ತಾಯದ ತರುವಾಯ ಕಾರ್ಯ ಸಾಧ್ಯವಾದಷ್ಟು ಬೇಗ, ಆದರೆ ಆ ತರುವಾಯ ಮೂರು ತಿಂಗಳಿಗೆ ಮೀರದೇ, ಲೆಕ್ಕಪರಿಶೋಧಕನು ಲೆಕ್ಕ ಪರಿಶೋಧಿಸಿದ ಮತ್ತು ಪರೀಕ್ಷಿಸಿದ ಲೆಕ್ಕಪತ್ರಗಳ ಮೇಲೆ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅಂಥ

ವರದಿಯನ್ನು ಸಂಬಂಧಿಸಿದ ಮುನ್ಸಿಪಲ್ ಕೌನ್ಸಿಲಿಗೆ ಮತ್ತು ಕಮಿಷನರ್‌ನಿಗೆ ಮತ್ತು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರಾಕ್ಟರನಿಗೆ ಕಳುಹಿಸತಕ್ಕದ್ದು.

**294. ಲೆಕ್ಕಪರಿಶೋಧನಾ ವರದಿಯು ಒಳಗೊಂಡಿರಬೇಕಾದ ಅಂಶಗಳು.–** ಲೆಕ್ಕಪರಿಶೋಧಕನು, ತನ್ನ ವರದಿಯಲ್ಲಿ,–

(ಕ) ಕಾನೂನಿಗೆ ತದ್ವಿರುದ್ಧವಾಗಿರುವುದಾಗಿ ಅವನಿಗೆ ಕಂಡುಬರುವಂಥ ಪ್ರತಿಯೊಂದು ಸಂದಾಯ;

(ಖ) ಯಾರೇ ವ್ಯಕ್ತಿಯ ಅತೀವ ನಿರ್ಲಕ್ಷತೆ ಅಥವಾ ದುರ್ವರ್ತನೆಯಿಂದ ಉಂಟಾಗಿರಬಹುದೆಂದು ತೋರುವಂಥ ಯಾವುದೇ ಕೊರತೆ ಅಥವಾ ನಷ್ಟದ ಮೊಬಲಗು;

(ಗ) ಯಾರೇ ವ್ಯಕ್ತಿಯು ಸ್ವೀಕರಿಸಲೇಬೇಕಾದ ಅಂದರೆ ಲೆಕ್ಕಕ್ಕೆ ತೆಗೆದುಕೊಳ್ಳದೆ ಇರುವ ಯಾವುದೇ ಮೊತ್ತದ ಮೊಬಲಗು; ಮತ್ತು

(ಘ) (ಕ), (ಖ) ಮತ್ತು (ಗ) ಖಂಡಗಳಲ್ಲಿ ಮಾಡಿರುವ, ನಮೂದಿಸಿರುವುದನ್ನು ಹೊರತುಪಡಿಸಿ ಲೆಕ್ಕಪತ್ರಗಳನ್ನು ಅವನು ಗಮನಿಸಬಹುದಾದ ಮುಖ್ಯ ಅನುಚಿತತೆ ಅಥವಾ ದೋಷ ಇವುಗಳ ಬಗ್ಗೆ ವಿವರಣೆಯನ್ನು ಸೇರಿತಕ್ಕದ್ದು.

**295. ಮುನ್ಸಿಪಲ್ ಕೌನ್ಸಿಲು ದೋಷವನ್ನು ಪರಿಹರಿಸಿಕೊಳ್ಳತಕ್ಕದ್ದು.–** 293ನೇ ಪ್ರಕರಣದ ಮೇರೆಗೆ ಲೆಕ್ಕಪರಿಶೋಧಕನ ವರದಿಯ ತರುವಾಯ ಅನುಸರಿಸಬೇಕಾದ ಪ್ರಕ್ರಿಯೆ:–

(1) 293ನೇ ಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ, ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು, ವರದಿಯಲ್ಲಿ ತೋರಿಸಬಹುದಾದಂಥ ಯಾವುವೇ ದೋಷಗಳು ಅಥವಾ ಕ್ರಮ ದೋಷಗಳನ್ನು ಪರಿಹರಿಸತಕ್ಕದ್ದು ಮತ್ತು ಆ ವರದಿಯನ್ನು ಸ್ವೀಕರಿಸಿದ ಎರಡು ತಿಂಗಳೊಳಗೆ ಅದರ ಮೇಲೆ ಕೈಗೊಳ್ಳಲಾದ ಅಥವಾ ಅದರ ಮೇಲೆ ಕೈಗೊಳ್ಳಬೇಕೆಂದು ಉದ್ದೇಶಿಸಿದ ಕ್ರಮದ ವಿವರಪತ್ರ ಹಾಗೂ ಅದರ ಬಗೆಗಿನ ವಿವರಣೆಯೊಂದಿಗೆ ಆ ವರದಿಯನ್ನು ಮುನ್ಸಿಪಲ್ ಕೌನ್ಸಿಲಿನ ಸಭೆಯ ಮುಂದಿಡತಕ್ಕದ್ದು. ಅವನು, ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗಾಗಿ, ವರದಿಯಲ್ಲಿ ತೋರಿಸಿದ ಯಾವುವೇ ದೋಷಗಳನ್ನು ಅಥವಾ ಕ್ರಮದೋಷಗಳನ್ನು ಯಾವುವಾದರೂ ಇದ್ದರೆ, ಅವುಗಳನ್ನು ಅವನು ಪರಿಹರಿಸುವ ಬಗೆಗಿನ ಸೂಚನೆಯನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರನಿಗೂ ಸಹ ಕಳುಹಿಸತಕ್ಕದ್ದು ಅಥವಾ ಸದರಿ ಅವಧಿಯೊಳಗೆ ಮುನ್ಸಿಪಲ್ ಕೌನ್ಸಿಲು ಕೊಡಲು ಇಚ್ಛಿಸಬಹುದಾದಂಥ ದೋಷಗಳು ಅಥವಾ ಕ್ರಮದೋಷಗಳ ಬಗ್ಗೆ ಹೆಚ್ಚಿನ ವಿವರಣೆಯನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರನಿಗೆ ಒದಗಿಸತಕ್ಕದ್ದು.

(2) ಅಂಥ ಸೂಚನೆ ಅಥವಾ ವಿವರಣೆಯನ್ನು ಸ್ವೀಕರಿಸಿದ ಮೇಲೆ, ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರನು, ವರದಿಯನ್ನು ಚರ್ಚಿಸಿದ ಎಲ್ಲಾ ಅಥವಾ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ,–

(ಕ) ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಕೊಟ್ಟ ಸೂಚನೆ ಅಥವಾ ವಿವರಣೆಯನ್ನು ಅಂಗೀಕರಿಸಬಹುದು ಮತ್ತು ಆಕ್ಷೇಪಣೆಯನ್ನು ಹಿಂದಕ್ಕೆ ತೆಗೆದುಕೊಳ್ಳಬಹುದು; ಅಥವಾ

(ಖ) ಆ ವಿಷಯವನ್ನು ಮುಂದಿನ ಲೆಕ್ಕಪರಿಶೋಧನೆಯಲ್ಲಿ ಅಥವಾ ಯಾವುದೇ ಮುಂಚಿನ ದಿನದಂದು ಮರು ತನಿಖೆ ಮಾಡಬೇಕೆಂದು ನಿರ್ದೇಶಿಸಬಹುದು; ಅಥವಾ

(ಗ) ವರದಿಯಲ್ಲಿ ತೋರಿಸಿದ ದೋಷಗಳು ಅಥವಾ ಕ್ರಮದೋಷಗಳು ಅಥವಾ ಅವುಗಳಲ್ಲಿ ಯಾವುದನ್ನೇ ಆದರೂ ತೆಗೆದುಹಾಕಿಲ್ಲ ಅಥವಾ ಪರಿಹರಿಸಿಲ್ಲವೆಂದು ತೀರ್ಮಾನಿಸಬಹುದು.

(3) ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರನು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಮುನ್ಸಿಪಲ್ ಕಮಿಷನರನ ಅಥವಾ ಚೀಫ್ ಆಫೀಸರನ ದಿನಾಂಕದಿಂದ ಒಂದು ತಿಂಗಳೊಳಗೆ ಅಥವಾ ಸದರಿ ಉಪಪ್ರಕರಣದಲ್ಲಿ ಹೇಳಿದ ಮೂರು ತಿಂಗಳುಗಳ ಅವಧಿಯು ಮುಕ್ತಾಯವಾದ ಮೇಲೆ ಅಂಥ ಸೂಚನೆ ಅಥವಾ ವಿವರಣೆಯನ್ನು ಕೊಡಲು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ತಪ್ಪುವ ಸಂದರ್ಭದಲ್ಲಿ, ಕಮಿಷನರನಿಗೆ ತನ್ನ ತೀರ್ಮಾನದ ವರದಿಯನ್ನು ಕಳುಹಿಸತಕ್ಕದ್ದು ಮತ್ತು ಅಂಥ ವರದಿಯ ಒಂದು ಪ್ರತಿಯನ್ನು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನಿಗೆ ಕಳಿಸತಕ್ಕದ್ದು. ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರನು, ಯಾವುವೇ ದೋಷಗಳನ್ನು ಅಥವಾ ಕ್ರಮದೋಷಗಳನ್ನು ತೆಗೆದುಹಾಕಿಲ್ಲ ಅಥವಾ ಪರಿಹರಿಸಿಲ್ಲವೆಂದು ತೀರ್ಮಾನಿಸಿದ್ದರೆ, ಅವನ ಅಭಿಪ್ರಾಯದಲ್ಲಿ ಆ ದೋಷಗಳು ಅಥವಾ ಕ್ರಮದೋಷಗಳನ್ನು ಸಕ್ರಮಗೊಳಿಸಬಹುದೇ ಎಂಬ ಬಗ್ಗೆ ಮತ್ತು ಹಾಗಿದ್ದರೆ ಯಾವ ವಿಧಾನದಿಂದ ಎಂಬುದನ್ನು ಮತ್ತು ಸಕ್ರಮಗೊಳಿಸಲಾಗದಿದ್ದರೆ ಅವುಗಳನ್ನು ಮನ್ನಾ ಮಾಡಬಹುದೇ ಎಂಬ ಬಗ್ಗೆ ಮತ್ತು ಹಾಗಿದ್ದರೆ ಯಾವ ಪ್ರಾಧಿಕಾರಿಯಿಂದ ಎಂಬುದನ್ನು ವರದಿಯಲ್ಲಿ ಹೇಳಬಹುದು. ದೋಷಗಳು ಅಥವಾ ಕ್ರಮದೋಷಗಳು ಸಂಬಂಧಿಸಿರುವಂಥ ಮೊಬಲಗುಗಳನ್ನು ತನ್ನ ಅಭಿಪ್ರಾಯದಲ್ಲಿ ಅಧಿಭಾರ ಅಥವಾ ಋಣಭಾರವಾಗಿ ಹೊರಿಸಬಹುದೇ ಎಂಬುದನ್ನು ಹೇಳತಕ್ಕದ್ದು.

(4) ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲು, ತನ್ನ ಮುಂದಿನ ಆಡಳಿತ ವರದಿಯಲ್ಲಿ, (2)ನೇ ಉಪ–ಪ್ರಕರಣದ (ಗ) ಖಂಡದ ಅಡಿಯಲ್ಲಿ ಬರುವ ದೋಷಗಳು ಮತ್ತು ಕ್ರಮದೋಷಗಳೊಡನೆ ವ್ಯವಹರಿಸುವ 293ನೇ ಪ್ರಕರಣದ ಮೇರೆಗಿನ ವರದಿಯ ಅಂಥ ಭಾಗಗಳನ್ನು, (1)ನೇ ಉಪ–ಪ್ರಕರಣದ ಮೇರೆಗೆ ಕೊಟ್ಟ ಅದರ ವಿವರಣೆ ಯಾವುದಾದರೂ ಇದ್ದರೆ, ಅದರೊಡನೆ (3)ನೇ ಉಪಪ್ರಕರಣದ ಮೇರೆಗೆ ಅದರ ಮೇಲಿನ ರಾಜ್ಯ ಲೆಕ್ಕ ಪತ್ರಗಳ ಇಲಾಖೆಯ ಕಂಟ್ರೋಲರ್ ಅಂತಿಮ ವರದಿಯನ್ನು ಸೇರಿಸತಕ್ಕದ್ದು. ಅಂಥ ದೋಷಗಳು ಮತ್ತು ಕ್ರಮದೋಷಗಳು ಮತ್ತು ವಿವರಣೆಯ ವರದಿಯನ್ನು ಸೇರಿಸತಕ್ಕದ್ದು. ಅಂಥ ದೋಷಗಳು ಮತ್ತು ಕ್ರಮದೋಷಗಳು ಮತ್ತು ವಿವರಣೆಯ ಅಂಥ ವರದಿಯು, ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಅವಧಿಯವರೆಗೆ ಮುನ್ಸಿಪಲ್ ಕೌನ್ಸಿಲಿನ ಕಚೇರಿಯಲ್ಲಿ ಸಾರ್ವಜನಿಕರ ಪರಿಶೀಲನೆಗಾಗಿ ಮುಕ್ತವಾಗಿರತಕ್ಕದ್ದು.

(5) ಈ ಪ್ರಕರಣದಲ್ಲಿರುವುದಾವುದೂ, ಯಾವುದೇ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರನು ಯಾವುದೇ ಕಾಲದಲ್ಲಿ ಅಪರಾಧಿಕ ದುರ್ವಿನಿಯೋಗದ ಅಥವಾ ಮೋಸದ ಪೂರ್ವಭಾವನೆಯನ್ನು ಬೆಂಬಲಿಸುವುದೆಂದು ಅವನಿಗೆ ಕಂಡುಬರುವಂಥ ಅಥವಾ ಅವನ ಅಭಿಪ್ರಾಯದಲ್ಲಿ, ವಿಶೇಷ ಗಮನ ಅಥವಾ ತಕ್ಷಣ ತನಿಖೆ ತಕ್ಕಂಥ ಯಾವುದೇ ಮಾಹಿತಿಯನ್ನು ಕಮಿಷನರನು ಅವಶ್ಯವೆಂದು ಪರಿಗಣಿಸಬಹುದಾದಂಥ ಕ್ರಮಕ್ಕಾಗಿ, ಕಮಿಷನರನ ಗಮನಕ್ಕೆ ತರುವುದನ್ನು ಅಡ್ಡಿಪಡಿಸತಕ್ಕದ್ದಲ್ಲ.

**296. ಅತೀವ ನಿರ್ಲಕ್ಷ್ಯತೆ ಅಥವಾ ದುರ್ವರ್ತನೆಯಿಂದ ಉಂಟಾದ ಕಾನೂನುಬಾಹಿರ ಸಂದಾಯ ಅಥವಾ ನಷ್ಟಕ್ಕೆ ಕಮಿಷನರನು ಅಧಿಭಾರ ಅಥವಾ ವೆಚ್ಚ ಹೊರಿಸತಕ್ಕದ್ದು.–** (1) ಕಮಿಷನರನು, ರಾಜ್ಯಲೆಕ್ಕಪತ್ರಗಳ ಇಲಾಖೆಯ ಕಂಟ್ರೋಲರನ ಶಿಫಾರಸ್ಸನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಸಂಬಂಧಪಟ್ಟ ವ್ಯಕ್ತಿಯ ವಿವರಣೆಯನ್ನು ಪಡೆದುಕೊಂಡ ಅಥವಾ ಅವನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಹೆಚ್ಚಿನ ವಿಚಾರಣೆಯನ್ನು ಮಾಡಿದ ತರುವಾಯ, ಅವನಿಗೆ ಕಾನೂನಿಗೆ ತದ್ವಿರುದ್ಧವಾಗಿದೆಯೆಂದು ಅವನಿಗೆ ಕಂಡುಬರುವ ಯಾವುದೇ ಬಾಬನ್ನು ತಿರಸ್ಕರಿಸಬಹುದು ಮತ್ತು ಕಾನೂನುಬಾಹಿರ ಸಂದಾಯ ಮಾಡುವ ಅಥವಾ ಹಾಗೆ ಮಾಡುವುದನ್ನು ಅಧಿಕೃತಗೊಳಿಸುವ ವ್ಯಕ್ತಿಯ ಮೇಲೆ ಅದನ್ನು ಅಧಿಭಾರವಾಗಿ ಹೊರಿಸಬಹುದು, ಮತ್ತು ಆ

ವ್ಯಕ್ತಿಯ ನಿರ್ಲಕ್ಷತೆ ಅಥವಾ ದುರ್ನಡತೆಯಿಂದ ಉಂಟಾದ ಯಾವುದೇ ನ್ಯೂನತೆ ಅಥವಾ ನಷ್ಟದ ಮೊಬಲಗನ್ನು ಅಥವಾ ಆ ವ್ಯಕ್ತಿಯು ಲೆಕ್ಕಕ್ಕೆ ತರಬೇಕಾಗಿದ್ದ ಆದರೆ ತಂದಿರದ ಅವನು ಸ್ವೀಕರಿಸಿದ ಮೊತ್ತವನ್ನು ಅದಕ್ಕೆ ಜವಾಬ್ದಾರನಾದ ಯಾರೇ ವ್ಯಕ್ತಿಯ ವಿರುದ್ಧ ವೆಚ್ಚ ಹೊರಿಸಬಹುದು, ಮತ್ತು ಅಂಥ ಪ್ರತಿಯೊಂದು ಪ್ರಕರಣದಲ್ಲಿ, ಅಂಥ ವ್ಯಕ್ತಿಯಿಂದ ಬರಬೇಕಾದ ಮೊಬಲಗನ್ನು ಪ್ರಮಾಣೀಕರಿಸತಕ್ಕದ್ದು.

(2) ಕಮಿಷನರನು, ಪ್ರತಿಯೊಂದು ಅಧಿಭಾರ ಅಥವಾ ವೆಚ್ಚ ಹೊರಿಸುವಿಕೆಗೆ ಸಂಬಂಧಿಸಿದಂತೆ, ತನ್ನ ತೀರ್ಮಾನದ ಕಾರಣಗಳನ್ನು ಬರಹದಲ್ಲಿ ನಿರೂಪಿಸತಕ್ಕದ್ದು ಮತ್ತು ಅದರ ಪ್ರತಿಯನ್ನು ಯಾರ ವಿರುದ್ಧವಾಗಿ ಅದನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ನೋಂದಾಯಿತ ಅಂಚೆಯ ಮೂಲಕ ಕಳುಹಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಕಮಿಷನರ ತೀರ್ಮಾನದ ಪ್ರತಿಯನ್ನು ಯಾರಿಗೆ ಕಳಿಸಲಾಗಿದೆಯೋ ಆ ವ್ಯಕ್ತಿಯು, ಅದನ್ನು ತೆಗೆದುಕೊಳ್ಳಲು ನಿರಾಕರಿಸಿದರೆ, ಅವನು ಅದನ್ನು ನಿರಾಕರಿಸಿದಂಥ ದಿನದಂದು ಅದನ್ನು ಕ್ರಮಬದ್ಧವಾಗಿ ಸ್ವೀಕರಿಸಿರುವುದಾಗಿ ಭಾವಿಸತಕ್ಕದ್ದು.

**297. ಅಧಿಭಾರಗಳು ಮತ್ತು ವೆಚ್ಚಗಳನ್ನು ವಸೂಲಿ ಮಾಡುವ ಬಗೆ.–** (1) 296ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ವ್ಯಕ್ತಿಯಿಂದ ಬಾಕಿಯಿರುವುದಾಗಿ ಕಮಿಷನರನು ಪ್ರಮಾಣೀಕರಿಸಿದ ಪ್ರತಿಯೊಂದು ಮೊತ್ತವನ್ನು, ಕಮಿಷನರನ ತೀರ್ಮಾನವನ್ನು ಅವನು ಸ್ವೀಕರಿಸಿದಂದಿನಿಂದ ಒಂದು ತಿಂಗಳೊಳಗಾಗಿ, 298ನೇ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಅಂಥ ವ್ಯಕ್ತಿಯು ನ್ಯಾಯಾಲಯ ಅಥವಾ ಸರ್ಕಾರಕ್ಕೆ ಆ ಕಾಲದೊಳಗೆ ಅರ್ಜಿ ಸಲ್ಲಿಸಿದ್ದ ಹೊರತು ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲಿನ ನಿಧಿಗಳನ್ನು ಇಟ್ಟುಕೊಂಡಿರುವಂಥ ಖಜಾನೆ ಅಥವಾ ಬ್ಯಾಂಕಿಗೆ ಅಂಥ ವ್ಯಕ್ತಿಯು ಸಂದಾಯ ಮಾಡತಕ್ಕದ್ದು.

(2) ಸದರಿ ಮೊತ್ತವನ್ನು ಕ್ರಮಬದ್ಧವಾಗಿ ಸಂದಾಯ ಮಾಡದಿದ್ದರೆ 298ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವಂತೆ ಕಮಿಷನರ ತೀರ್ಮಾನದ ವಿರುದ್ಧವಾಗಿ ನ್ಯಾಯಾಲಯಕ್ಕೆ ಅಥವಾ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದರೆ, ನ್ಯಾಯಾಲಯ ಅಥವಾ ಸರ್ಕಾರವು ಬಾಕಿಯಾಗಿರುವುದಾಗಿ ಘೋಷಿಸತಕ್ಕಂಥ ಮೊತ್ತವು ನ್ಯಾಯಾಲಯಕ್ಕೆ ಡೆಪ್ಯುಟಿ ಕಮಿಷನರನು ಸಲ್ಲಿಸಿದ ಅರ್ಜಿಯ ಮೇಲೆ, ಡೆಪ್ಯುಟಿ ಕಮೀಷನರನ ಪರವಾಗಿ ನ್ಯಾಯಾಲಯವು ಡಿಕ್ರಿ ಮಾಡಿದ ಮೊಬಲಗಿನಂತಹುದೇ ರೀತಿಯಲ್ಲಿ ವಸೂಲೀಯವಾಗತಕ್ಕದ್ದು.

**298. ಅಧಿಭಾರ ಅಥವಾ ವೆಚ್ಚ ಹೊರಿಸುವಿಕೆಯ ಆದೇಶದ ವಿರುದ್ಧ ಅರ್ಜಿ.–** (1) 296ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕಮಿಷನರನು ಮಾಡಿದ ಅಧಿಭಾರ ಅಥವಾ ವೆಚ್ಚ ಹೊರಿಸುವಿಕೆಯ ಯಾವುದೇ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯ, ಕಮಿಷನರನ ತೀರ್ಮಾನವನ್ನು ಅವನು ಸ್ವೀಕರಿಸಿದಂದಿನಿಂದ ಒಂದು ತಿಂಗಳೊಳಗೆ,–

(ಕ) ಜಿಲ್ಲಾ ನ್ಯಾಯಾಲಯಕ್ಕೆ ಅಂಥ ಆದೇಶವನ್ನು ತಳ್ಳಿಹಾಕಲು ಅರ್ಜಿಯನ್ನು ಸಲ್ಲಿಸಬಹುದು ಮತ್ತು ನ್ಯಾಯಾಲಯವು ತಾನು ಅವಶ್ಯವೆಂದು ಯೋಚಿಸುವಂಥ ಸಾಕ್ಷ್ಯವನ್ನು ತೆಗೆದುಕೊಂಡಲ್ಲಿ, ತರುವಾಯ ಅಂಥ ಅಧಿಭಾರ ಅಥವಾ ವೆಚ್ಚ ಹೊರಿಸುವಿಕೆಯನ್ನು ಸ್ವೀಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ಮಾಫಿ ಮಾಡಬಹುದು ಮತ್ತು ವೆಚ್ಚಗಳ ಬಗ್ಗೆ ಆ ಸಂದರ್ಭಗಳಲ್ಲಿ ತಾನು ಸರಿಯೆಂದು ಯೋಚಿಸುವಂಥ ಆದೇಶಗಳನ್ನು ಮಾಡಬಹುದು; ಅಥವಾ

(ಖ) ಅಂಥ ಅರ್ಜಿಗೆ ಬದಲಾಗಿ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು. ಅದು ಅದರ ಮೇಲೆ ತಾನು ಸೂಕ್ತವೆಂದು ಯೋಚಿಸುವಂಥ ಆದೇಶಗಳನ್ನು ಮಾಡತಕ್ಕದ್ದು.

(2) ಅರ್ಜಿಯ ವಿಲೇಯು ಇತ್ಯರ್ಥದಲ್ಲಿರುವಾಗ ಪ್ರಮಾಣಪತ್ರದ ಬಗೆಗಿನ ಎಲ್ಲ ವ್ಯವಹರಣೆಗಳನ್ನು, ತಡೆ ಆದೇಶವನ್ನು ಹೊರಡಿಸುವುದಕ್ಕೆ ಜಿಲ್ಲಾ ನ್ಯಾಯಾಲಯ ಅಥವಾ ಸರ್ಕಾರಕ್ಕೆ ಸಮಾಧಾನವಾಗುವಂತೆ ಬಾಧಿತನಾದ ವ್ಯಕ್ತಿಯು ಮೊದಲ ನೋಟಕ್ಕೆ ಸಮ್ಮತವಾದ ಪ್ರಕರಣವೆಂದು ತೋರಿಸಿ ಕೊಟ್ಟರೆ, ತಡೆಹಿಡಿಯತಕ್ಕದ್ದು.

**299. ಲೆಕ್ಕಪರಿಶೋಧಕರ ಕಡ್ಡಾಯ ಕೋರಿಕೆಗೆ ಸಂಬಂಧಿಸಿದಂತೆ ವೆಚ್ಚಗಳನ್ನು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದಲ್ಲ.–** 291ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೆಕ್ಕಪರಿಶೋಧಕನ ಯಾವುದೇ ಕಡ್ಡಾಯ ಕೋರಿಕೆಯನ್ನು ಪಾಲಿಸುವಲ್ಲಿ ಮುನ್ಸಿಪಲ್ ಕೌನ್ಸಿಲು ವಹಿಸಿದ ಎಲ್ಲಾ ವೆಚ್ಚಗಳನ್ನು ಮುನ್ಸಿಪಲ್ ನಿಧಿಯಿಂದ ಸಂದಾಯ ಮಾಡತಕ್ಕದ್ದು.

**300. ಸರ್ಕಾರಕ್ಕೆ ಲೆಕ್ಕಪತ್ರಗಳನ್ನು ರವಾನಿಸುವುದು.–** ಮುನ್ಸಿಪಲ್ ಕೌನ್ಸಿಲು, ಅದರಿಂದ ವಾರ್ಷಿಕ ಲೆಕ್ಕಪತ್ರಗಳು ಅಂತಿಮವಾಗಿ ಅಂಗೀಕೃತವಾದ ಕೂಡಲೇ ಅದರ ಒಂದು ಪ್ರತಿಯನ್ನು ಅಥವಾ ಈ ಬಗ್ಗೆ ನಿಯಮಿಸಿದ ನಮೂನೆಯಲ್ಲಿ ಲೆಕ್ಕವನ್ನು ಸರ್ಕಾರಕ್ಕೆ ಅಥವಾ ಅದರಿಂದ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತವಾದ ಯಾರೇ ಅಧಿಕಾರಿಗೆ ರವಾನಿಸತಕ್ಕದ್ದು ಮತ್ತು ಸಂಬಂಧಪಟ್ಟಂಥ ವಿವರಗಳನ್ನು ಮತ್ತು ಓಚರುಗಳನ್ನು ಸರ್ಕಾರ ಅಥವಾ ಅಂಥ ಅಧಿಕಾರಿಯು ಕಾಲಕಾಲಕ್ಕೆ ನಿರ್ದೇಶಿಸುವಂತೆ ಒದಗಿಸತಕ್ಕದ್ದು.

**301. ಲೆಕ್ಕಪತ್ರಗಳ ಪ್ರಕಟಣೆ.–** ಸ್ವೀಕೃತಿಗಳ ಮತ್ತು ವೆಚ್ಚದ ತ್ರೈಮಾಸಿಕ ಮತ್ತು ವಾರ್ಷಿಕ ಲೆಕ್ಕಪತ್ರಗಳು ಹಾಗೂ ಮಂಜೂರಾದಾಗಿನ ಬಜೆಟ್ ಅಂದಾಜುಗಳು ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು. ಅವುಗಳನ್ನು ಈ ಬಗ್ಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

**302. ವಾರ್ಷಿಕ ಆಡಳಿತ ವರದಿ.–** (1) ಪ್ರತಿವರ್ಷದಲ್ಲಿ ಏಪ್ರಿಲ್ ತಿಂಗಳ ಮೊದಲನೇ ದಿನಾಂಕದ ತರುವಾಯ ಆದಷ್ಟು ಬೇಗನೇ ಮತ್ತು ಸರ್ಕಾರದಿಂದ ನಿಗದಿಪಡಿಸಬಹುದಾದಂಥ ದಿನಾಂಕವನ್ನು ಮೀರದಂತೆ ಸರ್ಕಾರವು ನಿರ್ದೇಶಿಸುವಂಥ ನಮೂನೆಯಲ್ಲಿ ಮತ್ತು ಅಂಥ ವಿವರಗಳೊಂದಿಗೆ ಹಿಂದಿನ ಸರ್ಕಾರಿ ವರ್ಷದಲ್ಲಿ ಆಡಳಿತದ ಮೇಲೆ ವರದಿಯನ್ನು, ಪಟ್ಟಣ ಮುನ್ಸಿಪಲ್ ಕೌನ್ಸಿಲು ಡೆಪ್ಯುಟಿ ಕಮಿಷನರನಿಗೆ ಮತ್ತು ಕಮಿಷನರನಿಗೆ ಮತ್ತು ನಗರ ಮುನ್ಸಿಪಲ್ ಕೌನ್ಸಿಲು ಕಮಿಷನರನಿಗೆ ಹಾಗೂ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(2) ಮುನ್ಸಿಪಲ್ ಕಮಿಷನರು ಅಥವಾ ಚೀಫ್ ಆಫೀಸರನು, ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಪರ್ಯಾಲೋಚನೆಗಾಗಿ ಮುನ್ಸಿಪಲ್ ಕೌನ್ಸಿಲಿನ ಮುಂದೆ ಇಡತಕ್ಕದ್ದು ಮತ್ತು ಅದನ್ನು ಅದರ ಮೇಲಿನ ಮುನ್ಸಿಪಲ್ ಕೌನ್ಸಿಲಿನ ನಿರ್ಣಯದೊಂದಿಗೆ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಡೆಪ್ಯುಟಿ ಕಮಿಷನರು, ಕಮಿಷನರು ಮತ್ತು ಸರ್ಕಾರಕ್ಕೆ ಕಳುಹಿಸತಕ್ಕದ್ದು.

(3) ವರದಿಯನ್ನು ಮುನ್ಸಿಪಲ್ ಕೌನ್ಸಿಲು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸಬಹುದು.

## ಅಧ್ಯಾಯ–XII
## ನಿಯಂತ್ರಣ

**303. ಮುಖ್ಯ ನಿಯಂತ್ರಣ ಪ್ರಾಧಿಕಾರಿ.–** ಕಮಿಷನರನು ಸರ್ಕಾರದ ನಿಯಂತ್ರಣ ಮತ್ತು ಆದೇಶಗಳಿಗೊಳಪಟ್ಟು ಈ ಅಧಿನಿಯಮದ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ, ಮುಖ್ಯ ನಿಯಂತ್ರಣ ಪ್ರಾಧಿಕಾರಿಯಾಗಿರತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಆ ಬಗ್ಗೆ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು.

**304. ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆಯ ಅಧಿಕಾರ.–** ಕಮಿಷನರನು, ಡೆಪ್ಯುಟಿ ಕಮಿಷನರನು, ಅಥವಾ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಸರ್ಕಾರಿ ಅಧಿಕಾರಿಯು,–

(ಕ) ಯಾವುದೇ ಮುನ್ಸಿಪಲ್ ಕೌನ್ಸಿಲು ಅಥವಾ ಅದರ ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ ಯಾವುದೇ ಸಂಸ್ಥೆಯ ಸ್ವಾಧೀನದಲ್ಲಿರುವ ಯಾವುದೇ ಸ್ಥಿರ ಸ್ವತ್ತನ್ನು ಅಥವಾ ಅದರ

ಅಧೀನದಲ್ಲಿ ಅಥವಾ ಅದರ ನಿರ್ದೇಶನದಲ್ಲಿ ನಡೆಯುತ್ತಿರುವ ಯಾವುದೇ ಕಾಮಗಾರಿಯ ಮೇಲೆ ಪ್ರವೇಶಿಸಲು ಮತ್ತು ಪರಿಶೀಲಿಸಲು ಅಥವಾ ಅದರ ಮೇಲೆ ಪ್ರವೇಶಿಸುವಂತೆ ಮತ್ತು ಪರಿಶೀಲಿಸುವಂತೆ ಮಾಡಲು;

(ಖ) ಯಾವುದೇ ಮುನ್ಸಿಪಲ್ ಕೌನ್ಸಿಲು ಅಥವಾ ಯಾವುದೇ ಸಮಿತಿಯ 'ವ್ಯವಹರಣೆಗಳಿಂದ ಯಾವುದೇ ಉದ್ಧೃತಿಯನ್ನು ಅಥವಾ ಮುನ್ಸಿಪಲ್ ಕೌನ್ಸಿಲಿನ ಸ್ವಾಧೀನದಲ್ಲಿ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ಪುಸ್ತಕ ಅಥವಾ ದಸ್ತಾವೇಜನ್ನು ಮತ್ತು ಅಂಥ ಮುನ್ಸಿಪಲ್ ಕೌನ್ಸಿಲನ್ನು ಒದಗಿಸುವಂತೆ ಅಗತ್ಯಪಡಿಸಲು ಅವನು ಸೂಕ್ತವೆಂದು ಯೋಚಿಸಬಹುದಾದಂಥ ಯಾವುದೇ ವಿವರಪಟ್ಟಿಕೆ, ಹೇಳಿಕೆ, ಲೆಕ್ಕ ಅಥವಾ ವರದಿಗಳನ್ನು ಕೇಳಲು;

(ಗ) 291ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಒಬ್ಬ ಲೆಕ್ಕಪರಿಶೋಧಕನು ಅಗತ್ಯಪಡಿಸಬಲ್ಲಂಥ ಯಾವುದೇ ಮಾಹಿತಿ ಅಥವಾ ವಿವರಣೆಯನ್ನು ಅಗತ್ಯಪಡಿಸಲು;

(ಘ) ಅಂಥ ಮುನ್ಸಿಪಲ್ ಕೌನ್ಸಿಲು ಇನ್ನೇನು ಮಾಡಬೇಕೆಂದಿರುವ ಅಥವಾ ಮಾಡಲಾಗುತ್ತಿರುವಂಥ ಯಾವುದನ್ನೇ ಮಾಡುವುದಕ್ಕೆ ಇದೆಯೆಂದು ಅವನಿಗೆ ಕಂಡುಬರುವಂಥ ಯಾವುದೇ ಆಕ್ಷೇಪಣೆಯನ್ನು ಅಥವಾ ಅವನು ಒದಗಿಸಲು ಶಕ್ತನಾಗಿರುವಂಥ ಮತ್ತು ಮುನ್ಸಿಪಲ್ ಕೌನ್ಸಿಲು ಯಾವುದನ್ನಾದರೂ ಮಾಡುವುದನ್ನು ಅವಶ್ಯಕಗೊಳಿಸಲು ಅವನಿಗೆ ಕಂಡುಬರುವಂಥ ಯಾವುದೇ ಮಾಹಿತಿಯನ್ನು ಅದರ ಪರ್ಯಾಲೋಚನೆಗೆ ತೆಗೆದುಕೊಳ್ಳಲು, ಮತ್ತು ಅಂತಹವುದನ್ನು ಮಾಡುವುದರಿಂದ ವಿಮುಖವಾಗದಿರುವುದಕ್ಕಾಗಿ ಅಥವಾ ಮಾಡದೆ ಇರುವುದಕ್ಕಾಗಿ ಅದರ ಕಾರಣಗಳನ್ನು ನಿರೂಪಿಸಿ ಯುಕ್ತ ಕಾಲದೊಳಗೆ ಅವನಿಗೆ ಬರಹದಲ್ಲಿನ ಜವಾಬನ್ನು ಕೊಡಲು ಮುನ್ಸಿಪಲ್ ಕೌನ್ಸಿಲನ್ನು ಅಗತ್ಯಪಡಿಸಲು

–ಅಧಿಕಾರವನ್ನು ಹೊಂದಿರತಕ್ಕದ್ದು.

**305. ಮುನ್ಸಿಪಲ್ ಕೌನ್ಸಿಲಿನ ಕಚೇರಿಯನ್ನು ಪರಿಶೀಲಿಸಲು ಅಧಿಕಾರ.–** (1) ಕಮಿಷನರನು, ಡೆಪ್ಯುಟಿ ಕಮಿಷನರನು ಅಥವಾ ಈ ಬಗ್ಗೆ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು, ಯಾವುದೇ ಮುನ್ಸಿಪಲ್ ಕೌನ್ಸಿಲಿನ ಕಚೇರಿಯನ್ನು ಪರಿಶೀಲಿಸಲು ಮತ್ತು ಅಂಥ ಯಾವುದೇ ಮುನ್ಸಿಪಲ್ ಕೌನ್ಸಿಲಿನ ಯಾವುದೇ ಮಾಹಿತಿ ಅಥವಾ ದಾಖಲೆಗಳನ್ನು ಕೇಳಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಅಧಿಕೃತನಾದ ಅಧಿಕಾರಿಯು, ಮುನ್ಸಿಪಲ್ ಕೌನ್ಸಿಲಿನ ಅಥವಾ ಅದರ ಕಾರ್ಯಕಾರಿಯ ಯಾವುದೇ ಆದೇಶ ಅಥವಾ ವ್ಯವಹಣೆಯು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನು ಅಥವಾ ಆದೇಶಗಳಿಗೆ ವಿರುದ್ಧವಾಗಿದೆಯೆಂದು ಅವನಿಗೆ ಮನದಟ್ಟಾದರೆ, ಸರ್ಕಾರದ ಆದೇಶಗಳಿಗಾಗಿ ದಾಖಲೆಗಳನ್ನು ಒಪ್ಪಿಸತಕ್ಕದ್ದು.

**306. ಮುನ್ಸಿಪಲ್ ಕೌನ್ಸಿಲುಗಳ ಆದೇಶಗಳು ಇತ್ಯಾದಿಗಳ ಜಾರಿಯನ್ನು ಅಮಾನತುಗೊಳಿಸಲು ಡೆಪ್ಯುಟಿ ಕಮಿಷನರನ ಅಧಿಕಾರ.–** (1) ಡೆಪ್ಯುಟಿ ಕಮಿಷನರನ ಅಭಿಪ್ರಾಯದಲ್ಲಿ, ಪಟ್ಟಣ ಮುನ್ಸಿಪಲ್ ಕೌನ್ಸಿಲಿನ ಯಾವುದೇ ಆದೇಶ ಅಥವಾ ನಿರ್ಣಯದ ಜಾರಿಯು ಅಥವಾ ಪಟ್ಟಣ ಮುನ್ಸಿಪಲ್ ಕೌನ್ಸಿಲು ಅಥವಾ ಅದರ ಪರವಾಗಿ ಇನ್ನೇನು ಮಾಡಬೇಕೆಂದಿರುವ ಅಥವಾ ಮಾಡಲಾಗುತ್ತಿರುವಂಥ ಯಾವುದನ್ನಾದರೂ ಮಾಡುವುದು ಕಾನೂನುಬಾಹಿರ ಅಥವಾ ಸಾರ್ವಜನಿಕರಿಗೆ ಹಾನಿ ಅಥವಾ ಕಿರುಕುಳವನ್ನುಂಟು ಮಾಡುತ್ತಿದೆ ಅಥವಾ ಉಂಟುಮಾಡುವ ಸಂಭವವಿದೆ ಅಥವಾ ಶಾಂತಿ ಭಂಗವನ್ನು ಉಂಟು ಮಾಡುವುದಾದರೆ, ಅವನು, ತನ್ನ ರುಜುವನ್ನೊಳಗೊಂಡ ಬರಹದಲ್ಲಿನ ಆದೇಶದ ಮೂಲಕ ಅದರ ಜಾರಿಯನ್ನು ಅಮಾನತ್ತುಗೊಳಿಸಬಹುದು ಅಥವಾ ಅದನ್ನು ಮಾಡುವುದನ್ನು ನಿಷೇಧಿಸಬಹುದು.

(2) ಈ ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರರನು ಯಾವುದೇ ಆದೇಶವನ್ನು ಮಾಡಿದಾಗ, ಅವನು ಆದೇಶ ಪ್ರತಿಯನ್ನು, ಅದನ್ನು ಮಾಡುವುದಕ್ಕಾಗಿನ ಕಾರಣಗಳೊಂದಿಗಿನ ವಿವರಣೆಯೊಂದಿಗೆ ಸರ್ಕಾರಕ್ಕೆ ಮತ್ತು ಕಮಿಷನರರಿಗೆ ಮತ್ತು ಅದರಿಂದ ಬಾಧಿತವಾದ ಮುನ್ಸಿಪಲ್ ಕೌನ್ಸಿಲಿಗೆ ತಕ್ಷಣವೇ ಕಳುಹಿಸತಕ್ಕದ್ದು; ಆ ಆದೇಶವನ್ನು ರದ್ದುಗೊಳಿಸಲು ಅಥವಾ ಮಾರ್ಪಾಟಿನೊಂದಿಗೆ ಅಥವಾ ಇಲ್ಲದೆ ಖಾಯಂ ಆಗಿ ಅಥವಾ ಸೂಕ್ತವೆಂದು ಯೋಚಿಸಬಹುದಾದಂಥ ಅವಧಿಗಾಗಿ ಜಾರಿಯಲ್ಲಿ ಮುಂದುವರಿಯತಕ್ಕದ್ದೆಂದು ನಿರ್ದೇಶಿಸುವುದು ಸರ್ಕಾರದ ವಿವೇಚನೆಯಲ್ಲಿರತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗೆ ಮಾಡಿದ ಡೆಪ್ಯುಟಿ ಕಮಿಷನರರ ಯಾವುದೇ ಆದೇಶವನ್ನು, ಮುನ್ಸಿಪಲ್ ಕೌನ್ಸಿಲಿಗೆ ಸದರಿ ಆದೇಶದ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಡದೆಂದು ಸರ್ಕಾರವು ಸ್ಥಿರೀಕರಿಸತಕ್ಕದ್ದಲ್ಲ, ಪುನರೀಕ್ಷಿಸತಕ್ಕದ್ದಲ್ಲ ಅಥವಾ ಮಾರ್ಪಾಟು ಮಾಡತಕ್ಕದ್ದಲ್ಲ.

**307. ಕೆಲವು ಸಂದರ್ಭಗಳಲ್ಲಿ ಕಾಮಗಾರಿಯ ನಿರ್ವಹಣೆ.–** (1) ಡೆಪ್ಯುಟಿ ಕಮಿಷನರರನು, ಒಂದು ಪಟ್ಟಣ ಮುನ್ಸಿಪಲ್ ಕೌನ್ಸಿಲು ನಿರ್ವಹಿಸಲು ಅಥವಾ ಮಾಡಲು ಅಧಿಕಾರ ಹೊಂದಿದಂಥ, ಮತ್ತು ಅದರ ತಕ್ಷಣದ ಜಾರಿ ಅಥವಾ ಮಾಡುವುದು ಸಾರ್ವಜನಿಕರ ಹಿತಾಸಕ್ತಿಯಲ್ಲಿ ಅವನ ಅಭಿಪ್ರಾಯದಲ್ಲಿ ಅವಶ್ಯವಿರುವಂಥ ಯಾವುದೇ ಕಾಮಗಾರಿಯನ್ನು ನಿರ್ವಹಿಸಲು ಅಥವಾ ಯಾವುವೇ ಕಾರ್ಯವನ್ನು ಮಾಡಲು ವ್ಯವಸ್ಥೆ ಮಾಡಬಹುದು ಮತ್ತು ಆ ಕೆಲಸವನ್ನು ನಿರ್ವಹಿಸುವ ವೆಚ್ಚಗಳನ್ನು ಅಥವಾ ಕಾರ್ಯವನ್ನು ನಿರ್ವಹಿಸಲು ಅಥವಾ ಮಾಡಲು ನೇಮಕಗೊಂಡ ವ್ಯಕ್ತಿಗೆ ಯುಕ್ತ ಪರಿಶ್ರಮ ಧನದೊಂದಿಗೆ, ಆ ಕಾರ್ಯವನ್ನು ಮಾಡುವ ವೆಚ್ಚಗಳನ್ನು ಪಟ್ಟಣ ಮುನ್ಸಿಪಲ್ ಕೌನ್ಸಿಲು ತಕ್ಷಣವೇ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

(2) ವೆಚ್ಚವನ್ನು ಮತ್ತು ಪರಿಶ್ರಮ ಧನವನ್ನು ಹಾಗೆ ಸಂದಾಯ ಮಾಡದಿದ್ದರೆ ಡೆಪ್ಯುಟಿ ಕಮಿಷನರರನು, ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಯಾವುವೇ ಹಣಗಳ ಅಭಿರಕ್ಷೆಯನ್ನು ತತ್ಕಾಲದಲ್ಲಿ ಹೊಂದಿರುವ ಯಾರೇ ವ್ಯಕ್ತಿಗೆ ಅವನಲ್ಲಿರಬಹುದಾದಂಥ ಅಥವಾ ಕಾಲಕಾಲಕ್ಕೆ ಸ್ವೀಕರಿಸಬಹುದಾದಂಥ ಹಣಗಳಿಂದ ಅಂಥ ವೆಚ್ಚ ಮತ್ತು ಪರಿಶ್ರಮ ಧನವನ್ನು ಸಂದಾಯ ಮಾಡಲು ನಿರ್ದೇಶಿಸುವ ಆದೇಶವನ್ನು ಮಾಡಬಹುದು ಮತ್ತು ಅಂಥ ವ್ಯಕ್ತಿಯು ಅಂಥ ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

(3) 306ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳು ಸಾಧವಾದಷ್ಟುಮಟ್ಟಿಗೆ ಈ ಪ್ರಕರಣದ ಮೇರೆಗಿನ ಯಾವುದೇ ಆದೇಶಕ್ಕೆ ಅನ್ವಯವಾಗತಕ್ಕದ್ದು.

**308. ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಕೌನ್ಸಿಲರುಗಳ ಹೊಣೆ.–** (1) ಪಟ್ಟಣ ಮುನ್ಸಿಪಲ್ ಕೌನ್ಸಿಲಿನ ಪ್ರತಿಯೊಬ್ಬ ಕೌನ್ಸಿಲರನು ಅವನು ಸಹಭಾಗಿಯಾಗಿರುವಂಥ ಅಥವಾ ಕೌನ್ಸಿಲರ್ ಆಗಿ ತನ್ನ ಕರ್ತವ್ಯದಲ್ಲಿನ ಅವನ ದುರ್ವರ್ತನೆ ಅಥವಾ ಅತೀವ ನಿರ್ಲಕ್ಷತೆಯಿಂದುಂಟಾದ ಅಥವಾ ಅದರಿಂದ ಸಾಧ್ಯವಾದಂಥ ಮುನ್ಸಿಪಲ್ ಕೌನ್ಸಿಲಿನ ಯಾವುದೇ ಹಣ ಅಥವಾ ಇತರ ಸ್ವತ್ತಿನ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ವೈಯಕ್ತಿಕವಾಗಿ ಹೊಣೆಗಾರನಾಗತಕ್ಕದ್ದು.

(2) ಸಂಬಂಧಪಟ್ಟ ಕೌನ್ಸಿಲರು ಮತ್ತು ಕೌನ್ಸಿಲರುಗಳಿಗೆ ತದ್ವಿರುದ್ಧವಾದ ಕಾರಣ ತೋರಿಸಲು ಅವಕಾಶವನ್ನು ಕೊಟ್ಟ ತರುವಾಯ, ಡೆಪ್ಯುಟಿ ಕಮಿಷನರರನು, ಮುನ್ಸಿಪಲ್ ಕೌನ್ಸಿಲಿನ ಯಾವುದೇ ಹಣ ಅಥವಾ ಇತರ ಸ್ವತ್ತಿನ ನಷ್ಟ, ಪೋಲು ಅಥವಾ ದುರ್ವಿನಿಯೋಗವು ಅವನ ಅಥವಾ ಅವರ ದುರ್ವರ್ತನೆ ಅಥವಾ ಅತೀವ ನಿರ್ಲಕ್ಷ್ಯದ ನೇರ ಪರಿಣಾಮದಿಂದುಂಟಾದುದೆಂದು ಸಮಾಧಾನ ಹೊಂದಿದ್ದರೆ, ಡೆಪ್ಯುಟಿ ಕಮಿಷನರರನು ಬರಹದಲ್ಲಿ ಆದೇಶದ ಮೂಲಕ ಅಂಥ ಕೌನ್ಸಿಲರುಗಳನ್ನು ಅಂಥ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ

ಅದಕ್ಕೆ ತುಂಬಿಕೊಡಲು ಅಗತ್ಯವಾದ ಮೊಬಲಗನ್ನು ನಿಗದಿಪಡಿಸಿದ ದಿನಾಂಕಕ್ಕೆ ಮುಂಚೆ ಮುನ್ಸಿಪಲ್ ಕೌನ್ಸಿಲಿಗೆ ಸಂದಾಯ ಮಾಡಲು ನಿರ್ದೇಶಿಸತಕ್ಕದ್ದು.

(3) ಮೊಬಲಗನ್ನು ಹಾಗೆ ಸಂದಾಯ ಮಾಡದಿದ್ದರೆ, ಡೆಪ್ಯುಟಿ ಕಮಿಷನರನು ಅದನ್ನು ಭೂಕಂದಾಯದ ಬಾಕಿಯಂತೆ ವಸೂಲಿ ಮಾಡತಕ್ಕದ್ದು ಮತ್ತು ಅದನ್ನು ಪೌರಸಭಾ ನಿಧಿಗೆ ಜಮೆ ಮಾಡತಕ್ಕದ್ದು.

(4) (2)ನೇ ಉಪಪ್ರಕರಣದ ಮೇರೆಗಿನ ಡೆಪ್ಯುಟಿ ಕಮಿಷನರ್ ತೀರ್ಮಾನದ ಮೇಲೆ ಸರ್ಕಾರಕ್ಕೆ ಅಪೀಲು ಇರತಕ್ಕದ್ದು.

**309. ನಗರ ಮುನ್ಸಿಪಲ್ ಕೌನ್ಸಿಲುಗಳಿಗೆ ಸಂಬಂಧಿಸಿದಂತೆ ಕಮಿಷನರ್‌ನ ಅಧಿಕಾರ.–** ನಗರ ಮುನ್ಸಿಪಲ್ ಕೌನ್ಸಿಲುಗಳಿಗೆ ಸಂಬಂಧಿಸಿದಂತೆ 306, 307, 308ನೇ ಪ್ರಕರಣಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಕಮಿಷನರ್‌ನು ಚಲಾಯಿಸತಕ್ಕದ್ದು ಮತ್ತು ಸದರಿ ಪ್ರಕರಣಗಳ ಉಪಬಂಧಗಳು, ಯಥೋಚಿತ ಬದಲಾವಣೆಗಳೊಂದಿಗೆ ಅಂಥ ನಗರ ಮುನ್ಸಿಪಲ್ ಕೌನ್ಸಿಲುಗಳಿಗೆ ಮತ್ತು ಅವುಗಳ ಕೌನ್ಸಿಲರುಗಳಿಗೆ ಅನ್ವಯವಾಗತಕ್ಕದ್ದು.

**310. ಪೌರಸಭಾ ವಿಷಯಗಳಲ್ಲಿ ಸರ್ಕಾರೀ ವಿಚಾರಣೆ.–** (1) ಸರ್ಕಾರವು, ಈ ಬಗ್ಗೆ ಅದು ನೇಮಕ ಮಾಡಿದ ಯಾವುದೇ ಅಧಿಕಾರಿಯ ಮೂಲಕ,–

(i) ಯಾವುದೇ ಪೌರಸಭೆಯ ಪೌರಸಭಾ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ವಿಷಯಗಳು; ಅಥವಾ

(ii) ಯಾರೇ ಪೌರಸಭಾ ಪ್ರಾಧಿಕಾರಿ, ಅಧಿಕಾರಿ ಅಥವಾ ನೌಕರನ ಯಾವುದೇ ಕಾರ್ಯ ಅಥವಾ ನಡತೆ; ಅಥವಾ

(iii) ಈ ಅಧಿನಿಯಮದ ಮೇರೆಗೆ ಸರ್ಕಾರದ ಮಂಜೂರಾತಿ, ಅನುಮೋದನೆ ಅಥವಾ ಸಮ್ಮತಿಯು ಅಗತ್ಯವಿರುವಂಥ ಯಾವುದೇ ವಿಷಯಗಳ ಬಗ್ಗೆ,–

– ವಿಚಾರಣೆ ನಡೆಸಬೇಕೆಂದು ಆದೇಶಿಸಬಹುದು.

(2) ಅಂಥ ವಿಚಾರಣೆಯನ್ನು ನಡೆಸುವ ಅಧಿಕಾರಿಯು, ಅಂಥ ಉದ್ದೇಶಕ್ಕಾಗಿ, ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಮೇರೆಗೆ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು,–

(ಕ) ಬಹಿರಂಗಪಡಿಸುವುದು ಮತ್ತು ಪರಿಶೀಲನೆ;

(ಖ) ಸಾಕ್ಷಿಗಳ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಅವರ ವೆಚ್ಚಗಳನ್ನು ಠೇವಣಿ ಇಡಲು ಅಗತ್ಯಪಡಿಸುವುದು;

(ಗ) ದಸ್ತಾವೇಜುಗಳನ್ನು ಹಾಜರುಪಡಿಸಲು ಒತ್ತಾಯಿಸುವುದು;

(ಫ) ಪ್ರಮಾಣದ ಮೇಲೆ ಸಾಕ್ಷಿಗಳನ್ನು ವಿಚಾರಣೆ ಮಾಡುವುದು;

(ಐ) ಮುದ್ದತ್ತುಗಳನ್ನು ಕೊಡುವುದು;

(ಚ) ಶಪಥಪತ್ರದ ಮೇಲೆ ತೆಗೆದುಕೊಂಡ ಸಾಕ್ಷ್ಯವನ್ನು ಸ್ವೀಕರಿಸುವುದು; ಮತ್ತು

(ಛ) ಸಾಕ್ಷಿಗಳ ವಿಚಾರಣೆಗಳಿಗಾಗಿ ಕಮಿಷನ್‌ಗಳನ್ನು ಹೊರಡಿಸುವುದು;

ಮತ್ತು ಯಾವ ವ್ಯಕ್ತಿಯ ಸಾಕ್ಷ್ಯವು ಅವನಿಗೆ ಮುಖ್ಯವೆಂದು ತೋರುವುದೋ ಆ ವ್ಯಕ್ತಿಯನ್ನು ತಾನಾಗಿಯೇ ಸಮನು ಮಾಡಬಹುದು ಮತ್ತು ವಿಚಾರಣೆ ಮಾಡಬಹುದು ಮತ್ತು 1898ನೇ ದಂಡ ಪ್ರಕ್ರಿಯಾ ಸಂಹಿತೆಯು 480 ಮತ್ತು 482ನೇ ಪ್ರಕರಣಗಳ ಅಥವಾ ಅರ್ಥ ವ್ಯಾಪ್ತಿಯೊಳಗೆ ಅವನನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**ವಿವರಣೆ:–** ಸಾಕ್ಷಿಗಳ ಹಾಜರಾತಿಯನ್ನು ಒತ್ತಾಯಪಡಿಸುವ ಉದ್ದೇಶಕ್ಕಾಗಿ, ಅಂಥ ಅಧಿಕಾರಿಯ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು ಕರ್ನಾಟಕ ರಾಜ್ಯದ ಪರಿಮಿತಿಗಳಾಗಿರತಕ್ಕದ್ದು.

(3) ಸಾಕ್ಷ್ಯವನ್ನು ಕೊಡಲು ಹಾಜರಾಗುವಲ್ಲಿ ಯಾರೇ ವ್ಯಕ್ತಿಯು ವಹಿಸಿದ ಯುಕ್ತ ವೆಚ್ಚಗಳನ್ನು ಆ ವಿಚಾರಣೆಯನ್ನು ನಡೆಸುತ್ತಿರುವ ಅಧಿಕಾರಿಯು ಅಂಥ ವ್ಯಕ್ತಿಗೆ ಮಂಜೂರ್‍ಮಾಡಬಹುದು ಮತ್ತು ಅವುಗಳನ್ನು ಖರ್ಚುಗಳ ಒಂದು ಭಾಗವೆಂದು ಭಾವಿಸತಕ್ಕದ್ದು.

(4) ಖರ್ಚುಗಳು ಸರ್ಕಾರದ ವಿವೇಚನೆಯಲ್ಲಿರತಕ್ಕದ್ದು ಮತ್ತು ಸರ್ಕಾರವು, ಅಂಥ ಖರ್ಚುಗಳನ್ನು ಯಾರು ಮತ್ತು ಯಾರಿಗೆ ಮತ್ತು ಎಷ್ಟರಮಟ್ಟಿಗೆ ಸಂದಾಯ ಮಾಡಬೇಕೆಂಬುದನ್ನು ನಿರ್ಧರಿಸಲು ಮತ್ತು ಖರ್ಚುಗಳ ಮೇಲೆ ವರ್ಷಕ್ಕೆ ಶೇಕಡಾ ಆರಕ್ಕೆ ಮೀರದ ದರದಲ್ಲಿ ಬಡ್ಡಿಯನ್ನು ಕೊಡಲು ಪೂರ್ಣಾಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂಥ ಖರ್ಚುಗಳು ಮತ್ತು ಬಡ್ಡಿಯನ್ನು ಭೂ ಕಂದಾಯದ ಬಾಕಿಯಂತೆ ಸಂಗ್ರಹಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಯು ಮಾಡಿದ ವಿಚಾರಣೆಯ ವರದಿಯನ್ನು ಪರ್ಯಾಲೋಚಿಸಿದ ತರುವಾಯ, ಸರ್ಕಾರವು, ತಾನು ಅವಶ್ಯವೆಂದು ಪರ್ಯಾಲೋಚಿಸುವಂಥ ನಿರ್ದೇಶನಗಳನ್ನು ಕೊಡಬಹುದು ಅಥವಾ ಅಂಥ ಆದೇಶಗಳನ್ನು ಮಾಡಬಹುದು ಮತ್ತು ಮುನ್ಸಿಪಲ್ ಕೌನ್ಸಿಲಿಗೆ ಅಂಥ ನಿರ್ದೇಶನವನ್ನು ಕೊಟ್ಟಿರುವಲ್ಲಿ, ಮುನ್ಸಿಪಲ್ ಕೌನ್ಸಿಲು ಅಂಥ ನಿರ್ದೇಶನವನ್ನು ಪಾಲಿಸತಕ್ಕದ್ದು.

(6) ಸರ್ಕಾರವು, ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ, ಸರ್ಕಾರಕ್ಕೆ ಅಧೀನನಾಗಿರುವ ಯಾರೇ ಅಧಿಕಾರಿಯು ಕೊಡಬಹುದಾದಂಥ ಯಾವುದೇ ನಿರ್ದೇಶನವನ್ನು ಕೊಡಲು ಅಥವಾ ಮಾಡಬಹುದಾದಂಥ ಯಾವುದೇ ಅದೇಶವನ್ನು (5)ನೇ ಉಪಪ್ರಕರಣದ ಮೇರೆಗೆ ಅದು ಕೊಡುವುದಕ್ಕೆ ಅಥವಾ ಮಾಡುವುದು ಕಾನೂನುಸಮ್ಮತವಾಗಿರತಕ್ಕದ್ದು.

**311. ಸಿಬ್ಬಂದಿಯ ನಿಯೋಜನೆಯಲ್ಲಿ ದುಂದುವೆಚ್ಚವನ್ನು ತಡೆಗಟ್ಟಲು ಕಮಿಷನರನ ಅಧಿಕಾರ.–** ಕಮಿಷನರ್‌ನ ಅಭಿಪ್ರಾಯದಲ್ಲಿ, ಅಧಿಕಾರಿಗಳು ಅಥವಾ ನೌಕರರೆಂದು ಮುನ್ಸಿಪಲ್ ಕೌನ್ಸಿಲು ನಿಯೋಜಿಸಿದ ಅಥವಾ ಮುನ್ಸಿಪಲ್ ಕೌನ್ಸಿಲು ನಿಯೋಜಿಸಲು ಉದ್ದೇಶಿಸಿದ ವ್ಯಕ್ತಿಗಳ ಸಂಖ್ಯೆಯು ಅಥವಾ ಆ ವ್ಯಕ್ತಿಗಳಿಗೆ ಅಥವಾ ಯಾರೇ ವಿಶಿಷ್ಟ ವ್ಯಕ್ತಿಗೆ ಮುನ್ಸಿಪಲ್ ಕೌನ್ಸಿಲು ಗೊತ್ತುಪಡಿಸಿದ ಪರಿಶ್ರಮ ಧನವು ಹೆಚ್ಚಾಗಿದ್ದರೆ,

ಮುನ್ಸಿಪಲ್ ಕೌನ್ಸಿಲು, ಕಮಿಷನರ ಕೋರಿಕೆಯ ಮೇಲೆ, ಸದರಿ ವ್ಯಕ್ತಿಗಳ ಸಂಖ್ಯೆಯನ್ನು ಅಥವಾ ಸದರಿ ವ್ಯಕ್ತಿ ಅಥವಾ ವ್ಯಕ್ತಿಗಳ ಪರಿಶ್ರಮ ಧನವನ್ನು ಕಡಿಮೆ ಮಾಡತಕ್ಕದ್ದು:

ಪರಂತು, ಮುನ್ಸಿಪಲ್ ಕೌನ್ಸಿಲು, ಅಂಥ ಯಾವುದೇ ಕೋರಿಕೆಯ ವಿರುದ್ಧ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು, ಅದರ ಮೇಲಿನ ಅದರ ತೀರ್ಮಾನವು ನಿರ್ಣಾಯಕವಾಗಿರತಕ್ಕದ್ದು.

**312. ಸರ್ಕಾರವು, ಆರೋಗ್ಯ ಅಧಿಕಾರಿಯನ್ನು ನೇಮಕ ಮಾಡಲು ಯಾವುದೇ ಮುನ್ಸಿಪಲ್ ಕೌನ್ಸಿಲನ್ನು ಅಗತ್ಯಪಡಿಸಬಹುದು.–** (1) ಸರ್ಕಾರಕ್ಕೆ,–

(i) ಆರೋಗ್ಯಾಧಿಕಾರಿಯ ನೇಮಕಾತಿ ಯಾವುದೇ ಕಾಲದಲ್ಲಿ ಅವಶ್ಯವೆಂದು ಅದು ಅಭಿಪ್ರಾಯಪಟ್ಟರೆ, ಯಾವುದೇ ಮುನ್ಸಿಪಲ್ ಕೌನ್ಸಿಲು ನೇಮಕಾತಿ ಮಾಡುವುದನ್ನು ಅಗತ್ಯಪಡಿಸುವುದು;

(ii) ಯಾವುದೇ ಅಂಥ ಮುನ್ಸಿಪಲ್ ಕೌನ್ಸಿಲು ಅದಕ್ಕಾಗಿ ಆಯ್ಕೆ ಮಾಡಿದ ಅಥವಾ ಅದಕ್ಕೆ ನೇಮಕ ಮಾಡಿದ ಯಾರೇ ವ್ಯಕ್ತಿಯ ನೇಮಕಾತಿ ಅಥವಾ ಅಂಥ ಯಾವುದೇ ಪದದಲ್ಲಿ ಯಾರೇ ವ್ಯಕ್ತಿಯ ಮುಂದುವರಿಕೆಯನ್ನು ನಿಷೇಧಿಸುವ ಆದೇಶವನ್ನು ಮಾಡುವುದು ಮತ್ತು ಅಂಥ ಯಾರೇ ವ್ಯಕ್ತಿಯ ಅಂಥ ಪದಾವಧಿಯು, ಅವನ ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ಯಾವುದೇ ಕರಾರು ಅಥವಾ ಯಾವುದೇ ಉಪಬಂಧ ಇದ್ದಾಗ್ಯೂ ನಿಂತುಹೋಗತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲಿಗೆ ಅಂಥ ಆದೇಶವನ್ನು ತಿಳಿಸಿದ ದಿನಾಂಕದಿಂದ ಮತ್ತು ಅಂದಿನಿಂದ ಕೊನೆಗೊಳ್ಳತಕ್ಕದ್ದು;

(iii) ಚೀಫ್ ಆಫೀಸರು ಅಥವಾ ಮುನ್ಸಿಪಲ್ ಕಮಿಷನರ್‌ನಾಗಿ ನೇಮಕಗೊಂಡ ಯಾರೇ ವ್ಯಕ್ತಿಗೆ XIVನೇ ಅಧ್ಯಾಯದ ಮೂಲಕ ಅವನಿಗೆ ಪ್ರದಾನ ಮಾಡಿದಂಥ ಅಧಿಕಾರಗಳ ಜೊತೆಗೆ, ಈ ಅಧಿನಿಯಮದ ಮೇರೆಗೆ ಅಥವಾ ಆ ಕಾಲದಲ್ಲಿ ಜಾರಿಯಲ್ಲಿರುವ ಯಾವುವೇ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಅವನಿಗೆ ಕಾನೂನುಸಮ್ಮತವಾಗಿ ಪ್ರತ್ಯಾಯೋಜಿಸಬಹುದಾದಂಥ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಅಂಥ ಯಾವುದೇ ಮುನ್ಸಿಪಲ್ ಕೌನ್ಸಿಲು ನಿಹಿತಪಡಿಸುವಂತೆ ಅಗತ್ಯಪಡಿಸುವುದು ಕಾನೂನುಸಮ್ಮತವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ (i) ಮತ್ತು (iii)ನೇ ಖಂಡಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲಿಗೆ ಕೊಟ್ಟ ಯಾವುದೇ ಕಡ್ಡಾಯ ಕೋರಿಕೆಯನ್ನು ಈ ಬಗ್ಗೆ ಸರ್ಕಾರವು ಪ್ರತಿಯೊಂದು ಪ್ರಕರಣದಲ್ಲಿ, ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಪಾಲಿಸತಕ್ಕದ್ದು.

**313. ಮುನ್ಸಿಪಲ್ ಕೌನ್ಸಿಲು ತಪ್ಪಿದಲ್ಲಿ ಕರ್ತವ್ಯಗಳ ನೆರವೇರಿಕೆಗಾಗಿ ವ್ಯವಸ್ಥೆ ಮಾಡಲು ಸರ್ಕಾರದ ಅಧಿಕಾರ.–** (1) ಮುನ್ಸಿಪಲ್ ಕೌನ್ಸಿಲು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅದಕ್ಕೆ ವಿಧಿಸಲಾದ ಯಾವುದೇ ಕರ್ತವ್ಯವನ್ನು ನೆರವೇರಿಸುವಲ್ಲಿ ತಪ್ಪಿದೆಯೆಂದು, ದೂರಿನ ಮೇಲಾಗಲಿ ಅಥವಾ ಅನ್ಯಥಾ ಸರ್ಕಾರಕ್ಕೆ ತಿಳಿದು ಬಂದಾಗ, ಸರ್ಕಾರಕ್ಕೆ ಹೇಳಲಾದ ತಪ್ಪಿತದ ಬಗ್ಗೆ ಆ ಮುನ್ಸಿಪಲ್ ಕೌನ್ಸಿಲು ತಪ್ಪು ಮಾಡಿದೆಯೆಂದು ಕ್ರಮಬದ್ಧ ವಿಚಾರಣೆಯ ತರುವಾಯ ಮನದಟ್ಟಾದರೆ, ಅದು ಆ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಅವಧಿಯನ್ನು ನಿಗದಿಪಡಿಸಬಹುದು.

(2) ಹಾಗೆ ನಿಗದಿಪಡಿಸಿದ ಅವಧಿಯೊಳಗೆ ಕರ್ತವ್ಯವನ್ನು ನೆರವೇರಿಸಲಾಗದಿದ್ದರೆ, ಸರ್ಕಾರವು ಅದನ್ನು ನೆರವೇರಿಸಲು ಯಾರೇ ವ್ಯಕ್ತಿಯನ್ನು ನೇಮಕ ಮಾಡಬಹುದು ಮತ್ತು ಅದನ್ನು ನೆರವೇರಿಸುವುದರ

ವೆಚ್ಚಗಳನ್ನು, ಅದನ್ನು ನೆರವೇರಿಸಲು ನೇಮಕಗೊಂಡ ವ್ಯಕ್ತಿಯು ಯುಕ್ತ ಪರಿಶ್ರಮ ಧನದೊಂದಿಗೆ ಮುನ್ಸಿಪಲ್ ಕೌನ್ಸಿಲು ತಕ್ಷಣ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

(3) ಆ ವೆಚ್ಚಗಳನ್ನು ಮತ್ತು ಪರಿಶ್ರಮಧನವನ್ನು ಹಾಗೆ ಸಂದಾಯ ಮಾಡದಿದ್ದರೆ ಸರ್ಕಾರವು, ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಯಾವುವೇ ಹಣಗಳನ್ನು ತತ್ಕಾಲದಲ್ಲಿ ಅಭಿರಕ್ಷೆಯಲ್ಲಿ ಹೊಂದಿರುವ ಯಾರೇ ವ್ಯಕ್ತಿಯು ತನ್ನಲ್ಲಿರಬಹುದಾದಂಥ ಅಥವಾ ಕಾಲಕಾಲಕ್ಕೆ ಅವನು ಸ್ವೀಕರಿಸಬಹುದಾದಂಥ ಹಣಗಳಿಂದ ಅಂಥ ವೆಚ್ಚಗಳನ್ನು ಮತ್ತು ಪರಿಶ್ರಮ ಧನವನ್ನು ಸಂದಾಯ ಮಾಡಲು ನಿರ್ದೇಶಿಸಿ ಆದೇಶವನ್ನು ಮಾಡಬಹುದು ಮತ್ತು ಅಂಥ ವ್ಯಕ್ತಿಯು ಅಂಥ ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

**314. ಪೌರಸಭಾ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗೆ ಸರ್ಕಾರದ ಬಾಕಿಗಳನ್ನು ಸಂದಾಯ ಮಾಡುವಂತೆ ನಿರ್ದೇಶಿಸಲು ಸರ್ಕಾರದ ಅಧಿಕಾರ.–** ಮುನ್ಸಿಪಲ್ ಕೌನ್ಸಿಲು, ಸರ್ಕಾರಕ್ಕೆ ಬಾಕಿಯಾಗಿರುವ ಯಾವುದೇ ಮೊಬಲಗನ್ನು ಸಂದಾಯ ಮಾಡಲು ತಪ್ಪಿದರೆ, ಅದು, ಪೌರಸಭಾ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ವ್ಯಕ್ತಿಗೆ, ಅಂಥ ನಿಧಿಯ ಮೇಲೆ ಇರುವ ಯಾವುದೇ ಇತರ ಋಣಭಾರಕ್ಕಿಂತ ಆದ್ಯತೆ ಕೊಟ್ಟು, ಸಂದಾಯ ಮಾಡಲು ನಿರ್ದೇಶಿಸಿ ಆದೇಶವನ್ನು ಮಾಡಬಹುದು ಮತ್ತು ಅಂಥ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿನ ಜಮೆಯಲ್ಲಿರುವ ನಿಧಿಗಳು ಅಂಥ ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

**315. ಕೆಲವು ಸಂದರ್ಭಗಳಲ್ಲಿ ಆಡಳಿತಗಾರನನ್ನು ನೇಮಿಸಲು ಅಧಿಕಾರ.–** (1) (ಕ) ಮುನ್ಸಿಪಲ್ ಕೌನ್ಸಿಲಿಗೆ ಈ ಅಧಿನಿಯಮದ ಮೇರೆಗೆ ನಡೆದ ಯಾವುದೇ ಸಾರ್ವತ್ರಿಕ ಚುನಾವಣೆ ಅಥವಾ ಅದರಿಂದ ಉಂಟಾಗುವ ಯಾವುವೇ ವ್ಯವಹರಣೆಗಳನ್ನು ಸಕ್ಷಮ ನ್ಯಾಯಾಲಯ ಅಥವಾ ಪ್ರಾಧಿಕಾರದ ಆದೇಶದ ಮೂಲಕ ತಡೆಹಿಡಿದಾಗಲೆಲ್ಲಾ; ಅಥವಾ

(ಖ) ಮುನ್ಸಿಪಲ್ ಕೌನ್ಸಿಲಿನ ಎಲ್ಲ ಕೌನ್ಸಿಲರುಗಳ ಅಥವಾ ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರನೇ ಎರಡಕ್ಕಿಂತ ಹೆಚ್ಚಿನ ಕೌನ್ಸಿಲರುಗಳ ಚುನಾವಣೆಯನ್ನು, ಸಕ್ಷಮ ನ್ಯಾಯಾಲಯ ಅಥವಾ ಪ್ರಾಧಿಕಾರವು ಶೂನ್ಯವೆಂಬುದಾಗಿ ಘೋಷಿಸಿದಾಗಲೆಲ್ಲಾ; ಅಥವಾ

(ಗ) ಮುನ್ಸಿಪಲ್ ಕೌನ್ಸಿಲಿನ ಕೌನ್ಸಿಲರುಗಳ ಪದಾವಧಿ ಅಥವಾ ವಿಸ್ತರಿಸಿದ ಪದಾವಧಿಯು ಮುಕ್ತಾಯವಾಗಿದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಹೊಸ ಮುನ್ಸಿಪಲ್ ಕೌನ್ಸಿಲನ್ನು ರಚಿಸಿಲ್ಲದಿರುವಾಗಲೆಲ್ಲಾ; ಅಥವಾ

(ಘ) ಮುನ್ಸಿಪಲ್ ಕೌನ್ಸಿಲಿನ ಎಲ್ಲ ಕೌನ್ಸಿಲರುಗಳು ಅಥವಾ ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರನೇ ಎರಡಕ್ಕಿಂತ ಹೆಚ್ಚು ಕೌನ್ಸಿಲರುಗಳು ರಾಜಿನಾಮೆ ನೀಡಿರುವಾಗಲೆಲ್ಲಾ,

ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಆಡಳಿತಗಾರನನ್ನು ನೇಮಿಸತಕ್ಕದ್ದು ಮತ್ತು ಅಂತಹದೇ ಅಧಿಸೂಚನೆಯ ಮೂಲಕ ಅಂಥ ನೇಮಕಾತಿಯ ಅವಧಿಯನ್ನು ಉತ್ತರಾನ್ವಯವಾಗಿಯಾಗಲಿ ಅಥವಾ ಪೂರ್ವಾನ್ವಯವಾಗಿಯಾಗಲಿ ಮೊಟಕುಗೊಳಿಸಬಹುದು ಮತ್ತು ವಿಸ್ತರಿಸಬಹುದು.

(2) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, (1)ನೇ ಉಪಪ್ರಕರಣದ ಮೇರೆಗೆ ಆಡಳಿತಗಾರನ ನೇಮಕಾತಿಯ ತರುವಾಯ, ನೇಮಕಾತಿ ಅವಧಿಯಲ್ಲಿ, ಸದರಿ ಮುನ್ಸಿಪಲ್ ಕೌನ್ಸಿಲು ಮತ್ತು ಅದರ ಸಮಿತಿಗಳು, ಮತ್ತು ಈ ಅಧಿನಿಯಮದ ಉಪಬಂಧಗಳು ಅಥವಾ ಇತರ ಯಾವುದೇ ಕಾನೂನನ್ನು ಜಾರಿಗೊಳಿಸಲು ಜವಾಬ್ದಾರಿ ಹೊತ್ತುಕೊಂಡ ಅಧ್ಯಕ್ಷ ಅಥವಾ ಉಪಾಧ್ಯಕ್ಷನು ಈ ಅಧಿನಿಯಮದ ಅಥವಾ ಇತರ

ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅವರಿಗೆ ಪ್ರದಾನ ಮಾಡಿದ ಅಥವಾ ವಿಧಿಸಿದ ಯಾವುವೇ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಯಾವುವೇ ಕರ್ತವ್ಯಗಳು ಅಥವಾ ಪ್ರಕಾರ್ಯಗಳನ್ನು ನೆರವೇರಿಸುವುದು ಮತ್ತು ನಿರ್ವಹಿಸುವುದು ನಿಂತು ಹೋಗತಕ್ಕದ್ದು ಮತ್ತು ಆಡಳಿತಗಾರನು ಅಂಥ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು. ಮತ್ತು ಎಲ್ಲಾ ಅಂಥ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಅದು ಸೂಕ್ತವೆಂದು ಸೂಚಿಸಿದರೆ, (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಆಡಳಿತಗಾರನಿಗೆ, ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ಅವನಿಗೆ ಪ್ರದಾನ ಮಾಡಿದ ಅಥವಾ ವಿಧಿಸಿದ ಅಧಿಕಾರಗಳನ್ನು ಚಲಾಯಿಸುವಲ್ಲಿ ಮತ್ತು ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಮತ್ತು ನಿರ್ವಹಿಸುವಲ್ಲಿ ಸಲಹೆ ನೀಡಲು ಮತ್ತು ಸಹಾಯ ಮಾಡಲು ಸಲಹಾ ಪರಿಷತ್ತನ್ನು ನೇಮಿಸಬಹುದು. ಸಲಹಾ ಪರಿಷತ್ತಿನ ಸದಸ್ಯರು, ರಾಜ್ಯ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

**316. ಕೆಲವು ಸಂದರ್ಭಗಳಲ್ಲಿ ಮುನ್ಸಿಪಲ್ ಕೌನ್ಸಿಲನ್ನು ರದ್ದುಗೊಳಿಸಲು ಸರ್ಕಾರದ ಅಧಿಕಾರ.–** ಸರ್ಕಾರದ ಅಭಿಪ್ರಾಯದಲ್ಲಿ, ಮುನ್ಸಿಪಲ್ ಕೌನ್ಸಿಲು, ಈ ಅಧಿನಿಯಮದ ಅಥವಾ ಅದರ ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅದರ ಮೇಲೆ ವಿಧಿಸಿದ ಅಥವಾ ಅದು ಕೈಗೊಂಡ ಕರ್ತವ್ಯಗಳನ್ನು ನೆರವೇರಿಸಲು ಸಕ್ಷಮವಾಗಿಲ್ಲ ಅಥವಾ ಎಡಬಿಡದೆ ತಪ್ಪಿತವನ್ನು ಮಾಡಿದರೆ, ಅಥವಾ ಈ ಅಧಿನಿಯಮದ ಉಪಬಂಧಗಳು ಅಥವಾ ಇತರ ಯಾವುದೇ ಕಾನೂನಿನ ಮೇರೆಗಿನ ಅಧಿಕಾರಗಳನ್ನು ಮೀರಿದರೆ ಅಥವಾ ದುರುಪಯೋಗ ಮಾಡಿದರೆ ಅಥವಾ ಅದಕ್ಕೆ ಕೊಟ್ಟ ನಿರ್ದೇಶನಗಳನ್ನು ಜಾರಿಗೊಳಿಸಲು ನಿರಾಕರಿಸಿದರೆ, ಅಥವಾ ಪೌರಸಭೆಗೆ ಹಾನಿಕಾರಕ ರೀತಿಯಲ್ಲಿ ಕಾರ್ಯನಿರ್ವಹಿಸಿದರೆ ಅಥವಾ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅದಕ್ಕಾಗಿನ ಕಾರಣಗಳ ವಿವರಣೆಯೊಂದಿಗಿನ ಆದೇಶವನ್ನು ಪ್ರಕಟಿಸುವ ಮೂಲಕ, ಆ ಮುನ್ಸಿಪಲ್ ಕೌನ್ಸಿಲು ಅಸಮರ್ಥ ಅಥವಾ ತಪ್ಪಿತದಲ್ಲಿದೆ ಎಂಬುದಾಗಿ ಅಥವಾ ಸಂದರ್ಭಾನುಸಾರ ಅದರ ಅಧಿಕಾರಗಳನ್ನು ಮೀರಿದೆ ಅಥವಾ ದುರುಪಯೋಗಪಡಿಸಿಕೊಂಡಿದೆಯೆಂದು ಘೋಷಿಸಬಹುದು ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಬಹುದಾದಂಥ ಒಂದು ವರ್ಷಕ್ಕೆ ಮೀರದ ಅವಧಿಗೆ ಅದನ್ನು ರದ್ದುಪಡಿಸಬಹುದು:

ಪರಂತು, ಹಿಂದೆ ಹೇಳಿದಂತೆ ರದ್ದಿಯಾತಿಯ ಆದೇಶವನ್ನು ಮಾಡುವುದಕ್ಕೆ ಮುಂಚೆ, ಅಂಥ ಆದೇಶವನ್ನು ಏಕೆ ಮಾಡಕೂಡದು ಎಂಬುದಕ್ಕೆ ಕಾರಣ ತೋರಿಸಲು ಮುನ್ಸಿಪಲ್ ಕೌನ್ಸಿಲಿಗೆ ಯುಕ್ತ ಅವಕಾಶವನ್ನು ಕೊಡತಕ್ಕದ್ದು:

ಮತ್ತು ಪರಂತು, ಬರಹದಲ್ಲಿನ ದಾಖಲ್ಮಾಡಬೇಕಾದ ಕಾರಣಗಳಿಗಾಗಿ, ಸರ್ಕಾರವು ರದ್ದಿಯಾತಿಯ ಅವಧಿಯನ್ನು ಆರು ತಿಂಗಳುಗಳಿಗೆ ಮೀರದ ಇನ್ನೂ ಹೆಚ್ಚಿನ ಅವಧಿಗೆ ವಿಸ್ತರಿಸಬಹುದು:

ಅದೂ ಅಲ್ಲದೆ ಸರ್ಕಾರವು ಆ ರದ್ದಿಯಾತಿಯನ್ನು ಒಂದು ಮತ್ತು ಆರು ತಿಂಗಳುಗಳಿಗೆ ಮೀರಿದ ಯಾವುದೇ ಅವಧಿಗಾಗಿ ರದ್ದಿಯಾತಿಯನ್ನು ಅದರ ನಿಯಂತ್ರಣಕ್ಕೆ ಮೀರದ ಬರಹದಲ್ಲಿ ದಾಖಲ್ಮಾಡಬೇಕಾದಂಥ ಕಾರಣಗಳಿಗಾಗಿ ಹಾಗೆ ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಮುಂದುವರಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಆದೇಶದ ಮೂಲಕ ಮುನ್ಸಿಪಲ್ ಕೌನ್ಸಿಲನ್ನು ರದ್ದುಗೊಳಿಸಿದಾಗ, ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು:–

(i) ಮುನ್ಸಿಪಲ್ ಕೌನ್ಸಿಲಿನ ಎಲ್ಲ ಕೌನ್ಸಿಲರುಗಳು, (1)ನೇ ಉಪಪ್ರಕರಣದ ಮೇರೆಗಿನ ಚುನಾವಣೆಯ ಅವರ ಅರ್ಹತೆಗೆ ಬಾಧಕವಾಗದಂತೆ, ಅಂಥ ಕೌನ್ಸಿಲರುಗಳಾಗಿ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ತಮ್ಮ ಪದವನ್ನು ಖಾಲಿ ಮಾಡತಕ್ಕದ್ದು;

(ii) ಮುನ್ಸಿಪಲ್ ಕೌನ್ಸಿಲಿನ ರದ್ದಿಯಾತಿ ಅವಧಿಯಲ್ಲಿ, ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಅವುಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲಿಗೆ ಪ್ರದಾನ ಮಾಡಿದ ಮತ್ತು ವಿಧಿಸಿದ ಎಲ್ಲಾ ಅಧಿಕಾರಗಳು ಮತ್ತು ಕರ್ತವ್ಯಗಳನ್ನು, ಸರ್ಕಾರವು ಆ ಬಗ್ಗೆ ಕಾಲಕಾಲಕ್ಕೆ ನೇಮಿಸಬಹುದಾದಂಥ ಅಧಿಕಾರಿಯು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು; ಮತ್ತು

(iii) ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾದ ಎಲ್ಲಾ ಸ್ವತ್ತುಗಳು, ಅದನ್ನು ಪುನರ್ರಚಿಸುವವರೆಗೆ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

(3) ವಿಚಾರಣೆಯನ್ನು ಮಾಡಿದ ತರುವಾಯ ಸರ್ಕಾರವು, ಹಾಗೆ ನಿರ್ದೇಶಿಸಿದರೆ, ಆಗ ರದ್ದುಗೊಳಿಸಿದ ಮುನ್ಸಿಪಲ್ ಕೌನ್ಸಿಲಿನ ಕೌನ್ಸಿಲರುಗಳ ಅವಧಿಯು ಏನೇ ಇದ್ದಾಗ್ಯೂ ಹಿಂದೆ ಹೇಳಿದಂತೆ ಎಲ್ಲಾ ಪರಿಣಾಮಗಳ ಸಹಿತ ರದ್ದಿಯಾತಿಯ ಅವಧಿಯು, ಮುನ್ಸಿಪಲ್ ಕೌನ್ಸಿಲಿನ ಪುನರ್ರಚನೆಗಾಗಿ ಸರ್ಕಾರವು ನಿಗದಿಪಡಿಸಬಹುದಾದಂಥ ದಿನಾಂಕದವರೆಗೆ, ಹಿಂದೆ ಹೇಳಿದಂತೆ ಪ್ರಕಟಗೊಂಡ ಆದೇಶದ ಮೂಲಕ ಉತ್ತರಾನ್ವಯವಾಗಿಯೇ ಆಗಲಿ ಅಥವಾ ಪೂರ್ವಾನ್ವಯವಾಗಿಯೇ ಆಗಲಿ ಮುಂದುವರಿಸತಕ್ಕದ್ದು.

(4) (i) ಮುನ್ಸಿಪಲ್ ಕೌನ್ಸಿಲನ್ನು ರದ್ದುಗೊಳಿಸಿದ ತರುವಾಯ (1)ನೇ ಉಪಪ್ರಕರಣದ ಮೇರೆಗಿನ ರದ್ದಿಯಾತಿಯ ಆದೇಶದಲ್ಲಿ-ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ (3)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ಕೊಟ್ಟಿರದಿದ್ದರೆ; ಮತ್ತು

(ii) ಮುನ್ಸಿಪಲ್ ಕೌನ್ಸಿಲಿನ ಪುನರ್ರಚನೆಗಾಗಿ (3)ನೇ ಉಪ-ಪ್ರಕರಣದ ಮೇರೆಗೆ ನಿಗದಿಪಡಿಸಿದಂಥ ದಿನಾಂಕಕ್ಕೆ ಮುಂಚೆ ಆ ಉಪಪ್ರಕರಣದ ಮೇರೆಗೆ ಒಂದು ನಿರ್ದೇಶನವನ್ನು ಕೊಟ್ಟಿದ್ದರೆ, -ಅದಕ್ಕೆ ಅನ್ವಯವಾಗುವ ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಕೌನ್ಸಿಲರುಗಳ ಚುನಾವಣೆ ಅಥವಾ ನೇಮಕಾತಿಯ ಮೂಲಕ ಅದನ್ನು ಪುನರ್ರಚಿಸತಕ್ಕದ್ದು.

(5) (1)ನೇ ಉಪ-ಪ್ರಕರಣದ ಮೇರೆಗಿನ ಮುನ್ಸಿಪಲ್ ಕೌನ್ಸಿಲಿನ ರದ್ದಿಯಾತಿಯ ಆದೇಶವನ್ನು ಮತ್ತು (3)ನೇ ಉಪಪ್ರಕರಣದ ಮೇರೆಗಿನ ಆದೇಶವನ್ನು ಅದಕ್ಕಾಗಿನ ಕಾರಣಗಳ ವಿವರಣೆಯೊಂದಿಗೆ, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಇಡತಕ್ಕದ್ದು.

**317. ಮುನ್ಸಿಪಲ್ ಕೌನ್ಸಿಲುಗಳ ನಡುವಣ ವಿವಾದಗಳು.-** (1) ಯಾವ ವಿವಾದದ ತೀರ್ಮಾನಕ್ಕಾಗಿ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿಲ್ಲವೋ ಆ ಯಾವುದೇ ವಿವಾದವು, ಈ ಅಧಿನಿಯಮದ ಅಥವಾ ಇತರ ಯಾವುದೇ ಅಧಿನಿಯಮದ ಉಪಬಂಧಗಳ ಮೇರೆಗೆ ಉದ್ಭವಿಸುವ ಯಾವುವೇ ವಿಷಯಗಳ ಬಗ್ಗೆ ಮುನ್ಸಿಪಲ್ ಕೌನ್ಸಿಲು ಮತ್ತು ಒಂದು ಅಥವಾ ಹೆಚ್ಚು ಇತರ ಪೌರಸಭಾ ನಿಕಾಯಗಳ ನಡುವೆ ಇದ್ದರೆ, ಮತ್ತು ಆ ವಿವಾದವು ಸೌಹಾರ್ದಯುತವಾಗಿ ಇತ್ಯರ್ಥವಾಗದಿದ್ದರೆ,-

(ಕ) ಡೆಪ್ಯುಟಿ ಕಮಿಷನರನು, ವಿವಾದವು ಅದೇ ಜಿಲ್ಲೆಯಲ್ಲಿ ಎರಡು ಅಥವಾ ಹೆಚ್ಚು ಪಟ್ಟು ಮುನ್ಸಿಪಲ್ ಕೌನ್ಸಿಲುಗಳ ಅಥವಾ ಅದೇ ಜಿಲ್ಲೆಯಲ್ಲಿನ ಪಟ್ಟಣ ಮುನ್ಸಿಪಲ್ ಕೌನ್ಸಿಲು ಮತ್ತು ಅಧಿಸೂಚಿತ ಪ್ರದೇಶ ಸಮಿತಿಯ ನಡುವೆ ಇದ್ದರೆ ವಿವಾದದ ಸಂಜ್ಞೇಯತೆ ತೆಗೆದುಕೊಳ್ಳಬಹುದು ಮತ್ತು ತಾನೇ ಅದನ್ನು ತೀರ್ಮಾನಿಸಬಹುದು;

(ಖ) ಯಾವುದೇ ನಗರ ಪೌರಸಭಾ ನಿಗಮವು ವಿವಾದಕ್ಕೆ ಪಕ್ಷಕಾರನಾಗಿದ್ದಾಗ ಹೊರತು, ಅದೇ ಕಂದಾಯ ವಿಭಾಗಗಳಲ್ಲಿ ಇತರ ಎಲ್ಲಾ ಪ್ರಕರಣಗಳನ್ನು ಕಮಿಷನರನು ಆ ವಿವಾದದ ಸಂಜ್ಞೇಯತೆ ತೆಗೆದುಕೊಳ್ಳಬಹುದು ಮತ್ತು ಅದನ್ನು ತೀರ್ಮಾನಿಸಬಹುದು; ಮತ್ತು

(ಗ) ನಗರ ಪೌರ ನಿಗಮವು ಆ ವಿವಾದಕ್ಕೆ ಪಕ್ಷಕಾರನಾಗಿದ್ದರೆ ಅಥವಾ ವಿವಾದವು ಎರಡು ಅಥವಾ ಹೆಚ್ಚು ಕಂದಾಯ ವಿಭಾಗಗಳಲ್ಲಿನ ಪೌರ ನಿಕಾಯಗಳ ನಡುವೆ ಇದ್ದರೆ ಸರ್ಕಾರವು ಆ ವಿವಾದವನ್ನು ತೀರ್ಮಾನಿಸಬಹುದು.

(2) (1)ನೇ ಉಪಪ್ರಕರಣದ (ಖ) ಖಂಡದ ಮೇರೆಗಿನ ಡೆಪ್ಯೂಟಿ ಕಮಿಷನರನ ಆದೇಶದ ಮೇಲೆ ಕಮಿಷನರನಿಗೆ ಮತ್ತು (1)ನೇ ಉಪಪ್ರಕರಣದ (ಖ) ಖಂಡದ ಮೇರೆಗಿನ ಕಮಿಷನರನ ಆದೇಶದ ಮೇಲೆ ಸರ್ಕಾರಕ್ಕೆ ಅಪೀಲು ಇರತಕ್ಕದ್ದು.

(3) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ವಿವಾದಕ್ಕೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯವು ಯಾವುದೇ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

**318. ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಅಥವಾ ಅದು ತಪ್ಪಿದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ಅಧಿಕಾರ ಮತ್ತು ಪೌರಸಭಾ ನಿಧಿಯ ಹೊಣೆ.–** ಕಮಿಷನರನು ಅಥವಾ ಸರ್ಕಾರದ ಯಾರೇ ಅಧಿಕಾರಿ ಅಥವಾ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿ ಅಥವಾ ಸರ್ಕಾರವು, ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಅಥವಾ ಅದು ತಪ್ಪುವಲ್ಲಿ ಕಾನೂನುಸಮ್ಮತ ಕ್ರಮವನ್ನು ಕೈಗೊಂಡಾಗ, ಈ ಉದ್ದೇಶಕ್ಕಾಗಿ ಅವಶ್ಯವಿರುವಂಥ ಕರಾರುಗಳನ್ನು ಮಾಡಿಕೊಳ್ಳಲು ಅವನು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಯಾರ ಅಧಿಕಾರಗಳನ್ನು ಅವನು ಚಲಾಯಿಸುತ್ತಿರುವನೋ ಆ ಪೌರಸಭಾ ಪ್ರಾಧಿಕಾರಿಯ ಹಾಗೆ ಈ ಅಧಿನಿಯಮದ ಮೇರೆಗೆ ಅಂಥದೇ ಸಂರಕ್ಷಣೆಗೆ ಹಕ್ಕುಳ್ಳವನಾಗಿರತಕ್ಕದ್ದು, ಮತ್ತು ಅಂಥ ಪುರಸಭಾ ಪ್ರಾಧಿಕಾರಿಯು ಕ್ರಮ ಕೈಗೊಂಡಿದ್ದರೆ ಹೇಗೋ ಹಾಗೆ ಅಷ್ಟರಮಟ್ಟಿಗೆ ಅಂಥ ಅಧಿಕಾರಗಳನ್ನು ಚಲಾಯಿಸುವುದರಿಂದ ಹಾನಿ ಅನುಭವಿಸುವ ಯಾರೇ ವ್ಯಕ್ತಿಯು ಪೌರಸಭಾ ನಿಧಿಯಿಂದ ವಸೂಲ್ಮಾಡತಕ್ಕದ್ದು.

**319. ಮುನ್ಸಿಪಲ್ ಕೌನ್ಸಿಲುಗಳ ಉಪವಿಧಿಗಳನ್ನು ರದ್ದುಗೊಳಿಸಲು ಅಥವಾ ಮಾರ್ಪಾಡು ಮಾಡಲು ಸರ್ಕಾರದ ಅಧಿಕಾರ.–** (1) ಸರ್ಕಾರವು ಅಧಿಸೂಚನೆ ಮೂಲಕ, ಯಾವುದೇ ಕಾಲದಲ್ಲಿ ಯಾವುದೇ ಮುನ್ಸಿಪಲ್ ಕೌನ್ಸಿಲು ರಚಿಸಿದ ಯಾವುದೇ ಉಪವಿಧಿಯನ್ನು ಪೂರ್ಣವಾಗಿ ಅಥವಾ ಭಾಗಶಃ ನಿರಶನಗೊಳಿಸಬಹುದು ಅಥವಾ ಮಾರ್ಪಾಟು ಮಾಡಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ಕ್ರಮವನ್ನು ಕೈಕೊಳ್ಳುವ ಮುಂಚೆ, ಸರ್ಕಾರವು ಉದ್ದೇಶಿಸಿದ ಅಧಿಸೂಚನೆಯ ಕರಡನ್ನು ಪ್ರಕಟಿಸತಕ್ಕದ್ದು ಮತ್ತು ಅದನ್ನು ಮುನ್ಸಿಪಲ್ ಕೌನ್ಸಿಲಿಗೆ ತಿಳಿಸತಕ್ಕದ್ದು, ಪ್ರಸ್ತಾವನೆಯ ವಿರುದ್ಧ ಕಾರಣವನ್ನು ತೋರಿಸಲು ಮುನ್ಸಿಪಲ್ ಕೌನ್ಸಿಲಿಗೆ ಹಾಗೂ ಸಾರ್ವಜನಿಕರಿಗೆ ಯುಕ್ತ ಅವಧಿಯನ್ನು ನಿಗದಿಪಡಿಸತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲಿನ ಹಾಗೂ ಸಾರ್ವಜನಿಕ ವಿವರಣೆಗಳು ಮತ್ತು ಆಕ್ಷೇಪಣೆಗಳು ಯಾವುವಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸತಕ್ಕದ್ದು.

(2) ಯಾವುದೇ ಉಪವಿಧಿಯ ನಿರಸನ ಅಥವಾ ಮಾರ್ಪಾಟು ಯಾವುದೇ ದಿನಾಂಕವನ್ನು ಅದರಲ್ಲಿ ನಿರ್ದಿಷ್ಟಪಡಿಸಿರದಿದ್ದರೆ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಪ್ರಕಟಣೆಯ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದ್ದು. ಮತ್ತು ಅಂಥ ದಿನಾಂಕಕ್ಕೆ ಮುಂಚೆ ಮಾಡಿದ ಲೋಪಿಸಿದ ಅಥವಾ ಅನುಭವಿಸಿದ ಯಾವುದೇ ಕಾರ್ಯ ಬಾಧಿಸತಕ್ಕದ್ದಲ್ಲ.

**320. ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಅಧಿಕಾರಗಳು.–** (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸರ್ಕಾರವು, ಒಂದು ಮುನ್ಸಿಪಲ್ ಕೌನ್ಸಿಲಿನ ಯಾವುದೇ ಅಧಿಕಾರಿ ಅಥವಾ ನೌಕರನನ್ನು, ಯಾವುದೇ ಇತರ ಮುನ್ಸಿಪಲ್ ಕೌನ್ಸಿಲಿನ ಅಥವಾ ಇತರ ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಸರ್ಕಾರವು ಯಾವುದೇ ಇಲಾಖೆಯ ಸೇವೆಗೆ ವರ್ಗಾಯಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಸರ್ಕಾರವು (1)ನೇ ಉಪಪ್ರಕರಣದ ಮೇರೆಗೆ ಮಾಡಿದ ವರ್ಗಾವಣೆಗಳನ್ನು ಪರಿಣಾಮಗೊಳಿಸುವ ಉದ್ದೇಶಕ್ಕಾಗಿ, ಅದು ಅವಶ್ಯವೆಂದು ಯೋಚಿಸುವಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳನ್ನು ಹೊರಡಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ನಿರ್ದೇಶನಗಳನ್ನು ಮುನ್ಸಿಪಲ್ ಕೌನ್ಸಿಲು ಮತ್ತು ಸಂಬಂಧಪಟ್ಟ ಪೌರಸಭಾ ಪ್ರಾಧಿಕಾರವು ಪಾಲಿಸತಕ್ಕದ್ದು.

**321. ಸರ್ಕಾರದಿಂದ ಅಧಿಕಾರಗಳ ಪ್ರತ್ಯಾಯೋಜನೆಗಳು.–** (1) ಸರ್ಕಾರವು, ಅಧಿಸೂಚನೆ ಮೂಲಕ ನಿಯಮ ರಚನಾಧಿಕಾರವನ್ನು ಹೊರತುಪಡಿಸಿ, ನಿಯಮಿಸಬಹುದಾದಂಥ ಈ ಅಧಿನಿಯಮದ ಮೇರೆಗಿನ ಅದರ ಅಧಿಕಾರಗಳನ್ನು ಕಮಿಷನರನಿಗೆ ಅಥವಾ ಡೆಪ್ಯುಟಿ ಕಮಿಷನರನಿಗೆ ಪ್ರತ್ಯಾಯೋಜಿಸಬಹುದು.

(2) ಈ ಅಧಿನಿಯಮದ ಮೇರೆಗೆ ಕಮಿಷನರನಿಗೆ ಪ್ರದಾನ ಮಾಡಿದ ಯಾವುದೇ ಅಧಿಕಾರವನ್ನು, ಸರ್ಕಾರವು ಅಧಿಸೂಚನೆ ಮೂಲಕ ಡೆಪ್ಯೂಟಿ ಕಮಿಷನರನಿಗೆ ಪ್ರತ್ಯಾಯೋಜಿಸಬಹುದು.

(3) (1) ಅಥವಾ (2)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಪ್ರತ್ಯಾಯೋಜನೆಯು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ಇರತಕ್ಕದ್ದು.

**322. ಪುನರೀಕ್ಷಣೆ.–** (1) ಸರ್ಕಾರವು ಅಥವಾ ಕಮಿಷನರನು, ಈ ಅಧಿನಿಯಮದ ಮೇರೆಗಿನ ತೆರಿಗೆ ನಿರ್ಧರಣೆ ಮತ್ತು ತೆರಿಗೆ ನಿರ್ಧರಣೆ ಪುನರೀಕ್ಷಣಾ ಆದೇಶಗಳನ್ನೊಳಗೊಂಡು ಯಾರೇ ಅಧೀನ ಅಧಿಕಾರಿಯ ಯಾವುವೇ ವ್ಯವಹರಣೆಗಳ ದಾಖಲೆಯನ್ನು ಕೇಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಸಂದರ್ಭಾನುಸಾರ, ಸರ್ಕಾರವು ಅಥವಾ ಕಮಿಷನರನು ಸೂಕ್ತವಾದುದು ಎಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ ಅಧೀನ ಅಧಿಕಾರಿಯ ಆದೇಶವು ಕಾನೂನಿಗೆ ವಿರುದ್ಧವಾದುದು ಮತ್ತು ನ್ಯಾಯ ವೈಫಲ್ಯವನ್ನು ಉಂಟು ಮಾಡಿದೆಯೆಂದು ಮನದಟ್ಟು ಮಾಡಿಕೊಂಡರೆ, ಸರ್ಕಾರವು ಅಥವಾ ಕಮಿಷನರನು ಅದರ ಮೇಲೆ ನ್ಯಾಯವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ ಸರ್ಕಾರವು, ಅಪೀಲು ಪ್ರಾಧಿಕಾರದ ವ್ಯವಹರಣೆಗಳನ್ನೊಳಗೊಂಡು ಮುನ್ಸಿಪಲ್ ಕೌನ್ಸಿಲಿನ ಯಾವುವೇ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅಂಥ ವ್ಯವಹರಣೆಗಳಲ್ಲಿನ ಯಾವುದೇ ಆದೇಶವು ಕಾನೂನಿಗೆ ವಿರುದ್ಧವಾಗಿದೆ ಅಥವಾ ಪೌರಸಭೆಯ ಹಿತಾಸಕ್ತಿಗಳಿಗೆ ಬಾಧಕವನ್ನುಂಟುಮಾಡುತ್ತದೆ ಎಂದು ಮನದಟ್ಟಾದರೆ, ಅದು ನ್ಯಾಯವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

(3) (1) ಮತ್ತು (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು, ಯಾರೇ ಪಕ್ಷಕಾರನಿಗೆ ಬಾಧಕವಾಗುವಂತೆ ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟಿದ್ದ ಹೊರತು ಮಾಡತಕ್ಕದ್ದಲ್ಲ.

## ಅಧ್ಯಾಯ–XIII

## ನಿಯಮಗಳು ಮತ್ತು ಉಪವಿಧಿಗಳು

**323. ಸರ್ಕಾರದಿಂದ ನಿಯಮಗಳ ರಚನೆ.–** (1) ಸರ್ಕಾರವು, ಅಧಿಸೂಚನೆ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು ಮತ್ತು ಯಾವ ವ್ಯವಹರಣೆಗೆ, ನಮೂನೆಯನ್ನು ನಿಯಮಿಸತಕ್ಕದ್ದೆಂದು, ಅದು ಪರ್ಯಾಲೋಚಿಸುವುದೋ ಆ ಯಾವುದೇ ವ್ಯವಹರಣೆಗೆ ನಮೂನೆಗಳನ್ನು ಅಂಥ ನಿಯಮಗಳ ಮೂಲಕ ನಿಯಮಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ;

(ಖ) ವ್ಯವಹಾರದ ನಡವಳಿಕೆಯನ್ನು ನಿಯಂತ್ರಿಸುವ ಮತ್ತು ಯಾವುದೇ ಅಧಿಕಾರಗಳ ಅಥವಾ ಕರ್ತವ್ಯಗಳ ಪ್ರತ್ಯಾಯೋಜನೆ ಮತ್ತು ಮುನ್ಸಿಪಲ್ ಕೌನ್ಸಿಲಿನ ಸಮಿತಿಗಳ ನೇಮಕ ಮತ್ತು ರಚನೆಯ ಬಗ್ಗೆ;

(ಖ) (i) ಅಧ್ಯಕ್ಷ, ಉಪಾಧ್ಯಕ್ಷ ಯಾವುದೇ ಸಮಿತಿಯ ಅಧ್ಯಕ್ಷ ಅಥವಾ ಮುನ್ಸಿಪಲ್ ಕಮಿಷನರ್ ಮತ್ತು ಚೀಫ್ ಆಫೀಸರನ ಕಾರ್ಯನಿರ್ವಾಹಕ ಪ್ರಕಾರ್ಯಗಳನ್ನು ನಿರ್ಧರಿಸುವುದು ಮತ್ತು ಅಂಥ ವ್ಯಕ್ತಿಗಳಿಗೆ ಮುನ್ಸಿಪಲ್ ಕೌನ್ಸಿಲಿನ ಯಾವುದೇ ಅಧಿಕಾರ ಅಥವಾ ಕರ್ತವ್ಯಗಳನ್ನು ಪ್ರತ್ಯಾಯೋಜಿಸುವ ಬಗ್ಗೆ;

(ii) ಮುನ್ಸಿಪಲ್ ಕೌನ್ಸಿಲು ನಿಯೋಜಿಸಬೇಕಾದ ಅಧಿಕಾರಗಳು ಮತ್ತು ನೌಕರರ ಸಿಬ್ಬಂದಿ ಅವರ ಅನುಕ್ರಮ ಪದನಾಮಗಳು ಮತ್ತು ಕರ್ತವ್ಯಗಳು ಮತ್ತು 70ನೇ ಪ್ರಕರಣದ ಮೇರೆಗೆ ಅವರಿಗೆ ಪ್ರತ್ಯಾಯೋಜಿಸಬೇಕಾದ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿರ್ಧರಿಸುವ ಬಗ್ಗೆ;

(ಗ) ಮುನ್ಸಿಪಲ್ ಕೌನ್ಸಿಲಿನ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಅದರ ಅಧಿಕಾರಿಗಳು ಮತ್ತು ನೌಕರರ ಮಾರ್ಗದರ್ಶನದ ಬಗ್ಗೆ;

(ಘ) ಯಾರಿಂದ ಭದ್ರತೆಯನ್ನು ಅಗತ್ಯಪಡಿಸುವುದು ಯುಕ್ತವೆಂದು ಭಾವಿಸಬಹುದೋ ಆ ಯಾರೇ ಅಧಿಕಾರಿ ಅಥವಾ ನೌಕರನು ಒದಗಿಸಬೇಕಾದ ಭದ್ರತೆಯ ಮೊಬಲಗು ಮತ್ತು ಸ್ವರೂಪದ ಬಗ್ಗೆ;

(ಙ) ಪೌರಸಭೆಯಲ್ಲಿ ತೆರಿಗೆಗಳನ್ನು ನಿರ್ಧರಿಸುವ, ವಿಧಿಸುವ ಮತ್ತು ಸಂಗ್ರಹಿಸುವುದು, ವಿನಾಯಿತಿಯನ್ನು ಕೊಡಬಹುದಾದಂಥ ಸಂದರ್ಭಗಳು, ಮಾಫಿಗಳು ಯಾವ ಷರತ್ತುಗಳ ಮೇಲೆ ಮತ್ತು ಎಷ್ಟರ ಮಟ್ಟಿಗೆ ಮಂಜೂರ್ಮಾಡುವ, ಮತ್ತು ಅಂಥ ತೆರಿಗೆಗಳಿಗೆ ಸಂಬಂಧಿಸಿದಂತೆ ಮರುಪಾವತಿಗಳನ್ನು ಮಾಡಬೇಕಾದ ಮತ್ತು ಸಂದಾಯ ಮಾಡಬೇಕಾದಂಥ ವ್ಯವಸ್ಥೆ, 139ನೇ ಪ್ರಕರಣದ ಮೇರೆಗೆ ಯಾವುದೇ ತೆರಿಗೆಯ ಬದಲಾಗಿ ನಿಗದಿಪಡಿಸಬೇಕಾದ ವೆಚ್ಚಗಳು ಅಥವಾ ಸಂದಾಯಗಳ ಮಿತಿಗಳು, ಯಾವುದೇ ತೆರಿಗೆಯ ಬಗ್ಗೆ ಬಾಕಿಯಿರುವ ಸಂದಾಯಗಳ ತಗಾದೆ ನೋಟೀಸುಗಳಿಗಾಗಿ ಮತ್ತು ಜಫ್ತಿ ವಾರೆಂಟುಗಳನ್ನು ಹೊರಡಿಸಲು ಮತ್ತು ಜಾರಿಗೊಳಿಸುವುದಕ್ಕಾಗಿನ ಫೀಜುಗಳು; ಮತ್ತು ಕರಸ್ಥ ಮಾಡಿದ ಯಾವುದೇ ಪಶು ಸಂಪತ್ತಿನ ನಿರ್ವಹಣೆಗೆ ವಿಧಿಸತಕ್ಕ ದರಗಳು; ಮತ್ತು ಅಂಥ ತೆರಿಗೆಗಳು, ವೆಚ್ಚಗಳು, ಸಂದಾಯಗಳು, ಫೀಜುಗಳ ಅಥವಾ ದರಗಳನ್ನು ಯಾವ ಕಾಲದಲ್ಲಿ ಮತ್ತು ಯಾವ ವಿಧಾನದಲ್ಲಿ ವಿಧಿಸತಕ್ಕದ್ದು ಅಥವಾ ಸಂಗ್ರಹಿಸತಕ್ಕದ್ದು ಮತ್ತು ಸಂದಾಯವಾಗತಕ್ಕದ್ದು ಮತ್ತು ಅವುಗಳ ಸಂದಾಯವನ್ನು ಸ್ವೀಕರಿಸಲು ಅಧಿಕೃತರಾದ ವ್ಯಕ್ತಿಗಳು ಮತ್ತು 144ನೇ ಪ್ರಕರಣದ ಮೇರೆಗೆ ಚರ ಮತ್ತು ಸ್ಥಿರ ಸ್ವತ್ತಿನ ಹರಾಜನ್ನು ನಡೆಸತಕ್ಕಂಥ ರೀತಿಯನ್ನು ನಿಯಮಿಸುವ ಬಗ್ಗೆ;

(ಚ) ಯಾವುದೇ ತೆರಿಗೆಯ ಬಗ್ಗೆ ಅಥವಾ ಯಾವುದೇ ತೆರಿಗೆಯನ್ನು ವಸೂಲ್ಮಾಡುವುದರಲ್ಲಿನ ಖರ್ಚುಗಳು ಅಥವಾ ಇತರ ಯಾವುದೇ ಲೆಕ್ಕದ ಬಗ್ಗೆ ಮೊತ್ತಗಳನ್ನು ಯಾವ ಷರತ್ತುಗಳಿಗೊಳಪಟ್ಟು ವಸೂಲೀಯವಲ್ಲವೆಂದು ತೆಗೆದುಹಾಕಬಹುದೋ ಆ ಷರತ್ತುಗಳನ್ನು ಮತ್ತು ಯಾವ ಷರತ್ತುಗಳಿಗೊಳಪಟ್ಟು ಜಫ್ತಿಗಾಗಿ ವಿಧಿಸಬಹುದಾದ ಯಾವುದೇ ಫೀಜಿನ ಪೂರ್ಣ ಅಥವಾ ಯಾವುದೇ ಭಾಗವನ್ನು ಮಾಫಿ ಮಾಡಹುದಾದಂಥ ಷರತ್ತುಗಳನ್ನು ನಿಯಮಿಸುವ ಬಗ್ಗೆ;

(ಛ) ಅಧಿಕಾರಿಗಳು ಮತ್ತು ನೌಕರರ ನೌಕರಿಭರ್ತಿ ಮತ್ತು ಸೇವಾ ಷರತ್ತುಗಳನ್ನು ವಿನಿಯಮಿಸುವುದು ಮತ್ತು ಅಂಥ ಅಧಿಕಾರಿಗಳು ಮತ್ತು ನೌಕರರುಗಳು ಅಥವಾ ಅವರಲ್ಲಿ ಯಾರಾದರೂ ನಿವೃತ್ತರಾದಾಗ ಅಥವಾ ಅವರ ಕರ್ತವ್ಯದ ನಿರ್ವಹಣೆಯಲ್ಲಿ ಅಸಮರ್ಥರಾದಾಗ ಪಿಂಚಣಿ, ಉಪದಾನಗಳು ಅಥವಾ ಅನುಕಂಪ ಭತ್ಯೆಗಳನ್ನು ಸ್ವೀಕರಿಸತಕ್ಕಂಥ ಷರತ್ತುಗಳನ್ನು ಮತ್ತು ಅಂಥ ಪಿಂಚಣಿ, ಉಪದಾನಗಳು, ಅಥವಾ ಅನುಕಂಪ ಭತ್ಯೆಗಳ ಮೊಬಲಗನ್ನು ನಿರ್ಧರಿಸುವುದು, ಮತ್ತು ಯಾರೇ ಅಧಿಕಾರಿಗಳು ಅಥವಾ ನೌಕರರು ಮರಣ ಹೊಂದಿದ ಮೇಲೆ, ಜೀವಂತ ಸಂಬಂಧಿಗಳಿಗೆ ಯಾವುವೇ ಉಪದಾನಗಳು ಅಥವಾ ಅನುಕಂಪ ಭತ್ಯೆಗಳನ್ನು ಯಾವ ಷರತ್ತುಗಳ ಮೇರೆಗೆ ಸಂದಾಯ ಮಾಡಬಹುದೋ ಆ ಷರತ್ತುಗಳನ್ನು ನಿಯಮಿಸುವ ಬಗ್ಗೆ;

(ಜ) ಯಾವ ಷರತ್ತುಗಳ ಮೇರೆಗೆ ತೆರಿಗೆದಾರರು ಸರ್ಕಾರಿ ಲೆಕ್ಕ ಪರಿಶೋಧಕನ ಮುಂದೆ ಹಾಜರಾಗಬಹುದೋ, ಪುಸ್ತಕ ಮತ್ತು ಓಚರುಗಳನ್ನು ಪರಿಶೀಲಿಸಬಹುದೋ ಮತ್ತು ಲೆಕ್ಕದಲ್ಲಿ ನಮೂದಿಸಿದ ಅಥವಾ ಅದರಿಂದ ಬಿಟ್ಟುಬಿಟ್ಟ ಬಾಬುಗಳ ಬಗ್ಗೆ ಆಕ್ಷೇಪಣೆ ಎತ್ತಬಹುದೋ ಆ ಷರತ್ತುಗಳ ಬಗ್ಗೆ;

(ಝ) ಲೆಕ್ಕಪರಿಶೋಧಕರ ಅಧಿಕಾರಗಳು ಮತ್ತು ಕರ್ತವ್ಯಗಳು ಮತ್ತು ಲೆಕ್ಕ ಪರಿಶೋಧನೆಯನ್ನು ನಡೆಸುವುದಕ್ಕೆ ಅವರು ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಅಂಥ ಲೆಕ್ಕಪರಿಶೋಧನೆಯನ್ನು ನಡೆಸಬಹುದಾದಂಥ ಕಾಲಗಳ ಬಗ್ಗೆ;

(ಞ) ಪೌರಸಭಾ ನಿಧಿಯಿಂದ ಭಾಗಶಃ ಅಥವಾ ಪೂರ್ಣವಾಗಿ ನಿರ್ವಹಿಸಬೇಕಾದ ಕಾಮಗಾರಿಗಳಿಗಾಗಿ ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸುವುದು ಮತ್ತು ಯಾವ ಪ್ರಾಧಿಕಾರಿಯಿಂದ ಮತ್ತು ಯಾವ ಷರತ್ತುಗಳಿಗೊಳಪಟ್ಟು ಕಾಮಗಾರಿಗಳಿಗಾಗಿನ ಅಂಥ ನಕ್ಷೆಗಳು ಮತ್ತು ಅಂದಾಜುಗಳನ್ನು ಮಂಜೂರು ಮಾಡಬಹುದೋ ಆ ಪ್ರಾಧಿಕಾರಿ ಮತ್ತು ಆ ಷರತ್ತುಗಳ ಬಗ್ಗೆ;

(ಟ) ಈ ಅಧಿನಿಯಮದಿಂದ ಅನ್ಯಥಾ ಉಪಬಂಧಿಸಿರದ ಯಾವುದೇ ಸಂಸ್ಥೆಯ ವ್ಯವಸ್ಥಾಪನೆಯನ್ನು ಮುನ್ಸಿಪಲ್ ಕೌನ್ಸಿಲುಗಳಿಗೆ ವರ್ಗಾವಣೆ ಮಾಡುವ ಬಗ್ಗೆ;

(ಠ) ಮುನ್ಸಿಪಲ್ ಕೌನ್ಸಿಲು ಮತ್ತು ಸರ್ಕಾರದ ಅಥವಾ ಸರ್ಕಾರಿ ಅಧಿಕಾರಿಗಳ ನಡುವಣ ಪತ್ರವ್ಯವಹಾರವು ಯಾವ ಮಧ್ಯವರ್ತಿ ಕಚೇರಿಗಳ ಮೂಲಕ ನಡೆಯಬೇಕೋ ಆ ಮಧ್ಯವರ್ತಿ ಕಚೇರಿಗಳು ಯಾವುವಾದರೂ ಇದ್ದರೆ, ಅವುಗಳ ಬಗ್ಗೆ;

(ಡ) ಪೌರಸಭಾ ನಿಧಿಯಿಂದ ವೆಚ್ಚವನ್ನು ವಹಿಸುವುದಕ್ಕೆ ಮತ್ತು ಪೌರಸಭಾ ನಿಧಿಯಿಂದ ಸಂದಾಯಗಳ ವಿಧಾನದ ಬಗ್ಗೆ;

(ಢ) ಪೌರಸಭಾ ತೆರಿಗೆಗಳ ಬಾಕಿಗಳ ಮೇಲೆ ಬಡ್ಡಿಯನ್ನು ವಿಧಿಸುವ ಬಗ್ಗೆ;

(ಣ) ವಿವರಪಟ್ಟಿಕೆಗಳು, ವಿವರಣಪತ್ರಗಳು ಮತ್ತು ವರದಿಗಳನ್ನು ಒಪ್ಪಿಸುವುದು ಮತ್ತು ಜಮೆ ಮತ್ತು ವಾರ್ಷಿಕ ಅಂದಾಜುಗಳ ಮತ್ತು ಆಡಳಿತ ವರದಿಗಳನ್ನು ತಯಾರಿಸುವುದು, ಒಪ್ಪಿಸುವುದು ಮತ್ತು ಮಂಜೂರಾತಿ – ಇವುಗಳ ಬಗ್ಗೆ;

(ತ) ಈ ಅಧಿನಿಯಮದ ಮೇರೆಗೆ, ಲೈಸೆನ್ಸ್‌ಗಳ ಮತ್ತು ಅನುಮತಿಗಳ ಮಂಜೂರಾತಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ವಿನಿಯಮಿಸುವ ಬಗ್ಗೆ; ಮತ್ತು

(ಥ) ಈ ಅಧಿನಿಯಮದಲ್ಲಿ ಯಾವುದೇ ಉಪಬಂಧವಿಲ್ಲದಿರುವ ಅಥವಾ ಸಾಕಷ್ಟು ಉಪಬಂಧವಿಲ್ಲದಿರುವಂಥ ಅಪೀಲು ಪ್ರಾಧಿಕಾರಗಳನ್ನು ನಿರ್ದಿಷ್ಟಪಡಿಸುವುದು, ಅಪೀಲುಗಳು ಅಥವಾ ಪುನರೀಕ್ಷಣ ಅರ್ಜಿಗಳನ್ನು ಯಾವ ಅವಧಿಯೊಳಗೆ ದಾಖಲ್ಮಾಡಬೇಕೋ ಆ ಅವಧಿಗಳು ಅಥವಾ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜುಗಳು ಅಥವಾ ವೆಚ್ಚಗಳನ್ನು ಇವುಗಳನ್ನು ನಿಯಮಿಸುವುದನ್ನೊಳಗೊಂಡು, ಯಾವುವೇ ಇತರ ವಿಷಯಗಳು ಮತ್ತು ಸರ್ಕಾರದ ಅಭಿಪ್ರಾಯದಲ್ಲಿ ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕೆ ಅವಶ್ಯವಾಗಬಹುದಾದಂಥ ಉಪಬಂಧಕ್ಕಾಗಿನ ಯಾವುದೇ ಇತರ ವಿಷಯಗಳ ಬಗ್ಗೆ ನಿಯಮಗಳನ್ನು ರಚಿಸಬಹುದು.

(3) ಈ ಪ್ರಕರಣದ ಮೇರೆಗೆ ನಿಯಮವನ್ನು ರಚಿಸುವಲ್ಲಿ ಸರ್ಕಾರಕ್ಕೆ ಅದು ಉಲ್ಲಂಘನೆಯ ತಪ್ಪಿತಸ್ಥನಾಗಿರುವ ವ್ಯಕ್ತಿಯು, ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು

ಉಲ್ಲಂಘನೆಯು ಮುಂದುವರಿಯುತ್ತಿರುವುದು ಆಗಿರುವಲ್ಲಿ, ಮತ್ತು ಮೊದಲ ಅಪರಾಧ ನಿರ್ಣಯದ ತರುವಾಯ, ಉಲ್ಲಂಘನೆಯು ಮುಂದುವರಿಯುತ್ತಿರುವಂಥ ಪ್ರತಿಯೊಂದು ದಿವಸಕ್ಕೆ ಇಪ್ಪತ್ತೈದು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದೆಂದು ಉಪಬಂಧಿಸಬಹುದು.

(4) ನಿಯಮವು, ಎಲ್ಲಾ ಪೌರಸಭೆಗಳಿಗೆ ಅಥವಾ ಅದರ ಪ್ರವರ್ತನೆಯಿಂದ ಸ್ಪಷ್ಟವಾಗಿ ವಿನಾಯಿತಿಗೊಳಿಸಿಲ್ಲದ ಎಲ್ಲಾ ಪುರಸಭೆಗಳಿಗೆ ಸಾಮಾನ್ಯವಾಗಿರಬಹುದು ಅಥವಾ ಸರ್ಕಾರವು ನಿರ್ದೇಶಿಸಬಹುದಾದಂತೆ ಯಾವುದೇ ಒಂದು ಅಥವಾ ಹೆಚ್ಚು ಪೌರಸಭೆಗಳಿಗೆ ಪೂರ್ಣವಾಗಿ ಅಥವಾ ಭಾಗಕ್ಕೆ ವಿಶೇಷವಾಗಿರಬಹುದು.

(5) ಈ ಅಧಿನಿಯಮದ ಮೇರೆಗಿನ ನಿಯಮವನ್ನು ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ನಿಯಮವನ್ನು ರಚಿಸಿದ್ದಕ್ಕಾಗಿನ ಕಾರಣಗಳನ್ನು, ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಇಡಬೇಕಾದ ವಿವರಣ ಪತ್ರದಲ್ಲಿ ನಿರ್ದಿಷ್ಟಪಡಿಸತಕ್ಕದ್ದು, (6)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಟಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮವುಳ್ಳದ್ದಾಗಿರತಕ್ಕದ್ದು.

(6) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದರು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನದಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಾಗೆ ಇಡಲಾದ ಅಧಿವೇಶನವು ಅಥವಾ ಅದರ ನಿಕಟೋತ್ತರದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡು ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

**324. ಉಪವಿಧಿಗಳ ರಚನಾಧಿಕಾರ.–** (1) ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಒಳಪಟ್ಟು ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲು, ಕಾಲಕಾಲಕ್ಕೆ,–

(ಕ) ಮಾರುಕಟ್ಟೆಗಳು, ವಸ್ತುಗಳ ಮಾರಾಟಕ್ಕಾಗಿ ಉಪಯೋಗಿಸುವ ಎಲ್ಲಾ ಸಾರ್ವಜನಿಕ ಸ್ಥಳಗಳು ಮತ್ತು ಕಸಾಯಿಖಾನೆಗಳು ಮತ್ತು ಮಾರಾಟ ಅಥವಾ ಬಾಡಿಗೆಗಾಗಿ ಇರುವಂಥ ಪ್ರಾಣಿಗಳಿಂದ ಅಥವಾ ಅವುಗಳಿಗಾಗಿ ಅಥವಾ ಅವುಗಳ ಉತ್ಪನ್ನಗಳನ್ನು ಮಾರಾಟ ಮಾಡಲು ಉಪಯೋಗಿಸಿದ ಎಲ್ಲ ಸ್ಥಳಗಳ ನಿಯಂತ್ರಣ ಮತ್ತು ಪರಿಶೀಲನೆಗಾಗಿ ಮತ್ತು ಅವುಗಳಲ್ಲಿನ ವ್ಯವಹಾರವು ಸರಿಯಾಗಿ ಮತ್ತು ಸ್ವಚ್ಛವಾಗಿ ನಡೆಯುವುದಕ್ಕಾಗಿ, ಪೌರಸಭಾ ಮಾರುಕಟ್ಟೆಗಳ ಅಥವಾ ಇತರ ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ ಹಣ್ಣುಗಳು, ಹೂವು ಮತ್ತು ತರಕಾರಿಗಳು ಅಥವಾ ಮಾಂಸ, ಮೀನು, ಮೊಟ್ಟೆಗಳು ಮತ್ತು ಪ್ರಾಣಿಗಳ ಮಾರಾಟವನ್ನು ನಿಯಂತ್ರಿಸುವುದಕ್ಕಾಗಿ, ಮತ್ತು ಮುನ್ಸಿಪಲ್ ಕೌನ್ಸಿಲಿಗೆ ಸೇರಿದಂಥ ಅವುಗಳಲ್ಲಿ ಯಾವುದೊಂದರ ಉಪಯೋಗಕ್ಕಾಗಿ ಬಾಡಿಗೆಗಳನ್ನು ನಿಗದಿಪಡಿಸಲಾದ ಮತ್ತು ವಿಧಿಸಬೇಕಾದ ಇತರ ವೆಚ್ಚಗಳಿಗಾಗಿ;

(ಖ) ಮುನ್ಸಿಪಲ್ ಕೌನ್ಸಿಲಿಗೆ ಸೇರಿಲ್ಲದ ಯಾವುದೇ ಸ್ಥಳವನ್ನು, ಅವುಗಳನ್ನು ಯಾವ ಷರತ್ತಿನ ಮೇಲೆ ಮತ್ತು ಅವುಗಳಿಗೆ ಸಂಬಂಧಿಸಿದಂತೆ ಯಾವ ಪ್ರದೇಶಗಳಲ್ಲಿ ಅಥವಾ ಬಡಾವಣೆಗಳಲ್ಲಿ ಲೈಸೆನ್ಸ್

ಅನ್ನು ಮಂಜೂರು ಮಾಡಬಹುದು, ತಿರಸ್ಕರಿಸಬಹುದು, ಅಮಾನತುಗೊಳಿಸಬಹುದು ಅಥವಾ ವಾಪಸು ತೆಗೆದುಕೊಳ್ಳಬಹುದು,–

(i) ಕಸಾಯಿಖಾನೆಯಾಗಿ;

(ii) ಮನುಷ್ಯನ ಆಹಾರಕ್ಕಾಗಿ ಅಥವಾ ಪಾನೀಯಕ್ಕಾಗಿ ಉದ್ದೇಶಿಸಿದ ಯಾವುದೇ ವಸ್ತು ಅಥವಾ ಪದಾರ್ಥದ, ಅಂಥ ಆಹಾರವನ್ನು ಅಥವಾ ಪಾನೀಯವನ್ನು ಅಂಥ ಸ್ಥಳದಲ್ಲಿ ಬಳಸುವುದಕ್ಕಾಗಿಯೇ ಇರಲಿ ಅಥವಾ ಇಲ್ಲದಿರಲಿ, ವ್ಯಾಪಾರದ ಉದ್ದೇಶಕ್ಕಾಗಿ ತಯಾರಿಕೆ, ಸಿದ್ಧಪಡಿಸುವಿಕೆ, ದಾಸ್ತಾನು, ಮಾರಾಟ ಅಥವಾ ಸರಬರಾಜಿಗಾಗಿ;

(iii) ಮನುಷ್ಯನ ಆಹಾರಕ್ಕಾಗಿ ಉದ್ದೇಶಿಸಿದ, ಪ್ರಾಣಿಗಳು ಮತ್ತು ಪಕ್ಷಿಗಳು ಅಥವಾ ಮಾಂಸ, ಮೀನು ಅಥವಾ ಮೊಟ್ಟೆಗಳ ಮಾರಾಟಕ್ಕಾಗಿನ ಮಾರುಕಟ್ಟೆ ಅಥವಾ ಅಂಗಡಿಯಾಗಿ ಅಥವಾ ಹಣ್ಣುಗಳು ಅಥವಾ ತರಕಾರಿಗಳ ಮಾರಾಟಕ್ಕಾಗಿನ ಮಾರುಕಟ್ಟೆಯಾಗಿ;

(iv) 256ನೇ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಉದ್ದೇಶಕ್ಕಾಗಿ;

(v) ಡೈರಿ, ಭೋಜನ ಗೃಹ ಅಥವಾ ವಸತಿಗೃಹ ಅಥವಾ (ಸಾರ್ವಜನಿಕ ಅಥವಾ ಮನ್ನಣೆ ಪಡೆದ ನಿಯಂತ್ರಣದಲ್ಲಿರುವ ವಿದ್ಯಾರ್ಥಿಗಳ ಹಾಸ್ಟೆಲ್‌ಗಳನ್ನು ಹೊರತುಪಡಿಸಿ) ಅಂಥದೇ ಉದ್ದೇಶಕ್ಕಾಗಿ;

(vi) ಯಾವ ಉದ್ದೇಶಕ್ಕಾಗಿ ಲೈಸೆನ್ಸು ಪಡೆಯುವುದನ್ನು ನಿಯಮಿಸಲಾಗಿದೆಯೋ ಅಥವಾ ನಿಯೋಜಿಸಬಹುದಾಗಿದೆಯೋ ಆ ಯಾವುದೇ ಇತರ ಉದ್ದೇಶಕ್ಕಾಗಿ;

ಯಾವುದೇ ಸ್ಥಳದ ಉಪಯೋಗಕ್ಕಾಗಿ ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೆ ಒಳಪಟ್ಟು ಮತ್ತು ಯಾವ ಸಂದರ್ಭಗಳಲ್ಲಿ ಮತ್ತು ಯಾವ ಪ್ರದೇಶಗಳು ಅಥವಾ ಸ್ಥಳಗಳಿಗೆ ಸಂಬಂಧಿಸಿದಂತೆ, ಲೈಸೆನ್ಸುಗಳನ್ನು ಮಂಜೂರು ಮಾಡಬಹುದೋ, ನಿರಾಕರಿಸಬಹುದೋ, ಅಮಾನತುಗೊಳಿಸಬಹುದೋ, ಅಥವಾ ಹಿಂತೆಗೆದುಕೊಳ್ಳಬಹುದೋ ಆ ಷರತ್ತುಗಳನ್ನು ಮತ್ತು ಸಂದರ್ಭಗಳನ್ನು ಮತ್ತು ಪ್ರದೇಶಗಳನ್ನು ಅಥವಾ ಸ್ಥಳಗಳನ್ನು ನಿಯಮಿಸುವುದು ಮತ್ತು ಹಿಂದೆ ಹೇಳಿದಂತೆ ಉಪಯೋಗಿಸಿದ ಯಾವುದೇ ಸ್ಥಳದಲ್ಲಿ, ಅದರಲ್ಲಿ ಸ್ವಚ್ಛತೆಯನ್ನು ಸುನಿಶ್ಚಿತಪಡಿಸಿಕೊಳ್ಳುವ ಹಾಗೆ ಅಥವಾ ಅದರಿಂದ ಉಂಟಾಗುವ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಕಾರಕ, ಅಸಹ್ಯಕರ, ಅಥವಾ ಅಪಾಯಕರ ಪರಿಣಾಮವನ್ನು ಕಡಿಮೆ ಮಾಡುವ ಹಾಗೆ, ವ್ಯವಹಾರ ನಡೆಸುವುದರ ಪರಿಶೀಲನೆ ಮತ್ತು ನಿಯಂತ್ರಣಕ್ಕಾಗಿ ಉಪಬಂಧಿಸಲು;

(ಗ) ಕೆಲಸಗಾರರನ್ನು ಅಥವಾ ನಿಯೋಜಿತವಾದ ವ್ಯಕ್ತಿಗಳನ್ನು ಕರೆಯುವ ಅಥವಾ ಹೋಗಲು ಬಿಡುವ ಉದ್ದೇಶಕ್ಕಾಗಿ, ಕಾರ್ಖಾನೆಗಳ ಅಥವಾ ಇತರ ಸ್ಥಳಗಳಲ್ಲಿ, ಆವಿ ಅಥವಾ ಯಾಂತ್ರಿಕ ಸಾಧನಗಳು ಅಥವಾ ವಿದ್ಯುಚ್ಛಕ್ತಿಯ ಮೂಲಕ ನಡೆಸಿದ ಶಿಳ್ಳೆಗಳು ಮತ್ತು ತುತ್ತೂರಿಗಳ ಉಪಯೋಗಕ್ಕಾಗಿ, ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೆ ಒಳಪಟ್ಟು, ಮತ್ತು ಯಾವ ಸಂದರ್ಭಗಳಲ್ಲಿ ಮತ್ತು ಯಾವ ಪ್ರದೇಶಗಳು ಅಥವಾ ಸ್ಥಳಗಳಿಗೆ ಸಂಬಂಧಿಸಿದಂತೆ, ಲೈಸೆನ್ಸುಗಳನ್ನು ಮಂಜೂರು ಮಾಡಬಹುದೋ, ನಿರಾಕರಿಸಬಹುದೋ, ಅಮಾನತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ, ಆ ಷರತ್ತುಗಳು ಮತ್ತು ಸಂದರ್ಭಗಳು ಮತ್ತು ಪ್ರದೇಶಗಳು ಅಥವಾ ಸ್ಥಳಗಳನ್ನು ನಿಯಮಿಸಲು;

(ಘ) ಕುದುರೆಗಳು, ಒಂಟೆಗಳು, ಜಾನುವಾರು, ಕತ್ತೆಗಳು, ಹಂದಿಗಳು, ಕುರಿಗಳು ಅಥವಾ ಮೇಕೆಗಳನ್ನು, ಅವುಗಳ ಸಂಖ್ಯೆ ಮತ್ತು ಸಾರ್ವಜನಿಕ ಆರೋಗ್ಯಕ್ಕೆ ಅಪಾಯವನ್ನು ತಡೆಗಟ್ಟಲು,

ಅವಶ್ಯವಾಗಬಹುದಾದಂತೆ, ಆ ಉದ್ದೇಶಕ್ಕಾಗಿ ಉಪಯೋಗಿಸಬೇಕಾದ ಸ್ಥಳಗಳ ಬಗ್ಗೆ ಅಂಥ ಉಪವಿಧಿಗಳಲ್ಲಿ ನಿಯಮಿಸಿದಂಥ ನಿಬಂಧನೆಗಳಿಗೆ ಅನುಸಾರವಾಗಿ ಅಲ್ಲದೆ ಅನ್ಯಥಾ ಲಾಯದಲ್ಲಿ ಕಟ್ಟುವುದನ್ನು ಅಥವಾ ಹಿಂಡುಗಟ್ಟುವುದನ್ನು ನಿಷೇಧಿಸಲು;

(ಐ) ಯಾವ ಷರತ್ತುಗಳಿಗೆ ಒಳಪಟ್ಟು, ಮಿಠಾಯಿ, ಹಾಲು, ಬೆಣ್ಣೆ, ಅಥವಾ ಹಾಲಿನ ಇತರ ಉತ್ಪನ್ನವನ್ನು ಮಾರಾಟ ಮಾಡಬಹುದೋ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಮಿಠಾಯಿ, ಹಾಲು, ಬೆಣ್ಣೆ ಅಥವಾ ಇತರ ಹಾಲಿನ ಉತ್ಪನದಲ್ಲಿನ ವ್ಯಾಪಾರಿಯು, ಅಥವಾ ಆಮದು ಮಾಡುವವನ ಅಥವಾ ಮಾರಾಟ ಮಾಡುವವನ, ವ್ಯಾಪಾರ ಅಥವಾ ವ್ಯವಹಾರವನ್ನು ನಡೆಸುವುದಕ್ಕಾಗಿ ಅಥವಾ ಹಾಲು ಕೊಡುವ ಜಾನುವಾರುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಲು, ಯಾವುದೇ ಸ್ಥಳದ ಉಪಯೋಗಕ್ಕಾಗಿ ಅಥವಾ ವ್ಯಾಪಾರದ ಉದ್ದೇಶಗಳಿಗಾಗಿ, ಹಾಲಿನ ದಾಸ್ತಾನಿಗಾಗಿ ಅಥವಾ ಮಾರಾಟಕ್ಕಾಗಿ, ಅಥವಾ ಬೆಣ್ಣೆ ಅಥವಾ ಇತರ ಹಾಲಿನ ಉತ್ಪನ್ನಗಳನ್ನು ತಯಾರಿಸುವುದಕ್ಕಾಗಿ, ದಾಸ್ತಾನು ಮಾಡುವುದಕ್ಕಾಗಿ ಅಥವಾ ಮಾರಾಟ ಮಾಡುವುದಕ್ಕಾಗಿ, ಲೈಸೆನ್ಸುಗಳನ್ನು ಮಂಜೂರು ಮಾಡಬಹುದೋ, ನಿರಾಕರಿಸಬಹುದೋ, ಅಮಾನತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ, ಆ ಯಾವುವೇ ಷರತ್ತುಗಳನ್ನು ನಿಯಮಿಸಲು;

(ಚ) (i) ಹಾಲು ಕೊಡುವ ಜಾನುವಾರುಗಳ ಪರಿಶೀಲನೆಗಾಗಿ, ಮತ್ತು ಡೈರಿ ಇಟ್ಟಿರುವವರ ಅಥವಾ ಹಾಲು ಮಾರಾಟಗಾರರ ವೃತ್ತಿಯನ್ನು ಅವಲಂಬಿಸಿರುವ ವ್ಯಕ್ತಿಗಳ ಅಧಿಭೋಗದಲ್ಲಿರುವ ಡೈರಿಗಳು ಮತ್ತು ದನದ ಕೊಟ್ಟಿಗೆಗಳ ನಿರ್ಮಾಣ, ಉದ್ದಗಲಗಳು, ಗಾಳಿ ಸಂಚಾರ ವ್ಯವಸ್ಥೆ, ದೀಪದ ವ್ಯವಸ್ಥೆ, ಸ್ವಚ್ಛ ಮಾಡುವುದು, ಚರಂಡಿ ವ್ಯವಸ್ಥೆ ಮತ್ತು ನೀರು ಸರಬರಾಜನ್ನು ನಿಯಮಿಸುವುದು ಮತ್ತು ನಿಯಂತ್ರಿಸುವುದು;

(ii) ಹಾಲು ಮಾರುವವರು ಅಥವಾ ಬೆಣ್ಣೆ ಮಾಡುವವರು, ಹಾಲು ಅಥವಾ ಬೆಣ್ಣೆಗಾಗಿ ಉಪಯೋಗಿಸಿದ ಹಾಲಿನ ಸ್ಟೋರುಗಳು, ಹಾಲಿನ ಅಂಗಡಿಗಳು ಮತ್ತು ಪಾತ್ರೆಗಳ ಸ್ವಚ್ಛತೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ;

(ಛ) ಜನನ ಮತ್ತು ಮರಣಗಳ ನೋಂದಣಿ ಮತ್ತು ಪೌರಸಭೆಯಲ್ಲಿ ಅಂಕಿ-ಅಂಶಗಳನ್ನು ಪಡೆಯುವುದಕ್ಕಾಗಿ ಮತ್ತು ಅಂಥ ನೋಂದಣಿಯನ್ನು ಅಥವಾ ಅಂಕಿ ಸಂಖ್ಯೆಗಳನ್ನು ಪರಿಣಾಮಕಾರಿಯನ್ನಾಗಿ ಮಾಡಲು ಅವಶ್ಯವಿರಬಹುದಾದಂಥ ಮಾಹಿತಿ ಒದಗಿಸುವುದನ್ನು ಜಾರಿಗೊಳಿಸುವುದಕ್ಕಾಗಿ;

(ಜ) ಸತ್ತವರ ವಿಲೆಯನ್ನು ನಿಯಂತ್ರಿಸುವುದು ಮತ್ತು ಸತ್ತವರ ವಿಲೆಗಾಗಿ ಅಂಥ ಸ್ಥಳಗಳನ್ನು ಉಪಯೋಗಿಸಲು, ಹಕ್ಕುಳ್ಳ ಜನಸಮುದಾಯ ಅಥವಾ ಜನಸಮುದಾಯದ ಪಂಗಡದ ಧಾರ್ಮಿಕ ಆಚರಣೆಗಳಿಗೆ ಯುಕ್ತ ಗಮನಕೊಟ್ಟು, ಸತ್ತವರ ವಿಲೆಗಾಗಿನ ಎಲ್ಲ ಸ್ಥಳಗಳನ್ನು ಸುಸ್ಥಿತಿಯಲ್ಲಿ ಮತ್ತು ನಿರುಪಾಯ ನೈರ್ಮಲ್ಯ ಸ್ಥಿತಿಯಲ್ಲಿ ನಿರ್ವಹಿಸುವುದು;

(ಝ) ಅಪಾಯಕಾರಿ ಕಾಯಿಲೆಯ ಯಾವುದೇ ಪ್ರಕರಣಗಳ ಬಗ್ಗೆ ಮಾಹಿತಿ ಒದಗಿಸುವುದನ್ನು ಜಾರಿಗೊಳಿಸುವುದಕ್ಕಾಗಿ ಮತ್ತು 248, 249 ಮತ್ತು 251ನೇ ಪ್ರಕರಣಗಳ ಉಪಬಂಧಗಳನ್ನು ಕಾರ್ಯಗತ ಮಾಡುವುದಕ್ಕಾಗಿ;

(ಞ) ಪೌರಸಭೆಯ ನಿವಾಸಿಗಳು, ಪೌರಸಭೆಯಲ್ಲಿ ವಿಧಿಸಲಾದ ಯಾವುದೇ ತೆರಿಗೆಗೆ ಅವರ ಅನುಕ್ರಮ ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ಅವಶ್ಯವಾಗಬಹುದಾದಂಥ ಮಾಹಿತಿ ಒದಗಿಸುವುದನ್ನು ಜಾರಿಗೊಳಿಸುವುದಕ್ಕಾಗಿ;

(ಟ) ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗಬಹುದಾದ ಯಾವುದೇ ವಾಹನ ಅಥವಾ ನಾಯಿಗೆ ಸಂಖ್ಯೆ ಕೊಡುವುದು ಮತ್ತು ನೋಂದಣಿಗಾಗಿ;

(ಠ) ಜಾಹೀರಾತುಗಳ ನಿಯಂತ್ರಣ ಮತ್ತು ಅವುಗಳ ಪ್ರದರ್ಶನಕ್ಕಾಗಿ;

(ಡ) [ * * * * * * ]

(ಢ) ಪೌರಸಭೆಯ ಪರಿಮಿತಿಗಳೊಳಗಾಗಲಿ ಅಥವಾ ಹೊರಗಾಗಲಿ ನೀರು ಸರಬರಾಜಿನ ಮೂಲಗಳು ಮತ್ತು ಸಾಧನಗಳಿಗೆ ಮತ್ತು ನೀರಿನ ವಿತರಣೆಗಾಗಿನ ಉಪಕರಣಗಳನ್ನು ಸಂರಕ್ಷಿಸುವುದು ಮತ್ತು ಹಾನಿಯನ್ನು ತಡೆಗಟ್ಟುವುದಕ್ಕಾಗಿ ಮತ್ತು ನೀರಿನ ಸರಬರಾಜು ಮತ್ತು ಬಳಕೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನೂ ನಿಯಂತ್ರಿಸುವುದಕ್ಕಾಗಿ, ಮತ್ತು ನೀರನ್ನು ಬಿಡುವುದು ಅಥವಾ ನಿಲ್ಲಿಸುವುದು ಮತ್ತು ಪೋಲನ್ನು ತಡೆಗಟ್ಟುವುದಕ್ಕಾಗಿ ಮತ್ತು ಮುನ್ಸಿಪಲ್ ಕೌನ್ಸಿಲಿನ ಸ್ವತ್ತಾಗಿರಲಿ ಅಥವಾ ಇಲ್ಲದಿರಲಿ, ಪೌರಸಭಾ ನೀರು ಸರಬರಾಜು ಗೃಹಗಳ ಮತ್ತು ಅವುಗಳಿಗೆ ಸಂಬಂಧಿಸಿದ ಕೊಳವೆಗಳು ಮತ್ತು ಜೋಡಣೆಗಳ ನಿರ್ಮಾಣ, ನಿರ್ವಹಣೆ ಮತ್ತು ನಿಯಂತ್ರಣಕ್ಕಾಗಿ;–

**ವಿವರಣೆ:–** ಈ ಖಂಡದ ಉದ್ದೇಶಗಳಿಗಾಗಿ "ನೀರು ಸರಬರಾಜಿನ ಮೂಲಗಳು ಮತ್ತು ಸಾಧನಗಳು" ಸಾರ್ವಜನಿಕರು ಉಪಯೋಗಿಸುವಂಥ ಖಾಸಗಿ ಬಾವಿಗಳನ್ನು ಒಳಗೊಳ್ಳತಕ್ಕದ್ದು.

(ಣ) ವಸತಿ ಗೃಹಗಳ ಸ್ವಾಧೀನ ಹೊಂದಿರುವ ವ್ಯಕ್ತಿಗಳಿಗೆ ಸಾಕಷ್ಟು ಶುದ್ಧ ನೀರಿನ ಸರಬರಾಜನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ;

(ತ) ಪೌರಸಭಾ ಪರಿಮಿತಿಗಳೊಳಗೆ ಸಾರ್ವಜನಿಕ ಸ್ನಾನಗೃಹ ಮತ್ತ ಬಟ್ಟೆ ಒಗೆಯುವ ಸ್ಥಳಗಳನ್ನು ನಿಯಂತ್ರಿಸುವುದು;

(ಥ) ನೈರ್ಮಲ್ಯ ಮತ್ತು ನಿರ್ಮಲೀಕರಣವನ್ನು ನಿಯಂತ್ರಿಸುವುದು;

(ದ) 91ನೇ ಪ್ರಕರಣದ (ಫ) ಖಂಡದ ಮೇರೆಗೆ ಬಡವರಿಗಾಗಿ ಉದ್ದೇಶಿಸಿದ ಗೃಹಗಳ ನಿರ್ಮಾಣ, ಉಪಯೋಗ ಮತ್ತು ವಿಲೆಗಾಗಿನ ಷರತ್ತುಗಳನ್ನು ನಿಯಂತ್ರಿಸುವುದಕ್ಕಾಗಿ;

(ಧ) ಸತ್ತ ಪ್ರಾಣಿಗಳ ಶವಗಳನ್ನು ವಿಲೆ ಮಾಡುವುದನ್ನು ನಿಯಂತ್ರಿಸುವುದು;

(ನ) ಯಾವ ಷರತ್ತುಗಳ ಮೇಲೆ ಸಾರ್ವಜನಿಕ ಬೀದಿಗಳ ಮೇಲಿನ ತಾತ್ಕಾಲಿಕ ರಚನೆಗಳ ತಾತ್ಕಾಲಿಕ ಸ್ವಾಧೀನಕ್ಕಾಗಿ ಅಥವಾ ಸಾರ್ವಜನಿಕ ಬೀದಿಗಳ ಮೇಲೆ ಮುಂಚಾಚುವಿಕೆಗಳಿಗಾಗಿ ಅನುಮತಿಯನ್ನು ಕೊಡಬಹುದೋ ಆ ಷರತ್ತುಗಳನ್ನೂ ನಿಯಂತ್ರಿಸುವುದು ಮತ್ತು ಸ್ಥಿರತೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ಮತ್ತು ಬೆಂಕಿಯನ್ನು ತಡೆಗಟ್ಟುವ ಉದ್ದೇಶಕ್ಕಾಗಿ ಮತ್ತು ಆರೋಗ್ಯದ ಉದ್ದೇಶಗಳಿಗಾಗಿ ಹೊಸ ಕಟ್ಟಡಗಳ ರಚನೆ ಮತ್ತು ಮೇಲ್ಛಾವಣಿಗಳ ಉದ್ದಗಲಗಳು, ಗೋಡೆಗಳು, ಅಡಿಪಾಯಿಗಳು, ಮಹಡಿಗಳು, ಚಾವಣಿಗಳು, ಮತ್ತು ಹೊಗೆ ಕೊಳವೆಗಳನ್ನು ನಿಯಂತ್ರಿಸುವುದು;

(ಪ) ಧಾನ್ಯದ ಅಂಗಡಿ ಅಥವಾ ಧಾನ್ಯದ ಸ್ಟೋರುಗಳಿಗಾಗಿ ಕಟ್ಟಡಗಳ ನಿರ್ಮಾಣ ಅಥವಾ ಉಪಯೋಗವನ್ನು ನಿಯಂತ್ರಿಸುವುದು ಮತ್ತು ಕಟ್ಟಡಗಳ ನಿರ್ಮಾಣಕ್ಕಾಗಿ ನಿವೇಶನಗಳ ಉಪಯೋಗವನ್ನು ನಿಯಂತ್ರಿಸುವುದು ಮತ್ತು ವಾಸದ ಉದ್ದೇಶಗಳಿಗಾಗಿ ಉದ್ದೇಶಿಸಿದ ಸ್ಥಳಗಳಲ್ಲಿ ಅಂಗಡಿಗಳು,

ಮಾರುಕಟ್ಟೆ ಸ್ಥಳಗಳು, ಕಾರ್ಖಾನೆಗಳು, ಸಾರ್ವಜನಿಕರು ಸೇರುವ ಸ್ಥಳಗಳು, ಅಥವಾ ಯಾವುದೇ ಅದೇ ಬಗೆಯ ಉದ್ದೇಶಕ್ಕಾಗಿ ಕಟ್ಟಡಗಳ ನಿರ್ಮಾಣ ಅಥವಾ ಉಪಯೋಗವನ್ನು ನಿಯಂತ್ರಿಸುವುದು;

(ಫ) ಬೀದಿಗಳ ವಿನ್ಯಾಸ ಮತ್ತು ಅವುಗಳ ಸ್ಥಳ ನಿವೇಶನಕ್ಕಾಗಿ ಸಾಕಷ್ಟು ವ್ಯವಸ್ಥೆಯನ್ನು ಮಾಡದ ಕಟ್ಟಡಗಳ ನಿರ್ಮಾಣವನ್ನು ತಡೆಗಟ್ಟುವುದಕ್ಕಾಗಿ;

(ಬ) ಒಳಗಾಗಲಿ, ಹೊರಗಾಗಲಿ ಸಾಕಷ್ಟು ಖಾಲಿ ಜಾಗಕ್ಕೆ ಮತ್ತು ಬಾಗಿಲುಗಳು ಮತ್ತು ಕಿಟಕಿಗಳು ಮತ್ತು ಗಾಳಿಯ ಮುಕ್ತ ಸಂಚಾರವನ್ನು ಪಡೆದುಕೊಳ್ಳಲು ಇತರ ಸಾಧನಗಳು ಇವುಗಳನ್ನು ವ್ಯವಸ್ಥೆ ಮಾಡುವ ಮತ್ತು ನಿರ್ವಹಿಸುವ ಮೂಲಕ ಕಟ್ಟಡಗಳಿಗೆ ಸಾಕಷ್ಟು ವಾಯು ಸಂಚಾರವನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ;

(ಭ) ಎರಡು ಅಥವಾ ಹೆಚ್ಚು ಪ್ರತ್ಯೇಕ ವಾಸಗೃಹಗಳಿಗಾಗಿ ವಿಭಾಗಿಸಲಾದ ಕಟ್ಟಡದ ಒಡೆಯನನ್ನು ಅಂಥ ಯಾವುದೇ ಕಟ್ಟಡದ ಅಥವಾ ಅದರಲ್ಲಿನ ಮೆಟ್ಟಿಲುಗಳು ದಾರಿ ಅಥವಾ ಖಾಸಗಿ ಅಂಗಳಕ್ಕೆ ಅಥವಾ ಅದರಲ್ಲಿನ ಕಕ್ಕಸುಗಳು ಅಥವಾ ಮೂತ್ರಿಗಳು ಅಥವಾ ಬಟ್ಟೆ ಒಗೆಯುವ ಸ್ಥಳಗಳ ಹತ್ತಿರ ಅಥವಾ ಅದಕ್ಕೆ ಹೋಗುವ ಜಾಗಗಳಿಗೆ ರಾತ್ರಿ ವೇಳೆಯಲ್ಲಿ ಸಾಕಷ್ಟು ದೀಪದ ವ್ಯವಸ್ಥೆಯನ್ನು ಮತ್ತು ಅಂಥ ದೀಪಗಳನ್ನು ಆರಿಸುವುದಕ್ಕೆ ವ್ಯವಸ್ಥೆ ಮಾಡಲು ಅಗತ್ಯಪಡಿಸುವುದಕ್ಕಾಗಿ;

(ಮ) ಈ ಅಧಿನಿಯಮದಲ್ಲಿ ನಿರ್ದಿಷ್ಟವಾಗಿ ಉಪಬಂಧಿಸಿರದ ಇತರೆ ಯಾವುದೇ ವಿಷಯದ ಬಗ್ಗೆ ಮುನ್ಸಿಪಲ್ ಕೌನ್ಸಿಲಿನ ಸ್ವತ್ತಾಗಿರಲಿ ಅಥವಾ ಇಲ್ಲದಿರಲಿ ಮತ್ತು ಚರಂಡಿಗಳು, ಗ್ರಾಮಸಾರ ಚರಂಡಿಗಳು, ವಾಯು ಸಂಚಾರ ಕೊಳವೆಗಂಬಗಳು, ಸಗಣಿ ಮತ್ತು ಗೊಬ್ಬರಗಳಿಗಾಗಿ, ಸಂಪುಟಗಳು, ರೊಚ್ಚುಗುಂಡಿಗಳು, ಪಾಯಿಖಾನೆಗಳು, ಕಕ್ಕಸುಗಳು, ಮೂತ್ರಿಗಳು ಮತ್ತು ಪ್ರತಿಯೊಂದು ಬಗೆಯ ಚರಂಡಿ ವ್ಯವಸ್ಥೆ ಅಥವಾ ಗ್ರಾಮಸಾರ ಚರಂಡಿ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ನಿಯಂತ್ರಣವನ್ನು ನಿಯಂತ್ರಿಸುವುದಕ್ಕಾಗಿ;

(ಯ) 170 ಮತ್ತು 187ನೇ ಪ್ರಕರಣಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲಿಗೆ ಅಗತ್ಯವಾಗುವ ಮತ್ತು ಮಾಹಿತಿ ಮತ್ತು ನಕ್ಷೆಯನ್ನು ನಿರ್ಧರಿಸುವುದು;

(ಕ ಕ) 1969ರ ಕರ್ನಾಟಕ ಸಂಚಾರ ನಿಯಂತ್ರಣ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಅಂಥ ಬೀದಿ ಅಥವಾ ಬೀದಿಯ ಭಾಗದ ಎರಡೂ ಕೊನೆಗಳಲ್ಲಿ ಸ್ತಂಭಗಳನ್ನು ನಿಲ್ಲಿಸುವ ಮೂಲಕ ಸಾರ್ವಜನಿಕರಿಗೆ ಅಪಾಯ, ಅಡಚಣೆ ಅಥವಾ ಅನಾನುಕೂಲತೆಯನ್ನು ತಡೆಗಟ್ಟಲು ಹಾಗೆ ಯಾವುದೇ ಅಂಥ ನಿರ್ದಿಷ್ಟ ಬೀದಿಯಲ್ಲಿ ವಾಹನ ಸಂಚಾರವನ್ನು ನಿಷೇಧಿಸುವುದು ನಡುರಸ್ತೆ ಅಥವಾ ಅದರ ಮೇಲಿನ ರಚನೆಗೆ, ಹಾನಿಯನ್ನುಂಟುಮಾಡುವ ಸಂಭವವಿದೆಯೆಂದು ಭಾವಿಸಬಹುದಾದಂಥ ನಮೂನೆ, ರಚನೆ, ಭಾರ ಅಥವಾ ಗಾತ್ರ ಅಥವಾ ಅಂಥ ಯಂತ್ರ ಸಾಮಗ್ರಿ ಅಥವಾ ಇತರ ಅತಿ ದೊಡ್ಡ ವಸ್ತುಗಳನ್ನು ಹೇರಿದ ಯಾವುವೇ ವಾಹನಗಳ ಓಡಾಟವನ್ನು ಅಂಥ ಉಪವಿಧಿಗಳಲ್ಲಿ ಸಾಮಾನ್ಯವಾಗಿ ಅಥವಾ ಅಂಥ ಉಪವಿಧಿಗಳಲ್ಲಿ ನಿಯಮಿಸಬಹುದಾದಂಥ ಅರ್ಜಿಯ ಕಾಲ ಮತ್ತು ಅದಕ್ಕಾಗಿನ ಫೀಜುಗಳ ಸಂದಾಯದ ಬಗ್ಗೆ, ನಿಬಂಧನೆಗಳ ಮೇಲೆ ಪ್ರತಿಯೊಂದು ಪ್ರಕರಣದಲ್ಲಿ ಮಂಜೂರು ಮಾಡಬೇಕಾದ ವಿಶೇಷ ಲೈಸೆನ್ಸುಗಳಲ್ಲಿ ನಿಯಮಿಸಬಹುದಾದಂತೆ, ಕಾಲ, ಎಳೆತದ ಅಥವಾ ಚಲನೆಯ ವಿಧಾನ, ನಡುರಸ್ತೆಯ ಸಂರಕ್ಷಣೆಗಾಗಿ ಉಪಕರಣಗಳ ಉಪಯೋಗ, ದೀಪಗಳ ಮತ್ತು ಸಹಾಯಕರ ಸಂಖ್ಯೆ, ಮತ್ತು ಇತರ ಸಾಮಾನ್ಯ ಮುನ್ನೆಚ್ಚರಿಕೆಗಳ ಬಗೆಗಿನ ಅಂಥ ಷರತ್ತುಗಳ ಮೇರೆಗೆ ಹೊರತು, ನಿಷೇಧಿಸುವುದು:

ಪರಂತು, ಯಾವುದೇ ನಿರ್ದಿಷ್ಟ ಬೀದಿ ಅಥವಾ ಬೀದಿಯ ಭಾಗಕ್ಕೆ ಮಾತ್ರ ಸಂಬಂಧಪಟ್ಟ ಯಾವುದೇ ಅಂಥ ಉಪವಿಧಿಯು, ಅಂಥ ನಿಷೇಧದ ಬಗೆಗಿನ ನೋಟೀಸುಗಳನ್ನು ಅಂಥ ಬೀದಿ ಅಥವಾ ರಸ್ತೆಯ ಭಾಗದ

ಎರಡೂ ಕೊನೆಗಳಲ್ಲಿ ಅಥವಾ ಅವುಗಳ ಹತ್ತಿರ ಎದ್ದುಕಾಣುವ ಸ್ಥಳಗಳಲ್ಲಿ ಮುನ್ಸಿಪಲ್ ಕೌನ್ಸಿಲು ಅಂಟಿಸಿದ್ದ ಹೊರತು, ಮತ್ತು ಅಲ್ಲಿಯವರೆಗೆ, ಅದು ಜಾರಿಯಲ್ಲಿರುವುದಕ್ಕಾಗಿ ಭಾವಿಸತಕ್ಕದ್ದಲ್ಲ;

(ಖ ಖ) ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾದ ಅಥವಾ ಅದರ ನಿಯಂತ್ರಣದಲ್ಲಿರುವ ಸಾರ್ವಜನಿಕ ಉದ್ಯಾನಗಳು, ತೋಟಗಳು ಮತ್ತು ಖಾಲಿ ಜಾಗಗಳನ್ನು ಹಾನಿಯಿಂದ ಅಥವಾ ದುರುಪಯೋಗದಿಂದ ಜೋಪಾನ ಮಾಡುವುದು, ಅವುಗಳ ವ್ಯವಸ್ಥಾಪನೆಯನ್ನು ಮತ್ತು ಸಾರ್ವಜನಿಕರು ಅವುಗಳನ್ನು ಉಪಯೋಗಿಸಬಹುದಾದಂಥ ರೀತಿಯನ್ನು ನಿಯಂತ್ರಿಸುವುದು ಮತ್ತು ಅವುಗಳಲ್ಲಿ ವ್ಯಕ್ತಿಗಳು ಸರಿಯಾಗಿ ವರ್ತಿಸುವಂತೆ ವ್ಯವಸ್ಥೆ ಮಾಡುವುದು;

(ಗ ಗ) ಮೋಜಿಣಿದಾರರ, ಅಥವಾ 187ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಿದ ನಕ್ಷೆಗಳನ್ನು ತಯಾರು ಮಾಡಬೇಕಾದಂಥ ವ್ಯಕ್ತಿಗಳ ಅಥವ ಕೊಳಾಯಿಗಾರರ ಅರ್ಹತೆಗಳನ್ನು ನಿಯಮಿಸುವುದು. ಮೋಜಿಣಿದಾರರು, ಅಥವಾ ಕೊಳಾಯಿಗಾರರು, ಅಥವಾ ನೀರು ಸರಬರಾಜು ಮಾಡುವ ಕಂಟ್ರಾಕ್ಟರುಗಳಿಗಿರಬೇಕಾದ ವ್ಯಕ್ತಿಗಳಿಗೆ ಲೈಸೆನ್ಸನ್ನು ಕೊಡುವುದು ಮತ್ತು ಅಂಥ ಲೈಸೆನ್ಸುಗಳಿಗೆ ಚಾರ್ಜು ಮಾಡಬೇಕಾದ ಫೀಜುಗಳನ್ನು ನಿಗದಿಪಡಿಸುವುದು ಮತ್ತು ಅಂಥ ಲೈಸೆನ್ಸುಗಳ ಉಪಬಂಧಗಳನ್ನು ಮಾರ್ಪಾಟು ಅಥವಾ ರದ್ದಿಯಾತಿಗಾಗಿ ಮತ್ತು ಲೈಸೆನ್ಸ್ ಪಡೆದ ಕೊಳಾಯಿಗಾರರು ಅಥವಾ ನೀರು ಸರಬರಾಜು ಮಾಡುವ ಕಂಟ್ರಾಕ್ಟರುಗಳಿಂದಲ್ಲದೆ ಬೇರೆಯವರು ನೀರು ಅಥವಾ ಚರಂಡಿ ವ್ಯವಸ್ಥೆ ಕೊಳವೆಗಳನ್ನು ಗೃಹ ಸಂಪರ್ಕಗಳಿಗೆ ಯಾವುವೇ ಬದಲಾವಣೆಗಳನ್ನು ಅಥವಾ ದುರಸ್ತಿಗಳನ್ನು ಅಥವಾ ಜೋಡಣೆಗಳನ್ನು ನಿರ್ವಹಿಸುವುದು ಮತ್ತು ಮಾಡುವುದನ್ನು ನಿಷೇಧಿಸುವುದು; ಲೈಸೆನ್ಸು ಪಡೆದ ಕೊಳಾಯಿಗಾರರು ಅಥವಾ ಲೈಸೆನ್ಸು ಪಡೆದ ನೀರು ಸರಬರಾಜು ಕಂಟ್ರಾಕ್ಟರುಗಳ ಮೇಲೆ ಸಾಕಷ್ಟು ನಿಯಂತ್ರಣವನ್ನು ಚಲಾಯಿಸುವುದಕ್ಕೆ ಉಪಬಂಧಿಸುವುದು, ಅವರು ಮಾಡಿದ ಎಲ್ಲಾ ಕಾಮಗಾರಿಗಳನ್ನು ಪರಿಶೀಲಿಸುವುದು ಮತ್ತು ಲೈಸೆನ್ಸು ಪಡೆದ ಕೊಳಾಯಿಗಾರ ಅಥವಾ ಲೈಸೆನ್ಸು ಪಡೆದ ನೀರು ಸರಬರಾಜು ಮಾಡುವ ಕಂಟ್ರಾಕ್ಟರುದಾರನಿಂದ ಮಾಡಿದ ಕೆಲಸದ ಗುಣಮಟ್ಟ, ಉಪಯೋಗಿಸಿದ ಸಾಮಗ್ರಿ, ಕೆಲಸದ ನಿರ್ವಹಣೆಯಲ್ಲಿನ ವಿಳಂಬ, ಮತ್ತು ಮಾಡಿದ ವೆಚ್ಚಗಳು, ಇವುಗಳ ಬಗ್ಗೆ ಮನೆಗಳ ಒಡೆಯರು ಅಥವಾ ಸ್ವಾಧೀನದಾರರು ಮಾಡಿದ ದೂರುಗಳನ್ನು ವಿಚಾರಿಸುವುದು ಮತ್ತು ವಿಲೆ ಮಾಡುವುದು;

(ಘ ಘ) ಯಾವುದೇ ಸ್ಥಳಗಳಲ್ಲಿ ಅಥವಾ 1948ರ ಕಾರ್ಖಾನೆಗಳ ಅಧಿನಿಯಮದಲ್ಲಿ ಪರಿಭಾಷಿಸಲಾದಂತೆ, ಯಾವುದೇ ಕಾರ್ಖಾನೆಯ ಸ್ಥಾಪನೆಗಾಗಿ ಲೈಸೆನ್ಸುಗಳನ್ನು ಯಾವ ಷರತ್ತುಗಳ ಮೇಲೆ ಅಥವಾ ಯಾವ ಷರತ್ತುಗಳಿಗೊಳಪಟ್ಟು ಮತ್ತು ಯಾವ ಸಂದರ್ಭಗಳಲ್ಲಿ ಯಾವ ಪ್ರದೇಶಗಳು ಮತ್ತು ಸ್ಥಳಗಳಿಗೆ ಸಂಬಂಧಿಸಿದಂತೆ ಮಂಜೂರು ಮಾಡಬಹುದೋ, ನಿರಾಕರಿಸಬಹುದೋ, ಅಮಾನತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಯಾವುವೇ ಷರತ್ತುಗಳು, ಸಂದರ್ಭಗಳು, ಪ್ರದೇಶಗಳು ಅಥವಾ ಸ್ಥಳಗಳನ್ನು ನಿಯಮಿಸುವುದು;

(ಙ ಙ) 1961ರ ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೊಳಪಟ್ಟು, 1961ನೇ ಕರ್ನಾಟಕ ಸಾರ್ವಜನಿಕ ವಾಹನಗಳ ಅಧಿನಿಯಮದ ಮೇರೆಗೆ ಮಂಜೂರ್ಮಾಡಲಾದ ಲೈಸೆನ್ಸುಗಳಿಗೆ ಸಂಬಂಧಿಸಿದಂತೆ ಬಾಡಿಗೆಗಾಗಿ ನಡೆಸುತ್ತಿರುವವುಗಳನ್ನು ಹೊರತುಪಡಿಸಿ ಇತರ ಕೈಬಂಡಿ ಅಥವಾ ಕೈಗಾಡಿಗಳನ್ನು ಉಪಯೋಗಿಸುವುದಕ್ಕೆ ಲೈಸೆನ್ಸನ್ನು ಮಂಜೂರ್ಮಾಡಬಹುದೋ, ನಿರಾಕರಿಸಬಹುದೋ, ಅಮಾನತ್ತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಷರತ್ತುಗಳನ್ನು ವಿನಿಯಮಿಸುವುದು ಮತ್ತು ಈ ಪ್ರಕರಣದ ಮೇರೆಗೆ ರಚಿಸಿದ ಉಪವಿಧಿಯ ಅನುಕರಣೆಯಲ್ಲಿ ಕ್ರಮಬದ್ಧವಾಗಿ ಲೈಸೆನ್ಸು ಪಡೆಯದ ಕೈ ಬಂಡಿ ಅಥವಾ ಕೈಗಾಡಿಯನ್ನು ಅಭಿಗ್ರಹಿಸುವುದಕ್ಕೆ ಮತ್ತು ತಡೆಹಿಡಿದಿಟ್ಟುಕೊಳ್ಳುವುದಕ್ಕೆ ಉಪಬಂಧಿಸಬಹುದು;

(ಚ ಚ) ಯಾವ ಷರತ್ತುಗಳ ಮೇಲೆ ಅಥವಾ ಅವುಗಳಿಗೆ ಒಳಪಟ್ಟು ಯಾವುದೇ ಭೂಮಿ, ಕಟ್ಟಡ ಅಥವಾ ರಚನೆಯ ಮೇಲ್‌ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಒಳಗೆ ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುವ ಯಾವುದೇ ಜಾಹಿರಾತನ್ನು ನಿಲ್ಲಿಸಲು, ಪ್ರದರ್ಶಿಸಲು, ಜೋಡಿಸಲು ಅಥವಾ ಉಳಿಸಿಕೊಳ್ಳಲು ಅಥವಾ ಇತರ ಯಾವುದೇ ರೀತಿಯಲ್ಲಿ ಪ್ರದರ್ಶಿಸುವುದಕ್ಕಾಗಿ ಅನುಮತಿಯನ್ನು ಕೊಡಬಹುದೋ, ನವೀಕರಿಸಬಹುದೋ, ನಿರಾಕರಿಸಬಹುದೋ, ಅಮಾನತುಗೊಳಿಸಬಹುದೋ ಅಥವಾ ಹಿಂತೆಗೆದುಕೊಳ್ಳಬಹುದೋ ಆ ಷರತ್ತುಗಳ್ನು ನಿಯಮಿಸಲು;

(ಛ ಛ) ಮುನ್ಸಿಪಲ್ ಕೌನ್ಸಿಲು ಕೊಟ್ಟ ಲೈಸೆನ್ಸುಗಳ ಅಥವಾ ಅನುಮತಿಗಳಿಗಾಗಿ ಅಥವಾ ದಾಖಲೆಗಳ ಪರಿಶೀಲನೆ ಅಥವಾ ದಸ್ತಾವೇಜುಗಳ ಪ್ರತಿಗಳನ್ನು ಅಥವಾ ಲೈಸೆನ್ಸು ಅಥವಾ ಪರ್ಮಿಟುಗಳ ದ್ವಿಪ್ರತಿಗಳನ್ನು ಕೊಡುವುದಕ್ಕೆ ವಿಧಿಸಬೇಕಾದ ಫೀಜುಗಳು;

(ಜ ಜ) ಪೌರಸಭಾ ಆಡಳಿತಕ್ಕೆ ಸಾಮಾನ್ಯವಾಗಿ ಸಂಬಂಧಪಟ್ಟ ಎಲ್ಲಾ ವಿಷಯಗಳ ನಿಯಂತ್ರಣಕ್ಕಾಗಿ; ಉಪವಿಧಿಗಳನ್ನು ರಚಿಸಬಹುದು, ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಉಪವಿಧಿಯನ್ನು ರಚಿಸುವಲ್ಲಿ ಮುನ್ಸಿಪಲ್ ಕೌನ್ಸಿಲು ಅವುಗಳ ಉಲ್ಲಂಘನೆಯು–

(ಕ) ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆ;

(ಖ) ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆ ಮತ್ತು ಮುಂದುವರಿಯುವ ಉಲ್ಲಂಘನೆಯ ಸಂದರ್ಭದಲ್ಲಿ ಅಂಥ ಮೊದಲ ಉಲ್ಲಂಘನೆಗಾಗಿ ಅಪರಾಧವು ನಿರ್ಣಯವಾದ ತರುವಾಯ ಅಂಥ ಉಲ್ಲಂಘನೆಯು ಮುಂದುವರಿಯುವಂಥ ಅವಧಿಯ ಪ್ರತಿಯೊಂದು ದಿವಸಕ್ಕೆ ಹದಿನೈದು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ; ಅಥವಾ

(ಗ) ಮುನ್ಸಿಪಲ್ ಕೌನ್ಸಿಲು ಅಥವಾ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತವಾದ ಪೌರಸಭಾ ಅಧಿಕಾರಿಯಿಂದ, ಉಪವಿಧಿಯನ್ನು ಉಲ್ಲಂಘಿಸುವ ವ್ಯಾಪ್ತಿಯಲ್ಲಿ ಅಂಥ ಉಲ್ಲಂಘನೆಯನ್ನು ಮುಂದುವರಿಸದಿರಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸುವ ನೋಟೀಸನ್ನು ಸ್ವೀಕರಿಸಿದ ತರುವಾಯ; ಉಲ್ಲಂಘನೆಯು ಮುಂದುವರಿಯುತ್ತಿರುವಂಥ ಅವಧಿಯ ಪ್ರತಿಯೊಂದು ದಿವಸಕ್ಕೆ ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದೆಂದು ಉಪವಿಧಿಸಬಹುದು.

(3) ಅಂಥ ಯಾವುದೇ ಉಪವಿಧಿಯು, ಅದನ್ನು ಉಲ್ಲಂಘಿಸುವ ವ್ಯಕ್ತಿಯು ಅಂಥ ಉಲ್ಲಂಘನೆಯಿಂದ ಉಂಟಾದ ಕೇಡು ಯಾವುದಾರೂ ಇದ್ದರೆ ಅದನ್ನು ತನ್ನ ಕೈಲಾಗುವಷ್ಟರಮಟ್ಟಿಗೆ ಪರಿಹರಿಸಲು ಅಗತ್ಯಪಡಿಸತಕ್ಕದ್ದೆಂದು ಸಹ ಉಪಬಂಧಿಸಬಹುದು.

(4) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲು, ಈ ಪ್ರಕರಣದ ಮೇರೆಗೆ ಯಾವುದೇ ಉಪವಿಧಿಯನ್ನು ರಚಿಸುವುದಕ್ಕೆ ಮುಂಚೆ, ಅದರಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳ ಮಾಹಿತಿಗಾಗಿ ಉದ್ದೇಶಿತ ಉಪವಿಧಿಯ ಕರಡನ್ನೂ, ಕರಡನ್ನು ಯಾವ ದಿನಾಂಕದಂದು ಅಂಥ ತರುವಾಯ ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದೋ ಆ ದಿನಾಂಕವನ್ನು, ಅಂಥ ದಿನಾಂಕವು ಉದ್ದೇಶಿತ ಉಪವಿಧಿಯ ಕರಡಿನ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳಿಗಿಂತ ಮುಂಚಿನದಾಗಿರಕೂಡದು. ನಿರ್ದಿಷ್ಟಪಡಿಸುವ ನೋಟೀಸಿನೊಂದಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಉಪವಿಧಿಯನ್ನು

ರಚಿಸುವುದಕ್ಕೆ ಮುಂಚೆ ಯಾರೇ ವ್ಯಕ್ತಿಯನ್ನು, ಬರಹದಲ್ಲಿ ಆ ಕರಡಿನ ಬಗ್ಗೆ ಕೊಡಬಹುದಾದಂಥ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ಸ್ವೀಕರಿಸತಕ್ಕದ್ದು ಮತ್ತು ಪರ್ಯಾಲೋಚಿಸತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲು ರಚಿಸಿದ ಪ್ರತಿಯೊಂದು ಉಪವಿಧಿಯು, ಅದನ್ನು ಸರ್ಕಾರವು ಅನುಮೋದಿಸುವವರೆಗೆ ಪರಿಣಾಮಕಾರಿಯಾಗತಕ್ಕದ್ದಲ್ಲ; ಮತ್ತು ಅಂಥ ಪ್ರತಿಯೊಂದು ಉಪವಿಧಿಯನ್ನು ಸರ್ಕಾರಕ್ಕೆ (4)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಿದ ನೋಟೀಸಿನ ಮತ್ತು ಕರಡು ಉಪವಿಧಿಯ ಬಗ್ಗೆ ಸ್ವೀಕರಿಸಿದ ಪ್ರತಿಯೊಂದು ಆಕ್ಷೇಪಣೆ ಅಥವಾ ಸಲಹೆಯನ್ನು ಪ್ರತಿಯೊಂದಿಗೆ ಒಪ್ಪಿಸತಕ್ಕದ್ದು.

(6) ಸರ್ಕಾರವು, ಉಪವಿಧಿಯನ್ನು ಅನುಮೋದಿಸುವಲ್ಲಿ, ತನಗೆ ಅವಶ್ಯವೆಂದು ತೋರುವಂಥ ಯಾವುದೇ ಬದಲಾವಣೆಯನ್ನು ಅದರಲ್ಲಿ ಮಾಡಬಹುದು.

(7) ಸರ್ಕಾರವು, ಅನುಮೋದಿಸಿದಂತೆ ಪ್ರತಿಯೊಂದು ಉಪ–ವಿಧಿಯನ್ನು ನಿಯಮಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ಯಾವುದೇ ದಿನಾಂಕವನ್ನು ನಿರ್ದಿಷ್ಟಪಡಿಸದಿರುವಲ್ಲಿ ಅಂಥ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**325. ಮಾದರಿ ಉಪವಿಧಿಗಳನ್ನು ರಚಿಸಲು ಸರ್ಕಾರದ ಅಧಿಕಾರ ಮತ್ತು ಮುನ್ಸಿಪಲ್ ಕೌನ್ಸಿಲುಗಳು ಅಂಥ ಉಪವಿಧಿಗಳನ್ನು ಅಂಗೀಕರಿಸುವುದು.–** (1) 324ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು, ಒಂದು ತಿಂಗಳಿಗೆ ಕಡಿಮೆ ಇಲ್ಲದಂತೆ ಕರಡಿನ ಪೂರ್ವ ಪ್ರಕಟಣೆ ತರುವಾಯ, ಮಾದರಿ ಉಪವಿಧಿಗಳನ್ನು ರಚಿಸಬಹುದೆಂದು ಮತ್ತು ಅಂಥ ಉಪವಿಧಿಗಳು, ಪೌರಸಭೆಗಳ ವಿವಿಧ ವರ್ಗಗಳಿಗೆ ಬೇರೆ ಬೇರೆಯಾಗಿರಬಹುದು.

(2) ಮುನ್ಸಿಪಲ್ ಕೌನ್ಸಿಲು ನಿರ್ಣಯದ ಮೂಲಕ, ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾದರಿ ಉಪವಿಧಿಗಳನ್ನು ಮತ್ತು ಅಂಥ ಉಪವಿಧಿಗಳು, ನಿಯಮಿಸಿದ ರೀತಿಯಲ್ಲಿ ಪ್ರಕಟಿಸಿದ ನೋಟೀಸಿನಲ್ಲಿ ಮುನ್ಸಿಪಲ್ ಕೌನ್ಸಿಲ್ ನಿರ್ದಿಷ್ಟಪಡಿಸಬಹುದಾದ ಅಂಥ ದಿನಾಂಕದಿಂದ ಅಂಥ ಪೌರಸಭೆಯಲ್ಲಿ ಜಾರಿಗೆ ಬರತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲು ಯಾವುದೇ ಮಾರ್ಪಾಟುಗಳಿಗೊಳಪಟ್ಟು ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾದರಿ ಉಪವಿಧಿಗಳನ್ನು ಅಂಗೀಕರಿಸಲು ಉದ್ದೇಶಿಸಿದರೆ, 324ನೇ ಪ್ರಕರಣದ (4), (5) ಮತ್ತು (6)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಮುನ್ಸಿಪಲ್ ಕೌನ್ಸಿಲು ರಚಿಸಲು ಉದ್ದೇಶಿಸಿದ ಉಪವಿಧಿಗಳ ಮಾರ್ಪಾಟುಗಳಾಗಿದ್ದರೆ ಹೇಗೋ ಹಾಗೆ ಅನುಸರಿಸತಕ್ಕದ್ದು. ಸರ್ಕಾರವು ಅನುಮೋದಿಸಿದಂತೆ ಮಾರ್ಪಾಡುಗಳನ್ನು ನಿಯಮಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ಮಾದರಿ ಉಪವಿಧಿಗಳು ಅಂಥ ಮಾರ್ಪಾಟುಗಳಿಗೊಳಪಟ್ಟು ಮುನ್ಸಿಪಲ್ ಕೌನ್ಸಿಲು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಮತ್ತು ದಿನಾಂಕವನ್ನು ನಿರ್ದಿಷ್ಟಪಡಿಸಿಲ್ಲದಿದ್ದರೆ ಅಂಥ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(4) (ಕ) ಸರ್ಕಾರವು, ಯಾವುದೇ ಆದೇಶದ ಮೂಲಕ ಯಾವುದೇ ಮುನ್ಸಿಪಲ್ ಕೌನ್ಸಿಲಿಗೆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಮಾದರಿ ಉಪವಿಧಿಗಳನ್ನು ಮುನ್ಸಿಪಲ್ ಕೌನ್ಸಿಲು, ಆ ನಿರ್ದೇಶನವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳಿಗೆ ಕಡಿಮೆಯಲ್ಲದಂಥ ಅವಧಿಯವರೆಗೆ ಅಂಗೀಕರಿಸಲು ನಿರ್ದೇಶಿಸಬಹುದು; ಮತ್ತು

(ಖ) ಮುನ್ಸಿಪಲ್ ಕೌನ್ಸಿಲು ಮಾರ್ಪಾಟುಗಳೊಡನೆ ಅಥವಾ ಮಾರ್ಪಾಟುಗಳಿಲ್ಲದೆ ಮಾದರಿ ಉಪವಿಧಿಗಳ ಅಂಗೀಕಾರಕ್ಕಾಗಿ ಯಾವುದೇ ಕ್ರಮವನ್ನು ಕೈಗೊಳ್ಳಲು ತಪ್ಪಿದರೆ, ಸರ್ಕಾರವು

ಅಧಿಸೂಚನೆಯ ಮೂಲಕ ಸದರಿ ಮಾದರಿ ಉಪವಿಧಿಗಳು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ, ಸದರಿ ಪೌರಸಭೆಯಲ್ಲಿ ಜಾರಿಯಲ್ಲಿ ಬರತಕ್ಕದ್ದೆಂದು ಘೋಷಿಸಬಹುದು ಮತ್ತು ಅಂಥ ಉಪವಿಧಿಗಳು, ತದನುಸಾರವಾಗಿ ಜಾರಿಯಲ್ಲಿ ಬರತಕ್ಕದ್ದು.

(5) 324ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ಈ ಪ್ರಕರಣದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

**326. ನಿಯಮಗಳು ಮತ್ತು ಉಪವಿಧಿಗಳನ್ನೂ ಮುದ್ರಿಸತಕ್ಕದ್ದು ಮತ್ತು ಮಾರಾಟ ಮಾಡತಕ್ಕದ್ದು.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳು ಮತ್ತು ಉಪವಿಧಿಗಳ ಪ್ರತಿಯನ್ನು ಪೌರಸಭಾ ಕಚೇರಿಯಲ್ಲಿ ಇಡತಕ್ಕದ್ದು ಮತ್ತು ಪೌರಸಭೆಯ ಯಾರೇ ನಿವಾಸಿಯು ಕಚೇರಿ ವೇಳೆಗಳಲ್ಲಿ ವೆಚ್ಚವಿಲ್ಲದೆ ಪರಿಶೀಲಿಸಲು ಮುಕ್ತವಾಗಿರತಕ್ಕದ್ದು.

(2) ಅಂಥ ಎಲ್ಲಾ ನಿಯಮಗಳ ಮತ್ತು ಉಪವಿಧಿಗಳ ಪ್ರತಿಗಳನ್ನು ಪೌರಸಭಾ ಕಚೇರಿಯಲ್ಲಿ ಇಡತಕ್ಕದ್ದು ಮತ್ತು ಖರೀದಿದಾರನ ಇಚ್ಛಾನುಸಾರ, ಬಿಡಿಯಾಗಿಯೇ ಆಗಲಿ ಅಥವಾ ಇಡಿಯಾಗಿಯೇ ಆಗಲಿ ಅಸಲು ಬೆಲೆಗೆ ಸಾರ್ವಜನಿಕರಿಗೆ ಮಾರಾಟ ಮಾಡತಕ್ಕದ್ದು.

## ಅಧ್ಯಾಯ–XIV

## ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಮತ್ತು ಇತರ ಪೌರಸಭಾ ಅಧಿಕಾರಿಗಳ ನೇಮಕಾತಿ ಮತ್ತು ಅಧಿಕಾರಗಳು

**327. ಚೀಫ್ ಆಫೀಸರನ ನೇಮಕಾತಿ.–** (1) ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲು ಒಬ್ಬ ಚೀಫ್ ಆಫೀಸರನನ್ನು ಹೊಂದಿರತಕ್ಕದ್ದು. ಅವನನ್ನು ಕರ್ನಾಟಕ ಪೌರಸಭಾ ಆಡಳಿತ ಸೇವೆಯ ಚೀಫ್ ಆಫೀಸರುಗಳ ಕೇಡರಿನಲ್ಲಿಯ ವ್ಯಕ್ತಿಗಳ ಪೈಕಿ, ಕಮಿಷನರನು ನೇಮಕ ಮಾಡತಕ್ಕದ್ದು.

(2) ಪೌರಸಭೆಯ ಚೀಫ್ ಆಫೀಸರನು, ಕೌನ್ಸಿಲರುಗಳ ಒಟ್ಟು ಸಂಖ್ಯೆಯ ನಾಲ್ಕನೇ ಮೂರು ಭಾಗಕ್ಕಿಂತ ಕಡಿಮೆ ಇಲ್ಲದ ಬಹುಮತದಿಂದ ಸಾಮಾನ್ಯ ಸಭೆಯಲ್ಲಿ ಮುನ್ಸಿಪಲ್ ಕೌನ್ಸಿಲ್ ಅಂಗೀಕರಿಸಿದ ನಿರ್ಣಯದ ಮೂಲಕ ಆ ಪದದಿಂದ ವರ್ಗಾವಣೀಯನಾಗತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲು, ದುರುಪಯೋಗ ದುರ್ನಡತೆ ಅಥವಾ ಕರ್ತವ್ಯದ ನಿರ್ಲಕ್ಷತೆಗಾಗಿ ಚೀಫ್ ಆಫೀಸರನ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲು ಶಿಫಾರಸು ಮಾಡಬಹುದು.

(4) ಚೀಫ್ ಆಫೀಸರನನ್ನು ನೇಮಿಸಿರುವಾಗ, ಮುನ್ಸಿಪಲ್ ಕೌನ್ಸಿಲು ನಿಯೋಜಿಸಿದ ಎಲ್ಲಾ ಇತರ ಅಧಿಕಾರಿಗಳು ಮತ್ತು ನೌಕರರು, ಕಾಲಕಾಲಕ್ಕೆ ಸರ್ಕಾರದ ಆದೇಶದ ಮೂಲಕ ಹೊರತುಪಡಿಸಿದಂಥವರನ್ನುಳಿದು ಅವನಿಗೆ ಅಧೀನನಾಗಿರತಕ್ಕದ್ದು.

**328. ಆರೋಗ್ಯ ಅಧಿಕಾರಿಯ ನೇಮಕಾತಿ.–** (1) ಮುನ್ಸಿಪಲ್ ಕೌನ್ಸಿಲು ತಾತ್ಕಾಲಿಕವಾಗಿಯಾಗಲಿ ಅಥವಾ ಖಾಯಂ ಆಗಿಯೇ ಆಗಲಿ, ಒಂದು ಅಥವಾ ಹೆಚ್ಚು ಆರೋಗ್ಯಾಧಿಕಾರಿಗಳನ್ನು ನೇಮಿಸಬಹುದು ಮತ್ತು ಸರ್ಕಾರವು ಈ ಬಗ್ಗೆ ಆದೇಶದ ಮೂಲಕ ಅಗತ್ಯಪಡಿಸಿದಾಗ ಅದರಲ್ಲಿ ನಿಗದಿಪಡಿಸಬಹುದಾದಂಥ ಕಾಲದೊಳಗೆ, ಹಾಗೆ ಮಾಡತಕ್ಕದ್ದು. ಆ ಅಧಿಕಾರಿಗಳು ಸಾರ್ವಜನಿಕ ಆರೋಗ್ಯ ಇಲಾಖೆಯ ಅಧಿಕಾರಿಗಳಾಗಿರತಕ್ಕದ್ದು.

(2) ಅಂಥ ಯಾರೇ ಅಧಿಕಾರಿಯ, ಸರ್ಕಾರದ ಪೂರ್ವ ಮಂಜೂರಾತಿಯ ಹೊರತು ಕೌನ್ಸಿಲರುಗಳ ಒಟ್ಟು ಸಂಖ್ಯೆಯ ಮೂರನೇ–ಎರಡು ಭಾಗಕ್ಕಿಂತ ಕಡಿಮೆ ಇಲ್ಲದ ಮತಗಳ ಮೂಲಕವಲ್ಲದೆ, ಪದದಿಂದ ವರ್ಗಾವಣೀಯನಾಗತಕ್ಕದ್ದಲ್ಲ.

(3) ಮುನ್ಸಿಪಲ್ ಕೌನ್ಸಿಲು, ಆರೋಗ್ಯಾಧಿಕಾರಿಯ ವಿರುದ್ಧ ಅಧಿಕಾರಿಗಳ ದುರುಪಯೋಗ, ದುರ್ನಡತೆ ಅಥವಾ ಕರ್ತವ್ಯ ನಿರ್ಲಕ್ಷತೆಗಾಗಿ, ಶಿಸ್ತಿನ ಕ್ರಮವನ್ನು ಕೈಗೊಳ್ಳಲು ಶಿಫಾರಸು ಮಾಡಬಹುದು.

**329. ಚೀಫ್ ಆಫೀಸರನ ಕರ್ತವ್ಯಗಳು:–** ಚೀಫ್ ಆಫೀಸರನು,–

(ಕ) ಮುನ್ಸಿಪಲ್ ಕೌನ್ಸಿಲಿನ ನಿಯಂತ್ರಣಕ್ಕೊಳಪಟ್ಟು, ಈ ಅಧಿನಿಯಮದ ಮೂಲಕ ಅವನಿಗೆ ನಿರ್ದಿಷ್ಟವಾಗಿ ವಿಧಿಸಿದ ಅಥವಾ ಪ್ರದಾನ ಮಾಡಿದ ಅಥವಾ ಅದರ ಮೇರೆಗೆ ಅವನಿಗೆ ಪ್ರತ್ಯಾಯೋಜಿಸಿದ, ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು. ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು;

(ಖ) ಸಂದರ್ಭಾನುಸಾರ ಮುನ್ಸಿಪಲ್ ಕೌನ್ಸಿಲಿನ ಅಥವಾ ಮುನ್ಸಿಪಲ್ ಕೌನ್ಸಿಲಿನ ಸ್ಥಾಯಿ ಸಮಿತಿಯ ಆದೇಶಗಳಿಗೆ ಒಳಪಟ್ಟಂತೆ ಲೆಕ್ಕಪರಿಶೋಧಕನು ತೋರಿಸಿದ ಯಾವುದೇ ಅಕ್ರಮತೆಯನ್ನು ನಿವಾರಿಸಲು ತ್ವರಿತ ಕ್ರಮಗಳನ್ನು ಕೈಗೊಳ್ಳತಕ್ಕದ್ದು;

(ಗ) ಮೋಸದ ಅಪರಾಧಿತ ದುರ್ವಿನಿಯೋಗ, ಪೌರಸಭಾ ಹಣ ಮತ್ತು ಸ್ವತ್ತಿನ ಕಳವು ಅಥವಾ ನಷ್ಟದ ಎಲ್ಲಾ ಪ್ರಕರಣಗಳನ್ನು ಅಧ್ಯಕ್ಷನಿಗೆ, ಸ್ಥಾಯೀ ಸಮಿತಿಗೆ ಮತ್ತು ಮುನ್ಸಿಪಲ್ ಕೌನ್ಸಿಲಿಗೆ ವರದಿ ಮಾಡತಕ್ಕದ್ದು;

(ಘ) ಮುನ್ಸಿಪಲ್ ಕೌನ್ಸಿಲು ಅಥವಾ ಸ್ಥಾಯಿ ಸಮಿತಿಯು ಕೇಳಿದ ಮುನ್ಸಿಪಲ್ ಕೌನ್ಸಿಲು, ಅಂದಾಜು ಅಂಕಿ ಅಂಶಗಳು, ಲೆಕ್ಕ, ಯಾವುದೇ ವಿವರ ಪಟ್ಟಿ, ವಿವರಣ ಪತ್ರ, ಅಥವಾ ವರದಿ ಅಥವಾ ತನ್ನ ವಶದಲ್ಲಿರುವ ಯಾವುದೇ ದಸ್ತಾವೇಜಿನ ಪ್ರತಿಯನ್ನು ಒದಗಿಸತಕ್ಕದ್ದು ಮತ್ತು ಅವುಗಳ ಮೇಲೆ ಮುನ್ಸಿಪಲ್ ಕೌನ್ಸಿಲು ಅಥವಾ ಸ್ಥಾಯಿ ಸಮಿತಿಯು ಮಾಡಿದ ಯಾವುವೇ ಆದೇಶಗಳನ್ನು ಪಾಲಿಸತಕ್ಕದ್ದು; ಮತ್ತು

(ಙ) ಈ ಬಗ್ಗೆ ನಿಯಮಿಸಲಾದ ನಿಯಮಗಳಿಗೆ ಒಳಪಟ್ಟು, ಕಾರ್ಯನಿರ್ವಾಹಕ ಆಡಳಿತದ ವಿಷಯಗಳಲ್ಲಿ ಮತ್ತು ಮುನ್ಸಿಪಲ್ ಕೌನ್ಸಿಲಿನ ಲೆಕ್ಕ–ಪತ್ರಗಳು ಮತ್ತು ದಾಖಲೆಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಮುನ್ಸಿಪಲ್ ಕೌನ್ಸಿಲಿನ ಎಲ್ಲಾ ಅಧಿಕಾರಿಗಳು ಮತ್ತು ನೌಕರರ ಕಾರ್ಯಗಳ ಮತ್ತು ವ್ಯವಹರಣೆಗಳ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು ಮತ್ತು ಚೀಫ್ ಆಫೀಸರನಿಗೆ

ಅಧೀನರಾಗಿರುವ ಅಧಿಕಾರಿಗಳು ಮತ್ತು ನೌಕರರುಗಳಿಗೆ, ಮತ್ತು ಅವರ ವೇತನ, ವಿಶೇಷಾಧಿಕಾರಿಗಳು ಮತ್ತು ಭತ್ಯೆಗಳಿಗೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳನ್ನು ವಿಲೇ ಮಾಡತಕ್ಕದ್ದು.

**330. ಚೀಫ್ ಆಫೀಸರುಗಳ ಅಧಿಕಾರಗಳು.–** (1) ಮುನ್ಸಿಪಲ್ ಕೌನ್ಸಿಲಿನ ನಿಯಂತ್ರಣಕ್ಕೊಳಪಟ್ಟು ಚೀಫ್ ಆಫೀಸರನು ಇಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ಅಧಿಕಾರಗಳನ್ನು ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲು ಪ್ರತ್ಯಾಯೋಜಿಸಬಹುದಾದಂಥ ಇತರೆ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(ಕ) ಈ ಅಧಿನಿಯಮದ ಮತ್ತು ಅದರ ಮೇರೆಗೆ ತತ್‌ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳು ಮತ್ತು ಉಪವಿಧಿಗಳ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲು ಮಂಜೂರು ಮಾಡಬಹುದಾದ ಅಥವಾ ಕೊಡಬಹುದಾದ ಅಥವಾ ಹೊರಡಿಸಬಹುದಾದಂಥ ಎಲ್ಲ ಲೈಸೆನ್ಸು ಮತ್ತು ಪರವಾನಿಗೆಗಳನ್ನು ತನ್ನ ರುಜುವಿನೊಂದಿಗೆ ಮಂಜೂರು ಮಾಡಲು, ಕೊಡಲು ಅಥವಾ ಹೊರಡಿಸಲು ಅವನು ಅಧಿಕಾರವನ್ನು ಹೊಂದಿರತಕ್ಕದ್ದು;

(ಖ) ಹಿಂದೆ ಹೇಳಿದ ಉಪಬಂಧಗಳಿಗೆ ಒಳಪಟ್ಟು ಅವನು ಯಾವ ಸಂದರ್ಭದಲ್ಲಿ ಹಿಂದೆ ಹೇಳಿದಂತೆ ಲೈಸೆನ್ಸನ್ನು ಮಂಜೂರ್ಮಾಡಲು ಅಥವಾ ಕೊಡಲು ಅವನನ್ನು ಶಕ್ತಗೊಳಿಸಲಾಗಿದೆಯೋ ಅಥವಾ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲು ಅಂಥ ಲೈಸೆನ್ಸು ಅಮಾನತುಗೊಳಿಸಬಹುದೋ, ತಡೆಹಿಡಿಯಬಹುದೋ, ಅಥವಾ ಹಿಂತೆಗೆದುಕೊಳ್ಳಬಹುದೋ ಆ ಯಾವುದೇ ಸಂದರ್ಭದಲ್ಲಿ ಯಾವುದೇ ಲೈಸೆನ್ಸನನ್ನು ಅಮಾನತುಗೊಳಿಸಬಹುದು, ತಡೆಹಿಡಿಯಬಹುದು ಅಥವಾ ಹಿಂತೆಗೆದುಕೊಳ್ಳಬಹುದು;

(ಗ) ಹಿಂದೆ ಹೇಳಿದ ಅಧಿಕಾರಗಳ ಮೇರೆಗೆ ಅವನು ಮಂಜೂರು ಮಾಡಿದ ಅಥವಾ ಕೊಟ್ಟ ಲೈಸೆನ್ಸುಗಳು ಮತ್ತು ಅನುಮತಿಗಳಿಗಾಗಿ ಸಂದಾಯ ಮಾಡಬೇಕಾದ ಎಲ್ಲ ನಿಧಿಗಳನ್ನು ಸ್ವೀಕರಿಸತಕ್ಕದ್ದು ಮತ್ತು ವಸೂಲ್ಮಾಡತಕ್ಕದ್ದು ಮತ್ತು ಪೌರಸಭಾ ನಿಧಿಗೆ ಜಮೆ ಮಾಡತಕ್ಕದ್ದು;

(ಘ) ಅವನು, ಮುನ್ಸಿಪಲ್ ಕೌನ್ಸಿಲಿನ ನಿಯಂತ್ರಣಕ್ಕೆ ಮತ್ತು 72ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು,–

(i) ಐದುನೂರು ರೂಪಾಯಿಗಳಿಗೆ ಮೀರಿದ ವೆಚ್ಚವನ್ನು ಒಳಗೊಂಡಿರದಂಥ ಕರಾರುಗಳನ್ನು ಮುನ್ಸಿಪಲ್ ಕೌನ್ಸಿಲು ಪರವಾಗಿ ಮಾಡಿಕೊಳ್ಳಬಹುದು; ಮತ್ತು

(ii) ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಮತ್ತು ಸಾರ್ವಜನಿಕ ನೋಟೀಸಿನ ಮೂಲಕ ಯಾವುದೇ ಅನುಮೋದಿತ ಕಾಮಗಾರಿಯ ನಿರ್ವಹಣೆಗಾಗಿ ಅಥವಾ ಮುನ್ಸಿಪಲ್ ಕೌನ್ಸಿಲಿಗೆ ಅಗತ್ಯವಾದ ಯಾವುವೇ ಸಾಮಗ್ರಿಗಳು ಅಥವಾ ಸರಕುಗಳ ಸರಬರಾಜಿಗಾಗಿ ಟೆಂಡರುಗಳನ್ನು ಕರೆಯಬಹುದು: ಮತ್ತು

ಪರಂತು, ಒಂದು ನೂರು ರೂಪಾಯಿಗಳಿಗೆ ಮೀರಿದ ವೆಚ್ಚವನ್ನು ಒಳಗೊಂಡ, ಚೀಫ್ ಆಫೀಸರನು ಮಾಡಿಕೊಂಡ ಪ್ರತಿಯೊಂದು ಕರಾರನ್ನು, ಅದನ್ನು ಮಾಡಿಕೊಂಡ ತರುವಾಯ ಹದಿನೈದು ದಿವಸಗಳೊಳಗಾಗಿ, ಅವನು ಮುನ್ಸಿಪಲ್ ಕೌನ್ಸಿಲಿಗೆ ವರದಿ ಮಾಡತಕ್ಕದ್ದು.

(ಙ) ಅವನು–

---

111 ಮತ್ತು 112ನೇ ಪ್ರಕರಣ

128ನೇ ಪ್ರಕರಣ

213ನೇ ಪ್ರಕರಣ

214ನೇ ಪ್ರಕರಣ

| | |
|---|---|
| 132ನೇ ಪ್ರಕರಣ | 215ನೇ ಪ್ರಕರಣ |
| 2ನೇ ಉಪಪ್ರಕರಣದ ಪರಂತುಕ | 216ನೇ ಪ್ರಕರಣ |
| 133ನೇ ಪ್ರಕರಣ | 217ನೇ ಪ್ರಕರಣ |
| 138ನೇ ಪ್ರಕರಣ | 218ನೇ ಪ್ರಕರಣ |
| (1), (2) ಮತ್ತು (3)ನೇ ಉಪಪ್ರಕರಣಗಳು | 219ನೇ ಪ್ರಕರಣ |
| 142ನೇ ಪ್ರಕರಣ | 221ನೇ ಪ್ರಕರಣ |
| 143ನೇ ಪ್ರಕರಣ | 222ನೇ ಪ್ರಕರಣ |
| 144ನೇ ಪ್ರಕರಣ | 224ನೇ ಪ್ರಕರಣ |
| 148ನೇ ಪ್ರಕರಣ | 225ನೇ ಪ್ರಕರಣ |
| 150ನೇ ಪ್ರಕರಣದ 3ನೇ ಉಪಪ್ರಕರಣ | 227ನೇ ಪ್ರಕರಣ |
| 178ನೇ ಪ್ರಕರಣ | 228ನೇ ಪ್ರಕರಣದ (1)ನೇ ಉಪಪ್ರಕರಣ |
| 184ನೇ ಪ್ರಕರಣ | 230ನೇ ಪ್ರಕರಣ |
| 186ನೇ ಪ್ರಕರಣ | 234ನೇ ಪ್ರಕರಣ |
| 187ನೇ ಪ್ರಕರಣ | 235ನೇ ಪ್ರಕರಣ |
| 191ನೇ ಪ್ರಕರಣ | 236ನೇ ಪ್ರಕರಣ |
| 193ನೇ ಪ್ರಕರಣ | 238ನೇ ಪ್ರಕರಣ |
| 196ನೇ ಪ್ರಕರಣ | 248ನೇ ಪ್ರಕರಣದ (3)ನೇ ಉಪಪ್ರಕರಣ |
| 203ನೇ ಪ್ರಕರಣದ (1)ನೇ ಉಪಪ್ರಕರಣ | 247ನೇ ಪ್ರಕರಣ |
| 204ನೇ ಪ್ರಕರಣ | 248ನೇ ಪ್ರಕರಣ (1) ಮತ್ತು (2)ನೇ ಉಪಪ್ರಕರಣ |
| 209ನೇ ಪ್ರಕರಣ | 251ನೇ ಪ್ರಕರಣ |
| 210ನೇ ಪ್ರಕರಣ | 262ನೇ ಪ್ರಕರಣ ಮತ್ತು |
| 211ನೇ (3)ನೇ ಉಪಪ್ರಕರಣ | 276ನೇ ಪ್ರಕರಣ |
| 212ನೇ ಪ್ರಕರಣ | |

ಇವುಗಳಲ್ಲಿ ಅಡಕವಾದ ಯಾವುವೇ ಉಪಬಂಧಗಳ ಮೇರೆಗೆ ಬರಹದಲ್ಲಿನ ನೋಟೀಸಿನ ಮೂಲಕ ಅಂಥ ಕಡ್ಡಾಯ ಕೋರಿಕೆಗಳನ್ನು ಮಾಡಬಹುದು, ಅಂಥ ಬರಹದಲ್ಲಿನ ಸಮ್ಮತಿ ಅಥವಾ ಅನುಮತಿಯನ್ನು ಕೊಡಬಹುದು. ಅಂಥ ಆದೇಶಗಳನ್ನು ಮತ್ತು ನಿಷೇಧಾಜ್ಞೆಗಳನ್ನು ಹೊರಡಿಸಬಹುದು. ಮುನ್ಸಿಪಲ್ ಕೌನ್ಸಿಲು ಮಾಡಬಹುದಾದ, ಕೊಡಬಹುದಾದ, ಹೊರಡಿಸಬಹುದಾದ ಅಥವಾ ಚಲಾಯಿಸಬಹುದಾದಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು:

ಪರಂತು, ಕೆಳಕಂಡ ಪ್ರಕರಣಗಳ ಉಪಬಂಧಗಳ ವಿರುದ್ಧ ಅಪರಾಧ ಮಾಡುವ ಯಾರೇ ವ್ಯಕ್ತಿಯ ದಂಡನೆಗಾಗಿ ಕೈಗೊಳ್ಳಬೇಕಾದ ಪ್ರಾಸಿಕ್ಯೂಷನನ್ನು ನಿರ್ದೇಶಿಸಲು ಅಥವಾ ವ್ಯವಹರಣೆಗಳನ್ನು ಆದೇಶಿಸಲು 276ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಡೆಪ್ಯುಟಿ ಕಮಿಷನರನ ಪೂರ್ವಾನುಮೋದನೆಯನ್ನು ಪಡೆದ ಹೊರತು ಚೀಫ್ ಆಫೀಸರನು ಚಲಾಯಿಸತಕ್ಕದ್ದಲ್ಲ:–

78ನೇ ಪ್ರಕರಣ ಮತ್ತು 241ನೇ ಪ್ರಕರಣ

**331. ಮುನ್ಸಿಪಲ್ ಕಮಿಷನರನ ನೇಮಕಾತಿ.–** (1) 327ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸರ್ಕಾರವು ಯಾವುದೇ ನಗರ ಪೌರಸಭೆಗಾಗಿ ಮುನ್ಸಿಪಲ್ ಕಮಿಷನರನನ್ನು ನೇಮಿಸಬಹುದು.

(2) ಮುನ್ಸಿಪಲ್ ಕಮಿಷನರನ್ನು ನೇಮಿಸಿದ ಮೇಲೆ ಚೀಫ್ ಆಫೀಸರನ ನೇಮಕಾತಿಯು ಯಾವುದಾದರೂ ಇದ್ದರೆ, ಅದು ತಕ್ಷಣ ಕೊನೆಗೊಳ್ಳತಕ್ಕದ್ದು.

(3) ಸರ್ಕಾರವು ಯಾವುದೇ ಕಾಲದಲ್ಲಿ, ಯಾವ ಪೌರಸಭೆಗಾಗಿ ಮುನ್ಸಿಪಲ್ ನೇಮಕಾತಿಯನ್ನು ಮಾಡಲಾಗಿದೆಯೋ ಆ ಯಾವುದೇ ಪೌರಸಭೆಗಾಗಿ ಅಂಥ ನೇಮಕಾತಿಯನ್ನು ಮುಂದುವರಿಸದಿರಬಹುದು.

**332. ಪದದಿಂದ ತೆಗೆದುಹಾಕುವುದು.–** (1) ಮುನ್ಸಿಪಲ್ ಕಮಿಷನರನನ್ನು ತನ್ನ ಪದದ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಅಸಮರ್ಥನಾಗಿದ್ದಾನೆಂದು ಅಥವಾ ಅವನನ್ನು ತೆಗೆದುಹಾಕಲು ವಿಹಿತವಾಗಿಸುವಂಥ ಯಾವುದೇ ದುರ್ವರ್ತನೆ ಅಥವಾ ನಿರ್ಲಕ್ಷತೆಯ ತಪ್ಪಿತಸ್ಥನಾಗಿರುವನೆಂದು ಸರ್ಕಾರಕ್ಕೆ ಕಂಡುಬಂದರೆ, ಸರ್ಕಾರವು ಯಾವುದೇ ಕಾಲದಲ್ಲಿ ಪದದಿಂದ ಅವನನ್ನು ತೆಗೆದುಹಾಕಬಹುದು.

(2) ಪೌರಸಭೆಯ ಮುನ್ಸಿಪಲ್ ಕಮಿಷನರನು ಆ ಉದ್ದೇಶಕ್ಕಾಗಿ, ಕರೆಯುವಾಗ ಮುನ್ಸಿಪಲ್ ಕೌನ್ಸಿಲಿನ ವಿಶೇಷ ಸಾಮಾನ್ಯ ಸಭೆಯಲ್ಲಿ ಕೌನ್ಸಿಲರುಗಳ ಒಟ್ಟು ಸಂಖ್ಯೆಯ ನಾಲ್ಕನೇ ಮೂರು ಭಾಗಕ್ಕೆ ಕಡಿಮೆಯಿಲ್ಲದಷ್ಟು ಅಂಥ ವರ್ಗಾವಣೆಗಾಗಿ ಮತ ನೀಡಿದರೆ ಆ ಪದದಿಂದ ಸರ್ಕಾರದಿಂದ ವರ್ಗಾವಣೀಯನಾಗತಕ್ಕದ್ದು.

**333. ಮುನ್ಸಿಪಲ್ ಕಮಿಷನರನ ಸಂಬಳ.–** ಮುನ್ಸಿಪಲ್ ಕಮಿಷನರನು ಪೌರಸಭೆಯ ಸಂಪನ್ಮೂಲಗಳಿಗೆ ಯುಕ್ತ ಗಮನ ಕೊಟ್ಟು, ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಮುನ್ಸಿಪಲ್ ಕೌನ್ಸಿಲು ಪೂರ್ಣವಾಗಿ ಅಥವಾ ಮುನ್ಸಿಪಲ್ ಕೌನ್ಸಿಲು ಭಾಗಶಃ ಅಥವಾ ಸರ್ಕಾರವು ಇದರ ಸಂದಾಯ ಮಾಡಬೇಕಾದಂಥ ಮಾಸಿಕ ಸಂಬಳವನ್ನು ಸ್ವೀಕರಿಸತಕ್ಕದ್ದು.

**334. ಇತರೆ ವ್ಯವಹಾರಗಳಲ್ಲಿ ತೊಡಗುವ ಬಗ್ಗೆ ನಿಷೇಧ.–** ಮುನ್ಸಿಪಲ್ ಕಮಿಷನರನು ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಅಧಿನಿಯಮಿತಿಯು ನಿಯಮಿಸಿದಂತೆ, ತನ್ನ ಪದದ ಕರ್ತವ್ಯಗಳಿಗೆ ತನ್ನ ಸಂಪೂರ್ಣ ಕಾಲವನ್ನು ಮತ್ತು ನಿಗಾವನ್ನು ವಿನಿಯೋಗಿಸತಕ್ಕದ್ದು ಮತ್ತು ಯಾವುದೇ ಇತರ ವೃತ್ತಿ, ವ್ಯಾಪಾರ ಅಥವಾ ವ್ಯವಹಾರದಲ್ಲಿ ಆಗಲಿ ತೊಡಗತಕ್ಕದ್ದಲ್ಲ:

ಪರಂತು, ಮುನ್ಸಿಪಲ್ ಕಮಿಷನರನಾಗಿ ಅವನ ಕರ್ತವ್ಯಗಳಿಗೆ ಬಾಧಕವಾಗದಂಥ ಹೆಚ್ಚಿನ ಕೆಲಸವನ್ನು ಅವನು ನೆರವೇರಿಸುವನೆಂದು ಸರ್ಕಾರವು ಅಭಿಪ್ರಾಯಪಟ್ಟರೆ ಸ್ಥಳೀಯ ಪ್ರಾಮುಖ್ಯತೆ ಅಥವಾ ಹಿತಾಸಕ್ತಿಯ ಯಾವುದೇ ಇತರೆ ಕೆಲಸವನ್ನು ಅವನಿಗೆ ವಹಿಸಬಹುದು.

**335. ಗೈರುಹಾಜರಿಯ ರಜೆ.–** (1) ಸರ್ಕಾರವು, ಕಾಲಕಾಲಕ್ಕೆ, ಮುನ್ಸಿಪಲ್ ಕೌನ್ಸಿಲಿನೊಡನೆ ಸಮಾಲೋಚಿಸಿ ಮುನ್ಸಿಪಲ್ ಕೌನ್ಸಿಲು ತಾನು ಕಮಿಷನರನಿಗೆ ಯೋಜಿಸುವಂಥ ಗೈರುಹಾಜರಿ ರಜೆಯನ್ನು ಮಂಜೂರು ಮಾಡಬಹುದು.

(2) ಮುನ್ಸಿಪಲ್ ಕಮಿಷನರನು ರಜೆಯ ಮೇಲೆ ಗೈರುಹಾಜರಾಗಿರುವಲ್ಲಿ, ಅವನಿಗೆ ಸಂದಾಯ ಮಾಡಬೇಕಾದ ಭತ್ಯೆಯನ್ನು, ಅವನ ವರ್ಗದ ಸರ್ಕಾರದ ಸಂಬಳ ಪಡೆಯುವ ನೌಕರರ ರಜಾ ಭತ್ಯೆಗಳಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳ ಮೂಲಕ ನಿಯಂತ್ರಿಸತಕ್ಕದ್ದು.

(3) ಮುನ್ಸಿಪಲ್ ಕಮಿಷನರನ ರಜೆಯ ಮೇಲಿನ ಯಾವುದೇ ಗೈರುಹಾಜರಿ ಅಥವಾ ಅವನ ಪದವು ತಾತ್ಕಾಲಿಕವಾಗಿ ಖಾಲಿಯಾಗಿರುವ ಅವಧಿಯಲ್ಲಿ ಸರ್ಕಾರವು ಮುನ್ಸಿಪಲ್ ಕಮಿಷನರನಾಗಿ ಕಾರ್ಯ ನಿರ್ವಹಿಸಲು ಯೋಗ್ಯ ವ್ಯಕ್ತಿಯನ್ನು ನೇಮಕ ಮಾಡಬಹುದು. ಹಾಗೆ ನೇಮಕಗೊಂಡ ಪ್ರತಿಯೊಬ್ಬ ವ್ಯಕ್ತಿಯು ಮುನ್ಸಿಪಲ್ ಕಮಿಷನರನಿಗೆ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಅಧಿನಿಯಮಿತಿಯ ಮೂಲಕ ಪ್ರದತ್ತವಾದ ಮತ್ತು ವಿಧಿಸಿದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯವನ್ನು ನೆರವೇರಿಸತಕ್ಕದ್ದು ಮತ್ತು ಸದರಿ ಅಧಿಕಾರಿಯು ಗುರಿಯಾಗಿರಬಹುದಾದಂಥವುವೇ ಆದ ಹೊಣೆಗಾರಿಕೆಗಳು, ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟಿರತಕ್ಕದ್ದು.

**336. ಮುನ್ಸಿಪಲ್ ಕಮಿಷನರ್‌ನ ಪಿಂಚಣಿ ಮತ್ತು ರಜಾಭತ್ಯೆಗಳ ಬಗ್ಗೆ ಮುನ್ಸಿಪಲ್ ಕೌನ್ಸಿಲಿನಿಂದ ವಂತಿಗೆ.–** ಸರ್ಕಾರವು ಮುನ್ಸಿಪಲ್ ಕಮಿಷನರ್‌ನನ್ನು ನೇಮಿಸಿದಾಗ ಮುನ್ಸಿಪಲ್ ಕೌನ್ಸಿಲು, ಸರ್ಕಾರವು ಹೊಣೆಗಾರಿಕೆಯಿಂದ ಸಂಪೂರ್ಣವಾಗಿ ಅಥವಾ ಭಾಗಶಃ ವಿಶೇಷವಾಗಿ ವಿನಾಯಿತಿಗೊಳಿಸಿದ್ದ ಹೊರತು, ನಿಯಮಿಸಿದ ನಿಯಮಗಳ ಮೂಲಕ ಅಗತ್ಯಪಡಿಸಿದಷ್ಟರಮಟ್ಟಿಗೆ ಅವನ ಪಿಂಚಣಿ ಮತ್ತು ರಜಾ ಭತ್ಯೆಗಳಿಗೆ ವಂತಿಗೆಯನ್ನು ನೀಡತಕ್ಕದ್ದು.

**337. ವಿವರಪಟ್ಟಿಕೆಗಳು, ವರದಿಗಳು ಅಥವಾ ದಸ್ತಾವೇಜುಗಳ ಹಾಜರುಪಡಿಸುವಿಕೆಯನ್ನು ಅಗತ್ಯಪಡಿಸಲು ಮುನ್ಸಿಪಲ್ ಕೌನ್ಸಿಲಿನ ಅಧಿಕಾರ.–** (1) ಮುನ್ಸಿಪಲ್ ಕೌನ್ಸಿಲು, ಮುನ್ಸಿಪಲ್ ಕಮಿಷನರನನ್ನು,–

(ಕ) ಈ ಅಧಿನಿಯಮದ ಆಡಳಿತ ಅಥವಾ ಪೌರಸಭೆಯ ಪೌರಸಭಾ ಆಡಳಿತಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗೆಗಿನ ಯಾವುದೇ ವಿವರಪಟ್ಟಿಕೆ, ವಿವರಪತ್ರ, ಅಂದಾಜು ಅಂಕಿ ಅಂಶಗಳು ಅಥವಾ ಇತರ ಮಾಹಿತಿ;

(ಖ) ಅಂಥ ಯಾವುದೇ ವಿಷಯದ ಬಗ್ಗೆ ವರದಿ; ಮತ್ತು

(ಗ) ಅವನ ಪ್ರಭಾರದಲ್ಲಿರುವ ಯಾವುದೇ ದಸ್ತಾವೇಜಿನ ಪ್ರತಿ

–ಇವುಗಳನ್ನು ಅದಕ್ಕೆ ಒದಗಿಸಲು ಅಗತ್ಯಪಡಿಸಬಹುದು:

ಪರಂತು, ಮುನ್ಸಿಪಲ್ ಕೌನ್ಸಿಲಿನ ಸಭೆಯನ್ನು ಕರೆಯುವವರೆಗೆ, ವಿಳಂಬಕ್ಕೆ ಅವಕಾಶವಿಲ್ಲದಂಥ ತುರ್ತು ಪ್ರಕರಣಗಳಲ್ಲಿ ಅಧ್ಯಕ್ಷನು ಮೇಲೆ ಉಲ್ಲೇಖಿಸಿದ ಮಾಹಿತಿ, ವಿವರಪಟ್ಟಿಕೆ, ಅಂಕಿ ಅಂಶಗಳು, ಅಂದಾಜು ಅಥವಾ ಇತರ ಮಾಹಿತಿಯನ್ನು ಕೇಳಬಹುದು.

(2) ಮುನ್ಸಿಪಲ್ ಕಮಿಷನರನು ಅಂಥ ಪ್ರತಿಯೊಂದು ಕಡ್ಡಾಯ ಕೋರಿಕೆಯನ್ನು ಅನುಚಿತ ವಿಳಂಬವಿಲ್ಲದೆ ಪಾಲಿಸತಕ್ಕದ್ದು.

**338. ಮುನ್ಸಿಪಲ್ ಕಮಿಷನರುಗಳ ಅಧಿಕಾರಗಳು ಮತ್ತು ಅವುಗಳ ಪರಿಮಿತಿಗಳು.–** ಮುನ್ಸಿಪಲ್ ಕಮಿಷನರನು ಈ ಅಧಿನಿಯಮದ ಉಪಬಂಧಗಳು ಮತ್ತು ಇಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ಅಧಿಕಾರಗಳು ಹಾಗೂ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲು ಅವನಿಗೆ ಪ್ರತ್ಯಾಯೋಜಿಸಬಹುದಾದಂಥ ಇತರ ಕಾರ್ಯನಿರ್ವಾಹಕ ಅಧಿಕಾರಗಳ ಮೂಲಕ ಅವನಿಗೆ ನಿರ್ದಿಷ್ಟವಾಗಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು ಅವನು 43ನೇ ಪ್ರಕರಣದ(1)ನೇ ಉಪಪ್ರಕರಣ (ಖ), (ಫ) ಮತ್ತು (ಜ) ಖಂಡಗಳ ಅಥವಾ (2)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷನ ಕರ್ತವ್ಯಗಳು ಮತ್ತು ಅಧಿಕಾರಗಳನ್ನು ನೆರವೇರಿಸತಕ್ಕದ್ದು ಮತ್ತು ಚಲಾಯಿಸತಕ್ಕದ್ದು;

(2) ಈ ಅಧಿನಿಯಮದ ಉಪಬಂಧಗಳ ಮೂಲಕ ಚೀಫ್ ಆಫೀಸರನಿಗೆ ನಿರ್ದಿಷ್ಟವಾಗಿ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಅವನು ಚಲಾಯಿಸತಕ್ಕದ್ದು.

(3) ಈ ಕೆಳಕಂಡ ಪ್ರಕರಣಗಳು ಅಥವಾ ಉಪಪ್ರಕರಣಗಳಲ್ಲಿ ಅಡಕವಾಗಿರುವ ಯಾವುದೇ ಉಪಬಂಧದ ಮೇರೆಗೆ ಮುನ್ಸಿಪಲ್ ಕೌನ್ಸಿಲು ಮಾಡಬಹುದಾದ, ಕೊಡಬಹುದಾದ, ಹೊರಡಿಸಬಹುದಾದ, ಚಲಾಯಿಸಬಹುದಾದ ಮತ್ತು ನೆರವೇರಿಸಬಹುದಾದಂಥ ಅವನು ಬರಹದಲ್ಲಿನ ನೋಟೀಸಿನ ಮೂಲಕ ಅಂಥ ಕಡ್ಡಾಯ ಕೋರಿಕೆಯನ್ನು ಮಾಡಬಹುದು, ಅಂಥ ಬರಹದಲ್ಲಿನ ಸಮ್ಮತಿ ಅಥವಾ ಅನುಮತಿಯನ್ನು ಕೊಡಬಹುದು, ಅಂಥ ಆದೇಶಗಳನ್ನು ಮತ್ತು ನಿಷೇಧಾಜ್ಞೆಗಳನ್ನು ಹೊರಡಿಸಬಹುದು, ಅಂಥ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಅಂಥ ಎಲ್ಲ ಕರ್ತವ್ಯಗಳನ್ನು ನೆರವೇರಿಸಬಹುದು, ಎಂದರೆ:–

| | |
|---|---|
| 115ನೇ ಪ್ರಕರಣ | 203ನೇ ಪ್ರಕರಣದ (2)ನೇ ಉಪಪ್ರಕರಣ |
| 139ನೇ ಪ್ರಕರಣ | 205ನೇ ಪ್ರಕರಣದ (1)ನೇ ಉಪಪ್ರಕರಣ |
| 176ನೇ ಪ್ರಕರಣ | 208ನೇ ಪ್ರಕರಣ |
| 181ನೇ ಪ್ರಕರಣ | 231ನೇ ಪ್ರಕರಣ |
| 182ನೇ ಪ್ರಕರಣ | 248ನೇ ಪ್ರಕರಣ |
| 183ನೇ ಪ್ರಕರಣ | 252ನೇ ಪ್ರಕರಣ |
| 184ನೇ ಪ್ರಕರಣ | 256ನೇ ಪ್ರಕರಣ |
| 194ನೇ ಪ್ರಕರಣ | 264ನೇ ಪ್ರಕರಣ |
| 195ನೇ ಪ್ರಕರಣ | 265ನೇ ಪ್ರಕರಣ |
| 199ನೇ ಪ್ರಕರಣ | 267ನೇ ಪ್ರಕರಣ |
| 200ನೇ ಪ್ರಕರಣ | 269ನೇ ಪ್ರಕರಣ ಮತ್ತು |
| 202ನೇ ಪ್ರಕರಣ | 277ನೇ ಪ್ರಕರಣ |

ಪರಂತು,–

(ಕ) 139ನೇ ಪ್ರಕರಣದ, 182ನೇ ಪ್ರಕರಣದ, 203ನೇ ಪ್ರಕರಣದ (1)ನೇ ಉಪಪ್ರಕರಣ, 208ನೇ ಪ್ರಕರಣ, 216ನೇ ಪ್ರಕರಣದ (1)ನೇ ಉಪಪ್ರಕರಣ ಮತ್ತು ಬಾವಿಯ ಸಂದರ್ಭದಲ್ಲಿ 236ನೇ ಪ್ರಕರಣದಲ್ಲಿ ಒಳಗೊಂಡ ಉಪಬಂಧಗಳ ಮೂಲಕ ಅಥವಾ ಮೇರೆಗೆ ಮುನ್ಸಿಪಲ್ ಕೌನ್ಸಿಲಿಗೆ ಪ್ರದತ್ತವಾದ ಅಧಿಕಾರಗಳನ್ನು ಮುನ್ಸಿಪಲ್ ಕೌನ್ಸಿಲ್‌ನ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಅಲ್ಲದೆ ಅಥವಾ ಅಂಥ ಆದೇಶಗಳು ಇಲ್ಲದಿರುವಲ್ಲಿ ಮುನ್ಸಿಪಲ್ ಕೌನ್ಸಿಲಿಗೆ ಪೂರ್ವಾನುಮೋದನೆಯಿಂದಲ್ಲದೆ ಮುನ್ಸಿಪಲ್ ಕಮಿಷನರನು ಚಲಾಯಿಸತಕ್ಕದ್ದಲ್ಲ;

(ಖ) ಈ ಅಧಿನಿಯಮದ ಯಾವುದೇ ಉಪಬಂಧದ ಮೂಲಕ ಅಥವಾ ಅದರ ಮೇರೆಗೆ (i) ಉಪವಿಧಿಗಳನ್ನು ರಚಿಸಲು ಮತ್ತು (ii) ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಅಥವಾ ಸಮಿತಿ ಅಥವಾ ಕೌನ್ಸಿಲರನನ್ನು ಯಾವುದೇ ಕಾರ್ಯವನ್ನು ಮಾಡಲು ಅಧಿಕೃತಗೊಳಿಸಲು ಮುನ್ಸಿಪಲ್ ಕೌನ್ಸಿಲಿಗೆ ಪ್ರದತ್ತವಾದ ಅಧಿಕಾರಗಳನ್ನು ಮುನ್ಸಿಪಲ್ ಕಮಿಷನರು ಚಲಾಯಿಸತಕ್ಕದ್ದಲ್ಲ; ಮತ್ತು

(ಗ) ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾದ ಅಥವಾ ಅದಕ್ಕೆ ಸೇರಿದ ಅಥವಾ ಅನ್ಯಥಾ ಅದು ಧಾರಣ ಮಾಡಿದ ಸ್ವತ್ತು ಚರಸ್ವತ್ತಾಗಿರಲಿ ಅಥವಾ ಸ್ಥಿರಸ್ವತ್ತಾಗಿರಲಿ ಮುನ್ಸಿಪಲ್ ಕಮಿಷನರ್‌ನಲ್ಲಿ ನಿಹಿತವಾಗಿರುವುದಾಗಿ ಅಥವಾ ಅವನಿಗೆ ಸೇರಿರುವುದಾಗಿ ಅಥವಾ ಅವನು ಅನ್ಯಥಾ ಧಾರಣ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ.

**339. ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಇತರ ಅಧಿಕಾರಗಳನ್ನು ಚಲಾಯಿಸಲು ಅಧಿಕೃನಾಗಿರುವುದಾಗಿ ಭಾವಿಸತಕ್ಕದ್ದು.–** ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯವನ್ನು ನೆರವೇರಿಸಲು ಮುನ್ಸಿಪಲ್ ಕೌನ್ಸಿಲು ಯಾರೇ ಅಧಿಕಾರಿಯನ್ನು ಅಧಿಕೃತಗೊಳಿಸಿದಾಗಲೆಲ್ಲಾ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನನ್ನು ಸಹ ಅಂಥ ಅಧಿಕಾರವನ್ನು ಚಲಾಯಿಸಲು ಅಥವಾ ಅಂಥ ಪ್ರಕಾರ್ಯವನ್ನು ನೆರವೇರಿಸಲು ಅಧಿಕೃತಗೊಳಿಸುವುದಾಗಿ ಭಾವಿಸತಕ್ಕದ್ದು.

**340. ಮುನ್ಸಿಪಲ್ ಕೌನ್ಸಿಲು ಇತ್ಯಾದಿಗಳ ಸಭೆಗಳಿಗೆ ಹಾಜರಾಗಲು ಮುನ್ಸಿಪಲ್ ಕಮಿಷನರನ ಮತ್ತು ಚೀಫ್ ಆಫೀಸರನ ಹಕ್ಕು.–** ಮುನ್ಸಿಪಲ್ ಕಮಿಷನರನು ಮತ್ತು ಚೀಫ್ ಆಫೀಸರನು ಮುನ್ಸಿಪಲ್ ಕೌನ್ಸಿಲಿನ ಮತ್ತು ಕೌನ್ಸಿಲಿನ ಯಾವುದೇ ಸಮಿತಿಯ ಸಭೆಗಳಿಗೆ ಹಾಜರಾಗಲು ಮತ್ತು ಚರ್ಚೆಯಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕದ್ದು. ಆದರೆ ಯಾವುದೇ ನಿರ್ಣಯವನ್ನು ಮಂಡಿಸಲು ಅಥವಾ ಮತವನ್ನು ನೀಡಲು ಹಕ್ಕನ್ನು ಹೊಂದಿರತಕ್ಕದ್ದಲ್ಲ.

**341. ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಕೊಟ್ಟ ಕಾನೂನುಸಮ್ಮತ ನಿರ್ದೇಶನವನ್ನು ಉಲ್ಲಂಘಿಸುವ ವ್ಯಕ್ತಿಗೆ ದಂಡನೆ.–** ಯಾವುದೇ ವಿಷಯದಲ್ಲಿ ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರ್‌ನು ಕೊಟ್ಟ ಕಾನೂನುಸಮ್ಮತ ನಿರ್ದೇಶನವನ್ನು ಉಲ್ಲಂಘಿಸುವ ಅಥವಾ ಪಾಲಿಸಲು ತಪ್ಪುವ ಯಾರೇ ಆಗಲಿ ಅದೇ ವಿಷಯದಲ್ಲಿ ಮುನ್ಸಿಪಲ್ ಕೌನ್ಸಿಲು ಕೊಟ್ಟ ಕಾನೂನುಸಮ್ಮತ ನಿರ್ದೇಶನವನ್ನು ಉಲ್ಲಂಘಿಸುವ ಅಥವಾ ಪಾಲಿಸಲು ತಪ್ಪುವ ವ್ಯಕ್ತಿಯಂತೆ ಅದೇ ರೀತಿಯಲ್ಲಿ ದಂಡನೀಯನಾಗತಕ್ಕದ್ದು.

**342. ನೇಮಿಸಲು, ರಜಾ ಮಂಜೂರ್ಮಾಡಲು, ಶಿಕ್ಷಿಸಲು ಮತ್ತು ಕೆಲಸದಿಂದ ವಜಾ ಮಾಡಲು ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರರ ಅಧಿಕಾರಗಳು.–** (1) ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಮುನ್ಸಿಪಲ್ ಕೌನ್ಸಿಲು ಅವನಿಗೆ ಈ ಬಗ್ಗೆ ಪ್ರತ್ಯಾಯೋಜಿಸಬಹುದಾದಂಥ,–

(ಕ) ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳಿಗೊಳಪಟ್ಟು ನಿಯಮಿಸಬಹುದಾದಂಥ ಮೊಬಲಗನ್ನು ಮೀರದ ಮಾಸಿಕ ಸಂಬಳವುಳ್ಳ ಮುನ್ಸಿಪಲ್ ಕೌನ್ಸಿಲಿನ ಅಧೀನದ ಯಾವುದೇ ಹುದ್ದೆಗೆ ಸಕ್ಷಮ ವ್ಯಕ್ತಿಯನ್ನು ನೇಮಿಸಲು;

(ಖ) ತತ್ಕಾಲದಲ್ಲಿ ಜಾರಿಯಲ್ಲಿರುವ ನಿಯಮಗಳಿಗೊಳಪಟ್ಟು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ನೇಮಕಮಾಡಲು ಅಧಿಕಾರ ಹೊಂದಿದಂಥ ಯಾವುದೇ ಹುದ್ದೆಯ ಧಾರಕನಿಗೆ ಗೈರುಹಾಜರಿ, ರಜೆಯನ್ನು ಮಂಜೂರು ಮಾಡಲು ಮತ್ತು ಅಂಥ ಗೈರು ಹಾಜರಾತಿ ಅವಧಿಯಲ್ಲಿ ಅಂಥ ಧಾರಕನ ಕಾರ್ಯನಿರ್ವಹಿಸಲು ಸಕ್ಷಮ ವ್ಯಕ್ತಿಯನ್ನು ನೇಮಿಸಲು; ಮತ್ತು

(ಗ) ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ನೇಮಕ ಮಾಡಲು ಅಧಿಕಾರ ಹೊಂದಿರುವಂಥ ಯಾವುದೇ ಹುದ್ದೆಯ ಧಾರಕನಿಗೆ ಜುಲ್ಮಾನೆ ವಿಧಿಸಲು, ಇಳಿಸಲು, ಅಮಾನತ್ತಿನಲ್ಲಿರಿಸಲು ಅಥವಾ ವಜಾ ಮಾಡಲು ಅಥವಾ ಇತರ ಯಾವುದೇ ದಂಡನೆಯನ್ನು ವಿಧಿಸಲು ಮುನ್ಸಿಪಲ್ ಕೌನ್ಸಿಲಿನ ಮಂಜೂರಾತಿಯಿಲ್ಲದೆ ಸ್ವತಂತ್ರವಾಗಿ ಅಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮುನ್ಸಿಪಲ್ ಕಮಿನಷರನನ್ನು ನೇಮಕ ಮಾಡಿರುವಾಗ ಮುನ್ಸಿಪಲ್ ಕೌನ್ಸಿಲು ನಿಯೋಜಿಸಿದ ಇತರ ಎಲ್ಲ ಅಧಿಕಾರಿಗಳು ಮತ್ತ ನೌಕರರು ಅವನಿಗೆ ಅಧೀನರಾಗಿರತಕ್ಕದ್ದು.

**343. [ಅಪೀಲಿಗೆ ಒಳಪಟ್ಟ] ಆದೇಶಗಳು.–** ಈ ಕೆಳಕಂಡ ಯಾವುದೇ ಉಪಬಂಧದ ಮೇರೆಗೆ ಮುನ್ಸಿಪಲ್ ಕಮಿಷನರನು ಹೊರಡಿಸಿದ ಆದೇಶ ಅಥವಾ ಮಾಡಿದ ಯಾವುದೇ ಕಾರ್ಯದ ಸಂದರ್ಭದಲ್ಲಿ ಹೊರತು, ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಅವನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಅವನು ಹೊರಡಿಸಿದ ಯಾವುದೇ ಆದೇಶ ಅಥವಾ ಮಾಡಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಮುನ್ಸಿಪಲ್ ಕೌನ್ಸಿಲಿಗೆ ಅಪೀಲು ಇರತಕ್ಕದ್ದಲ್ಲ, ಎಂದರೆ:–

(i) 181ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳು;

(ii) 187ನೇ ಪ್ರಕರಣದ (9)ನೇ ಉಪಪ್ರಕರಣದ (ಗ) ಖಂಡ,

(iii) 194ನೇ ಪ್ರಕರಣದ (1)ನೇ ಉಪಪ್ರಕರಣ

(iv) 197ನೇ ಪ್ರಕರಣದ (2)ನೇ ಉಪಪ್ರಕರಣ

(v) 228ನೇ ಪ್ರಕರಣದ (2)ನೇ ಉಪಪ್ರಕರಣ

(vi) 230ನೇ ಪ್ರಕರಣ

(vii) 256ನೇ ಪ್ರಕರಣ

(viii) 259ನೇ ಪ್ರಕರಣ

(ix) 264ನೇ ಪ್ರಕರಣದ (1)ನೇ ಉಪಪ್ರಕರಣದ (ಖ) ಖಂಡ

(x) 269ನೇ ಪ್ರಕರಣದ

(xi) ವಜಾ ಆದೇಶಕ್ಕೆ ಸಂಬಂಧಿಸಿದಂತೆ 342ನೇ ಪ್ರಕರಣದ (1)ನೇ ಉಪಪ್ರಕರಣದ (ಗ) ಖಂಡ

(2) (1)ನೇ ಉಪಪ್ರಕರಣದ ಮೇರೆಗೆ ಮುನ್ಸಿಪಲ್ ಕೌನ್ಸಿಲಿಗೆ ಅಪೀಲಿಯವಲ್ಲದಂಥ ಮುನ್ಸಿಪಲ್ ಕಮಿಷನರನು ಮಾಡಿದ ಯಾವುದೇ ಆದೇಶ ಅಥವಾ ಮಾಡಿದ ಕಾರ್ಯಕ್ಕೆ ಸಂಬಂಧಿಸಿದಂತೆ ಈ ಬಗ್ಗೆ ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದಾದಂಥ ಅಧಿಕಾರಿಗೆ ಅಪೀಲು ಇರತಕ್ಕದ್ದು.

**344. ಮುನ್ಸಿಪಲ್ ಕಮಿಷನರನ ಅಧಿಕಾರಗಳ ಪ್ರತ್ಯಾಯೋಜನೆ.–** (1) ಮುನ್ಸಿಪಲ್ ಕೌನ್ಸಿಲಿನ ಮಂಜೂರಾತಿಯೊಂದಿಗೆ, ಮುನ್ಸಿಪಲ್ ಕಮಿಷನರನು ಬರಹದಲ್ಲಿನ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಕೆಳಕಂಡ ಎಂದರೆ 256, 276 ಮತ್ತು 342ನೇ ಪ್ರಕರಣಗಳ ಮೇರೆಗೆ ಅವನಿಗೆ ಪ್ರದತ್ತವಾದ ಅಥವಾ ವಿಧಿಸಿದ ಅಥವಾ ಅವನಲ್ಲಿ ನಿಹಿತವಾದಂಥವುಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗಿನ ಮುನ್ಸಿಪಲ್ ಕಮಿಷನರನ ಯಾವುದೇ ಅಧಿಕಾರ, ಕರ್ತವ್ಯ ಅಥವಾ ಪ್ರಕಾರ್ಯಗಳನ್ನು ಯಾರೇ ಪುರಸಭಾ ಅಧಿಕಾರಿ ಅಥವಾ ನೌಕರನಿಗೆ ಪ್ರತ್ಯಾಯೋಜಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾರೇ ಮುನ್ಸಿಪಲ್ ಅಧಿಕಾರಿ ಅಥವಾ ನೌಕರನಿಗೆ ಪ್ರತ್ಯಾಯೋಜಿಸಲಾದ ಯಾವುವೇ ಅಧಿಕಾರಗಳು, ಕರ್ತವ್ಯಗಳು, ಅಥವಾ ಪ್ರಕಾರ್ಯಗಳನ್ನು ಅವನು ಚಲಾಯಿಸುವುದು ಅಥವಾ ನಿರ್ವಹಿಸುವುದು, ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಮಿತಿಗಳು ಯಾವುವಾದರೂ ಇದ್ದರೆ ಅವುಗಳಿಗೆ ಮತ್ತು ಮುನ್ಸಿಪಲ್ ಕಮಿನಷರನ ನಿಯಂತ್ರಣ ಮತ್ತು ಪುನರೀಕ್ಷಣೆಗೂ ಸಹ ಒಳಪಟ್ಟಿರತಕ್ಕದ್ದು.

**345. ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಕರಾರುಗಳನ್ನು ಮಾಡಿಕೊಳ್ಳಲು ಅಧಿಕಾರ.–** ಮುನ್ಸಿಪಲ್ ಕಮಿಷನರನನ್ನು ನೇಮಕ ಮಾಡಿರುವಂಥ ಯಾವುದೇ ಪುರಸಭೆಯಲ್ಲಿ, 72ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗೆ ಅಥವಾ ಅದರ ಯಾವುದೇ ಉದ್ದೇಶಗಳಿಗಾಗಿ ಕರಾರುಗಳನ್ನು ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು, ಎಂದರೆ:–

(ಕ) ಮುನ್ಸಿಪಲ್ ಕಮಿಷನರನು ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಅಂಥ ಪ್ರತಿಯೊಂದು ಕರಾರನ್ನು ಮಾಡಿಕೊಳ್ಳತಕ್ಕದ್ದು;

(ಖ) ಇತರ ಯಾವುದೇ ಪೌರಸಭಾ ಪ್ರಾಧಿಕಾರದ ಅನುಮೋದನೆ ಅಥವಾ ಮಂಜೂರಾತಿ ಇಲ್ಲದೆ ಈ ಅಧಿನಿಯಮದ ಮೂಲಕ ಮುನ್ಸಿಪಲ್ ಕಮಿಷನರನು ಕಾರ್ಯಗತಗೊಳಿಸಲು ಶಕ್ತಗೊಳಿಸಿಲ್ಲದಂಥ ಯಾವುದೇ ಉದ್ದೇಶಕ್ಕಾಗಿ ಯಾವುದೇ ಅಂಥ ಕರಾರನ್ನು ಅಂಥ ಅನುಮೋದನೆ ಅಥವಾ ಮಂಜೂರಾತಿಯನ್ನು ಕ್ರಮಬದ್ಧವಾಗಿ ಮೊದಲು ಕೊಡುವವರೆಗೆ ಅಥವಾ ಕೊಟ್ಟಿದ್ದ ಹೊರತು ಅವನು ಮಾಡಿಕೊಳ್ಳತಕ್ಕದ್ದಲ್ಲ;

(ಗ) ಮುನ್ಸಿಪಲ್ ಕಮಿಷನರನು ಮುನ್ಸಿಪಲ್ ಕೌನ್ಸಿಲಿನ ಅನುಮೋದನೆ ಅಥವಾ ಮಂಜೂರಾತಿ ಪಡೆದ ಹೊರತು ಸ್ಥಿರಾಸ್ತಿಯ ಖರೀದಿ, ಮಾರಾಟ, ಬಾಡಿಗೆ, ಅಡಮಾನ ಅಥವಾ ಇತರ ವರ್ಗಾವಣೆಗಾಗಿ ಯಾವುದೇ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ;

(ಫ) ಮುನ್ಸಿಪಲ್ ಕೌನ್ಸಿಲ್‌ನ ಅನುಮೋದನೆ ಅಥವಾ ಮಂಜೂರಾತಿಯನ್ನು ಪಡೆದ ಹೊರತು ಮುನ್ಸಿಪಲ್ ಕಮಿಷನರನು ಎರಡು ಸಾವಿರ ರೂಪಾಯಿಗಳಿಗೆ ಮೀರಿದ ವೆಚ್ಚವನ್ನೊಳಗೊಳ್ಳುವಂಥ ಯಾವುದೇ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ;

(ಜ) ಇನ್ನೂರೈವತ್ತು ರೂಪಾಯಿಗಳಿಗೂ ಮೀರುವ ವೆಚ್ಚವನ್ನೊಳಗೊಂಡ ಮುನ್ಸಿಪಲ್ ಕಮಿಷನರನು ಮಾಡಿಕೊಂಡ ಪ್ರತಿಯೊಂದು ಕರಾರನ್ನು ಅದನ್ನು ಮಾಡಿಕೊಂಡ ತರುವಾಯದ ಹದಿನೈದು ದಿನಗಳೊಳಗಾಗಿ ಅವನು ಮುನ್ಸಿಪಲ್ ಕೌನ್ಸಿಲಿಗೆ ವರದಿ ಮಾಡತಕ್ಕದ್ದು; ಮತ್ತು

(ಚ) ಈ ಪ್ರಕರಣದಲ್ಲಿ ಹಿಂದೆ ಹೇಳಿದ ಉಪಬಂಧಗಳು, ಮೂಲ ಕರಾರಿಗೆ ಅನ್ವಯವಾಗುವ ಹಾಗೆಯೇ ಒಂದು ಕರಾರಿನ ಪ್ರತಿಯೊಂದು ಬದಲಾವಣೆ ಅಥವಾ ನಿರ್ವಹಿಸಿ ಮುಗಿಸುವುದಕ್ಕೆ ಅನ್ವಯವಾಗತಕ್ಕದ್ದು.

**346. ಕರಾರುಗಳನ್ನು ಮಾಡಿಕೊಳ್ಳುವ ವಿಧಾನ.–** (1) 72ನೇ ಪ್ರಕರಣದ (7) ಮತ್ತು (8)ನೇ ಉಪಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಮುನ್ಸಿಪಲ್ ಕಮಿಷನರನು ಅಥವಾ ಚೀಫ್ ಆಫೀಸರನು ಮಾಡಿಕೊಂಡ ಪ್ರತಿಯೊಂದು ಕರಾರು, ಅಂಥ ಕರಾರನ್ನು ತನ್ನ ಪರವಾಗಿಯೇ ಮಾಡಿಕೊಂಡಿದ್ದರೆ, ಅಂಥ ಮುನ್ಸಿಪಲ್ ಕಮಿನಷರ್ ಅಥವಾ ಚೀಫ್ ಆಫೀಸರನನ್ನು ಬದ್ಧಗೊಳಿಸುವಂಥ ರೀತಿಯಲ್ಲಿ ಮತ್ತು ರೂಪದಲ್ಲಿ ಮಾಡಿಕೊಳ್ಳತಕ್ಕದ್ದು ಮತ್ತು ಅಂಥದೇ ರೀತಿಯಲ್ಲಿ ಮತ್ತು ರೂಪದಲ್ಲಿ ಬದಲಾವಣೆ ಮಾಡಬಹುದು ಅಥವಾ ನಿರ್ವಹಿಸಿ ಮುಗಿಸಬಹುದು:

ಪರಂತು,

(ಕ) ಯಾವುದೇ ಕರಾರನ್ನು ಮುನ್ಸಿಪಲ್ ಕೌನ್ಸಿಲು ಮಾಡಿಕೊಂಡರೆ ಅದು ಮೊಹರಿನೊಂದಿಗೆ ಇರಬೇಕಾಗುವುದು. ಅದನ್ನು ಮುನ್ಸಿಪಲ್ ಕೌನ್ಸಿಲಿನ ಸಾಮಾನ್ಯ ಮೊಹರಿನಿಂದ ಮೊಹರು ಮಾಡತಕ್ಕದ್ದು.

(ಖ) ಐದು ನೂರು ರೂಪಾಯಿಗಳನ್ನು ಮೀರುವ ವೆಚ್ಚವನ್ನೊಳಗೊಳ್ಳುವಂಥ ಯಾವುದೇ ಕಾಮಗಾರಿಯ ನಿರ್ವಹಣೆ ಅಥವಾ ಯಾವುದೇ ಸಾಮಗ್ರಿ ಅಥವಾ ಸರಕುಗಳ ಸರಬರಾಜುಗಾಗಿನ ಪ್ರತಿಯೊಂದು ಕರಾರು ಬರಹದಲ್ಲಿರತಕ್ಕದ್ದು ಮತ್ತು ಮುನ್ಸಿಪಲ್ ಕೌನ್ಸಿಲಿನ ಸಾಮಾನ್ಯ ಮೊಹರಿನಿಂದ ಮೊಹರು ಮಾಡಿರತಕ್ಕದ್ದು ಮತ್ತು ಸಂದರ್ಭಾನುಸಾರ ಮಾಡಬೇಕಾದ ಕಾಮಗಾರಿ ಅಥವಾ ಸರಬರಾಜು ಮಾಡಬೇಕಾದ ಸಾಮಗ್ರಿ ಅಥವಾ ಸರಕುಗಳನ್ನು ಸ್ಪಷ್ಟಪಡಿಸತಕ್ಕದ್ದು. ಅಂಥ ಕಾರ್ಯಕ್ಕೆ ಸಾಮಗ್ರಿಗಳು ಅಥವಾ ಸರಕುಗಳನ್ನು, ಅಂಥ ಕಾಮಗಾರಿ ಸಾಮಗ್ರಿಗಳು ಅಥವಾ ಸರಕುಗಳಿಗೆ ಸಂದಾಯ ಮಾಡಬೇಕಾದ ಬೆಲೆಯನ್ನು ಮತ್ತು ಕಾಮಗಾರಿಯ ಕರಾರಿನ ಸಂದರ್ಭದಲ್ಲಿ ಅದನ್ನು ಅಥವಾ ಅದರ ನಿರ್ದಿಷ್ಟ ಭಾಗಗಳನ್ನು ಮುಗಿಸತಕ್ಕಂಥ ಕಾಲ ಅಥವಾ ಕಾಲಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಮುನ್ಸಿಪಲ್ ಕೌನ್ಸಿಲಿನ ಸಾಮಾನ್ಯ ಮೊಹರನ್ನು ಸ್ಥಾಯಿ ಸಮಿತಿಯ ಇಬ್ಬರು ಸದಸ್ಯರ ಸಮಕ್ಷಮದಲ್ಲಿ ಅಲ್ಲದೆ ಯಾವುದೇ ಕರಾರು ಅಥವಾ ಲಿಖಿತಕ್ಕೆ ಹಾಕತಕ್ಕದ್ದಲ್ಲ, ಆ ಸದಸ್ಯರು ತಮ್ಮ ರುಜುಗಳನ್ನು ತಮ್ಮ ಸಮಕ್ಷಮದಲ್ಲಿ ಅದನ್ನು ಮೊಹರು ಮಾಡಲಾಯಿತು ಎಂಬುದಕ್ಕೆ ಸಂಕೇತವಾಗಿ ಕರಾರಿಗೆ ಅಥವಾ ಲಿಖಿತಕ್ಕೆ ಹಾಕತಕ್ಕದ್ದು. ಸದರಿ ಸದಸ್ಯರ ರುಜುವು, ಅಂಥ ಯಾವುದೇ ಕರಾರು ಅಥವಾ ಲಿಖಿತವನ್ನು ಬರೆದುಕೊಟ್ಟಿರುವುದಕ್ಕೆ ಯಾರೇ ಸಾಕ್ಷಿಗಳ ರುಜುಗಳಿಂದ ಭಿನ್ನವಾಗಿರತಕ್ಕದ್ದು.

(3) ಈ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಬರೆದುಕೊಟ್ಟಿರದ ಯಾವುದೇ ಕರಾರು ಮುನ್ಸಿಪಲ್ ಕೌನ್ಸಿಲನ್ನು ಬದ್ಧಗೊಳಿಸತಕ್ಕದ್ದಲ್ಲ.

**347. ಐದು ನೂರು ರೂಪಾಯಿಗಳಿಗೆ ಮೀರುವ ವೆಚ್ಚವನ್ನೊಳಗೊಳ್ಳುವ ಕರಾರುಗಳಿಗೆ ಟೆಂಡರುಗಳನ್ನು ಕರೆಯತಕ್ಕದ್ದು.–** (1) (3)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಮುನ್ಸಿಪಲ್ ಕಮಿಷನರನು, ಐದು ನೂರು ರೂಪಾಯಿಗಳಿಗೂ ಮೀರುವ ವೆಚ್ಚವನ್ನು ಒಳಗೊಳ್ಳುವಂಥ ಯಾವುದೇ ಕಾಮಗಾರಿಯ ನಿರ್ವಹಣೆ ಅಥವಾ ಸಾಮಗ್ರಿ ಅಥವಾ ಸರಕುಗಳ ಸರಬರಾಜಿಗಾಗಿ ಯಾವುದೇ ಕರಾರನ್ನು ಮಾಡಿಕೊಳ್ಳುವ ಮುಂಚೆ ಕನಿಷ್ಠ ಪಕ್ಷ ಏಳು ದಿವಸಗಳಿಗೆ ಮುಂಚೆ ಅಂಥ ಕರಾರಿಗಾಗಿ ಟೆಂಡರುಗಳನ್ನು ಕರೆದು ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು ನೀಡುವ ಮೂಲಕ ನೋಟೀಸನ್ನು ಕೊಡತಕ್ಕದ್ದು.

(2) ಅಂಥ ನೋಟೀಸಿನ ಅನುಸರಣೆಯಲ್ಲಿ ಕೊಡಬಹುದಾದಂಥ ಯಾವುದೇ ಟೆಂಡರನ್ನು ಸ್ವೀಕರಿಸಲು ಮುನ್ಸಿಪಲ್ ಕಮಿಷನರನು ಬದ್ಧನಾಗಿರತಕ್ಕದ್ದಲ್ಲ; ಆದರೆ 345ನೇ ಪ್ರಕರಣದ (ಫ) ಖಂಡದ ಉಪಬಂಧಗಳಿಗೊಳಪಟ್ಟು, ಹಾಗೆ ಬಂದಿರುವ ಯಾವುದೇ ಟೆಂಡರನ್ನು ಎಲ್ಲಾ ಸಂದರ್ಭಗಳಲ್ಲಿ ಪರ್ಯಾಲೋಚಿಸಿದ ಮೇಲೆ ಅವನಿಗೆ ಅತಿ ಅನುಕೂಲವೆಂದು ಕಂಡುಬರುವಂಥದನ್ನು ತರಿಸಬಹುದು ಅಥವಾ ಅವನಿಗೆ ಸಲ್ಲಿಸಿದ ಎಲ್ಲಾ ಟೆಂಡರುಗಳನ್ನು ತಿರಸ್ಕರಿಸಬಹುದು.

(3) ಮುನ್ಸಿಪಲ್ ಕೌನ್ಸಿಲ್ 72ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು ಕೌನ್ಸಿಲಿನ ಅದರ ವ್ಯವಹರಣೆಗಳಲ್ಲಿ ದಾಖಲು ಮಾಡಬೇಕಾದಂಥ ಕಾರಣಗಳಿಗಾಗಿ, ಇಲ್ಲಿ ಉಪಬಂಧಿಸಿದ ಟೆಂಡರುಗಳನ್ನು ಕರೆಯದೆ ಅಥವಾ ಅವುಗಳನ್ನು ಕರೆದ ತರುವಾಯ ಅವನು ಸ್ವೀಕರಿಸಬಹುದಾದಂಥ ಯಾವುದೇ ಟೆಂಡರನ್ನು ಅಂಗೀಕರಿಸದೆ ಕರಾರನ್ನು ಮಾಡಿಕೊಳ್ಳಲು ಮುನ್ಸಿಪಲ್ ಕಮಿಷನರನನ್ನು ಅಧಿಕೃತಗೊಳಿಸಬಹುದು.

**348. ಕರಾರನ್ನು ನೆರವೇರಿಸುವುದಕ್ಕಾಗಿ ಭದ್ರತೆಯನ್ನು ಯಾವಾಗ ತೆಗೆದುಕೊಳ್ಳತಕ್ಕದ್ದು.–** ಮುನ್ಸಿಪಲ್ ಕಮಿಷನರನು, 345ನೇ ಪ್ರಕರಣದ ಮೇರೆಗೆ ಅವನು ಮಾಡಿಕೊಳ್ಳುವಂಥ ಪ್ರತಿಯೊಂದು ಕರಾರಿನ ಯುಕ್ತ ನೆರವೇರಿಕೆಗಾಗಿ ಭದ್ರತೆಯನ್ನು ಅಗತ್ಯಪಡಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಅವನು ಮಾಡಿಕೊಳ್ಳುವಂಥ ಯಾವುದೇ ಇತರ ಕರಾರಿನ ಯುಕ್ತ ನೆರವೇರಿಕೆಗೆ ಅವನ ವಿವೇಚನೆಯಲ್ಲಿ ಭದ್ರತೆಯನ್ನು ಅಗತ್ಯಪಡಿಸಬಹುದು.

## ಅಧ್ಯಾಯ–XV

## ಅಧಿಸೂಚಿತ ಪ್ರದೇಶಗಳು

**349. ಅಧಿಸೂಚಿತ ಪ್ರದೇಶಗಳ ರಚನೆ.–** (1) ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ಪೌರಸಭಾ ನಿಧಿಯನ್ನು ವೆಚ್ಚ ಮಾಡಬಹುದಾದಂಥ ಕೆಲವು ಅಥವಾ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ, ಆದಾಗ್ಯೂ 6ನೇ ಪ್ರಕರಣದ ಮೇರೆಗೆ ಪೌರಸಭೆಯೆಂದು ರಚಿಸಲು ವಿಹಿತವಲ್ಲದೆ ಇರುವಂಥ ನಿರ್ದಿಷ್ಟಪಡಿಸಿದ ಪ್ರದೇಶದೊಳಗೆ ಸುಧಾರಿತ ಏರ್ಪಾಟುಗಳ ಅಗತ್ಯವಿದೆಯೆಂದು ಘೋಷಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಗೆ ಸಂಬಂಧಪಟ್ಟ ಆ ಪ್ರದೇಶವನ್ನು ಇಲ್ಲಿ ಇನ್ನು ಮುಂದೆ ಅದನ್ನು ಅಧಿಸೂಚಿತ ಪ್ರದೇಶವೆಂದು ಕರೆಯಲಾಗಿದೆ.

(3) (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯು, ಅಂಥ ಪ್ರದೇಶವು ಯಾವ ದಿನಾಂಕದಿಂದ ಒಂದು ಅಧಿಸೂಚಿತ ಪ್ರದೇಶವಾಗತಕ್ಕದ್ದೆಂದು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅಂಥ ಅಧಿಸೂಚನೆಯಲ್ಲಿ ಸರ್ಕಾರವು 350ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಆ ಅಧಿಸೂಚಿತ ಪ್ರದೇಶ ಸಮಿತಿಗೆ, ಅಂಥ ಪ್ರದೇಶಗಳಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಹೊಂದಿರುವ ಯಾವುದೇ ಸ್ಥಳೀಯ ಪ್ರಾಧಿಕಾರದ ಸ್ವತ್ತು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ವರ್ಗಾವಣೆಯ ಬಗ್ಗೆ ಉಪಬಂಧಗಳನ್ನು ಸಹ ನಿರ್ದಿಷ್ಟಪಡಿಸಬಹುದು ಮತ್ತು ಸದರಿ ಅಧಿಸೂಚನೆಯ ಉಪಬಂಧಗಳು ತದನುಸಾರವಾಗಿ ಪರಿಣಾಮಕಾರಿಯಾಗಿರತಕ್ಕದ್ದು.

(4) ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಪ್ರದೇಶದ ಪರಿಮಿತಿಗಳನ್ನು ಬದಲಾಯಿಸಬಹುದು ಮತ್ತು ಅಂಥ ಬದಲಾವಣೆಯನ್ನು ಮಾಡಿದಾಗ, ಸದರಿ ಅಧಿಸೂಚನೆಯು ಯಾವುದೇ ಅಧಿನಿಯಮಿತಿಯ ಅನ್ವಯ ಅಥವಾ ಅನ್ವಯದ ಸಮಾಪ್ತಿಯ ಬಗ್ಗೆ ಅಂಥ ಉಪಬಂಧಗಳನ್ನು ಮತ್ತು (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ ಒಳಗೊಂಡಿರುವ ಅಥವಾ ಅದರಿಂದ ಹೊರತುಪಡಿಸಿದ ಪ್ರದೇಶಕ್ಕೆ ಸಂಬಂಧಪಟ್ಟಂತೆ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬೇಕಾದ ಅಥವಾ ಚಲಾಯಿಸುವುದು ನಿಂತುಹೋಗುವಂಥ ಸ್ಥಳೀಯ ಪ್ರಾಧಿಕಾರ ಅಥವಾ ಇತರ ನಿಕಾಯ, ಸಂಬಂಧಿಸಿದ ಸ್ಥಳೀಯ ಪ್ರಾಧಿಕಾರಗಳು ಮತ್ತು ನಿಕಾಯಗಳ ನಡುವೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಹಂಚುವುದು ಮತ್ತು ಹೊಂದಾಣಿಕೆ ಮಾಡುವುದು ಮತ್ತು ಸರ್ಕಾರವು ಅವಶ್ಯ ಅಥವಾ ಸರಿಯೆಂದು ಭಾವಿಸಬಹುದಾದಂಥ ಇತರ ಪ್ರಾಸಂಗಿಕ ಅಥವಾ ತತ್ಪರಿಣಾಮವಾದ ವಿಷಯಗಳ ಬಗ್ಗೆ ಅಂಥ ಉಪಬಂಧಗಳನ್ನು ಸಹ ಒಳಗೊಂಡಿರಬಹುದು, ಮತ್ತು ಸದರಿ ಅಧಿಸೂಚನೆಯ ಉಪಬಂಧಗಳು ತದನುಸಾರವಾಗಿ ಪರಿಣಾಮಕಾರಿಯಾಗಿರತಕ್ಕದ್ದು.

(5) (4)ನೇ ಉಪ–ಪ್ರಕರಣದ ಉಪಬಂಧಗಳಿಗೆ ಒಳಪಟ್ಟು (1)ನೇ ಉಪ–ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಪ್ರದೇಶಗಳ ಪರಿಮಿತಿಗಳನ್ನು, ಯಾವುದೇ ಪ್ರದೇಶವನ್ನು ಸೇರಿಸುವ ಮೂಲಕ, ಬದಲಾಯಿಸಿದಾಗ, ಅಧಿಸೂಚಿತ ಪ್ರದೇಶಕ್ಕೆ ಅನ್ವಯಿಸದ ಈ ಅಧಿನಿಯಮದ ಉಪಬಂಧಗಳು ಅಥವಾ ನಿಯಮಗಳು ಅಥವಾ ಉಪವಿಧಿಗಳು ಮತ್ತು ಅದರಲ್ಲಿ ವಿಧಿಸಿದ ತೆರಿಗೆಗಳು, ಫೀಜುಗಳು, ಅಥವಾ ಉಪಕರಗಳು ಮತ್ತು ಹಾಗೆ ಅನ್ವಯಿಸಿದ ಈ ಅಧಿನಿಯಮದ ಉಪಬಂಧಗಳ ಅಥವಾ ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ, ಹೊರಡಿಸಿದ, ಮಾಡಿದ ಅಥವಾ ಪ್ರದಾನ ಮಾಡಿದ ಎಲ್ಲ ಅಧಿಸೂಚನೆಗಳು, ನಿಯಮಗಳು, ಉಪವಿಧಿಗಳು, ಆದೇಶಗಳು, ನಿರ್ಣಯಗಳು, ನಿರ್ದೇಶನಗಳು ಮತ್ತು ಅಧಿಕಾರಗಳು, 351 ಮತ್ತು 353ನೇ ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ ಅಂಥ ಪ್ರದೇಶದ ಸೇರ್ಪಡೆಯ ದಿನಾಂಕದಿಂದ ಸದರಿ ಸೇರ್ಪಡೆಯಾದ ಪ್ರದೇಶಕ್ಕೆ ಅನ್ವಯವಾಗತಕ್ಕದ್ದು.

**350. ಅಧಿಸೂಚಿತ ಪ್ರದೇಶಗಳ ಆಡಳಿತ.–** (1) ಅಧಿಸೂಚಿತ ಪ್ರದೇಶದ ಪೌರ ವ್ಯವಹಾರಗಳನ್ನು ನಡೆಸುವ ಉದ್ದೇಶಕ್ಕಾಗಿ ಸರ್ಕಾರವು ಅಧಿಸೂಚನೆ ಮೂಲಕ ಒಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದು ಅಥವಾ ಮೂರಕ್ಕಿಂತ ಕಡಿಮೆಯಿರುವ ಹಾಗೂ ಐದಕ್ಕಿಂತ ಹೆಚ್ಚಿಲ್ಲದಂಥ ವ್ಯಕ್ತಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಬಹುದು, ಅದರಲ್ಲಿ ಬಹುಸಂಖ್ಯಾತರು ಅಂಥ ಪ್ರದೇಶದ ನಿವಾಸಿಗಳಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ವ್ಯಕ್ತಿಯು, ಏಕಸದಸ್ಯ ನಿಗಮವಾಗಿರತಕ್ಕದ್ದು ಹಾಗೂ (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ಸಮಿತಿಯು, ನಿಗಮಿತ ನಿಕಾಯವಾಗಿರತಕ್ಕದ್ದು, ಅವು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು

ಈ ಅಧಿನಿಯಮದ ಮೇರೆಗೆ ಅಥವಾ ಯಾವುದೇ ಇತರ ಅಧಿನಿಯಮಿತಿಯ ಮೂಲಕ ಅಥವಾ ಮೇರೆಗೆ ರಚಿಸಿದ ನಿಯಮಗಳ ಮೂಲಕ ವಿಧಿಸಲಾದ ಯಾವುದೇ ಪರಿಬಂಧಗಳು ಅಥವಾ ಅರ್ಹತೆಗಳಿಗೊಳಪಟ್ಟು ಅವನ ಅಥವಾ ಅದರ ನಿಗಮಿತ ಹೆಸರಿನಲ್ಲಿ ದಾವೆ ಹೂಡುವ ಅಥವಾ ದಾವೆಗೆ ಗುರಿಯಾಗುವ ಸ್ಥಿರ ಅಥವಾ ಸ್ಥಿರ ಸ್ವತ್ತನ್ನು ಆರ್ಜಿಸುವ, ಧಾರಣೆ ಮಾಡುವ ಮತ್ತು ವರ್ಗಾಯಿಸುವ ಕರಾರು ಮಾಡಿಕೊಳ್ಳುವ ಮತ್ತು ಅವನು ನೇಮಕಗೊಂಡ ಅಥವಾ ಸಮಿತಿಯನ್ನು ರಚಿಸಿದಂಥ ಉದ್ದೇಶಕ್ಕಾಗಿ ಅವಶ್ಯವಾದ, ಸರಿಯಾದ ಅಥವಾ ವಿಹಿತವಾದ ಎಲ್ಲ ಕಾರ್ಯಗಳನ್ನು ಮಾಡಲು ಸಾಮರ್ಥ್ಯವನ್ನು ಹೊಂದಿರತಕ್ಕದ್ದು.

**351. ಅಧಿನಿಯಮ, ನಿಯಮಗಳು ಮತ್ತು ಉಪವಿಧಿಗಳ ಅನ್ವಯ.–** (1) ಸರ್ಕಾರವು ಅಧಿಸೂಚನೆಯ ಮೂಲಕ,–

(ಕ) ಈ ಅಧಿನಿಯಮದ ಯಾವುದೇ ಪ್ರಕರಣದ ಅಥವಾ ಯಾವುದೇ ಪ್ರಕರಣದ ಭಾಗದ ಉಪಬಂಧಗಳನ್ನು ಮತ್ತು ಯಾವುದೇ ಮುನ್ಸಿಪಾಲಿಟಿ ಪೌರಸಭಾ ಅಧಿಸೂಚಿತ ಪ್ರದೇಶಕ್ಕೆ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪರಿಬಂಧಗಳು ಹಾಗೂ ಮಾರ್ಪಾಟುಗಳೇನಾದರೂ ಇದ್ದರೆ, ಅವುಗಳಿಗೊಳಪಟ್ಟು ಅಧಿಸೂಚಿತ ಪ್ರದೇಶಕ್ಕೆ ಅನ್ವಯಿಸಬಹುದು; ಮತ್ತು

(ಖ) ಅಂಥ ಪ್ರದೇಶದಲ್ಲಿ, ಸದರಿ ಪ್ರದೇಶವು ಪೌರಸಭೆಗಳಾಗಿದ್ದರೆ ಈ ಅಧಿನಿಯಮದ ಉಪಬಂಧಗಳು ಜಾರಿಯಲ್ಲಿರುವ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಅದರಲ್ಲಿ ವಿಧಿಸಬಹುದಾಗಿದ್ದಂಥ ಫೀಜು ಅಥವಾ ಉಪಕರವನ್ನು ಒಳಗೊಂಡು ಯಾವುದೇ ತೆರಿಗೆಯನ್ನು ವಿಧಿಸಬಹುದಾಗಿದೆ.

(2) ಈ ಪ್ರಕರಣದ ಮೇರೆಗೆ, ಯಾವುದೇ ಅಧಿಸೂಚಿತ ಪ್ರದೇಶದಲ್ಲಿ ವಿಧಿಸಿದ ಯಾವುದೇ ತೆರಿಗೆ, ಫೀಜು ಅಥವಾ ಉಪಕರದ ಉತ್ಪತ್ತಿಗಳನ್ನು ಅಧಿಸೂಚಿತ ಪ್ರದೇಶವು ಪೌರಸಭೆಯಾಗಿದ್ದಿದ್ದರೆ ಅದರ ಪೌರನಿಧಿಯನ್ನು ಯಾವ ರೀತಿಯಲ್ಲಿ ವೆಚ್ಚ ಮಾಡಬಹುದಾಗಿದ್ದಿತೋ ಅದೇ ರೀತಿಯಲ್ಲಿ ಮಾತ್ರ ವೆಚ್ಚ ಮಾಡತಕ್ಕದ್ದು.

**352. ಅಧಿಸೂಚಿತ ಪ್ರದೇಶಗಳಿಗೆ ಅಧಿನಿಯಮದ ಅನ್ವಯ.–** ಅಧಿಸೂಚಿತ ಪ್ರದೇಶಕ್ಕೆ ಅನ್ವಯಿಸಬಹುದಾದಂಥ ಈ ಅಧಿನಿಯಮದ ಯಾವುದೇ ಪ್ರಕರಣದ ಉದ್ದೇಶಗಳಿಗಾಗಿ 350ನೇ ಪ್ರಕರಣದ ಮೇರೆಗೆ ಅಂಥ ಪ್ರದೇಶಕ್ಕಾಗಿ ನೇಮಿಸಿದ ಅಥವಾ ರಚಿಸಿದ ವ್ಯಕ್ತಿ ಅಥವಾ ಸಮಿತಿಯನ್ನು ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲೆಂದು ಭಾವಿಸತಕ್ಕದ್ದು ಮತ್ತು ಆ ಪ್ರದೇಶವನ್ನು ಪೌರಸಭೆ ಎಂದು ಭಾವಿಸತಕ್ಕದ್ದು.

**353. ಅಧಿಸೂಚನೆಗೆ ಮುಂಚಿನ ಪ್ರಕ್ರಿಯೆ.–** 349ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಥವಾ 351ನೇ ಪ್ರಕರಣದ (1)ನೇ ಉಪಪ್ರಕರಣದ (ಕ) ಮತ್ತು (ಖ) ಖಂಡದ ಮೇರೆಗೆ ಯಾವುದೇ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ 9ನೇ ಪ್ರಕರಣದಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಸರ್ಕಾರವು ಸಾಧ್ಯವಾದಷ್ಟುಮಟ್ಟಿಗೆ ಅನುಸರಿಸತಕ್ಕದ್ದು.

**354. 349ನೇ ಪ್ರಕರಣದ ಮೇರೆಗೆ ಅಧಿಸೂಚನೆಯ ರದ್ದಿಯಾತಿ.–** (1) ಸರ್ಕಾರವು ತನ್ನ ಅಭಿಪ್ರಾಯದಲ್ಲಿ ಹಾಗೆ ಮಾಡುವುದು ವಿಹಿತವೆನಿಸಿದರೆ 349ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯನ್ನು ಅಧಿಸೂಚನೆಯ ಮೂಲಕ ರದ್ದುಪಡಿಸಬಹುದು ಮತ್ತು ಆ ತರುವಾಯ ಸಂದರ್ಭಾನುಸಾರ ಸಂಬಂಧಪಟ್ಟ ಅಧಿಸೂಚಿತ ಪ್ರದೇಶಕ್ಕಾಗಿ 350ನೇ ಪ್ರಕರಣದ ಮೇರೆಗೆ ನೇಮಕ ಮಾಡಿದ ಅಥವಾ ರಚಿಸಿದ ಏಕಸದಸ್ಯ ನಿಗಮ ಅಥವಾ ನಿಗಮಿತ ನಿಕಾಯವು ಅಸ್ತಿತ್ವದಲ್ಲಿರುವುದು ನಿಂತುಹೋಗತಕ್ಕದ್ದು ಮತ್ತು ಸ್ವತ್ತು (ತೆರಿಗೆಗಳ, ಫೀಜುಗಳ, ಉಪಕರಗಳ ಬಾಕಿಯನ್ನೊಳಗೊಂಡು) ಮತ್ತು ಅಂಥ ಪ್ರಾಧಿಕಾರದಲ್ಲಿ ನಿಯತವಾಗಿದ್ದ

ಹಕ್ಕುಗಳು ಅದಕ್ಕೆ ಸಂಬಂಧಿಸಿದ ಋಣಭಾರಗಳು ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟು ಅಂಥ ಪ್ರದೇಶಕ್ಕಾಗಿ ರಚಿಸಿದ ಸ್ಥಳೀಯ ಪ್ರಾಧಿಕಾರ ಯಾವುದಾದರೂ ಇದ್ದರೆ ಅದರಲ್ಲಿ ಅಥವಾ ಅಂಥ ಪ್ರದೇಶವನ್ನು ಯಾವುದರ ಪರಿಮಿತಿಗಳೊಳಗೆ ಸೇರಿಸಲಾಗಿದೆಯೋ ಆ ಪರಿಮಿತಿಯೊಳಗೆ ಅಥವಾ ಅಂಥ ಸ್ಥಳೀಯ ಪ್ರಾಧಿಕಾರವು ಇಲ್ಲದಿದ್ದರೆ, ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಒಂದು ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗಿರುವ ತೆರಿಗೆಗಳ ಯಾವುವೇ ಬಾಕಿಗಳು, ಯಾವ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಥ ಸ್ಥಳೀಯ ಪ್ರಾಧಿಕಾರವನ್ನು ರಚಿಸಲಾಗಿದೆಯೋ, ಆ ಅಧಿನಿಯಮದ ಉಪಬಂಧಗಳ ಮೇರೆಗೆ ಈ ಅಧಿನಿಯಮದ ಮೇರೆಗೆ ತೆರಿಗೆಗಳನ್ನು ವಿಧಿಸಿದ್ದರೆ ಮತ್ತು ವಸೂಲಿಯಾಗಿದ್ದರೆ ಹೇಗೋ ಹಾಗೆ ವಸೂಲಿಯಾಗತಕ್ಕದ್ದು:

ಪರಂತು, ಅಂಥ ತೆರಿಗೆಗಳ ಬಾಕಿಗಳನ್ನು ವಸೂಲ್ಮಾಡುವ ಕ್ರಮಗಳನ್ನು, ಆ ಸ್ಥಳೀಯ ಪ್ರಾಧಿಕಾರದಲ್ಲಿ ಆ ಬಾಕಿಗಳು ನಿಹಿತವಾದಂಥ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗಾಗಿ ಕೈಗೊಳ್ಳತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಸರ್ಕಾರದಲ್ಲಿ ಯಾವುದೇ ಸ್ವತ್ತು ಹಾಗೂ ಹಕ್ಕುಗಳು, ನಿಹಿತವಾಗಿರುವಲ್ಲಿ ಅವುಗಳ ಉತ್ಪತ್ತಿಗಳನ್ನು ಅದಕ್ಕೆ ಸಂಬಂಧಿಸಿದ ಎಲ್ಲ ಋಣಭಾರಗಳು ಮತ್ತು ಹೊಣೆಗಾರಿಕೆಗಳನ್ನು ತೀರಿಸಿದ ತರುವಾಯ, ಸದರಿ ಪ್ರದೇಶದಲ್ಲಿಯ ನಿವಾಸಿಗಳ ಪ್ರಯೋಜನಕ್ಕಾಗಿ ಸರ್ಕಾರವು ಯುಕ್ತವೆಂದು ಯೋಚಿಸುವಂಥ ರೀತಿಯಲ್ಲಿ ವಿನಿಯೋಗಿಸತಕ್ಕದ್ದು.

**355. ತಾತ್ಕಾಲಿಕ ಉಪಬಂಧಗಳು.–** ಈ ಅಧ್ಯಾಯದಲ್ಲಿ ಏನೇ ಅಡಕವಾಗಿದ್ದಾಗ್ಯೂ, 350ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ವ್ಯಕ್ತಿಯನ್ನು ನೇಮಿಸುವ ಅಥವಾ ಸಮಿತಿಯನ್ನು ರಚಿಸುವವರೆಗೆ, 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ XIನೇ ಅಧ್ಯಾಯದ ನಿರಸನಕ್ಕೆ ನಿಕಟಪೂರ್ವದಲ್ಲಿ ಸಂದರ್ಭಾನುಸಾರ ಯಾವುದೇ ಪ್ರದೇಶದ ಪಟ್ಟಣ ಮಂಡಲಿ ಅಥವಾ ನೈರ್ಮಲ್ಯ ಮಂಡಲಿಯಾಗಿ ಕಾರ್ಯನಿರ್ವಹಿಸುತ್ತಿದ್ದಂಥ ನಿಕಾಯಗಳು, ಈ ಅಧಿನಿಯಮದ ಮೇರೆಗೆ ಸದರಿ ಅಧಿಕಾರಿಗಳು ಹಾಗೂ ಕರ್ತವ್ಯಗಳನ್ನು ಪ್ರದಾನ ಮಾಡಿದ್ದರೆ ಹೇಗೋ ಹಾಗೆ ಸದರಿ ನಿಕಾಯಕ್ಕೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು ಮುಂದುವರಿಸತಕ್ಕದ್ದು ಮತ್ತು ಯಾವುದೇ ನಿಯಮ, ಉಪವಿಧಿ, ಅಧಿಸೂಚನೆ ಅಥವಾ ಹೊರಡಿಸಿದ ಆದೇಶವನ್ನೊಳಗೊಂಡು ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು, ಈ ಅಧ್ಯಾಯದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದುಗೊಳಿಸಿದ ಹೊರತು ಮತ್ತು ರದ್ದುಗೊಳಿಸುವವರೆಗೆ ಈ ಅಧಿನಿಯಮದಲ್ಲಿ ಅಧಿನಿಯಮಿತಗೊಳಿಸಿದ್ದರೆ ಹೇಗೋ ಹಾಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**355–ಕ. ಅಧಿಸೂಚಿತ ಪ್ರದೇಶಗಳು, ಇತ್ಯಾದಿಗಳನ್ನು ಪೌರಸಭೆಗಳಾಗಿ ಪರಿವರ್ತಿಸುವುದು:–** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸರ್ಕಾರವು ಪೂರ್ವ ಪ್ರಕಟಣೆಯ ತರುವಾಯ, ಆದೇಶದ ಮೂಲಕ ಈ ಅಧಿನಿಯಮದ ಮೇರೆಗೆ, ಅಥವಾ ಇತರ ಯಾವುದೇ ಕಾನೂನಿನ ಮೇರೆಗೆ ರಚಿಸಿದ, ಸ್ಥಾಪಿಸಿದ ಅಥವಾ ಮುಂದುವರಿಸಿದ ಅಧಿಸೂಚಿತ ಪ್ರದೇಶ ಸಮಿತಿ, ಅಥವಾ ಪಟ್ಟಣ ಮಂಡಲಿ ಅಥವಾ ನೈರ್ಮಲ್ಯ ಮಂಡಲಿಯ ಪರಿಮಿತಿಯೊಳಗಿನ ಪ್ರದೇಶವನ್ನು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದಂಥ ದಿನಾಂಕದಿಂದ ಜಾರಿಗೆ ಬರುವಂತೆ, ನಗರ ಅಥವಾ ಪಟ್ಟಣ ಕೌನ್ಸಿಲ್ ಆಗಿ ಪರಿವರ್ತಿಸತಕ್ಕದ್ದು ಅಥವಾ ಅದರ ಪರಿಮಿತಿಯೊಳಗಿನ ಪ್ರದೇಶಕ್ಕೆ ಸೇರಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) (1)ನೇ ಉಪ–ಪ್ರಕರಣದ ಮೇರೆಗಿನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಸಂದರ್ಭಾನುಸಾರ, ಅಧಿಸೂಚಿತ ಪ್ರದೇಶ ಸಮಿತಿ, ಪಟ್ಟಣ, ಮಂಡಲಿ, ಅಥವಾ ನೈರ್ಮಲ್ಯ ಮಂಡಲಿಯು ವಿಘಟಿತವಾಗತಕ್ಕದ್ದು, ಅದರ ಸದಸ್ಯರು ಪದಧಾರಣ ಮಾಡುವುದು ನಿಂತುಹೋಗತಕ್ಕದ್ದು, ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ, ನಿಕಾಯದ ಮತ್ತು ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲಿಗೆ ವರ್ಗಾಯಿತವಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗಿನ ಆದೇಶದ ಮೂಲಕ, ಹೊಸ ಮುನ್ಸಿಪಲ್ ಕೌನ್ಸಿಲನ್ನು ರಚಿಸಿರುವಲ್ಲಿ ಸರ್ಕಾರವು ಒಂದು ವರ್ಷಕ್ಕೆ ಮೀರದಂಥ ಅವಧಿಗಾಗಿ ಕೌನ್ಸಿಲರುಗಳ ನಾಮನಿರ್ದೇಶನ ಮಾಡಬಹುದು. ಆ ಅವಧಿಯು ಮುಕ್ತಾಯವಾದ ಮೇಲೆ ಚುನಾವಣೆಗಳನ್ನು ನಡೆಸತಕ್ಕದ್ದು. (1)ನೇ ಉಪ–ಪ್ರಕರಣದ ಮೇರೆಗಿನ ಆದೇಶದ ಮೂಲಕ ಈಗಾಗಲೆ ಅಸ್ತಿತ್ವದಲ್ಲಿರುವ ಪೌರಸಭೆಗೆ ಯಾವುದೇ ಪ್ರದೇಶವನ್ನು ಸೇರಿಸಿರುವಲ್ಲಿ, ಸರ್ಕಾರವು ತಾನು ಅವಶ್ಯವೆಂದು ಯೋಚಿಸುವಂಥ ಅವಧಿಗಾಗಿ, ಅಸ್ತಿತ್ವದಲ್ಲಿರುವ ಕೌನ್ಸಿಲಿಗೆ ತಾನು ಅವಶ್ಯವೆಂದು ಯೋಚಿಸುವಂಥ ಹೆಚ್ಚಿನ ಸಂಖ್ಯೆಯ ಕೌನ್ಸಿಲರುಗಳನ್ನು ನಾಮನಿರ್ದೇಶನ ಮಾಡತಕ್ಕದ್ದು.

## ಅಧ್ಯಾಯ–XVI

## ಪಂಚಾಯಿತಿಯನ್ನು ಪೌರಸಭೆಯಾಗಿ ಪರಿವರ್ತಿಸುವ ಬಗ್ಗೆ ಹಾಗೂ ಪೌರಸಭೆಗಳನ್ನು ವಿಲೀನಗೊಳಿಸುವುದರ ಬಗ್ಗೆ ಮತ್ತು ವಿಭಾಗಿಸುವುದರ ಬಗ್ಗೆ ಉಪಬಂಧಗಳು ಇತ್ಯಾದಿ

**356. ಅರ್ಥ ವಿವರಣೆ.–** ಈ ಅಧ್ಯಾಯದ ಉದ್ದೇಶಗಳಿಗಾಗಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) "ಮುನ್ಸಿಪಲ್ ಕೌನ್ಸಿಲು" ಎಂಬ ಪದಾವಳಿಯು, 315 ಮತ್ತು 316ನೇ ಪ್ರಕರಣಗಳ ಮೇರೆಗೆ ಮುನ್ಸಿಪಲ್ ಕೌನ್ಸಿಲರ್ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ನೇಮಿತಗೊಂಡ ಆಡಳಿತಗಾರ ಅಥವಾ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಖ) "ಪಂಚಾಯಿತಿ" ಎಂಬ ಪದವು 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಅಥವಾ 203ನೇ ಪ್ರಕರಣದ ಮೇರೆಗೆ ಗ್ರಾಮಪಂಚಾಯಿತಿಯ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದರ ಕಾರ್ಯಗಳನ್ನು ನೆರವೇರಿಸಲು ನೇಮಕಗೊಂಡ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

**357. ಪಂಚಾಯಿತಿಯನ್ನು ಪೌರಸಭೆಯಾಗಿ ಪರಿವರ್ತಿಸುವುದರ ಪರಿಣಾಮ.–** 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ 3ನೇ ಪ್ರಕರಣದ ಮೇರೆಗಿನ ಅಧಿಸೂಚನೆಯಿಂದಾಗಿ ಯಾವುದೇ ಸ್ಥಳೀಯ ಪ್ರದೇಶವು ಗ್ರಾಮವಾಗಿರುವುದು ನಿಂತು ಹೋದಾಗ ಮತ್ತು ಅದನ್ನು ಈ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಪೌರಸಭೆಯೆಂದು (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಪೌರಸಭೆಯೆಂದು ಉಲ್ಲೇಖಿಸಲಾದ) ಘೋಷಿಸಿದಾಗ ಅಂಥ ಸ್ಥಳೀಯ ಪ್ರದೇಶವನ್ನು ಪೌರಸಭೆಯೆಂದು ಘೋಷಿಸಿದಂಥ ದಿನದಿಂದ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಸದರಿ ದಿನಾಂಕದಂದು ಉಲ್ಲೇಖಿಸಲಾದ) ಪರಿಣಾಮಕಾರಿಯಾಗುವಂತೆ, ಈ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:–

(ಕ) ಅಂಥ ಸ್ಥಳೀಯ ಪ್ರದೇಶದ ಪಂಚಾಯತಿಯ (ಇಲ್ಲಿ ಇನ್ನು ಮುಂದೆ ಪಂಚಾಯಿತಿ ಎಂದು ಉಲ್ಲೇಖಿಸಲಾದ) ಅಸ್ತಿತ್ವದಲ್ಲಿರುವುದು ಅಥವಾ ಕಾರ್ಯನಿರ್ವಹಿಸುವುದು ನಿಂತುಹೋಗತಕ್ಕದ್ದು;

(ಖ) ಪೌರಸಭೆಗಾಗಿ ಗ್ರಾಮ ಪಂಚಾಯತಿಯ ಸದಸ್ಯರಾಗಿ ಪದವನ್ನು ತೆರವು ಮಾಡುವ ವ್ಯಕ್ತಿಗಳನ್ನೊಳಗೊಂಡ ಮಧ್ಯಮಕಾಲೀಕ ಕೌನ್ಸಿಲನ್ನು ರಚಿಸತಕ್ಕದ್ದು ಮತ್ತು ಆ ಗಾಮ ಪಂಚಾಯಿತಿಯು ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲನ್ನು ಅನುಕ್ರಮವಾಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷನೆಂಬುದಾಗಿ ಭಾವಿಸತಕ್ಕದ್ದು;

(ಗ) ಸಂದರ್ಭಾನುಸಾರ, ಪಂಚಾಯತಿಯಲ್ಲಿ ಅಥವಾ 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ 203ನೇ ಪ್ರಕರಣದ ಮೇರೆಗೆ ಪಂಚಾಯಿತಿಯನ್ನು ರದ್ದುಗೊಳಿಸಿದ ಅವಧಿಯಲ್ಲಿ ಸರ್ಕಾರದಲ್ಲಿ ಅಂಥ ಅಧಿಸೂಚನೆಗೆ ಮುಂಚೆ ನಿಹಿತವಾದಂಥ ಪಂಚಾಯತಿ ನಿಧಿಯ ವೆಚ್ಚ ಮಾಡದೆ ಉಳಿದಿರುವ ಶಿಲ್ಕು ಮತ್ತು ಪಂಚಾಯಿತಿಗೆ ಸೇರಿದ ಸ್ವತ್ತು (ದರಗಳು, ತೆರಿಗೆಗಳು ಹಾಗೂ ಫೀಜುಗಳ ಬಾಕಿಗಳನ್ನೊಳಗೊಂಡು) ಮತ್ತು ಎಲ್ಲಾ ಹಕ್ಕುಗಳು ಹಾಗೂ ಅಧಿಕಾರಗಳು, ಅವುಗಳಿಗೆ ಸಂಬಂಧಿಸಿದ ಎಲ್ಲಾ ಋಣಭಾರಗಳು ಹಾಗೂ ಹೊಣೆಗಾರಿಕೆಗಳಿಗೊಳಪಟ್ಟು 11ನೇ ಪ್ರಕರಣದ ಉಪಬಂಧಗಳ ಅನುಸರಣೆಯಲ್ಲಿ ಹೊಸ ಮುನ್ಸಿಪಲ್ ಕೌನ್ಸಿಲನ್ನು ರಚಿಸುವವರೆಗೆ ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲಿನಲ್ಲಿ ಪೌರಸಭಾ ನಿಧಿಯಾಗಿ ನಿಹಿತವಾಗತಕ್ಕದ್ದು;

(ಘ) ಅಂಥ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ದಿನಾಂಕದ ನಿಕಟ ಪೂರ್ವದಲ್ಲಿ 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಹಾಗೂ ಸ್ಥಳೀಯ ಮಂಡಲಿಗಳ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ ಅಥವಾ ಮಂಜೂರು ಮಾಡಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಪೌರಸಭೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ, ಅಥವಾ ಮಂಜೂರ್ಮಾಡಿದ ಯಾವುದೇ ನೇಮಕಾತಿ ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ ಉಪವಿಧಿಯ ಮೂಲಕ

ರದ್ದುಪಡಿಸುವ ಅಥವಾ ಮಾರ್ಪಾಟು ಮಾಡುವವರೆಗೆ, ಮಾಡಲಾಗಿದೆ, ಹೊರಡಿಸಲಾಗಿದೆ, ವಿಧಿಸಲಾಗಿದೆ ಅಥವಾ ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕದ್ದು;

(ಐ) ಅಂಥ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ದಿನಾಂಕದ ನಿಕಟಪೂರ್ವದಲ್ಲಿ 1959ನೇ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಅಧಿಪ್ರಮಾಣಗೊಳಿಸಿದ ಎಲ್ಲಾ ಬಜೆಟ್ ಅಂದಾಜುಗಳು, ತೆರಿಗೆ ನಿರ್ಧಾರಣೆಗಳು, ತೆರಿಗೆ ನಿರ್ಧಾರಣಾ ಪಟ್ಟಿಗಳು, ಮೌಲ್ಯಮಾಪನಗಳು ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಚ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಮತ್ತು ಸದರಿ ದಿನಾಂಕದಂದು ಇರುವ ಪಂಚಾಯಿತಿಯಿಂದ ಅಥವಾ ಅದರ ಪರವಾಗಿ ವಹಿಸಿದ ಎಲ್ಲಾ ಋಣಗಳು ಮತ್ತು ಹೊಣೆಗಳು ಮತ್ತು ಎಲ್ಲಾ ಕರಾರುಗಳು ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮುನ್ಸಿಪಲ್ ಕೌನ್ಸಿಲು ವಹಿಸಿದೆ ಅಥವಾ ಮಾಡಿದೆ ಎಂದು ಭಾವಿಸತಕ್ಕದ್ದು;

(ಛ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಪಂಚಾಯಿತಿಯ ನಿಯೋಜನೆಯಲ್ಲಿರುವ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿಗಳು ಮತ್ತು ನೌಕರರಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಇತರ ಬೇರೆ ವ್ಯವಸ್ಥೆಯನ್ನು ಮಾಡುವವರೆಗೆ, ಅಂಥ ದಿನಾಂಕದಂದು ಅವರು ಹಕ್ಕುಳ್ಳವರಾಗಿದ್ದಂಥ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಅವರು ಒಳಪಟ್ಟಿದ್ದಂಥ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಕಮಿಷನರ್ ಪೂರ್ವಮಂಜೂರಾತಿಗೆ ಒಳಪಟ್ಟ ಮುನ್ಸಿಪಲ್ ಕೌನ್ಸಿಲಿಗೆ ತನ್ನ ಅಭಿಪ್ರಾಯದಲ್ಲಿ ಪೌರಸಭಾ ಸೇವೆಯ ಅಗತ್ಯತೆಗಳಿಗೆ ಅವಶ್ಯವಿಲ್ಲದ ಅಥವಾ ಯೋಗ್ಯನಲ್ಲದ ಯಾರೇ ಅಧಿಕಾರಿ ಅಥವಾ ನೌಕರನ ಸೇವೆಗಳನ್ನು, ಅವನ ನಿಯೋಜನೆಯ ನಿಬಂಧನೆಗಳ ಮೂಲಕ ಕೊಡಲು ಅಗತ್ಯವಾಗಿರುವಂಥ ನೋಟೀಸನ್ನು ಅಂಥ ಅಧಿಕಾರಿ ಅಥವಾ ನೌಕರನಿಗೆ ಕೊಟ್ಟ ತರುವಾಯ ಮುಂದುವರಿಸದಿರುವುದು ಸಕ್ಷಮವಾಗಿರತಕ್ಕದ್ದು ಮತ್ತು ಯಾರ ಸೇವೆಗಳನ್ನು ಮುಂದುವರಿಸಿಲ್ಲವೋ ಆ ಪ್ರತಿಯೊಂದು ಅಧಿಕಾರಿ ಅಥವಾ ನೌಕರನು, ಯಾವ ಪಂಚಾಯಿತಿಯ ನಿಯೋಜನೆಯಲ್ಲಿ ಇದ್ದನೋ ಆ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತು ಹೋಗದಿದ್ದರೆ ಹೇಗೋ ಹಾಗೆ ಸೇವೆಯಿಂದ ಅಮಾನ್ಯ ಮಾಡಿದ ಮೇಲೆ ಅವನು ಪಡೆಯಲು ಅಥವಾ ಸ್ವೀಕರಿಸಲು ಹಕ್ಕುಳ್ಳವನಾಗಿರುತ್ತಿದ್ದಂಥ ರಜೆ, ಪಿಂಚಣಿ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು;

(ಜ) ಅಂಥ ದಿನಾಂಕದಂದು ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲಾ ವ್ಯವಹಣೆಗಳನ್ನು ಮುನ್ಸಿಪಲ್ ಕೌನ್ಸಿಲಿಗೆ ವರ್ಗಾಯಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ಮುಂದುವರಿಸತಕ್ಕದ್ದು.

(ಝ) ಯಾರೇ ಪ್ರಾಧಿಕಾರಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲಾ ಅಪೀಲುಗಳನ್ನು ಕಾರ್ಯಸಾಧ್ಯವಾದಷ್ಟುಮಟ್ಟಿಗೆ ಅವುಗಳನ್ನು ದಾಖಲು ಮಾಡಿದಾಗ ಪೌರಸಭೆಯಲ್ಲಿ ಅಂಥ ಸ್ಥಳೀಯ ಪ್ರದೇಶವನ್ನು ಸೇರಿಸಲಾಗಿದ್ದರೆ ಹೇಗೋ ಹಾಗೆ ವಿಲೆ ಮಾಡತಕ್ಕದ್ದು; ಮತ್ತು

(ಞ) ಸದರಿ ದಿನಾಂಕದಂದು ಇತ್ಯರ್ಥದಲ್ಲಿರುವ ಪಂಚಾಯಿತಿಯಿಂದ ಅಥವಾ ಪಂಚಾಯಿತಿಯ ಪರವಾಗಿ ಹೂಡಲಾದ ಎಲ್ಲಾ ಪ್ರಾಸಿಕ್ಯೂಷನ್ ಮತ್ತು ಪಂಚಾಯಿತಿಯಿಂದ ಅಥವಾ ಪಂಚಾಯಿತಿಯ ವಿರುದ್ಧ ಅಥವಾ ಆ ಪಂಚಾಯಿತಿಯ ಯಾರೇ ಅಧಿಕಾರಿ ಅಥವಾ ಅವನ ವಿರುದ್ಧ ಹೂಡಿದ ಎಲ್ಲಾ ದಾವೆಗಳು ಅಥವಾ ಕಾನೂನು ವ್ಯವಹರಣೆಗಳನ್ನು ಅಂಥ ಪ್ರಾಸಿಕ್ಯೂಷನ್‌ಗಳು, ದಾವೆಗಳು ಅಥವಾ ವ್ಯವಹರಣೆಗಳನ್ನು ಹೂಡಿದ್ದಾಗ ಪೌರಸಭೆಯಲ್ಲಿ ಅಂಥ ಸ್ಥಳೀಯ ಪ್ರದೇಶವನ್ನು ಸೇರಿಸದಿದ್ದರೆ ಹೇಗೋ ಹಾಗೆ, ಮುನ್ಸಿಪಲ್ ಕೌನ್ಸಿಲ್‌ನಿಂದ ಅಥವಾ ಅದರ ವಿರುದ್ಧ ಮುಂದುವರಿಸತಕ್ಕದ್ದು.

**358. ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್‌ನ ಸದಸ್ಯರುಗಳ ಪದಾವಧಿ ಮತ್ತು ಅವರ ಇತರ ಅಧಿಕಾರಗಳು.–** (1) ಸರ್ಕಾರವು, ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲನ್ನು ರಚಿಸಿದ ದಿನಾಂಕದಿಂದ ಒಂದು ವರ್ಷಕ್ಕೆ ಮೀರದ ಅವಧಿಯೊಳಗೆ, ಹೊಸ ಮುನ್ಸಿಪಲ್ ಕೌನ್ಸಿಲಿನ ಕೌನ್ಸಿಲರುಗಳನ್ನು ಸಂಖ್ಯೆಯನ್ನು ಮತ್ತು ಅದಕ್ಕಾಗಿ ಚುನಾವಣೆಗಳನ್ನು ನಡೆಸುವ ಉದ್ದೇಶಕ್ಕಾಗಿ 11ನೇ ಪ್ರಕರಣಕ್ಕನುಸಾರವಾಗಿ ಕ್ರಮವನ್ನು ಕೈಗೊಳ್ಳತಕ್ಕದ್ದು.

(2) ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್ ಕೌನ್ಸಿಲರುಗಳು ಹೊಸ ಮುನ್ಸಿಪಲ್ ಕೌನ್ಸಿಲಿನ ಮೊದಲು ಸಭೆಯ ದಿನಾಂಕದ ನಿಕಟಪೂರ್ವದ ದಿನಾಂಕದವರೆಗೆ ಪದಧಾರಣೆ ಮಾಡತಕ್ಕದ್ದು.

(3) ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲ್‌ನ ಪದದಲ್ಲಿನ ಯಾವುದೇ ಖಾಲಿ ಹುದ್ದೆಯನ್ನು ಅನುಕೂಲಕರವಾಗಬಹುದಾದಷ್ಟು ಬೇಗ, ಸರ್ಕಾರವು ನೇಮಕಾತಿ ಮೂಲಕ ಭರ್ತಿ ಮಾಡತಕ್ಕದ್ದು.

(4) ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರುವ ದರಗಳು, ತೆರಿಗೆಗಳ ಮತ್ತು ಫೀಜುಗಳ, ಎಲ್ಲಾ ಬಾಕಿಗಳು, ಈ ಅಧಿನಿಯಮದ ಮೇರೆಗೆ ಅಂಥ ದರಗಳು ಮತ್ತು ಫೀಜುಗಳನ್ನು ವಿಧಿಸಲಾಗದಿದ್ದಾಗ್ಯೂ, VIIನೇ ಅಧ್ಯಾಯದ ಮೇರೆಗೆ ವಸೂಲೀಯವಾಗಬಹುದಾದಂಥ ತೆರಿಗೆಯಂತೆ ಅದೇ ರೀತಿಯಲ್ಲಿ ವಸೂಲೀಯವಾಗತಕ್ಕದ್ದು.

(5) ಇತರ ವಿಷಯಗಳ ಬಗ್ಗೆ, ಈ ಅಧಿನಿಯಮದ ಉಪಬಂಧಗಳು ಮಧ್ಯಕಾಲೀನ ಮುನ್ಸಿಪಲ್ ಕೌನ್ಸಿಲು ಮತ್ತು ಅದರ ಕೌನ್ಸಿಲರುಗಳಿಗೆ ಯಥೋಚಿತ ವ್ಯತ್ಯಾಸಗಳೊಡನೆ ಅನ್ವಯವಾಗತಕ್ಕದ್ದು.

**359. ಪಂಚಾಯತಿ ಪ್ರದೇಶವನ್ನು ಪೌರಸಭೆಯಲ್ಲಿ ವಿಲೀನಗೊಳಿಸುವುದರ ಪರಿಣಾಮ.–** (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಸದರಿ ಸ್ಥಳೀಯ ಪ್ರದೇಶವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದ ಮೇರೆಗಿನ ಅಧಿಸೂಚನೆಯಿಂದಾಗಿ ಯಾವುದೇ ಸ್ಥಳೀಯ ಪ್ರದೇಶವು ಗ್ರಾಮವಾಗಿರುವುದು ನಿಂತುಹೋದರೆ ಮತ್ತು ಪೌರಸಭೆಯಲ್ಲಿ ವಿಲೀನಗೊಂಡರೆ ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:–

(ಕ) ಪಂಚಾಯಿತಿ ನಿಧಿಯ ಮತ್ತು ಸದರಿ ಸ್ಥಳೀಯ ಪ್ರದೇಶದ ಪಂಚಾಯತಿಗೆ (ಇಲ್ಲಿ ಇನ್ನು ಮುಂದೆ ಪಂಚಾಯಿತಿಯೆಂದು ಉಲ್ಲೇಖಿಸಲಾಗಿದೆ) ಸೇರಿದ ಸ್ವತ್ತಿನ (ದರಗಳು, ತೆರಿಗೆಗಳ ಮತ್ತು ಫೀಜುಗಳ ಬಾಕಿಗಳನ್ನೊಳಗೊಂಡು) ವೆಚ್ಚ ಮಾಡದೆ ಉಳಿದಿರುವ ಶಿಲ್ಕು, ಮತ್ತು ಅಂಥ ಅಧಿಸೂಚನೆಗೆ ಮುಂಚೆ ಪಂಚಾಯಿತಿಯಲ್ಲಿ ನಿಹಿತವಾಗಿ ಎಲ್ಲಾ ಹಕ್ಕುಗಳು ಮತ್ತು ಅಧಿಕಾರಗಳು ಅವುಗಳಿಗೆ ಸಂಬಂಧಿಸುವ ಋಣಭಾರಗಳು ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟು ಅಂಥ ಪೌರಸಭೆಯ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಪೌರಸಭಾ ನಿಧಿಯಾಗಿ (ಇನ್ನು ಮುಂದೆ ಮುನ್ಸಿಪಲ್ ಕೌನ್ಸಿಲ್ ಎಂದು ಉಲ್ಲೇಖಿಸಲಾಗಿದೆ) ನಿಹಿತವಾಗತಕ್ಕದ್ದು;

(ಖ) ಸದರಿ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ದಿನಾಂಕದ ನಿಕಟ ಪೂರ್ವದಲ್ಲಿ 1959ನೇ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ, ಅಥವಾ ಮಂಜೂರ್ಮಾಡಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಆ ಪೌರಸಭೆಗೆ ಸಂಬಂಧಿಸಿದಂತೆ ಅಧಿನಿಯಮದ ಮೇರೆಗೆ ಮಾಡಿದ, ಹೊರಡಿಸಿದ, ವಿಧಿಸಿದ, ಅಥವಾ ಮಂಜೂರ್ಮಾಡಿದ, ನೇಮಕಾತಿ, ಅಧಿಸೂಚನೆ, ನೋಟೀಸು ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪ–ವಿಧಿ ಅಥವಾ ನಮೂನೆಯ ಮೂಲಕ

ರದ್ದುಪಡಿಸುವ ಅಥವಾ ಮಾರ್ಪಾಟು ಮಾಡುವವರೆಗೆ ಮಾಡಲಾಗಿದೆ, ಹೊರಡಿಸಲಾಗಿದೆ, ವಿಧಿಸಲಾಗಿದೆ ಅಥವಾ ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು;

(ಗ) ಅಂಥ ಸ್ಥಳೀಯ ಪ್ರದೇಶಕ್ಕೆ ಸಂಬಂಧಿಸಿದಂತೆ ಸದರಿ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ 1959ನೇ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಅಧಿಪ್ರಮಾಣಗೊಳಿಸಿದ ಎಲ್ಲಾ ಬಜೆಟ್ ಅಂದಾಜುಗಳು, ತೆರಿಗೆ ನಿರ್ಧರಣೆಗಳು, ತೆರಿಗೆ ನಿರ್ಧಾರಣಾ ಪಟ್ಟಿಗಳು, ಮೌಲ್ಯಮಾಪನಗಳು ಅಥವಾ ಅಳತೆಗಳನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಅಧಿಪ್ರಮಾಣೀಕರಿಸಲಾಗಿದೆ ಎಂದು ಭಾವಿಸತಕ್ಕದ್ದು;

(ಘ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಮತ್ತು ಸದರಿ ದಿನಾಂಕದಂದು ಇರುವ ಪಂಚಾಯಿತಿಯಿಂದ ಅಥವಾ ಅದರ ಪರವಾಗಿ ವಹಿಸಿದ ಎಲ್ಲಾ ಋಣಗಳು ಮತ್ತು ಹೊಣೆಗಳು ಮತ್ತು ಮಾಡಿಕೊಂಡ ಎಲ್ಲಾ ಕರಾರುಗಳು ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮುನ್ಸಿಪಲ್ ಕೌನ್ಸಿಲ್ ವಹಿಸಿದೆ ಅಥವಾ ಮಾಡಿದೆ ಎಂದು ಭಾವಿಸತಕ್ಕದ್ದು;

(ಙ) ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪಂಚಾಯಿತಿಯ ನಿಯೋಜನೆಯಲ್ಲಿರುವ ಎಲ್ಲಾ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಮೇರೆಗೆ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಿಗಳು ಮತ್ತು ನೌಕರರಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಬೇರೆ ವ್ಯವಸ್ಥೆಯನ್ನು ಮಾಡುವವರೆಗೆ, ಅಂಥ ದಿನಾಂಕದಂದು ಅವರು ಹಕ್ಕುಳ್ಳವರಾಗಿದ್ದಂಥ ಸಂಬಳಗಳನ್ನು ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಅವರು ಒಳಪಟ್ಟಿದ್ದಂಥ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಸರ್ಕಾರದ ಪೂರ್ವಮಂಜೂರಾತಿಗೊಳಪಟ್ಟು, ಮುನ್ಸಿಪಲ್ ಕೌನ್ಸಿಲಿಗೆ, ತನ್ನ ಅಭಿಪ್ರಾಯದಲ್ಲಿ ಪೌರಸಭಾ ಸೇವೆಯ ಅಗತ್ಯಗಳಿಗೆ ಅವಶ್ಯವಿಲ್ಲದ ಅಥವಾ ಯೋಗ್ಯನಲ್ಲದ ಯಾರೇ ಅಧಿಕಾರಿ ಅಥವಾ ನೌಕರನ ಸೇವೆಗಳನ್ನು ಅವನ ನಿಯೋಜನೆಯ ನಿಬಂಧನೆಗಳ ಮೂಲಕ ಕೊಡಲು ಅಗತ್ಯವಾಗಿರುವಂಥ ನೋಟೀಸನ್ನು ಅಂಥ ಅಧಿಕಾರಿ ಅಥವಾ ನೌಕರನಿಗೆ ಕೊಟ್ಟ ತರುವಾಯ ಮುಂದುವರಿಸದೆ ಇರುವುದು ಸಕ್ಷಮವಾಗಿರತಕ್ಕದ್ದು ಮತ್ತು ಯಾರ ಸೇವೆಗಳನ್ನು ಬಿಟ್ಟುಬಿಡಲಾಗಿದೆಯೋ ಆ ಪ್ರತಿಯೊಂದು ಅಧಿಕಾರಿ ಮತ್ತು ನೌಕರನು ಯಾವ ಪಂಚಾಯತಿ ನಿಧಿ ಯೋಜನೆಯಲ್ಲಿ ಇದ್ದನೋ ಆ ಪಂಚಾಯಿತಿಯು ಅಸ್ತಿತ್ವದಲ್ಲಿರುವುದು ನಿಂತುಹೋಗಿರದಿದ್ದರೆ ಹೇಗೋ ಹಾಗೆ ಸೇವೆಯಿಂದ ಅಮಾನ್ಯ ಮಾಡಿದ ಮೇಲೆ ಪಡೆಯಲು ಅಥವಾ ಸ್ವೀಕರಿಸಲು, ಹಕ್ಕುಳ್ಳವನಾಗಿರುತ್ತಿದ್ದಂಥ ರಜೆ, ಪಿಂಚಣಿ, ಭವಿಷ್ಯನಿಧಿ ಮತ್ತು ಉಪದಾನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು;

(ಚ) ಸದರಿ ದಿನಾಂಕದಂದು ಪಂಚಾಯಿತಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ವ್ಯವಹರಣೆಗಳನ್ನು ಮುನ್ಸಿಪಲ್ ಕೌನ್ಸಿಲಿಗೆ ವರ್ಗಾಯಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ಅವುಗಳನ್ನು ಮುಂದುವರಿಸತಕ್ಕದ್ದು;

(ಛ) ಯಾರೇ ಪ್ರಾಧಿಕಾರಿಯ ಮುಂದೆ ಇತ್ಯರ್ಥದಲ್ಲಿರುವ ಎಲ್ಲ ಅಪೀಲುಗಳನ್ನು ಕಾರ್ಯಸಾಧ್ಯವಾದಷ್ಟುಮಟ್ಟಿಗೆ, ಅವುಗಳನ್ನು ದಾಖಲು ಮಾಡಿದಾಗ, ಪೌರಸಭೆಯಲ್ಲಿ ಸದರಿ ಸ್ಥಳೀಯ ಪ್ರದೇಶವನ್ನು ಸೇರಿಸಲಾಗಿದ್ದಿದ್ದರೆ ಹೇಗೋ ಹಾಗೆ ವಿಲೆ ಮಾಡತಕ್ಕದ್ದು. ಸದರಿ ದಿನಾಂಕದಂದು ಪಂಚಾಯಿತಿಯಿಂದ ಅಥವಾ ಪಂಚಾಯಿತಿ ಪರವಾಗಿ ಹೂಡಲಾದ ಎಲ್ಲಾ ಪ್ರಾಸಿಕ್ಯೂಷನ್‌ಗಳು ಮತ್ತು ಪಂಚಾಯಿತಿಯಿಂದ ಅಥವಾ ಪಂಚಾಯಿತಿಯ ವಿರುದ್ಧ ಅಥವಾ ಆ ಪಂಚಾಯಿತಿಯ ಯಾರೇ ಅಧಿಕಾರಿಯಿಂದ ಅಥವಾ ಅವನ ವಿರುದ್ಧ ಹೂಡಲಾದ ಎಲ್ಲಾ ದಾವೆಗಳು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಅಂಥ ಪ್ರಾಸಿಕ್ಯೂಷನ್‌ಗಳು, ದಾವೆಗಳು, ಅಥವಾ ವ್ಯವಹರಣೆಗಳನ್ನು ಹೂಡಿದ್ದಾಗ, ಪೌರಸಭೆಯಲ್ಲಿ ಸದರಿ ಸ್ಥಳೀಯ

ಪ್ರದೇಶವನ್ನು ಸೇರಿಸಿದ್ದರೆ ಹೇಗೋ ಹಾಗೆ ಮುನ್ಸಿಪಲ್ ಕೌನ್ಸಿಲಿನಿಂದ ಅಥವಾ ಅದರ ವಿರುದ್ಧ ಮುಂದುವರಿಸತಕ್ಕದ್ದು;

(ಜ) ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರುವ ಎಲ್ಲಾ ದರಗಳು, ತೆರಿಗೆಗಳ ಮತ್ತು ಫೀಜುಗಳ ಎಲ್ಲಾ ಬಾಕಿಗಳು ಈ ಅಧಿನಿಯಮದ ಮೇರೆಗೆ ಅಂಥ ದರಗಳು, ತೆರಿಗೆಗಳು, ಫೀಜುಗಳನ್ನು ವಿಧಿಸಲಾಗದಿದ್ದಾಗ್ಯೂ ಅಧ್ಯಾಯ VIIರ ಮೇರೆಗೆ ತೆರಿಗೆ ವಸೂಲೀಯವಾಗಬಹುದಾದಂಥ ತೆರಿಗೆಯಂತೆ ಅದೇ ರೀತಿಯಲ್ಲಿ ವಸೂಲೀಯವಾಗತಕ್ಕದ್ದು; ಮತ್ತು

(ಝ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮುನ್ಸಿಪಲ್ ಕೌನ್ಸಿಲನ್ನು ಪುನರ್ರಚಿಸುವವರೆಗೆ, ಈ ಅಧಿನಿಯಮದಲ್ಲಿ ತದ್ವಿರುದ್ಧವಾದುದು ಏನೇ ಅಡಕವಾಗಿದ್ದಾಗ್ಯೂ, ಸರ್ಕಾರದಿಂದ ನಾಮನಿರ್ದೇಶನಗೊಂಡ ಪೌರಸಭೆಯಲ್ಲಿ ವಿಲೀನಗೊಂಡಿರುವ ಸ್ಥಳೀಯ ಪ್ರದೇಶದಲ್ಲಿಯ ಸಾಮಾನ್ಯ ನಿವಾಸಿಯಾದ ಒಬ್ಬ ವ್ಯಕ್ತಿಯನ್ನು ಮುನ್ಸಿಪಲ್ ಕೌನ್ಸಿಲಿನ ಹೆಚ್ಚಿನ ಕೌನ್ಸಿಲರನಾಗಿರತಕ್ಕದ್ದು.

**360. ಪಂಚಾಯಿತಿ ಪ್ರದೇಶದ ಭಾಗವನ್ನು ಪೌರಸಭೆಯಲ್ಲಿ ವಿಲೀನಗೊಳಿಸುವುದರ ಪರಿಣಾಮ.–** ಪಂಚಾಯಿತಿಯ ಪರಿಮಿತಿಯೊಳಗಿನ ಪ್ರದೇಶದ ಯಾವುದೇ ಭಾಗವನ್ನು ಪೌರಸಭೆಯಲ್ಲಿ ಸೇರಿಸಿದರೆ, ಆಗ, ಈ ಅಧಿನಿಯಮದಲ್ಲಿ ಅಥವಾ 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ; ಆದರೆ ಈ ಅಧಿನಿಯಮದ IVನೇ ಪ್ರಕರಣದ 3ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:–

(ಕ) ಪಂಚಾಯತಿಯಲ್ಲಿ ನಿಹಿತವಾಗಿರುವ ಪಂಚಾಯಿತಿ ನಿಧಿ ಮತ್ತು ಇತರ ಸ್ವತ್ತು ಡೆಪ್ಯುಟಿ ಕಮಿಷನರನು ಬರಹದಲ್ಲಿನ ಆದೇಶದ ಮೂಲಕ ನಿರ್ದೇಶಿಸುವಷ್ಟರಮಟ್ಟಿಗೆ ಪೌರಸಭಾ ನಿಧಿಗೆ ವರ್ಗಾಯಿತವಾಗತಕ್ಕದ್ದು.

(ಖ) ಪೌರಸಭೆಯಲ್ಲಿ ಸೇರಿರುವ ಪ್ರದೇಶದ ಯಾವುದೇ ಭಾಗದಲ್ಲಿ ಉದ್ಭವಿಸುವ ಅಥವಾ ಅದಕ್ಕೆ ಸಂಬಂಧಿಸಿದ ಸಿವಿಲ್ ಮತ್ತು ಅಪರಾಧಿಕ ವ್ಯವಹರಣೆಗಳು, ಕರಾರುಗಳು ಮತ್ತು ಇತರ ವಿಷಯಗಳು ಅಥವಾ ವಸ್ತುಗಳಿಗೆ (ತೆರಿಗೆಗಳು, ಫೀಜುಗಳು ಮತ್ತು ಉಪಕರಗಳು ಒಳಗೊಂಡಂತೆ) ಸಂಬಂಧಿಸಿದಂತೆ ಪಂಚಾಯಿತಿಯ ಹಕ್ಕುಗಳು ಮತ್ತು ಹೊಣೆಗಳು ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಹಕ್ಕುಗಳು ಮತ್ತು ಹೊಣೆಗಳನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು, ಉಪವಿಧಿಗಳು ಮತ್ತು ಮುನ್ಸಿಪಲ್ ಕೌನ್ಸಿಲಿನ ಅಥವಾ ಅದರ ವಿರುದ್ಧ ಜಾರಿಗೊಳಿಸಬಹುದು;

(ಗ) ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ಪಂಚಾಯಿತಿಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಮುನ್ಸಿಪಲ್ ಕೌನ್ಸಿಲಿಗೆ ವರ್ಗಾಯಿಸತಕ್ಕದ್ದು.

(ಘ) ಸೇರಿಸಿದ ಪ್ರದೇಶದ ಒಂದು ಸಾವಿರಕ್ಕಿಂತ ಕಡಿಮೆ ಇಲ್ಲದ ಜನರು ವಾಸಿಸುವ ಪ್ರದೇಶವಾಗಿದ್ದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮುನ್ಸಿಪಲ್ ಕೌನ್ಸಿಲನ್ನು ಪುನರ್ ರಚಿಸುವವರೆಗೆ, ಸರ್ಕಾರದಿಂದ ನಾಮನಿರ್ದೇಶಿತನಾದ ಅಂಥ ಪ್ರದೇಶದ ಸಾಮಾನ್ಯ ನಿವಾಸಿಯಾದ ಒಬ್ಬ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲಿನ ಹೆಚ್ಚಿನ ಕೌನ್ಸಿಲರ್‌ನಾಗಿರತಕ್ಕದ್ದು.

**361. ಪಟ್ಟಣ, ಪೌರಸಭೆಗಳನ್ನು ನಗರ ಪೌರಸಭೆಗಳಾಗಿ ಪರಿವರ್ತಿಸುವುದು.–** (1) 3ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಸರ್ಕಾರವು ಯಾವುದೇ ಕಾಲದಲ್ಲಿ ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲಿನೊಂದಿಗೆ ಸಮಾಲೋಚಿಸಿದ ತರುವಾಯ ಮತ್ತು ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸಿದ ತರುವಾಯ ಯಾವುದೇ ಪಟ್ಟಣ ಪೌರಸಭೆಯನ್ನು ಅಧಿಸೂಚನೆಯಲ್ಲಿ

ನಿರ್ದಿಷ್ಟಪಡಿಸಬೇಕಾದ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಗರ ಪೌರಸಭೆಯಾಗಿರತಕ್ಕದ್ದೆಂದು ಅಧಿಸೂಚನೆ ಮೂಲಕ ಘೋಷಿಸಬಹುದು.

(2) ಪಟ್ಟಣ ಪೌರಸಭೆಗಳಿಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು, ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ (1)ನೇ ಉಪಪ್ರಕರಣದ ಮೇರೆಗೆ ನಗರ ಪೌರಸಭೆ ಎಂದು ಘೋಷಿಸಲಾದ ಪೌರಸಭೆಗೆ ಅನ್ವಯವಾಗತಕ್ಕದ್ದಲ್ಲ.

(3) ನಗರ ಪೌರಸಭೆಯೆಂದು ಘೋಷಿಸಲಾದ ಪೌರಸಭೆಗೆ ಸಂಬಂಧಿಸಿದಂತೆ ಮಾಡಿದ, ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯ ಮತ್ತು ಅಂಥ ಪೌರಸಭೆಗೆ ಸಂಬಂಧಿಸಿದಂತೆ ಇತರ ಯಾವುದೇ ಕಾನೂನಿನ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ಆದೇಶ, ಯೋಜನೆ, ನಿಯಮ, ಉಪವಿಧಿ ಅಥವಾ ನಮೂನೆಯು ಜಾರಿಯಲ್ಲಿ ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯ ಮೂಲಕ ರದ್ದಾಗುವ ಹೊರತು ಮತ್ತು ಅಲ್ಲಿಯವರೆಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದೆ ಅಥವಾ ವಿಧಿಸಿದೆ ಎಂದು ಭಾವಿಸತಕ್ಕದ್ದು.

(4) ಯಾವುದೇ ಪಟ್ಟಣ ಪೌರಸಭೆಯನ್ನು ನಗರ ಪೌರಸಭೆಯಾಗಿ ರಚಿಸುವುದಕ್ಕೆ ಮುಂಚೆ 9ನೇ ಪ್ರಕರಣದಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಆದಷ್ಟು ಮಟ್ಟಿಗೆ ಅನುಸರಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗೆ ನಗರ ಪೌರಸಭೆಯೆಂದು ಘೋಷಿತವಾದ ಪೌರಸಭೆಯು ಮುನ್ಸಿಪಲ್ ಕೌನ್ಸಿಲಿನ ಸ್ವತ್ತು ಹಕ್ಕುಗಳು ಮತ್ತು, ಹೊಣೆಗಾರಿಕೆಗಳು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ ಪೌರಸಭೆಯ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು.

**362. ನಗರ ಪೌರಸಭೆಗಳನ್ನು ಪಟ್ಟಣ ಪೌರಸಭೆಗಳನ್ನಾಗಿ ಪರಿವರ್ತಿಸುವುದು.–** (1) ಸರ್ಕಾರವು ಯಾವುದೇ ಕಾಲದಲ್ಲಿ ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲಿನೊಡನೆ ಸಮಾಲೋಚಿಸಿದ ಮತ್ತು ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಪರಿಶೀಲಿಸಿದ ತರುವಾಯ ಯಾವುದೇ ನಗರ ಪೌರಸಭೆಯನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಮೇರೆಗೆ ರಚಿತವಾದ ಪಟ್ಟಣ ಪೌರಸಭೆಯಾಗಿರತಕ್ಕದ್ದೆಂದು ಅಧಿಸೂಚನೆಯ ಮೂಲಕ ಘೋಷಿಸಬಹುದು.

(2) ನಗರ ಪೌರಸಭೆಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ (1)ನೇ ಉಪಪ್ರಕರಣದ ಮೇರೆಗೆ ಪಟ್ಟಣ ಪೌರಸಭೆಯಾಗಿ ಘೋಷಿಸಲಾದ ಪೌರಸಭೆಗೆ ಅನ್ವಯಿಸತಕ್ಕದ್ದಲ್ಲ.

(3) ಪಟ್ಟಣ ಪೌರಸಭೆಯೆಂದು ಘೋಷಿಸಲಾದ ಪೌರಸಭೆಗೆ ಸಂಬಂಧಿಸಿದಂತೆ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯು ಮತ್ತು ಅಂಥ ಪಟ್ಟಣ ಪೌರಸಭೆಗೆ ಸಂಬಂಧಿಸಿದಂತೆ ಇತರ ಯಾವುದೇ ಕಾನೂನು ಮೇರೆಗೆ ಮಾಡಿದ ಅಥವಾ ಹೊರಡಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ಆದೇಶ, ಯೋಜನೆ, ನಿಯಮ, ಉಪವಿಧಿ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ

ನಮೂನೆಯ ಮೂಲಕ ರದ್ದಾಗುವ ಹೊರತು ಮತ್ತು ಅಲ್ಲಿಯವರೆಗೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದೆ, ಹೊರಡಿಸಿದೆ ಅಥವಾ ವಿಧಿಸಿದೆ ಎಂದು ಭಾವಿಸತಕ್ಕದ್ದು.

(4) ಯಾವುದೇ ನಗರ ಪೌರಸಭೆಯನ್ನು ಪಟ್ಟಣ ಪೌರಸಭೆಯಾಗಿ ರಚಿಸುವುದಕ್ಕೆ ಮುಂಚೆ, 9ನೇ ಪ್ರಕರಣದಲ್ಲಿ ನಿಯಮಿಸಿದ ಪ್ರಕ್ರಿಯೆಯನ್ನು ಆದಷ್ಟುಮಟ್ಟಿಗೆ ಅನುಸರಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗೆ ಪಟ್ಟಣ ಪೌರಸಭೆಯೆಂದು ಘೋಷಿಸಲಾದ ಪೌರಸಭೆಯ ಮುನ್ಸಿಪಲ್ ಕೌನ್ಸಿಲಿನ ಸ್ವತ್ತು ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು.

**363. ಹೊಂದಿಕೊಂಡಿರುವ ಎರಡು ಪೌರಸಭೆಗಳ ವಿಲೀನೀಕರಣ.–** (1) ಸರ್ಕಾರವು ಯಾವುದೇ ಕಾಲದಲ್ಲಿ ಸಂಬಂಧಪಟ್ಟ ಮುನ್ಸಿಪಲ್ ಕೌನ್ಸಿಲ್‌ಗಳೊಂದಿಗೆ ಸಮಾಲೋಚಿಸಿದ, ಮತ್ತು ಆಕ್ಷೇಪಣೆಗಳು ಯಾವುದಾದರೂ ಇದ್ದರೆ ಅವುಗಳನ್ನು ಪರ್ಯಾಲೋಚಿಸಿದ ತರುವಾಯ, ಅಧಿಸೂಚನೆ ಮೂಲಕ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬೇಕಾದ ದಿನಾಂಕದಿಂದ ಜಾರಿಗೆ ಬರುವಂತೆ ಮತ್ತು ಹೆಸರಿನಿಂದ ಹೊಂದಿಕೊಂಡಿರುವ ಎರಡು ಪೌರಸಭೆಗಳನ್ನು ವಿಲೀನಗೊಂಡಿವೆಯೆಂದು ಘೋಷಿಸಬಹುದು ಮತ್ತು ಈ ಅಧಿನಿಯಮದ ಮೇರೆಗೆ ರಚಿಸಿದ ಏಕಮಾತ್ರ ಪೌರಸಭೆಯಾಗಿ ಅದನ್ನು ಭಾವಿಸತಕ್ಕದ್ದು.

(2) ವಿಲೀನಗೊಳಿಸಿದ ಪೌರಸಭೆಗಳ ಸಂಬಂಧದಲ್ಲಿ ಮಾಡಿದ, ಹೊರಡಿಸಿದ ಅಥವಾ ವಿಧಿಸಿದ ಯಾವುದೇ ನೇಮಕಾತಿ, ಅಧಿಸೂಚನೆ, ನೋಟೀಸು, ತೆರಿಗೆ, ಆದೇಶ, ಯೋಜನೆ, ಲೈಸೆನ್ಸು, ಅನುಮತಿ, ನಿಯಮ, ಉಪವಿಧಿ ಅಥವಾ ನಮೂನೆಯು ಜಾರಿಯಲ್ಲಿರುವುದು ಮುಂದುವರಿಸತಕ್ಕದ್ದು ಮತ್ತು (1)ನೇ ಉಪಪ್ರಕರಣದ ಮೇರೆಗಿನ ಘೋಷಣೆಯ ಮೂಲಕ ರಚಿಸಿದ ಪೌರಸಭೆಯ ಸಂಬಂಧದಲ್ಲಿ ಮಾಡಿದೆ, ಹೊರಡಿಸಿದೆ ಅಥವಾ ವಿಧಿಸಿದೆ ಎಂದು ಭಾವಿಸತಕ್ಕದ್ದು:

ಪರಂತು, ಸರ್ಕಾರವು ಅಧಿಸೂಚನೆಯ ಮೂಲಕ (1)ನೇ ಉಪಪ್ರಕರಣದ ಮೇರೆಗಿನ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಹಿಂದೆ ಹೇಳಿದ ಅಂಥ ನೇಮಕಾತಿಗಳು, ಅಧಿಸೂಚನೆಗಳು, ನೋಟೀಸುಗಳು, ತೆರಿಗೆಗಳು, ಆದೇಶಗಳು, ಯೋಜನೆಗಳು, ನಿಯಮಗಳು, ಉಪವಿಧಿ ಮತ್ತು ನಮೂನೆಗಳು ಮಾತ್ರ ಅಂಥ ಘೋಷಣೆಯಿಂದ ರಚಿತವಾದ ಪೌರಸಭೆಗೆ ಅನ್ವಯವಾಗತಕ್ಕದ್ದು ಮತ್ತು ಹಿಂದೆ ಹೇಳಿದ ಸದರಿ ನೇಮಕಾತಿಗಳು, ನೋಟೀಸುಗಳು, ಅಧಿಸೂಚನೆಗಳು, ಆದೇಶಗಳು, ತೆರಿಗೆಗಳು, ಯೋಜನೆಗಳು, ನಿಯಮಗಳು, ಉಪವಿಧಿಗಳು ಮತ್ತು ನಮೂನೆಗಳು ಮಾತ್ರ ಸದರಿ ನೇಮಕಾತಿ ಅಂಥ ಘೋಷಣೆಯ ಮೂಲಕ ರಚಿತವಾದ ಪೌರಸಭೆಗೆ ಅನ್ವಯಿಸತಕ್ಕದ್ದೆಂದು ಮತ್ತು ಸದರಿ ನೇಮಕಾತಿಗಳು, ಅಧಿಸೂಚನೆಗಳು, ನೋಟೀಸುಗಳು, ತೆರಿಗೆಗಳು, ಆದೇಶಗಳು, ಯೋಜನೆಗಳು, ನಿಯಮಗಳು, ಉಪವಿಧಿಗಳು ಮತ್ತು ನಮೂನೆಗಳು ಆ ತರುವಾಯ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದೆಂದು ನಿರ್ದೇಶಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಒಂದೇ ಪಟ್ಟಣ ಪೌರಸಭೆಯೆಂದು ವಿಲೀನಗೊಳಿಸಿದ ಮತ್ತು ಘೋಷಿಸಲಾದ ಪೌರಸಭೆಗಳ ಮುನ್ಸಿಪಲ್ ಕೌನ್ಸಿಲುಗಳ ಸ್ವತ್ತು, ಹಕ್ಕುಗಳು ಮತ್ತು ಹೊಣೆಗಾರಿಕೆಗಳು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸದರಿ ಏಕಮಾತ್ರ ಪೌರಸಭೆಯ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗತಕ್ಕದ್ದು.

(4) ಈ ಅಧಿನಿಯಮದಲ್ಲಿ ತದ್ವಿರುದ್ಧವಾಗಿ ಏನೇ ಅಡಕವಾಗಿದ್ದಾಗ್ಯೂ;

(ಕ) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮುನ್ಸಿಪಲ್ ಕೌನ್ಸಿಲ್‌ನ ಪುನರ್‌ರಚನೆಯಾಗುವವರೆಗೆ,–

(i) ವಿಲೀನಗೊಂಡ ಮುನ್ಸಿಪಲ್ ಕೌನ್ಸಿಲು, ವಿಲೀನಗೊಂಡ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಪದಧಾರಣ ಮಾಡಿದ್ದ ಎರಡು ಮುನ್ಸಿಪಲ್ ಕೌನ್ಸಿಲುಗಳ ಕೌನ್ಸಿಲರುಗಳನ್ನು ಒಳಗೊಂಡಿರತಕ್ಕದ್ದು;

(ii) ವಿಲೀನಗೊಂಡ ದಿನಾಂಕದ ನಿಕಟಪೂರ್ವದಲ್ಲಿ ಎರಡು ಮುನ್ಸಿಪಲ್ ಕೌನ್ಸಿಲರುಗಳ ಮತ್ತು ಉಪಾಧ್ಯಕ್ಷ ಪದಗಳನ್ನು ಧಾರಣ ಮಾಡಿದ ವ್ಯಕ್ತಿಗಳೊಳಗಿಂದ ಸರ್ಕಾರದಿಂದ ಕ್ರಮವಾಗಿ ಅಧ್ಯಕ್ಷನಾಗಿ ಮತ್ತು ಉಪಾಧ್ಯಕ್ಷನಾಗಿ ನಾಮನಿರ್ದೇಶನಗೊಂಡ ಇಬ್ಬರು ವ್ಯಕ್ತಿಗಳು (ಛ) ಖಂಡದ (1)ನೇ ಉಪಖಂಡದ ಮೇರೆಗೆ ಚುನಾವಣೆ ನಡೆಸುವವರೆಗೆ ವಿಲೀನಗೊಂಡ ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷ ಮತ್ತು ಉಪಾಧ್ಯಕ್ಷನಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಸಂದರ್ಭಾನುಸಾರ ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಕೌನ್ಸಿಲರುಗಳ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಎಲ್ಲ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳಿಗೆ ಒಳಪಟ್ಟಿರತಕ್ಕದ್ದು.

(ಖ) (ಕ) ಖಂಡದ ಮೇರೆಗೆ ರಚಿತವಾದ ಮುನ್ಸಿಪಲ್ ಕೌನ್ಸಿಲಿನ ವಿಲೀನಗೊಂಡ ದಿನಾಂಕದ ತರುವಾಯ ತನ್ನ ಮೊದಲ ಸಭೆಯಲ್ಲಿ,–

(i) ತನ್ನ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷನನ್ನಾಗಿ ಮತ್ತು ಅಧ್ಯಕ್ಷನಲ್ಲದೆ ಇರುವ ಯಾರೇ ಒಬ್ಬ ಸದಸ್ಯನನ್ನು ಉಪಾಧ್ಯಕ್ಷನನ್ನಾಗಿ ಚುನಾಯಿಸತಕ್ಕದ್ದು;

(ii) 63ನೇ ಪ್ರಕರಣದ ಮೇರೆಗೆ ಸಮಿತಿಗಳ ಸದಸ್ಯರುಗಳನ್ನು ಚುನಾಯಿಸತಕ್ಕದ್ದು.

(ಗ) (ಕ) ಮತ್ತು (ಖ) ಖಂಡಗಳಲ್ಲಿ ಉಲ್ಲೇಖಿಸಲಾದ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಕೌನ್ಸಿಲರುಗಳ ಪದಾವಧಿಯು 16, 40, 41 ಮತ್ತು 42ನೇ ಪ್ರಕರಣದ ಉಪ–ಬಂಧಗಳಿಗೊಳಪಟ್ಟು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕಗಳಂದು ಮುಕ್ತಾಯವಾಗತಕ್ಕದ್ದು.

(ಘ) ಸರ್ಕಾರವು ಅಧಿಸೂಚನೆಯ ಮೂಲಕ,–

(i) ವಿಲೀನಗೊಂಡ ಪೌರಸಭೆಗೆ ಅನ್ವಯಿಸಬಹುದಾದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನಿಯಮಗಳು, ಉಪವಿಧಿಗಳು, ಅಧಿಸೂಚನೆಗಳು, ಮತ್ತು ಆದೇಶಗಳಿಗೆ ಅಳವಡಿಕೆಗಳು ಮತ್ತು ಮಾರ್ಪಾಟುಗಳಿಂದ ಲೋಪಿಸುವುದಕ್ಕಾಗಿ, ಅವುಗಳಿಗೆ ಸೇರ್ಪಡೆಗಳನ್ನು ಮಾಡುವುದಕ್ಕಾಗಿ;

(ii) ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ, ಅದರ ಪುನರ್‌ರಚನೆಯಾಗುವವರೆಗೆ ವಿಲೀನಗೊಂಡ ಮುನ್ಸಿಪಲ್ ಕೌನ್ಸಿಲಿನ ಕಾರ್ಯನಿರ್ವಹಣೆಗೆ ಸಂಬಂಧಪಟ್ಟು ಉದ್ಭವಿಸುವ ತೊಂದರೆಗಳನ್ನು ನಿವಾರಿಸಲು ಅದಕ್ಕೆ ಅವಶ್ಯವೆಂದು ಮತ್ತು ವಿಹಿತವೆಂದು ಕಂಡುಬರುವ ಉಪಬಂಧಗಳನ್ನು ರಚಿಸಬಹುದು.

**363 ಕ. ಪಟ್ಟಣ ಪೌರಸಭೆಯನ್ನು ಪಂಚಾಯಿತಿಗಾಗಿ ಪರಿವರ್ತಿಸುವುದು.**– (1) ಈ ಅಧಿನಿಯಮದಲ್ಲಿ ಅಥವಾ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದಾಗ್ಯೂ, ಸರ್ಕಾವು ಪೂರ್ವಪ್ರಕಟಣೆಯ ನಂತರ ಆದೇಶದ ಮೂಲಕ ತಾನು ನಿರ್ದಿಷ್ಟಪಡಿಸಿದ ದಿನಾಂಕದಿಂದ ಯಾವುದೇ ಪಟ್ಟಣ ಪೌರಸಭೆಯನ್ನು ಗ್ರಾಮ ಪಂಚಾಯಿತಿಯನ್ನಾಗಿ ಪರಿವರ್ತಿಸುವಂತೆ ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಮತ್ತು ಅಂದಿನಿಂದ ಪಟ್ಟಣ ಪೌರಸಭೆಯು ಪೌರಸಭೆಯಾಗಿರುವುದ ನಿಂತುಹೋಗತಕ್ಕದ್ದು. ಮತ್ತು ಮುನ್ಸಿಪಲ್ ಕೌನ್ಸಿಲು ವಿಘಟಿತವಾಗತಕ್ಕದ್ದು, ಅದರ ಸದಸ್ಯರು ಪದಧಾರಣ ಮಾಡುವುದು, ನಿಂತುಹೋಗತಕ್ಕದ್ದು. ಸರ್ಕಾರವು

ನಿರ್ದಿಷ್ಟಪಡಿಸಬಹುದಾದಂತೆ ಪಟ್ಟಣ, ಮುನ್ಸಿಪಲ್ ಕೌನ್ಸಿಲಿನ ಅಂಥ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಪಂಚಾಯಿತಿಗೆ ವರ್ಗಾಯಿತವಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗಿನ ಆದೇಶದ ಮೂಲಕ, ಹೊಸ ಪಂಚಾಯಿತಿಯನ್ನು ರಚಿಸಿರುವಲ್ಲಿ, ರಾಜ್ಯ ಸರ್ಕಾರವು, ಅಂಥ ಪಂಚಾಯಿತಿಗಳಿಗೆ ಒಂದು ವರ್ಷವನ್ನು ಮೀರದಂಥ ಅವಧಿಗಾಗಿ ಸದಸ್ಯರನ್ನು ನಾಮನಿರ್ದೇಶನ ಮಾಡಬಹುದು, ಅದರ ಅವಧಿಯು ಮುಕ್ತಾಯವಾದ ಮೇಲೆ, 1959ನೇ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಚುನಾವಣೆಗಳನ್ನು ನಡೆಸತಕ್ಕದ್ದು.

**364. ತೊಂದರೆಗಳ ನಿವಾರಣೆ.–** ಈ ಅಧ್ಯಾಯದ ಹಿಂದಿನ ಪ್ರಕರಣಗಳ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುವೇ ತೊಂದರೆಗಳು ಉದ್ಭವಿಸಿದರೆ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ತೊಂದರೆಯನ್ನು ನಿವಾರಿಸಲು ತನಗೆ ಸಂದರ್ಭವು ಅಗತ್ಯಪಡಿಸಬಹುದಾದಂತೆ ಅಗತ್ಯವೆಂದು ಕಂಡುಬರುವ ಯಾವುದನ್ನಾದರೂ ಮಾಡಬಹುದು.

## ಅಧ್ಯಾಯ–XVII

## ಸಂಕೀರ್ಣಗಳು

**365. ಕರ್ನಾಟಕ ಪೌರಸಭಾ ಆಡಳಿತ ಸೇವೆ.–** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸರ್ಕಾರವು, ನಿರ್ದಿಷ್ಟಪಡಿಸಬಹುದಾದಂಥ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರದ ಅಧೀನದ ಅಂಥ ಹುದ್ದೆಗಳನ್ನು ಕರ್ನಾಟಕ ಪೌರಾಡಳಿತ ಸೇವೆಗೆ ಸೇರಿದ ಅಧಿಕಾರಿಗಳ ನೇಮಕಾತಿಯ ಮೂಲಕ ಭರ್ತಿ ಮಾಡತಕ್ಕದ್ದು.

(2) (ಕ) ಸರ್ಕಾರವು ನೇಮಕ ಮಾಡಬಹುದಾದಂತಹ ದಿನಾಂಕದಿಂದ ಜಾರಿಗೆ ಬರುವಂತೆ (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಹುದ್ದೆಗಳನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರಗಳ ಅಧಿಕಾರಿಗಳು ಸರ್ಕಾರದ ಅಧಿಕಾರಿಗಳಾಗತಕ್ಕದ್ದು ಮತ್ತು ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ಮೇರೆಗೆ ಅವರು ಧಾರಣ ಮಾಡಬಹುದಾಗಿದ್ದಂಥ ಅದೇ ಅವಧಿಗೆ, ಅದೇ ಸಂಭಾವನೆ ಮೇಲೆ ಮತ್ತು ಸೇವೆಗಳ ಅದೇ ನಿಬಂಧನೆಗಳು ಮತ್ತು ಷರುತ್ತುಗಳ ಮೇಲೆ ಮತ್ತು ಪಿಂಚಣಿ, ಉಪದಾನ, ಭವಿಷ್ಯ ನಿಧಿ ಮತ್ತು ಅಂಥ ಇತರ ವಿಷಯಗಳ ಬಗ್ಗೆ ಅವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳೊಂದಿಗೆ ಪದಧಾರಣ ಮಾಡತಕ್ಕದ್ದು, ಮತ್ತು ಸಂವಿಧಾನದ 309ನೇ ಅನುಚ್ಛೇದದ ಮೇರೆಗೆ ಮಾಡಿದ ನಿಯಮಗಳು ಅಥವಾ ಇತರ ಉಪವಿಧಿಗಳ ಅವರ ಸಂಭಾವನೆ, ಪಿಂಚಣಿ, ಭವಿಷ್ಯ ನಿಧಿ, ಮತ್ತು ಉಪದಾನಗಳ ವಿಶೇಷಾಧಿಕಾರಗಳನ್ನು, ಒಳಗೊಂಡು ಸೇವೆಗಳ ನಿಬಂಧನೆಗಳು ಮತ್ತು ಷರತ್ತುಗಳನ್ನು ಬದಲಾಯಿಸುವವರೆಗೆ, ಹಾಗೆ ಮಾಡುವುದು ಮುಂದುವರಿಯತಕ್ಕದ್ದು ಮತ್ತು ಅಂಥ ಯಾವುದೇ ಬದಲಾವಣೆಯು, ಯಾವುದೇ ಕರಾರಿನಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ ಪರಿಣಾಮಕಾರಿಯಾಗತಕ್ಕದ್ದು.

(ಖ) 1947ರ ಔದ್ಯಮಿಕ ವಿವಾದಗಳ ಅಧಿನಿಯಮ (1947ರ ಕೇಂದ್ರ ಅಧಿನಿಯಮ IV) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ (ಕ) ಖಂಡದಿಂದಾಗಿ ಸ್ಥಳೀಯ ಪ್ರಾಧಿಕಾರದ ಯಾರೇ ಅಧಿಕಾರಿಯ ಸೇವೆಗಳ ವರ್ಗಾವಣೆಯು, ಈ ಅಧಿನಿಯಮ ಅಥವಾ ಇತರ ಕಾನೂನಿನ ಮೇರೆಗೆ ಯಾರೇ ಅಂಥ ಅಧಿಕಾರಿಯನ್ನು ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನನ್ನಾಗಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

(3) ಮುನ್ಸಿಪಲ್ ಕೌನ್ಸಿಲು, ಅದು ಅವಶ್ಯವೆಂದು ಭಾವಿಸಿದರೆ ಮುನ್ಸಿಪಲ್ ಕೌನ್ಸಿಲಿನ ಸದಸ್ಯರುಗಳ ಮೂರನೇ ಎರಡು ಭಾಗದ ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕ ಸದರಿ ಸೇವೆಗೆ ಸೇರಿದ ಯಾರೇ ಅಧಿಕಾರಿಯ ವಿರುದ್ಧ ಅವನ ಯಾವುದೇ ದುರ್ವರ್ತನೆಯ ಬಗ್ಗೆ ಅವಶ್ಯವಾಗಬಹುದಾದಂಥ ಶಿಸ್ತಿನ ಕ್ರಮವನ್ನು ಕೈಗೊಳ್ಳಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು.

**ವಿವರಣೆ:–** ಈ ಪ್ರಕರಣದ ಮತ್ತು 367ನೇ ಪ್ರಕರಣದ ಉದ್ದೇಶಗಳಿಗಾಗಿ "ಸ್ಥಳೀಯ ಪ್ರಾಧಿಕಾರ" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ರಚಿತಗೊಂಡ ಪುರಸಭಾ ನಿಗಮ ಮುನ್ಸಿಪಲ್ ಕೌನ್ಸಿಲು, ಅಧಿಸೂಚಿತ ಪ್ರದೇಶ ಸಮಿತಿ, ನೈರ್ಮಲ್ಯ ಮಂಡಲಿ, ನಗರ ಮೇಲ್ಪಾಟು ಮಂಡಲಿ, ಪಟ್ಟಣ ಮೇಲ್ಪಾಟು ಮಂಡಲಿ ಅಥವಾ ಯೋಜನಾ ಪ್ರಾಧಿಕಾರ.

**366. ಲೋಕೋಪಯೋಗಿ ಕಾಮಗಾರಿಗಳ ನಿರ್ವಹಣೆಗಾಗಿ ಏಜನ್ಸಿ.–** (1) ಸರ್ಕಾರವು ಮುನ್ಸಿಪಲ್ ಕೌನ್ಸಿಲಿನೊಡನೆ ಸಮಾಲೋಚಿಸಿದ ತರುವಾಯ, ಸರ್ಕಾರದ ಅಭಿಪ್ರಾಯದಲ್ಲಿ ಅಂಥ ಲೋಕೋಪಯೋಗಿ ಕಾಮಗಾರಿಗಳಿಗೆ ಮುನ್ಸಿಪಲ್ ಕೌನ್ಸಿಲಿನ ವಶದಲ್ಲಿ ಇರದಿಲ್ಲಬಹುದಾದಂಥ ವೃತ್ತಿ ನೈಪುಣ್ಯದ ಮಟ್ಟದ ಅಗತ್ಯತೆಯಿದ್ದರೆ ಸರ್ಕಾರದಿಂದ ಅಥವಾ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಏಜನ್ಸಿಯಿಂದ ಕಾರ್ಯಗತಗೊಳಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) ಮುನ್ಸಿಪಲ್ ಕೌನ್ಸಿಲಿನ ಇತರ ಎಲ್ಲಾ ಕಾಮಗಾರಿಗಳನ್ನು ಈ ಬಗ್ಗೆ ನಿಯಮಿಸಿದ ನಿಯಮಗಳಿಗೊಳಪಟ್ಟು ಮುನ್ಸಿಪಲ್ ಕೌನ್ಸಿಲು ಸೂಕ್ತವೆಂದು ಯೋಚಿಸುವಂಥ ಏಜೆನ್ಸಿಯ ಮತ್ತು ಅಂಥ ಮೇಲ್ವಿಚಾರಣೆಗೆ ಒಳಪಟ್ಟು ನಿರ್ವಹಿಸತಕ್ಕದ್ದು.

(3) ಸರ್ಕಾರವು ಅಥವಾ ಸರ್ಕಾರದ ಆದೇಶಗಳ ಮೇರೆಗೆ ಇತರ ಯಾವುದೇ ಏಜನ್ಸಿಯೂ ಮುನ್ಸಿಪಲ್ ಕೌನ್ಸಿಲಿಗಾಗಿ ಯಾವುದೇ ಕಾಮಗಾರಿಯನ್ನು ನಿರ್ವಹಿಸಿದಾಗ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ದರದಲ್ಲಿ ಮೇಲ್ವಿಚಾರಣೆಗಾಗಿ ಮತ್ತು ಉಪಕರಣಗಳು ಮತ್ತು ಸ್ಥಾವರಕ್ಕಾಗಿನ ವೆಚ್ಚಗಳೊಂದಿಗೆ ಕಾಮಗಾರಿಗಾಗಿ ವಹಿಸಿದ ವೆಚ್ಚವನ್ನು ಸರ್ಕಾರವು ಅದನ್ನು ಮನ್ನಾ ಮಾಡಿದ್ದ ಹೊರತು ಮುನ್ಸಿಪಲ್ ಕೌನ್ಸಿಲು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

(4) ಸರ್ಕಾರವು ಯಾವುದೇ ಪೌರಸಭೆಗೆ ಸಂಬಂಧಿಸಿದಂತೆ, ಸಾರ್ವಜನಿಕ ಜಲಾಶಯಗಳು, ಕೆರೆಗಳು, ತೊಟ್ಟಿಗಳು, ಕಾರಂಜಿಗಳು, ಬಾವಿಗಳು, ಪಂಪುಗಳು, ಕೊಳವೆಗಳು, ನಲ್ಲಿಗಳು, ನಳಿಕೆಗಳು, ಅಡಿಗಾಲುವೆಗಳು ಮತ್ತು ಇತರ ಕಾಮಗಾರಿಗಳಂಥ ನೀರು ಸರಬರಾಜು ಸ್ಥಾಪನೆಗಳನ್ನು ನಿರ್ವಹಿಸುವ ಕೆಲಸವನ್ನು ಕೈಗೊಂಡಾಗ ಈ ಬಗ್ಗೆ ಸರ್ಕಾರವು ವಹಿಸಿದ ವೆಚ್ಚವನ್ನು ಮುನ್ಸಿಪಲ್ ಕೌನ್ಸಿಲು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಮತ್ತು ಸರ್ಕಾರವು ಮುನ್ಸಿಪಲ್ ಕೌನ್ಸಿಲನ್ನು ಸರ್ಕಾರವು ನಿರ್ಧರಿಸಬಹುದಾದ ಕಾಲದಲ್ಲಿ ಯಾವುದೇ ವರ್ಷಕ್ಕಾಗಿನ ಅಂದಾಜು ಮಾಡಿದ ವೆಚ್ಚದ ಅಂಥ ಭಾಗವನ್ನು ಮುಂಗಡವಾಗಿ ಠೇವಣಿ ಇಡಲು ಅಗತ್ಯಪಡಿಸಬಹುದು.

(5) (3)ನೇ ಉಪಪ್ರಕರಣದ ಅಥವಾ (4)ನೇ ಉಪಪ್ರಕರಣದ ಮೇರೆಗೆ ಸರ್ಕಾರಕ್ಕೆ ಸಂದಾಯ ಮಾಡಬೇಕಾದ ಮೊಬಲಗನ್ನು, ಯುಕ್ತ ಕಾಲದೊಳಗೆ ಸಂದಾಯ ಮಾಡದಿದ್ದರೆ, ಸರ್ಕಾರವು ಪೌರಸಭಾ ನಿಧಿಯ ಅಭಿರಕ್ಷೆಯನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು ಅದನ್ನು ಅಂಥ ನಿಧಿಯ ಮೇಲೆ ಯಾವುದೇ ಋಣಭಾರಕ್ಕಿಂತ ಆದ್ಯತೆ ಮೇಲೆ ಸಂದಾಯ ಮಾಡಬೇಕೆಂದು ನಿರ್ದೇಶಿಸುವ ಆದೇಶವನ್ನು ಮಾಡಬಹುದು ಮತ್ತು ಅಂಥ ವ್ಯಕ್ತಿಯು ಮುನ್ಸಿಪಲ್ ಕೌನ್ಸಿಲ್‌ನ ಜಮೆಗೆ ಇರುವ ನಿಧಿಗಳ ಅವಕಾಶ ಮಾಡಿಕೊಡುವಷ್ಟರ ಮಟ್ಟಿಗೆ, ಅಂಥ ಆದೇಶವನ್ನು ಪಾಲಿಸಲು ಬದ್ಧನಾಗಿರತಕ್ಕದ್ದು.

**367. ಕರ್ನಾಟಕ ಪೌರಾಡಳಿತ ಸೇವೆಯ ಬಗ್ಗೆ ವಸೂಲಿ.–** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು, ತನ್ನ ಆದಾಯದ ನಾಲ್ಕನೇ ಒಂದು ಶೇಕಡಾವಾರನ್ನು ರಾಜ್ಯದ ಸಂಚಿತ ನಿಧಿಗೆ, ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲಗಳಲ್ಲಿ, ಕರ್ನಾಟಕ ಪೌರಾಡಳಿತ ಸೇವೆಯ ಅಧಿಕಾರಿಗಳಿಗೆ ಸಂಬಳಗಳು, ಭತ್ಯೆಗಳು, ಪಿಂಚಣಿಗಳು, ಭವಿಷ್ಯನಿಧಿ, ಉಪದಾನಗಳು ಮತ್ತು ಇತರ ಅವಶ್ಯ ವೆಚ್ಚಗಳ ಬಗೆಗಿನ ವೆಚ್ಚವನ್ನು ಪೂರೈಸಲು ಮುಂಗಡವಾಗಿ ವಂತಿಗೆ ಕೊಡತಕ್ಕದ್ದು:

ಪರಂತು, ಅಂಥ ವಂತಿಗೆಯು ಇತ್ಯರ್ಥದಲ್ಲಿರುವಾಗ, ಪೌರಾಡಳಿತ ಸೇವೆಯ ಬಗೆಗಿನ ವೆಚ್ಚವನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಲು ಅಗತ್ಯಪಡಿಸಿದ ಮೊಬಲಗನ್ನು ಸಂದಾಯ ಮಾಡಲು ತಪ್ಪಿದರೆ, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರದ ನಿಧಿಗಳ ಅಭಿರಕ್ಷೆ ಹೊಂದಿರುವ ಅಧಿಕಾರಿಯನ್ನು ಅಂಥ ನಿಧಿಗಳ ಶಿಲ್ಕುಗಳಿಂದ ಸಾಧ್ಯವಿರುವಷ್ಟು ಅಂಥ ಮೊಬಲಗು ಅಥವಾ ಅದರ ಅಷ್ಟು ಭಾಗವನ್ನು ಸಂದಾಯ ಮಾಡುವಂತೆ ಡೆಪ್ಯುಟಿ ಕಮಿಷನರನು ನಿರ್ದೇಶಿಸಬಹುದು.

**368. ಅನರ್ಹಗೊಂಡಿದ್ದಾಗ ಮುನ್ಸಿಪಲ್ ಕೌನ್ಸಿಲಿನ ಕೌನ್ಸಿಲರ್ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಕಾರ್ಯ ನಿರ್ವಹಿಸುವುದಕ್ಕಾಗಿ ದಂಡನೆ.–** (1) ಯಾರೇ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಹಾಗೆಂದು ಪದಧಾರಣ ಮಾಡಲು ಹಕ್ಕುಳ್ಳವನಾಗಿಲ್ಲ ಅಥವಾ ಹಕ್ಕುಳ್ಳವನಾಗಿರುವುದು ನಿಂತುಹೋಗಿದೆಯೆಂದು ತಿಳಿದರೆ ಮುನ್ಸಿಪಲ್ ಕೌನ್ಸಿಲಿನ ಕೌನ್ಸಿಲರನಾಗಿ ಕಾರ್ಯನಿರ್ವಹಿಸಿದರೆ, ಅವನು ಸದಸ್ಯನಾಗಿ ಕುಳಿತುಕೊಳ್ಳುವ ಮತ್ತು ನೀಡುವಂಥ ಪ್ರತಿಯೊಂದು ದಿವಸಕ್ಕೆ 50 ರೂಪಾಯಿಗಳ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಹಾಗೆಂದು ಪದಧಾರಣ ಮಾಡಲು ಅಥವಾ ಅಂಥ ಪ್ರಕಾರ್ಯಗಳನ್ನು ಚಲಾಯಿಸಲು ತನಗೆ ಹಕ್ಕಿಲ್ಲವೆಂದು ಅಥವಾ ಹಕ್ಕುಳ್ಳವನಾಗಿರುವುದು ನಿಂತುಹೋಗಿದೆ ಎಂದು ತಿಳಿದು ಪರಿಷತ್ತಿನ ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿ ಕಾರ್ಯನಿರ್ವಹಿಸಿದರೆ ಅವನು ಹಾಗೆಂದು ಕಾರ್ಯ ಅಥವಾ ಪ್ರಕಾರ್ಯಗಳನ್ನು ನಿರ್ವಹಿಸುವಂಥ ಪ್ರತಿಯೊಂದು ದಿವಸಕ್ಕೆ 200 ರೂಪಾಯಿಗಳ ಜುಲ್ಮಾನೆಯಿಂದ ದಂಡಿನಾಗತಕ್ಕದ್ದು.

(3) ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿದ್ದು, ತನ್ನ ಸ್ವಾಧೀನದಲ್ಲಿರುವ ಅಥವಾ ಸ್ವಾಧೀನಕ್ಕೆ ಬಂದಿರುವಂಥ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾದ ಅಥವಾ ಅದಕ್ಕೆ ಸೇರಿದ ಯಾವುದೇ ದಸ್ತಾವೇಜುಗಳು, ಯಾವುದೇ ಹಣಗಳು ಅಥವಾ ಇತರ ಸ್ವತ್ತುಗಳನ್ನು;

(ಕ) ಪ್ರತಿಯೊಂದು ಸಂದರ್ಭದಲ್ಲಿಯೂ ಅಧ್ಯಕ್ಷ ಅಥವಾ ಉಪಾಧ್ಯಕ್ಷನೆಂದು ಅವನು ಪದಾವಧಿಯು ಮುಗಿದ ಕೂಡಲೆ;

(ಖ) ಉಪಾಧ್ಯಕ್ಷನಾಗಿರುವ ವ್ಯಕ್ತಿಯ ಸಂದರ್ಭದಲ್ಲಿ ಸಂದರ್ಭಾನುಸಾರ ಅಧ್ಯಕ್ಷನು ತಗಾದೆ ಮಾಡಿದ ಮೇಲೆ ಪದದಲ್ಲಿಯ ತನ್ನ ಉತ್ತರಾಧಿಕಾರಿಗೆ ಅಥವಾ ನಿಯಮಿಸಿದ ಇತರ ಪ್ರಾಧಿಕಾರಿಗೆ ವಶಾವಣೆ ಮಾಡಲು ತಪ್ಪಿದರೆ ಸಹ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**369. ಹಿತಾಸಕ್ತಿಯುಳ್ಳ ಸದಸ್ಯರು ಮತ ನೀಡುವುದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, 55ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಮುನ್ಸಿಪಲ್ ಕೌನ್ಸಿಲಿನ ಅಥವಾ ಅದರ ಯಾವುದೇ ಸಮಿತಿಯ ಸಭೆಯಲ್ಲಿ ಮತ ಚಲಾಯಿಸಿದರೆ ಅವನು 500 ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**370. ಕರಾರಿನಲ್ಲಿ ಹಿತಾಸಕ್ತಿಯನ್ನು ಅಧಿಕಾರಿ ಅಥವಾ ನೌಕರನು ಅರ್ಜಿಸುವುದಕ್ಕಾಗಿ ದಂಡನೆ.–** 77ನೇ ಪ್ರಕರಣದ ಮೇರೆಗಿನ ಯಾವುದೇ ಕ್ರಮಕ್ಕೆ ಬಾಧಿತವಾಗದಂತೆ ಮುನ್ಸಿಪಲ್ ಕೌನ್ಸಿಲಿನ ಅಂಥ ಮುನ್ಸಿಪಲ್ ಕೌನ್ಸಿಲಿನ ನಡುವೆ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಹಿತಾಸಕ್ತಿವುಳ್ಳ ಯಾರೇ ಅಧಿಕಾರಿ ಅಥವಾ ನೌಕರನು ತಿಳಿದೂ ತಿಳಿದು ತಾನಾಗಿಯೇ ಪ್ರತ್ಯಕ್ಷವಾಗಿಯೇ ಆಗಲಿ ಅಥವಾ ಪರೋಕ್ಷವಾಗಿಯೇ ಆಗಲಿ ಅಥವಾ ಪಾಲುದಾರನ, ನಿಯೋಜಕನ ಅಥವಾ ಸೇವಕನ ಮೂಲಕವಾಗಿಯೇ ಆಗಲಿ ಯಾವುದೇ ವೈಯಕ್ತಿಕ ಪಾಲು ಅಥವಾ ಹಿತಾಸಕ್ತಿಯನ್ನು ಆರ್ಜಿಸಿದರೆ, ಅವನು ಭಾರತ ದಂಡ ಸಂಹಿತೆಯ 168ನೇ ಪ್ರಕರಣದ ಮೇರೆಗೆ ಅಪರಾಧ ಮಾಡಿರುವುದಾಗಿ ಭಾವಿಸತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು, ಯಾವುದೇ ಕಂಪನಿಯಲ್ಲಿ ಷೇರುದಾರ ಅಥವಾ ಸದಸ್ಯನಾಗಿರುವ ಕಾರಣದಿಂದ, ಅವನು ಅಂಥ ಕಂಪನಿಯ ನಿರ್ದೇಶಕನಾಗಿರುವ ಹೊರತು ಅಂಥ ಕಂಪನಿ ಮತ್ತು ಮುನ್ಸಿಪಲ್ ಕೌನ್ಸಿಲು ನಡುವೆ ಯಾವುದೇ ಕರಾರಿನಲ್ಲಿ ಹಿತಾಸಕ್ತಿಯುಳ್ಳವನಾಗಿರುವನೆಂದು ತಿಳಿಯತಕ್ಕದ್ದಲ್ಲ.

**371. ಸವಾಲು ಮಾಡುವುದರ ನಿಷೇಧ.–** (1) ಈ ಅಧಿನಿಯಮದ ಮೇರೆಗೆ ಸ್ಥಿರ ಅಥವಾ ಚರ ಸ್ವತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನಿರ್ವಹಿಸಬೇಕಾಗಿರುವ ಮುನ್ಸಿಪಲ್ ಕೌನ್ಸಿಲ್‌ನ ಯಾರೇ ನೌಕರನು ಅಥವಾ ಯಾರೇ ಅಧಿಕಾರಿಯು ಅಂಥ ಮಾರಾಟದಲ್ಲಿ ಮಾರಾಟ ಮಾಡಲಾದ ಯಾವುದೇ ಸ್ವತ್ತಿನ ಬಗ್ಗೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸವಾಲು ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, 500 ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಸೇವೆಯಿಂದ ವಜಾಗೊಳ್ಳಲು ಸಹ ಗುರಿಯಾಗತಕ್ಕದ್ದು.

**372. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪನಿಯಾಗಿದ್ದರೆ ಆ ಕಂಪನಿಯನ್ನು ಮತ್ತು ಆ ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ವ್ಯವಹಾರಗಳನ್ನು ನಡೆಸುವುದಕ್ಕಾಗಿ ಅದರ ಆಡಳಿತವನ್ನು ಹೊಂದಿದ್ದ, ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದಾವುದೂ ಆ ಅಪರಾಧವು ತನಗೆ ತಿಳಿಯದೆಯೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ಯುಕ್ತವಾದ ಎಲ್ಲ ಜಾಗರೂಕತೆಯನ್ನು ವಹಿಸಿದ್ದನೆಂದು ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ಈ ಅಧಿನಿಯಮದ ಮೇರೆಗಿನ ಅಪರಾಧವು ಒಂದು ಕಂಪನಿಯಿಂದ ನಡೆಯುವಲ್ಲಿ ಮತ್ತು ಕಂಪನಿಯ ಯಾರೇ ನಿರ್ದೇಶಕರ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಇಲ್ಲವೇ ಪರೋಕ್ಷ ಸಮ್ಮತಿಯಿಂದ ಆ ಅಪರಾಧವು ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅದು ಅವನ ಯಾವುದೇ ನಿರ್ಲಕ್ಷತೆಯ ಕಾರಣದಿಂದ ಸಂಭವಿಸಿತೆಂದು ಹೇಳಬಹುದಾಗಿರುವಲ್ಲಿ, ಅಂಥ ನಿರ್ದೇಶಕನು, ವ್ಯವಸ್ಥಾಪಕನು, ಕಾರ್ಯದರ್ಶಿ ಅಥವಾ ಅಂಥ ಇತರ ಯಾರೇ ಅಧಿಕಾರಿಯು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ,–

(ಕ) ಕಂಪನಿ ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮನ್ನು ಒಳಗೊಳ್ಳುತ್ತದೆ;

(ಖ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

**373. ನೋಟೀಸು ಇತ್ಯಾದಿಗಳ ಮೇಲೆ ರುಜುವನ್ನು ಮುದ್ರೆ ಒತ್ತುವುದು.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೂಲಕ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನ ಅಥವಾ ಯಾರೇ ಪೌರಸಭಾ ಅಧಿಕಾರಿಯ ರುಜುವನ್ನು ಹೊಂದಿರಲು ಅಗತ್ಯಪಡಿಸಿರುವಂಥ ಪ್ರತಿಯೊಂದು ಲೈಸೆನ್ಸು, ಬರಹದಲ್ಲಿನ ಅನುಮತಿ, ನೋಟೀಸು, ಬಿಲ್ಲು, ಸಮನುಗಳು,

ಅಥವಾ ಇತರ ದಸ್ತಾವೇಜು ಸಂದರ್ಭಾನುಸಾರ ಅದು ಅಂಥ ಕಮಿಷನರ್ ಅಥವಾ ಚೀಫ್ ಆಫೀಸರನ ರುಜುವನ್ನು ಅದರ ಮೇಲೆ ಮುದ್ರೆಯೊತ್ತಿದ ಹಸ್ತಾಕ್ಷರ ಪಡಿಯಚ್ಚನ್ನು ಅದು ಹೊಂದಿದ್ದರೆ, ಅದನ್ನು ಕ್ರಮಬದ್ಧವಾಗಿ ರುಜು ಮಾಡಲಾಗಿದೆಯೆಂದು ಭಾವಿಸತಕ್ಕದ್ದು;

ಪರಂತು, ಈ ಪ್ರಕರಣದಲ್ಲಿರುವುದಾವುದೂ, ಪೌರಸಭಾ ನಿಧಿಯ ಮೇಲೆ ಬರೆದ ಚೆಕ್ಕಿಗೆ ಅಥವಾ ಮುನ್ಸಿಪಲ್ ಕೌನ್ಸಿಲಿನ ಪರವಾಗಿ ಬರೆದುಕೊಟ್ಟ ಕರಾರಿಗೆ ಅನ್ವಯವಾಗುತ್ತದೆಂದು ಭಾವಿಸತಕ್ಕದ್ದಲ್ಲ.

**374. ಲೈಸೆನ್ಸುಗಳು ಇತ್ಯಾದಿಗಳ ಸಂಬಂಧದಲ್ಲಿ ಉಪಬಂಧಗಳು.–** (1) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯಲ್ಲಿ ಯಾವುದೇ ಉದ್ದೇಶಕ್ಕಾಗಿ ಲೈಸೆನ್ಸನ್ನು ಅಥವಾ ಬರಹದಲ್ಲಿನ ಅನುಮತಿಯನ್ನು ಕೊಡಬಹುದೆಂದು ಉಪಬಂಧಿಸಿದಾಗಲೆಲ್ಲಾ ಅಂಥ ಅಥವಾ ಬರಹದಲ್ಲಿನ ಅನುಮತಿಗಾಗಿ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಅಥವಾ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಉಪವಿಧಿಗಳ ಮೇರೆಗೆ ಅದನ್ನು ಮಂಜೂರ್ಮಾಡಲು ಶಕ್ತಗೊಳಿಸಿದ ಮುಖ್ಯಾಧಿಕಾರಿ ಅಥವಾ ಅಧಿಕಾರಿಯು ಅಥವಾ ಈ ಬಗ್ಗೆ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಥವಾ ಅಂಥ ಅಧಿಕಾರಿಯು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಮಂಜೂರ್ಮಾಡತಕ್ಕದ್ದು. ಈ ಅಧಿನಿಯಮದ ಮೇರೆಗಿನ ಯಾವುದೇ ಇತರ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಉಪಬಂಧದ ಮೇರೆಗೆ ನಿರ್ದಿಷ್ಟಪಡಿಸಲು ಅಗತ್ಯಪಡಿಸಿರುವ ಯಾವುದೇ ಇತರ ವಿಷಯದ ಜೊತೆಗೆ,–

(ಕ) ಅದನ್ನು ಮಂಜೂರ್ಮಾಡಿದ ದಿನಾಂಕ;

(ಖ) ಅದನ್ನು ನೀಡಿದ ಉದ್ದೇಶ; ಮತ್ತು ಅದರ ಅವಧಿ ಯಾವುದಾದರೂ ಇದ್ದರೆ;

(ಗ) ಯಾವ ಪರಿಬಂಧಗಳು ಅಥವಾ ಷರತ್ತುಗಳಿಗೆ ಒಳಪಟ್ಟು ಅದನ್ನು ಕೊಡಲಾಗಿದೆಯೋ ಆ ಪರಿಬಂಧಗಳು ಅಥವಾ ಷರತ್ತುಗಳು, ಯಾವುದಾದರೂ ಇದ್ದರೆ;

(ಘ) ಅದನ್ನು ಯಾರಿಗೆ ಕೊಡಲಾಗಿದೆಯೋ ಆ ವ್ಯಕ್ತಿಯ ಹೆಸರು ಮತ್ತು ವಿಳಾಸ; ಮತ್ತು

(ಙ) ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಗಾಗಿ ಸಂದಾಯ ಮಾಡಿದ ಫೀಜು ಯಾವುದಾದರೂ ಇದ್ದರೆ,

–ಇವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ ಕೊಟ್ಟ ಯಾವುದೇ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯನ್ನು ಯಾವುದೇ ಕಾಲದಲ್ಲಿ ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರ್ ಅಥವಾ ಅದನ್ನು ಕೊಟ್ಟ ಅಧಿಕಾರಿಯು, ಅದನ್ನು ಪಡೆದುಕೊಂಡವನು ಸುಳ್ಳು ನಿರೂಪಣೆ ಅಥವಾ ಮೋಸದ ಮೂಲಕ ಅದನ್ನು ಪಡೆದುಕೊಂಡಿದ್ದಾನೆಂದು ಅಥವಾ ಅದನ್ನು ಪಡೆದುಕೊಂಡವನು ಅದರ ಯಾವುದೇ ಪರಿಬಂಧಗಳು ಅಥವಾ ಷರತ್ತುಗಳನ್ನು ಉಲ್ಲಂಘಿಸಿದ್ದಾನೆ ಅಥವಾ ತಪ್ಪಿಸಿದ್ದಾನೆ ಎಂದು ಸಮಾಧಾನ ಹೊಂದಿವರೆ ಅಥವಾ ಅದನ್ನು ಪಡೆದವನು ಲೈಸೆನ್ಸು ಅಥವಾ ಅನುಮತಿಯನ್ನು ಕೊಡಲಾದಂಥ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ಉಪವಿಧಿಯ ಯಾವುದೇ ಉಪಬಂಧದ ಉಲ್ಲಂಘನೆಗಾಗಿ ಅಪರಾಧ ನಿರ್ಣೀತನಾದರೆ ಅಮಾನತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು:

ಪರಂತು,–

(ಕ) ಅಮಾನತು ಅಥವಾ ರದ್ದಿಯಾತಿಯ ಯಾವುದೇ ಆದೇಶವನ್ನು ಮಾಡುವುದಕ್ಕೆ ಮುಂಚೆ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯನ್ನು ಪಡೆದವನಿಗೆ ಅದನ್ನು ಏಕೆ ಅಮಾನತು ಅಥವಾ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಡತಕ್ಕದ್ದು.

(ಬ) ಅಂಥ ಪ್ರತಿಯೊಂದು ಆದೇಶವು, ಆ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯನ್ನು ಅಮಾನತುಗೊಳಿಸುವಿಕೆ ಅಥವಾ ರದ್ದಿಯಾತಿ ಕಾರಣಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿರತಕ್ಕದ್ದು.

(3) ಅಂಥ ಯಾವುದೇ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯನ್ನು ಅಮಾನತುಗೊಳಿಸಿದಾಗ ಅಥವಾ ರದ್ದುಗೊಳಿಸಿದಾಗ ಅಥವಾ ಅದನ್ನು ಯಾವ ಅವಧಿಗಾಗಿ ಕೊಡಲಾಗಿತ್ತೊ, ಆ ಅವಧಿಯು ಮುಕ್ತಾಯವಾದಾಗ ಅದನ್ನು ಪಡೆದುಕೊಂಡವನು, ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಎಲ್ಲಾ ಉದ್ದೇಶಗಳಿಗಾಗಿ, ಆ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯನ್ನು ಅಮಾನತುಗೊಳಿಸುವ ಅಥವಾ ರದ್ದುಪಡಿಸುವ ಆದೇಶವನ್ನು ರದ್ದುಪಡಿಸುವುದು ಅಥವಾ ಆ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯನ್ನು ನವೀಕರಿಸುವಂಥ ಕಾಲದವರೆಗೆ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯನ್ನು ಪಡೆದಿಲ್ಲವೆಂದು ಭಾವಿಸತಕ್ಕದ್ದು.

(4) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯ ಮೇರೆಗೆ ಕೊಡಲಾದ ಯಾವುದೇ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯನ್ನು ಪಡೆದುಕೊಂಡ ಪ್ರತಿಯೊಬ್ಬನು ಅಂಥ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯು ಜಾರಿಯಲ್ಲಿರುವಾಗ ಎಲ್ಲ ಯುಕ್ತ ಕಾಲದಲ್ಲಿ ಮುನ್ಸಿಪಲ್ ಕಮಿನಷರು ಅಥವಾ ಚೀಫ್ ಆಫೀಸರನು ಅಥವಾ ಅದನ್ನು ಕೊಟ್ಟ ಅಧಿಕಾರಿಯು ಹಾಗೆ ಅಗತ್ಯಪಡಿಸಿದರೆ ಅಂಥ ಲೈಸೆನ್ಸು ಅಥವಾ ಬರಹದಲ್ಲಿನ ಅನುಮತಿಯನ್ನು ಹಾಜರುಪಡಿಸತಕ್ಕದ್ದು.

**375. ಪೌರಸಭಾ ಸೇವೆಯಲ್ಲಿ ನಿಯೋಜಿತರಾದ ಜಾಡಮಾಲಿಗಳು ಮತ್ತು ವ್ಯಕ್ತಿಗಳ ಕೆಲವು ಇತರ ವರ್ಗಗಳ ಸೇವಾ ಷರತ್ತುಗಳು.–** (1) ಮುನ್ಸಿಪಲ್ ಕೌನ್ಸಿಲ್ಲಿನಿಂದ ನಿಯೋಜಿತ ಜಾಡಮಾಲಿಯಾಗಿರುವ ಯಾರೇ ವ್ಯಕ್ತಿಯು ಹಾಗೆ ಮಾಡಲು ಅವನನ್ನು ಅಧಿಕೃತಗೊಳಿಸುವ ಕರಾರು ಇಲ್ಲದಿರುವಲ್ಲಿ ಮತ್ತು ಯುಕ್ತ ಕಾರಣವಿಲ್ಲದೆ ಮುನ್ಸಿಪಲ್ ಕಮಿಷನರ್‌ನು ಅಥವಾ ಚೀಫ್ ಆಫೀಸರನಿಗೆ ಒಂದು ತಿಂಗಳಿನ ನೋಟೀಸನ್ನು ಕೊಡದೆ ತನ್ನ ಕೆಲಸಕ್ಕೆ ರಾಜೀನಾಮೆಯನ್ನು ಕೊಡತಕ್ಕದ್ದಲ್ಲ ಅಥವಾ ತನ್ನ ಕರ್ತವ್ಯದಿಂದ ಗೈರುಹಾಜರಿಯಾಗತಕ್ಕದ್ದಲ್ಲ ಅಥವಾ ತನ್ನ ಕರ್ತವ್ಯಗಳನ್ನು ನಿರ್ಲಕ್ಷಿಸತಕ್ಕದ್ದಲ್ಲ ಅಥವಾ ಯುಕ್ತ ಕಾರಣವಿಲ್ಲದೆ ಅವುಗಳನ್ನು ನೆರವೇರಿಸಲು ನಿರಾಕರಿಸತಕ್ಕದ್ದಲ್ಲ.

(2) ಮುನ್ಸಿಪಲ್ ಕೌನ್ಸಿಲು ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ನಿರ್ಣಯದಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಅಂದಿನಿಂದ, ಸಾರ್ವಜನಿಕ ಆರೋಗ್ಯ ಅಥವಾ ಸುರಕ್ಷತೆಗೆ ನಿಕಟ ಸಂಬಂಧವುಳ್ಳ ಪ್ರಕಾರ್ಯಗಳನ್ನು ಹೊಂದಿರುವ ಮುನ್ಸಿಪಲ್ ಕೌನ್ಸಿಲಿನಿಂದ ನಿಯೋಜಿತರಾದ ವ್ಯಕ್ತಿಗಳ ಯಾವುದೇ ನಿರ್ದಿಷ್ಟಪಡಿಸಿದ ವರ್ಗದ ಸಂದರ್ಶನದಲ್ಲಿ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದು.

**376. ದಸ್ತಾವೇಜು ಅಥವಾ ನಮೂದನೆಯನ್ನು ಸಾಕ್ಷಿಯಾಗಿ ಅಂಗೀಕರಿಸುವುದು.–** (1) ಯಾವುದೇ ರಸೀದಿ, ಅರ್ಜಿ, ನಕಾಶೆ, ನೋಟೀಸು ಆದೇಶ ಅಥವಾ ಇತರ ಮುನ್ಸಿಪಲ್ ಕೌನ್ಸಿಲ್ಲಿನ ದಸ್ತಾವೇಜಿನ ಅಥವಾ ರಿಜಿಸ್ಟರಿನಲ್ಲಿ ಯಾವುದೇ ನಮೂದೆಯ ನಕಲು ಮುನ್ಸಿಪಲ್ ಕಮಿಷನರ್ ಅಥವಾ ಚೀಫ್ ಆಫೀಸರನು ಕ್ರಮಬದ್ಧವಾಗಿ ಪ್ರಮಾಣೀಕರಿಸಿದರೆ ಆ ದಸ್ತಾವೇಜು ಅಥವಾ ನಮೂದನೆಯು ಅಸ್ತಿತ್ವದಲ್ಲಿ ಇರುವುದರ ಬಗ್ಗೆ ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಾಗತಕ್ಕದ್ದು ಮತ್ತು ಅವುಗಳಲ್ಲಿ ದಾಖಲೆ ಮಾಡಿಕೊಂಡಿರುವ ವಿಷಯ ಮತ್ತು

ವ್ಯವಹಾರಗಳ ಬಗ್ಗೆ ಅಂಥ ಸಾಕ್ಷ್ಯವಾಗಿ ಅಂಥ ವಿಷಯಗಳು ಮತ್ತು ವ್ಯವಹಾರಗಳನ್ನು ರುಜುವಾತುಪಡಿಸಲು ಆ ಮೂಲ ದಸ್ತಾವೇಜು ಅಥವಾ ನಮೂದನೆಯನ್ನು ಹಾಜರುಪಡಿಸಿದ್ದರೆ ಅಂಗೀಕಾರಾರ್ಹವಾಗಬಹುದಾದಷ್ಟರ ಮಟ್ಟಿಗೆ ಪ್ರತಿಯೊಂದು ಪ್ರಕರಣದಲ್ಲಿ ಅಂಗೀಕೃತವಾಗತಕ್ಕದ್ದು.

(2) ಯಾರೇ ಪೌರಸಭಾ ಅಧಿಕಾರಿ ಅಥವಾ ಇತರ ನಿಯೋಜಿತನನ್ನು ಮುನ್ಸಿಪಲ್ ಕೌನ್ಸಿಲ್ಲು ಪಕ್ಷಕಾರನಾಗಿಲ್ಲದಂಥ ಯಾವುದೇ ಕಾನೂನು ವ್ಯವಹರಣೆಯಲ್ಲಿ ಯಾವುದರ ಒಳಾಂಶಗಳು (1)ನೇ ಉಪಪ್ರಕರಣದ ಮೇರೆಗೆ ಪ್ರಮಾಣೀಕೃತ ನಕಲಿನ ಮೂಲಕ ರುಜುವಾತುಪಡಿಸಬಹುದೋ, ಆ ಯಾವುದೇ ರಿಜಿಸ್ಟರು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಅಥವಾ ವಿಶೇಷ ಕಾರಣಕ್ಕಾಗಿ ನ್ಯಾಯಾಲಯವು ಆದೇಶದ ಮೂಲಕವಲ್ಲದೆ ಅದರಲ್ಲಿ ದಾಖಲು ಮಾಡಿದ ಯಾವುದೇ ವಿಷಯ ಅಥವಾ ವ್ಯವಹಾರವನ್ನು ರುಜುವಾತುಪಡಿಸಲು ಸಾಕ್ಷಿಯಾಗಿ ಹಾಜರಾಗಲು ಅಗತ್ಯಪಡಿಸತಕ್ಕದ್ದಲ್ಲ.

**377. ಲೈಸೆನ್ಸು ಕೊಡುವಿಕೆ ಮತ್ತು ಇತರ ಉಪಬಂಧಗಳು ಸರ್ಕಾರಕ್ಕೆ ಅನ್ವಯವಾಗತಕ್ಕದ್ದಲ್ಲ.–** (1) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯಲ್ಲಿ ಇರುವುದಾವುದು ಕೇಂದ್ರ ಅಥವಾ ರಾಜ್ಯ ಸರ್ಕಾರದ ಸ್ವಾಧೀನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಸ್ಥಳಕ್ಕೆ ಸಂಬಂಧಿಸಿದಂತೆ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ, ಈ ಅಧಿನಿಯಮ ಅಥವಾ ಯಾವುದೇ ಉಪವಿಧಿಯ ಮೇರೆಗೆ ಯಾವುದೇ ಲೈಸೆನ್ಸನ್ನು ಪಡೆಯಲು ಅಥವಾ ಯಾವುದೇ ಅನುಮತಿಯನ್ನು ತೆಗೆದುಕೊಳ್ಳಲು ಅಗತ್ಯಪಡಿಸುವುದಾಗಿ ಅರ್ಥೈಸತಕ್ಕದ್ದಲ್ಲ.

(2) ಭಾರತ ಸಂವಿಧಾನದ 285ನೇ ಅನುಚ್ಛೇದದ ಮೇರೆಗೆ ಸಂಘದ ಯಾವುದೇ ಸ್ವತ್ತಿನ ಮೇಲೆ ಯಾವುದೇ ತೆರಿಗೆಯ ವಿಧಿಸುವಿಕೆ ಅಥವಾ ತೆರಿಗೆಯ ವಿಧಿಸುವಿಕೆ ಮುಂದುವರಿಕೆಯನ್ನು ಅನುಮತಿಸಬಹುದಾದಷ್ಟರಮಟ್ಟಿಗಲ್ಲದೇ ಸಂಘದ ಸ್ವತ್ತು ಈ ಅಧಿನಿಯಮದ ಮೇರೆಗೆ ವಿಧಿಸಿದ ಯಾವುದೇ ತೆರಿಗೆಯಿಂದ ವಿನಾಯತಿಯನ್ನು ಹೊಂದಿರತಕ್ಕದ್ದಲ್ಲ.

**378. ಬಸ್ ನಿಲುಗಡೆಗಳಿಗೆ ಪ್ರಯಾಣಿಕರ ಆಶ್ರಯಗಳಿಗೆ ಲೈಸೆನ್ಸು ಕೊಡುವಿಕೆಯ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ, ಇತ್ಯಾದಿ.–** ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ.–

(1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಮುನ್ಸಿಪಲ್ ಕೌನ್ಸಿಲಿನಲ್ಲಿ ನಿಹಿತವಾಗಿರುವ ಯಾವುದೇ ರಸ್ತೆ ಅಥವಾ ಭೂಮಿಯ ಮೇಲೆ ಬಸ್ಸುಗಳ ನಿಲುಗಡೆಯ ಸ್ಥಳಗಳನ್ನು ತೋರಿಸುವ ಸ್ತಂಭಗಳನ್ನು ಜೋಡಿಸುವುದು ಅಥವಾ ಸ್ಥಾಪಿಸುವುದು ಅಥವಾ ಪ್ರಯಾಣಿಕರ ಆಶ್ರಯಗಳು, ಟಿಕೇಟು ಬೂತುಗಳು ಮತ್ತು ಬಸ್ ನಿಲ್ದಾಣಗಳನ್ನು ಸ್ಥಾಪಿಸುವುದು ಅಥವಾ ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಲೈಸೆನ್ಸು ಅಥವಾ ಅನುಮತಿಯು ಅವಶ್ಯವಿರತಕ್ಕದ್ದಲ್ಲ.

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಪ್ರಯಾಣಿಕರ ಆಶ್ರಯ, ಟಿಕೇಟು ಬೂತುಗಳು ಅಥವಾ ಬಸ್ಸು ನಿಲ್ದಾಣವನ್ನು ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಸ್ಥಾಪಿಸತಕ್ಕದ್ದಲ್ಲ ಅಥವಾ ನಿರ್ಮಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ಮಿಸಿದ ಪ್ರಯಾಣಿಕರ ಆಶ್ರಯಗಳು, ಟಿಕೇಟು ಬೂತುಗಳು ಮತ್ತು ಬಸ್ಸು ನಿಲ್ದಾಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, ಮುನ್ಸಿಪಲ್ ಕೌನ್ಸಿಲ್ಲಿಗೆ ಅವರು ಒಪ್ಪಬಹುದಾದಂಥ ಮತ್ತು ಅಂಥ ಯಾವುದೇ ಒಪ್ಪಂದ ಇಲ್ಲದಿರುವಲ್ಲಿ ಸರ್ಕಾರವು ವಾರ್ಷಿಕ ಭೂ ಬಾಡಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದು.

**379. ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಅಧಿನಿಯಮದ ಉಪಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ.–** 243, 244, 256 ಮತ್ತು 324ನೇ ಪ್ರಕರಣಗಳ ಉಪಬಂಧಗಳು, ಮಾರುಕಟ್ಟೆಗಳು ಮತ್ತು ಇತರ ಆವರಣಗಳಿಗೆ

ಅವುಗಳು ಸಂಬಂಧಪಡುವಷ್ಟರಮಟ್ಟಿಗೆ 1939ರ ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಅಧಿನಿಯಮ ಅಥವಾ ರಾಜ್ಯದಲ್ಲಿ ಇತರ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನಿನ ಮೇರೆಗೆ ಸ್ಥಾಪಿತವಾದ ಯಾವುದೇ ಮಾರುಕಟ್ಟೆಗೆ ಅನ್ವಯವಾಗತಕ್ಕದ್ದು ಮತ್ತು ಯಾವುದೇ ಇತರ ಮಾರುಕಟ್ಟೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳು ಸದರಿ ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆಗಳ ಅಧಿನಿಯಮ ಅಥವಾ ಇತರ ಸಂವಾದಿ ಕಾನೂನಿನ ಜೊತೆಗೆ ಮತ್ತು ಅದನ್ನು ನ್ಯೂನಗೊಳಿಸದಂತೆ, ಇರತಕ್ಕದ್ದು.

**380. ಮೇಲ್ವಾಟು ಅಧಿನಿಯಮಗಳ ಉಪಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ.**– ಈ ಅಧಿನಿಯಮದ VIIIನೇ ಅಧ್ಯಾಯದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ 1903ರ ಮೈಸೂರು ನಗರ ಮೇಲ್ವಾಟು ಅಧಿನಿಯಮವು, (1903ರ ಮೈಸೂರು ಅಧಿನಿಯಮ, 3) ವ್ಯಾಪ್ತವಾಗುವಂಥ ಪ್ರದೇಶಕ್ಕೆ ಮತ್ತು ಯಾವುದೇ ಇತರ ಅಂಥದೇ ಕಾನೂನಿನ ಮೇರೆಗೆ ಮೇಲ್ವಾಟು ಮಂಡಲಿಯನ್ನು ರಚಿಸಿರುವಂಥ ಯಾವುದೇ ಇತರ ಪೌರಸಭಾ ಪ್ರದೇಶಕ್ಕೆ ಅನ್ವಯವಾಗತಕ್ಕದ್ದಲ್ಲ.

**381. ಮಧ್ಯಾಕಾಲೀನ ಉಪಬಂಧಗಳು.**– (1) ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದೂ 382ನೇ ಪ್ರಕರಣದ ಮೂಲಕ ನಿರಸನಗೊಳಿಸಿದ ಈ ಅಧಿನಿಯಮಿತಿಗಳ ಮೇರೆಗೆ ರಚಿಸಿದ ಮತ್ತು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಪಂಚಾಯಿತಿಗಳು, ಪಟ್ಟಣ ಮುನ್ಸಿಪಲ್ ಕೌನ್ಸಿಲುಗಳು ಅಥವಾ ನಗರ ಮುನ್ಸಿಪಲ್ ಕೌನ್ಸಿಲ್ಲುಗಳು ಆಗಿರುವುದಾಗಿ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದೇಶಿಸಬಹುದಾದಂತೆ ಕೆಲಸ ಮಾಡುತ್ತಿರುವ ಯಾವುದೇ ಹೆಸರಿನಿಂದ ಕರೆಯಲಾದಂಥ ಮುನ್ಸಿಪಲ್ ನಿಕಾಯಗಳು ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕದಿಂದ ಗ್ರಾಮ ಪಂಚಾಯಿತಿಗಳಿಗೆ ಸಂದರ್ಭಾನುಸಾರ 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮದ ಮೂಲಕ ಅಥವಾ ಪಟ್ಟಣ ಮುನ್ಸಿಪಲ್ ಕೌನ್ಸಿಲ್ಲುಗಳಿಗೆ ಮತ್ತು ನಗರ ಮುನ್ಸಿಪಲ್ ಕೌನ್ಸಿಲ್ಲುಗಳಿಗೆ ಈ ಅಧಿನಿಯಮದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ಸಂದರ್ಭಾನುಸಾರ 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಪಂಚಾಯಿತಿಗಳು ಅಥವಾ ಪಟ್ಟಣ ಮುನ್ಸಿಪಲ್ ಕೌನ್ಸಿಲುಗಳ ಅಥವಾ ನಗರ ಮುನ್ಸಿಪಲ್ ಕೌನ್ಸಿಲನ್ನು ಕ್ರಮಬದ್ಧವಾಗಿ ನಡೆಸುವವರೆಗೆ ಸಕ್ಷಮವಾದ ನಿಕಾಯಗಳಾಗಿರತಕ್ಕದ್ದು:

ಪರಂತು, ಯಾವುದೇ ಪೌರಸಭೆ ನಿಕಾಯವನ್ನು,–

(i) ಅಂಥ ಪೌರಸಭಾ ನಿಕಾಯದ ಅಧಿಕಾರ ವ್ಯಾಪ್ತಿಯಲ್ಲಿನ ಪ್ರದೇಶದ ಜನಸಂಖ್ಯೆಯ ಹಿಂದಿನ ಕೊನೆಯ ಜನಗಣತಿಯಲ್ಲಿ ನಿರ್ಧರಿಸಿದಂತೆ ಹತ್ತು ಸಾವಿರಕ್ಕಿಂತ ಕಡಿಮೆ ಇದ್ದ ಹೊರತು ಪಂಚಾಯಿತಿಯೇ ಖುದ್ದಾಗಿ;

(ii) ಅಂಥ ಪೌರಸಭಾ ನಿಕಾಯದ ಅಧಿಕಾರ ವ್ಯಾಪ್ತಿಯಲ್ಲಿನ ಪ್ರದೇಶದ ಜನ ಸಂಖ್ಯೆಯ ಹಿಂದಿನ ಕೊನೆಯ ಜನಗಣತಿಯಲ್ಲಿ ನಿರ್ಧರಿಸಿದಂತೆ ಐವತ್ತು ಸಾವಿರಕ್ಕಿಂತ ಕಡಿಮೆ ಇದ್ದ ಹೊರತು ಪಟ್ಟಣ ಮುನ್ಸಿಪಲ್ ಕೌನ್ಸಿಲ್ ಎಂಬುದಾಗಿ;

(iii) ಅಂಥ ಪೌರಸಭಾ ನಿಕಾಯದ ಅಧಿಕಾರ ವ್ಯಾಪ್ತಿಯಲ್ಲಿನ ಪ್ರದೇಶದ ಜನ ಸಂಖ್ಯೆಯು ಹಿಂದಿನ ಕೊನೆಯ ಜನಗಣತಿಯಲ್ಲಿ ನಿರ್ಧರಿಸಿದಂತೆ ಐವತ್ತು ಸಾವಿರಕ್ಕೂ ಮೀರಿದ್ದ ಹೊರತು ನಗರ ಮುನ್ಸಿಪಲ್ ಕೌನ್ಸಿಲ್ ಎಂಬುದಾಗಿ ನಿರ್ದೇಶಿಸತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದಲ್ಲಿ, ಪೌರಸಭಾ ನಿಕಾಯ ಎಂಬುದರಲ್ಲಿ ಅಧಿಸೂಚಿತ ಪ್ರದೇಶ ಸಮಿತಿ, ಪಟ್ಟಣ ಮಂಡಲಿ, ನೈರ್ಮಲ್ಯ ಮಂಡಲಿ ಅಥವಾ ಯಾವುದೇ ಕಾನೂನಿನ ಮೇರೆಗೆ ರಚಿತವಾದ ಅಂಥಹದೇ ಇತರ ನಿಕಾಯವನ್ನು ಒಳಗೊಳ್ಳುತ್ತದೆ.

(2) 382ನೇ ಪ್ರಕರಣದ ಉಪಬಂಧಗಳಿಗೆ ಮತ್ತು 383ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶಕ್ಕೆ ಒಳಪಟ್ಟು,–

(ಕ) ಮುನ್ಸಿಪಲ್ ಕೌನ್ಸಿಲ್ಲನ್ನು ಪಂಚಾಯತಿಯಾಗಿ ಪರಿವರ್ತಿಸುವುದಕ್ಕೆ ಸಂಬಂಧಪಟ್ಟಂತೆ 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಉಪಬಂಧಗಳ (1)ನೇ ಉಪಪ್ರಕರಣದ ಮೇರೆಗೆ ಪಂಚಾಯತಿ ಎಂಬುದಾಗಿ ನಿರ್ದೇಶಿಸಲಾದ ಪೌರಸಭಾ ನಿಕಾಯವನ್ನು ಸದರಿ ಉಪಬಂಧಗಳ ಮೇರೆಗೆ ಪಂಚಾಯಿತಿಯಾಗಿ ಪರಿವರ್ತಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು; ಮತ್ತು

(ಖ) ಈ ಅಧಿನಿಯಮದ 362ನೇ ಪ್ರಕರಣ ಅಥವಾ 361ನೇ ಪ್ರಕರಣದ ಉಪಬಂಧಗಳು ಸಂದರ್ಭಾನುಸಾರ ಪಟ್ಟಣ ಮುನ್ಸಿಪಲ್ ಕೌನ್ಸಿಲ್ಲು ಅಥವಾ ನಗರ ಮುನ್ಸಿಪಲ್ ಕೌನ್ಸಿಲೆಂದು ನಿರ್ದೇಶಿಸಲಾದ ಪೌರಸಭಾ ನಿಕಾಯವನ್ನು ಸಂದರ್ಭಾನುಸಾರ ಪಟ್ಟಣ ಮುನ್ಸಿಪಲ್ ಕೌನ್ಸಿಲ್ ಅಥವಾ ನಗರ ಮುನ್ಸಿಪಲ್ ಕೌನ್ಸಿಲ್ಲಾಗಿ ಪರಿವರ್ತಿಸಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಗೆ ಒಳಪಟ್ಟು, ಸದರಿ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಪೌರಸಭಾ ನಿಕಾಯವನ್ನು ಅದು,–

(i) ನಗರ ಮುನ್ಸಿಪಲ್ ಕೌನ್ಸಿಲ್, ಪುರ, ಪೌರಸಭೆ ಅಥವಾ ಪಟ್ಟಣ ಸಮಿತಿಯಾಗಿದ್ದಲ್ಲಿ, ಅದು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಥ ನಿಕಾಯದ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶಕ್ಕಾಗಿ ನಗರ ಮುನ್ಸಿಪಲ್ ಕೌನ್ಸಿಲನ್ನು ಕ್ರಮಬದ್ಧವಾಗಿ ರಚಿಸುವವರೆಗೆ, ಈ ಅಧಿನಿಯಮದ ಉಪಬಂಧಗಳ ಮೂಲಕ ನಗರ ಮುನ್ಸಿಪಲ್ ಕೌನ್ಸಿಲಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(ii) (i)ನೇ ಖಂಡದಲ್ಲಿ ಉಲ್ಲೇಖಿಸಿದ ನಿಕಾಯವಲ್ಲದ ಇತರ ಯಾವುದೇ ನಿಕಾಯವು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಂಥ ನಿಕಾಯದ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶಕ್ಕಾಗಿ ಪಟ್ಟಣ ಮುನ್ಸಿಪಲ್ ಕೌನ್ಸಿಲನ್ನು ಕ್ರಮಬದ್ಧವಾಗಿ ರಚಿಸುವವರೆಗೆ, ಈ ಅಧಿನಿಯಮದ ಉಪಬಂಧಗಳ ಮೂಲಕ ಪಟ್ಟಣ ಮುನ್ಸಿಪಲ್ ಕೌನ್ಸಿಲಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(4) ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಪ್ರತಿಯೊಂದು ಪಂಚಾಯಿತಿ, ಪಟ್ಟಣ ಮುನ್ಸಿಪಲ್ ಕೌನ್ಸಿಲು ಅಥವಾ ನಗರ ಮುನ್ಸಿಪಲ್ ಕೌನ್ಸಿಲಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಂಥ ಅವಧಿಯ ಮುಕ್ತಾಯಕ್ಕೆ ಮುಂಚೆ ಸಂದರ್ಭಾನುಸಾರ 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ ಉಪಬಂಧಗಳ ಅಥವಾ ಈ ಅಧಿನಿಯಮದ ಉಪಬಂಧಗಳ ಮೇರೆಗೆ ರಚಿಸತಕ್ಕದ್ದು. ಮತ್ತು ಸಂದರ್ಭಾನುಸಾರ ಸದರಿ ಪಂಚಾಯಿತಿ ಅಥವಾ ಮುನ್ಸಿಪಲ್ ಕೌನ್ಸಿಲ್ ಸಭೆಯ ದಿನಾಂಕದಿಂದ ಮೊದಲ (1) ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಸಂದರ್ಭಾನುಸಾರ ಪಂಚಾಯಿತಿಯ ಅಧಿಕಾರಗಳನ್ನು ಚಲಾಯಿಸುತ್ತಿರುವ ಮತ್ತು ಪ್ರಕಾರ್ಯಗಳನ್ನು ನೆರವೇರಿಸುತ್ತಿರುವ ಪ್ರತಿಯೊಂದು ನಿಕಾಯ ಮತ್ತು ಪಟ್ಟಣ ಮುನ್ಸಿಪಲ್ ಕೌನ್ಸಿಲು ಅಥವಾ

ನಗರ ಮುನ್ಸಿಪಲ್ ಕೌನ್ಸಿಲ್‌ನ ಅಧಿಕಾರಗಳನ್ನು ಚಲಾಯಿಸುತ್ತಿರುವ ಮತ್ತು ಪ್ರಕಾರ್ಯಗಳನ್ನು ನೆರವೇರಿಸುತ್ತಿರುವ ಪ್ರತಿಯೊಂದು ಪೌರಸಭಾ ನಿಕಾಯದಲ್ಲಿ ವಿಘಟಿತರಾಗತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ಪಂಚಾಯಿತಿ, ಪಟ್ಟಣ ಮುನ್ಸಿಪಲ್ ಕೌನ್ಸಿಲು ಅಥವಾ ನಗರ ಮುನ್ಸಿಪಲ್ ಕೌನ್ಸಿಲಿಗೆ ಸಂಬಂಧಿಸಿದ ನಿರ್ದಿಷ್ಟಪಡಿಸಿದ ಅಧಿನಿಯಮಿತಿಯ ಉಪಬಂಧಗಳಿಗನುಸಾರವಾಗಿ ಸದರಿ ನಿಕಾಯವನ್ನು ಮುಂದುವರಿಸಬಹುದಾಗಿದ್ದಂಥ ಅವಧಿಗಿಂತ ಕಡಿಮೆಯಾಗಿರತಕ್ಕದ್ದಲ್ಲ;

ಮತ್ತೂ ಪರಂತು, ಯಾವುದೇ ಪಂಚಾಯಿತಿ ಅಥವಾ ಪಟ್ಟಣ ಮುನ್ಸಿಪಲ್ ಕೌನ್ಸಿಲ್ಲು ಅಥವಾ ನಗರ ಮುನ್ಸಿಪಲ್ ಕೌನ್ಸಿಲಿಗೆ ಸಂಬಂಧಿಸಿದಂತೆ ಯಾವುದೇ ಅವಧಿಯನ್ನು ನಿರ್ದಿಷ್ಟಪಡಿಸದಿದ್ದರೆ ಸದರಿ ನಿಕಾಯವನ್ನು ರಚಿಸಿದ ಅಥವಾ ಪುನರ್‌ರಚಿಸಿದ ಅಧಿನಿಯಮಿತಿಯ ಉಪಬಂಧಗಳಿನುಸಾರವಾಗಿ ಸದರಿ ನಿಕಾಯವನ್ನು ಮುಂದುವರಿಸಬಹುದಾಗಿದ್ದಂಥ ಅವಧಿಯನ್ನು, ಈ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯೆಂಬುದಾಗಿ ಭಾವಿಸತಕ್ಕದ್ದು:

ಅದೂ ಅಲ್ಲದೆ, ಈ ಉಪಪ್ರಕಣದ ಮೇರೆಗೆ ನಿರ್ದಿಷ್ಟಪಡಿಸಿದ ಅಥವಾ ನಿರ್ದಿಷ್ಟಪಡಿಸಲಾಗಿದೆ ಎಂದು ಭಾವಿಸುವ ಅವಧಿಯು,–

(i) ಅಂಥ ಯಾವುದೇ ಪಟ್ಟಣ ಮುನ್ಸಿಪಲ್ ಕೌನ್ಸಿಲು ಅಥವಾ ನಗರ ಮುನ್ಸಿಪಲ್ ಕೌನ್ಸಿಲಿಗೆ ಸಂಬಂಧಿಸಿದಂತೆ ಈ ಅಧಿನಿಯಮದ 315 ಅಥವಾ 316ನೇ ಪ್ರಕರಣದ ಅಥವಾ ಇತರ ಯಾವುದೇ ಉಪಬಂಧದ ಮೇರೆಗಿನ ಅಧಿಕಾರಗಳನ್ನು ರಾಜ್ಯ ಸರ್ಕಾರ ಅಥವಾ ಇತರ ಸಕ್ಷಮ ಪ್ರಾಧಿಕಾರ ಚಲಾಯಿಸುವುದನ್ನು; ಅಥವಾ

(ii) ಅಂಥ ಯಾವುದೇ ಪಂಚಾಯತಿಗೆ ಸಂಬಂಧಿಸಿದಂತೆ 1959ರ ಕರ್ನಾಟಕ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ 203ನೇ ಪ್ರಕರಣದ ಅಥವಾ ಇತರ ಯಾವುದೇ ಉಪಬಂಧಗಳ ಮೇರೆಗಿನ ಅಧಿಕಾರಗಳನ್ನು ಕಮಿಷನರ್ ಅಥವಾ ಇತರ ಸಕ್ಷಮ ಪ್ರಾಧಿಕಾರಿಯು ಚಲಾಯಿಸುವುದನ್ನು, ಭಾಧಿಸುವುದಾಗಿ ಭಾವಿಸತಕ್ಕದ್ದಲ್ಲ.

(5) 383ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶಕ್ಕೆ ಒಳಪಟ್ಟು (1) ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಸಂದರ್ಭಾನುಸಾರ ಪಂಚಾಯಿತಿ, ಪಟ್ಟಣ ಮುನ್ಸಿಪಲ್ ಕೌನ್ಸಿಲು ಅಥವಾ ನಗರ ಮುನ್ಸಿಪಲ್ ಕೌನ್ಸಿಲಿನ ಅಧಿಕಾರಗಳನ್ನು ಚಲಾಯಿಸುತ್ತಿರುವ ಮತ್ತು ಕರ್ತವ್ಯಗಳನ್ನು ನೆರವೇರಿಸುತ್ತಿರುವ ಪ್ರತಿಯೊಂದು ನಿಕಾಯದ ಸದಸ್ಯರ ಅಥವಾ ಕೌನ್ಸಿಲರುಗಳ ಸ್ಥಾನಗಳಲ್ಲಿನ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡತಕ್ಕದ್ದು ಮತ್ತು ಅಂಥ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ, ಈ ಅಧಿನಿಯಮದ ಪ್ರಾರಂಭದ ದಿನಾಂಕದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದಂಥ ಅಂಥ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದನ್ನು ನಿಯಂತ್ರಿಸುವ ಮತ್ತು ಅಂಥ ವಿಷಯಗಳನ್ನು ನಿಯಂತ್ರಿಸುವ ಉಪಬಂಧಗಳಿಗನುಸಾರವಾಗಿ ವಿನಿಯಮಿಸತಕ್ಕದ್ದು.

**382. ನಿರಸನ ಮತ್ತು ಉಳಿಸುವಿಕೆಗಳು.–** (1) 1933ರ ಮೈಸೂರು ನಗರ ಪೌರಸಭೆಗಳ ಅಧಿನಿಯಮ (ಮೈಸೂರು ಅಧಿನಿಯಮ 1933ರ VII) 1951ರ ಮೈಸೂರು ಪಟ್ಟಣ ಪೌರಸಭೆಗಳ ಅಧಿನಿಯಮ (ಮೈಸೂರು ಅಧಿನಿಯಮ, 1951ರ XXII) 1901ರ ಮುಂಬಯಿ ಜಿಲ್ಲಾ ಪೌರಸಭಾ ಅಧಿನಿಯಮ (ಮುಂಬಯಿ ಅಧಿನಿಯಮ 1901ರ III) 1925ರ ಮುಂಬಯಿ ಪುರ ಪೌರಸಭೆಗಳ ಅಧಿನಿಯಮ, (ಮುಂಬಯಿ ಅಧಿನಿಯಮ 1925ರ XVIII) 1890ರ ಮುಂಬಯಿ ಪೌರಸಭಾ ನೌಕರರ ಅಧಿನಿಯಮ (ಮುಂಬಯಿ ಅಧಿನಿಯಮ 1890ರ V) 1956ರ ಹೈದರಾಬಾದು ಜಿಲ್ಲಾ ಪೌರಸಭೆಗಳ ಅಧಿನಿಯಮ (ಹೈದರಾಬಾದ್ ಅಧಿನಿಯಮ 1956ರ XVIII)

1920ರ ಮದರಾಸು ಜಿಲ್ಲಾ ಪೌರಸಭೆಗಳ ಅಧಿನಿಯಮ, (ಮದ್ರಾಸು ಅಧಿನಿಯಮ, 1920ರ V), 1907ರ ಕೊಡಗು ಮುನ್ಸಿಪಲ್ ರೆಗ್ಯೂಲೇಷನ್ (1907ರ ರೆಗ್ಯೂಲೇಷನ್ II) 1899ರ ಮದರಾಸು ಪಟ್ಟಣ ಉಪದ್ರವಗಳ ಅಧಿನಿಯಮ, (ಮದ್ರಾಸು ಅಧಿನಿಯಮ 1899ರ III) 1939ರ ಮದ್ರಾಸು ಸಾರ್ವಜನಿಕ ಆರೋಗ್ಯ ಅಧಿನಿಯಮಗಳ IIನೇ ಅಧ್ಯಾಯ (ಮದ್ರಾಸು ಅಧಿನಿಯಮ 1939ರ III) 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ IXನೇ ಅಧ್ಯಾಯ (ಕರ್ನಾಟಕ ಅಧಿನಿಯಮ 1959ರ 10) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಅಂಥ ನಿರಸನವು.–

(ಕ) ಸದರಿ ಕಾನೂನುಗಳ ಅವುಗಳ ಮೇರೆಗೆ ಕ್ರಮಬದ್ಧವಾಗಿ ಮಾಡಲಾದ ಅಥವಾ ಮಾಡಲೆಡೆಗೊಟ್ಟ ಯಾವುದೇ ಕಾರ್ಯದ ಪೂರ್ವಪ್ರವರ್ತನೆಗೆ;

(ಖ) ಸದರಿ ಕಾನೂನುಗಳ ಮೇರೆಗೆ ಆರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಗೆ; ಅಥವಾ

(ಗ) ಸದರಿ ಕಾನೂನುಗಳ ವಿರುದ್ಧ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ವಹಿಸಿದ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಗೆ; ಅಥವಾ

(ಘ) ಹಿಂದೆ ಹೇಳಿದಂತೆ ಅಂಥ ಯಾವುದೇ ಹಕ್ಕು ವಿಶೇಷಾಧಿಕಾರ, ಬಾಧ್ಯತೆ ಹೊಣೆಗಾರಿಕೆ ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯಕ್ಕೆ, ಬಾಧಕವನ್ನುಂಟು ಮಾಡತಕ್ಕದ್ದಲ್ಲ.

ಮತ್ತು ಈ ಅಧಿನಿಯಮವನ್ನು ಅಂಗೀಕರಿಸಿರದಿದ್ದರೆ ಹೇಗೋ ಹಾಗೆ ಅಂತಹ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಅಂಥ ಯಾವುದೇ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದು:

ಮತ್ತು ಪರಂತು, ಹಿಂದಿನ ಪರಂತುಕಕ್ಕೆ ಒಳಪಟ್ಟು ಸದರಿ ಕಾನೂನುಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು (ಮಾಡಿದ ಯಾವುದೇ ನೇಮಕಾತಿ ಅಥವಾ ಪ್ರತ್ಯಾಯೋಜನೆ, ವಿಧಿಸಲಾದ ತೆರಿಗೆ, ಫೀಜು ಅಥವಾ ಉಪಕರ, ಹೊರಡಿಸಿದ ಅಧಿಸೂಚನೆ, ಆದೇಶ, ಲಿಖಿತ, ಅಥವಾ ನಿರ್ದೇಶನ, ರಚಿಸಿದ ನಿಯಮ, ವಿನಿಯಮ, ನಮೂನೆ, ಉಪವಿಧಿ ಅಥವಾ ಯೋಜನೆ, ಪಡೆದುಕೊಂಡ ಪ್ರಮಾಣಪತ್ರ, ಮಂಜೂರು ಮಾಡಿದ ಅನುಮತಿ ಅಥವಾ ಲೈಸೆನ್ಸು ಅಥವಾ ಮಾಡಿದ ನೋಂದಣಿಯನ್ನು ಒಳಗೊಂಡು) ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅವುಗಳು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದುಪಡಿಸಿದ ಹೊರತು, ಅಥವಾ ಅಲ್ಲಿಯವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು;

ಅದೂ ಅಲ್ಲದೆ ಹಿಂದಿನ ಪರಂತುಕದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸ್ಥಿರ ಸ್ವತ್ತಿನ ವರ್ಗಾವಣೆಯ ಮೇಲಿನ ಸುಂಕವನ್ನು ಹೊರತುಪಡಿಸಿ ಸದರಿ ಕಾನೂನುಗಳ ಮೇರೆಗೆ ಯಾವುದೇ ತೆರಿಗೆ, ಸುಂಕ, ಫೀಜು ಅಥವಾ ಉಪಕರವನ್ನು ಈ ಅಧಿನಿಯಮದ ಮೇರೆಗೆ ಅನುಮತಿಸಬಹುದಾದ ಗರಿಷ್ಠ ದರಕ್ಕಿಂತ ಹೆಚ್ಚಿನ ದರದಲ್ಲಿ ವಿಧಿಸಿರುವಲ್ಲಿ, ಅಂಥ ತೆರಿಗೆ, ಸುಂಕ, ಫೀಜು ಅಥವಾ ಉಪಕರವು, ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದುಗೊಳಿಸಿದ ಹೊರತು ಮತ್ತು ಅಲ್ಲಿಯವರೆಗೆ ಅಂಥ ಹೆಚ್ಚಿನ ದರದಲ್ಲಿ ವಿಧಿಸುವುದನ್ನು ಮುಂದುವರಿಸಬಹುದು ಮತ್ತು ಸಂಗ್ರಹಿಸಬಹುದು.

ಅದೂ ಅಲ್ಲದೆ, ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಯಾವುದೇ ಲಿಖಿತದಲ್ಲಿ ನಿರಸನಗೊಳಿಸಿದ ಯಾವುದೇ ಕಾನೂನಿನ ಯಾವುದೇ ಉಪಬಂಧಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು, ಅದಕ್ಕೆ ಬೇರೊಂದು ಉದ್ದೇಶ ಕಂಡುಬಂದ ಹೊರತು, ಈ ಅಧಿನಿಯಮದ ಸಂವಾದಿ ಉಪಬಂಧಕ್ಕೆ, ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ಸದರಿ ಕಾನೂನುಗಳ ಮೇರೆಗೆ ವಿಧಿಸಿದ ಯಾವುದೇ ತೆರಿಗೆ, ಫೀಜು ಅಥವಾ ಉಪಕರವನ್ನು ಅಂಥ ತೆರಿಗೆ, ಫೀಜು ಅಥವಾ ಉಪಕರವನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ವಿಧಿಸಲಾಗದಿದ್ದಾಗ್ಯೂ ಅಂಥ ವಿಧಿಸುವಿಕೆ ಮತ್ತು ವಸೂಲಿಗೆ ಸಂಬಂಧಪಟ್ಟಂಥ ಕಾನೂನುಗಳು ಮತ್ತು ಅದರ ಮೇರೆಗೆ ರಚಿಸಿದ ಅಥವಾ ಹೊರಡಿಸಿದ ನಿಯಮಗಳು, ವಿಧಿಗಳು, ಆದೇಶಗಳು ಮತ್ತು ಅಧಿಸೂಚನೆಗಳ ಉಪಬಂಧಗಳನ್ನು ನಿರಸಿತಗೊಳಿಸದಿದ್ದರೆ ಹೇಗೋ ಹಾಗೆ, ಅವುಗಳ ವಿಧಿಸುವಿಕೆ ಅಥವಾ ವಸೂಲು ಮಾಡುವಿಕೆಯನ್ನು ಮುಂದುವರಿಸಬಹುದು.

**383. ಈ ಅಧಿನಿಯಮವನ್ನು ಜಾರಿಗೊಳಿಸುವುದಕ್ಕೆ ಆದೇಶಗಳು.**– ಈ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ,

(ಕ) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕಾಗಿ;

(ಖ) 381ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಪಂಚಾಯಿತಿ ಅಥವಾ ಯಾವುದೇ ಮುನ್ಸಿಪಲ್ ಕೌನ್ಸಿಲ್ ಅಥವಾ ಪೌರಸಭೆಗೆ ಅವುಗಳನ್ನು ಅನ್ವಯಿಸುವಲ್ಲಿ 381ನೇ ಪ್ರಕರಣದ (1)ನೇ ಉಪಪ್ರಕರಣದ ಎರಡನೇ ಪರಂತುಕದಲ್ಲಿ ಉಲ್ಲೇಖಿಸಿದ ನಿಯಮಗಳು, ಉಪವಿಧಿಗಳು, ಅಧಿಸೂಚನೆಗಳು ಮತ್ತು ಆದೇಶಗಳಿಂದ ಲೋಪಿಸಲು, ಸೇರ್ಪಡೆ ಮಾಡಲು ಮತ್ತು ಅವುಗಳನ್ನು ಅಂಗೀಕರಿಸಲು ಮತ್ತು ಮಾರ್ಪಾಟುಗಳನ್ನು ಮಾಡುವುದಕ್ಕಾಗಿ;

(ಗ) ಈ ಅಧಿನಿಯಮದ ಉಪಬಂಧಗಳಿಗೆ ಪರಿವರ್ತನೆ ಹೊಂದುವುದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ತೊಂದರೆಗಳನ್ನು ನಿವಾರಿಸುವುದಕ್ಕಾಗಿ;

(ಘ) ಮುನ್ಸಿಪಲ್ ಕೌನ್ಸಿಲುಗಳು ಅಥವಾ ಇತರ ಪೌರಸಭಾ ನಿಕಾಯಗಳು ಈ ಮೊದಲು ನಡೆಸುತ್ತಿದ್ದ ಸೇವೆಗಳು ಮತ್ತು ಚಟುವಟಿಕೆಗಳನ್ನು ಮುನ್ಸಿಪಲ್ ಕೌನ್ಸಿಲುಗಳ ಪರವಾಗಿ ತತ್ಕಾಲದಲ್ಲಿ ನಡೆಸುವುದನ್ನು ಮುಂದುವರಿಸುವುದನ್ನೂ ಅಧಿಕೃತಗೊಳಿಸುವುದಕ್ಕಾಗಿ; ಮತ್ತು

(ಙ) ಹಿಂದೆ ಹೇಳಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವಷ್ಟರಮಟ್ಟಿಗೆ, ಯಾವುದೇ ನ್ಯಾಯಾಲಯ ಅಥವಾ ಪ್ರಾಧಿಕಾರದ ಅಧಿಕಾರಗಳು ಅಥವಾ ಅಧಿಕಾರವ್ಯಾಪ್ತಿಯನ್ನು ವ್ಯತ್ಯಾಸಗೊಳಿಸುವುದಕ್ಕಾಗಿ ಮತ್ತು ಹೊಸ ನ್ಯಾಯಾಲಯಗಳು ಅಥವಾ ಇತರ ಪ್ರಾಧಿಕಾರಗಳಿಗೆ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ಶಕ್ತಗೊಳಿಸುವುದಕ್ಕಾಗಿ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಅದಕ್ಕೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವ ಅಂಥ ಉಪಬಂಧಗಳನ್ನು ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಆದೇಶವು, ಅಂಥ ಪ್ರದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅದರ ಪ್ರವರ್ತನೆಯಲ್ಲಿ ಉತ್ತರಾನ್ವಯವಾಗಿಯಾಗಲಿ ಅಥವಾ ಪೂರ್ವಾನ್ವಯವಾಗಿಯಾಗಲಿ ಇರಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಎಲ್ಲ ಆದೇಶಗಳನ್ನು, ರಾಜ್ಯ ವಿಧಾನ ಮಂಡಲದ ಎರಡೂ ಸದನದ ಮುಂದೆ ಇಡತಕ್ಕದ್ದು ಮತ್ತು ಅವುಗಳನ್ನು ಹಾಗೆ ಇಟ್ಟಂಥ ಅಧಿವೇಶನದಲ್ಲಿ ರಾಜ್ಯ ವಿಧಾನಮಂಡಲವು ಮಾಡಬಹುದಾದ ಮಾರ್ಪಾಟುಗಳಿಗೆ ಒಳಪಟ್ಟು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

**384. 1949ರ ಮೈಸೂರು ಅಧಿನಿಯಮ 69ರ ತಿದ್ದುಪಡಿ.–** 1949ರ ಬೆಂಗಳೂರು ನಗರ ಪೌರಸಭಾ ನಿಗಮ ಅಧಿನಿಯಮದಲ್ಲಿ 431ನೇ ಪ್ರಕರಣದ ತರುವಾಯ, ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು. ಎಂದರೆ:–

**"431–ಕ".– ಬಸ್ ನಿಲುಗಡೆಗಳಿಗೆ ಪ್ರಯಾಣಿಕರ ಆಶ್ರಯಗಳಿಗೆ ಲೈಸೆನ್ಸು ಕೊಡುವಿಕೆಯ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ ಇತ್ಯಾದಿ.–**

ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ,–

(1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಪೌರಸಭೆ ನಿಗಮದಲ್ಲಿ ನಿಹಿತವಾಗಿರುವ ಯಾವುದೇ ರಸ್ತೆ ಅಥವಾ ಭೂಮಿಯ ಮೇಲೆ, ಬಸ್ಸುಗಳ ನಿಲುಗಡೆಯ ಸ್ಥಳಗಳನ್ನು ತೋರಿಸುವ ಸ್ತಂಭಗಳನ್ನು ಜೋಡಿಸುವುದು ಅಥವಾ ಸ್ಥಾಪಿಸುವುದು, ಅಥವಾ ಪ್ರಯಾಣಿಕರ ಆಶ್ರಯ, ಟಿಕೇಟು ಬೂತುಗಳು ಮತ್ತು ಬಸ್ ನಿಲ್ದಾಣಗಳನ್ನು ಸ್ಥಾಪಿಸುವುದು ಅಥವಾ ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಲೈಸೆನ್ಸು ಅಥವಾ ಅನುಮತಿಯು ಅವಶ್ಯವಿರತಕ್ಕದ್ದಲ್ಲ:

ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಪ್ರಯಾಣಿಕರ ಆಶ್ರಯ, ಟಿಕೆಟ್ ಬೂತು, ಅಥವಾ ಬಸ್ ನಿಲ್ದಾಣವನ್ನು ಸರ್ಕಾರದ ಪೂರ್ವ–ಮಂಜೂರಾತಿಯಿಲ್ಲದೆ ಸ್ಥಾಪಿಸತಕ್ಕದ್ದಲ್ಲ ಅಥವಾ ನಿರ್ಮಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ಮಿಸಲಾದ ಪ್ರಯಾಣಿಕರ ಆಶ್ರಯ ಟಿಕೆಟು ಬೂತುಗಳು ಮತ್ತು ಬಸ್ಸು ನಿಲ್ದಾಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, ಮುನ್ಸಿಪಲ್ ನಿಗಮಕ್ಕೆ ಅವರು ಒಪ್ಪಿಕೊಳ್ಳಬಹುದಾದ ಮತ್ತು ಅಂಥ ಯಾವುದೇ ಒಪ್ಪಂದವಿಲ್ಲದಿರುವಲ್ಲಿ ಸರ್ಕಾರವು ನಿರ್ಧರಿಸಬಹುದಾದಂಥ ವಾರ್ಷಿಕ ಭೂ ಬಾಡಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದು.

**1. 1949ರ ಮೈಸೂರು ಅಧಿನಿಯಮ 69ರ ತಿದ್ದುಪಡಿ:–** 1949ರ ಬೆಂಗಳೂರು ನಗರ ಪೌರಸಭಾ ನಿಗಮ ಅಧಿನಿಯಮದ (1949ರ ಮೈಸೂರು ಅಧಿನಿಯಮ ಸಂಖ್ಯೆ 69) 142ನೇ ಪ್ರಕರಣದಲ್ಲಿ "ಮಾರಾಟಕ್ಕಾಗಿನ ಪ್ರತಿಫಲದ ಮೊಬಲಗು, ದಾನದ ಸಂದರ್ಭದಲ್ಲಿ ಸ್ವತ್ತಿನ ಮೌಲ್ಯ ಅಥವಾ ಅಡಮಾನದ ಮೂಲಕ ಭದ್ರತೆ ಒದಗಿಸಿದ ಮೊಬಲಗು, ವಿನಿಮಯದ ಸಂದರ್ಭದಲ್ಲಿ ಹೆಚ್ಚಿನ ಮೌಲ್ಯದ ಸ್ವತ್ತಿನ" ಎಂಬ ಪದಗಳಿಗೆ ಬದಲಾಗಿ "ಮಾರಾಟ ಅಥವಾ ದಾನದ ವಸ್ತು ವಿಷಯವಾಗಿರುವಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ಅಡಮಾನದ ಮೂಲಕ ಭದ್ರತೆ ಒದಗಿಸಿದ ಮೊಬಲಗು, ವಿನಿಮಯದ ಮೌಲ್ಯ ಎಂಬ ವಸ್ತು ವಿಷಯವಾದಂಥ ಹೆಚ್ಚಿನ ಮೌಲ್ಯದ ಸ್ವತ್ತಿನ ಮಾರುಕಟ್ಟೆ ಮೌಲ್ಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**385. 1949ರ ಮುಂಬೈ ಅಧಿನಿಯಮ ಸಂಖ್ಯೆ LIX ತಿದ್ದುಪಡಿ.–** 1949ರ ಮುಂಬಯೀ ಪ್ರಾಂತೀಯ ಪೌರಸಭಾ ನಿಗಮಗಳ ಅಧಿನಿಯಮದಲ್ಲಿ, 431ನೇ ಪ್ರಕರಣದ ತರುವಾಯ ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**431 ಕ. ಬಸ್ಸು ನಿಲುಗಡೆಗಳಿಗೆ, ಪ್ರಯಾಣಿಕರ ಆಶ್ರಯಗಳಿಗೆ ಲೈಸೆನ್ಸು ಕೊಡುವಿಕೆಯ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ ಇತ್ಯಾದಿ.–** ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ,–

(1) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಪೌರಸಭೆ ನಿಗಮದಲ್ಲಿ ನಿಹಿತವಾಗಿರುವ ಯಾವುದೇ ರಸ್ತೆ ಅಥವಾ ಭೂಮಿಯ ಮೇಲೆ ಬಸ್ಸುಗಳ ನಿಲುಗಡೆಯ ಸ್ಥಳವನ್ನು ತೋರಿಸುವ ಸ್ತಂಭಗಳನ್ನು ಜೋಡಿಸುವುದು ಅಥವಾ ಸ್ಥಾಪಿಸುವುದು ಅಥವಾ ಪ್ರಯಾಣಿಕರ ಆಶ್ರಯಗಳು, ಟಿಕೇಟು ಬೂತುಗಳು ಮತ್ತು ಬಸ್ ನಿಲ್ದಾಣಗಳನ್ನು ಸ್ಥಾಪಿಸುವುದು ಅಥವಾ ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಲೈಸೆನ್ಸು ಅಥವಾ ಅನುಮತಿಯು ಅವಶ್ಯವಿರತಕ್ಕದ್ದಲ್ಲ:

ಪರಂತು ಈ ಪ್ರಕರಣದ ಮೇರೆಗೆ ಯಾವುದೇ, ಪ್ರಯಾಣಿಕರ ಆಶ್ರಯ, ಟಿಕೆಟು ಬೂತು, ಅಥವಾ ಬಸ್ಸು ನಿಲ್ದಾಣವನ್ನು ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಸ್ಥಾಪಿಸತಕ್ಕದ್ದಲ್ಲ ಅಥವಾ ನಿರ್ಮಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ಮಿಸಲಾದ ಪ್ರಯಾಣಿಕರ ಆಶ್ರಯ ಟಿಕೆಟು ಬೂತುಗಳು ಮತ್ತು ಬಸ್ಸು ನಿಲ್ದಾಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು, ಮುನ್ಸಿಪಲ್ ನಿಗಮಕ್ಕೆ ಅವರು ಒಪ್ಪಿಕೊಳ್ಳಬಹುದಾದ ಮತ್ತು ಅಂಥ ಯಾವುದೇ ಒಪ್ಪಂದವಿಲ್ಲದಿರುವಲ್ಲಿ ಸರ್ಕಾರವು ನಿರ್ಧರಿಸಬಹುದಾದಂಥ ವಾರ್ಷಿಕ ಭೂ ಬಾಡಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರತಕ್ಕದ್ದು.

**4. 1949ರ ಮುಂಬಯಿ ಅಧಿನಿಯಮ ಸಂಖ್ಯೆ LIXರ ತಿದ್ದುಪಡಿ.–** 1949ರ ಮುಂಬಯಿ ಪ್ರಾಂತೀಯ ಪೌರಸಭಾ ನಿಗಮಗಳ ಅಧಿನಿಯಮದಲ್ಲಿ (1949ರ ಮುಂಬಯಿ ಅಧಿನಿಯಮ ಸಂಖ್ಯೆ LIX).

(1) 127ನೇ ಪ್ರಕರಣದ (2)ನೇ ಉಪಪ್ರಕರಣದ ತರುವಾಯ, ಈ ಕೆಳಕಂಡ ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(2–ಕ) ನಿಗಮವು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಸ್ಥಿರ ಸ್ವತ್ತಿನ ವರ್ಗಾವಣೆಗಳ ಮೇಲೆ ಹೆಚ್ಚಿನ ಸ್ಟ್ಯಾಂಪು ಸುಂಕದ ರೂಪದಲ್ಲಿ ಸುಂಕವನ್ನು ವಿಧಿಸಬಹುದು"

(2) 149ನೇ ಪ್ರಕರಣದ ತರುವಾಯ ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"149–ಕ ಸ್ಥಿರ ಸ್ವತ್ತುಗಳ ವರ್ಗಾವಣೆಗಳ ಮೇಲೆ ಸುಂಕ.–** ಸ್ಥಿರಸ್ವತ್ತು ವರ್ಗಾವಣೆಗಳ ಮೇಲೆ ಮಾರಾಟ ದಾನ, ಅಡಮಾನ, ವಿನಿಯಮ ಮತ್ತು ಶಾಶ್ವತ ಗೇಣಿ ಲಿಖಿತಗಳ ಮೇಲೆ ಅಥವಾ ನಿಗಮದ ಪರಿಮಿತಿಯೊಳಗಿರುವ ಸ್ಥಿರ ಸ್ವತ್ತಿನ ಮೇಲೆ 1957ರ ಕರ್ನಾಟಕ ಸ್ಟ್ಯಾಂಪು ಅಧಿನಿಯಮದ ಮೂಲಕ ವಿಧಿಸಿದ ಸುಂಕದ ಮೇಲೆ ಅಧಿಭಾರದ ರೂಪದಲ್ಲಿ ಸಂದರ್ಭಾನುಸಾರ, ಮಾರಾಟ ಅಥವಾ ದಾನದ ವಿಷಯವಸ್ತುವಾಗಿರುವಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ಅಡಮಾನದ ಮೂಲಕ ಭದ್ರತೆ ಒದಗಿಸಿದ ಮೊಬಲಗು ಅಥವಾ ಅಡಮಾನದ ವಿನಿಮಯದ ವಿಷಯ ವಸ್ತುವಾಗಿ ವಿಷಯವಾಗಿರುವಂಥದರ ಹೆಚ್ಚಿನ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ಲಿಖಿತದಲ್ಲಿ ಗೇಣಿಯ ಸಂದರ್ಭದಲ್ಲಿ ಮೊದಲು ಹತ್ತು ವರ್ಷಗಳಿಗಾಗಿನ ಬಾಡಿಗೆ ಮೌಲ್ಯದ ಮೇಲೆ ಶೇಕಡ ಎರಡಕ್ಕೆ ಮೀರದ ಸುಂಕವನ್ನು ವಿಧಿಸತಕ್ಕದ್ದು."

(2) ವರ್ಗಾವಣೆ ಸುಂಕವನ್ನು ಜಾರಿಗೊಳಿಸಿದ ಮೇಲೆ,–

(ಕ) 1957ರ ಕರ್ನಾಟಕ ಸ್ಟ್ಯಾಂಪು ಅಧಿನಿಯಮದ 28ನೇ ಪ್ರಕರಣವನ್ನು ನಿಗಮದ ಮಿತಿಯೊಳಗೆ ಮತ್ತು ಹೊರಗೆ ಇರುವ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ವಿವರಿಸಬೇಕಾದ ವಿವರಗಳನ್ನು ಅದು ನಿರ್ದಿಷ್ಟವಾಗಿ ಅಗತ್ಯಪಡಿಸಿದ್ದರೆ ಹೇಗೋ ಹಾಗೆ ಓದಿಕೊಳ್ಳತಕ್ಕದ್ದು;

(ಖ) 1957ರ ಕರ್ನಾಟಕ ಸ್ಟ್ಯಾಂಪು ಅಧಿನಿಯಮದ 61ನೇ ಪ್ರಕರಣವನ್ನು ಅದು ನಿಗಮ ಹಾಗೂ ಸರ್ಕಾರಕ್ಕೆ ಉಲ್ಲೇಖಿಸಿದ್ದರೆ ಹೇಗೋ ಹಾಗೆ ಓದಿಕೊಳ್ಳತಕ್ಕದ್ದು.

(3) ಯಾವುದೇ ಸುಂಕವನ್ನು,-

(i) ರಾಜ್ಯ ಸರ್ಕಾರದಿಂದ ಅಥವಾ ಅದರ ಪರವಾಗಿ ಅಥವಾ ರಾಜ್ಯ ಸರ್ಕಾರದ ಹೆಸರಿನಲ್ಲಿ ಬರೆದುಕೊಟ್ಟ ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ, ಈ ಅಂಥ ಲಿಖಿತಕ್ಕೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ವರ್ಗಾವಣೆ ಸುಂಕವನ್ನು ಈ ವಿನಾಯಿತಿಯನ್ನು ಕೊಡದಿದ್ದೆ ರಾಜ್ಯ ಸರ್ಕಾರವು ಸಂದಾಯ ಮಾಡಲು ಹೊಣೆಯಾಗಬಹುದಾಗಿರುವ ಸಂದರ್ಭಗಳಲ್ಲಿ; ಅಥವಾ

(ii) 1957ರ ಕರ್ನಾಟಕ ಸ್ಟ್ಯಾಂಪು ಅಧಿನಿಯಮದ ಮೇರೆಗೆ ಸ್ಟ್ಯಾಂಪು ಶುಲ್ಕದಿಂದ ವಿನಾಯತಿಗೊಂಡ ಯಾವುದೇ ಲಿಖಿತಕ್ಕೆ ಸಂಬಂಧಿಸಿದಂತೆ ವಿಧಿಸತಕ್ಕದ್ದಲ್ಲ;

(4) ರಾಜ್ಯ ಸರ್ಕಾರವು, ಸುಂಕದ ಸಂಗ್ರಹಣೆ ನಿಗಮಕ್ಕೆ ಅದರ ಸಂದಾಯ ಮತ್ತು ಅದನ್ನು ಸಂಗ್ರಹಿಸಲು ಸರ್ಕಾರವು ವಹಿಸಿದ ಯಾವುದೇ ವೆಚ್ಚಗಳ ಕಳೆತವನ್ನು ನಿಯಂತ್ರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

**386. 1959ರ ಮೈಸೂರು ಅಧಿನಿಯಮ 10ರ ತಿದ್ದುಪಡಿ.–** 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮದಲ್ಲಿ,-

(ಕ) 95ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "XIನೇ ಅಧ್ಯಾಯದ ಮೇರೆಗೆ ರಚಿಸಿದ ಪಟ್ಟಣ ಪ್ರದೇಶ ಸಮಿತಿ" ಎಂಬ ಪದಗಳು ಮತ್ತು ಅಂಕಿಗಳಿಗೆ ಬದಲಾಗಿ "1964ರ ಕರ್ನಾಟಕ ಪೌರಸಭೆಗಳ ಅಧಿನಿಯಮದ ಮೇರೆಗೆ ರಚಿಸಿದ ಅಧಿಸೂಚಿತ ಪ್ರದೇಶ ಸಮಿತಿ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಖ) 210ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ (ಡ), (ಕ) ಮತ್ತು (ಣ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು;

(ಗ) 221ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಸ್ಥಳೀಯ ಪ್ರಾಧಿಕಾರ" ಎಂಬ ಪದಗಳಿಗೆ ಬದಲಾಗಿ "ಪಂಚಾಯತಿ ಅಥವಾ ತಾಲ್ಲೂಕು ಮಂಡಲಿ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಘ) 223ನೇ ಪ್ರಕರಣದಲ್ಲಿ "ಸ್ಥಳೀಯ ಪ್ರಾಧಿಕಾರ" ಎಂಬ ಪದಗಳಿಗೆ ಬದಲಾಗಿ ಅದು ಬರುವೆಡೆಯಲ್ಲೆಲ್ಲ "ಪಂಚಾಯಿತಿ ಅಥವಾ ತಾಲ್ಲೂಕು ಮಂಡಲಿ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**387. ಯೋಜನಾ ಪ್ರಾಧಿಕಾರದೊಂದಿಗೆ ಸಮಾಲೋಚನೆ.–** ಮುನ್ಸಿಪಲ್ ಕೌನ್ಸಿಲು, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದ ಮೇರೆಗೆ ಯೋಜನಾ ಪ್ರಾಧಿಕಾರವನ್ನು ರಚಿಸದೆ ಇರುವ ಸ್ಥಳಗಳಲ್ಲಿ ಪಟ್ಟಣ ಯೋಜನೆಗೆ ಸಂಬಂಧಿಸಿದ ವಿಷಯಗಳಲ್ಲಿ ಅತಿ ಸಮೀಪದ ಯೋಜನಾ ಪ್ರಾಧಿಕಾರದೊಡನೆ ಸಮಾಲೋಚಿಸತಕ್ಕದ್ದು.

**388. ಪೌರಾಡಳಿತ ನಿರ್ದೇಶನಾಲಯ.–** ರಾಜ್ಯ ಸರ್ಕಾರವು, ತಾನು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಪೌರಾಡಳಿತ ನಿರ್ದೇಶನಾಲಯವನ್ನು ಸ್ಥಾಪಿಸತಕ್ಕದ್ದು. ನಿರ್ದೇಶನಾಲಯದ ರಚನೆ, ಪ್ರಕಾರ್ಯಗಳು, ಅಧಿಕಾರಗಳು ಮತ್ತು ಕರ್ತವ್ಯಗಳು ನಿಯಮಿಸಬಹುದಾದಂಥವುಗಳು ಆಗಿರತಕ್ಕದ್ದು.

## ಅನುಸೂಚಿ– I

## (ಪ್ರಕರಣ–94)

**ಕಟ್ಟಡಗಳು ಅಥವಾ ಭೂಮಿಯ ಮೇಲೆ ಗರಿಷ್ಠ ತೆರಿಗೆ, ನಾಯಿಗಳ ಮೇಲಿನ ತೆರಿಗೆ, ವಿಶೇಷ ನೈರ್ಮಲ್ಯ, ಉಪಕರ, ಸಾಮಾನ್ಯ ಉಪಕರ, ನೀರಿನ ದರಗಳು ಮತ್ತು ದೀಪದ ತೆರಿಗೆ**

| | ತೆರಿಗೆಗಳು | ಒಂದು ವರ್ಷಕ್ಕೆ ಗರಿಷ್ಠ ದರ |
|---|---|---|
| ಕ. | ಕಟ್ಟಡ ಅಥವಾ ಭೂಮಿ ಅಥವಾ ಅವೆರಡರ ಮೇಲಿನ ತೆರಿಗೆ | |
| | [ * * * ] | |
| | ii) ಕಟ್ಟಡಗಳು ಅಥವಾ ಭೂಮಿಗಳು ಅಥವಾ ಅವೆರಡೂ. | |
| | [ * * * ] | |
| | (ಕ) ನಗರ ಪೌರ ಸಭೆಗಳಲ್ಲಿ | ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಮೇಲೆ ಶೇ. ಹತ್ತು |
| | (ಖ) ಪಟ್ಟಣ ಪೌರ ಸಭೆಗಳಲ್ಲಿ | ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಮೇಲೆ ಶೇ. ಎಂಟು |
| ಖ. | ನಾಯಿಗಳ ಮೇಲೆ ತೆರಿಗೆ | ತಲಾ ಒಂದು ರೂಪಾಯಿ |
| ಗ. | ವಿಶೇಷ ನೈರ್ಮಲ್ಯ ಉಪಕರ | ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಶೇ. ಮೂರು |
| ಘ. | ಸಾಮಾನ್ಯ ನೈರ್ಮಲ್ಯ ಉಪಕರ | ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಶೇ. ನಾಲ್ಕು |
| ಙ. | ನೀರು ದರ ಅಥವಾ ನೀರಿನ ದರಗಳು | ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಶೇ. ಏಳು |
| ಚ. | ದೀಪದ ತೆರಿಗೆ | ವಾರ್ಷಿಕ ತೆರಿಗೆಗೆ ಗುರಿಯಾಗುವ ಮೌಲ್ಯದ ಶೇ. ಮೂರು |

**(ಅನುಸೂಚಿ– II * * *)**

**ಅನುಸೂಚಿ–III**

**(ಪ್ರಕರಣ 94)**

**ಪೌರಸಭಾ ಪರಿಮಿತಿಗಳೊಳಗೆ ಪ್ರವೇಶಿಸಿದ ಮೇಲೆ ಸಂದಾಯ ಮಾಡಬೇಕಾದ ದಾರಿ ಸುಂಕಗಳ ಗರಿಷ್ಠ ದರಗಳು**

| | ರೂ. ಪೈ. |
|---|---|
| 1957ರ ಕರ್ನಾಟಕ ಮೋಟಾರು ವಾಹನಗಳ ಮೇಲೆ ತೆರಿಗೆ ನಿರ್ಧರಣಾ ಅಧಿನಿಯಮದ ಮೇರೆಗೆ ಪೌರಸಭೆಯ ದಾರಿ ಸುಂಕದಿಂದ ವಿನಾಯಿತಿ ಪಡೆದವುಗಳನ್ನು ಹೊರತುಪಡಿಸಿ 1939ರ ಮೋಟಾರು ವಾಹನಗಳ ಅಧಿನಿಯಮದಲ್ಲಿ (1939ರ ಕೇಂದ್ರ ಅಧಿನಿಯಮ IV) ಪರಿಭಾಷಿಸಲಾದಂತೆ ಸರಕು ವಾಹನ ಅಥವಾ ಮಜಲು ವಾಹನ | 2–00 |
| 1957ರ ಕರ್ನಾಟಕ ಮೋಟಾರು ವಾಹನಗಳ ಮೇಲೆ ತೆರಿಗೆ ನಿರ್ಧರಣಾ ಅಧಿನಿಯಮದ ಮೇರೆಗೆ ಪೌರಸಭಾ ದಾರಿ ಸುಂಕದಿಂದ ವಿನಾಯಿತಿ ಪಡೆದವುಗಳನ್ನು ಹೊರತುಪಡಿಸಿ 1939ರ ಮೋಟಾರು ವಾಹನಗಳ ಅಧಿನಿಯಮದಲ್ಲಿ (1939ರ ಕೇಂದ್ರ ಅಧಿನಿಯಮ IV) ಪರಿಭಾಷಿಸಲಾದಂತೆ ಮೋಟಾರು ಬಂಡಿ | 2–00 |
| 1957ರ ಕರ್ನಾಟಕ ಮೋಟಾರು ವಾಹನಗಳ ಮೇಲೆ ತೆರಿಗೆ ವಿಧಿಸುವ ಅಧಿನಿಯಮದ ಮೇರೆಗೆ ಪೌರಸಭಾ ದಾರಿ ಸುಂಕದಿಂದ ವಿನಾಯಿತಿ ಪಡೆದವುಗಳನ್ನು ಹೊರತುಪಡಿಸಿ ಸರಕು ವಾಹನಕ್ಕೆ ಜೋಡಿಸಲಾದ ಟ್ರೇಲರ್ | 1–00 |
| ನಾಲ್ಕು ಚಕ್ರದ ಪ್ರತಿಯೊಂದು ವಾಹನದ ಮೇಲೆ | 0–50 |
| ಜಟಕಾವನ್ನು ಹೊರತುಪಡಿಸಿ ಸ್ಪ್ರಿಂಗ್‌ಗಳ ಮೇಲಿರುವ ಎರಡು ಚಕ್ರಗಳ ಪ್ರತಿಯೊಂದು ವಾಹನದ ಮೇಲೆ | 0–25 |
| ಹೇರಿದ ಪ್ರತಿಯೊಂದು ಜಟಕಾದ ಮೇಲೆ | 0–15 |
| ಹೇರಿರದ ಪ್ರತಿಯೊಂದು ಜಟಕಾದ ಮೇಲೆ | 0–10 |
| ಟ್ರೈಸಿಕಲ್ ಅಥವಾ ಬೈಸಿಕಲ್ಲನ್ನೂ ಒಳಗೊಂಡು ಸ್ಪ್ರಿಂಗುಗಳನ್ನು ಹೊಂದಿದ ಪ್ರತಿಯೊಂದು ಗಾಡಿ ಅಥವಾ ಇತರ ವಾಹನದ ಮೇಲೆ | 0–15 |
| ಸ್ಪ್ರಿಂಗ್‌ಗಳ ಮೇಲಲ್ಲದ, ಆದರೆ ಎರಡು ಎತ್ತುಗಳು, ಎಮ್ಮೆಗಳು, ಕುದುರೆಗಳು, ಪೋನಿಗಳು, ಕತ್ತೆಗಳು ಅಥವಾ ಹೇಸರಗತ್ತೆಗಳಿಂದ ಎಳೆಯಲಾದ ಹೇರಿದ ಪ್ರತಿಯೊಂದು ಗಾಡಿ ಅಥವಾ ಇತರ ವಾಹನದ ಮೇಲೆ | 0–25 |
| ಸ್ಪ್ರಿಂಗ್‌ಗಳ ಮೇಲಿಲ್ಲದ, ಆದರೆ ಎರಡು ಎಮ್ಮೆಗಳು, ಎತ್ತುಗಳು, ಕುದುರೆಗಳು, ಪೋನಿಗಳು, ಕತ್ತೆಗಳು ಅಥವಾ ಹೇಸರಗತ್ತೆಗಳಿಂದ ಎಳೆಯಲಾದ ಹೇರಿರದ ಪ್ರತಿಯೊಂದು ಗಾಡಿ ಅಥವಾ ಇತರ ವಾಹನದ ಮೇಲೆ | 0–15 |

| | |
|---|---|
| ಸ್ಪ್ರಿಂಗ್‌ಗಳ ಮೇಲಿಲ್ಲದ, ಆದರೆ ಒಂದು ಎತ್ತು, ಎಮ್ಮೆ, ಕುದುರೆ, ಪೋನಿ, ಕತ್ತೆ ಅಥವಾ ಹೇಸರಗತ್ತೆಯಿಂದ ಎಳೆಯಲಾದ ಹೇರಿದ ಪ್ರತಿಯೊಂದು ಗಾಡಿ ಅಥವಾ ಇತರ ವಾಹನದ ಮೇಲೆ | 0–15 |
| ಸ್ಪ್ರಿಂಗ್‌ಗಳ ಮೇಲಿಲ್ಲದ, ಆದರೆ ಒಂದು ಎತ್ತು, ಎಮ್ಮೆ, ಕುದುರೆ, ಪೋನಿ, ಕತ್ತೆ ಅಥವಾ ಹೇಸರಗತ್ತೆಯಿಂದ ಎಳೆಯಲಾದ ಹೇರಿರದ ಪ್ರತಿಯೊಂದು ಗಾಡಿ ಅಥವಾ ಇತರ ವಾಹನದ ಮೇಲೆ | 0–10 |

## ಅನುಸೂಚಿ–IV

### (ಪ್ರಕರಣ 94)

### ಗರಿಷ್ಠ ತೆರಿಗೆ ನಿರ್ಧರಣೆಯ ದರಗಳಿಂದ ತೆರಿಗೆ ನಿರ್ಧರಣೆಗೆ ಗುರಿಯಾಗುವ ವಾಹನಗಳು, ದೋಣಿಗಳು ಮತ್ತು ಪ್ರಾಣಿಗಳು

| | ವಾರ್ಷಿಕ ರೂ. ಪೈ. |
|---|---|
| ಸ್ಪ್ರಿಂಗ್‌ಗಳಿಂದ ರಚಿಸಿದ ಎರಡು ಅಥವಾ ಹೆಚ್ಚಿನ ಕುದುರೆಗಳಿಂದ ಎಳೆಯಲಾಗುವ ಪ್ರತಿಯೊಂದು ನಾಲ್ಕು ಚಕ್ರಗಳ ವಾಹನಕ್ಕೆ | 20–00 |
| ಸ್ಪ್ರಿಂಗ್‌ಗಳಿಂದ ರಚಿಸಿದ ಒಂದು ಕುದುರೆ, ಹೋರಿ ಅಥವಾ ಎತ್ತು ಅಥವಾ ಹದಿಮೂರು ಹಸ್ತಗಳಿಗಿಂತ ಕಡಿಮೆಯಿರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಕುದುರೆಗಳು, ಹೋರಿಗಳು, ಅಥವಾ ಎತ್ತುಗಳಿಂದ ಎಳೆಯಲಾಗುವ ಪ್ರತಿಯೊಂದು ನಾಲ್ಕು ಚಕ್ರಗಳ ವಾಹನಕ್ಕೆ | 10–00 |
| ಸ್ಪ್ರಿಂಗ್‌ಗಳಿಂದ ರಚಿಸಿದ ಒಂದು ಅಥವಾ ಅದಕ್ಕಿಂತ ಹೆಚ್ಚು ಕುದುರೆಗಳು, ಹೋರಿಗಳು ಅಥವಾ ಎತ್ತುಗಳಿಂದ ಎಳೆಯಲಾಗುವ ಪ್ರತಿಯೊಂದು ದ್ವಿಚಕ್ರ ವಾಹನಕ್ಕೆ | 6–00 |
| ಸ್ಪ್ರಿಂಗ್‌ಗಳಿಂದ ಕೂಡಿದ ಪ್ರತಿಯೊಂದು ವಾಹನಕ್ಕೆ ಮತ್ತು ಪ್ರತಿಯೊಂದು ಪಲ್ಲಕ್ಕಿಗೆ | 6–00 |
| ಸ್ಪ್ರಿಂಗ್‌ಗಳಿಲ್ಲದ ಪ್ರತಿಯೊಂದು ಗಾಡಿ ಅಥವಾ ಇತರ ವಾಹನಕ್ಕೆ | 4–00 |
| ಪ್ರತಿಯೊಂದು ದೋಣಿಗೆ | 4–00 |
| ಪ್ರತಿಯೊಂದು ಬೈಸಿಕಲ್ ಅಥವಾ ಟ್ರೈಸಿಕಲ್‌ಗೆ | 3–00 |
| ಪ್ರತಿಯೊಂದು ಆನೆಗೆ | 24–00 |
| ಪ್ರತಿಯೊಂದು ಒಂಟೆಗೆ | 12–00 |
| ಹದಿಮೂರು ಹಸ್ತಗಳಿಂದ ಹೆಚ್ಚಿನ ಪ್ರತಿಯೊಂದು ಕುದುರೆಗೆ | 10–00 |
| ಹದಿಮೂರು ಹಸ್ತಗಳು ಅಥವಾ ಅದಕ್ಕಿಂತ ಕಡಿಮೆಯ ಪ್ರತಿಯೊಂದು ಕುದುರೆಗೆ | 4–00 |
| ಹನ್ನೊಂದು ಹಸ್ತಗಳಿಗಿಂತ ಕಡಿಮೆಯಿರುವ ಪ್ರತಿಯೊಂದು ಕುದುರೆಗೆ ಅಥವಾ ಪ್ರತಿಯೊಂದು ಹೇಸರಗತ್ತೆಗೆ | 2–00 |
| ಪ್ರತಿಯೊಂದು ಎತ್ತು ಅಥವಾ ಹೋರಿಗೆ | 1–00 |
| ಪ್ರತಿಯೊಂದು ಕೋಣಕ್ಕೆ | 1–00 |
| ಪ್ರತಿಯೊಂದು ಕತ್ತೆಗೆ | 0–50 |
| 1957ರ ಕರ್ನಾಟ ಮೋಟಾರು ವಾಹನಗಳ ತೆರಿಗೆ ನಿರ್ಧರಣ ಅಧಿನಿಯಮ ಮೇರೆಗೆ ಮುನ್ಸಿಪಲ್ ತೆರಿಗೆಯಿಂದ ವಿನಾಯಿತಿ ಪಡೆದವುಗಳನ್ನು ಹೊರತುಪಡಿಸಿ ಇತರ ಪ್ರತಿಯೊಂದು ಟ್ರೇಲರಿಗೆ | 10–00 |

(ಅನುಸೂಚಿ–V * * *)

## ಅನುಸೂಚಿ–VI

(ಪ್ರಕರಣ 94)

### ಅಂಗಡಿಗಳು ಮತ್ತು ಇತರ ವ್ಯವಹಾರ ಅಥವಾ ವೃತ್ತಿಯ ಸ್ಥಳಗಳ ಮೇಲೆ ತೆರಿಗೆಯ ಗರಿಷ್ಠ ದರಗಳು

| | ಬಾಬುಗಳು | ವರ್ಗ | | | | | |
|---|---|---|---|---|---|---|---|
| | | 1ನೆಯ | 2ನೆಯ | 3ನೆಯ | 4ನೆಯ | 5ನೆಯ | 6ನೆಯ |
| 1. | ಅಂಗಡಿಗಳು ಪ್ರತಿಯೊಂದು ವರ್ಷಕ್ಕೆ ಪ್ರತಿ ಅಂಗಡಿಗೆ | ರೂ. | ರೂ. | ರೂ. | ರೂ. | ರೂ. | ರೂ. |
| | ನಗರ ಪುರಸಭೆಗಳು | 100 | 80 | 60 | 40 | 20 | 10 |
| | ಪಟ್ಟಣ ಪೌರಸಭೆಗಳು | 50 | 40 | 30 | 20 | 10 | 5 |
| 2 | ಲಾಭದ ಉದ್ದೇಶಗಳಿಗಾಗಿ ವ್ಯವಹಾರ ಅಥವಾ ವೃತ್ತಿಯನ್ನು ನಡೆಸುತ್ತಿರುವ ಇತರ ಸ್ಥಳಗಳು ಪ್ರತಿಯೊಂದು ವರ್ಷಕ್ಕೆ ಪ್ರತಿ ಸ್ಥಳಕ್ಕೆ | | | | | | |
| | ನಗರ ಪೌರ ಸಭೆಗಳು | 50 | 40 | 30 | 20 | 10 | 5 |
| | ಪಟ್ಟಣ ಪೌರಸಭೆಗಳು | 30 | 25 | 20 | 10 | 4 | 2 |

**ವಿವರಣೆ:–** ಈ ಅನುಸೂಚಿಯ ಉದ್ದೇಶಗಳಿಗಾಗಿ ಅಂಗಡಿಯ ವರ್ಗವನ್ನು 95ನೇ ಪ್ರಕರಣದ ಮೇರೆಗೆ ಮಾಡಲಾದ ನಿರ್ಣಯಕ್ಕೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

## ಅನುಸೂಚಿ– VII

### (ಪ್ರಕರಣ–94)

### ಜಾಹೀರಾತುಗಳ ಮೇಲೆ ತೆರಿಗೆ

| ಕ್ರಮ ಸಂಖ್ಯೆ | ವಿವರಗಳು | ಪ್ರತಿ ವರ್ಷಕ್ಕೆ ತೆರಿಗೆಯ ಗರಿಷ್ಠ ಮೊಬಲಗು |
|---|---|---|
| 1. | ಭೂಮಿ, ಕಟ್ಟಡ, ಗೋಡೆ, ಪ್ರಕಟನಾ ಪಟಗಳು, ಚೌಕಟ್ಟು, ಸ್ತಂಭ ರಚನೆಗಳು ಇತ್ಯಾದಿಗಳ ಮೇಲೆ ದೀಪಾಲಂಕಾರ ಮಾಡದಿರುವ ಜಾಹೀರಾತು ರಚನೆಗಳು | ರೂ. ಪೈ. |
| | (ಕ) 1 ಚದರ ಮೀಟರುವರೆಗಿನ ಜಾಗಕ್ಕೆ | 10–00 |
| | (ಖ) 1 ಚದರ ಮೀಟರ್‌ಗಿಂತ ಹೆಚ್ಚಾಗಿ ಆದರೆ 2.5 ಚದರ ಮೀಟರ್‌ವರೆಗೆ | 16–00 |
| | (ಗ) ಪ್ರತಿಯೊಂದು ಹೆಚ್ಚಿನ 2.5 ಚದರ ಮೀಟರಿಗೆ ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ | 16–00 |
| 2. | ಎತ್ತುಗಳು, ಕುದುರೆಗಳು ಅಥವಾ ಇತರ ಪ್ರಾಣಿಗಳು ಅಥವಾ ಯಾವುದೇ ವಾಹನವನ್ನು ಹೊತ್ತ ಇತರ ಯಾವುದೇ ಸಾಧನದ ಮೂಲಕ ಎಳೆಯಲಾದ ವಾಹನಗಳ ಮೇಲೆ ಒಯ್ಯಲಾದ ದೀಪಾಲಂಕಾರ ಮಾಡದಿರುವ ಜಾಹೀರಾತುಗಳು. | |
| | (ಕ) 5 ಚದರ ಮೀಟರುವರೆಗಿನ ಜಾಗಕ್ಕೆ | 60–00 |
| | (ಖ) ಪ್ರತಿಯೊಂದು ಹೆಚ್ಚಿನ 5 ಚದರ ಮೀಟರು ಅಥವಾ ಕಡಿಮೆ ಜಾಗಕ್ಕೆ | 60–00 |
| 3. | ವಾಹನಗಳ ಮೇಲೆ ಒಯ್ಯಲಾದ ದೀಪಾಲಂಕೃತ ಜಾಹೀರಾತು ಫಲಕಗಳು | |
| | (ಕ) 5 ಚದರ ಮೀಟರ್‌ವರೆಗಿನ ಜಾಗಕ್ಕೆ | 75–00 |
| | (ಖ) ಪ್ರತಿಯೊಂದು 1 ಚದರ ಮೀಟರು ಅಥವಾ ಕಡಿಮೆ ಜಾಗಕ್ಕೆ | 15–00 |
| 4. | ಫಲಕಗಳನ್ನು ಹೊತ್ತುಕೊಂಡಿರುವವನು ಒಯ್ಯುವ ದೀಪಾಲಂಕೃತ ಜಾಹೀರಾತು ಫಲಕಗಳು | |
| | (ಕ) 1 ಚದರ ಮೀಟರನ್ನು ಮೀರದ ಪ್ರತಿಯೊಂದು ಫಲಕಕ್ಕೆ | 15–00 |
| | (ಖ) 1 ಚದರ ಮೀಟರ್ ಮೀರಿದ ಮತ್ತು 2.5 ಚದರ ಮೀಟರ್‌ವರೆಗಿನ ಪ್ರತಿಯೊಂದು ಫಲಕಕ್ಕೆ | 30–00 |
| | (ಗ) ಪ್ರತಿಯೊಂದು 1 ಚದರ ಮೀಟರ್ ಅಥವ ಕಡಿಮೆ ಜಾಗಕ್ಕೆ | 15–00 |
| 5. | ಫಲಕಗಳನ್ನು ಹೊತ್ತುಕೊಂಡಿರುವವನು ಒಯ್ಯುವ ದೀಪಾಲಂಕೃತ ಜಾಹೀರಾತು ಫಲಕಗಳು | |
| | (ಕ) 1 ಚದರ ಮೀಟರನ್ನು ಮೀರದ ಪ್ರತಿಯೊಂದು ಫಲಕಕ್ಕೆ | 30–00 |
| | (ಖ) 1 ಚದರ ಮೀಟರನ್ನು ಮೀರಿದ ಮತ್ತು 2.5 ಚದರ ಮೀಟರ್‌ವರೆಗಿನ ಪ್ರತಿಯೊಂದು ಫಲಕಕ್ಕೆ | 50–00 |
| | (ಗ) ಪ್ರತಿಯೊಂದು ಹೆಚ್ಚಿನ 1 ಚದರ ಮೀಟರ್ ಜಾಗಕ್ಕೆ ಅಥವಾ ಕಡಿಮೆ ಜಾಗಕ್ಕೆ | 30–00 |

6. ಭೂಮಿ ಕಟ್ಟಡ, ಗೋಡೆ ಅಥವಾ ಪ್ರಕಟಣಾ ಪಟಗಳು, ಚೌಕಟ್ಟು, ಸ್ತಂಭ ರಚನೆಗಳು ಇತ್ಯಾದಿಗಳ ಮೇಲೆ ದೀಪಾಲಂಕೃತ ಜಾಹೀರಾತುಗಳು

| | |
|---|---|
| (ಕ) 2 ಚದರ ಮೀಟರ್‌ವರೆಗಿನ ಜಾಗಕ್ಕೆ | 15–00 |
| (ಖ) 2 ಚದರ ಮೀಟರ್‌ಗಿಂತ ಹೆಚ್ಚಾದ ಮತ್ತು 5 ಚದರ ಮೀಟರ್‌ವರೆಗಿನ ಜಾಗಕ್ಕೆ | 30–00 |
| (ಗ) 5 ಚದರ ಮೀಟರ್‌ಗಿಂತ ಹೆಚ್ಚಾದ ಮತ್ತು 2.5 ಚದರ ಮೀಟರ್‌ವರೆಗಿನ ಜಾಗಕ್ಕೆ | 35–00 |
| (ಘ) ಪ್ರತಿ ಹೆಚ್ಚಿನ 2.5 ಚದರ ಮೀಟರ್ ಅಥವಾ ಕಡಿಮೆ ಜಾಗಕ್ಕೆ | 35–00 |

7. ಸಿನಿಮಾ ಮಂದಿರಗಳಲ್ಲಿ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಪ್ರೊಜೆಕ್ಟರ್ ಜಾರುಗಾಜುಗಳ ಸಾಧನಗಳು ಮತ್ತು ಅಂಥವೇ ಸಾಧನಗಳ ಮೂಲಕ ಪರದೆಗಳ ಮೇಲೆ ಪ್ರದರ್ಶಿಸಿದ ಜಾಹೀರಾತುಗಳು

| | |
|---|---|
| (ಕ) 5 ಚದರ ಮೀಟರುವರೆಗಿನ ಜಾಗಕ್ಕೆ | 50–00 |
| (ಖ) 5 ಚದರ ಮೀಟರುಗಿಂತ ಹೆಚ್ಚಾಗಿ ಆದರೆ 2.5 ಚದರ ಮೀಟರುವರೆಗಿನ ಜಾಗಕ್ಕೆ | 55–00 |
| (ಗ) ಪ್ರತಿ ಹೆಚ್ಚಿನ 2.5 ಚದರ ಮೀಟರು ಅಥವಾ ಅದಕ್ಕಿಂತ ಕಡಿಮೆ ಜಾಗಕ್ಕೆ | 55–00 |

8. ಬೀದಿಗಳಿಗೆ ಅಡ್ಡಲಾಗಿ ತೂಗು ಹಾಕಿದ ದೀಪಾಲಂಕೃತವಿಲ್ಲದ ಜಾಹಿರಾತುಗಳು

| | |
|---|---|
| (ಕ) 1 ಚದರ ಮೀಟರುವರೆಗಿನ ಜಾಗಕ್ಕೆ | 10–00 |
| (ಖ) 1 ಚದರ ಮೀಟರುಗಿಂತ ಹೆಚ್ಚಾಗಿ ಮತ್ತು 2.5 ಚದರ ಮೀಟರ್‌ವರೆಗಿನ ಜಾಗಕ್ಕೆ | 16–00 |
| (ಗ) ಪ್ರತಿ ಹೆಚ್ಚಿನ 2.5 ಚದರ ಮೀಟರು ಅಥವಾ ಕಡಿಮೆ ಜಾಗಕ್ಕೆ | 16–00 |

**ಟಿಪ್ಪಣಿ:–** 8ನೇ ಬಾಬಿನ ಮೇಲಿನ ತೆರಿಗೆಯು, ಮುನ್ಸಿಪಲ್ ಕಮಿಷನರು ಅಥವಾ ಚೀಫ್ ಆಫೀಸರನು ನಿರ್ಧರಿಸಬೇಕಾದ ಶ್ರೇಣಿಗನುಸಾರವಾಗಿ ವಿಧಿಸಬಹುದಾದಂಥ ಜಾಗದ ಜೊತೆಗೆ ಇರುವುದು

9. ಬರಿಯದಾಗಿ ನಿಂತಿರುವ ಅದರ ಜಾಹೀರಾತುದಾರನ ಹೆಸರನ್ನೂ ಹೊಂದಿರುವ ಅಥವಾ ಅದರ ಮೇಲೆ "ಬಾಡಿಗೆಗೆ ಇದೆ" ಎಂಬ ಪ್ರಕಟಣೆಯನ್ನು ಹೊಂದಿದ ದೀಪಾಲಂಕೃತವಿಲ್ಲದ ಜಾಹಿರಾತು ಪ್ರಕಟಣಾ ಫಲಕ–

| | |
|---|---|
| (ಕ) 1 ಚದರ ಮೀಟರುವರೆಗಿನ ಜಾಗಕ್ಕೆ | 5–00 |
| (ಖ) 1 ಚದರ ಮೀಟರುಗಿಂತ ಹೆಚ್ಚಾಗಿ 2.5 ಚದರ ಮೀಟರುವರೆಗಿನ ಜಾಗಕ್ಕೆ | 8–00 |
| (ಗ) ಪ್ರತಿ ಹೆಚ್ಚಿನ 2.5 ಚದರ ಮೀಟರು ಅಥವಾ ಕಡಿಮೆ ಜಾಗಕ್ಕೆ | 8–00 |

10. ಹರಾಜು ನಡೆಯುವ ಆವರಣಗಳನ್ನು ಹೊರತುಪಡಿಸಿ, ಪ್ರತಿಯೊಂದು ಹರಾಜು ಮಾರಾಟವನ್ನು ಜಾಹೀರಾತುಪಡಿಸಿ 100 ಪೌರಸಭಾ ದೀಪದ ಕಂಬದ ಮೇಲೆ ಫಲಕವನ್ನೂ ಪ್ರದರ್ಶಿಸುವುದಕ್ಕಾಗಿನ ಬಾಡಿಗೆಯನ್ನೊಳಗೊಂಡು ಸ್ಥಳದಲ್ಲಿನ ಮುಖ್ಯ ನಿವೇಶನದಲ್ಲಿ ಒಂದನ್ನು ಮತ್ತು ಪೌರಸಭೆಯ ದೀಪದ ಕಂಬದ ಮೇಲೆ ಮತ್ತೊಂದನ್ನು ಯುಕ್ತ ಗಾತ್ರದ ಎರಡು ಫಲಕಗಳಿಗಿಂತ ಹೆಚ್ಚಲ್ಲದ ಫಲಕಗಳನ್ನು ಹಾಕಲು ಹರಾಜುದಾರರಿಗೆ ತರಬೇತಿ.

## ಅನುಸೂಚಿ– VIII

**(ಪ್ರಕರಣ–112)**

### ಲಿಖಿತದ ಮೂಲಕ ವರ್ಗಾವಣೆಯನ್ನು ಮಾಡಿರುವಾಗ ಕೊಡಬೇಕಾದ ವರ್ಗಾವಣೆಯ ನೋಟೀಸಿನ ನಮೂನೆ

....................................... ಮುನ್ಸಿಪಲ್ ಕೌನ್ಸಿಲಿನ ಮುನ್ಸಿಪಲ್ ಕಮಿಷನರ್/ಚೀಫ್ ಆಫೀಸರನಿಗೆ, ಕ.ಖ ಆದ ನಾನು, 1964ರ ಕರ್ನಾಟಕ ಪೌರ ಸಭೆಗಳ ಅಧಿನಿಯಮ 111ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಕೆಳಕಂಡ ಸ್ವತ್ತು ವರ್ಗಾವಣೆಯ ಬಗ್ಗೆ ಈ ಮೂಲಕ ನೋಟೀಸು ಕೊಡುತ್ತೇನೆ.

| | | | | | ಸ್ವತ್ತಿನ ವಿವರ | | | | | | |
|---|---|---|---|---|---|---|---|---|---|---|---|
| ನೋಟೀಸಿನ ದಿನಾಂಕ | ಲಿಖಿತದ ದಿನಾಂಕ | ಮಾರಾಟ ಮಾಡುವವನ ಹಸ್ತಾಂತರಕಾರನ ಹೆಸರು | ಖರೀದಿದಾರನ ಅಥವಾ ಹಸ್ತಾಂತರಿತನ ಹೆಸರು | ಪ್ರತಿಫಲದ ಮೊಬಲಗು | ಅದು ಏನನ್ನು ಒಳಗೊಂಡಿದೆ | ಜಾಗ | ನಿರ್ಧರಣೆ ಪಟ್ಟಿಯಲ್ಲಿನ ಸಂಖ್ಯೆ | ಭೂಮಿಯ ಪಟ್ಟಿಯಲ್ಲಿನ ಸಂಖ್ಯೆ | ಎಲ್ಲೆಗಳು ಉದ್ದಗಲ | ಲಿಖಿತವನ್ನು ನೋಂದಾಯಿಸಿದ್ದರೆ ನೋಂದಣಿಯ ದಿನಾಂಕ | ಷರಾ |

ಸಹಿ ಕ.ಖ.

**ಅನುಸೂಚಿ– IX**

**(ಪ್ರಕರಣ–112)**

**ಲಿಖಿತ ಮೂಲಕವಲ್ಲದೆ ಅನ್ಯಥಾ ವರ್ಗಾವಣೆಯು ಅಥವಾ ಪ್ರಾಪ್ತಿಯು ಆಗಿರುವಾಗ ಕೊಡಬೇಕಾದ ವರ್ಗಾವಣೆಯ ನೋಟೀಸಿನ ನಮೂನೆ**

....................................... ಮುನ್ಸಿಪಲ್ ಕೌನ್ಸಿಲಿನ ಮುನ್ಸಿಪಲ್ ಕಮಿಷನರ್/ಚೀಫ್ ಆಫೀಸರನಿಗೆ, ಕ.ಖ ಆದ ನಾನು, 1964ರ ಕರ್ನಾಟಕ ಪೌರ ಸಭೆಗಳ ಅಧಿನಿಯಮ 111ನೇ ಪ್ರಕರಣದ ಮೂಲಕ ಅಗತ್ಯಪಡಿಸದಂತೆ ಕೆಳಕಂಡ ಸ್ವತ್ತು ವರ್ಗಾವಣೆ ಅಥವಾ ಪ್ರಾಪ್ತಿಯ ಬಗ್ಗೆ ಈ ಮೂಲಕ ನೋಟೀಸು ಕೊಡುತ್ತೇನೆ.

| ನೋಟೀಸಿನ ದಿನಾಂಕ | ಪೌರಸಭೆ ರಿಜಿಸ್ಟರುಗಳಲ್ಲಿ ಸದ್ಯದ ಸ್ವತ್ತು ಯಾರ ಹೆಸರಿನಲ್ಲಿ ಇದೆ | ಯಾರ ಹೆಸರಿಗೆ ಅದನ್ನು ವರ್ಗಾಯಿಸಬೇಕು | ಸ್ವತ್ತಿನ ವಿವರ | | | | | |
|---|---|---|---|---|---|---|---|---|
| | | | ಅದು ಏನನ್ನು ಒಳಗೊಂಡಿದೆ | ಜಾಗ | ನಿರ್ಧರಣೆ ಪಟ್ಟಿಯಲ್ಲಿನ ಸಂಖ್ಯೆ | ಭೂಮಿಯ ಉದ್ದಗಲ | ಎಲ್ಲೆಗಳು | ಷರಾ |

ಸಹಿ ಕ.ಖ.

**ಅನುಸೂಚಿ–X**

**(ಪ್ರಕರಣ–142)**

**ತಗಾದೆ ನೋಟೀಸಿನ ನಮೂನೆ**

19.................................................................. ದಿನದಂದು ಪ್ರಾರಂಭವಾಗಿ 19 .............................. ದಿನದಂದು ಕೊನೆಗೊಳ್ಳುವ .......................................ನ ಅವಧಿಗಾಗಿ ........................................................ ಮೇರೆಗೆ ........................................................................ ಬಗ್ಗೆ (ತೆರಿಗೆಯನ್ನು ವಿಧಿಸಬಹುದಾದಂಥ ಸ್ವತ್ತು ಅಥವಾ ಇತರ ವಿಷಯವನ್ನು ಇಲ್ಲಿ ವಿವರಿಸಿ) ವಿಧಿಸಬಹುದಾದ ..........................................................ದಿಂದ .................................................................. ಬಾಕಿಯಿರುವ .................................................. ಮೊತ್ತವನ್ನು ........................................................... ದಿಂದ .................................................. ಮುನ್ಸಿಪಲ್ ಕೌನ್ಸಿಲು ತಗಾದೆ ಮಾಡುತ್ತದೆ ಎಂದು ದಯವಿಟ್ಟು ತಿಳಿಯಿರಿ ಮತ್ತು ಈ ನೋಟೀಸು ಜಾರಿಯಾದಂದಿನಿಂದ ಮೂವತ್ತು ದಿನಗಳೊಳಗೆ ಸದರಿ ಮೊತ್ತವನ್ನು ...................................................................... ದಲ್ಲಿನ ಪೌರಸಭಾ ಕಚೇರಿಗೆ ಸಂದಾಯ ಮಾಡದಿದ್ದರೆ ಅಥವಾ ಸಂದಾಯ ಮಾಡದೇ ಇರುವುದಕ್ಕೆ ಮುನ್ಸಿಪಲ್ ಕೌನ್ಸಿಲಿಗೆ ಸಮಾಧಾನವಾಗುವಂತೆ ಸಾಕಷ್ಟು ಕಾರಣವನ್ನು ತೋರಿಸದಿದ್ದರೆ, ಅದನ್ನು ಖರ್ಚುಗಳ ಸಮೇತ ವಸೂಲು ಮಾಡುವುದಕ್ಕಾಗಿ ಕರಸ್ಥ ಅಥವಾ ಜಪ್ತಿಯ ವಾರಂಟನ್ನೂ ಹೊರಡಿಸಲಾಗುತ್ತದೆ.

19......................................ನ ಈ ದಿನಾಂಕದಂದು

ಸಹಿ/–

ಮುನ್ಸಿಪಲ್ ಕೌನ್ಸಿಲಿನ ಆದೇಶದ ಮೇಲೆ

## ಅನುಸೂಚಿ–XI

### (ಪ್ರಕರಣ–143)

### ವಾರೆಂಟಿನ ನಮೂನೆ

ಇವರಿಗೆ,

(ವಾರಂಟನ್ನು ಜಾರಿಗೊಳಿಸುವ ಜವಾಬ್ದಾರಿ ಹೊತ್ತ ಅಧಿಕಾರಿಯ ಹೆಸರನ್ನು ಇಲ್ಲಿ ಸೇರಿಸಿ)

................................................ ನ ಕ.ಖ.ನು, .............................. ಸಂಖ್ಯೆಯ ನಿಯಮದ ಮೇರೆಗೆ ವಿಧಿಸಬಹುದಾದಂಥ ಮೊತ್ತವನ್ನು 19 .............................. ದಿನಾಂಕದಂದು ಪ್ರಾರಂಭವಾಗಿ 19..................... ದಿನದಂದು ಕೊನೆಗೊಳ್ಳುವ ............................. ಅವಧಿಗಾಗಿ ................................. ಬಗ್ಗೆ ಬಾಕಿಯಿರುವ (ಇಲ್ಲಿ ಹೊಣೆಗಾರಿಕೆಯನ್ನು ವಿವರಿಸಿ) ................................. ಮೊತ್ತವನ್ನು ಸಂದಾಯ ಮಾಡದಿರುವುದರಿಂದ ಮತ್ತು ಸಂದಾಯ ಮಾಡದೆ ಇರುವುದಕ್ಕಾಗಿ ಸಮಾಧಾನಕರ ಕಾರಣವನ್ನು ತೋರಿಸದೆ ಇರುವುದರಿಂದ; ಮತ್ತು ಅದಕ್ಕಾಗಿನ ತಗಾದೆಯ ನೋಟೀಸನ್ನು ಅವನಿಗೆ ಜಾರಿ ಮಾಡಿದಂದಿನಿಂದ ಮೂವತ್ತು ದಿನಗಳು ಕಳೆದಿರುವುದರಿಂದ;

...................................... ರೂಪಾಯಿಗಳ ಸದರಿ ಮೊತ್ತಕ್ಕೆ ಸರಿ ಸಮಾನರಾಗಿ ಸಮಾನವಾದ ಮೌಲ್ಯದ ಸದರಿ ಕ.ಖ.ನ ಚರಸ್ವತ್ತು / ಸ್ಥಿರ ಸ್ವತ್ತು (ಕೆಳಗೆ ವಿವರಿಸಲಾದ) 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಉಪವಿಧಿಗಳಿಗೆ ಒಳಪಟ್ಟು ಕರಸ್ಥಗೊಳಿಸಲು/ಜಫ್ತಿ ಮಾಡಲು ಮತ್ತು ಅದರ ಮೇರೆಗೆ ನೀನು ಅಭಿಗ್ರಹಿಸಿದ/ಜಫ್ತಿ ಮಾಡಿದ ಸ್ವತ್ತಿನ ಎಲ್ಲ ವಿವರಗಳನ್ನೂ ವಾರಂಟಿನೊಂದಿಗೆ ನನಗೆ ತತ್‌ಕ್ಷಣವೇ ಪ್ರಮಾಣೀಕರಿಸಲು ನಿನಗೆ ನಿರ್ದೇಶಿಸಲಾಗಿದೆ.

19.................................... ದಿನಾಂಕದಂದು

(ಸಹಿ/–)

ಸ್ಥಿರ ಸ್ವತ್ತಿನ ವಿವರ

## ಅನುಸೂಚಿ–XII

**(ಪ್ರಕರಣ–129 ಮತ್ತ 148)**

**ವಿವರಣಾ ಪತ್ರ ಮತ್ತು ನೋಟೀಸಿನ ನಮೂನೆ**

.............................................. ನಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ ............................. ರವರಿಗೆ ತಗಾದೆ ನೋಟೀಸಿನ ಜಾರಿಗಾಗಿ ಸಲ್ಲಿಸತಕ್ಕ ................................ ರೂಪಾಯಿಗಳ ಮತ್ತು ವಾರಂಟಿಗಾಗಿ ಸಲ್ಲಿಸತಕ್ಕ ................................ ರೂಪಾಯಿಗಳೊಡಗೂಡಿ 19 ............................. ರ ದಿನದಿಂದ ಪ್ರಾರಂಭವಾಗಿ 19 .....................ದ ದಿವಸದಂದು ಕೊನೆಗೊಳ್ಳುವ ಅವಧಿಗಾಗಿ ಅಂಚಿನಲ್ಲಿರುವ ನಮೂದಿಸಿರುವ (ಇಲ್ಲಿ ಹೊಣೆಯನ್ನು ವಿವರಿಸಿ) .................................... ಈ ಮೌಲ್ಯಕ್ಕಾಗಿ, ಇದಕ್ಕೆ ಲಗತ್ತಿಸಿದ ವಿವರಣಾ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತನ್ನು ಈ ದಿನ ನಾನು ಜಪ್ತಿ ಮಾಡಿದ್ದೇನೆಂದು ದಯವಿಟ್ಟು ತಿಳಿಯಿರಿ ಮತ್ತು ಈ ನೋಟೀಸು ಜಾರಿಯಾದ ದಿನಾಂಕದಿಂದ ಹತ್ತು ದಿವಸಗಳೊಳಗಾಗಿ ......................... ನಲ್ಲಿನ ಪೌರಸಭಾ ಕಚೇರಿಗೆ ಸದರಿ ಮೊಬಲಗನ್ನು ವಸೂಲ್ಮಾಡುವ ಖರ್ಚುಗಳ ಸಮೇತ ನೀನು ಸಂದಾಯ ಮಾಡದಿದ್ದರೆ, ಸದರಿ ಸ್ವತ್ತನ್ನು ಮಾರಾಟ ಮಾಡಲಾಗುವುದು.

19.................................... ದ ದಿನಾಂಕ ...............

ವಾರಂಟನ್ನು ಜಾರಿ ಮಾಡುವ/ದಾರಿ ಸುಂಕವನ್ನು
ಸಂಗ್ರಹಿಸುವ ಅಧಿಕಾರಿಯ ರುಜು

ವಿವರಣ ಪತ್ರ

(ಇಲ್ಲಿ ಜಪ್ತಿ ಮಾಡಿದ ಸ್ವತ್ತಿನ ವಿವರಗಳನ್ನು ನಮೂದಿಸಿ)

## ಅನುಸೂಚಿ–XIII

## (ಪ್ರಕರಣ 256)

## ಭಾಗ–I

ಲೈಸೆನ್ಸ್ ಇಲ್ಲದೆ ಯಾವ ಉದ್ದೇಶಗಳಿಗಾಗಿ ಆವರಣಗಳನ್ನು ಉಪಯೋಗಿಸತಕ್ಕದ್ದಲ್ಲವೋ ಆ ಉದ್ದೇಶಗಳು ಈ ಕೆಳಕಂಡ ಯಾವುವೇ ಕಸಬುಗಳನ್ನು ಅಥವಾ ಆ ಕಸಬುಗಳಿಗೆ ಸಂಬಂಧಿಸಿದ ಕಾರ್ಯಾಚರಣೆಗಳನ್ನು ನಡೆಸುವುದು:

1. ರೊಟ್ಟಿ ಸುಡುವುದು
2. ಚಲನಚಿತ್ರ ಫಿಲಂಗಳನ್ನು ತೆಗೆಯುವುದು.
3. ಯಾವುದೇ ವಿಧಾನದಿಂದ ಚಲನಚಿತ್ರ ಫಿಲಂಗಳನ್ನು ಸಂಸ್ಕರಿಸುವುದು
4. ಮೆಣಸಿನಕಾಯಿ ಅಥವಾ ಮಸಾಲೆ ಅಥವಾ ಕಾಳು ಅಥವಾ ಬೀಜಗಳನ್ನು ಯಾಂತ್ರಿಕ ಸಾಧನದ ಮೂಲಕ ಅರೆಯುವುದು.
5. ನೀಲಿ ಅಥವಾ ಇತರ ಬಣ್ಣಗಳಲ್ಲಿ ಬಟ್ಟೆ ನೂಲು ಅಥವಾ ಚರ್ಮಕ್ಕೆ ಬಣ್ಣ ಹಾಕುವುದು ಅಥವಾ ಮುದ್ರಿಸುವುದು
6. ಬಟ್ಟೆ ಅಥವಾ ನೂಲನ್ನು ಬಿಳಿ ಮಾಡುವುದು
7. ಭೋಜನಗೃಹ ಅಥವಾ ಆಹಾರ ಸರಬರಾಜಿನ ವ್ಯವಸ್ಥಾಪನೆಯನ್ನು ಇಡುವುದು.
8. ಧಾನ್ಯವನ್ನು ಹುರಿಯುವುದು
9. ನೆಲಗಡಲೆ ಬೀಜಗಳು, ಹುಣಸೆಬೀಜಗಳು ಅಥವಾ ಯಾವುದೇ ಇತರ ಬೀಜಗಳನ್ನು ಹುರಿಯುವುದು.
10. ಹೇರ್ ಡ್ರೆಸಿಂಗ್ ಸಲೂನ್ ಅಥವಾ ಕ್ಷೌರದ ಅಂಗಡಿಯನ್ನು ಇಡುವುದು
11. ಕಚ್ಚಾ ಅಥವಾ ಒಣಗಿದ ತೊಗಲು ಅಥವಾ ಚರ್ಮವನ್ನು ಹದ ಮಾಡುವುದು, ಬಿತ್ತುವುದು ಪ್ಯಾಕು ಮಾಡುವುದು
12. ಲಾಂಡ್ರಿ ಅಂಗಡಿ ಇಡುವುದು
13. ಯಂತ್ರ ಸಾಧನದ ಮೂಲಕ ಚರ್ಮದ ಸರಕುಗಳನ್ನು ತಯಾರಿಸುವುದು
14. ಕಲ್ಲಚ್ಚು ಮುದ್ರಣಾಲಯವನ್ನು ಇಡುವುದು
15. ವಸತಿ ಗೃಹವನ್ನು ಇಡುವುದು
16. ಲೋಹವನ್ನು ಎರಕ ಹೊಯ್ಯುವುದು
17. ಬೆಲೆ ಬಾಳುವ ಲೋಹಗಳನ್ನು ಶುದ್ಧೀರಿಸುವುದು ಅಥವಾ ಕಸೂತಿ ಕೆಲಸಗಳಿಂದ ಅವುಗಳನ್ನು ಪಡೆಯುವುದು
18. ಮುದ್ರಣಾಲಯವನ್ನು ಇಡುವುದು
19. ರೇಷ್ಮೆಗೂಡಿನಿಂದ ರೇಷ್ಮೆ ನೂಲು ತೆಗೆಯುವುದು

20. ಭೋಜನ ಗೃಹವಾಗಿ ಈಗಾಗಲೇ ಲೈಸೆನ್ಸು ಪಡೆದ ಆವರಣದಲ್ಲಿ ಅಲ್ಲದೆ ಮಿಠಾಯಿ ಅಂಗಡಿಯನ್ನು ಇಡುವುದು

21. (i) ಆಟೋ, ಕಾರು ಅಥವಾ ಆಟೋಸೈಕಲ್ ಸರ್ವಿಸಿಂಗ್ ಅಥವಾ ರಿಪೇರಿ ಮಾಡುವುದು

(ii) ಕಮ್ಮಾರಿಕೆ

(iii) ತಾಮ್ರ ಕೆಲಸ ಮಾಡುವುದು

(iv) ವಿದ್ಯುತ್ ಲೇಪನ ಮಾಡುವುದು

(v) ಗಾಜನ್ನು ಓರೆ ಮಾಡುವುದು

(vi) ಗಾಜು ಕತ್ತರಿಸುವುದು

(vii) ಗಾಜು ನಯಗೊಳಿಸುವುದು

(viii) ಅಕ್ಕಸಾಲಿ ಕೆಲಸ

(xi) ಅಮೃತಶಿಲೆ ಕತ್ತರಿಸುವುದು, ಅರೆಯುವುದು, ಸಜ್ಜು ಮಾಡುವುದು ಅಥವಾ ನಯಗೊಳಿಸುವುದು

(x) ಕಬ್ಬಿಣವುಳ್ಳ ಅಥವಾ ಕಬ್ಬಿಣವನ್ನು ಒಳಗೊಂಡ ಅಥವಾ ಆಂಟಿಮನಿ (ಆದರೆ ಬೆಲೆ ಬಾಳುವ ಲೋಹವನ್ನು ಹೊರತುಪಡಿಸಿ) ಲೋಹವನ್ನು ಕತ್ತರಿಸುವುದು, ಸುತ್ತಿಗೆಯಿಂದ ಬಡಿಯುವುದು, ಕೊರೆ ಕಾಯಿಸುವ ಮೂಲಕ ಅಥವಾ ಇತರ ಯಾವುದೇ ಕ್ರಮದ ಮೂಲಕ ಲೋಹವನ್ನು ಸಂಸ್ಕರಿಸುವುದು ಅಥವಾ ಲೋಹದ ಭಾಗಗಳನ್ನು ಜೋಡಿಸುವುದು, ಕೊರೆಯುವುದು, ಒತ್ತುವುದು, ಅರದಿಂದ ಉಜ್ಜುವುದು, ನಯಗೊಳಿಸುವುದು

(xi) ಫೋಟೋಗ್ರಾಫಿ ಸ್ಟುಡಿಯೋ

(xii) (ನಿಸ್ತಂತು ಸ್ವೀಕರಣ ಸೆಟ್ಟು) ರೇಡಿಯೋವನ್ನು ರಿಪೇರಿ ಮಾಡುವುದು, ಸಜ್ಜುಗೊಳಿಸುವುದು ಮತ್ತು ತಯಾರಿಸುವುದು

(xiii) ಬೆಳ್ಳಿ ಕೆಲಸ ಮಾಡುವುದು

(xiv) ವಿದ್ಯುತ್ ಸಹಾಯದಿಂದ ಹತ್ತಿ, ರೇಷ್ಮೆ, ಆರ್ಟ್ಸಿಲ್ಕು ಅಥವಾ ಸೆಣಬು ಅಥವಾ ಉಣ್ಣೆ ನೂಲುವುದು ಅಥವಾ ನೇಯುವುದು

(xv) ಕಲ್ಲು ಸಾಣೆ ಮಾಡುವುದು, ಕತ್ತರಿಸುವುದು, ಸಜ್ಜು ಮಾಡುವುದು ಅಥವಾ ನಯಗೊಳಿಸುವುದು

(xvi) ಯಂತ್ರ ಅಥವಾ ವಿದ್ಯುಚ್ಛಕ್ತಿಯಿಂದ ದಿಮ್ಮಿ ಅಥವಾ ಮರ ಕೊಯ್ಯುವುದು ಅಥವಾ ಕತ್ತರಿಸುವುದು.

(xvii) ತವರದ ಕೆಲಸ ಮಾಡುವುದು

(xviii) ಮಡಿವಾಳ ವೃತ್ತಿ

(xix) ವಿದ್ಯುತ್, ಅನಿಲ ಅಥವಾ ಯಾವುದೇ ಕ್ರಮದಿಂದ ಲೋಹವನ್ನು ಬೆಸೆಯುವುದು– ಇವುಗಳ ಕಸಬು ಅಥವಾ ವ್ಯವಹಾರವನ್ನು ಅಥವಾ ಈ ಕಸಬಿಗೆ ಸಂಬಂಧಿಸಿದ ಯಾವುದೇ ಕಾರ್ಯಾಚರಣೆಯನ್ನು ನಡೆಸುವುದು.

22. ಈ ಕೆಳಕಂಡ ಯಾವುದೇ ವಸ್ತುವನ್ನು ಯಾವುದೇ ಕ್ರಮದ ಮೂಲಕ ತಯಾರಿಸುವುದು, ಹುರಿಯುವುದು, ಪ್ಯಾಕ್ ಮಾಡುವುದು, ಒತ್ತುವುದು, ಶುದ್ಧಿಗೊಳಿಸುವುದು, ಸ್ವಚ್ಛಗೊಳಿಸುವುದು, ಕುದಿಸುವುದು, ಕರಗಿಸುವುದು, ಅರೆಯುವುದು ಅಥವಾ ಸಿದ್ಧಗೊಳಿಸುವುದು.

(i) ಇಂಗಾಲಾಮ್ಲ ಮಿಶ್ರಿತ ನೀರು

(ii) ಬೇಕ್‌ಲೈಟ್ ಸರಕುಗಳು

(iii) ಬೀಡಿಗಳು, (ದೇಶೀಯ ಸಿಗರೇಟುಗಳು) ನಶ್ಯ, ಚುಟ್ಟಾಗಳು ಅಥವಾ ಸಿಗರೇಟುಗಳು

(iv) ಬಿಟುಮನ್

(v) ಸಿಡಿಮದ್ದು

(vi) ಎಲುಬುಗಳು

(vii) ಕೈ ಶಕ್ತಿಯ ಮೂಲಕ ಇಟ್ಟಿಗೆಗಳು ಅಥವಾ ಹೆಂಚುಗಳು

(viii) ಯಂತ್ರ ಶಕ್ತಿಯ ಮೂಲಕ ಇಟ್ಟಿಗೆಗಳು ಅಥವಾ ಹೆಂಚುಗಳು

(ix) ಬ್ರಷ್‌ಗಳು

(x) ಮೇಣದ ಬತ್ತಿಗಳು

(xi) ಕರುಳುಹುರಿ

(xii) ಸೆಲ್ಯುಲಾಯ್ಡ್ ಅಥವಾ ಸೆಲ್ಯುಲಾಯ್ಡ್ ಸರಕುಗಳು

(xiii) ಸಿಮೆಂಟ್ ಕಾಂಕ್ರಿಟ್ ವಿನ್ಯಾಸಗಳು ಅಥವಾ ಮಾದರಿಗಳು

(xiv) ಇದ್ದಲು

(xv) ರಾಸಾಯನಿಕಗಳು

(xvi) ಯಾವುದೇ ಕಸುಬಿಗೆ ಸಂಬಂಧಪಟ್ಟ ಚಲನಚಿತ್ರ ಫಿಲಂಗಳ ಪಟ್ಟಿಗೆಗಳು

(xvii) ಕಾಂತಿವರ್ಧಕಗಳು ಅಥವಾ ಪ್ರಸಾಧನ ಸರಕುಗಳು

(xviii) ಹತ್ತಿ, ಹತ್ತಿಕಸ, ಹತ್ತಿಜಂಗು, ಹತ್ತಿನೂಲು, ರೇಷ್ಮೆ, ರೇಷ್ಮೆನೂಲಿನ ಜುಂಗನ್ನೊಳಗೊಂಡ ರೇಷ್ಮೆ, ಆರ್ಟ್ ಸಿಲ್ಕ್ ಜುಂಗು, ಆರ್ಟ್ ಸಿಲ್ಕ್ ನೂಲು, ಉಣ್ಣೆ ಅಥವಾ ಉಣ್ಣೆಯ ಕಸ ಅಥವಾ ಜುಂಗು

(xix) ಹತ್ತಿ ಬೀಜಗಳು

(xx) ಡಾಮರ್

(xxi) ಡೈನಾಮೈಟ್

(xxii) ಕೊಬ್ಬು

(xxiii) ಬಿರುಸು ಬಾಣಗಳು

(xxiv) ಅಗಸೆನಾರು

(xxv) ಮುದ್ರಣ, ಬರವಣಿಗೆ, ಮುದ್ರಿಸುವುದು ಇತ್ಯಾದಿಗಳಿಗಾಗಿ ಮಸಿ

(xxvi) ಅನಿಲ

(xxvii) ತುಪ್ಪ

(xxviii) ಗಾಜು ಅಥವಾ ಗಾಜಿನ ವಸ್ತುಗಳು

(xxix) ಕೋವಿ ಮದ್ದು

(xxx) ಸೆಣಬು

(xxxi) (ಘನ ಇಂಗಾಲಾಮ್ಲವನ್ನು ಒಳಗೊಂಡು) ಮಂಜುಗಡ್ಡೆ

(xxxii) ಕೀಟನಾಶಕ ಅಥವಾ ಸೋಂಕು ನಿವಾರಕಗಳು

(xxxiii) ಚರ್ಮ, ಬಟ್ಟೆ ಅಥವಾ ರೆಕ್ಸಿನ್ ಬಟ್ಟೆ ಅಥವಾ ನೀರಿಳಿಯದ ಬಟ್ಟೆ

(xxxiv) ಸುಣ್ಣ

(xxxv) ಅಗಸೆ ಸುಣ್ಣ

(xxxvi) (ಬಂಗಾಳ ಬೆಂಕಿಕಡ್ಡಿ ಒಳಗೊಂಡು) ಹತ್ತಿಸುವುದಕ್ಕಾಗಿ ಬೆಂಕಿಕಡ್ಡಿಗಳು

(xxxvii) ಹಾಸಿಗೆಗಳು ಮತ್ತು ದಿಂಬುಗಳು

(xxxviii) ಕೊಳೆತ ಮಾಂಸ

(xxxix) ಮೇಣಗಪಟ

(xl) ಪೆಟ್ರೋಲಿಯಂನ್ನು ಹೊರತುಪಡಿಸಿ (ಯಂತ್ರ) ಶಕ್ತಿಯಿಂದಾಗಲಿ ಇಲ್ಲವೇ ಕೈ ಶಕ್ತಿಯಿಂದಾಗಲಿ ಅಥವಾ ಎತ್ತು ಅಥವಾ ಇನ್ನಾವುದೇ ಇತರ ಪ್ರಾಣಿಗಳಿಂದ ನಡೆಸುವ ಗಾಣದ ಮೂಲಕ) ತೆಗೆದ ಎಣ್ಣೆ

(xli) ಔಷಧೀಯ ಅಥವಾ ವೈದ್ಯಕೀಯ ಉತ್ಪನ್ನಗಳು

(xlii) ಬಣ್ಣಗಳು

(xliii) ಕಾಗದ ಅಥವಾ ರಟ್ಟು

(xliv) ತೊಗಲಿನಿಂದ ಆಯ್ದುವುಗಳು

(xlv) ಕಪ್ಪುರಾಳ

(xlvi) ಪ್ಲಾಸ್ಟಿಕ್ ಸರಕುಗಳು

(xlvii) ಕೈಶಕ್ತಿಯ ಮೂಲಕ ಕುಂಬಾರಿಕೆ

(xlviii) ಶಕ್ತಿಯನ್ನು ಹೊರತುಪಡಿಸಿ ಯಾಂತ್ರಿಕ ಅಥವಾ ಇತರ ಯಾವುದೇ ಮೂಲಕ ನಡೆಸುವ ತಯಾರಿಕೆ

(xlix) ರಬ್ಬರ್ ಅಥವಾ ರಬ್ಬರ್ ಸರಕುಗಳು

(l) ಪಿಂಗಾಣಿಯ ನೈರ್ಮಲ್ಯ ಸಾಮಾನುಗಳು

(li) ಸಾಬೂನು

(lii) ಸಕ್ಕರೆ

(liii) ಮಿಠಾಯಿ ಮತ್ತು ಸಿಹಿ ತಿಂಡಿಯ ಪದಾರ್ಥಗಳು

(liv) ಚರ್ಬಿ

(lv) ಟಾರು

(lvi) ವಾರ್ನೀಸು

(lvii) ಮರದ ಪೀಠೋಪಕರಣಗಳು, ಪೆಟ್ಟಿಗೆಗಳು, ಪೀಪಾಯಿಗಳು, ಖೋಕಾಸ್ ಅಥವಾ ಮರದ ಅಥವಾ ಪ್ಲೈವುಡ್ಡಿನ ಅಥವಾ ಗಂಧದ ಮರದ ಇತರ ಸಾಮಾನುಗಳು

**ಭಾಗ– II**

**ಲೈಸೆನ್ಸ್ ಪಡೆಯದೆ ಯಾವುದೇ ಆವರಣದಲ್ಲಿ ದಾಸ್ತಾನು ಮಾಡಲಾಗದಂಥ ವಸ್ತುಗಳು**

1. ಹಿಂಗು
2. ಬೂದಿ
3. ಬಿದಿರುಗಳು
4. ಬೀಡಿ ಎಲೆಗಳು
5. ಸಿಡಿಮದ್ದು
6. ರಕ್ತ
7. ಎಲುಬುಗಳು, ಮೂಳೆ ಗೊಬ್ಬರ ಅಥವಾ ಮೂಳೆಪುಡಿ
8. ಕರ್ಪೂರ
9. ಕ್ಯಾಲ್ಸಿಯಂ ಕಾರ್ಬೈಡ್
10. ಕಾರ್ಡ್‌ಬೋರ್ಡ್
11. ಸೆಲ್ಯುಲಾಯ್ಡ್ ಅಥವಾ ಸೆಲ್ಯುಲಾಯ್ಡ್ ಪದಾರ್ಥಗಳು
12. ಇದ್ದಲು
13. ದ್ರವ ರಾಸಾಯನಿಕಗಳು
14. ದ್ರವೇತರ ರಾಸಾಯನಿಕಗಳು
15. ಮೆಣಸಿನಕಾಯಿ
16. ಕ್ಲೋರೇಟ್ ಮಿಶ್ರಣ
17. ಚಲನಚಿತ್ರ ದರ್ಶಕ ಫಿಲಂಗಳು–ದಹ್ಯವಲ್ಲದ ಅಥವಾ ಅಸಿಡೇಟ ಅಥವಾ ಸುರಕ್ಷ ತಳವುಳ್ಳ ಚಲನಚಿತ್ರ ಫಿಲಂಗಳು

18. ಒತ್ತಿದ ಬೇಲು ಅಥವಾ ಬೋರುಗಳಲ್ಲಿ ಬಟ್ಟೆ

19. ಬಟ್ಟೆ ಅಥವಾ ಹತ್ತಿ, ಉಣ್ಣೆ, ರೇಷ್ಮೆ ಆರ್ಟ್‌ಸಿಲ್ಕು ಇತ್ಯಾದಿಯ ಉಡುಪುಗಳು

20. ಕಲ್ಲಿದ್ದಲು

21. ತೆಂಗಿನನಾರು

22. ಕಲ್ಲಿದ್ದಲ ಕಿಟ್ಟ

23. ಆಮ್ಲಜನಕ ಅನಿಲ, ಜಲಜನಕ ಅನಿಲ, ಸಾರಜನಿಕ ಅನಿಲ, ಇಂಗಾಲ ಆಕ್ಸೈಡ್ ಅನಿಲ, ಗಂಧಕ ಡೈ ಆಕ್ಸೈಡ್ ಅನಿಲ, ಕ್ಲೋರಿನ್ ಅನಿಲ, ಅಸಿಟಲಿನ್ ಅನಿಲ ಇತ್ಯಾದಿಗಳಂಥ ಸಂಯುಕ್ತ ಅನಿಲ

24. ಕೊಬ್ಬರಿ

25. ಕಾಹೋಕ್, ಶಸ್ತ್ರ ಚಿಕಿತ್ಸೆಯ ಹತ್ತಿ, ರೇಷ್ಮೆಯಂಥ ಹತ್ತಿಯನ್ನೊಳಗೊಂಡ ಹತ್ತಿ

26. ಹತ್ತಿ ಕಸ ಅಥವಾ ಚುಂಗು ಅಥವಾ ಹತ್ತಿ ನೂಲಿನ ಕಸ ಅಥವಾ ಚುಂಗು

27. ಹತ್ತಿ ಬೀಜ

28. ಸ್ಫೋಟಕಗಳು

29. ಒಣ ಎಲೆಗಳು

30. ಡೈನಾಮೈಟ್

31. ನೈಟ್ರೋ ಸೆಲ್ಯುಲೋಸ್ ಪೇಂಟ್, ಲ್ಯಾಕರ್ ಪೇಂಟ್, ಇನಾಮಿಲ್ ಪೇಂಟ್ ಇತ್ಯಾದಿಯಂಥ ಸ್ಫೋಟಕ ಪೇಂಟು

32. ಕೊಬ್ಬು

33. ಫೆಲ್ಟ್

34. ಮೀನಿನ ರೆಕ್ಕೆಗಳು

35. ಸೌದೆ

36. ಬಿರುಸು ಬಾಣಗಳು

37. ಒಣಗಿಸಿದ ಮೀನು

38. ಅಗಸೆ ನಾರು

39. ಫೆಲ್ಮಿನಿಕ್ ಲವಣ

40. ಪಾದರಸದ ಫೆಲ್ಮಿನಿಕ್ ಲವಣ

41. ಬೆಳ್ಳಿಯ ಫೆಲ್ಮಿನಿಕ್ ಲವಣ

42. ಜಿಲಾಟಿನ್

43. ಜಿಲಾಟಿನ್ ಸಿಡಿಮದ್ದು

44. ಹುಲ್ಲು

45. ಸಿಡಿಹತ್ತಿ

46. ಕೋವಿಮದ್ದು

47. ಗೋಣಿಚೀಲಗಳು

48. ಕೂದಲು

49. ಒಣಹುಲ್ಲು ಅಥವಾ ಮೇವು

50. ಸೆಣಬು

51. ಸೆಣಬಿನ ಬಟ್ಟೆ (ಗೋಣಿ ಚೀಲದ ಬಟ್ಟೆ)

52. ತೊಗಲು (ಒಣ)

53. ತೊಗಲು (ಕಚ್ಚಾ)

54. ಗೊರಸುಗಳು

55. ಕೊಂಬುಗಳು

56. ಸುವಾಸನಾ ದ್ರವ್ಯ ಅಥವಾ ಸುಗಂಧ

57. ಗೋಣಿ ನಾರು

58. ಖೋಕಾಸ್, ಪೆಟ್ಟಿಗೆಗಳು, ಪೀಪಾಯಿಗಳು, ಪೀಠೋಪಕರಣಗಳು ಅಥವಾ ಮರದ ಇತರ ಯಾವುದೇ ವಸ್ತು

59. ಮೆರುಗೆಣ್ಣೆ

60. ಹದ ಮಾಡಿದ ಚರ್ಮ

61. (ಬಂಗಾಳ ಬೆಂಕಿ ಕಡ್ಡಿಗಳನ್ನೊಳಗೊಂಡು) ಹೊತ್ತಿಸುವುದಕ್ಕಾಗಿ ಬೆಂಕಿ ಕಡ್ಡಿಗಳು

62. ಮಿಥೆಲ್ ಸ್ಪಿರಿಟ್, ಡೀನೇಚರ್ಡ್ ಸ್ಪಿರಿಟ್ ಅಥವಾ ಫ್ರೆಂಚ್ ಪಾಲಿಷ್

63. ನೈಟ್ರೊ–ಸೆಲ್ಯುಲಾಯಿಸ್

64. ನೈಟ್ರೋ–ಸಂಯುಕ್ತ

65. ನೈಟ್ರೋ ಗ್ಲಿಜರಿನ್

66. ನೈಟ್ರೋ ಮಿಶ್ರಣ

67. ಕೊಳೆತ ಮಾಂಸ

68. ಪೆಟ್ರೋಲಿಯಂ ಅನ್ನು ಹೊರತುಪಡಿಸಿ ಎಣ್ಣೆ

69. ಬಾದಾಮಿಗಳನ್ನು ಒಳಗೊಂಡ ಆದರೆ ಹತ್ತಿ ಬೀಜಗಳನ್ನು ಹೊರತುಪಡಿಸಿ ಎಣ್ಣೆಬೀಜಗಳು

70. ಹಳೆ ವೃತ್ತಪತ್ರಿಕೆಗಳು ಅಥವಾ ನಿಯತಕಾಲಿಕೆಗಳು, ಮ್ಯಾಗಝಿನ್ ಇತ್ಯಾದಿಗಳನ್ನೊಳಗೊಂಡ ಹಳೆ ಕಾಗದ ಅಥವಾ ರದ್ದಿ ಕಾಗದ

71. ಪ್ಯಾಕಿಂಗ್ ಪದಾರ್ಥ (ಕಾಗದ ಕತ್ತರಿಸುವುದು, ಹೊಟ್ಟು ಅಥವಾ ಮರದ ಪುಡಿ ಮುಂತಾದವು)

72. ಪೇಂಟುಗಳು

73. ಹಳೆ ಕಾಗದವನ್ನು ಹೊರತುಪಡಿಸಿ ಒತ್ತಿದ ಬೇಲುಗಳು ಅಥವಾ ಬಿಡಿಯಾಗಿ ಅಥವಾ ರೀಮುಗಳಲ್ಲಿನ ಕಾಗದ

74. ಅಪಾಯಕಾರಿ ಪೆಟ್ರೋಲಿಯಂನ್ನು ಹೊರತುಪಡಿಸಿ 1934ರ ಪೆಟ್ರೋಲಿಯಂ ಅಧಿನಿಯಮದಲ್ಲಿ ಪರಿಭಾಷಿಸಿದಂತೆ ಪೆಟ್ರೋಲಿಯಂ

75. ರಂಜಕ

76. ಪ್ಲಾಸ್ಟಿಕ್ ಅಥವಾ ಪ್ಲಾಸ್ಟಿಕ್ ಸರಕುಗಳು

77. ಪ್ಲೈವುಡ್

78. ಬಟ್ಟೆಯ ಸಣ್ಣ ತುಣುಕುಗಳು ಅಥವಾ ತುಂಡುಗಳು, ಗೋಣಿನಾರಿನ ಬಟ್ಟೆ, ಗೋಣಿ ಚೀಲದ ಬಟ್ಟೆ, ರೇಷ್ಮೆ, ಆರ್ಟ್‌ಸಿಲ್ಕು ಅಥವಾ ಉಣ್ಣೆ ಬಟ್ಟೆಯನ್ನೊಳಗೊಂಡು ಚಿಂದಿ ಬಟ್ಟೆಗಳು

79. ರಾಳವೆಂದು ಅನ್ಯಥಾ ತಿಳಿಯಲಾದ ರಾಳ ಅಥವಾ ಡಾಮರು

80. ಸುರಕ್ಷಾ ಫ್ಯೂಸ್‌ಗಳು, ಕಾವಳ ಸಂಜ್ಞೆ, ಕಾಡತೂಸುಗಳು

81. ಪೆಟ್ಲುಪ್ಪು

82. ಗಂಧದ ಮರ

83. ರೇಷ್ಮೆ ಗುಂಜು, ಅಥವಾ ರೇಷ್ಮೆನೂಲಿನ ಗುಂಜು, ಆರ್ಟ್‌ಸಿಲ್ಕಿನ ಗುಂಜು ಅಥವಾ ಆರ್ಟ್‌ಸಿಲ್ಕು ನೂಲಿನ ಗುಂಜು

84. ಕತ್ತಾಳೆ ನಾರು

85. ಚರ್ಮಗಳು (ಕಚ್ಚಾ ಅಥವಾ ಒಣಗಿಸಿದ)

86. ಒಣಹುಲ್ಲು

87. ಗಂಧಕ

88. ಟಾಲರ್

89. ಟಾರು, ಟಾರೆಣ್ಣೆ, ಡಾಮರು ಅಥವಾ ಬಿಟ್ಯುಮನ್

90. ತಾರ್ಪಲ್ಲು

91. ಥಿನ್ನರು

92. ಚೌಬೀನೆ

93. ಟರ್ಪೆಂಟೈನ್

94. ವಾರನಿಸ್

95. ಉಣ್ಣೆ (ಕಚ್ಚಾ)

96. ಜುಂಗು ನೂಲನ್ನು ಹೊರತುಪಡಿಸಿ ಇತರ ನೂಲು

**1966ರ ಕರ್ನಾಟಕ ಅಧಿನಿಯಮ ಸಂಖ್ಯೆ 34**

(1976ರ ಡಿಸೆಂಬರ್ ಇಪ್ಪತ್ತೆರಡನೇ ದಿನಾಂಕದಂದು ಕರ್ನಾಟಕ ರಾಜಪತ್ರದಲ್ಲಿ ಮೊದಲು ಪ್ರಕಟಿತವಾಗಿದೆ)

**1966ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ**

(1966ರ ಡಿಸೆಂಬರ್ ಹದಿನಾಲ್ಕನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡಲು ಅಧಿನಿಯಮ

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

1. **ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು 1966ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, ಎಂದು ಕರೆಯತಕ್ಕದ್ದು.

(2) ಇದು, ರಾಜ್ಯ ಸರ್ಕಾರದ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು. 2 ರಿಂದ 23ರವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

**1976ರ ಕರ್ನಾಟಕ ಅಧಿನಿಯಮ ಸಂಖ್ಯೆ 2**

(1976ರ ಫೆಬ್ರವರಿ ಇಪ್ಪತ್ತಾರನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

**1976ರ ಕರ್ನಾಟ ಪೌರಸಭಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ**

(1976ರ ಫೆಬ್ರವರಿ ಇಪ್ಪತ್ಮೂರನೇ ದಿನದಂದು ರಾಜ್ಯಪಾಲರ ಅನುಮತಿ ಪಡೆದಿದೆ)

**ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂಥ ಮುನ್ಸಿಪಲ್ ಕೌನ್ಸಿಲ್ಲುಗಳು ಮತ್ತು ಪೌರಸಭಾ ನಿಗಮಗಳಿಗೆ ಸಂಬಂಧಪಟ್ಟ ಕೆಲವು ಕಾನೂನುಗಳನ್ನು ತಿದ್ದುಪಡಿ ಮಾಡುವ ಅಧಿನಿಯಮ**

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂತೆ ಮುನ್ಸಿಪಲ್ ಕೌನ್ಸಿಲ್ಲುಗಳು ಮತ್ತು ಪೌರಸಭಾ ನಿಗಮಗಳಿಗೆ ಸಂಬಂಧಪಟ್ಟ ಕೆಲವು ಕಾನೂನುಗಳನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.–

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು 1976ರ ಕರ್ನಾಟಕ ಪೌರಸಭಾ ಕಾನೂನುಗಳು (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತದೆ.

(3) ಇದು 1975ರ ಅಕ್ಟೋಬರ್ ಇಪ್ಪತ್ತನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು

(3ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**5. 1975ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 14ರ ನಿರಸನ.–** (1) 1975ರ ಕರ್ನಾಟಕ ಪೌರಸಭಾ ಕಾನೂನುಗಳ (ತಿದ್ದುಪಡಿ) ಅಧ್ಯಾದೇಶವನ್ನು (1975ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 14) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನ ಏನೇ ಇದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

**1976ರ ಕರ್ನಾಟಕ ಅಧಿನಿಯಮ ಸಂಖ್ಯೆ 39**

(1976ರ ಮೇ ಹದಿನೈದು ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**1976ರ ಕರ್ನಾಟಕ ನಗರ ಭೂ ತೆರಿಗೆ ಅಧಿನಿಯಮ**

(1976ರ ಹದಿಮೂರನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ)

ಕರ್ನಾಟಕ ರಾಜ್ಯದಲ್ಲಿ ನಗರದ ಭೂಮಿಯ ಮೇಲೆ ತೆರಿಗೆಯನ್ನು ವಿಧಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯ ಸರ್ಕಾರವು, ಕರ್ನಾಟಕ ರಾಜ್ಯದಲ್ಲಿ ನಗರ ಭೂಮಿಯ ಮೇಲೆ ತೆರಿಗೆಯನ್ನು ವಿಧಿಸುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು;

**1. ಚಿಕ್ಕ ಹೆಸರು ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು 1976ರರ ಕರ್ನಾಟಕ ನಗರ ಭೂ ತೆರಿಗೆ ಅಧಿನಿಯಮ, ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತದೆ.

(3) (ಕ) ಇದು ಬೆಂಗಳೂರು ನಗರ ಸಮುಚ್ಚಯ, ಹುಬ್ಬಳ್ಳಿ–ಧಾರವಾಡ ನಗರ ಮತ್ತು ಮೈಸೂರು, ಮಂಗಳೂರು, ಬೆಳಗಾಂವಿ, ಕಲಬುರ್ಗಿ, ಬಳ್ಳಾರಿ, ದಾವಣಗೆರೆ, ವಿಜಾಪುರ, ಶಿವಮೊಗ್ಗ ಮತ್ತು ಭದ್ರಾವತಿ ನಗರ ಸಭೆಗಳಲ್ಲಿ 1976ರ ಏಪ್ರಿಲ್ ಮೊದಲನೇ ದಿನಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(ಖ) ನಗರ ಪೌರಸಭೆಗಳು ಮತ್ತು ಪಟ್ಟಣ ಪೌರಸಭೆಗಳಲ್ಲಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸುವ ದಿನಾಂಕದಂದು ಅಂಥ ಇತರ ನಗರಗಳಲ್ಲಿ ಮತ್ತು ವಿವಿಧ ನಗರಗಳು, ನಗರ ಪೌರಸಭೆಗಳು ಮತ್ತು ಪಟ್ಟಣ ಪೌರಸಭೆಗಳಲ್ಲಿ ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ

ನಗರಗಳಿಗೆ, ಪಟ್ಟಣ ಪೌರಸಭೆಗಳಿಗೆ ಮತ್ತು ಪೌರಸಭೆಗಳಿಗೆ ಬೇರೆ ಬೇರೆ ದಿನಾಂಕಗಳನ್ನು ನಿರ್ದಿಷ್ಟಪಡಿಸಬಹುದು.

(ಮೂಲ ಅಧಿನಿಯಮದಲ್ಲಿ 45ನೇ ಪ್ರಕರಣವನ್ನು ಸೇರಿಸಲಾಗಿದೆ)

**1976ರ ಕರ್ನಾಟಕ ಅಧಿನಿಯಮ ಸಂಖ್ಯೆ 83**

(1976ರ ಡಿಸೆಂಬರ್ ಎಂಟನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**1976ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ**

(1976ರ ಡಿಸೆಂಬರ್ ಆರನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು ಮತು ಪ್ರಾರಂಭ.–** (1) ಈ ಅಧಿನಿಯಮವನ್ನು 1976ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

(2ರಿಂದ 41ರವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**1979ರ ಕರ್ನಾಟಕ ಅಧಿನಿಯಮ ಸಂಖ್ಯೆ 13**

(1979ರ ಫೆಬ್ರವರಿ ಇಪ್ಪತ್ಮೂರನೇ ದಿನಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**1979ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ**

(1979ರ ಫೆಬ್ರವರಿ ಇಪ್ಪತ್ತೊಂದನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು 1979ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಈ ಪ್ರಕರಣದ 2, 3, 5 ಮತ್ತು 6ನೇ ಪ್ರಕರಣಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು 4 ಮತ್ತು 7ನೇ ಪ್ರಕರಣಗಳು 1978ರ ಸೆಪ್ಟೆಂಬರ್ ಎರಡನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿತಕ್ಕದ್ದು.

(2ರಿಂದ 6ರವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**7. 1978ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 8ರ ನಿರಸನ:–** (1) 1978ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧ್ಯಾದೇಶವನ್ನು (1976ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 8) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಾಗಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮ ಮೇರೆಗೆ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಲಾದ ಅಥವಾ ಹೊರಡಿಸಲಾದ ಯಾವುದೇ ನೇಮಕಾತಿ, ಅಧಿಸೂಚನೆ, ಆದೇಶ, ಯೋಜನೆ, ನಿಯಮ, ನಮೂನೆ, ಅಥವಾ ಉಪವಿಧಿಯನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಕೈಗೊಳ್ಳಲಾಗಿದೆ, ಮಾಡಲಾಗಿದೆ ಅಥವಾ ಹೊರಡಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅವುಗಳು ಈ ಅಧಿನಿಯಮ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಲಾದ ಅಥವಾ ಹೊರಡಿಸಲಾದ ಯಾವುದೇ ನೇಮಕಾತಿ, ಅಧಿಸೂಚನೆ, ಆದೇಶ, ಯೋಜನೆ, ನಿಯಮ, ನಮೂನೆ ಅಥವಾ ಉಪವಿಧಿಯ ಮೂಲಕ ರದ್ದಾದ ಹೊರತು ಮತ್ತು ರದ್ದಾಗುವವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು.

## 1979ರ ಕರ್ನಾಟಕ ಅಧಿನಿಯಮ ಸಂಖ್ಯೆ 21

(1979ರ ಮಾರ್ಚ್ ಮೂವತ್ತೊಂದನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಯಿತು)

## 1979ರ ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ

(1979ರ ಮಾರ್ಚ್ ಮೂವತ್ತೊಂದನೇ ದಿನಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂತೆ ತೆರಿಗೆ ನಿರ್ಧರಣೆ ಮತ್ತು ಇತರ ಕಾನೂನುಗಳನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂಥ ತೆರಿಗೆ ನಿರ್ಧರಣೆ ಮತ್ತು ಇತರ ಕಾನೂನುಗಳನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** ಈ ಅಧಿನಿಯಮವನ್ನು 1979ರ ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ, ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22ರ ತಿದ್ದುಪಡಿ.–** 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮದಲ್ಲಿ–(1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22)

(8ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**1981ರ ಕರ್ನಾಟಕ ಅಧಿನಿಯಮ ಸಂಖ್ಯೆ 22**

**(1981ರ ಏಪ್ರಿಲ್ ಎಂಟನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ.**
**1981ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ**

1981ರ ಏಪ್ರಿಲ್ ಏಳನೇ ದಿನಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು 1981ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, ಎಂದು ಕರೆಯತಕ್ಕದ್ದು.

(2) ಇದು 1980ರ ಸೆಪ್ಟೆಂಬರ್ ಮೂವತ್ತನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**3. ನಿರಸನ ಮತ್ತು ಉಳಿಸುವಿಕೆಗಳು.–** 1980ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧ್ಯಾದೇಶವನ್ನು (1980ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 10) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನವಾಗಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## 1982ರ ಕರ್ನಾಟಕ ಅಧಿನಿಯಮ ಸಂಖ್ಯೆ 26

(1982ರ ಜುಲೈ ಇಪ್ಪತ್ತೇಳನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಯಿತು)

## 1982ರ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ (ತಿದ್ದುಪಡಿ) ಅಧಿನಿಯಮ

(1982ರ ಜುಲೈ ಇಪ್ಪತ್ತೆರಡನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1976ರ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ 1976ರ ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮವನ್ನು (1976ರ ಕರ್ನಾಟಕ ಅಧಿನಿಯಮ ಸಂಖ್ಯೆ 35) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿಗಳು, ವ್ಯಾಪಾರಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಿನ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(4ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

## 1982ರ ಕರ್ನಾಟಕ ಅಧಿನಿಯಮ ಸಂಖ್ಯೆ 28

(1982ರ ಆಗಸ್ಟ್ ಹತ್ತನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## 1981ರ ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ಅಧಿನಿಯಮ

(1982ರ ಆಗಸ್ಟ್ ಆರನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** ಈ ಅಧಿನಿಯಮವನ್ನು 1981ರ ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

**2. 321ನೇ ಪ್ರಕರಣದ ತಿದ್ದುಪಡಿ.–** 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮದ ಸಂಖ್ಯೆ 22) ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾದ) 321ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಕಮಿಷನರನು" ಎಂಬ ಪದಗಳ ತರುವಾಯ ಅಥವಾ "ಡೆಪ್ಯುಟಿ ಕಮಿಷನರನು" ಎಂಬ ಪದಗಳನ್ನು ಸೇರಿಸತಕ್ಕದ್ದು.

**3. 342ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 342ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದ (ಕ) ಖಂಡದಲ್ಲಿ "ಅರವತ್ತು ರೂಪಾಯಿಗಳು" ಎಂಬ ಪದಗಳಿಗೆ ಬದಲಾಗಿ "ನಿಯಮಿಸಬಹುದಾದಂಥ ಮೊಬಲಗು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

## 1983ರ ಕರ್ನಾಟಕ ಅಧಿನಿಯಮ ಸಂಖ್ಯೆ 12

(1983ರ ಏಪ್ರಿಲ್ ಇಪ್ಪತ್ತೆಂಟನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

## 1983ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ

(1983ರ ಏಪ್ರಿಲ್ ಇಪ್ಪತ್ತಾರನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು 1983ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, ಎಂದು ಕರೆಯತಕ್ಕದ್ದು.

(2) 5ನೇ ಪ್ರಕರಣದ (ಖ) ಖಂಡವನ್ನು ಹೊರತುಪಡಿಸಿ, ಈ ಅಧಿನಿಯಮದ ಎಲ್ಲಾ ಪ್ರಕರಣಗಳು 1983ರ ಫೆಬ್ರವರಿ ಇಪ್ಪತ್ತನಾಲ್ಕನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು 5ನೇ ಪ್ರಕರಣದ (ಖ) ಖಂಡವು 1983ರ ಮಾರ್ಚ್ ಮೊದಲನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 11ನೇ ಪ್ರಕರಣದ ತಿದ್ದುಪಡಿ.–** 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮದ 1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾಗುವ) 11ನೇ ಪ್ರಕರಣದಲ್ಲಿ,–

(1) (4)ನೇ ಉಪಪ್ರಕರಣಕ್ಕೆ ಬದಲಾಗಿ ಈ ಕೆಳಕಂಡ ಉಪಪ್ರಕರಣವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ,–

"(4) ಪ್ರತಿಯೊಂದು ಪೌರಸಭಾ ಪರಿಷತ್ತಿನಲ್ಲಿ ಸಾಧ್ಯವಾದಷ್ಟುಮಟ್ಟಿಗೆ ಶೇಕಡಾ ಇಪ್ಪತ್ತು ಸ್ಥಾನಗಳನ್ನು ಮಹಿಳೆಯರಿಗಾಗಿ ಕಾದಿರಿಸತಕ್ಕದ್ದು."

(2) (6)ನೇ ಉಪಪ್ರಕರಣವನ್ನು ಲೋಪಿಸತಕ್ಕದ್ದು.

3. **13ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,–

(1) (1)ನೇ ಉಪಪ್ರಕರಣದಲ್ಲಿ,–

(ಕ) "ಪೂರ್ವ ಪ್ರಕಟಣೆಯ ತರುವಾಯ" ಎಂಬ ಪದಗಳನ್ನು ಲೋಪಿಸತಕ್ಕದ್ದು.

(ಖ) (ಗ) ಖಂಡದಲ್ಲಿ "ಮೂರಕ್ಕಿಂತ ಕಡಿಮೆ ಇಲ್ಲದ ಹಾಗೂ ಐದಕ್ಕಿಂತ ಹೆಚ್ಚಿಲ್ಲದ" ಎಂಬ ಪದಗಳಿಗೆ ಬದಲಾಗಿ "ಒಂದು ಅಥವಾ ಅದಕ್ಕಿಂತ ಹೆಚ್ಚು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು."

(2) (1)ನೇ ಉಪಪ್ರಕರಣದ ತರುವಾಯ, ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(1–ಕ) (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಅಧಿಸೂಚನೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ"

4. **14ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 14ನೇ ಪ್ರಕರಣದಲ್ಲಿ,–

(1) (1)ನೇ ಉಪಪ್ರಕರಣದಲ್ಲಿ "ಪೌರಸಭೆಯ ಒಂದು ವಿಭಾಗದಲ್ಲಿ ಸೇರಿಸು" ಎಂಬ ಪದಗಳ ತರುವಾಯ "ಅಂಥ ವಿಭಾಗಕ್ಕೆ ಸಂಬಂಧಿಸುವ (1ಕ) ಉಪಪ್ರಕರಣದ ಮೇರೆಗೆ ತಯಾರಿಸಿದ ಮತದಾರರ ಹೆಚ್ಚುವರಿ ಸೂಚಿಯೊಂದಿಗೆ" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(2) (1)ನೇ ಉಪಪ್ರಕರಣದ ತರುವಾಯ ಈ ಕೆಳಕಂಡ ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(1ಕ) ಪ್ರತಿಯೊಂದು ಪೌರಸಭೆಗಾಗಿ ಮತದಾರರ ಹೆಚ್ಚಿನ ಪಟ್ಟಿಯನ್ನು ನಿಯಮಿಸಿದ ಪ್ರಾಧಿಕಾರವು ನಿಯಮಿಸಿದ ರೀತಿಯಲ್ಲಿ ಮತ್ತು ನಿಯಮಿಸಿದ ಅವಧಿಯ ಅಂತರದಲ್ಲಿ ತಯಾರಿಸತಕ್ಕದ್ದು ಮತ್ತು ಪರಿಷ್ಕರಿಸತಕ್ಕದ್ದು. ಸಾಮಾನ್ಯವಾಗಿ ಪೌರಸಭೆಯಲ್ಲಿ ವಾಸವಾಗಿರುವ ಮತ್ತು (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಮತದಾರರ ಪಟ್ಟಿಯನ್ನು ಕೊನೆಯ ಬಾರಿ ಪರಿಷ್ಕರಿಸಿದ ವರ್ಷದ ಜನವರಿ ಮೊದಲನೆಯ ದಿನದಂದು 21 ವರ್ಷಕ್ಕೆ ಕಡಿಮೆಯಿಲ್ಲದ ವ್ಯಕ್ತಿಯನ್ನು ಹೊರತುಪಡಿಸಿ, ಹಾಗೆ ಅದನ್ನು ತಯಾರಿಸಿ ಮತ್ತು ಪರಿಷ್ಕರಿಸಿದ ವರ್ಷದ ಜನವರಿಯ ಮೊದಲನೆಯ ದಿನದಂದು 18 ವರ್ಷಕ್ಕೆ ಕಡಿಮೆಯಿಲ್ಲದ ಪ್ರತಿಯೊಬ್ಬ ವ್ಯಕ್ತಿಯು, ಹಾಗೆ ತಯಾರಿಸಿದ ಮತದಾರರ ಹೆಚ್ಚಿನ ಪಟ್ಟಿಯಲ್ಲಿ ಸೇರಿಕೆಯಾಗಲು ಅರ್ಹನಾಗಿರಕ್ಕದ್ದು. 1950ರ ಜನತಾ ಪ್ರಾತಿನಿಧ್ಯ ಅಧಿನಿಯಮ (1950ರ ಕೇಂದ್ರ ಅಧಿನಿಯಮ 43)ದ 16ನೆಯ ಪ್ರಕರಣದ ಉಪಬಂಧಗಳು, ಈ ಉಪಪ್ರಕರಣದ ಉದ್ದೇಶಕ್ಕಾಗಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

5. **323ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ (1)ನೇ ಉಪಪ್ರಕರಣದಲ್ಲಿ,–

(ಕ) "ಮತ್ತು ಪೂರ್ವ ಪ್ರಕಟಣೆಯ ತರುವಾಯ" ಎಂಬ ಪದಗಳನ್ನು ಲೋಪಿಸತಕ್ಕದ್ದು'

(ಖ) "ಅಧಿಸೂಚನೆಯ ಮೂಲಕ" ಎಂಬ ಪದಗಳ ತರುವಾಯ ಮತ್ತು "ಪೂರ್ವ ಪ್ರಕಟಣೆಯ ತರುವಾಯ" ಎಂಬ ಪದಗಳನ್ನು ಸೇರಿಸತಕ್ಕದ್ದು.

**6. ನಿರಸನ ಮತ್ತು ಉಳಿಸುವಿಕೆ.–** (1) 1983ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ)ಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ತೆಗೆದುಕೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಿದ ಕಾರ್ಯ ಅಥವಾ ಕೈಗೊಂಡ ಕ್ರಮ ಎಂಬುದಾಗಿ ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
(ಕೆ.ಆರ್. ಚಾಮಯ್ಯ)
ಸರ್ಕಾರದ ಕಾರ್ಯದರ್ಶಿ
ಕಾನೂನು ಸಂಸದೀಯ ವ್ಯವಹಾರಗಳ ಇಲಾಖೆ

**1984ರ ಕರ್ನಾಟಕ ಅಧಿನಿಯಮ ಸಂಖ್ಯೆ 33**

(1984ರ ಜೂನ್ ಇಪ್ಪತ್ತಾರನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)

1984ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ

(1984ರ ಜೂನ್ ಇಪ್ಪತ್ತಮೂರನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಪೌರಸಭೆ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು 1984ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ, ಎಂದು ಕರೆಯತಕ್ಕದ್ದು.

(2) 5 ಮತ್ತು 7ನೇ ಪ್ರಕರಣಗಳು 1984ರ ಏಪ್ರಿಲ್ ಏಳನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ಉಳಿದ ಉಪಬಂಧಗಳು ಕೂಡಲೇ ಜಾರಿಗೆ ಬರತಕ್ಕದ್ದು.

**2. 43ನೇ ಪ್ರಕರಣದ ತಿದ್ದುಪಡಿ.–** 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮದ ಸಂಖ್ಯೆ 22) ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾದ 43ನೇ ಪ್ರಕರಣದ (3) ಮತ್ತು 5ನೇ ಉಪಪ್ರಕರಣದಲ್ಲಿ "ಕಮಿಷನರ್" ಎಂಬ ಪದಕ್ಕೆ ಬದಲು "ಮುನ್ಸಿಪಲ್ ಕಮಿಷನರ್" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**3. 47ಕ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 47ನೇ ಪ್ರಕರಣದ ತರುವಾಯ, ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**47ಕ. ಶಾಸಕರು ಭಾಗವಹಿಸುವುದು.–** ಪುರಸಭೆಯ ಭಾಗವನ್ನು ಅಥವಾ ಸಂಪೂರ್ಣವಾಗಿ ಪ್ರತಿನಿಧಿಸುವ ರಾಜ್ಯ ವಿಧಾನಸಭಾ ಸದಸ್ಯ ಮತ್ತು ಆ ಪ್ರದೇಶದಲ್ಲಿ ವಾಸಿಸುತ್ತಿರುವ ರಾಜ್ಯ ವಿಧಾನ ಪರಿಷತ್ತಿನ ಸದಸ್ಯನು ಮುನ್ಸಿಪಲ್ ಕೌನ್ಸಿಲ್ ಮತ್ತು ಅದರ ಸ್ಥಾಯೀ ಸಮಿತಿಗಳ ಸಭೆಗಳಿಗೆ ಹಾಜರಾಗಲು ಮತ್ತು ಅದರ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕುಳ್ಳವನಾಗಿರತಕ್ಕದ್ದು, ಆದರೆ ಯಾವುದೇ ವಿಷಯದ ಮೇಲೆ ಮತ ಚಲಾಯಿಸಲು ಅಥವಾ ಮುನ್ಸಿಪಲ್ ಕೌನ್ಸಿಲು ಅಥವಾ ಸ್ಥಾಯೀ ಸಮಿತಿಗಳಲ್ಲಿ ಯಾವುದೇ ಚುನಾಯಿತ ಪದಕ್ಕೆ ಸ್ಪರ್ಧಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**4. 51ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮ 51ನೇ ಪ್ರಕರಣದಲ್ಲಿ (3)ನೇ ಉಪಪ್ರಕರಣದ ತರುವಾಯ, ಈ ಕೆಳಕಂಡ ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(4) ಹಿಂದೆ ಹೇಳಿದ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮುನ್ಸಿಪಲ್ ಕೌನ್ಸಿಲಿನ ಯಾವುದೇ ಸಭೆಯಲ್ಲಿ, ಅಧ್ಯಕ್ಷನ ಅವಿಶ್ವಾಸ ಸೂಚಿಸುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಾಗ, ಅಧ್ಯಕ್ಷನು ಅಥವಾ ಉಪಾಧ್ಯಕ್ಷನಲ್ಲಿ ಅವಿಶ್ವಾಸ ಸೂಚಿಸುವ ಯಾವುದೇ ನಿರ್ಣಯವು ಪರ್ಯಾಲೋಚನೆಯಲ್ಲಿರುವಲ್ಲಿ, ಉಪಾಧ್ಯಕ್ಷನು ಅವನು ಹಾಜರಿದ್ದರೂ ಸಹ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದಲ್ಲ. ಆದರೆ ಅಂಥ ನಿರ್ಣಯವು ಪರ್ಯಾಲೋಚನೆಯಲ್ಲಿರುವಲ್ಲಿ ಮುನ್ಸಿಪಲ್ ಕೌನ್ಸಿಲಿನ ವ್ಯವಹರಣೆಗಳಲ್ಲಿ ಮಾತನಾಡಲು ಮತ್ತು ಅನ್ಯಥಾ ಭಾಗವಹಿಸಲು ಹಕ್ಕುಳ್ಳವರಾಗಿರತಕ್ಕದ್ದು. ಅಂಥ ಸಭೆಗಳಿಗೆ (2)ನೇ ಉಪ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು".

**5. 94ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 94ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದ (ಖ) ಖಂಡದ VIIIನೇ ಬಾಬಿನಲ್ಲಿ ಕಟ್ಟಡಗಳು ಮತ್ತು ಭೂಮಿಯ ಮೇಲೆ ನಿರ್ಧರಿಸಲಾದ ತೆರಿಗೆ ರೂಪದಲ್ಲಿ ಅಥವಾ ಅಂಥ ಸರಬರಾಜಿಗಾಗಿ ವೆಚ್ಚಗಳೂ ಸೇರಿದಂತೆ ಯಾವುದೇ ಇತರ ರೂಪದಲ್ಲಿ ವಿಧಿಸಬಹುದಾದ" ಎಂಬ ಪದಗಳ ಬದಲು "ಈ ಕೆಳಕಂಡ ಒಂದು ಅಥವಾ ಹೆಚ್ಚು ರೂಪಗಳಲ್ಲಿ ವಿಧಿಸಲಾದ ಎಂದರೆ, ಕಟ್ಟಡಗಳು ಮತ್ತು ಭೂಮಿಗಳ ಮೇಲೆ ನಿರ್ಧರಿಸಿದ ತೆರಿಗೆಯ ರೂಪದಲ್ಲಿ ಅಥವಾ ಅಂಥ ಸರಬರಾಜಿಗಾಗಿ ವೆಚ್ಚಗಳ ಸ್ವರೂಪವನ್ನು ಒಳಗೊಂಡು ಇತರ ಯಾವುದೇ ಇತರ ಸ್ವರೂಪದಲ್ಲಿ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**6. 138ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮ 138ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ "ಇಪ್ಪತ್ತೈದು ನಯಾಪೈಸೆ" ಎಂಬ ಪದಗಳ ಬದಲು "ಐದು ರೂಪಾಯಿಗಳು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**7. ನೀರು ದರ ವಿಧಿಸುವಿಕೆಯ ಮಾನ್ಯೀಕರಣ:–** ಯಾವುದೇ ನ್ಯಾಯಾಲಯದ ಅಥವಾ ಇತರ ಯಾವುದೇ ಪ್ರಾಧಿಕಾರದ ಯಾವುದೇ ಡಿಕ್ರಿ ಅಥವಾ ಆದೇಶ ಅಥವಾ ತೀರ್ಪಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕಟ್ಟಡಗಳು ಮತ್ತು ಭೂಮಿಯ ಮೇಲೆ ನಿರ್ಧರಿಸಿದ ತೆರಿಗೆಯ ರೂಪದಲ್ಲಿ ಹಾಗೂ ನೀರು ಸರಬರಾಜಿಗಾಗಿ ವಿಧಿಸುವ ದರಗಳ ರೂಪದಲ್ಲಿ ಹಾಗೂ ನೀರು ಸರಬರಾಜಿನ ವೆಚ್ಚದ ರೂಪದಲ್ಲಿ ವಿಧಿಸಿದ ನೀರು ದರದ ಯಾವುದೇ ವಿಧಿಸುವಿಕೆ ಅಥವಾ ಸಂಗ್ರಹಣೆಯನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಮೇಲೆ ಅಧಿನಿಯಮದ ಮೇರೆಗೆ ಅಂಥ ವಿಧಿಸುವಿಕೆ ಅಥವಾ ಸಂಗ್ರಹಣೆಯನ್ನು ಮಾಡಿದ್ದರೆ ಅಥವಾ ಕೈಗೊಂಡಿದ್ದರೆ ಹೇಗೋ ಹಾಗೆ ಮಾನ್ಯವಾಗಿರುವುದೆಂದು ಮತ್ತು ಪರಿಣಾಮಕಾರಿಯಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ,–

(ಕ) ಯಾವುದೇ ಮುನ್ಸಿಪಲ್ ಕೌನ್ಸಿಲು ಅಂಥ ನೀರಿನ ದರದ ವಿಧಿಸುವಿಕೆ ಅಥವಾ ಸಂಗ್ರಹಣೆಗೆ ಸಂಬಂಧಪಟ್ಟಂತೆ ಮಾಡಲಾದ ಎಲ್ಲ ಕಾರ್ಯಗಳು, ವ್ಯವಹರಣೆಗಳು ಅಥವಾ ಕೈಗೊಂಡ ಕ್ರಮಗಳು

ಎಲ್ಲಾ ಉದ್ದೇಶಗಳಿಗಾಗಿ ಕಾನೂನಿಗನುಸಾರವಾಗಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿವೆಯೆಂದು ಅಥವಾ ಯಾವಾಗಲೂ ಹಾಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(ಖ) ಅಂಥ ಯಾವುದೇ ದರಗಳ ಮರು ಪಾವತಿಗಾಗಿ ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಪ್ರಾಧಿಕಾರದ ಮುಂದೆ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ; ಮತ್ತು

(ಗ) ಅಂಥ ಯಾವುದೇ ದರಗಳನ್ನು ಮರುಪಾವತಿ ಮಾಡುವಂತೆ ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ನ್ಯಾಯಾಲಯವು ಜಾರಿಗೊಳಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
**ಕೆ.ಆರ್. ಚಾಮಯ್ಯ**
ಸರ್ಕಾರದ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

## 1984ರ ಕರ್ನಾಟಕ ಅಧಿನಿಯಮ ಸಂಖ್ಯೆ 34

(1984ರ ಜೂನ್ ಇಪ್ಪತ್ತಾರನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

## 1984ರ ಕರ್ನಾಟಕ ಪೌರ ನಿಗಮಗಳ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ

(1984ರ ಜೂನ್ ಇಪ್ಪತ್ತೈದನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂತೆ ಕರ್ನಾಟಕ ಪೌರ ನಿಗಮಗಳ ಮತ್ತು ಇತರ ಕೆಲವು ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕರ್ನಾಟಕ ಪೌರ ನಿಗಮ ಮತ್ತು ಕೆಲವು ಇತರ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವೆಂದು ಕಂಡುಬಂದಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. **ಚಿಕ್ಕ ಹೆಸರು ಮತ್ತು ಪ್ರಾರಂಭ.**- ಈ ಅಧಿನಿಯಮವನ್ನು 1984ರ ಕರ್ನಾಟಕ ಪೌರ ನಿಗಮಗಳ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

*     *     *     *

*     *     *     * "43ಕ"

**3. 1964ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ.–** 1964ರ ಕರ್ನಾಟಕ ಪೌರ ಸಭೆಗಳ ಅಧಿನಿಯಮದಲ್ಲಿ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) 262ನೇ ಪ್ರಕರಣದ ತರುವಾಯ, ಈ ಕೆಳಕಂಡ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**262 ಕ. ಅನಧಿಕೃತ ಭೂ ಸ್ವಾಧೀನತೆಗೆ ನಿಷೇಧ.–** (1) ಯಾವ ಭೂಮಿಯನ್ನು ಉಪಯೋಗಿಸಲು ಅಥವಾ ಸ್ವಾಧೀನಪಡಿಸಿಕೊಳ್ಳಲು ತನಗೆ ಹಕ್ಕಿಲ್ಲವೋ ಅಥವಾ ಹಕ್ಕುಳ್ಳವನಾಗಿರುವುದು ಕೊನೆಗೊಂಡಿರುವುದೋ ಆ ನಗರ ಮುನ್ಸಿಪಲ್ ಕೌನ್ಸಿಲಿಗೆ ಸೇರಿದ ಆ ಭೂಮಿಯನ್ನು ಅನಧಿಕೃತವಾಗಿ ಪ್ರವೇಶಿಸುವ ಮತ್ತು ಅದನ್ನು ಉಪಯೋಗಿಸುವ ಅಥವಾ ಸ್ವಾಧೀನಪಡಿಸಿಕೊಳ್ಳುವ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) 1984ರ ಕರ್ನಾಟಕ ಪೌರ ನಿಗಮಗಳ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆಯಾಗಲಿ ಅಥವಾ ತರುವಾಯವೇ ಆಗಲಿ ಯಾರೇ ವ್ಯಕ್ತಿಯು ಯಾವ ಭೂಮಿಯ ಉಪಯೋಗ ಅಥವಾ ಸ್ವಾಧೀನಕ್ಕೆ ತಾನು ಹಕ್ಕುಳ್ಳವನಾಗುವುದಿಲ್ಲವೋ ಅಥವಾ ಹಕ್ಕುಳ್ಳವನಾಗಿರುವುದು ಕೊನೆಗೊಂಡಿರುವುದೋ ಆ ನಗರ ಮುನ್ಸಿಪಲ್ ಕೌನ್ಸಿಲಿಗೆ ಸೇರಿದ ಆ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಸ್ವಾಧೀನ ಮಾಡಿಕೊಂಡಿದ್ದು, 1974ರ ಕರ್ನಾಟಕ ಸಾರ್ವಜನಿಕ ಸ್ಥಳಗಳ (ಅನಧಿಕೃತ ಅಧಿಭೋಗದಾರರ ಹೊರ ಹಾಕುವಿಕೆ) ಅಧಿನಿಯಮದ (1974ರ ಕರ್ನಾಟಕ ಅಧಿನಿಯಮ 32) 5ನೆಯ ಪ್ರಕರಣದ (1)ನೇ ಉಪಪ್ರಕರಣದ ಆದೇಶದ ಅನುಸರಣೆಯಲ್ಲಿ ಅಂಥ ಭೂಮಿಯನ್ನು ಖಾಲಿ ಮಾಡಲು ತಪ್ಪಿದರೆ ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅಂಥ ಅಪರಾಧಕ್ಕಾಗಿ, ಮೊದಲನೆ ಅಪರಾಧ ನಿರ್ಣಯದ ದಿನಾಂಕದ ತರುವಾಯ ಸ್ವಾಧೀನವು ಮುಂದುವರಿಯುವ ಪ್ರತಿಯೊಂದು ದಿವಸಕ್ಕೆ ಭೂಮಿಯ ಪ್ರತಿ ಎಕರೆ ಅಥವಾ ಭಾಗಕ್ಕೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತು ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) (1)ನೇ ಉಪ ಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧ ಮಾಡಲು ಇತರ ಯಾರೇ ವ್ಯಕ್ತಿಗೆ ಉದ್ದೇಶಪೂರ್ವಕವಾಗಿ ನೆರವು ನೀಡಿದರೆ, ಅಥವಾ ದುಷ್ಪ್ರೇರಣೆ ಮಾಡಿದರೆ ಅಥವಾ ಅಪರಾಧಿ ನಿರ್ಣಯವಾದ ಮೇಲೆ ಅಂಥ ಅಪರಾಧಕ್ಕಾಗಿ ಸದರಿ ಉಪಪ್ರಕರಣಗಳ ಮೇರೆಗೆ ಉಪಬಂಧಿಸಿದಂಥವೇ ಆದ ದಂಡನೆಯಿಂದ ದಂಡಿತನಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ಆರ್. ಚಾಮಯ್ಯ**

ಸರ್ಕಾರದ ಕಾರ್ಯದರ್ಶಿ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

## 1986ರ ಕರ್ನಾಟಕ ಅಧಿನಿಯಮ ಸಂಖ್ಯೆ 33

(1986ರ ಅಕ್ಟೋಬರ್ 7ನೇ ದಿನದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ.)

## 1986ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧಿನಿಯಮ

(1986ರ ಅಕ್ಟೋಬರ್ 6ನೇ ದಿನದಂದು ಕರ್ನಾಟಕ ರಾಜ್ಯಪಾಲರ ಅನುಮೋದನೆ ಪಡೆದಿದೆ)

1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು ಇನ್ನಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮವನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) ಇನ್ನಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

1. **ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) 2, 3, 4, 5 ಮತ್ತು 13ನೇ ಪ್ರಕರಣಗಳು 1986ರ ಜೂನ್ ತಿಂಗಳ ಆರನೇ ದಿನದಂದು ಜಾರಿಗೆ ಬಂದಿರುವುದಾಗಿ ಪರಿಗಣಿಸತಕ್ಕದ್ದು ಮತ್ತು ಉಳಿದ ಪ್ರಕರಣಗಳು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **72ನೇ ಪ್ರಕರಣದ ತಿದ್ದುಪಡಿ.-** (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾದ) 1964ರ ಕರ್ನಾಟಕ ಪೌರಸಭೆಗಳ ಅಧಿನಿಯಮದ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 22) 72ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ "ಐದು ಸಾವಿರ" ಎಂಬ ಪದಗಳ ಬದಲಾಗಿ "ಇಪ್ಪತ್ತೈದು ಸಾವಿರ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

3. **ಹೊಸ 94-ಕ ಪ್ರಕರಣವನ್ನು ಸೇರಿಸುವುದು.-** ಮೂಲ ಅಧಿನಿಯಮದ 94ನೇ ಪ್ರಕರಣದ ನಂತರ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

**"94-ಕ. ನೀರು ಸರಬರಾಜು ಉಪಕರ.-** ಯಾವುದೇ ಮುನ್ಸಿಪಲ್ ಕೌನ್ಸಿಲ್, 94ನೇ ಪ್ರಕರಣದ ಮೇರೆಗೆ ಕಟ್ಟಡಗಳು ಅಥವಾ ಭೂಮಿಗಳ ಮೇಲೆ ತೆರಿಗೆ ವಿಧಿಸುವಾಗ, ಅದು ಈ ತೆರಿಗೆಯ ಜೊತೆಗೆ, ನಗರ ಪ್ರದೇಶಗಳಲ್ಲಿ ನೀರು ಸರಬರಾಜು ವ್ಯವಸ್ಥೆಗಳ ನಿರ್ವಹಣೆ ಮತ್ತು ಮೇಲ್ಪಾಟಿಗಾಗಿ ಆ ತೆರಿಗೆಯ ಶೇಕಡ ಹತ್ತರಷ್ಟು ದರದ ಪ್ರಕಾರ ನೀರು ಸರಬರಾಜು ಉಪಕರವನ್ನು ವಿಧಿಸತಕ್ಕದ್ದು ಮತ್ತು ಹಾಗೆ ವಸೂಲು ಮಾಡಿದ ಉಪಕರವನ್ನು ಸರ್ಕಾರಕ್ಕೆ ಜಮೆ ಮಾಡತಕ್ಕದ್ದು".

4. **321ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 321ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ "ನಿಯಮಿಸಬಹುದಾದಂಥ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

5. **322ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 322ನೇ ಪ್ರಕರಣದಲ್ಲಿ,-

(1) (1)ನೇ ಉಪ-ಪ್ರಕರಣದಲ್ಲಿ,-

(ಕ) "ಸರ್ಕಾರವು ಅಥವಾ ಕಮಿಷನರು........... ಕರೆಯಬಹುದು" ಎಂಬ ಪದಗಳ ಬದಲಾಗಿ "ಕಮಿಷನರು ........................... ಕರೆಯಬಹುದು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಖ) "ಸಂದರ್ಭಾನುಸಾರ ಸರ್ಕಾರವು ಅಥವಾ ಕಮಿಷನರು" ಎಂಬ ಪದಗಳ ಬದಲಾಗಿ, "ಅವರು" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು; ಮತ್ತು

(ಗ) "ಸರ್ಕಾರವು ಅಥವಾ ಕಮಿಷನರು ಅದರ ಮೇಲೆ ನ್ಯಾಯವೆಂದು ಭಾವಿಸುವಂಥ" ಎಂಬ ಪದಗಳ ಬದಲಾಗಿ "ಅವರು ಅದರ ಮೇಲೆ ನ್ಯಾಯವೆಂದು ಭಾವಿಸುವಂಥ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(2) (2)ನೇ ಉಪ-ಪ್ರಕರಣದಲ್ಲಿ "ಸರ್ಕಾರ" ಎಂಬ ಪದಕ್ಕೆ ಬದಲಾಗಿ "ಕಮಿಷನರು" ಎಂಬ ಪದವನ್ನು ಮತ್ತು "ಅದು ಭಾವಿಸುವಂಥ" ಎಂಬ ಪದಗಳ ಬದಲಾಗಿ "ಅವರು ಭಾವಿಸುವಂಥ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

6. **XVIನೇ ಅಧ್ಯಾಯದ ಶೀರ್ಷಿಕೆಯ ತಿದ್ದುಪಡಿ.–** ಮೂಲ ಅಧಿನಿಯಮದ XVIನೇ ಅಧ್ಯಾಯದ ಶೀರ್ಷಿಕೆಯಲ್ಲಿ "ಪಂಚಾಯತಿ" ಎಂಬ ಪದಕ್ಕೆ ಬದಲಾಗಿ "ಮಂಡಲ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

7. **356ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 356ನೇ ಪ್ರಕರಣದ (ಖ) ಖಂಡದಲ್ಲಿ "ಪಂಚಾಯತಿ ಎಂಬ ಪದಕ್ಕೆ ಬದಲಾಗಿ "ಮಂಡಲ ಪಂಚಾಯತಿ" ಎಂಬ ಪದಗಳನ್ನು ಮತ್ತು 1959ರ ಕರ್ನಾಟಕ ಗ್ರಾಮ ಪಂಚಾಯತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ 8ನೇ ಅಥವಾ 203ನೇ ಪ್ರಕರಣದ ಮೇರೆಗೆ ಒಂದು ಗ್ರಾಮ ಪಂಚಾಯಿತಿ" ಎಂಬ ಪದಗಳು ಹಾಗೂ ಅಂಕಿಗಳ ಬದಲಾಗಿ, "1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ಅಧಿನಿಯಮದ 8ನೇ, 130ನೇ 131ನೇ, 271ನೇ ಪ್ರಕರಣಗಳ ಮೇರೆಗೆ ಒಂದು ಮಂಡಲ ಪಂಚಾಯತಿ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

8. **357ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 357ನೇ ಪ್ರಕರಣದಲ್ಲಿ,–

(i) ಶೀರ್ಷಿಕೆಯಲ್ಲಿ "ಪಂಚಾಯತಿ" ಎಂಬ ಪದಕ್ಕೆ ಬದಲಾಗಿ "ಮಂಡಲ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

(ii) ಮೊದಲನೇ ವಾಕ್ಯವೃಂದಲ್ಲಿ, "1959ರ ಕರ್ನಾಟಕ ಗ್ರಾಮ ಪಂಚಾಯತಿಗಳು, ಮತ್ತು ಸ್ಥಳೀಯ ಮಂಡಳಿಗಳ ಅಧಿನಿಯಮದ 3ನೇ ಪ್ರಕರಣದ ಮೇರೆಗಿನ ಅಧಿಸೂಚನೆಯಿಂದಾಗಿ ಯಾವುದೇ ಸ್ಥಳೀಯ ಪ್ರದೇಶವು ಗ್ರಾಮವಾಗಿರುವುದು" ಎಂದ ಪದಗಳ ಮತ್ತು ಅಂಕಿಗಳ ಬದಲಾಗಿ "1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮದ 4ನೇ ಪ್ರಕರಣದ ಮೇರೆಗಿನ ಅಧಿಸೂಚನೆಯಿಂದಾಗಿ ಯಾವುದೇ ಸ್ಥಳೀಯ ಪ್ರದೇಶವು ಮಂಡಲವಾಗಿರುವುದು" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(iii) (ಕ) ಖಂಡದಲ್ಲಿ "ಅಂಥ ಸ್ಥಳೀಯ ಪ್ರದೇಶ ಪಂಚಾಯತಿಯ" ಎಂಬ ಪದಗಳ ಬದಲಾಗಿ "ಅಂಥ ಸ್ಥಳೀಯ ಪ್ರದೇಶದ ಮಂಡಲ ಪಂಚಾಯತಿಯು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(iv) (ಖ) ಖಂಡದಲ್ಲಿ, "ಗ್ರಾಮ ಪಂಚಾಯತಿ ಸದಸ್ಯರಾಗಿ .................. ರಚಿಸತಕ್ಕದ್ದು. ಮತ್ತು ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನಾಗಿ" ಎಂಬ ಪದಗಳಿಗೆ ಬದಲಾಗಿ "ಮಂಡಲ ಪಂಚಾಯತಿ ಸದಸ್ಯರಾಗಿ ರಚಿಸತಕ್ಕದ್ದು ಮತ್ತು ಮಂಡಲ ಪಂಚಾಯತಿಯ ಪ್ರಧಾನ ಹಾಗೂ ಉಪ-ಪ್ರಧಾನರನ್ನು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(v) (ಗ) ಖಂಡದಲ್ಲಿ "ಪಂಚಾಯತ್ ನಿಧಿ" ಎಂಬ ಪದಗಳಿಗೆ ಬದಲಾಗಿ ಮಂಡಲ ಪಂಚಾಯತ್ ನಿಧಿ" ಎಂಬ ಪದಗಳನ್ನು, ಮತ್ತು "ಅಥವಾ 1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ 203ನೇ ಪ್ರಕರಣದ ಮೇರೆಗೆ ಪಂಚಾಯಿತಿಯನ್ನು ರದ್ದುಗೊಳಿಸಿದ ಅವಧಿಯಲ್ಲಿ ಸರ್ಕಾರದಲ್ಲಿ" ಎಂಬ ಪದಗಳು, ಅಂಕಿಗಳಿಗೆ ಬದಲಾಗಿ "ಅಥವಾ 1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯಪಂಚಾಯತಿಗಳ ಅಧಿನಿಯಮದ 271ನೇ ಪ್ರಕರಣದ ಮೇರೆಗೆ ಮಂಡಲ ಪಂಚಾಯತಿಯನ್ನು ವಿಘಟಿಸಿದ ಅವಧಿಯಲ್ಲಿ, ಜಿಲ್ಲಾ ಪರಿಷತ್ತಿನಲ್ಲಿ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(vi) (ಘ) ಮತ್ತು (ಙ) ಖಂಡಗಳಲ್ಲಿ, "1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ" ಎಂಬ ಪದಗಳು ಹಾಗೂ ಅಂಕಿಗಳಿಗೆ ಬದಲಾಗಿ "1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**9. 359ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 359ನೇ ಪ್ರಕರಣದಲ್ಲಿ,–

(i) ಶೀರ್ಷಿಕೆಯಲ್ಲಿ "ಪಂಚಾಯತಿ ಪ್ರದೇಶ" ಎಂಬ ಪದಗಳಿಗೆ ಬದಲಾಗಿ "ಮಂಡಲ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (1)ನೇ ಉಪ–ಪ್ರಕರಣದಲ್ಲಿ.–

(ಕ) "1959ರ ಕರ್ನಾಟಕ ಗ್ರಾಮ ಪಂಚಾಯತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮದ 3ನೇ ಪ್ರಕರಣದ ಮೇರೆಗಿನ ಅಧಿಸೂಚನೆಯಿಂದಾಗಿ ಯಾವುದೇ ಸ್ಥಳೀಯ ಪ್ರದೇಶವು ಗ್ರಾಮವಾಗಿರುವುದು" ಎಂಬ ಪದಗಳು ಮತ್ತು ಅಂಕಿಗಳಿಗೆ ಬದಲಾಗಿ "1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯಿತಿಗಳು ಅಧಿನಿಯಮದ 4ನೇ ಪ್ರಕರಣದ ಮೇರೆಗಿನ ಅಧಿಸೂಚನೆಯಿಂದಾಗಿ ಯಾವುದೇ ಸ್ಥಳೀಯ ಪ್ರದೇಶವು, ಮಂಡಲವೆಂದಾಗಿರುವುದು" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಖ) (ಕ) ಖಂಡದಲಿ "ಪಂಚಾಯತ ನಿಧಿಯ" ಎಂಬ ಪದಗಳ ಬದಲಾಗಿ "ಮಂಡಲ ಪಂಚಾಯತ ನಿಧಿಯ; ಎಂಬ ಪದಗಳನ್ನು "ಪಂಚಾಯತಿಗೆ ಸೇರಿದೆ" ಎಂಬ ಪದಗಳಿಗೆ ಬದಲಾಗಿ "ಮಂಡಲ ಪಂಚಾಯತಿಗೆ ಸೇರಿದ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಗ) (ಖ) ಮತ್ತು (ಗ) ಖಂಡಗಳಲ್ಲಿ "1959ರ ಕರ್ನಾಟಕ ಗ್ರಾಮ ಪಂಚಾಯಿತಿಗಳು ಹಾಗೂ ಸ್ಥಳೀಯ ಮಂಡಲಿಗಳ ಅಧಿನಿಯಮದ" ಎಂಬ ಪದಗಳು ಹಾಗೂ ಅಂಕಿಗಳಿಗೆ ಬದಲಾಗಿ, "1983ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ" ಎಂಬ ಪದಗಳು ಹಾಗೂ ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**10. 360ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 360ನೇ ಪ್ರಕರಣದಲ್ಲಿ,–

(i) ಶೀರ್ಷಿಕೆಯಲ್ಲಿ "ಪಂಚಾಯತಿ ಪ್ರದೇಶದ" ಎಂಬ ಪದಗಳಿಗೆ ಬದಲಾಗಿ, "ಮಂಡಲ"ದ ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು;

(ii) ಮೊದಲನೇ ವಾಕ್ಯವೃಂದದಲ್ಲಿ "ಪಂಚಾಯತಿಯ" ಎಂಬ ಪದಕ್ಕೆ ಬದಲಾಗಿ "ಮಂಡಲದ" ಎಂಬ ಪದ ಮತ್ತು "1959ರ ಕರ್ನಾಟಕ ಗ್ರಾಮ ಪಂಚಾಯತಿಗಳು ಮತ್ತು ಸ್ಥಳೀಯ

ಮಂಡಲಿಗಳ ಅಧಿನಿಯಮ" ಎಂಬ ಪದಗಳು ಹಾಗೂ ಅಂಕಿಗಳಿಗೆ ಬದಲಾಗಿ "ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಹಾಗೂ ನ್ಯಾಯ ಪಂಚಾಯತಿಗಳ ಅಧಿನಿಯಮ" ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(iii) (ಕ) ಖಂಡದಲ್ಲಿ "ಪಂಚಾಯತ್ ನಿಧಿ ಹಾಗೂ ಇತರ ಪಂಚಾಯತಿಯಲ್ಲಿ ನಿಹಿತವಾಗಿರುವ ಇತರ ಸ್ವತ್ತು" ಎಂಬ ಪದಗಳ ಬದಲಾಗಿ "ಮಂಡಲ ಪಂಚಾಯತ್ ನಿಧಿ ಮತ್ತು ಮಂಡಲ ಪಂಚಾಯತ್‌ನಲ್ಲಿ ನಿಹಿತವಾಗಿರುವ ಇತರ ಸ್ವತ್ತು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(iv) (ಖ) ಮತ್ತು (ಗ) ಖಂಡಗಳಲ್ಲಿ "ಪಂಚಾಯತಿ" ಎಂಬ ಪದಗಳ ಬದಲಾಗಿ "ಮಂಡಲ ಪಂಚಾಯತಿಯ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**11. 363.ಕ ಪ್ರಕರಣದ ಲೋಪ.–** ಮೂಲ ಅಧಿನಿಯಮದ 363ರ ಪ್ರಕರಣವನ್ನು ಲೋಪ ಮಾಡತಕ್ಕದ್ದು.

**12. 379ನೇ ಪ್ರಕರಣದ ಪ್ರತ್ಯಾಯೋಜನೆ.–** ಮೂಲ ಅಧಿನಿಯಮದ 379ನೇ ಪ್ರಕರಣದ ಬದಲಾಗಿ ಈ ಮುಂದಿನ ಪ್ರಕರಣವನ್ನು ಪ್ರತ್ಯಾಯೋಜಿಸತಕ್ಕದ್ದು, ಅಂದರೆ:–

**379. 1966ರ ಕರ್ನಾಟಕ ವ್ಯವಸಾಯೋತ್ಪನ್ನ ಕ್ರಯವಿಕ್ರಯ (ವಿನಿಯಮ) ಅಧಿನಿಯಮದ ಉಪಬಂಧಗಳು ಬಂಧಕವಾಗಿರತಕ್ಕದ್ದಲ್ಲ.–** 243, 244, 256 ಮತ್ತು 324ನೇ ಪ್ರಕರಣಗಳ ಉಪಬಂಧಗಳು, ಮಾರುಕಟ್ಟೆಗಳು, ಮತ್ತು ಇತರ ಸ್ಥಳಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ 1966ರ ಕರ್ನಾಟಕ ವ್ಯವಸಾಯೋತ್ಪನ್ನ ಕ್ರಯವಿಕ್ರಯ (ವಿನಿಯಮ) ಅಧಿನಿಯಮದ ಮೇರೆಗೆ ಘೋಷಿಸಲಾದ ಯಾವುದೇ ಮಾರುಕಟ್ಟೆಗೆ ಅನ್ವಯವಾಗತಕ್ಕದ್ದಲ್ಲ ಮತ್ತು ಇತರ ಯಾವುದೇ ಮಾರುಕಟ್ಟೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳು 1966ರ ಕರ್ನಾಟಕ ವ್ಯವಸಾಯೋತ್ಪನ್ನ ಕ್ರಯ ವಿಕ್ರಯ (ವಿನಿಯಮ) ಅಧಿನಿಯಮದ ಜೊತೆಗೆ ಮತ್ತು ಅದನ್ನು ನ್ಯೂನತೆಗೊಳಿಸಿದಂತೆ ಇರತಕ್ಕದ್ದು.

**13. 388ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 388ನೇ ಪ್ರಕರಣವನ್ನು (1)ನೇ ಉಪ–ಪ್ರಕರಣವೆಂದು ಪುನರಂಕಿತಗೊಳಿಸತಕ್ಕದ್ದು ಮತ್ತು ಹಾಗೆ ಪುನರಂಕಿತಗೊಳಿಸಲಾದ (1)ನೇ ಉಪ–ಪ್ರಕರಣದ ತರುವಾಯ ಈ ಮುಂದೆ ಹೇಳಿದ ಉಪ–ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:–

"(2) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಸಹ ಸರ್ಕಾರವು ಅಧಿಸೂಚನೆಯ ಮೂಲಕ ಪೌರಾಡಳಿತ ನಿರ್ದೇಶಕರಿಗೆ (ಈ ಪ್ರಕರಣದಲ್ಲಿ ಇನ್ನು ಮುಂದೆ ನಿರ್ದೇಶಕ ಎಂದು ಉಲ್ಲೇಖಿಸಲಾಗಿದೆ) ನಿಯಮ ರಚನಾಧಿಕಾರವನ್ನು ಹೊರತುಪಡಿಸಿ ಈ ಅಧಿನಿಯಮದ ಮೇರೆಗೆ ಅದರ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದು. ಅಂಥ ಅಧಿಸೂಚನೆಯನ್ನು ಹೊರಡಿಸಿದರೆ, ಅಂಥ ಅಧಿಕಾರಗಳನ್ನು ಕಮಿಷನರಿಗೆ ಅಥವಾ ಡೆಪ್ಯುಟಿ ಕಮಿಷನರಿಗೆ ಪ್ರತ್ಯಾಯೋಜಿಸಿ 321ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಅಧಿಸೂಚನೆಯು ರದ್ದಾಗತಕ್ಕದ್ದು ಮತ್ತು ನಿರ್ದೇಶಕರಿಗೆ ಪ್ರತ್ಯಾಯೋಜಿಸಲಾದ ಅಧಿಕಾರಗಳನ್ನು ಚಲಾಯಿಸುವುದನ್ನು ಅವರು ನಿಲ್ಲಿಸತಕ್ಕದ್ದು.

(3) ಕಮಿಷನರು ಅಥವಾ ಡೆಪ್ಯುಟಿ ಕಮಿಷನರು ಈ ಅಧಿನಿಯಮದ ಮೇರೆಗೆ ಚಲಾಯಿಸಬಹುದಾದಂಥ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದೇಶಕನಿಗೆ ಪ್ರತ್ಯಾಯೋಜಿಸಬಹುದು. ಅಂಥ ಅಧಿಸೂಚನೆಯನ್ನು ಹೊರಡಿಸಿದರೆ ಕಮಿಷನರು ಅಥವಾ ಡೆಪ್ಯುಟಿ ಕಮಿಷನರು, ನಿರ್ದೇಶಕರಿಗೆ ಪ್ರತ್ಯಾಯೋಜಿಸಲಾದ ಅಧಿಕಾರಗಳನ್ನು ಚಲಾಯಿಸುವುದನ್ನು ನಿಲ್ಲಿಸತಕ್ಕದ್ದು.

(4) ನಿರ್ದೇಶನಾಲಯದಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಸಂಖ್ಯೆಯ ಮತ್ತು ಗೊತ್ತು ಪಡಿಸಬಹುದಾದಂಥ ಅರ್ಹತೆಯುಳ್ಳ ಅಧಿಕಾರಗಳನ್ನೊಳಗೊಂಡ ಒಂದು ಕಾನೂನು ಘಟಕ ಸಹ ಇರತಕ್ಕದ್ದು.

ನಿರಸನ ಮತ್ತು ಉಳಿಸುವಿಕೆಗಳು.–

(1) 1986ರ ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧ್ಯಾದೇಶವನ್ನು (1986ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 7) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ ಸಹ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯ, ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಎಂದು ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

(ಸಹಿ)
**(ಕೆ. ಈಶ್ವರಭಟ್)**
ಅಡಿಷನಲ್ ಪ್ರಾರೂಪಕ ಮತ್ತು ಸರ್ಕಾರದ ಪದನಿಮಿತ್ತ
ಅಡಿಷನಲ್ ಕಾರ್ಯದರ್ಶಿ
ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆ

* * * * * *

ಸರ್ಕಾರಿ ಮುದ್ರಣಾಲಯ, ಕಾ.ಸೂ. ______ ಪಿ2